START

START

START

MICRO FILMED
BY
KARNATAKA STATE
ARCHIVES
1991

MICRO FILMED
BY
KARNATAKA STATE
ARCHIVES
1991

ARS 15 APP 90.

ಜೀವನ ಶಿಕ್ಷಣ - ಕನ್ನಡ ಕಾಲ
ಪತ್ರಿಕೆ. ಮಾರ್ಚ್ - ಏಪ್ರಿಲ್ 1931 ರ
ಸಂಚಿಕೆ 12-1. ಪುಟ 1 ರಿಂದ
ಮುಂದುವರಿಸಲಾಗಿದೆ.

ARS 15 APP 90

ಜೀವನ ಶಿಕ್ಷಣ - ಕನ್ನಡ ಕಾಲ ಪತ್ರಿಕೆ. ಮಾರ್ಚ್ - ಏಪ್ರಿಲ್ 1931 ರ ಸಂಚಿಕೆ 12-1. ಪುಟ 1 ರಿಂದ ಮುಂದುವರಿಸಲಾಗಿದೆ.

೧೯೩೧ನೆ. ಇ. ಯ ವ್ಹ. ಫಾ. ಪ. ಯ ವೇಳಾಪತ್ರಿಕೆಯು

ಮಂಗಳವಾರ	೭-೪-೧೯೩೧	೧೧ರಿಂದ— ೧೨	ಕನ್ನಡ ಉರ್ದು ಅಗ್ರಿ	ಉಮೇದವಾರರ ಹೆಸರು ಹಚ್ಚಿಕೊಳ್ಳುವದು
		೧೨ ರಿಂದ— ೨	ಕ ಉರ್ದು ಅಗ್ರಿ	ನಿಬಂಧ, ರಿಪೋರ್ಟ, ಕ್ಯೆಬರಹ
		೩ ರಿಂದ— ೭ ,, ,, ೩ ,, — ೫	ಕನ್ನಡ ಉರ್ದು ಅಗ್ರಿ	ಆರೋಗ್ಯವಿಜ್ಞಾನ, ಶಾಸ್ತ್ರೀಯವಿಷಯ
ಬುಧವಾರ	೮-೪-೧೯೩೧	೧೧ ರಿಂದ— ೨	ಕ ಉ	ಗಣಿತ " "
			ಅಗ್ರಿ	" ಗಣಿತ, ಕ್ಷೇತ್ರಫಲ, ಜಮಾಖರ್ಚು
		೩ ರಿಂದ— ೭	ಕ ಉರ್ದು	ಇತಿಹಾಸ, ಭೂಗೋಲ
			ಅಗ್ರಿ	ರಾಜ್ಯದಾಡಳಿತ, ಸಹಕಾರತೆ, ಭೂಗೋಲ
ಗುರುವಾರ	೯-೪-೧೯೩೧	೧೧ರಿಂದ— ೨	ಕ ಉ	ಭೂಮಿತಿ, ಜಮಾಖರ್ಚು
			ಅಗ್ರಿ	ಅಗ್ರಿಕಲ್ಚರ, ನೇಚರಸ್ಟಡಿ
		೩ ರಿಂದ— ೭	ಕ ಉ	ಭಾಷಾವಿಷಯ ವ್ಹರ್ನಾಕ್ಯೂಲರ, ಉರ್ದು

ಕನ್ನಡ

ಪ್ರಾಥಮಿಕ ಶಿಕ್ಷಣ

ಗಣಿತ ಸಂಚಿಕೆ

ಸಂಪಾದಕರು — **ಹನುಮಂತ ಗೋವಿಂದರಾವ ದೇಶಪಾಂಡೆ**, ಬಿ. ಎ.,

ಸಂಪುಟ ೬೭–೬೮ ವರ್ಷ ೨–೩	ಮಾರ್ಚ–ಎಪ್ರಿಲ ೧೯೩೧	ಸಂಚಿಕೆ ೧೨–೧

ಸ್ಫುಟವಿಚಾರ

ಗಣಿತ ಶಾಸ್ತ್ರವು ಬುದ್ಧಿಶಕ್ತಿಯ ಬೆಳವಣಿಗೆಗೂ ವ್ಯವಹಾರಕ್ಕೂ ಅತ್ಯುಪಯುಕ್ತವಾದ ವಿಷಯವು. ಈ ವಿಷಯದ ಪ್ರಾರಂಭವನ್ನು ಚಿಕ್ಕ ವಯಸ್ಸಿನಲ್ಲಿ ಸುಪರಿಣಾಮವಾಗುವಂತೆ ಹೇಗೆ ಪ್ರಾರಂಭವನ್ನು ಮಾಡಬೇಕೆಂಬದು ಶಿಕ್ಷಣಶಾಸ್ತ್ರವನ್ನು ಅರಿಯದವರಿಗೆ ಕಠಿಣವಾಗಿರುವದು.

ಈ ವಿಷಯವನ್ನು ಅವ್ಯವಸ್ಥಿತ ರೀತಿಯಿಂದ ಪ್ರಾಥಮಿಕ ಶಾಲೆಗಳಲ್ಲಿ ಕಲಿಸುವದರಿಂದ ಅಂಕಗಣಿತವು ಬಹಳ ಕಠಿಣ ವಿಷಯವೆಂದು ಬಾಲಕರ ಸ್ವಾಭಾವಿಕ ಭಾವನೆಯಾಗುವದು. ಆದರೆ ಸುಧಾರಿಸಿದ ಹೊಸ ಪದ್ಧತಿಯಿಂದ ಕಲಿಸಿದರೆ ಈ ವಿಷಯದಲ್ಲಿ ಬೇಸರವುಂಟಾಗದೆ ಬಾಲಕರು ಲೀಲೆಯಿಂದ ಈ ವಿಷಯವನ್ನು ಕಲಿಯಲು ಉತ್ಸುಕರಾಗುವರು.

ವಿದ್ಯಾಖಾತೆಯವರು ೧೯೨೭ ನೆಯ ಇಸವಿಯಲ್ಲಿ ಪ್ರಕಟಿಸಿದ ಹೊಸ ಅಭ್ಯಾಸಪತ್ರಿಕೆಯು ಈ ದೃಷ್ಟಿಯಿಂದ ಬಹುಮಟ್ಟಿಗೆ ಸಮಾಧಾನಕರವೂ ಅತ್ಯುಪಯುಕ್ತವೂ ಆಗಿರುವದು. ಈಗ ೩।೪ ವರ್ಷಗಳು ಆಗಿ ಹೋಗಿದ್ದರೂ ಎಲ್ಲ ಪ್ರಾಥಮಿಕ ಶಿಕ್ಷಕರಿಗೆ ಈ ಹೊಸ ಅಭ್ಯಾಸ ಕ್ರಮದಲ್ಲಿ ಸೇರಿಸಿದ ಭೂಮಿತಿ ಕ್ಷೇತ್ರಫಲ ಮೊದಲಾದ ವಿಷಯಗಳನ್ನು ಹೇಗೆ ಕಲಿಸಬೇಕೆಂಬದು ಚೆನ್ನಾಗಿ ತಿಳಿದಂತೆ ಕಂಡುಬರುವದಿಲ್ಲ. ಅದಕ್ಕಾಗಿ ಪ್ರಾಥಮಿಕ ಶಿಕ್ಷಣದ ಈ ಸಂಚಿಕೆಯಲ್ಲಿ ಗಣಿತ ಶಾಸ್ತ್ರದ ಬೇರೆ ಬೇರೆ ವಿಷಯಗಳನ್ನು ಸುವ್ಯವಸ್ಥಿತವಾಗಿ ಹೇಗೆ ಕಲಿಸಬೇಕೆಂಬ ಬಗ್ಗೆ ತಜ್ಞರಿಂದ ಬರೆದ ಲೇಖಗಳನ್ನು ಕೊಟ್ಟಿದ್ದೇವೆ. ಅವುಗಳನ್ನು ಶಿಕ್ಷಕರು ಮನನಮಾಡಿ ಸೂಚಿಸಿದ ಪದ್ಧತಿಗಳಂತೆ

ವಿಷಯವನ್ನು ಸಾಗಿಸಿದರೆ ಬಾಲಕರಿಗೆ ಗಣಿತ ಜ್ಞಾನವು ಸುಗಮವಾಗಿ ಆಗುವದೆಂದು ನಮ್ಮ ಕೋರಿಕೆ. ಇನ್ನು ಪ್ರಾಥಮಿಕ ಶಿಕ್ಷಕರಿಗೆ ಈ ವಿಷಯದಲ್ಲಿ ಮತ್ತೇನಾದರೂ ತೊಂದರೆಗಳು ಕಂಡುಬಂದಲ್ಲಿ ನಮಗೆ ತಿಳಿಸಿದರೆ ಅವುಗಳ ನಿವಾರಣೆಗಾಗಿ ಯತ್ನಿಸುವೆವು.

ಗಣಿತ ಶಾಸ್ತ್ರದ ವಿಷಯದಲ್ಲಿ ಲೇಖಗಳನ್ನು ಕಳಿಸಿ ಪ್ರಾಥಮಿಕ ಶಿಕ್ಷಣದ ಸುವ್ಯವಸ್ಥೆಯನ್ನುಂಟುಮಾಡುವದಕ್ಕೆ ಮನಃಪೂರ್ವಕವಾಗಿ ಯತ್ನ ಮಾಡಿದ ನಮ್ಮ ಸ್ನೇಹಿತರಾದ ಶ್ರೀ. ವೆಂಕಟರಾವ ಮುಗದಾಳ, ಶ್ರೀ. ಶಾಮರಾವ ತಟ್ಟಿ, ಶ್ರೀ. ಪುರೋಹಿತ, ಶ್ರೀ. ಅಮ್ಮಿನಭಾವಿ, ಶ್ರೀ. ಹೂಲಿಕವಿ, ಶ್ರೀ. ಪೂಜಾರ, ಶ್ರೀ. ಕುರಡಿ, ಶ್ರೀ. ಗ. ಬಿ. ಜೋಶಿ, ಶ್ರೀ. ಸಾತೇನಹಳ್ಳಿ ಇವರ ಆಭಾರವನ್ನು ಮನ್ನಿಸುವೆವು.

ಇಂತಹ ಸಂಚಿಕೆಯನ್ನು ಹೊರಡಿಸುವದಕ್ಕೆ ಮೆ. ಎ. ಇ. ವಕೀಲ ಸಾ॥ ರವರು ಸೂಚಿಸಿದ್ದಕ್ಕಾಗಿ ಅವರಿಗೆ ನಮ್ಮ ವಂದನೆಗಳನ್ನು ಸಮರ್ಪಿಸುವೆವು.

ಈ ವಿಷಯವಾಗಿ ಇನ್ನು ಮುಂದೆ ಲೇಖಗಳನ್ನು ಕಳಿಸಿದರೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು.

ಹೊಸ ಅಂಕಗಣಿತವು

ಲೇಖಕ:— ಶ್ರೀ. ವ್ಹಿ. ಎನ್. ಮುಗದಾಳ ಬಿ. ಎ., ಬೆಳಗಾಂವ

ನಾಲ್ಕು ವರ್ಷಗಳ ಹಿಂದೆ ಸರಕಾರದವರು ಬಾಲಕರಿಗೆ ಕಲಿಸಬೇಕಾದ ಅಂಕಗಣಿತದ ಅಭ್ಯಾಸಪತ್ರಿಕೆಯಲ್ಲಿ ಮಾಡಿದ ಹೆಚ್ಚುಕಡಿಮೆಗಳಿಂದ ಅಂಕಗಣಿತವು ಹೊಸದಾಗಿಲ್ಲ; ಆದರೆ ಅದನ್ನು ಕಲಿಸುವಾಗ ಶಿಕ್ಷಕರು ಕೆಲವು ಮಾತುಗಳನ್ನು ವಿಶೇಷವಾಗಿ ಲಕ್ಷ್ಯದಲ್ಲಿಡಬೇಕಾದ್ದರಿಂದ ಅದನ್ನು ನಾವು ಹೊಸ ಅಂಕಗಣಿತವೆಂದು ಕರೆಯಬೇಕೆನ್ನುತ್ತೇವೆ. ಈ ಮಾತುಗಳು ಸಹ ನಿಜವಾಗಿ ಹೊಸವಲ್ಲ; ಆದರೆ ಈ ವಿಷಯದ ಶಿಕ್ಷಣದಲ್ಲಿ ಇವುಗಳ ದುರ್ಲಕ್ಷ್ಯವಾಗುತ್ತಿರುವದರಿಂದಲೂ ಇವನ್ನು ಅನುಸರಿಸಿ ಕಲಿಸಿದರೆ ಹೊಸ ಗಣಿತವನ್ನು ಕಲಿಸಿದಂತೆ ತೋರುವದೆಂಬ ಭರವಸೆಯಿಂದಲೂ ಶಿಕ್ಷಕರ ಲಕ್ಷ್ಯದಲ್ಲಿ ಈ ಮಾತುಗಳು ಒತ್ತುತ್ತಿರಲೆಂದೂ ಈ ಹಳೆಯ ವಿಷಯವನ್ನು ಹೊಸದೆಂದು ಕರೆಯಬೇಕಾಗಿದೆ. ಇವುಗಳಲ್ಲಿ ಕೆಲವನ್ನು ಕುರಿತು ಇಲ್ಲಿ ಬರೆಯುವೆವು.

೧ **ವಸ್ತುಗಳ ಉಪಯೋಗ—** ಬಾಲಕರ ವರ್ಗ, ೧ನೆಯ ಇಯತ್ತೆ ಇಲ್ಲಿ ಕಲಿಸುವ (ಅಂಕೆ) ಸಂಖ್ಯೆಗಳಿಗೆ ಸಂಬಂಧಿಸುವ ಆರಂಭದ ಪಾಠಗಳು ವಸ್ತುಗಳ ಸಹಾಯದಿಂದಲೇ ಸಾಗಬೇಕು. ಈ ತತ್ವವನ್ನು ಶಿಕ್ಷಕರು ಒಪ್ಪಿಕೊಂಡರೂ ಪೂರ್ಣವಾಗಿ ಅನುಸರಿಸದ್ದರಿಂದ ಆರಂಭದ ಕಲ್ಪನೆಗಳು ಹುಡುಗರಲ್ಲಿ ದೃಢವಾಗುವದಿಲ್ಲ. ಬಹುತರ ಶಾಲೆಗಳಲ್ಲಿ ಬಿಡಿಕಾಳು, ಹತ್ತರಗಂಟು, ನೂರರಗಂಟು ಇವು ಇರುವದಿ

ಇಲ್ಲ. ಕಲವು ದೊಡ್ಡ ಸಾಲೆಗಳಲ್ಲಿ ಇವು ಜೀರ್ಣಾವಸ್ಥೆಯಲ್ಲಿ ಪೆಟ್ಟಿಗೆಗಳ ಮೂಲೆಗಳಲ್ಲಿ ಬಿದ್ದಿರುವವು. ಇವುಗಳ ಉಪಯೋಗವೆಂದರೆ ಹುಡುಗರಿಗೆ ಒಂದೆರಡು ಸಾರೆ ಇವನ್ನು ತೋರಿಸುವದು, ಇಲ್ಲವೆ ಇದನ್ನು ಶಿಕ್ಷಕನು ಉಪಯೋಗಿಸಿ ಪಾಠ ಹೇಳುವದು. ಆದರೆ ಹೀಗೆ ವಸ್ತುಗಳ ಉಪಯೋಗವನ್ನು ನೋಡಿದರೆ ಹುಡುಗರು ಅದನ್ನು ಉಪಯೋಗಿಸಿದಂತಾಗಲಿಲ್ಲ. ಈ ವಿಷಯವು ಯಥಾಕ್ರಮವಾಗಿ ನಡೆಯುವ ಮೇಲ್ತರದ ಸಾಲೆಗಳಲ್ಲಿ ಪ್ರತಿದಿನದ ಅಂಕೆಮೊಗ್ಗೆಗಳ ಪಾಠದಲ್ಲಿಯೂ ಬೇರೀಜು ವಜಾಬಾಕಿ ಮೊದಲಾದ ಗಣಿತದ ಕೃತಿಗಳ ಆರಂಭದ ಪಾಠಗಳಲ್ಲಿಯೂ ಪ್ರತಿಯೊಬ್ಬ ವಿದ್ಯಾರ್ಥಿಯು ಇವನ್ನು ತಾನಾಗಿ ಉಪಯೋಗಿಸುವನು. ಸದ್ಯದ ಪದ್ಧತಿಯಲ್ಲಿ ಬಾಲಕರು ಅಂಕೆ, ಅವುಗಳ ಬೇರೀಜು ವಜಾಬಾಕಿ ಮೊದಲಾದವುಗಳ ಬಗ್ಗೆ ಆರಂಭದ ಕಲ್ಪನೆಗಳನ್ನು ಮಾಡಿಕೊಳ್ಳುವಾಗ ಪ್ರತ್ಯಕ್ಷ ವಸ್ತುಗಳನ್ನು ತಾವಾಗಿ ತಮ್ಮ ಕೈಯಿಂದ ಉಪಯೋಗಿಸಬೇಕೆಂಬದು ಮಹತ್ವದ ಸಿದ್ಧಾಂತವಾಗಿದೆ. ೧ರಿಂದ ೧೦ರ ವರೆಗಿನ ಹಾಗು ೧೦೦ರ ವರೆಗಿನ ಸಂಖ್ಯೆಗಳ ಬೇರೀಜು ವಜಾಬಾಕಿ ಇವುಗಳ ಜ್ಞಾನವನ್ನು ಇವುಗಳ ಸಹಾಯದಿಂದಲೇ ಹುಡುಗರು ಮಾಡಿಕೊಳ್ಳುವರು. ಏಕೀಕರಣ ಪೃಥಕ್ಕರಣ ಮಾಡಿ ತೋರಿಸಿ ಅವರ ತಲೆಯಲ್ಲಿ ಜ್ಞಾನವನ್ನು ತುಂಬುವದಿರುವದಿಲ್ಲ. ಆರಂಭದ ಇಯತ್ತೆಗಳಲ್ಲಿ ಈ ವಸ್ತುಗಳೂ ೩ನೇ ೪ನೇ ಇ. ಗಳಲ್ಲಿ ಕಾಗದ, ಚಾಕು ಮನೆಯ ಕಾಗದ, ಇಂಚು ಫೂಟು ಗುರ್ತಿಸಿದ ಕಾಗದ, ಮಾವರಿಯ ನಾಣ್ಯಗಳು ಇವೇ ಮೊದಲಾದ ಉಪಕರಣಗಳ ಪ್ರತ್ಯಕ್ಷ ಉಪಯೋಗದಿಂದಲೇ ಆರಂಭದ ಪಾಠಗಳನ್ನು ಹುಡುಗರು ಕಲಿಯತಕ್ಕದ್ದು. ಬಾಲಕರ ವರ್ಗದ ಹಾಗು ೧ನೆಯ ಇ. ಯ ಪ್ರತಿಯೊಬ್ಬ ಹುಡುಗನ ಮುಂದೆ ಗಣಿತ ಪಾಠದಲ್ಲಿ ಕಾಳು ಗಂಟುಗಳ ಪೆಟ್ಟಿಗೆಯು ಇರಲೇಬೇಕು; ಹಾಗು ಇವುಗಳನ್ನು ಉಪಯೋಗಮಾಡಿಯೇ ಹುಡುಗನು ಮೊದಲಿನ ಲೆಕ್ಕಗಳನ್ನು ಮಾಡಬೇಕು ಎಂಬದು ಈ ಹೊಸ ಗಣಿತದ ಮಹತ್ವದ ಲಕ್ಷಣವೆಂದು ನಮ್ಮ ಮತವಿದೆ.

೨. **ಸ್ಪಷ್ಟ ಲೇಖನ, ಕ್ರಮವಾದ ಕೃತಿಗಳು**— ಆರಂಭದಿಂದ ಅಂಕೆಗಳನ್ನು ಸ್ಪಷ್ಟವಾಗಿಯೂ ಅಚ್ಚುಕಟ್ಟಾಗಿಯೂ ಬರೆಯಿಸುವದು ಅಂಕಗಣಿತದಲ್ಲಿ ಬಹಳ ಮಹತ್ವವಾದದ್ದು. ಬರೆಪದ್ದೆಲ್ಲ ಓದಲಿಕ್ಕಾಗಿಯೇ ಇರುವದು ಎಂಬ ತತ್ವವನ್ನು ಮನದಲ್ಲಿ ತಂದು ಸಾಲೆಗಳಲ್ಲಿ ಅಕ್ಷರ ಬರಹದ ಕಡೆಗೆ ಲಕ್ಷ್ಯಕೊಡುವದುಂಟು; ೪-೫ ವರ್ಷಗಳ ವರೆಗೆ ಕಾಪಿ ಬರೆಯಿಸುವದುಂಟು. ಆದರೆ ಅಂಕೆಗಳನ್ನು ಸ್ಪಷ್ಟವಾಗಿಯೂ ಅಚ್ಚುಕಟ್ಟಾಗಿಯೂ ಬರೆಯಬೇಕೆಂಬದು ಕೂಡಲೆ ಲಕ್ಷ್ಯದಲ್ಲಿ ಬರುವದಿಲ್ಲ; ಯಾಕೆಂದರೆ ಗಣಿತದಲ್ಲಿ ವಿಶೇಷವಾಗಿ ವ್ಯವಹಾರಕ್ಕೆ ಸಂಬಂಧಪಟ್ಟ ಲೆಕ್ಕಗಳಲ್ಲಿ ಉತ್ತರವೇ ಮಹತ್ವದ್ದೆನಿಸುತ್ತದೆ. ಪಾಟಿಯ ಮೇಲೆ ಮಾಡುವ ಲೆಕ್ಕಗಳಲ್ಲಿ ಸ್ಪಷ್ಟವಾದ ಅಂಕೆಗಳನ್ನು ಬರೆಯುವದೂ ಅವಾಂತರ ಕೃತಿಗಳನ್ನು ಅಚ್ಚುಕಟ್ಟಾಗಿ ಕ್ರಮದಿಂದ ಬರೆದಿಟ್ಟುಕೊಳ್ಳುವದೂ ಸರಿಯಾದ ಉತ್ತರ ತೆಗೆಯಲಿಕ್ಕೆ ಎಷ್ಟು ಸಹಾಯಕವಾದವೆಂಬದನ್ನು ನೀವು

ದುರ್ಲಕ್ಷಿಸುವದು ಅಕ್ಷಮ್ಯವು. ಹುಡುಗರು ಇಡುವ ಉತ್ತರವು ತಪ್ಪಾಗಿರಲು ಬಿಡಿಸುವ ಲೆಕ್ಕದ ರೀತಿಯ ಅಜ್ಞಾನವು ಎಷ್ಟರಮಟ್ಟಿಗೆ ಕಾರಣವು? ಅಂಕೆಗಳನ್ನೂ ಕೃತಿಗಳನ್ನೂ ಅಸ್ಪಷ್ಟವಾಗಿಯೂ ಕ್ರಮವಿಲ್ಲದೆಯೂ ಬರೆಯುವದು ಎಷ್ಟರಮಟ್ಟಿಗೆ ಕಾರಣವು ಎಂಬದನ್ನು ಪ್ರಯೋಗದಿಂದ ಇಲ್ಲವೆ ನಿರೀಕ್ಷಣದಿಂದ ಶಿಕ್ಷಕರು ಗೊತ್ತುಪಡಿಸಿದ್ದನ್ನು ನಾವು ಅರಿಯೆವು. ಆದರೂ ಬಹುತರ ತಪ್ಪುಗಳು ರೀತಿಯ ಅಜ್ಞಾನಕ್ಕಿಂತ ಎಚ್ಚರ ವಿಲ್ಲದೆ ಅಂಕೆಗಳನ್ನು ಬರೆಯುವದು, ಬಿಡಿಸಿದ ಭಾಗಗಳ ಸಂಖ್ಯೆಗಳನ್ನು ಕ್ರಮವಿಲ್ಲದೆ ಇಟ್ಟುಕೊಳ್ಳುವದು ಇವುಗಳಿಂದ ಆಗುವವೆಂದು ಅನುಭವಿಕ ಶಿಕ್ಷಕರು ಒಪ್ಪಿಕೊಳ್ಳು ವರು. ಆದ್ದರಿಂದ ಸುವಾಚ್ಯವಾದ ಅಂಕೆಗಳನ್ನು ಎದ್ದು ಕಾಣುವಂತೆ ಇಟ್ಟುಕೊಂಡು ಮನದಲ್ಲಿ ಮಾಡಿದ ಕೃತಿಗಳನ್ನು ಕ್ರಮವರಿತು ಬರೆದು ಉತ್ತರವನ್ನು ತರುವ ಚಟವು ಆರಂಭದಲ್ಲಿಯೇ ನೆಲೆಗೊಳ್ಳುವದು ಈ ವಿಷಯದಲ್ಲಿ ಬಹಳ ಮಹತ್ವದ್ದಿರುವದು.

ಆದರೆ ನಮ್ಮ ಶಾಲೆಗಳಲ್ಲಿ ಈ ಕಡೆಗೆ ಶಿಕ್ಷಕರ ಲಕ್ಷವು ಸಾಕಷ್ಟು ಹೋಗಿಲ್ಲವೆಂದು ಬಹು ವಿಷಾದದಿಂದ ಹೇಳಬೇಕಾಗಿದೆ. ಈ ದೋಷಕ್ಕೆ ಪರೀಕ್ಷಕರೂ ಕಾರಣವಾಗಿದ್ದಾರೆ. ಇವರು ಉತ್ತರಕ್ಕೆ ಮಾತ್ರ ಗುಣಕೊಡುವದನ್ನು ನಿಲ್ಲಿಸಿ ಬರಹ, ಕ್ರಮ ಇವುಗಳಿಗೆ ಸಾಕಷ್ಟು ಮಹತ್ವಕೊಡಲಾರಂಭಿಸಿದರೆ ಶಿಕ್ಷಕರು ಈ ಚಟವನ್ನು ಹುಡುಗರಲ್ಲಿ ನೆಲೆ ಗೊಳಿಸಲಿಕ್ಕೆ ಯತ್ನಮಾಡುವರು.

೩. ಬಾಯಿಲೆಕ್ಕ— ಗಣಿತ ಶಿಕ್ಷಣದಲ್ಲಿ ಬಾಯಿಲೆಕ್ಕ ಪಾಟಿಯಮೇಲಿನ ಲೆಕ್ಕ ಎಂಬ ಎರಡು ಭಾಗಗಳಿರುವವಷ್ಟೇ. ಇವುಗಳಲ್ಲಿ ಬಾಯಿಲೆಕ್ಕವು ಹೆಚ್ಚು ಮಹ ತ್ವದ್ದೆಂದು ಈಗ ಒತ್ತಿ ಹೇಳಬೇಕಾಗಿದೆ. ಪಾಟಿಯಮೇಲೆ ಮಾಡುವ ಲೆಕ್ಕಗಳೆಲ್ಲ ನಿಜ ವಾಗಿ ಬಾಯಿಲೆಕ್ಕಗಳು; ಅವುಗಳಲ್ಲಿ ಅಂಕೆಗಳು ದೊಡ್ಡವಿರುವದರಿಂದಲೂ ಪೆಟ್ಟು ಗಳು ಹೆಚ್ಚಾಗಿ ಇರುವದರಿಂದಲೂ ನಾವು ಪಾಟಿಯ ಉಪಯೋಗವನ್ನು ಮಾಡಬೇಕಾ ಗುತ್ತದೆ. ಆದರೂ ಪಾಟಿಯ ಮೇಲೆ ಕೃತಿಗಳನ್ನು ಮಾಡುತ್ತಿರುವಾಗ ಪ್ರತಿಯೊಂದು ಕೃತಿಯನ್ನು ಬಾಯಿಂದ ಇಲ್ಲವೆ ಮನಸ್ಸಿನಲ್ಲಿ ಮಾಡಿ ನಾವು ಲೆಕ್ಕಗಳನ್ನು ಬಿಡಿಸುವೆವು. ಆದ್ದರಿಂದಲೇ ಹೊಸ ಅಭ್ಯಾಸಪತ್ರಿಕೆಯಲ್ಲಿ ಬಾಯಿಲೆಕ್ಕದ ಕೃತಿಗಳನ್ನು ಬೇರೆ ಬೇರೆ ಇಯತ್ತೆಗಳಿಗೆ ಬೇರೆಬೇರೆಯಾಗಿ ವಿಂಗಡಿಸಿ ಹೇಳದೆ ಆಯಾ ಇಯತ್ತೆಗೆ ನಿಯಮಿಸಿರುವ ಅಂಕಗಣಿತಕ್ಕೆ ಸಂಬಂಧಿಸಿದಂಥ ಸುಲಭವಾದ ಅಂಕೆಗಳಿಂದ ಕೂಡಿದ ಹಾಗು ವ್ಯವ ಹಾರದಲ್ಲಿ ಉಪಯೋಗ ಬೀಳುವಂಥ ಬಾಯಿಲೆಕ್ಕಗಳನ್ನು ಮಾಡಿಸಬೇಕೆಂದು ಒಟ್ಟಾಗಿ ಹೇಳಿದೆ. ಇಂಥ ಬಾಯಿಲೆಕ್ಕಗಳನ್ನು ರೂಢಿ ಮಾಡಿಸುವದರಿಂದ ಹುಡುಗರು ಪಾಟಿಯ ಮೇಲಿನ ಲೆಕ್ಕಗಳನ್ನು ತಪ್ಪದೆ ಮಾಡುವರು; ಇಷ್ಟೇ ಅಲ್ಲ; ಅವರಿಗೆ ತೀವ್ರವಾಗಿ ಲೆಕ್ಕಗಳನ್ನು ಮಾಡುವ ಮಹತ್ವದ ಚಟವು ಹತ್ತುವದು. ಇದು ಗಣಿತವಲ್ಲಿಯ ಜಾಣ್ಮೆಯ ಒಂದು ಲಕ್ಷಣವು. ಸದ್ಯಕ್ಕೆ ನಮ್ಮ ಶಾಲೆಗಳಲ್ಲಿ ನೆಲೆಗೊಂಡಿರುವ ರೂಢಿ ಯನ್ನು ನೋಡಿದರೆ ಆಶ್ಚರ್ಯವಾಗುವದಲ್ಲದೆ ಮನಸಿಗೆ ಬಹಳ ಖೇದವೆನಿಸುವದು.

ಕೊಟ್ಟ ಲೆಕ್ಕವನ್ನು ಇಂತಿಷ್ಟು ವೇಳೆಯಲ್ಲಿ ಮಾಡಬೇಕೆಂಬ ಕಲ್ಪನೆಯು ಬಹುತರ ಹುಡುಗರಿಗೆ ಇರುವದಿಲ್ಲ; ಶಿಕ್ಷಕರಾದವರೂ ಈ ಮಾತಿನ ಕಡೆಗೆ ಸಾಕಷ್ಟು ಲಕ್ಷ್ಯವನ್ನು ಪೂರಯಿಸದಂತೆ ಕಾಣುವದಿಲ್ಲ. ಯಾಕೆಂದರೆ ಲೆಕ್ಕವನ್ನು ಹುಡುಗರು ಮಾಡಿ ಮುಗಿಸುವವರೆಗೆ ಶಿಕ್ಷಕರು ಅವರ ಗೊಡವೆಗೆ ಹೋಗುವದಿಲ್ಲ. ಎಷ್ಟೋ ಹುಡುಗರು (ಬಹುತರ ಇವರು ಹಿಂದುಳಿದವರೇ ಇರುವರು) ಒಂದೇ ಲೆಕ್ಕವನ್ನು ಎರಡು ಮೂರು ಸಾರೆ ಅಳಿಸಿ ಅಳಿಸಿ ಮಾಡುತ್ತ ಪಾಟಿಯನ್ನೇ ಹಾಕುವದಿಲ್ಲ. ಇವರ ದೋಷಕ್ಕಾಗಿ ಮುಂದುವರಿಯುತ್ತಿರುವ ಹುಡುಗರು ಶಿಕ್ಷೆಯನ್ನು ಅನುಭವಿಸಬೇಕಾಗುವದು.

ಬಾಯಿಲೆಕ್ಕಗಳೆಂದರೆ ಗಣಿತದ ಪ್ರತ್ಯೇಕವಾದ ಒಂದು ಭಾಗವೆಂದೂ ಪಾಟಿಯ ಮೇಲಿನ ಲೆಕ್ಕಗಳಿಗೂ ಬಾಯಿಲೆಕ್ಕಗಳಿಗೂ ಬಹಳ ಹೆಚ್ಚು ಕಡಿಮೆ ಇರುವದೆಂದೂ ಹಿಂದಿನ ಅಭ್ಯಾಸ ಪತ್ರಿಕೆಯ ಮೂಲಕ ಶಿಕ್ಷಕರ ಕಲ್ಪನೆಯಾದದ್ದು ಸೋಜಿಗವಲ್ಲ. ಆದರೆ ವ್ಯವಹಾರದ ಸಣ್ಣ ಪುಟ್ಟ ಲೆಕ್ಕಗಳನ್ನು ಮಾತ್ರ ಬಾಯಿಂದ ಮಾಡಿಸಿದರೆ ತೀರಿತೆಂಬ ಭಾವನೆಯಿದ್ದರೂ ಶಿಕ್ಷಕರು ಹೇಳುವ ಲೆಕ್ಕಗಳಿಂದ ವ್ಯವಹಾರ ಜ್ಞಾನಕ್ಕೆ ಅವಶ್ಯವಾದ ನೆರವು ಆಗುತ್ತಿರಲಿಲ್ಲ. ಹಲವು ಕೋಷ್ಟಕಗಳನ್ನು ಪಾಠಮಾಡಿಸಿ ಅವುಗಳ ಉಪಯೋಗ ಮಾಡಿ ವಿಶಿಷ್ಟ ಪ್ರಕಾರದ ಕೆಲವು ಲೆಕ್ಕಗಳನ್ನು ಯಾಂತ್ರಿಕವಾಗಿ ಮಾಡಿಸುವ ರೂಢಿಯು ಇದರಿಂದ ನೆಲೆಗೊಳ್ಳುತ್ತಿತ್ತು. ಇದು ಕ್ಷುಲ್ಲಕವಾದ ಜ್ಞಾನವು. ಯಾಕೆಂದರೆ ಗಣಿತ ಶಾಸ್ತ್ರದಲ್ಲಿಯ ಆರಂಭದ ನಾಲ್ಕು ಕೃತಿಗಳು ಮುಖ್ಯವಾಗಿ ನಾಣ್ಯ ತೂಕ ಅಳತೆಗಳಿಗೆ ಸಂಬಂಧಿಸಿದಂಥವು ಮನುಷ್ಯನ ವ್ಯವಹಾರದಲ್ಲಿ ಅತಿಶಯ ಮಹತ್ವವಾದವು; ಇವುಗಳನ್ನು ತೀವ್ರವಾಗಿಯೂ ತಪ್ಪಿಲ್ಲದೆಯೂ ಮಾಡುವ ರೂಢಿಯು ವ್ಯವಹಾರದ ದೃಷ್ಟಿಯಿಂದ ಮಹತ್ವವಾದದ್ದು. ಬೇಕಾದಷ್ಟು ದೊಡ್ಡ ಸಂಖ್ಯೆಗಳುಳ್ಳ ಈ ನಾಲ್ಕು ಕೃತಿಗಳಿಗೆ ಸಂಬಂಧಿಸಿದ ಲೆಕ್ಕಗಳನ್ನು ಪಾಟಿಯ ಮೇಲೆ ಮಾಡಲಿಕ್ಕೆ ಬಂದರೂ ಬಾಯಿಂದ ತೀವ್ರವಾಗಿ ಇಂಥ ಸಣ್ಣ ಲೆಕ್ಕಗಳನ್ನು ಮಾಡುವ ರೂಢಿಯಿಲ್ಲದಿದ್ದರೆ ಹುಡುಗನ ಗಣಿತಜ್ಞಾನವು ದೋಷಯುಕ್ತವಾದದ್ದೆಂದು ಹೇಳಬಹುದು. ತೊಲೆಗೆ ಇಷ್ಟು ರೂ. ಆದರೆ ನಿರ್ದಿಷ್ಟ ಮಾಸಿ ಗುಂಜಿಗಳ ಬೆಲೆ ಎಷ್ಟೆಂದು ಕೇಳಲು ಸ್ವಲ್ಪ ಕಾಲದಲ್ಲಿ ಯಾಂತ್ರಿಕ ರೀತಿಯಿಂದ ಉತ್ತರ ಹಚ್ಚುವ ಶಿನೆಯ ಇರುತ್ತೆಯ ಹುಡುಗರು ಪೇಟೆಗೆ ಒಯ್ದ ೫ ಆ. ೮ ಪೈಗಳಲ್ಲಿ ೧೧ ಪೈ ಖರ್ಚಾದರೆ ಎಷ್ಟುಳಿಯಿತೆಂದರೆ ಬಹಳ ಹೊತ್ತು ಕೊಟ್ಟರೂ ತಪ್ಪು ಉತ್ತರಗಳನ್ನೂ ವ್ಯವಹಾರಕ್ಕೆ ಸಂಬಂಧಿಸದ ೫೭ ಪೈ. ಎಂಬ ಉತ್ತರವನ್ನೂ ಇಡುವರು. ಹೊಸ ಗಣಿತದಲ್ಲಿ ಹೇಳಿದ ಬಾಯಿಲೆಕ್ಕದ ವಿಷಯವನ್ನು ಶಿಕ್ಷಕರು ಲಕ್ಷ್ಯದಲ್ಲಿಡಬೇಕು; ಹಾಗೂ ಹುಡುಗರಿಗೆ ತೊಡಕಿಳ್ಳಂತೆ ತೋರುವ ಲೆಕ್ಕಗಳನ್ನು ಯಾಂತ್ರಿಕವಾಗಿ ಬಿಡಿಸುವ ಚಟ ಹಚ್ಚದೆ, ವ್ಯವಹಾರಕ್ಕೂ ಅವರು ಕಲಿಯುತ್ತಿರುವ ಗಣಿತದ ಅಭ್ಯಾಸಕ್ಕೂ ಸಹಾಯಕವಾದಂಥ, ಸುಲಭ ಸಂಖ್ಯೆಗಳುಳ್ಳಂಥ ಹಾಗು ಅವರವರ ಮಾನಸಿಕ ಅಳವಿನಲ್ಲಿರುವಷ್ಟೇ ಮೆಟ್ಟುಗಳುಳ್ಳಂಥ ಬಾಯಿಲೆಕ್ಕಗಳನ್ನು ಹೆಚ್ಚಿಗೆ ಮಾಡಿಸತಕ್ಕದ್ದು.

೪. ರೀತಿ ಬರೆಯುವದು— ಮೇಲೆ ವಿವರಿಸಿದಂತೆ ನಿಜವಾಗ ಉಪಯುಕ್ತವಿರುವ ಬಾಯಿಲೆಕ್ಕಗಳಿಗೆ ಮಹತ್ವ ಕೊಡುವದನ್ನು ಬಿಟ್ಟು ವ್ಯವಹಾರದಲ್ಲಿ ಉಪಯುಕ್ತವೆಂಬ ತಪ್ಪು ತಿಳುವಳಿಕೆಯಿಂದ ಕಾಣಲಿಕ್ಕೆ ತೊಡಕುಳ್ಳವಾಗಿಯೂ, ಯಾಂತ್ರಿಕವಾಗಿ ಮಾಡಬಹುದಾಗಿಯೂ ಇರುವ ಲೆಕ್ಕಗಳನ್ನು ಹೇಳುತ್ತಿರುವದರಿಂದ ಇನ್ನೊಂದು ದೊಡ್ಡ ಹಾನಿಯು ಆಗುತ್ತಿರುವದು. ಪಾಟಿಯಮೇಲೆ ಲೆಕ್ಕ ಮಾಡುತ್ತಿರುವಾಗ ಬಾಯಿಂದ ಮಾಡಬಹುದಾದ ಕೃತಿಗಳನ್ನು ಪಾಟಿಯಮೇಲೆ ಬರೆಯುತ್ತ ಕೊಡುವದರಿಂದ ವೇಳೆಯು ಹಾಳಾಗುವದೆಂಬದು ಸ್ಪಷ್ಟವು. ಆದರೆ ಈ ಮಾತು ಶಿಕ್ಷಕರ ಲಕ್ಷ್ಯದಲ್ಲಿ ಬಂದಂತೆ ತೋರುವದಿಲ್ಲ. ಯಾಕಂದರೆ ಮೂರನೆಯ ೩॥ ಯ ಹುಡುಗರು ರೂಪಾಂತರದ ಲೆಕ್ಕಗಳನ್ನು ಮಾಡುತ್ತಿರುವಾಗ ೧೪ ಆಣೆಗೆ ಪೈ ರೂಪ ಕೊಡುವಾಗ ಬದಿಗೆ ತೋರಿಸಿದಂತೆ ಲೆಕ್ಕಮಾಡುವದು ಸಾಮಾನ್ಯವಾಗಿ ದೃಷ್ಟಿಗೆ ಬೀಳುವದುಂಟು. ಒಮ್ಮೊಮ್ಮೆ ಇಂಥ ಸುಲಭವಾದ ಕೃತಿಗಳನ್ನು ಮೇಲಿನ ಇಯತ್ತೆಯ ಹುಡುಗರು ಸಹ ಪಾಟಿಯಮೇಲೆ ಪೂರ್ಣವಾಗಿ ಬರೆದು ಮಾಡುವದುಂಟು. ಇದು ಅಕ್ಷಮ್ಯವು. ಇದರಿಂದ ವೇಳೆಯು ವೃಥಾಹೋಗುವದು.

```
   ೧೪ ಆ.
  ×೧೨
  ─────    ೧೪
  ೧೬೮       ೧೨
  ಪೈ.     ─────
            ೨೮
           ೧೪
          ─────
ಉತ್ತರ    ೧೬೮
```

ಮೇಲಾಗಿ, ಇಂಥ ಸಣ್ಣಪುಟ್ಟ ಕೃತಿಗಳನ್ನೆಲ್ಲ ಬರೆಯುತ್ತ ಕೊಡುವದರಿಂದ ಲೆಕ್ಕದಲ್ಲಿಯ ಕೃತಿಗಳು ಬಹಳ ಆಗುವವು. ಹೀಗೆ ನಿಷ್ಕಾರಣವಾದ ಹೆಚ್ಚು ಕೃತಿಗಳನ್ನು ಬರೆಯುವ ರೂಢಿಯಾಗುವದರಿಂದ ಕ್ರಮದಿಂದ ರೀತಿಯನ್ನು ಬರೆಯುವದು ಬಹುತರ ಕಠಿಣವಾಗುವದು. ಈ ಎಲ್ಲ ಸಣ್ಣ ಪುಟ್ಟ ಕೃತಿಗಳನ್ನು ಬರೆಯಲಿಕ್ಕೆ ಪಾಟಿಯಲ್ಲಿ ಸ್ಥಳವಿರುವದಿಲ್ಲ; ಆದ್ದರಿಂದ ಅವುಗಳನ್ನು ಪಾಟಿಯಮೇಲೆ ಸ್ಥಳ ಸಿಕ್ಕ ಭಾಗದಲ್ಲಿ ಮಾಡಿ ಕೆಲವನ್ನು ಅಳಿಸಿಬಿಡುವ ರೂಢಿಯು ಬೀಳುತ್ತಿರಬಹುದು; ಕೆಲವು ಸಂಖ್ಯೆಗಳು ಮಾತ್ರ ಕಂಡಕಂಡಲ್ಲಿ ಹಾಗೆಯೇ ಉಳಿಯುವವು. ಮಾಡಿದ ಲೆಕ್ಕವನ್ನು ತಿರುಗಿ ಮಾಡಿ ನೋಡುವ ರೂಢಿಗೆ ಇದರಿಂದ ಆತಂಕ ಬರುವದು. ಸಾಮಾನ್ಯವಾಗಿ ಬಹುತರ ಇಯತ್ತೆಗಳಲ್ಲಿ ಹುಡುಗರ ಪಾಟಿಗಳನ್ನು ನೋಡಿದರೆ ಅವರು ಗಣಿತ ಮಾಡುವಾಗ ಅಂಕೆಗಳನ್ನೂ ಸಂಖ್ಯೆಗಳನ್ನೂ ಮನಬಂದತ್ತ ಪಾಟಿಯಮೇಲೆ ಎಸೆದಿರುವಂತೆ ಕಾಣುವದು. ಇದರಿಂದ ಕ್ರಮವು ಕೆಟ್ಟಾಗುವದು, ಅಚ್ಚುಕಟ್ಟುತನವು ಇಲ್ಲದಾಗುವದು; ತೀವ್ರವಾಗಿ ಲೆಕ್ಕಗಳನ್ನು ಬಿಡಿಸುವ ಚಟವು ನೆಲೆಗೊಳ್ಳುವದು; ಹಾಗು ಬಹುತರವಾಗಿ ರೀತಿಯ ಜ್ಞಾನವಿದ್ದವರು ಸಹ ಒಂದಿಲ್ಲೊಂದು ಕಡೆಗೆ ತಪ್ಪುವದು ಸಹಜವಾಗುವದು.

ಈ ದೋಷಗಳು ಕಡಿಮೆಯಾಗಬೇಕೆಂದು ಗಣಿತದಲ್ಲಿ ಲೆಕ್ಕಗಳನ್ನು ಬಿಡಿಸುವ ಕ್ರಮವು ಮಹತ್ವದ್ದಾಗಿದೆ. ಉದಾಹರಣಾರ್ಥವಾಗಿ ೨೪ ರೂ. ೧೨ ಆ. ೩ ಪೈ.

ಇದಕ್ಕೆ ೨೩೭ ರಿಂದ ಗುಣಿಸುವಾಗ ಹುಡುಗರು ಮೊದಲು ಲೆಕ್ಕವನ್ನು ಬರೆದು ಒಂದು ಕಡೆಗೆ ೨೩೭×೬ ಎಂದು ಇಟ್ಟುಕೊಂಡು ಗುಣಿಸಿ ಬಂದ ಪೈಗಳಿಗೆ ೧೨ ರಿಂದ ಭಾಗಿಸುವರು; ಬಳಿಕ ೨೩೭ಕ್ಕೆ ೧೩ ರಿಂದ ಗುಣಿಸಿ ಬಂದ ಸಂಖ್ಯೆಯಲ್ಲಿ ಈ ಮೊದಲು ಉಳಿದ ಆಣೆಗಳನ್ನು ಕೂಡಿಸಿ, ೧೬ರಿಂದ ಭಾಗಿಸುವರು. ಬಳಿಕ ೨೩೭ಕ್ಕೆ ೨೪ರಿಂದ ಗುಣಿಸಿ, ಬಂದದ್ದರಲ್ಲಿ ಈ ಮೊದಲು ಉಳಿದ ರೂ॥ ಗಳನ್ನು ಕೂಡಿಸುವರು. ಇಷ್ಟರಲ್ಲಿ ಕೃತಿಯು ಕಪೀಶ್ವರನ ಬಾಲದಂತೆ ಪಾಟಿಯ ತುಂಬ ಡೊಂಕು ಡೊಂಕಾಗಿ ತಿರುಗಿ ಎಲ್ಲಿ ನೋಡಿದರೂ ಸಂಖ್ಯೆಗಳೇ ಕಾಣಹತ್ತುವವು. ಕ್ರಮದಿಂದ ಸಂಖ್ಯೆಗಳನ್ನು ಇಟ್ಟುಕೊಳ್ಳದ್ದರಿಂದಲೂ ಬಂದ ಸಂಖ್ಯೆಗಳ ಮುಂದೆ ರೂ. ಆ. ಪೈ. ಇವುಗಳನ್ನು ಬರೆಯುವ ರೂಢಿ ಇಲ್ಲದ್ದರಿಂದಲೂ ತಪ್ಪು ಸಂಖ್ಯೆಗಳನ್ನು ಕೂಡಿಸುವದರಿಂದ ಉತ್ತರವು ತಪ್ಪುವದು. ಇದರಲ್ಲಿ ಸೇರಿದ ಎಲ್ಲಕ್ಕೂ ಹೆಚ್ಚಿನ ದೋಷವೆಂದರೆ, ಬಾಯಿಂದ ಮಾಡಬಹುದಾದ ಕೃತಿಗಳನ್ನು ಹುಡುಗರು ಪಾಟಿಯ ಮೇಲೆ ಬರೆದು ಮಾಡುವರು. ಹೊಸ ಪದ್ಧತಿಯಲ್ಲಿ ಈ ಲೆಕ್ಕವನ್ನು ಕೆಳಗೆ ತೋರಿಸಿದಂತೆ ತೀವ್ರವಾಗಿಯೂ ಅಚ್ಚುಕಟ್ಟಾಗಿಯೂ ಬಿಡಿಸಬಹುದಾಗಿದೆ.

೨೪ ರೂ.	೧೩ ಆ.	೬ ಪೈ.
		× ೨೩೭
೫೮೭೩	೨	೬
೧೬೫	೧ ೮	೧೪೩೨
೪೭೪೦	೨೩೭೦	——
೯೪೮	೯೭೪	೧೧೮
——	——	
೫೮೭೩	೨೯೬೨	
	——	
	೧.೮೫	

ಇದರಲ್ಲಿ ಅಂಕೆಗಳು ಒಂದರಕೆಳಗೆ ಒಂದು ಬರುವಂತೆ ಸ್ಪಷ್ಟವಾಗಿಯೂ ಅಚ್ಚುಕಟ್ಟಾಗಿಯೂ ಬರೆಯಲ್ಪಟ್ಟಿವೆ; ಎಲ್ಲ ಕೃತಿಗಳನ್ನು ಬಾಯಿಂದಲೇ ಮಾಡಿದೆ; ಮತ್ತೊಮ್ಮೆ ಲೆಕ್ಕಮಾಡಿ ಉತ್ತರವು ಸರಿಯೆಂದು ಮನವರಿಕೆ ಮಾಡಿಕೊಳ್ಳಲಿಕ್ಕೆ ಸುಲಭವಾಗಿದೆ; ಹಾಗು ರೂ. ಯ ಕೆಳಗೆ ರೂ. ಗಳೂ, ಆಣೆಗಳ ಕೆಳಗೆ ಆಣೆಗಳೂ ಪೈಗಳ ಕೆಳಗೆ ಪೈಗಳೂ ಬಂದಿರುವದರಿಂದ ಒಂದರಲ್ಲಿ ಒಂದು ತಪ್ಪಿ ಕೂಡುವಸಂಭವವಿಲ್ಲ. ಸ್ವಲ್ಪ ರೂಢಿಯಾದ ಬಳಿಕ ಗೆರೆಯ ಎಲ್ಲಕ್ಕೂ ಕೆಳಗಿನ ಸಂಖ್ಯೆಗಳನ್ನು ಒಮ್ಮಿಲೆ ಯೋಗ್ಯ ಸ್ಥಳದಲ್ಲಿ ಬರೆಯಬಹುದು.

೫. **ವ್ಯವಹಾರದ ಲೆಕ್ಕಗಳು:—** ಸಣ್ಣ ಹುಡುಗರಿಗೆ ವಿಷಯದಲ್ಲಿ ಮನಸು ಕೂಡಬೇಕಾದರೆ ಕಲಿಸುತ್ತಿರುವ ವಿಷಯವನ್ನು ಅವರ ದಿನದ ಅನುಭವಕ್ಕೆ

ಸಂಬಂಧಿಸುವಂಥ ವ್ಯವಹಾರದಲ್ಲಿ ಹ್ಯಾಗೆ ಉಪಯೋಗಿಸಬಹುದೆಂಬದನ್ನು ಗೊತ್ತು ಮಾಡಿ ಕೊಡುವದು ಒಂದು ಮಹತ್ವದ ಉಪಾಯವು. ಆದ್ದರಿಂದಲೇ ಹೊಸಗಣಿತದಲ್ಲಿ ವ್ಯವಹಾರದ ಲೆಕ್ಕಗಳಿಗೆ ಒಳ್ಳೇ ಮಹತ್ವವನ್ನು ಕೊಟ್ಟಿದೆ. ಈ ಮಾತಿನ ಕಡೆಗೆ ಶಿಕ್ಷಕರಿಗಿಂತ ಪರೀಕ್ಷಕರ ಲಕ್ಷ್ಯವು ಹೆಚ್ಚು ಹೋಗತಕ್ಕದ್ದೆಂದು ನಮಗೆ ತೋರುತ್ತದೆ. ವ್ಯವಹಾರದ ಲೆಕ್ಕಗಳನ್ನು ಮಾತ್ರ ಬಿಡಿಸಲಿಕ್ಕೆ ಬಂದರೆ ತೀರಿತೆಂದು ಯಾರ ಕಲ್ಪನೆಯೂ ಆಗಬಾರದು. ಯಾಕೆಂದರೆ ಈ ಸಂಕುಚಿತವಾದ ಉದ್ದೇಶವನ್ನು ಮುಂದಿಟ್ಟುಕೊಂಡರೆ ಈ ವಿಷಯದ ಅಭ್ಯಾಸವು ಪೂರ್ಣವಾಗದು. ಮೊದಲಿನ ನಾಲ್ಕು ಕೃತಿಗಳು ಗಣಿತದಲ್ಲಿ ಅಕಲ್ಪಿತ ಮಹತ್ವನಾದವೆಂದು ನಮ್ಮ ಮತವಿದೆ. ಅವುಗಳನ್ನು ಬಹುತೀವ್ರವಾಗಿಯೂ ಸ್ವಲ್ಪಸಹ ತಪ್ಪಿಲ್ಲದೆಯೂ ಮಾಡುವ ಚಟವನ್ನು ಹುಡುಗರಲ್ಲಿ ಉಂಟುಮಾಡುವದು ಬಹಳ ಮಹತ್ವವಾದದ್ದು. ಆದ್ದರಿಂದ ಇವುಗಳನ್ನು ಕಲಿಸುವ ಇ॥ ಗಳಲ್ಲಿ ಈ ಕೃತಿಗಳನ್ನು ತಪ್ಪದೆ ತೀವ್ರವಾಗಿ ಉಂಟುಮಾಡುವ ಚಟವು ಉಂಟಾಗಬೇಕೆಂದು ಬರೇ ಅಂಕೆಗಳುಳ್ಳ ಲೆಕ್ಕಗಳನ್ನು ಅಭ್ಯಾಸಕ್ಕಾಗಿ ಹೇಳುವದುಂಟು. ಹಿಂದಿನ ಗಣಿತದಲ್ಲಿ ಇಂಥವುಗಳಿಗೆ ಮಾತ್ರ ಲಕ್ಷ್ಯಗೊಟ್ಟು ವ್ಯವಹಾರದ ಲೆಕ್ಕಗಳನ್ನು ದುರ್ಲಕ್ಷಿಸುತ್ತಿದ್ದದರಿಂದ ಹೊಸ ಗಣಿತದಲ್ಲಿ ಅವುಗಳ ಯೋಗ್ಯ ಸ್ಥಾನವನ್ನು ಒತ್ತಿಹೇಳಿದೆ.

೬. **ತಿಳಿದು ಮಾಡುವದು:—** ಯಾವ ಹೊಸಕೃತಿಯನ್ನೂ ಯಂತ್ರಿಕವಾಗಿ ಮಾಡಹೇಳದೆ ಅದರಲ್ಲಿ ಅಡಗಿದ ಮಾತನ್ನು ಹುಡುಗರಿಗೆ ತಿಳಿಯುವಂತೆ ಹೇಳಬೇಕೆಂಬದು ಹೊಸ ಗಣಿತದ ಮತ್ತೊಂದು ಮಹತ್ವದ ಲಕ್ಷಣವು. ಈ ಕಾರಣಕ್ಕಾಗಿಯೇ ಹೊಸ ಗಣಿತದ ಅಭ್ಯಾಸ ಪತ್ರಿಕೆಯಲ್ಲಿ ೧ನೇ ೨ನೇ ಇ॥ ಗಳ ಅಂಕಗಣಿತ ವಿಷಯವು ಹಿಂದಿನ ಗಣಿತಕ್ಕಿಂತ ಕಡಿಮೆಯೆಂದು ತೋರುವಂತಿದೆ. ಹಿಂದೆ ಮಗ್ಗಿಗಳನ್ನು ಬಾಯಿಪಾಠ ಮಾಡಿಸುತ್ತಿದ್ದೆವು. ಈಗಲೂ ಮಗ್ಗಿಗಳನ್ನು ಪಾಠಮಾಡಿಸಿಯೇ ತೀರಬೇಕಾಗುವದು. ಆದರೆ ಹಿಂದೆ ಅವನ್ನು ಕಲಿಸುವಾಗ ಅವುಗಳ ರಚನೆಯ ಬಗ್ಗೆ ಒಂದೆರಡು ಪಾಠಗಳಲ್ಲಿ ತಿಳಿಸಿಹೇಳುತ್ತಿದ್ದೆವು. ಈಗ ಪ್ರತಿಯೊಬ್ಬ ಹುಡುಗನು ಕೆಲವು ಮಗ್ಗಿಗಳನ್ನು ವಸ್ತುಗಳ ಸಹಾಯದಿಂದ ರಚಿಸಿ ಮನವರಿಕೆ ಮಾಡಿಕೊಂಡಬಳಿಕ ಅವನ್ನು ಪಾಠಮಾಡಬಹುದಾಗಿದೆ. ಮೇಲಾಗಿ ಅವನಿಗೆ ಮೇಲಿಂದಮೇಲೆ ಉಪಯೋಗಬೀಳುವ ಮಗ್ಗಿಗಳನ್ನು ಪಾಠಮಾಡಿದರೆ ಸಾಕೆಂದು ನಿರ್ಬಂಧಿಸಲ್ಪಟ್ಟಿದೆ. ಇದರಂತೆಯೇ ವಜಾಬಾಕಿ, ಅವಯವಗಳಿಂದ ಗುಣಿಸುವದು, ಭಾಗಿಸುವದು, ಅಪೂರ್ಣಾಂಕಗಳ ಗುಣಾಕಾರ ಈ ಮೊದಲಾದ ಎಲ್ಲ ಕೃತಿಗಳಲ್ಲಿ ಹುಡುಗನು ಅನುಸರಿಸುವ ರೀತಿಯ ಗುಟ್ಟನ್ನು ಅವನು ಪೂರ್ಣವಾಗಿ ಮನಗಂಡ ಬಳಿಕ ಮಾತ್ರ ಅದರ ಉಪಯೋಗವನ್ನು ಮಾಡಗೊಡಬೇಕೆಂದು ಹೇಳಿದೆ. ಆದರೆ ಅವರು ಈ ಕೃತಿಯನ್ನು ಮಾಡುವ ಪ್ರತಿಯೊಂದು ಸಾರೆ ಈ ಕಲ್ಪನೆಯು ಅವರ ಮನಸಿನಲ್ಲಿ ಬರಬೇಕೆಂಬ ನಿರ್ಬಂಧವು ಮಾತ್ರ ಇಲ್ಲೆಂಬದನ್ನು ಶಿಕ್ಷಕರು ಲಕ್ಷದಲ್ಲಿಡತಕ್ಕದ್ದು.

೭. **ಚಿಹ್ನಗಳ ತಪ್ಪು ಉಪಯೋಗ:—** ಮೇಲೆ ಹೇಳಿದಂತೆ ತಿಳಕೊಂಡು ಲೆಕ್ಕಗಳನ್ನು ಮಾಡಬೇಕೆಂಬ ತತ್ವವನ್ನು ಲಕ್ಷ್ಯದಲ್ಲಿಟ್ಟರೆ ರೀತಿಯಲ್ಲಿ ಹುಡುಗರು ಬರೆಯುವ ತಪ್ಪುಗಳನ್ನು ನಾವು ನಿಲ್ಲಿಸತಕ್ಕದ್ದು. ಉದಾ: ೨೪ ರೂ. × ೧೬ = ೩೮೪ ಆ. ಎಂದು ಹುಡುಗರು ಬರೆಯುವದುಂಟು; ಆದರೆ ೨೪ ರೂ. ಗಳಿಗೆ ೧೬ ರಿಂದ ಗುಣಿಸಿದರೆ ೩೮೪ ರೂ. ಬರುವವು, ಆಣೆಗಳು ಬರಲಾರವು. ಇದಕ್ಕೂ ಹೆಚ್ಚು ಅಕ್ಷಮ್ಯವಾದ ಇನ್ನೊಂದು ದೋಷವೆಂದರೆ = (ಬರೋಬರಿ) ಚಿನ್ಹದ ತಪ್ಪು ಉಪಯೋಗವು. ಹುಡುಗರು ೨೦ ರೂ. ೧೨ ಆ. ೮ ಪೈ. ಬರೆಯುಹೇಳಿದರೆ ೨೦ ರೂ. = ೧೨ ಆ. = ೮ ಪೈ ಎಂದು ಬರೆಯುವರು. ಮುಲ್ಕೀಪರೀಕ್ಷೆ ಪಾಸಾದ ಹುಡುಗರು ಸಹ ಇದೇ ಪ್ರಕಾರ ಈ ಚಿನ್ಹವನ್ನು ತಪ್ಪಾಗಿ ಉಪಯೋಗಿಸುವರು. ಇದು ಅರ್ಥವನ್ನರಿಯದೆ ಚಿನ್ಹಗಳನ್ನು ಉಪಯೋಗಮಾಡುವ ಚಟದ ಗುರುತು.

೮. **ತಾಳೇನೋಡುವದು:**— ಲೆಕ್ಕಗಳ ಉತ್ತರವು ಸರಿಯಿರುವದೆಂಬದನು ತಾಳೇನೋಡಿ ಮನಗಾಣುವ ಚಟಹಚ್ಚುವದು ಒಳ್ಳೇ ಮಹತ್ವವಾದದ್ದು; ಆದರೆ ಇದು ನಮ್ಮ ಸಾಲೆಗಳಲ್ಲಿ ದುರ್ಲಕ್ಷಿಸಲ್ಪಡುವದು. ಬರೆದದ್ದನ್ನು ತಿರುಗಿ ಒಮ್ಮೆ ಓದಿನೋಡಿ ಸ್ಖಲಿತಗಳನ್ನು ತಿದ್ದಿಕೊಳ್ಳುವ ಚಟವೂ ಉತ್ತರವು ಸರಿಯೆಂದು ಮತ್ತೊಮ್ಮೆ ಮಾಡಿನೋಡುವ ರೂಢಿಯೂ ನಮ್ಮ ಹುಡುಗರಲ್ಲಿಯೂ ನೆಲೆಗೊಂಡಿದ್ದರೆ ಯೋಗ್ಯತೆಯುಳ್ಳ ಹುಡುಗರು ಪರೀಕ್ಷೆಯಲ್ಲಿ ಸದ್ಯದಂತೆ ಹತಾಶರಾಗುತ್ತಿರಲಿಲ್ಲ. ಆದರೆ ಗಣಿತದಲ್ಲಿ ಮತ್ತೊಮ್ಮೆ ಮಾಡಿನೋಡುವದಕ್ಕಿಂತ ಮತ್ತೊಂದು ರೀತಿಯಿಂದ ಮಾಡಿ ಇಲ್ಲವೆ ಬೇರೊಂದು ಬಗೆಯಿಂದ ತಾಳೇನೋಡುವದು ಒಳಿತಾದದ್ದು. ಬಹುತರ ಎಲ್ಲ ಬಗೆಯು ಲೆಕ್ಕಗಳಲ್ಲಿ ಹೀಗೆ ತಾಳೇನೋಡಿ ಮನವರಿಕೆ ಮಾಡಿಕೊಳ್ಳಬಹುದಾಗಿದೆ. ಮೇಲಾಗಿ, ವ್ಯವಹಾರದ ಸಣ್ಣಪುಟ್ಟ ಲೆಕ್ಕಗಳಲ್ಲಿ ಸಹ ಬಹುತರ ಪ್ರತಿಯೊಬ್ಬ ವ್ಯಕ್ತಿಯು ಹಣ ಕೊಡುವಾಗ ಇಲ್ಲವೆ ಅಳತೆಮಾಡುವಾಗ ಒಂದಿಲ್ಲೊಂದು ರೀತಿಯಿಂದ ತಾಳೇ ನೋಡಲಿಕ್ಕೆ ಯತ್ನಮಾಡುವದು. ಹೀಗಿರಲು, ಗಣಿತ ಶಿಕ್ಷಣದಲ್ಲಿ ನಾವು ಹುಡುಗರಿಗೆ ಈ ಚಟವನ್ನು ಹಚ್ಚದಿರುವದು ನಮ್ಮ ಶಿಕ್ಷಣಪದ್ಧತಿಯಲ್ಲಿಯ ಒಂದು ಮಹತ್ವದ ದೋಷವೆಂದು ಖಂಡಿತವಾಗಿ ಹೇಳಬಹುದು. ಇದು ಹೊಸಗಣಿತದ ಮಹತ್ವದ ಲಕ್ಷಣವೆಂದು ಶಿಕ್ಷಕರು ಎಣಿಸುವರೆಂದು ನಾವು ಕೋರುತ್ತೇವೆ.

೯. **ಪ್ರತ್ಯೇಕ ಹುಡುಗನಿಗೆ ಶಿಕ್ಷಣ—** ಹಿಂದಿನ ಗಣಿತ ಶಿಕ್ಷಣವಲ್ಲಿ ಇಡಿ ವರ್ಗಕ್ಕೆ ಹೊಸಭಾಗವನ್ನು ಕಲಿಸುವ ರೂಢಿಯು ನೆಲೆಗೊಂಡಿತ್ತು; ಹೊಸ ಗಣಿತದಲ್ಲಿ ಈ ಪದ್ಧತಿಯನ್ನು ಬಿಡಲಿಕ್ಕೆ ಶಿಕ್ಷಕರು ಹವಣಿಸಬೇಕು. ವೈಯಕ್ತಿಕ (ಪ್ರತಿಯೊಬ್ಬ ವಿದ್ಯಾರ್ಥಿಗೆ ಬೇರೆಯಾಗಿ ಕಲಿಸುವ) ಶಿಕ್ಷಣ ಪದ್ಧತಿಯು ಪ್ರಾಚೀನ ಕಾಲದ ಗುರುಕುಲವಾಸದ ಶಿಕ್ಷಣದ ಒಂದು ಮಹತ್ವದ ಲಕ್ಷಣವಾಗಿತ್ತು. ಸಾಮೂಹಿಕ (ಹಲವು ಹುಡುಗರಿಗೆ ಕೂಡಿ ಕಲಿಸುವ) ಶಿಕ್ಷಣ ಪದ್ಧತಿಯು ಸಾಲೆಗಳೂ ವರ್ಗಗಳೂ ಆದಬಳಿಕ

ಪರಿಸ್ಥಿತಿಯು ಅಗತ್ಯದಿಂದ ರೂಢಿಯಲ್ಲಿ ಬಂದಿದೆ. ಆದರೆ ಇವೆರಡರಲ್ಲಿ ವೈಯಕ್ತಿಕ ಶಿಕ್ಷಣವೇ ಫಲಕಾರಿಯೆಂದೂ ಮೇಲಾದದ್ದೆಂದೂ ಪಾಶ್ಚಾತ್ಯ ಶಿಕ್ಷಣ ಶಾಸ್ತ್ರಜ್ಞರು ಈಗ ಗೊತ್ತುಪಡಿಸಿದ್ದಾರೆ. ಇದನ್ನು ಅವರು ಈಗ ರೂಢಿಯಲ್ಲಿ ತರುತ್ತಿರುವರು. ಇದನ್ನು ಎಲ್ಲ ವಿಷಯಗಳಲ್ಲಿ ಅನುಸರಿಸುವದು ಮೇಲಾದದ್ದು. ಸದ್ಯಕ್ಕೆ ಇದರಿಂದ ಗಣಿತ ಶಿಕ್ಷಣ ದಲ್ಲಾಗುವ ಲಾಭಗಳನ್ನು ನಾವು ವಿಚಾರಿಸಬೇಕಾಗಿದೆ. ವರ್ಗದಲ್ಲಿರುವ ಎಲ್ಲ ಹುಡುಗರ ಮೇಧಾಶಕ್ತಿಯು ಒಂದೇತರದ್ದಿರುವದಿಲ್ಲ. ಆದ್ದರಿಂದ ಚುರುಕು ಬುದ್ಧಿಯ ಹುಡು ಗರು ಮಂದ ಬುದ್ಧಿಯ ಹುಡುಗರ ಸ್ವಾಭಾವಿಕ ದೋಷಕ್ಕಾಗಿ ವೃಥಾಕಾಲು ಕಳೆಯ ಬೇಕಾಗುತ್ತದೆ. ಇವರನ್ನು ಹೀಗೆ ಹಿಂದೆ ಜಗ್ಗುವದರಿಂದ ಅವರ ಹುರುಪು ಕುಂದುವ ದುಂಟು. ಮೇಲಾಗಿ, ಇದರಿಂದ ಮಂದಬುದ್ಧಿಯುವರಿಗೇನೂ ಲಾಭವಾಗುವದಿಲ್ಲ. ಸದ್ಯದ ಪದ್ಧತಿಯ ಮೇರೆಗೆ ಶಿಕ್ಷಕನು ಕ. ಹ. ನ್ನು ಉಪಯೋಗಿಸಿ ಹುಡುಗರ ತಪ್ಪು ಗಳನ್ನು ತಿದ್ದುವ ರೂಢಿಯುಂಟು. ಇದು ಸಮಂಜಸವಲ್ಲ. ಯಾಕಂದರೆ ಬಹುತರ ತಪ್ಪುಗಳು ಎಚ್ಚರವಿಲ್ಲದೆ ಲೆಕ್ಕ ಮಾಡಿರುವದರಿಂದ ಆಗಿರುತ್ತವೆ. ಈ ತಪ್ಪುಗಳು ಎಲ್ಲವೂ ಲೆಕ್ಕದ ಒಂದೇಕಡೆಗೆ ಇರುವದಿಲ್ಲ. ಮೇಲಾಗಿ ಎಚ್ಚರವಿಲ್ಲದವರಿಗೆ ತಿರುತಿರುಗಿ ಹೇಳುವದು ಸರಿಯಾದ ಉಪಾಯವಲ್ಲ; ಅವರ ತಪ್ಪನ್ನು ಗುರ್ತಿಸಿ, ಎಚ್ಚರದಿಂದ ತಿರುಗಿ ಮಾಡಲಿಕ್ಕೆ ಹೇಳುವದು ಲೇಸು. ಇದಲ್ಲದೆ ತಪ್ಪು ಗ್ರಹಿಕೆಯ ಮೂಲಕ ಲೆಕ್ಕವು ಬಿಡದಿದ್ದರೆ ಎರಡು ಮೂರು ಮೆಟ್ಟು ಹಿಂದೆ ಹೋಗಿ ಸರಿಯಾದ ದಾರಿಯನ್ನು ಸೂಚಿಸಬೇಕಾಗುವದು. ಆದ್ದರಿಂದ ತಪ್ಪು ತಿದ್ದುವಾಗ ವೈಯುಕ್ತಿಕ ಶಿಕ್ಷಣವೇ ಮೇಲಾದದ್ದು.

ಇದರಿಂದ ಶಿಕ್ಷಕನ ಕೆಲಸವು ಹೆಚ್ಚಾಗುವದು. ಇದಕ್ಕೆ ಉಪಾಯವಿಲ್ಲ. ಆದರೆ ಪ್ರತಿಯೊಬ್ಬ ಹುಡುಗನು ತಿಳಕೊಂಡು ಲೆಕ್ಕ ಮಾಡುತ್ತಿರುವಾಗ ದಾರಿ ತಪ್ಪುವವರು ಕಡಿಮೆ; ದಾರಿ ತಪ್ಪಿದ್ದನ್ನು ನೋಡಿಕೊಳ್ಳುವದು ಹಗುರಾದದ್ದು. ಅಲ್ಪ ವೇಳೆಯಲ್ಲಿ ಇಡಿ ವರ್ಗದ ತಪ್ಪು ತಿದ್ದುವ ಭ್ರಮೆಯಿಂದ ಕ. ಹ. ಮೇಲೆ ಲೆಕ್ಕ ಬಿಡಿಸುವದಕ್ಕೆ ಹತ್ತುವ ವೇಳೆಗಿಂತ ವೈಯಕ್ತಿಕ ತಿದ್ದುವಿಕೆಗೆ ಒಟ್ಟಿನ ಮೇಲೆ ಕಡಿಮೆ ಹೊತ್ತು ಹತ್ತುವ ದೆಂಬದರ ಪರಿಣಾಮವನ್ನು ಲಕ್ಷ್ಯಕ್ಕೆ ತಂದರೆ ಮನವರಿಕೆಯಾಗದಿರದು.

ಈ ತತ್ವದ ಮೇರೆಗೆ ಸದ್ಯದ ಗಣಿತ ಶಿಕ್ಷಣದಲ್ಲಿ ಎರಡು ಬದಲಾವಣೆಗಳನ್ನು ಮಾಡಬೇಕಾಗುವದು. ಪ್ರತಿಯೊಬ್ಬ ಹುಡುಗನು ಪಾಟಿಯ ಮೇಲೆ ಲೆಕ್ಕ ಮಾಡುವ ದನ್ನು ಬಿಟ್ಟು ನೋಟಬುಕ್ಕಿನಲ್ಲಿ ಮಾಡಬೇಕಾಗುವದು. ಇದರಿಂದ ಅವನು ಮಾಡುವ ಕ್ರಮ, ಅಚ್ಚುಕಟ್ಟುತನ, ತಪ್ಪಾಗುವ ಮೆಟ್ಟು ಮೊದಲಾದವುಗಳನ್ನು ಗೊತ್ತು ಹಚ್ಚಿ ತೋರಿಸಲಿಕ್ಕೆ ಶಿಕ್ಷಕನಿಗೆ ಅನುಕೂಲವಾಗುವದು. ಪ್ರತಿಯೊಬ್ಬ ಹುಡುಗನು ಲೆಕ್ಕ ಗಳನ್ನು ಒಂದು ಅನುಕ್ರಮದಿಂದ ಬಿಡಿಸುತ್ತ ಹೋಗಬೇಕಾಗುವದು. ಇದರಿಂದ ಪ್ರತಿ ಯೊಂದುಲೆಕ್ಕವನ್ನು ಹುಡುಗರು ಬರಕೊಳ್ಳುವ ಕಾರಣವು ಕಡಿಮೆಯಾಗುವದು.

ಹುಡುಗರಿಗೆ ಪುಸ್ತಕಗಳು, ಒಂದೊಂದು ಬಗೆಯ ಉದಾಹರಣಗಳನ್ನು ಅನುಕ್ರಮದಲ್ಲಿ ಛಾಪಿಸಿದ ಕಾರ್ಡುಗಳು ಇಲ್ಲವೆ ಶಿಕ್ಷಕರು ಸ್ವಂತ ಅನುಭವದಿಂದ ಕಲೆ ಹಾಕಿ ಬರೆದಿಟ್ಟ ಲೆಕ್ಕಗಳ ಗುಂಪುಗಳು— ಇವುಗಳನ್ನು ಪೂರಯಿಸಬೇಕಾಗುವದು. ಆದರೆ ಇದರಿಂದ ಹುಡುಗರಿಗೆ ಬಹಳ ಹಿತವಾಗುವದು. ಅವರ ಹುರುಪಿಗೂ ಸ್ವಾತಂತ್ರ್ಯಕ್ಕೂ ಅನುವು ದೊರೆಯುವದು. ಬೇರೆ ಬೇರೆ ಹುಡುಗರು ಮನಸುಗೊಟ್ಟು ಬೇರೆ ಬೇರೆ ಲೆಕ್ಕಗಳನ್ನು ಮಾಡುತ್ತಿರುವದರಿಂದ ಸಾಮೂಹಿಕ ಪದ್ಧತಿಯಲ್ಲಿ ಕಾಪೀ ಮಾಡಲಿಕ್ಕೆ ಸಿಗುವ ಸುಸಂಧಿಯು ಸಿಗುವದಿಲ್ಲ; ಇದನ್ನು ಯಾರೂ ಕೇಳುವದಿಲ್ಲ. ಸದ್ಯಕ್ಕೆ ಸುಧಾರಿಸಿದ ರಾಷ್ಟ್ರಗಳಲ್ಲಿ ಈ ಪದ್ಧತಿಯಿಂದ ಶಿಕ್ಷಣವು ಸಾಗಿದೆ. ಇವಕ್ಕೆ ಹೇಳುವಂಥ ಹೊಸ ಖರ್ಚು ತಗಲುವದಿಲ್ಲ; ಹುಡುಗರಿಗೆ ಮಾತ್ರ ವಿಶೇಷ ಲಾಭವಾಗುವದು. ಆದ್ದರಿಂದ ಈ ಪದ್ಧತಿಯನ್ನು ರೂಢಿಯಲ್ಲಿ ತರುವದು ಮಹತ್ವವಾದದ್ದು.

ಸಂಖ್ಯಾ ಲೇಖನವೂ ವಾಚನವೂ

ಲೇಖಕ:—ಶ್ರೀ. ಶಿವಮ್ಮಾಜಿ ನಾರಾಯಣ ಅಮೀನಭಾವಿ ಬಿ. ಮಾಸ್ತರ ಪಿ. ಟ್ರೇ. ಕಾಲೇಜ ಧಾರವಾಡ.

ಅಂಕಗಣಿತದ ಪ್ರಾಥಮಿಕ ನಾಲ್ಕು ಕಾರ್ಯಗಳ ಜ್ಞಾನವು ಸಂಖ್ಯಾಲೇಖನ ಜ್ಞಾನವನ್ನು ಅವಲಂಬಿಸಿರುವದು. ಆದಕಾರಣ ಚಿಕ್ಕ ಮಕ್ಕಳಿಗೆ ಸಂಖ್ಯಾಲೇಖನವನ್ನು ಪ್ರಾರಂಭದಿಂದಲೇ ಕ್ರಮಬದ್ಧವಾಗಿಯೂ ಅಚ್ಚುಕಟ್ಟಾಗಿಯೂ ಸಾವಕಾಶವಾಗಿಯೂ ಕಲಿಸಿ ರೂಢಿ ಮಾಡಿಸತಕ್ಕದ್ದು.

ವಸ್ತುಗಳನ್ನು ಬಿಟ್ಟು ಸಂಖ್ಯೆಗಳಿಲ್ಲ. ಸಂಖ್ಯೆಗಳನ್ನು ಬರೆಯಲಿಕ್ಕೆ ಕಲಿಯುವದಕ್ಕಿಂತ ಮೊದಲು ವಸ್ತುಗಳನ್ನು ಎಣಿಸಲಿಕ್ಕೆ ಕಲಿಯುವದು ಈ ವಿಷಯದ ಶಿಕ್ಷಣದಲ್ಲಿ ಮೊದಲನೇ ಮಹತ್ವದ ಕೆಲಸವಾಗಿದೆ. ಎಲ್ಲಕ್ಕೂ ಮೊದಲು ೯ ರ ವರೆಗಿನ ವಸ್ತುಗಳನ್ನು ಎಣಿಸುವುದು; ಅವುಗಳ ಎಣಿಕೆಯನ್ನು ಬರೆದು ತೋರಿಸಲಿಕ್ಕೆ ಕಲ್ಪಿಸಿದ ೧, ೨, ೩ ಇತ್ಯಾದಿ ೧೦ ಗುರುತುಗಳನ್ನು ಬರೆಯಲಿಕ್ಕೂ ಓದಲಿಕ್ಕೂ ಕಲಿಯುವುದು. ಈ ಎರಡು ಕಾರ್ಯಗಳು ಈ ವಿಷಯದ ಮೊದಲನೇ ವಿಭಾಗವು.

ವಸ್ತುಗಳ ಎಣಿಕೆಯನ್ನು ಮಾಡುವಾಗ ಕೆಲವೊಂದು ಸಂಖ್ಯೆಯಷ್ಟು ಗುಂಪುಗಳನ್ನು ಮಾಡಿಕೊಂಡು ಎಣಿಸುವ ಸ್ವಾಭಾವಿಕವಾದ ಒಲವು ನಮ್ಮಲ್ಲಿ ಕಂಡುಬರುವುದು. ಓದುಬರಹಗಳನ್ನು ಅರಿಯದಂಥ ಜನರು ಸಹ ರೂಪಾಯಿಗಳನ್ನು ನಾಲ್ಕರ ಗುಂಪುಗಳಿಂದ (ಒಡ್ಡಿ) ಎಣಿಸುವರು. ಕುಳ್ಳುಗಳನ್ನೂ ಹಣ್ಣುಗಳನ್ನೂ ಮಾರುವವರು ಅಯ್ದರ ಗುಂಪು (ಕೈ) ಗಳನ್ನು ಮಾಡಿ ಎಣಿಸುವರು. ಕೆಲವರು ಆರರ ಗುಂಪುಗಳಿಂದಲೂ ಎಣಿಸುವರು. ನಮ್ಮ ಸಂಖ್ಯಾಲೇಖನ ಪದ್ಧತಿಯಲ್ಲಿ ಹತ್ತು ಹತ್ತು ಪಟ್ಟಿನಿಂದ ಬೆಳೆಯುವಂಥ ಗುಂಪುಗಳಿಂದ ವಸ್ತುಗಳ ಎಣಿಕೆಯು ಮಾಡಲ್ಪಟ್ಟಿರುವುದು.

ಮತ್ತು ಒಂದೊಂದು ಜಾತಿಯ ಗುಂಪುಗಳಿಗೆ ಒಂದೊಂದು ಸ್ಥಾನವನ್ನು ಗೊತ್ತು ಮಾಡಿ ಆ ಸಂಖ್ಯೆಗಳನ್ನು ಬರೆಯುವ ಕ್ರಮವು ಗೊತ್ತುಮಾಡಲ್ಪಟ್ಟಿರುವುದು. ಶಿಕ್ಷಕರು ಈ ಸಂಗತಿಯನ್ನು ಲಕ್ಷದಲ್ಲಿಟ್ಟು, ಪ್ರಾರಂಭದಿಂದಲೇ ವಸ್ತುಗಳ ರಾಶಿಯನ್ನು ಗುಂಪುಗಳನ್ನು ಮಾಡಿ ಎಣಿಸಲಿಕ್ಕೆ ಹುಡುಗರಿಗೆ ಕಲಿಸತಕ್ಕದ್ದು. ಅವರು ನಾಲ್ಕರ ವರೆಗೆ ಎಣಿಸಲಿಕ್ಕೆ ಕಲಿತ ಕೂಡಲೆ ನಾಲ್ಕರ ಗುಂಪುಗಳಿಂದ ವಸ್ತುಗಳನ್ನು ಎಣಿಸಿ ಆ ಗುಂಪುಗಳ ಸಹಾಯದಿಂದಲೇ ಎಣಿಕೆಯನ್ನು ಹೇಳುವ ರೂಢಿಯನ್ನು ಮಾಡಿಸುವುದು. ಉದಾಹರಣಾರ್ಥವಾಗಿ ೧೭ ಮಣಿಗಳನ್ನು ಅವರಿಗೆ ಕೊಟ್ಟರೆ ೧೭ ರ ವರೆಗೆ ಅವರಿಗೆ ಈಗ ಎಣಿಕೆಯು ಬಾರದಿದ್ದರೂ ನಾಲ್ಕರ ಗುಂಪುಗಳ ಸಹಾಯದಿಂದ 'ನಾಲ್ಕರ ನಾಲ್ಕು ಗುಂಪುಗಳು ಮೇಲೆ ಒಂದು ಮಣಿ' ಹೀಗೆ ಹೇಳಲಿಕ್ಕೆ ಬರುವುದು. ಇದೇ ಪ್ರಕಾರ ೨೯ ರ ವರೆಗೆ ಎಣಿಕೆಯು ಬಾರದಿದ್ದರೂ ಅಯ್ದರ ವರೆಗೆ ಎಣಿಕೆಯನ್ನು ಕಲಿತ ಹುಡುಗರು ಅಯ್ದರ ಗುಂಪುಗಳ ಸಹಾಯದಿಂದ ೨೯ ವಸ್ತುಗಳನ್ನು 'ಅಯ್ದರ ಅಯ್ದು ಗುಂಪುಗಳು ಮೇಲೆ ನಾಲ್ಕು ವಸ್ತುಗಳು' ಎಂದು ಹೇಳಬಲ್ಲರು. ಈ ಪ್ರಕಾರ ಪ್ರತಿ ಒಂದು ಅಂಕೆಯಷ್ಟು ಗುಂಪುಗಳನ್ನು ಮಾಡಿ ವಸ್ತುಗಳನ್ನು ಎಣಿಸಿ ಆ ಎಣಿಕೆಯನ್ನು ಹೇಳುವ ರೂಢಿಯಾಯಿತೆಂದರೆ ಅದರಿಂದ ವಸ್ತುಗಳನ್ನು ಹತ್ತರ ಗುಂಪುಗಳಿಂದ ಎಣಿಕೆ ಮಾಡಿ ಹೇಳುವುದು ಬಹಳ ಸುಲಭವಾಗುವುದು. ನೂರರೊಳಗಿನ ಬೇಕಾದಷ್ಟು ವಸ್ತುಗಳನ್ನು ಹುಡುಗರಿಗೆ ಕೊಟ್ಟರೆ ಅವರು ಅವುಗಳಲ್ಲಿ ಹತ್ತರ ಗುಂಪುಗಳನ್ನು ಮಾಡಿ ಇಂತಿಷ್ಟು ಹತ್ತರ ಗುಂಪುಗಳು; ಮೇಲೆ ಇಂತಿಷ್ಟು ಬಿಡಿ ವಸ್ತುಗಳು ಎಂದು ಹೇಳುವರು. ಉದಾಹರಣಾರ್ಥವಾಗಿ ೫೭ ಮಣಿಗಳನ್ನು ಕೊಟ್ಟರೆ ಅಯ್ದು ಹತ್ತರ ಗುಂಪುಗಳು ಮೇಲೆ ಏಳು ಬಿಡಿ ಮಣಿಗಳೆಂದು ಹೇಳುವರು. ಇದೇ ಪ್ರಕಾರ ಮೂರು ಹತ್ತು, ಮೇಲೆ ಅಯ್ದು; ನಾಲ್ಕು ಹತ್ತು ಮೇಲೆ ಎಂಟು; ಒಂಬತ್ತು ಹತ್ತು ಮೇಲೆ ಏಳು ಇತ್ಯಾದಿ. ಈ ಮೇರೆಗೆ ಹೇಳುವ ರೂಢಿಯಾದ ಮೇಲೆ ಈ ಹತ್ತರ ಗುಂಪುಗಳಿಗೆ ವ್ಯವಹಾರದಲ್ಲಿ ಉಪಯೋಗಿಸುವ ಸಂಕ್ಷಿಪ್ತ ಹೆಸರುಗಳನ್ನು ಹೇಳಿಕೊಟ್ಟು ಅವು ಅವರ ಲಕ್ಷದಲ್ಲಿ ಉಳಿಯುವಂತೆ ಅಭ್ಯಾಸವನ್ನು ಮಾಡಿಸುವುದು. ಉದಾ:— ಎರಡು ಹತ್ತು ಅಂದರೆ ಇಪ್ಪತ್ತು; ಮೂರು ಹತ್ತು ಅಂದರೆ ಮೂವತ್ತು. ಇದೇ ಪ್ರಕಾರ ನಾಲ್ವತ್ತು, ಅರವತ್ತು, ಎಂಬತ್ತು, ತೊಂಬತ್ತು ಇತ್ಯಾದಿ. ಹುಡುಗರು ದಶಕಗಳ ಈ ವ್ಯವಹಾರದ ಹೆಸರುಗಳೊಡನೆ ಬಿಡಿ ವಸ್ತುಗಳನ್ನು ಸೇರಿಸಿ ಹೇಳಹತ್ತಿದರೆಂದರೆ, ೯೯ ರ ವರೆಗಿನ ವಸ್ತುಗಳನ್ನು ಕ್ರಮವಾಗಿ ಎಣಿಸುವುದು ಅವರಿಗೆ ಸುಲಭವಾಗುವುದು. ಹನ್ನೊಂದರಿಂದ ಹತ್ತೊಂಬತ್ತರ ವರೆಗಿನ ಅಂಕಿಗಳ ಹೆಸರುಗಳು ಸಾಮಾನ್ಯ ಕ್ರಮವನ್ನು ಅನುಸರಿಸಿರುವದಿಲ್ಲವಾದ ಕಾರಣ ಹುಡುಗರು ಮೊದಮೊದಲು ಒಂದು ಹತ್ತು ಒಂದು, ಒಂದು ಹತ್ತು ಎರಡು, ಒಂದು ಹತ್ತು ಮೂರು, ಇತ್ಯಾದಿ ಹೇಳಲಿ; ಕಡೆಗೆ ಹನ್ನೊಂದು, ಹನ್ನೆರಡು, ಹದಿಮೂರು ಇತ್ಯಾದಿ ಹೆಸರುಗಳನ್ನು ನಾವು ಹೇಳಿಕೊಡಬೇಕು.

ಇಲ್ಲಿಗೆ ನಮ್ಮ ವಿಷಯದ ೨ನೇ ವಿಭಾಗದ ಮೊದಲನೇ ಕಾರ್ಯವೆಂದರೆ ೯೯ ರ ವರೆಗಿನ ವಸ್ತುಗಳನ್ನು ಪದ್ಧತಿಗೆ ಸರಿಯಾಗಿ ಎಣಿಕೆಮಾಡಿ ಆ ಎಣಿಕೆಯನ್ನು ಹೇಳುವ ಕಾರ್ಯವು ಮುಗಿದಂತಾಯಿತು. ಇನ್ನು ಈ ವಿಭಾಗದ ೨ನೇ ೩ನೇ ಕಾರ್ಯಗಳೆಂದರೆ ೯೯ ರ ವರೆಗಿನ ಸಂಖ್ಯೆಗಳನ್ನು ಬರೆಯಲಿಕ್ಕೂ ಓದಲಿಕ್ಕೂ ಕಲಿಸುವುದು.

ಈ ವಿಷಯವನ್ನು ಕಲಿಯುವುದು ಹುಡುಗರಿಗೆ ಸುಲಭವಾಗಬೇಕೆಂದು, ಅವರವರ ಎಣಿಕೆಯ ಪೆಟ್ಟಿಗೆಯಲ್ಲಿ ಕೆಲವು ಹತ್ತರ ಗಂಟುಗಳನ್ನು ಕೆಲವು ಬಿಡಿ ವಸ್ತುಗಳನ್ನೂ ಹಾಕಿಕೊಡತಕ್ಕದ್ದು, ಹತ್ತರ ಗಂಟುಗಳನ್ನು ಅವರೇ ಸ್ವತಃ ಕಟ್ಟಿಕೊಳ್ಳುವುದು ವಿಹಿತವು. ಕೆಳಗೆ ತೋರಿಸಿದಂತೆ ರೂಲುಹಾಕಿದ ಒಂದೊಂದು ರಟ್ಟನ್ನೂ ಪ್ರತಿಒಬ್ಬ ಹುಡುಗನಿಗೆ ಕೊಡಬೇಕು.

ಹತ್ತರ ಗಂಟುಗಳು	ಬಿಡಿ ವಸ್ತುಗಳು

ಕ. ಹ. ಮೇಲೆಯೂ ಇದೇ ಪ್ರಕಾರ ರೂಲು ಹಾಕಿಡಬೇಕು. ಕೆಲವು ಹತ್ತರ ಗಂಟುಗಳನ್ನೂ ಕೆಲವು ಬಿಡಿ ವಸ್ತುಗಳನ್ನೂ ರಟ್ಟಿನಮೇಲೆ ತೆಗೆಸಿ ಇಡಿಸಿ ಅವುಗಳ ಎಣಿಕೆಯನ್ನು ಬಾಯಿಂದ ಹೇಳುವಂತೆಯೇ ಸಂಖ್ಯೆಗಳನ್ನು ಬರೆಯಲಿಕ್ಕೆ ಹೇಳುವುದು. ಅವರು ಹತ್ತರ ಗಂಟುಗಳಷ್ಟು ಸಂಖ್ಯೆಯನ್ನು ಹತ್ತರ ಗಂಟುಗಳ ಮನೆಯಲ್ಲಿಯೂ, ಬಿಡಿವಸ್ತುಗಳಷ್ಟು ಸಂಖ್ಯೆಯನ್ನು ಬಿಡಿ ವಸ್ತುಗಳ ಮನೆಯಲ್ಲಿಯೂ ಬರೆಯುವರು. ಈ ರೀತಿಯಿಂದ ಸಂಖ್ಯೆಗಳನ್ನು ಬರೆಯುತ್ತಿರುವಾಗ ರಟ್ಟಿನಮೇಲೆ ಇಟ್ಟ ವಸ್ತುಗಳಿಗೂ ಕ. ಹ. ಮೇಲಿನ ಬರೆಹಕ್ಕೂ ಎಷ್ಟು ಸಂಬಂಧವಿದೆ ಎಂಬದನ್ನು ಹುಡುಗರ ಲಕ್ಷ್ಯಕ್ಕೆ ತಂದು ಕೊಡಬೇಕು. ಹೀಗೆ ಬರೆದ ಸಂಖ್ಯೆಗಳನ್ನು ಓದಲಿಕ್ಕೆ ಅವರಿಗೆ ಏನೂ ತೊಂದರೆಯೆನಿಸುವುದಿಲ್ಲ. ಈ ರೀತಿಯಿಂದ ದಶಕಗಳನ್ನೂ ಬಿಡಿ ವಸ್ತುಗಳನ್ನೂ ಕೂಡಿಸಿ ಬರೆಯುತ್ತಿರುವಾಗ ಒಮ್ಮೊಮ್ಮೆ ದಶಕಗಳನ್ನಷ್ಟೇ ಬರೆಯಲಿಕ್ಕೆ ಹೇಳುವುದರಿಂದ ಶೂನ್ಯದ ಉಪಯೋಗವನ್ನೂ ಕಲಿಸಲಿಕ್ಕೆ ಪ್ರಸಂಗವು ದೊರೆಯುವುದು. ಈಗ ಹುಡುಗರು ೯೯ರ ವರೆಗಿನ ಯಾವದೊಂದು ಸಂಖ್ಯೆಯನ್ನು ಬರೆಯಲಿಕ್ಕೂ ಅವುಗಳ ಪೃಥಕ್ಕರಣ ಮಾಡಲಿಕ್ಕೂ ತಕ್ಕವರಾದರು.

ಹುಡುಗರು ೧ನೇ ಇಯತ್ತೆಗೆ ಬಂದಕೂಡಲೆ ನೂರರೊಳಗಿನ ಬೇರೀಜು ವಜಾಬಾಕಿಗಳನ್ನು ಮಾಡುತ್ತಿರುವಾಗಲೂ, ೧೦೦ರ ವರೆಗಿನ ಮಗ್ಗಿಗಳ ರಚನೆಯನ್ನು ಮಾಡು

ವಾಗಲೂ, ವಸ್ತುಗಳನ್ನೇ ಉಪಯೋಗಿಸಿ ಸಂಖ್ಯೆಗಳನ್ನು ಬರೆದುಕೊಳ್ಳುವರು. ಆದು ರಿಂದ ಹಿಂದಿನ ಇಯತ್ತೆಯಲ್ಲಿ ಕಲಿತ ಸಂಖ್ಯಾಲೇಖನದ ತತ್ವಗಳು, ಈ ಇಯತ್ತೆಯ ಮತ್ತಿಷ್ಟು ದೃಢವಾಗುವವು. ಹತ್ತು ಬಿಡಿವಸ್ತುಗಳುಕೂಡಿ ಒಂದು ದಶಕವಾಗುವುದು ಒಂದು ದಶಕವನ್ನು ಬಿಚ್ಚಿದರೆ ಅದರಲ್ಲಿ ಹತ್ತು ಬಿಡಿ ವಸ್ತುಗಳು ಹೊರಡುವವು; ಬಿಡಿ ವಸ್ತುಗಳನ್ನು ತೋರಿಸಲಿಕ್ಕೆ ಬರೆಯುವ ಅಂಕೆಗಳೇ ಹತ್ತರ ಗಂಟುಗಳನ್ನು ತೋರಿಸ ಲಿಕ್ಕೆ ಬರೆಯಲ್ಪಟ್ಟಿರುವವು. ಅದರಿಂದ ಆ ಅಂಕೆಯ ಬೆಲೆಯು ಹತ್ತುಪಟ್ಟು ಆಗುವುದು ಇತ್ಯಾದಿ ಸಂಗತಿಗಳು ಅವರಿಗೆ ಚೆನ್ನಾಗಿ ಮನವರಿಕೆಯಾಗುವವು. ಮತ್ತು ನೂರು ಗಂಟಿನ ವಿಷಯವಾಗಿ ನಾವು ಅವರಿಗೆ ಇನ್ನೂ ಏನೂ ಹೇಳದಿದ್ದರೂ ಹತ್ತು ಹತ್ತು ಗಂಟುಗಳು ಕೂಡಿ 'ನೂರು' ಆಗುವುದು; ಅದನ್ನು '೧೦೦' ಹೀಗೆ ಬರೆಯುವರು. ಈ ಸಂಗತಿಯೂ ಅವರ ಮನಸಿನಲ್ಲಿ ಬಂದಿರುವುದು. ಆದರೂ ಬೇರೀಜಿನ ಉದಾಹರಣೆ ಯನ್ನು ಕಲಿಸುತ್ತಿರುವಾಗ ಅದನ್ನು ತಿಳಿಸಿ ಹೇಳತಕ್ಕದ್ದು.

ಶತಕದ ಸ್ಥಾನವು ಗೊತ್ತಾದಬಳಿಕ ಹುಡುಗರು ವಸ್ತುಗಳ ಸಹಾಯದಿಂದ ೯೯೯ರ ವರೆಗಿನ ಸಂಖ್ಯೆಗಳನ್ನು ಸುಲಭವಾಗಿ ಬರೆಯುವರು. ಇದು ಸಂಖ್ಯಾ ಲೇಖನ ವನ್ನು ಕಲಿಸುವ ವಿಷಯದಲ್ಲಿ ೩ನೇ ವಿಭಾಗವು.

ಹುಡುಗರು ೩ನೇ ಇಯತ್ತೆಗೆ ಬಂದಕೂಡಲೆ ಅವರಿಗೆ ಲಕ್ಷದವರೆಗೆ ಸಂಖ್ಯೆಗಳ ಜ್ಞಾನವನ್ನು ಮಾಡಿಕೊಡಬೇಕಾಗುವುದು. ಇಲ್ಲಿಯವರೆಗೆ ವಸ್ತುಗಳನ್ನು ಉಪಯೋಗಿಸಿ ಸಂಖ್ಯಾ ಜ್ಞಾನವನ್ನು ಮಾಡಿಕೊಟ್ಟಂತೆಯೇ ಇನ್ನು ಮುಂದಾದರೂ ವಸ್ತುಗಳನ್ನು ಉಪಯೋಗಿಸುವುದು ಅವಶ್ಯವು. ವಸ್ತುಗಳ ಉಪಯೋಗದಿಂದ ಪಾಠವು ಮನೋರಂಜಕ ವಾಗುವುದಿಷ್ಟೇ ಅಲ್ಲ. ಹುಡುಗರು ಒಳ್ಳೇ ಲಕ್ಷಪೂರ್ವಕವಾಗಿ ಪಾಠವನ್ನು ಕಲಿಯು ವರು. ಇದಲ್ಲದೆ, ಸಾವಿರ, ಲಕ್ಷ, ಇತ್ಯಾದಿ ಸ್ಥಾನಗಳ ಶಾಬ್ದಿಕ ಜ್ಞಾನವಾಗದೆ ಆ ಶಬ್ದ ಗಳಿಂದ ಬೋಧವಾಗುವ ಸಂಖ್ಯೆಯ ಕಲ್ಪನೆಯು ಹುಡುಗರ ಮನಸಿನಲ್ಲಿ ಸ್ಪಷ್ಟವಾಗಿ ಬಿಂಬಿಸುವುದು. ಯಾವದೊಂದು ಗಂಟಿನ ಪೃಥಕ್ಕರಣವನ್ನು ಅಥವಾ ಏಕೀಕರಣವನ್ನು ಪ್ರತ್ಯಕ್ಷವಾಗಿ ಮಾಡಿಸಲಿಕ್ಕೆ ಅನುಕೂಲವಾಗುವುದು, ಆದಕಾರಣ ಸಂಖ್ಯೆಗಳ ಸ್ಥಾನ ಗಳೂ ಅವುಗಳ ಏಕೀಕರಣ ಪೃಥಕ್ಕರಣಗಳೂ ಹುಡುಗರ ಮನಸಿನಲ್ಲಿ ಸ್ಥಿರವಾಗಿ ಊರು ಯುವತನಕ ವಸ್ತುಗಳ ಉಪಯೋಗವನ್ನು ಬಿಡಲೇ ಬಾರದು.

ಈಗ ಹುಡುಗರಿಗೆ ೯೯೯ ರೊಳಗಿನ ಯಾವದೊಂದು ಸಂಖ್ಯೆಯಷ್ಟು ವಸ್ತು ಗಳನ್ನು ತೆಗೆದಿಡಲಿಕ್ಕೂ, ಆ ಸಂಖ್ಯೆಯನ್ನು ಬರೆಯಲಿಕ್ಕೂ ಓದಲಿಕ್ಕೂ ಬರುವದು ಇನ್ನು ಸಹಸ್ರ (ಸಾವಿರದ ಗಂಟು) ಸ್ಥಾನದ ಕಲ್ಪನೆಯನ್ನು ಮಾಡಿಕೊಡತಕ್ಕದ್ದದೆ.

ಪ್ರತಿಒಬ್ಬ ಹುಡುಗನು ೯೯೯ ವಸ್ತುಗಳನ್ನು ಅಂದರೆ ೯ ನೂರರ ಗಂಟುಗಳನ್ನೂ ೯ ಹತ್ತರ ಗಂಟುಗಳನ್ನೂ ೯ ಬಿಡಿ ವಸ್ತುಗಳನ್ನೂ ತೆಗೆದು ತಮ್ಮ ತಮ್ಮ ರಟ್ಟಿನಮೇಲೆ ಇಟ್ಟುಕೊಳ್ಳಲಿ. ಈಗಿದ್ದ ೯ ಬಿಡಿ ವಸ್ತುಗಳಲ್ಲಿ ಇನ್ನೊಂದು ಬಿಡಿ ವಸ್ತುವನ್ನು ಹಾಕಿ

ವರೆ ೧೦ ಬಿಡಿ ವಸ್ತುಗಳಾಗುವವು; ಅವುಗಳಿಂದ ಒಂದು ಹತ್ತರ ಗಂಟನ್ನು ಕಟ್ಟಿಸಿ ಅದನ್ನು ರಟ್ಟಿನಮೇಲೆ ಇದ್ದ ೯ ಹತ್ತರ ಗಂಟುಗಳಲ್ಲಿ ಹಾಕಿದರೆ ಹತ್ತು ಹತ್ತರ ಗಂಟುಗಳಾಗುವವು; ಬಿಡಿ ವಸ್ತುಗಳೇನೂ ಉಳಿಯುಲಿಲ್ಲ. ಆದಕಾರಣ ಕ. ಹ. ಮೇಲೆ ಬಿಡಿ ವಸ್ತುಗಳ ಮನೆಯಲ್ಲಿ ಶೂನ್ಯವನ್ನು ಬರೆಯಲಿಕ್ಕೆ ಹೇಳುವುದು. ತರುವಾಯ ಹತ್ತು ಹತ್ತರ ಗಂಟುಗಳನ್ನು ಒಟ್ಟುಗೂಡಿಸಿ ಒಂದು ಗಂಟು ಕಟ್ಟಿಸಿ ಅದನ್ನು ರಟ್ಟಿನಮೇಲೆ ಇದ್ದ ೯ ನೂರರ ಗಂಟುಗಳಲ್ಲಿ ಹಾಕಲು ಹತ್ತು ನೂರರ ಗಂಟುಗಳಾದವು. ಹತ್ತರ ಗಂಟುಗಳ ಮನೆಯಲ್ಲಿ ಏನೂ ಉಳಿಯಲಿಲ್ಲ. ಆದಕಾರಣ ಕ. ಹ. ಮೇಲೆ ಆ ಮನೆಯಲ್ಲಿಯೂ ಶೂನ್ಯವನ್ನು ಬರೆಯಿಸುವುದು. ಆ ಬಳಿಕ ಆ ಹತ್ತು ನೂರರ ಗಂಟುಗಳನ್ನು ಒಟ್ಟುಗೂಡಿಸಿ ಒಂದು ಗಂಟನ್ನು ಕಟ್ಟಿಸಿ ಅದನ್ನು ನೂರರ ಗಂಟಿನ ಎಡಕಿನ ತೆರವು ಮನೆಯಲ್ಲಿ ಇಡಿಸುವುದು. ಅದಕ್ಕೆ "ಸಾವಿರದ ಗಂಟೆ"ಂದು ಹೇಳುವುದು. ಕ. ಹ. ಮೇಲೆಯೂ ಅದರಂತೆ ಒಂದು ಹೊಸ ಮನೆಯನ್ನುಮಾಡಿ, ಅಲ್ಲಿ '೧' ಈ ಅಂಕೆಯನ್ನೂ ನೂರರ ಗಂಟಿನ ಮನೆಯಲ್ಲಿ ಆ ಗಂಟುಗಳು ಉಳಿಯಲಿಲ್ಲೆಂದು ಶೂನ್ಯವನ್ನೂ ಬರೆಯಿಸುವುದು. ಈಗ ಕ. ಹ. ಮೇಲಿನ ಬರಹವು ಕೆಳಗೆ ಬರೆದ ಪ್ರಕಾರ ಆಗುವುದು.

ಸಾವಿರದ ಗಂಟುಗಳು	ನೂರರ ಗಂಟುಗಳು	ಹತ್ತರ ಗಂಟುಗಳು	ಬಿಡಿ ವಸ್ತುಗಳು
೧	೦	೦	೦

ಈಗ ಹುಡುಗರಿಗೆ ಹತ್ತು ನೂರರ ಗಂಟುಗಳು ಕೂಡಿ ಒಂದು ಸಾವಿರದ ಗಂಟು ಆಗುವದೆಂಬ ಸಂಗತಿಯು ಗೊತ್ತಾಯಿತು. ೧ ಈ ಅಂಕೆಯು ಸಾವಿರದ ಗಂಟನ್ನು ತೋರಿಸುವದೆಂಬದೂ ಅದರ ಮುಂದೆ ಬರೆದ ಮೂರು ಪೂಜಿಗಳು ಕ್ರಮವಾಗಿ ನೂರರ ಗಂಟು, ಹತ್ತರಗಂಟು, ಬಿಡಿವಸ್ತುಗಳು ಇಲ್ಲೆಂದು ಕೊಡಲ್ಪಟ್ಟಿರುವವೆಂಬದೂ ಅವರಿಗೆ ಮನವರಿಕೆಯಾಯಿತು. ಇನ್ನು ಮೇಲೆ ಈ ನಾಲ್ಕು ಸ್ಥಾನಗಳಿಗೆ ಸಂಬಂಧಿಸಿದ ಅನೇಕ ಉದಾಹರಣೆಗಳನ್ನು ಹೇಳಿ ಮೊದಲು ವಸ್ತುಗಳ ಸಹಾಯದಿಂದ, ತರುವಾಯ ಬರಹ ಮೂಲಕವಾಗಿ ಸಾಕಷ್ಟು ರೂಢಿಯನ್ನು ಮಾಡಿಸ ಉದಾಹರಣೆಗಳನ್ನು ಹೇಳುವ ಸಂಬಂಧದಿಂದ ಕೆಲವು ಸೂಚನೆಗಳನ್ನು ಕೊಡುವುದು ತಕ್ಕದ್ದು. ಅವಶ್ಯವದೆ. ಚಿಕ್ಕಮಕ್ಕಳಿಗೆ ಅಂಕಗಣಿತದ ಪಾಠಗಳು ಮನೋರಂಜಕವಾಗಬೇಕೆಂದೂ ಅಂಕಗಣಿತದ ವ್ಯವಹಾರೋಪಯುಕ್ತತೆಯು ಅವರ ಮನಸಿನಲ್ಲಿ ಬಿಂಬಿಸಬೇಕೆಂದೂ ಯಾವಾಗಲೂ ಕೇವಲ ಸಾಮಾನ್ಯ ಸಂಖ್ಯೆಗಳಿಗೆ ಸಂಬಂಧಿಸಿದ ಉದಾಹರಣೆಗಳನ್ನು ಹೇಳದೆ ವ್ಯವಹಾರಕ್ಕೆ ಸಂಬಂಧಿಸಿದ ಉದಾಹರಣೆಗಳನ್ನು ವಿಶೇಷವಾಗಿ ಹೇಳತಕ್ಕದ್ದು. ಆದರೆ ಇಂಥ ಉದಾಹರಣೆಗಳೊಳಗಿನ ಸಂಗತಿಯು ವಸ್ತುಸ್ಥಿತಿಗೆ ಹೊಂದಿಕೆಯಾದದ್ದಿರಬೇಕು. ಸ್ವಾಭಾವಿಕವಾದದ್ದಿರಬೇಕು. ಇದಲ್ಲದೆ

ಹುಡುಗರು ಆ ಸಂಗತಿಯನ್ನು ಎಷ್ಟೋಸಾರೆ ನೋಡಿರಲಿಕ್ಕೆಬೇಕು. ಸಂಖ್ಯಾಲೇಖನಕ್ಕೆ ಸಂಬಂಧಿಸಿ ನೂರರಗಂಟುಗಳನ್ನು ಒಟ್ಟುಗೂಡಿಸಿ ಸಾವಿರದಗಂಟು ಮಾಡಿಕೊಳ್ಳುವಂಥ, ಸಾವಿರದಗಂಟು ಬಿಚ್ಚಿ ನೂರರ ಗಂಟುಗಳನ್ನು ಮಾಡಿಕೊಳ್ಳುವಂಥ ಉದಾಹರಣೆಗಳನ್ನು ರಚಿಸಿಕೊಳ್ಳುವಾಗ ಬಣವೆಯೊಳಗಿನ ಹುಲ್ಲಿನ ಪೆಂಡಿಗಳು, ಮಾಳಿಗೆಯ ಹಂಚುಗಳು, ರೂಪಾಯಿಗಳು, ನೋಟುಗಳು ಇತ್ಯಾದಿ ವಸ್ತುಗಳು ಉಪಯೋಗವಾಗುವವು. ಹುಡು ಗರು ಕಲಿತ ತಾಲೂಕಿನ ಅಥವಾ ಜಿಲ್ಹೆಯ ಭೂಗೋಲದೊಳಗಿನ ಸಂಗತಿಗಳಿಗೆ ಸಂಬಂ ಧಿಸ ಉದಾಹರಣೆಗಳನ್ನು ಹೇಳಬಹುದು. ಊರುಗಳ ಜನಸಂಖ್ಯೆ, ತಾಲೂಕಿನ ಅಥವಾ ಜಿಲ್ಹೆಯ ಜನಸಂಖ್ಯೆ, ಜಿಲ್ಹೆಯೊಳಗಿನ ಸಾಲೆಗಳಲ್ಲಿ ಕಲಿಯುವ ಹುಡುಗರ ಸಂಖ್ಯೆ, ತಾಲೂಕಿನ ಅಥವಾ ಜಿಲ್ಹೆಯ ಕಂದಾಯದ ವಸೂಲು, ಇತ್ಯಾದಿ ಅನೇಕ ಸಂಗತಿಗಳ ವಿಷಯವಾಗಿ ಉದಾಹರಣೆಗಳನ್ನು ರಚಿಸಿ ಹೇಳುವದರಿಂದ ಸಂಖ್ಯಾಲೇಖನದ ಜ್ಞಾನವಾಗುವದಲ್ಲದೆ ಭೂಗೋಲದಲ್ಲಿ ಕಲಿತ ಸಂಗತಿಗಳ ಆವರ್ತನವಾಗುವದು.

ಮಾದರಿಯ ಸಲುವಾಗಿ ಕೆಲವು ಉದಾಹರಣೆಗಳು ಕೆಳಗೆ ಕೊಡಲ್ಪಟ್ಟಿರುವವು.

(೧) ಒಂದು ಹುಲ್ಲಿನ ಬಣವೆಯಲ್ಲಿ ೯ ನೂರು ಸಿವಡುಗಳು ಅವೆ. ಇನ್ನೊಂದ ರಲ್ಲಿ ೮ನೂರು ೩ನೇದರಲ್ಲಿ ೬ನೂರು ಸಿವಡುಗಳು ಇರುವವು. ಒಟ್ಟಿಗೆ ಎಷ್ಟು ಸಿವಡುಗಳಾದವು ?

(೨) ಒಬ್ಬ ಚಿನಿವಾಲನಹತ್ತರ ೬ ನೂರರ ನೋಟುಗಳು, ೬ ಹತ್ತರ ನೋಟು ಗಳು, ೫ ಬಿಡೀ ರೂಪಾಯಿಗಳು ಇರುವವು. ಒಟ್ಟು ರೂಪಾಯಿಗಳೆಷ್ಟು ?

(೩) ಒಬ್ಬ ವ್ಯಾಪಾರಸ್ಥನು ೩ ಸಾವಿರದ ನೋಟುಗಳನ್ನು ಮುರಿಸಿ ನೂರ ನೋಟುಗಳನ್ನು ಮಾಡಿಕೊಂಡನು. ಎಷ್ಟು ನೋಟುಗಳು ಬಂದವು.

(೪) ಒಂದು ಚಕ್ಕಡಿಯಲ್ಲಿ ೩ನೂರು ಪೆಂಡಿ ಮೇವು ಹಿಡಿಸುವದು. ಆದ ೬ಸಾವಿರ ಪೆಂಡಿ ಮೇವು ಹೇರಲಿಕ್ಕೆ ಎಷ್ಟು ಚಕ್ಕಡಿಗಳು ಬೇಕು ?

(೫) ಹುಬ್ಬಳ್ಳಿಯಲ್ಲಿ ಸುಮಾರು ೭೫ ಸಾವಿರ ಜನರು ಇರುವರು ಇದನ್ನು ಬರೆಯಿರಿ.

(೬) ನಮ್ಮ ಜಿಲ್ಹೆಯ ಕಲೇಕ್ಟರ ಸಾಹೇಬರಿಗೆ ತಿಂಗಳಿಗೆ ಒಂದು ಸಾವಿರ ಏಳು ನೂರು ಐವತ್ತು ರೂಪಾಯಿ ಸಂಬಳವಿರುವದು. ಇವನ್ನು ಸಂಖ್ಯೆಯಿಂದ ಬರೆಯಿರಿ.

ಸಾವಿರದ ಗಂಟಿನ ಜ್ಞಾನವು ಚೆನ್ನಾಗಿ ಆದ ಹೊರತು, ಹತ್ತುಸಾವಿರ, ಲಕ್ಷ ಈ ಸ್ಥಾನಗಳನ್ನು ಕಲಿಸಬಾರದು. ಈ ಕೆಲಸದಲ್ಲಿ ಅವಸರವು ಎಷ್ಟುಮಾತ್ರಕ್ಕೂ ಸರಿ ಯಲ್ಲ. ಸಾವಿರದ ಗಂಟಿನ ಏಕೀಕರಣ ಪೃಥಕ್ಕರಣಗಳೂ ಹುಡುಗರಿಗೆ ಸರಿಯಾಗಿ ತಿಳಿದಮೇಲೆ ಹತ್ತುಸಾವಿರದ (ದಶಸಹಸ್ರದ) ಕಲ್ಪನೆಯು ಸಹಜವಾಗಿ ಆಗುವದು. ೨೧ ಸಾವಿರವೆಂದು ಹೇಳಿದ ಕೂಡಲೆ ೨ ಹತ್ತುಸಾವಿರ ೧ಸಾವಿರಕೂಡಿ ಆಗಿರುವದೆಂದೂ ೬೩ಸಾವಿರದಲ್ಲಿ ೬ಹತ್ತುಸಾವಿರ ೩ಸಾವಿರ ಕೂಡಿರುವದೆಂದೂ ಅವರಿಗೆ ತಿಳಿಯುವದು.

ಹಿಂದೆ ಎಕ್ಕಂ ದಹಂ, ಈ ಎರಡು ಸ್ಥಾನದ ಸಂಖ್ಯೆಗಳನ್ನು ಹೇಳುತ್ತಿದ್ದಾಗ ಅವುಗಳನ್ನು ಬೇರೆ ಬೇರೆಯಾಗಿ ಉಚ್ಚರಿಸದೆ ಒಮ್ಮೆಲೇ ಇಪ್ಪತ್ತೇಳು, ನೂರವತ್ತಾರು, ಅರುವತ್ತುನೂರು ಇತ್ಯಾದಿ ಹೇಳುತ್ತಿದ್ದೆವು. ಅದೇಪ್ರಕಾರ ಹತ್ತುಸಾವಿರ ಹಾಗು ಸಾವಿರ ಈ ಎರಡೂ ಸ್ಥಾನದ ಸಂಖ್ಯೆಗಳನ್ನೂ ಕೂಡಿಸಿ ಹೇಳುವಾಗ ಹತ್ತು ಸಾವಿರದ ಅಂಕೆಯು ಸ್ವತಂತ್ರ ವಾಗಿ ಉಚ್ಚರಿಸಲ್ಪಡುವುದಿಲ್ಲೆಂಬ ಸಂಗತಿಯನ್ನು ಹುಡುಗರ ಲಕ್ಷಕ್ಕೆ ತಂದು ಕೊಡಬೇಕು.

'೬೭ ಸಾವಿರ' ವೆಂದು ಹೇಳಿದಕೂಡಲೆ ಸಾವಿರದ ಗಂಟುಗಳೇ ೬೭ ಎಂದು ತಿಳಿದು ಬರೆದರೆ ೬ ಈ ಅಂಕೆಯು ಹತ್ತುಸಾವಿರದ ಗಂಟಿನ ಸ್ಥಳಗಳಲ್ಲಿಯೂ ೭ ಇದು ಸಾವಿರದ ಗಂಟಿನ ಸ್ಥಳದಲ್ಲಿಯೂ ಸ್ವಾಭಾವಿಕವಾಗಿಯೇ ಬರುವವು. ಈ ಸಂಗತಿಯ ಕಡೆಗೂ ಹುಡುಗರ ಲಕ್ಷವನ್ನು ಎಳೆಯಬೇಕು.

ಹತ್ತುಸಾವಿರದ ಹತ್ತು ಗಂಟುಗಳನ್ನು ಒಟ್ಟುಗೂಡಿಸಿ ಒಂದು ಗಂಟು ಕಟ್ಟಿದರೆ ಅದು ಒಂದು ಲಕ್ಷದ ಗಂಟು ಆಗುವದು. ಈ ಒಂದು ಮಾತನ್ನು ಕಲಿಸಿದರೆ ೪ನೇ ಇಯತ್ತೆಯವರಿಗೆ ಕಲಿಸತಕ್ಕ ಸಂಖ್ಯಾಲೇಖನವು ಮುಗಿಯುವದು. ಈ ಲಕ್ಷದ ಗಂಟಿನ ಜ್ಞಾನವನ್ನು ಹಿಂದೆ ಸಾವಿರದ ಗಂಟಿನ ಜ್ಞಾನವನ್ನು ಮಾಡಿಕೊಟ್ಟ ಪ್ರಕಾರ ಸ್ವತಂತ್ರ ವಾಗಿ ಕಲಿಸಬಹುದು. ಅಥವಾ ಹತ್ತು ಸಾವಿರದ ವರೆಗಿನ ಸಂಖ್ಯೆಗಳ ಬೇರೀಜು ಮಾಡು ತ್ತಿರುವಾಗ ಲಕ್ಷದ ಗಂಟಿನ ಜ್ಞಾನವನ್ನು ಮಾಡಿಕೊಡಬಹುದು. ಕೋಟಿ, ದಶಕೋಟಿ ಇತ್ಯಾದಿ ಸಂಖ್ಯೆಗಳ ಜ್ಞಾನವನ್ನೂ ಇದೇ ಪ್ರಕಾರ ಮಾಡಿ ಕೊಡತಕ್ಕದ್ದು.

ಒಂದು ಲಕ್ಷಕ್ಕೆ ನೂರುಸಾವಿರಗಳು; ಒಂದುಸಾವಿರಕ್ಕೆ ಹತ್ತು ನೂರುಗಳು; ಎಂಬ ಈ ಸಂಗತಿಗಳು ಹುಡುಗರಿಗೆ ಚೆನ್ನಾಗಿ ತಿಳಿದ ಮೇಲೆ ಅರ್ಧಲಕ್ಷಕ್ಕೆ ಐವತ್ತು ಸಾವಿರ, ಕಾಲುಲಕ್ಷವೆಂದರೆ ೨೫ ಸಾವಿರ, ಅರ್ಧಸಾವಿರವೆಂದರೆ ೫ನೂರು; ಇತ್ಯಾದಿ ಸಂಗತಿಗಳು ಹುಡುಗರಿಗೆ ಸಹಜವಾಗಿ ತಿಳಿಯಹತ್ತುವವು.

ಸಾಮಾನ್ಯ (ವ್ಯವಹಾರಿ) ಅಪೂರ್ಣಾಂಕಗಳು

ಲೇಖಕರು:— ಶ್ರೀ. ಎಸ್. ಆರ್. ತಟ್ಟಿ ಬಿ. ಎ.

ಸದ್ಯದ ಪರಿಸ್ಥಿತಿಯಲ್ಲಿ ಯಾವದೇ ಒಂದು ಶಿಕ್ಷಣ ವಿಷಯದ ಮೇಲೆ ಲೇಖವನ್ನು ಬರೆದರೆ ಅದನ್ನು ಓದುವವರು " ಈ ಲೇಖಕರು ಶಹರದ ದೊಡ್ಡ ದೊಡ್ಡ ಶಾಲೆಗಳಲ್ಲಿ ಕುಳಿತು ಹಲವು ಇಂಗ್ಲಿಷು ಪುಸ್ತಕಗಳನ್ನು ಓದಿ ಏನೇನೋ ಅವ್ಯವಹಾರ್ಯವಾದ ಮಾತುಗಳನ್ನು ಬರೆದಿರುತ್ತಾರೆ; ಹಳ್ಳಿಯ ಪರಿಸ್ಥಿತಿಯ ಜ್ಞಾನವು ಇವರಿಗೆ ಇರುವದಿಲ್ಲ. ಪ್ರತ್ಯಕ್ಷ ಮೂರು ಮೂರು, ನಾಲ್ಕು ನಾಲ್ಕು ಕ್ಲಾಸುಗಳನ್ನು ಕಟ್ಟಿಕೊಂಡು ವರ್ಷಾನು

ವರ್ಷ ಗುದ್ದಾಡುವ ಅನುಭವವು ಒಂದು ಸ್ವಲ್ಪ ಇವರಿಗೆ ಬಂದದ್ದಾದರೆ ಇವರ ದೊಡ್ಡ ದೊಡ್ಡ ತತ್ತ್ವಗಳೆಲ್ಲ ಮೆತ್ತಗೆ ಮೋರೆ ತಗ್ಗಿಸಿಕೊಂಡು ಮರೆಯಾಗುವವು " ಎಂದು ಟೀಕಿಸುವರು.

ಒಟ್ಟಿನ ಮೇಲೆ ಈ ಟೀಕೆಯು ನಿಜವಾದದ್ದೆಂದೇ ನಾನು ಒಪ್ಪಿಕೊಳ್ಳುವೆನು. ಇದನ್ನು ಲಕ್ಷ್ಯದಲ್ಲಿಟ್ಟು ಎಂಥ ಅನನುಕೂಲ ಪರಿಸ್ಥಿತಿಯಲ್ಲಿಯೂ ವಿಶೇಷ ಶ್ರಮವಿಲ್ಲದೆ, ವೆಚ್ಚವಿಲ್ಲದೆ ಕೈಕೊಳ್ಳಬಹುದಾದ ಹಲವು ಪದ್ಧತಿಗಳನ್ನು ಮಾತ್ರ ನಾನು ಇಲ್ಲಿ ಕೊಡ ಲಿಚ್ಛಿಸುವೆನು. ಆದರೆ ವಿಷಯ ಜ್ಞಾನವಿಲ್ಲದೆ ಯಾವ ಪದ್ಧತಿಯೂ ತಿಳಿಯುವದಿಲ್ಲ. ಆದದರಿಂದ ಶಿಕ್ಷಕ ಶಿಕ್ಷಿಕೆಯರು ಅಪೂರ್ಣಾಂಕಗಳ ವಿಷಯವಾಗಿ ತಾವು ಶಾಲೆಯಲ್ಲಿ ಕಲಿತದ್ದನ್ನು ಮತ್ತೊಮ್ಮೆ ಆವರ್ತನ ಮಾಡಬೇಕು. ಒಂದು ಉದಾಹರಣೆ:--

೧. ಅಪೂರ್ಣಾಂಕವನ್ನು ಬರೆಯುವ ರೀತಿ:— ೩/೫ ರೂ. ಈ ಅಪೂರ್ಣಾಂಕವನ್ನು ಬರೆಯಲಿಕ್ಕೆ ಎರಡು ಸಂಖ್ಯೆಗಳು ಬೇಕಾಗುವವೆಂದು ನಾವು ಕಲಿತಿರು ವೆವು. ಒಂದು ಸಂಖ್ಯೆಯು ರೂಪಾಯಿಯಲ್ಲಿ ಎಷ್ಟು ಭಾಗಗಳನ್ನು ಮಾಡಿರುವೆವೆಂಬ ದನ್ನು ತೋರಿಸಲಿಕ್ಕೆ; ಮತ್ತೊಂದು ಅಂಶ ಎಷ್ಟು ಭಾಗಗಳನ್ನು ತೆಗೆದುಕೊಂಡಿರುವೆ ವೆಂಬವನ್ನು ತೋರಿಸಲಿಕ್ಕೆ. ಆದರೆ ೫ ನ್ನು ಕೆಳಗೆಯೇ ಏಕೆ ಬರೆಯಬೇಕು? ೩ ನ್ನು ಮೇಲೆಯೇ ಏಕೆ ಬರೆಯಬೇಕು? ಈ ಅಪೂರ್ಣಾಂಕವನ್ನು ೫ ಐದನೆಯ ಅಂಶವೆಂದು ಯಾಕೆ ಓದಬಾರದು? " ಯಾರೂ ೩/೫ ಇದನ್ನು ೫ ಐದನೆಯ ಅಂಶ ಎಂದು ಓದುವ ದಿಲ್ಲ; ೩ ಅರನೆಯ ಅಂಶವೆಂದೇ ಓದುವರು. " ಎಂದು ನೀವು ಅನ್ನಬಹುದು. ಬರಿಯ ರೂಢಿಯೇ ಅದಕ್ಕೆ ಕಾರಣವಾಗಿದ್ದರೆ ಎಲ್ಲರ ಮನಸ್ಸಿಗೆ ಬಂದರೆ ನಾವು ಆ ರೂಢಿಯನ್ನು ಬದಲಿಸಬಹುದೇನು?

ಸ್ವಲ್ಪ ಹೆಚ್ಚು ತಿಳಿದವರು " ೧ ರೂಪಾಯಿಯಲ್ಲಿ ೫ ಭಾಗಗಳನ್ನು ಮಾಡುವದ ರಿಂದ ೫ ಭಾಜಕವಾಯಿತು. ಆದದರಿಂದ ಭಾಜ್ಯವನ್ನು ಮೇಲೆ ಬರೆದು ಭಾಜಕವನ್ನು ಕೆಳಗೆ ಬರೆಯಬೇಕು; " ಎಂದು ಹೇಳಬಹುದು. ಯಾತರಲ್ಲಿ ೫ ಭಾಗಗಳನ್ನು ಮಾಡಿ ರುವದು? ೧ ರೂಪಾಯಿಯಲ್ಲಿ. ಹಾಗಾದರೆ ೧ ರೂಪಾಯಿಯನ್ನು ಭಾಜ್ಯದ ಸ್ಥಾನ ದಲ್ಲಿ ಅಂದರೆ ಮೇಲೆ ಬರೆಯಬೇಕಾಗಿತ್ತು. ೩ ನ್ನು ಏಕೆ ಮೇಲೆ ಬರೆಯಬೇಕು? ಏಕೆಂದರೆ ೩ ಇದು ಭಾಜ್ಯವೇ ಎಂದು ಅನ್ನಲಿಕ್ಕೆ ಏನೂ ಅಡ್ಡಿಯಿಲ್ಲ. ೩ ರೂಪಾಯಿಗೆ ೫ ರಿಂದ ಭಾಗಿಸಿದರೆ ೩/೫ ರೂಪಾಯಿಯೇ ಬರುವದಲ್ಲವೇ? ಆದದರಿಂದ ೩ ನ್ನು ಮೇಲೆ ಬರೆದು, ೫ ನ್ನು ಕೆಳಗೆ ಬರೆದು ನಡುವೆ ಭಾಗಾಕಾರದ ಚಿಹ್ನದ ರೂಪವಾದ ಅಡ್ಡ ಗೆರೆಯನ್ನು ಹಾಕುವೆವು.

ಆದರೆ ಇದೆಲ್ಲ ಹುಡುಗರಿಗೆ ತಿಳಿಯುವದೇನು? ತಿಳಿಯುವದಿಲ್ಲ; ತಿಳಿಯಲಾರದು; ಮತ್ತು ತಿಳಿಯುವ ಆವಶ್ಯಕತೆಯಿಲ್ಲ. ಆದರೆ ಶಿಕ್ಷಕರಿಗೆ ತಿಳಿದಿರಬೇಕು. ಇಲ್ಲದೆ ಹೋದರೆ ಕಲಿಸುವದಕ್ಕೆ ಬೇಕಾದ ಒಂದು ಬಗೆಯ ಆತ್ಮವಿಶ್ವಾಸವು ಅವರಲ್ಲಿ ಹುಟ್ಟುವ

ದಿಲ್ಲ. ಆತ್ಮವಿಶ್ವಾಸವಿಲ್ಲದಿದ್ದರೆ ಕಲಿಸುವದರ ಪರಿಣಾಮವು ಹುಡುಗರ ಮೇಲೆ ಎಷ್ಟಾಗಬೇಕೋ ಅಷ್ಟು ಆಗುವದಿಲ್ಲ.

೨. ಬಹಳ ಮಾತುಗಳ ವಿವರಣೆಯನ್ನು ಬಿಡಬೇಕು. ೩/೮ ದಲ್ಲಿ ೨/೮ ವನ್ನು ಕೂಡಿಸಿದರೆ ೫/೧೬ ಏಕೆ ಆಗುವದಿಲ್ಲ? ಇದು ಅಪೂರ್ಣಾಂಕಗಳ ಅರ್ಥವು ತಿಳಿಯದೆ ಇದ್ದ ಹುಡುಗರು ಸಾಮಾನ್ಯವಾಗಿ ಪಡುವ ಸಂಶಯು. ಈ ತಪ್ಪನ್ನು ನೀವು ಹೇಗೆ ತಿದ್ದುವಿರಿ? "ಮೊದಲನೆಯ ಅಪೂರ್ಣಾಂಕವು ೧ ವಸ್ತುವಿನಲ್ಲಿ ೮ ಸರಿಯಾದ ಭಾಗಗಳನ್ನು ಮಾಡಿ ೩ ಭಾಗಗಳನ್ನು ತೆಗೆದುಕೊಂಡಿರುವೆವು ಎಂಬದನ್ನು ತೋರಿಸುವದು. ಎರಡನೆಯ ಅಪೂರ್ಣಾಂಕವಾದರೂ ಒಂದು ವಸ್ತುವಿನಲ್ಲಿ ಎಂಟೇ ಸರಿಯಾದ ಭಾಗಗಳನ್ನು ಮಾಡಿ ೨ ಭಾಗಗಳನ್ನು ತೆಗೆದುಕೊಂಡಿರುವೆವು ಎಂಬದನ್ನು ತೋರಿಸುವದು. ಆದ್ದರಿಂದ ಈ ಎರಡೂ ಅಪೂರ್ಣಾಂಕಗಳಲ್ಲಿಯ ಭಾಗಗಳು ೧ ವಸ್ತುವಿನಲ್ಲಿ ೮ ಸಮಭಾಗಗಳನ್ನು ಮಾಡಿ ತೆಗೆದುಕೊಂಡಂಥವಿರುವವು. ಆದದರಿಂದ ಒಟ್ಟು ೫/೮ ಬರುವದು."

ಹೀಗೆ ಬಹಳ ಮಾತುಗಳಿಂದ ಸ್ಪಷ್ಟೀಕರಣ ಮಾಡುವ ಪದ್ಧತಿಯು ಒಳ್ಳೆಯದಲ್ಲ. ಅದರಿಂದ ಹುಡುಗರ ಮನಸ್ಸಿನಲ್ಲಿ ಬೇಸರ ಹುಟ್ಟುವದಲ್ಲದೆ ನೀವು ತಿಳಿಸಬೇಕೆಂದಿದ್ದ ಮಾತು ತಿಳಿಯುವದೂ ಇಲ್ಲ. ಆದದರಿಂದ ಮೇಲಿನ ಪ್ರಶ್ನೆಯಲ್ಲಿ ಕಂಡುಬರುವ ತಪ್ಪು ತಿಳಿವಳಿಕೆಯನ್ನು ಹೀಗೆ ತಿದ್ದಬೇಕು.

೩ ಚವಲಿ + ೨ ಚವಲಿ= ?

೩ ಅರ್ಧ + ೨ ಅರ್ಧ= ?

೩ ಗಿರ್ಧ + ೨ ಗಿರ್ಧ= ?

೩ ಎಂಟನೆಯ ಅಂಶ + ೨ ಎಂಟನೆಯ ಅಂಶ= ?

೩/೮ + ೨/೮ = ?

೩ ಚವಲಿ + ೨ ಚವಲಿ ಈ ಬೇರೀಜು ೫ ಪಾವಲಿ ಎಂದು ಎಷ್ಟು ದಡ್ಡ ಹುಡುಗರಾದರೂ ಹೇಳುವದಿಲ್ಲ. ಹೀಗೆ ಕ್ರಮವಾಗಿ ಪ್ರಶ್ನೆಗಳನ್ನು ಕೇಳಿ ಉದಾಹರಣೆಗಳನ್ನು ಕೊಡುವದರಿಂದ ತಾವು ಮಾಡುತ್ತಿರುವ ಲೆಕ್ಕಗಳ ಅರ್ಥವು ಹುಡುಗರಿಗೆ ಚೆನ್ನಾಗಿ ತಿಳಿಯುವದು.

೩. ಆವರ್ತನ ಅಥವಾ ರೂಢಿ ಮಾಡಿಸುವ ಪದ್ಧತಿಗಳು:— ನಮ್ಮ ಶಾಲೆಗಳಲ್ಲಿ ಹುಡುಗರಿಗೆ ಸಾಧಾರಣವಾದ ಲೆಕ್ಕಗಳನ್ನು ಸಹ ತಪ್ಪದೆ ಮಾಡಲಿಕ್ಕೆ ಬರುವದಿಲ್ಲವೆಂಬದು ಇತ್ತೀಚಿನ ೧೦,೧೨ ವರ್ಷಗಳ ಅನುಭವವಾಗಿದೆ. ಇದರ ಕಾರಣವು ಕೆಲವಂಶದಿಂದ ಹಳೆಯ ಹೊಸ ಪದ್ಧತಿಗಳ ಹೋರಾಟವೆಂದು ಹೇಳಬಹುದು. ಹೊಸ ಪದ್ಧತಿಯು ನಿಜವಾದ ಧ್ಯೇಯವನ್ನರಿತು ಕಲಿಸಲಿಕ್ಕೆ ಶಿಕ್ಷಕರಲ್ಲಿ ಹೆಚ್ಚು ಜ್ಞಾನವೂ, ಅನುಭವವೂ, ವೇಳೆಯೂ, ಅನುಕೂಲಗಳೂ ಬೇಕು. ಇವೆಲ್ಲವೂ ಸದ್ಯದ ಶಾಲೆಗಳ

ಪರಿಸ್ಥಿತಿಯಲ್ಲಿ ಅಪರೂಪವಾಗಿವೆಯೆಂದು ಹೇಳಬಹುದು. ಹೆಚ್ಚು ಕಾಲ ಟ್ರೇನಿಂಗ್ ಸಂಸ್ಥೆಗಳಲ್ಲಿದ್ದು ತಮ್ಮ ಜ್ಞಾನವನ್ನು ಬೆಳಿಸಲಿಕ್ಕೆ ಅವಕಾಶವು ಸದ್ಯಕ್ಕೆ ಸಿಕ್ಕುವ ಹಾಗಿಲ್ಲ. ಟ್ರೇಂಡ ಜನರೇ ಬೇಕಾಗಿಲ್ಲವೆಂದು ಕೆಲವೆಡೆಯಲ್ಲಿ ಅನ್ನತೊಡಗಿರುವರು. ಟ್ರೇಂಡನಿಗಾದರೂ ಒಬ್ಬೊಬ್ಬನಿಗೆ ಮೂರು ಮೂರು, ನಾಲ್ಕು ನಾಲ್ಕು ಕ್ಲಾಸುಗಳನ್ನು ಕಲಿಸುವದು ಬಂದರೆ, ಮತ್ತು ಅರ್ಧಮರ್ಧ ಹುಡುಗರು ಸರಿಯಾಗಿ ಸಾಲೆಗೆ ಬಾರದೆ ಹೋದರೆ ಇಯತ್ತಾ ಪತ್ರಿಕೆಯಲ್ಲಿ ಹೇಳಿದಂತೆ ಅಭ್ಯಾಸವನ್ನು ಮುಗಿಸುವದಕ್ಕೆ ಆದೀತೇ ? ಹಾಗಾದ ಮೇಲೆ ಹೇಗಾದರೂ ಹುಡುಗರಿಗೆ ಸಾಧಾರಣ ಓದಲಿಕ್ಕೆ, ಬರೆಯಲಿಕ್ಕೆ, ಲೆಕ್ಕ ಮಾಡಲಿಕ್ಕೆ ಬಂದರಾಯಿತು; ಎಂದು ಶಿಕ್ಷಕರು ಅನ್ನುವದು ತಪ್ಪಾಗಬಹುದೇ ? ಆದದರಿಂದ ಹೊಸ ಪದ್ಧತಿಯ ಪ್ರಾರಂಭವು ಇನ್ನೂ ಹಳ್ಳಿಯ ಶಾಲೆಗಳಲ್ಲಿ ಪ್ರಾರಂಭವಾಗಿಯೇ ಇಲ್ಲವೆಂದು ಹೇಳಿದರೆ ತಪ್ಪಾಗುವದಿಲ್ಲ.

ಹೇಗೆಯೇ ವಿಷಯವನ್ನು ಕಲಿಸಲಿ, ಕಲಿಸಿದ ಸಂಗತಿಗಳ ಸರಿಯಾದ ಜ್ಞಾನವಾಗಿ ಅದನ್ನು ಬುದ್ಧಿವಂತಿಕೆಯಿಂದ ಉಪಯೋಗಿಸಿಕೊಳ್ಳಲಿಕ್ಕೆ ಬರಬೇಕಾದರೆ ಕಲಿತದ್ದನ್ನು ಆವರ್ತನ ಮಾಡಿಸಿ ಚೆನ್ನಾಗಿ ಗಟ್ಟಿ ಮಾಡಿಸಬೇಕು. ಹೊಸ ಪದ್ಧತಿಯ ಹುರುಪಿನಲ್ಲಿ ಈ ತರದ ಕೆಲಸಕ್ಕೆ ಸಾಕಷ್ಟು ಪ್ರಾಶಸ್ತ್ಯವು ದೊರೆತಿಲ್ಲವೆಂಬುದು ಅನುಭವದಿಂದ ಕಂಡು ಬಂದಿದೆ. ಹೊಸ ಪಾಠವನ್ನು ಕಲಿಸುವ ಮುಂದೆ ವಸ್ತುಗಳನ್ನು ಉಪಯೋಗಿಸಿ ಹುಡುಗರು ಮಾಡುತ್ತಿರುವ ಲೆಕ್ಕದ ಅರ್ಥವು ಅವರಿಗೆ ಮನದಟ್ಟಾಗುವಂತೆ ಮಾಡುತ್ತೇವೆ. ನಿರೀಕ್ಷಣದಿಂದ ಇಂಥ ಲೆಕ್ಕವನ್ನು ಹೀಗೆ ಮಾಡಬೇಕೆಂದು ರೀತಿಯನ್ನು ಕಲಿತಮೇಲೆ ಅದನ್ನು ಬೇರೆ ಬೇರೆ ಲೆಕ್ಕಗಳಿಗೆ ಹಚ್ಚುತ್ತ ಹೋಗುತ್ತೇವೆ. ಆದರೆ ನಡುನಡುವೆ ಆ ರೀತಿಯ ಆವರ್ತನೆ ಮಾಡಿಸುವಾಗ ತಾವು ಮಾಡುತ್ತಿರುವದರ ಅರ್ಥವು ಹುಡುಗರಿಗೆ ಚೆನ್ನಾಗಿ ತಿಳಿಯುವದಕ್ಕಾಗಿ ರೀತಿಯಲ್ಲಿ ಒಂದೆರಡು ಹೆಚ್ಚು ಮೆಟ್ಟಿಗಳನ್ನು ಸೇರಿಸಿ ಅವರ ಹಿಂದಿನ ಅನುಭವಕ್ಕೂ ಹೊಸ ರೀತಿಗೂ ಇರುವ ಸಂಬಂಧವನ್ನು ತೋರಿಸುತ್ತ ಹೋಗಬೇಕು. ವೇಳೆಯ ಮತ್ತು ಅನುಕೂಲದ ಅಭಾವದಮೂಲಕ ಮೊದಲಿನ ಪಾಠದ ಎಲ್ಲ ಕ್ರಮವನ್ನು ಸಾದ್ಯಂತವಾಗಿ ಮಾಡಿಸುವದು ಅಸಾಧ್ಯವೂ, ಹಾಗೆ ಮಾಡುವದು ಹುಡುಗರಿಗೆ ವೈಚಿತ್ರ್ಯವಿಲ್ಲದೆ ಹೋಗುವ ಕಾರಣದಿಂದ ಬೇಸರವನ್ನು ತರುವದಾದದರಿಂದ ಅನಿಷ್ಟವೂ ಆಗಿರುವದು. ಇದಕ್ಕಾಗಿ ತಕ್ಕ ಆವರ್ತನ ರೀತಿಗಳನ್ನು ಕಲ್ಪಿಸುವದು ಅವಶ್ಯವಾದದ್ದು. ಮೇಲಿನ ವಿಧಾನವನ್ನು ಹಲವು ಉದಾಹರಣಗಳಿಂದ ಸ್ಪಷ್ಟೀಕರಣ ಮಾಡುವೆವು.

೧. ಅಪೂರ್ಣಾಂಕಗಳ ಬೇರೀಜು— ಅಪೂರ್ಣಾಂಗಳ ಬೇರೀಜಿನ ಯಾಂತ್ರಿಕ ರೀತಿಯು ಬಹುತರ ಪ್ರತಿಯೊಬ್ಬ ವಿದ್ಯಾರ್ಥಿಗೆ ಗೊತ್ತಿರುವದು $\frac{೩}{೪}+\frac{೨}{೩}=$? ಇಂಥದೊಂದು ಲೆಕ್ಕವನ್ನು ಮಾಡಲಿಕ್ಕೆ ಹೇಳಿದ ಕೂಡಲೆ $\frac{೯+೮}{೧೨}=\frac{೧೭}{೧೨}$ ಹೀಗೆ ಮಾಡಿ ಇಡುವನು. ಆದರೆ $\frac{೩}{೪}$ ಎಂದರೆ $\frac{೯}{೧೨}$ ಆಗುವದು; $\frac{೨}{೩}$ ಎಂದರೆ $\frac{೮}{೧೨}$ ವಾಗು

ವದು; $\frac{೯}{೧೨}$ ಮತ್ತು $\frac{೨}{೧೨}$ ಇವುಗಳ ಬೇರೀಜು $\frac{೧೧}{೧೨}$ ಬಂದಿತು. ಎಂಬ ಮಾತು ಬಹು ಸ್ವಲ್ಪ ವಿದ್ಯಾರ್ಥಿಗಳಿಗೆ ಗೊತ್ತಿರುವದು. ಇದರ ಕಾರಣವು ಮೊಟ್ಟಮೊದಲು ಈ ಬೇರೀಜನ್ನು ಕಲಿಸುವಾಗ ವಸ್ತುಗಳನ್ನು ಉಪಯೋಗಿಸಲಿಲ್ಲವೆಂದಲ್ಲ. ಆದರೆ ಯಾಂತ್ರಿಕ ರೀತಿಯನ್ನು ಕಲಿಸಿದ ಬಳಿಕ ಲೆಕ್ಕಗಳನ್ನು ಬಿಡಿಸುವಾಗ ಇಲ್ಲವೆ ಆವರ್ತನೆ ಮಾಡಿಸುವಾಗ ಬೇರೀಜಿನ ಕೃತಿಯ ಅರ್ಥವು ಸ್ಪಷ್ಟವಾಗಿ ತಿಳಿಯುವಂಥ ಬರಹದ ಕೆಲವು ವಿಶಿಷ್ಟ ರೀತಿಗಳನ್ನು ಒಮ್ಮೆಲೆ ಬಿಟ್ಟುಬಿಟ್ಟದ್ದೇ ಹೀಗಾಗುವದಕ್ಕೆ ಕಾರಣವು. ಅದು ಹೇಗಂದರೆ:—

$$\frac{೩}{೪}+\frac{೧}{೬}=?\quad \frac{\overset{೯}{೩}}{\underset{೧೨}{೪}}=\frac{೯}{೧೨};\quad \frac{\overset{೨}{೧}}{\underset{೧೨}{೬}}=\frac{೨}{೧೨}$$

$$\frac{೩}{೪}+\frac{೧}{೬}$$
$$=\frac{೯}{೧೨}+\frac{೨}{೧೨}$$
$$=\frac{೯+೨}{೧೨}$$
$$=\frac{೧೧}{೧೨}$$

ಸಮುಚ್ಛೇದ ರೂಪ ಕೊಟ್ಟಮೇಲೆ ಪ್ರತಿಯೊಂದು ಅಪೂರ್ಣಾಂಕವನ್ನು $\frac{೯}{೧೨}$, $\frac{೨}{೧೨}$ ಹೀಗೆ ಹೊಸ ಭೇದದಿಂದ ಬರೆಯಿಸಿಕೊಳ್ಳುವದನ್ನು ಕೆಲವು ದಿನಗಳ ವರೆಗೆ ಮಾಡ ತಕ್ಕದ್ದು. ಆಮೇಲೆ ಆ ಮೆಟ್ಟನ್ನು ಬಿಟ್ಟುಬಿಡಬಹುದು.

ಇದರಂತೆಯೇ $\frac{೩}{೪}$ ದಿಂದ $\frac{೯}{೧೨}$ ಹೇಗೆ ಬಂದಿತೆಂದು ಕೇಳಿದರೆ ಎಷ್ಟೋ ಹುಡುಗರು $\frac{೩}{೪}$ ವನ್ನು ೩ರಿಂದ ಗುಣಿಸಿದೆವೆಂದು ಹೇಳುವರು; ಅಂಶಭೇದಗಳೆರಡಕ್ಕೂ ೩ರಿಂದ ಗುಣಿಸಿದೆವೆಂಬದು ಅವರಿಗೆ ತಿಳಿಯಬೇಕು. ಇದಕ್ಕಾಗಿ ಕೆಳಗೆ ತೋರಿಸಿದಂತೆ ರೂಪಾಂತರವನ್ನು ಬರೆಯಿಸಬಹುದು.

$$\frac{\overset{೯}{೩}}{\underset{೧೨}{೪}}=\frac{೯}{೧೨}$$

ಹೀಗೆ ಬರೆಯುವದು ಕೆಲವರಿಗೆ ವಿಚಿತ್ರವಾಗಿ ತೋರಬಹುದು. ಸ್ವಲ್ಪ ವಿಚಾರಿಸಿ ನೋಡಿದರೆ ಮೊದಲಿನ ಅಂಶಭೇದಗಳನ್ನು ಕೆಲವೊಂದು ನಿಯಮದಂತೆ ಬದಲಿಸಿರುವೆವೆಂದು ಇಷ್ಟೇ ಅದರ ಅರ್ಥವಾಗುವದು. $\frac{೯}{೧೨}$ಕ್ಕೆ ಸಂಕ್ಷೇಪ ರೂಪ ಕೊಡುವಾಗ $\frac{\overset{೩}{೯}}{\underset{೪}{೧೨}}=\frac{೩}{೪}$ ಹೀಗೆ ಬರೆಯುವದು ನಮಗೆ ವಿಚಿತ್ರವಾಗಿ ತೋರುವದಿಲ್ಲ, ಯಾಕೆಂದರೆ ಅದರ ರೂಢಿಯು ನಮಗಿರುವದು.

ಕೆಲವರು ಈ ರೂಪಾಂತರವನ್ನು ಹೀಗೂ ತೋರಿಸುವರು.

$$\frac{೩}{೪}\times\frac{೩}{೩}=\frac{೯}{೧೨}$$

ಇದೂ ಒಳ್ಳೆಯುದಾದ ಪದ್ಧತಿ. ಯಾಕೆಂದರೆ ಮುಂದೆ ಗುಣಾಕಾರವನ್ನು ಕಲಿತ ಮೇಲೆ ಈ ರೀತಿಯಲ್ಲಿ $\frac{೩}{೪}$ಕ್ಕೆ ೧ರಿಂದ ಗುಣಿಸಿದಹಾಗಾಯಿತೆಂದೂ ಅದರಿಂದ ಬರುವ ೧$\frac{\,}{೨}$ವು $\frac{೩}{೪}$ದಷ್ಟೇ ಆಗುವದೆಂದೂ ಹುಡುಗರಿಗೆ ಹೊಳೆಯಬಹುದು.

ಕೆಳಗಿನ ಲೆಕ್ಕಗಳನ್ನು ನೋಡಿರಿ.

(೧) $\frac{೩}{೧೦}+\frac{೨}{೧೯}$; (೨) $\frac{೧}{೨}+\frac{೧}{೪}$;

(೩) $೩\frac{೭}{೮}+೨\frac{೧}{೧೬}$; (೪) $\frac{೨೧೫}{೩}+\frac{೪೦೫}{೮}$;

(೫) $೧೦೮-\frac{೧}{೮}$.

ಈ ಎಲ್ಲ ಲೆಕ್ಕಗಳಿಗೂ ಹುಡುಗರು ಒಂದೇ ಒಂದು ಮಂತ್ರವನ್ನು ಪ್ರಯೋಗಿಸುವರು:– ಲಘುತಮ ಸಾಧಾರಣ ಭಾಜ್ಯವನ್ನು ತೆಗೆ; ಅದಕ್ಕೆ ಮೊದಲನೆಯ ಅಪೂರ್ಣಾಂಕದ ಛೇದದಿಂದ ಭಾಗಿಸು.........ಇತ್ಯಾದಿ.

ಹುಡುಗರಿಗೆ ಎಲ್ಲತರದ ಲೆಕ್ಕಗಳಿಗೂ ಹತ್ತುವ ಒಂದು ರಾಜಮಾರ್ಗವು ಗೊತ್ತಿರುವದು ಒಳ್ಳೆಯದು. ಆದರೆ ಲೆಕ್ಕಮಾಡುವಾಗ ವ್ಯವಹಾರ ಜ್ಞಾನವನ್ನು ಕಟ್ಟಬೇಕೆಂದು ಹುಡುಗರು ತಿಳಿಯಬಾರದು. ಯಾವ ಲೆಕ್ಕದ ಛೇದಗಳು ಒಂದೇ ಇರುವವು; ಯಾವ ಲೆಕ್ಕದಲ್ಲಿ ಸಾಧಾರಣ ಛೇದವು ತಿಳಿಯುವಂತೆ ಇರುವದು; ಯಾವ ಲೆಕ್ಕದಲ್ಲಿ ಪೂರ್ಣಾಂಕಗಳನ್ನು ಪ್ರತ್ಯೇಕವಾಗಿ ಕೂಡಿಸುವದು ನೆಟ್ಟಗೆ ಎಂಬದನ್ನು ಹುಡುಗರು ನೋಡಲಿಕ್ಕೆ ಕಲಿಯಬೇಕು.

ಪೂರ್ಣಾಂಕ ಅಪೂರ್ಣಾಂಕಗಳನ್ನು ಬೇರೆ ಬೇರೆಯಾಗಿ ಇಡುವದು ಹುಡುಗರಿಗೆ ಏಕೋ ಸೇರುವದಿಲ್ಲ. (೩) ನೆಯ ಲೆಕ್ಕವನ್ನು ಕೂಡಲಿ ಹೀಗೆ ಮಾಡತೊಡಗುವರು.

$೩\frac{೭}{೮}+೨\frac{೧}{೧೬}=\frac{೩೧}{೮}+\frac{೩೩}{೧೬}=\frac{\quad}{೧೬}$ ಇತ್ಯಾದಿ.

೮) ೮, ೧೬
೮×೧×೨=೧೬
ಲ. ಸಾ. ಭಾ.

(೪) ನೆಯ ಲೆಕ್ಕವನ್ನು ಇದ್ದಕ್ಕಿದ್ದ ಹಾಗೆ ಬಿಡಿಸುವವಕ್ಕಿಂತ

$೭೧\frac{೨}{೩}+೫೦\frac{೫}{೮}=೧೨೧+\frac{೨}{೩}+\frac{೫}{೮}$ ...... ಹೀಗೆ ಬಿಡಿಸುವದರಿಂದ ಶ್ರಮವೂ ಕಡಿಮೆಯಾಗುವದಲ್ಲದೆ ಸಂಖ್ಯೆಗಳ ಬೆಲೆಯ ಯೋಗ್ಯತೆಯು ಮನಸ್ಸಿನಲ್ಲಿ ತುಂಬಿ ತಪ್ಪಾಗುವ ಸಂಭವವು ಕಡಿಮೆಯಾಗುವದು. ಇದರಂತೆ $೩\frac{೧}{೨}$, $೨\frac{೩}{೪}$ ಇವುಗಳನ್ನು "೩ ಪೂರ್ಣಾಂಕ ಒಂದು ಎರಡನೆಯ ಅಂಶ, ಎರಡು ಪೂರ್ಣಾಂಕ ಮೂರು ನಾಲ್ಕನೆಯ ಅಂಶ" ಎಂದು ಹುಡುಗರಿಗೆ ಓದಗೊಡಬಾರದು. ಆದರೆ "ಮೂರರೂವರೆ, ಎರಡೂ ಮುಕ್ಕಾಲು" ಎಂದು ಓದಬೇಕು. ಅನುಭವದಿಂದಲೂ ತಿಳಿವಳಿಕೆಯು ಹೆಚ್ಚಾದಂತೆಯೂ ಹುಡುಗರಿಗೆ ಇವು ತಾನೇ ತಿಳಿಯಹತ್ತುವವು. ಆದರೂ ಮೊದಲಿನಿಂದಲೂ ಶಿಕ್ಷಕರು ಇಂಥ ಸಂಗತಿಗಳ ಕಡೆಗೆ ಹುಡುಗರ ಲಕ್ಷವನ್ನು ಒಯ್ಯುವದು ಸರಿಯಾದದ್ದು. ಹೊಸ

ದಾಗಿ ಪಾಠಕಲಿಸುವಾಗ ಈ ಮಾತುಗಳನ್ನು ಹೇಳಲಿಕ್ಕೆ ಆಗದಿದ್ದರೆ ಮೇಲಿನ ಇಯತ್ತೆಯಲ್ಲಿ ಅದೇ ವಿಷಯದ ಆವರ್ತನೆ ಮಾಡಿಸುವಾಗ ಹೇಳುವ ಸಂಧಿಯನ್ನು ಸಾಧಿಸಬೇಕು.

ಎಷ್ಟೋಸಾರೆ ಬಹು ಸುಲಭವಾದ ದೃಷ್ಟಾಂತದಿಂದ ಹುಡುಗರಿಗಿದ್ದ ಜ್ಞಾನವನ್ನು ದೃಢಪಡಿಸಬಹುದು. ಉದಾ: ೩/೪ ಮತ್ತು ೯/೧೨ ಇವುಗಳಲ್ಲಿ ಯಾವದು ದೊಡ್ಡದು? ("೩/೪ ಮತ್ತು ೯/೧೨ ಇವು ಸರಿಯಿರುವವೇನು?" ಅಥವಾ "೩/೪ ಮತ್ತು ೯/೧೨ ಇವುಗಳನ್ನು ಹೋಲಿಸಿ ನೋಡಿರಿ." ಎಂದು ಹೇಳುವವಕ್ಕಿಂತ ಇಲ್ಲಿ ಕೊಟ್ಟಂತೆ ಕೇಳುವದು ಸುಲಭವಾಗಬಹುದು. ಹಾಗೆ ಕೇಳುವದರಿಂದ ಬೇಕೆಂತ ತಪ್ಪು ಉತ್ತರಕ್ಕೆ ಉತ್ತೇಜನ ಕೊಟ್ಟಂತಾಗುವದು ಎನ್ನುವ ಹಾಗಿದ್ದರೆ ಬೇರೆ ರೀತಿಯಿಂದ ಕೇಳಬಹುದು.) ಎಂದು ಕೇಳದರೆ ಎರಡೂ ಅಷ್ಟೇ ಎಂದು ಖಂಡಿತವಾಗಿ ಉತ್ತರ ಬಂದೀತೆಂಬ ಭರವಸವಿಲ್ಲ. ಹಾಗೆ ಹುಡುಗರು ಅನುಮಾನಿಸ ಹತ್ತಿದರೆ ತಟ್ಟನೆ

೩/೪ ಆಣೆ ಎಂದರೆ ಎಷ್ಟು ?
೯/೧೨ ಆಣೆ ಎಂದರೆ ಎಷ್ಟು ?

ಎಂದು ಕೇಳಿದರೆ ಎರಡೂ ಅಷ್ಟೇ ಎಂಬ ಮಾತು ಅವರಿಗೆ ಹೊಳೆಯುವದು. ಆಕೃತಿಯಿಂದ ಈ ಮಾತನ್ನು ಸ್ಪಷ್ಟಮಾಡಬಹುದು. ಅದಂತೂ ಉತ್ತಮವು. ಆದರೆ ತಿಳಿಸಿಕೊಟ್ಟರೆ ವಸ್ತುಗಳ ಸಹಾಯದಿಂದ ತಿಳಿಸಿಕೊಡುವದು, ಇಲ್ಲದೆ ಹೋದರೆ ತಿಳಿಸಿಕೊಡುವ ಗೊಡವೆಯೇ ಇಲ್ಲ; ಉಂಡರೆ ಅಜೀರ್ಣವಾಗುವಂತೆ ಉಣ್ಣುವದು, ಇಲ್ಲದಿದ್ದರೆ ನಿಶ್ಶಕ್ತ ಉಪವಾಸಮಾಡುವದು, ಎನ್ನುವಂಥ ಎರಡೂ ಅತಿರೇಕಗಳ ನಡುವಿನ ಮಾರ್ಗಗಳೆಷ್ಟೋ ಇರುವವು. ಅವುಗಳನ್ನು ಶಿಕ್ಷಕರು ಮನ್ನಿಸಲೆಂದೇ ಈ ಲೇಖದ ಉದ್ದೇಶವು.

೨ ಅಪೂರ್ಣಾಂಕಗಳ ಗುಣಾಕಾರ.

ಟ್ರೇನಿಂಗ ಸಂಸ್ಥೆಗಳಲ್ಲಿ ಇಲ್ಲವೆ ಸಮ್ಮೇಳನಗಳಲ್ಲಿ ಟೀಕಾಪಾಠ ಇಲ್ಲವೆ ಮಾದರಿಯ ಪಾಠವನ್ನು ಕಲಿಸುವಾಗ ವಿಧವಿಧದ ಬಣ್ಣದ ಖಡುಗಳು, ಕಾಗದ, ಚಾಕು, ಕತ್ತರಿ ಇಷ್ಟೆಲ್ಲ ಉಪಕರಣಗಳನ್ನು ತಂದು ತಾಸು ತನಕ (ತಾಸಲ್ಲದಿದ್ದರೆ ಮುಕ್ಕಾಲು ತಾಸು, ಅರ್ಧ ತಾಸು.) ಶಿಕ್ಷಕನು ಗಂಟಲ ಹರಿದುಕೊಂಡು ಕಲಿಸಿದರೂ ಹುಡುಗರಿಗೆ ಈ ಪಾಠವು ನೀರಸವಾಗುವದೆಂದು ನನ್ನ ನಂಬಿಗೆಯಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಹುಡುಗರಿಗೆ ಆ ಪಾಠದ ಕೊನೆಯಲ್ಲಿ ಏನೊಂದನ್ನು ಕಲಿತಂತೆಯೇ ಅನಿಸುವದಿಲ್ಲ. ಹುಡುಗರ ಮಾನಸಿಕ ಚಟುವಟಿಕೆಗೆ ಸಾಕಷ್ಟು ಅವಕಾಶವು ದೊರೆಯುವಂತೆ ಕೇಳುವ ಪ್ರಶ್ನೆಗಳೇ ಇರುವದಿಲ್ಲ. ಅದರಲ್ಲಿ ಅಪೂರ್ಣಾಂಕಗಳ ಗುಣಾಕಾರವು ಅಪೂರ್ಣಾಂಕದ ಎಲ್ಲ ಕೃತಿಗಳಲ್ಲಿ ಮಾಡಲಿಕ್ಕೆ ಬಹು ಸುಲಭವು. ಕ್ಲಾಸಿನಲ್ಲಿ ಎಷ್ಟೋ ಹುಡು

ಇದೂ ಒಳ್ಳೆಯುದಾದ ಪದ್ಧತಿ. ಯಾಕೆಂದರೆ ಮುಂದೆ ಗುಣಾಕಾರವನ್ನು ಕಲಿತ ಮೇಲೆ ಈ ರೀತಿಯಲ್ಲಿ ೪/೫ ಕ್ಕೆ ೧ರಿಂದ ಗುಣಿಸಿದ ಹಾಗಾಯಿತೆಂದೂ ಅದರಿಂದ ಬರುವ ೧/೫ ವು ೪/೫ ದಷ್ಟೇ ಆಗುವದೆಂದೂ ಹುಡುಗರಿಗೆ ಹೊಳೆಯಬಹುದು.

ಕೆಳಗಿನ ಲೆಕ್ಕಗಳನ್ನು ನೋಡಿರಿ.

(೧) ೩/೧೦ + ೨/೧೦ ; (೨) ೧/೨ + ೧/೪ ;
(೩) ೩ ೫/೮ + ೨ ೧/೧೬ ; (೪) ೫ ೧/೩೫ + ೪ ೦/೮೫ ;
(೫) ೧೦೮ − ೧/೮ .

ಈ ಎಲ್ಲ ಲೆಕ್ಕಗಳಿಗೂ ಹುಡುಗರು ಒಂದೇ ಒಂದು ಮಂತ್ರವನ್ನು ಪ್ರಯೋಗಿಸುವರು:– ಲಘುತಮ ಸಾಧಾರಣ ಭಾಜ್ಯವನ್ನು ತೆಗೆ; ಅದಕ್ಕೆ ಮೊದಲನೆಯ ಅಪೂರ್ಣಾಂಕದ ಛೇದದಿಂದ ಭಾಗಿಸು.........ಇತ್ಯಾದಿ.

ಹುಡುಗರಿಗೆ ಎಲ್ಲತರದ ಲೆಕ್ಕಗಳಿಗೂ ಹತ್ತುವ ಒಂದು ರಾಜಮಾರ್ಗವು ಗೊತ್ತಿರುವದು ಒಳ್ಳೆಯದು. ಆದರೆ ಲೆಕ್ಕಮಾಡುವಾಗ ವ್ಯವಹಾರ ಜ್ಞಾನವನ್ನು ಕಟ್ಟಿಡಬೇಕೆಂದು ಹುಡುಗರು ತಿಳಿಯಬಾರದು. ಯಾವ ಲೆಕ್ಕದ ಛೇದಗಳು ಒಂದೇ ಇರುವವು, ಯಾವ ಲೆಕ್ಕದಲ್ಲಿ ಸಾಧಾರಣ ಛೇದವು ತಿಳಿಯುವಂತೆ ಇರುವದು; ಯಾವ ಲೆಕ್ಕದಲ್ಲಿ ಪೂರ್ಣಾಂಕಗಳನ್ನು ಪ್ರತ್ಯೇಕವಾಗಿ ಕೂಡಿಸುವದು ನೆಟ್ಟಗೆ ಎಂಬದನ್ನು ಹುಡುಗರು ನೋಡಲಿಕ್ಕೆ ಕಲಿಯಬೇಕು.

ಪೂರ್ಣಾಂಕ ಅಪೂರ್ಣಾಂಕಗಳನ್ನು ಬೇರೆ ಬೇರೆಯಾಗಿ ಇಡುವದು ಹುಡುಗರಿಗೆ ಏಕೋ ಸೇರುವದಿಲ್ಲ. (೩) ನೆಯ ಲೆಕ್ಕವನ್ನು ಕೂಡಲಿ ಹೀಗೆ ಮಾಡತೊಡಗುವರು.

೩ ೫/೮ + ೨ ೧/೧೬ = ೨೯/೮ + ೩೩/೧೬ = ... ಇತ್ಯಾದಿ.

೨) ೮, ೧೬ / ೪, ೮
೮×೧×೨=೧೬
ಲ. ಸಾ. ಭಾ.

(೪) ನೆಯ ಲೆಕ್ಕವನ್ನು ಇದ್ದಕ್ಕಿದ್ದ ಹಾಗೆ ಬಿಡಿಸುವದಕ್ಕಿಂತ

೭ ೧/೩ + ೫ ೧/೮ = ೧೨ + ೧/೩ + ೧/೮ ...... ಹೀಗೆ ಬಿಡಿಸುವದರಿಂದ ಶ್ರಮವೂ ಕಡಿಮೆಯಾಗುವದಲ್ಲದೆ ಸಂಖ್ಯೆಗಳ ಬೆಲೆಯ ಯೋಗ್ಯತೆಯು ಮನಸ್ಸಿನಲ್ಲಿ ತುಂಬಿ ತಪ್ಪಾಗುವ ಸಂಭವವು ಕಡಿಮೆಯಾಗುವದು. ಇದರಂತೆ ೧ ೧/೨, ೨ ೩/೪ ಇವುಗಳನ್ನು "ಒಂದು ಪೂರ್ಣಾಂಕ ಒಂದು ಎರಡನೆಯ ಅಂಶ, ಎರಡು ಪೂರ್ಣಾಂಕ ಮೂರು ನಾಲ್ಕನೆಯ ಅಂಶ" ಎಂದು ಹುಡುಗರಿಗೆ ಓದಗೊಡಬಾರದು. ಆದರೆ "ಮೂರೂವರೆ, ಎರಡೂ ಮುಕ್ಕಾಲು" ಎಂದು ಓದಬೇಕು. ಅನುಭವದಿಂದಲೂ ತಿಳಿವಳಿಕೆಯು ಹೆಚ್ಚಾದಂತಯೂ ಹುಡುಗರಿಗೆ ಇವು ತಾನೇ ತಿಳಿಯಹತ್ತುವವು. ಆದರೂ ಮೊದಲಿನಿಂದಲೂ ಶಿಕ್ಷಕರು ಇಂಥ ಸಂಗತಿಗಳ ಕಡೆಗೆ ಹುಡುಗರ ಲಕ್ಷವನ್ನು ಒಯ್ಯುವದು ಸರಿಯಾದದ್ದು. ಹೊಸ

ದಾಗಿ ಪಾಠಕಲಿಸುವಾಗ ಈ ಮಾತುಗಳನ್ನು ಹೇಳಲಿಕ್ಕೆ ಆಗದಿದ್ದರೆ ಮೇಲಿನ ಇಯತ್ತೆಯಲ್ಲಿ ಅದೇ ವಿಷಯದ ಆವರ್ತನೆ ಮಾಡಿಸುವಾಗ ಕೇಳುವ ಸಂಧಿಯನ್ನು ಸಾಧಿಸಬೇಕು.

ಎಷ್ಟೋಸಾರೆ ಬಹು ಸುಲಭವಾದ ದೃಷ್ಟಾಂತದಿಂದ ಹುಡುಗರಿಗಿದ್ದ ಜ್ಞಾನವನ್ನು ದೃಢಪಡಿಸಬಹುದು. ಉದಾ: ೩/೪ ಮತ್ತು ೯/೧೨ ಇವುಗಳಲ್ಲಿ ಯಾವದು ದೊಡ್ಡದು ? ("೩/೪ ಮತ್ತು ೯/೧೨ ಇವು ಸರಿಯಿರುವವೇನು ? " ಅಥವಾ "೩/೪ ಮತ್ತು ೯/೧೨ ಇವುಗಳನ್ನು ಹೋಲಿಸಿ ನೋಡಿರಿ. " ಎಂದು ಹೇಳುವವಕ್ಕಿಂತ ಇಲ್ಲಿ ಕೊಟ್ಟಂತೆ ಕೇಳುವದು ಸುಲಭವಾಗಬಹುದು. ಹಾಗೆ ಕೇಳುವದರಿಂದ ಬೇಕೆಂತ ತಪ್ಪು ಉತ್ತರಕ್ಕೆ ಉತ್ತೇಜನ ಕೊಟ್ಟಂತಾಗುವದು ಎನ್ನುವ ಹಾಗಿದ್ದರೆ ಬೇರೆ ರೀತಿಯಿಂದ ಕೇಳಬಹುದು.) ಎಂದು ಕೇಳಿದರೆ ಎರಡೂ ಅಷ್ಟೇ ಎಂದು ಖಂಡಿತವಾಗಿ ಉತ್ತರ ಬಂದೀತೆಂಬ ಭರವಸವಿಲ್ಲ. ಹಾಗೆ ಹುಡುಗರು ಅನುಮಾನಿಸ ಹತ್ತಿದರೆ ತಟ್ಟನೆ

೩/೪ ಆಣೆ ಎಂದರೆ ಎಷ್ಟು ?
೯/೧೨ ಆಣೆ ಎಂದರೆ ಎಷ್ಟು ?

ಎಂದು ಕೇಳಿದರೆ ಎರಡೂ ಅಷ್ಟೇ ಎಂಬ ಮಾತು ಅವರಿಗೆ ಹೊಳೆಯುವದು. ಆಕೃತಿಯಿಂದ ಈ ಮಾತನ್ನು ಸ್ಪಷ್ಟಮಾಡಬಹುದು. ಅದಂತೂ ಉತ್ತಮವು. ಆದರೆ ತಿಳಿಸಿಕೊಟ್ಟರೆ ವಸ್ತುಗಳ ಸಹಾಯದಿಂದ ತಿಳಿಸಿಕೊಡುವದು, ಇಲ್ಲದೆ ಹೋದರೆ ತಿಳಿಸಿಕೊಡುವ ಗೊಡವೆಯೇ ಇಲ್ಲ; ಉಂಡರೆ ಅಜೀರ್ಣವಾಗುವಂತೆ ಉಣ್ಣುವದು, ಇಲ್ಲದಿದ್ದರೆ ನಿಶ್ಚಿಕ್ರ ಉಪವಾಸಮಾಡುವದು, ಎನ್ನುವಂಥ ಎರಡೂ ಅತಿರೇಕಗಳ ನಡುವಿನ ಮಾರ್ಗಗಳೆಷ್ಟೋ ಇರುವವು. ಅವುಗಳನ್ನು ಶಿಕ್ಷಕರು ಮನ್ನಿಸಬೇಂದೇ ಈ ಲೇಖದ ಉದ್ದೇಶವು.

೨ ಅಪೂರ್ಣಾಂಕಗಳ ಗುಣಾಕಾರ.

ಟ್ರೇನಿಂಗ ಸಂಸ್ಥೆಗಳಲ್ಲಿ ಇಲ್ಲವೆ ಸಮ್ಮೇಳನಗಳಲ್ಲಿ ಟೀಕಾಪಾಠ ಇಲ್ಲವೆ ಮಾದರಿಯ ಪಾಠವನ್ನು ಕಲಿಸುವಾಗ ವಿಧವಿಧದ ಬಣ್ಣದ ಖಡುಗಳು, ಕಾಗದ, ಚಾಕು, ಕತ್ತರಿ ಇಷ್ಟೆಲ್ಲ ಉಪಕರಣಗಳನ್ನು ತಂದು ತಾಸು ತನಕ (ತಾಸಲ್ಲದಿದ್ದರೆ ಮುಕ್ಕಾಲು ತಾಸು, ಅರ್ಧ ತಾಸು.) ಶಿಕ್ಷಕನು ಗಂಟಲು ಹರಿಸುಕೊಂಡು ಕಲಿಸಿದರೂ ಹುಡುಗರಿಗೆ ಈ ಪಾಠವು ನೀರಸವಾಗುವದೆಂದು ನನ್ನ ನಂಬಿಗೆಯಿದೆ, ಇದಕ್ಕೆ ಮುಖ್ಯ ಕಾರಣವೆಂದರೆ ಹುಡುಗರಿಗೆ ಆ ಪಾಠದ ಕೊನೆಯಲ್ಲಿ ಏನೊಂದನ್ನು ಕಲಿತಂತೆಯೇ ಅನಿಸುವದಿಲ್ಲ. ಹುಡುಗರ ಮಾನಸಿಕ ಚಟುವಟಿಕೆಗೆ ಸಾಕಷ್ಟು ಅವಕಾಶವು ದೊರೆಯುವಂತೆ ಕೇಳುವ ಪ್ರಶ್ನೆಗಳೇ ಇರುವದಿಲ್ಲ. ಅದರಲ್ಲಿ ಅಪೂರ್ಣಾಂಕಗಳ ಗುಣಾಕಾರವು ಅಪೂರ್ಣಾಂಕದ ಎಲ್ಲ ಕೃತಿಗಳಲ್ಲಿ ಮಾಡಲಿಕ್ಕೆ ಬಹು ಸುಲಭವು. ಕ್ಲಾಸಿನಲ್ಲಿ ಎಷ್ಟೋ ಹುಡು

ಗರಿಗೆ ಎರಡೂ ಅಂಶಗಳ ಗುಣಾಕಾರವನ್ನೂ, ಎರಡೂ ಛೇದಗಳ ಗುಣಾಕಾರವನ್ನೂ ಮಾಡಬೇಕೆಂಬವರ ವಾಸನೆಯು ಹೇಗೋ ಬಡಿದಿರುತ್ತದೆ. ಹುಡುಗರಿಗೆ ಬೇಕಾದದ್ದು ರೀತಿ, ಮಾಡಲಿಕ್ಕೆ ಲೆಕ್ಕಗಳು; ಇವೆರಡೂ ಇಲ್ಲದೆ ಬಣ್ಣದ ಕಾಗದಗಳನ್ನೋ ಖಡು ವನ್ನೋ ನೋಡುತ್ತ ತಾಸು ಹೊತ್ತು ಕಳೆಯಬೇಕೆಂದರೆ ಹುಡುಗರಿಗೆ ನೀರಸವಾಗದೆ ಏನು ಮಾಡೀತು ? ಒಂದೇ ಪಾಠದಲ್ಲಿ ಮುಗಿಯದೆ ಮೂರು ನಾಲ್ಕು ಪಾಠಗಳಲ್ಲಿ ವಿಷ ಯವು ಸಾಗಿದರಂತೂ ಹುಡುಗರು ಮನೆಯಲ್ಲಿ ಅಪೂರ್ಣಾಂಕಗಳ ಗುಣಾಕಾರವನ್ನು ಹೇಗೆ ಮಾಡಬೇಕೆಂದು ತಮ್ಮ ಅಪ್ಪನನ್ನೋ ಅಣ್ಣನನ್ನೋ ಕೇಳಿ ತಯಾರಾಗಿ ಬರುವರು.

ಉಪಕರಣಗಳನ್ನು ಸರಿಯಾಗಿ ಉಪಯೋಗಿಸಿ ಹುಡುಗರನ್ನು ಕೆಲಸದಲ್ಲಿ ತೊಡ ಗಿಸುವದು (ವ್ಯಮಗೆಯಿಸುವದು) ಅತೀವ ಕಠಿಣವಾದ ಕೆಲಸವಾಗಿರುತ್ತದೆ. ವಸ್ತು ಗಳನ್ನು ಉಪಯೋಗಿಸಿರಿ. ಪ್ರತ್ಯಕ್ಷ ವಸ್ತುಗಳನ್ನು ಉಪಯೋಗಿಸಿರಿ, ಎಂಬ ಕಿವಿ ಗಡಚಿಕ್ಕುವ ಶಿಕ್ಷಣ ತತ್ವವನ್ನು ಕೇಳಿ ಬೇಸರಿಯದವರು ಹಳ್ಳಿಯ ಸಾಲೆಯೊಳಗಿನ ನಮ್ಮ ಶಿಕ್ಷಕ ಬಾಂಧವರೇ ಎಂದು ಕಾಣುವದು. ಯಾಕೆಂದರೆ (ಅವರು ಆ ವಸ್ತುಗಳ ಗೋಜಿಗೇ ಹೋಗುವದಿಲ್ಲ.) ಗುಣಾಕಾರವನ್ನು ಮೊದಲು ಹೇಗಾದರೂ ಕಲಿಸಲಿ; ನಿಯಮವನ್ನು ಹೇಳಿ ಲೆಕ್ಕವನ್ನು ಮಾಡಿಸಹತ್ತಿದ ಮೇಲೆ ಸುಲಭವಾದ ದೃಷ್ಟಾಂತಗ ಳಿಗೂ ರೀತಿಗಳಿಗೂ ಶಿಕ್ಷಕರು ಲಕ್ಷವನ್ನು ಕೊಡಬೇಕು. ಎಲ್ಲ ಗುಣಾಕಾರ ಭಾಗಾ ಕಾರದ ಲೆಕ್ಕಗಳಿಗೂ ಏಕಮೂಲಿಕಾ ಪ್ರಯೋಗವನ್ನು ಮಾಡಬಾರದು. ಕೆಲವು ಸುಲಭವಾದ ದೃಷ್ಟಾಂತಗಳೂ ರೀತಿಗಳೂ ಕೆಳಗೆ ಕೊಟ್ಟಿವೆ

(೧) ೧೨೮ ರ ೩/೪; (೨) ೩/೧೬ × ೩;

(೩) ೧೨/೧೬ ÷ ೪ (೪) ೩/೪ × ೩/೪.

(೧) ನೆಯ ಲೆಕ್ಕವನ್ನು ಹೀಗೆ ಮಾಡಿಸಬಹುದು.

೧೨೮ ರ ೩/೪
= (೧೨೮ ÷ ೪) × ೩
= ೩೨ × ೩
= ೯೬

(೨) ನೆಯ ಲೆಕ್ಕವನ್ನು ಹೀಗೆ ಮಾಡಿಸಬಹುದು.

೩/೧೬ × ೩	೩ ಹತ್ತರ ಗುಂಪು × ೩ = ೯ ಹ. ಗುಂಪು.
= ೩ ಹದಿನಾರನೆಯ ಅಂಶ × ೩	
= ೯ ಹದಿನಾರನೆಯ ಅಂಶ	
= ೯/೧೬	
ಅಥವಾ	
೩/೧೬ × ೩	
= ೩/೧೬ + ೩/೧೬ + ೩/೧೬	೩ ಹ.ಗುಂ. + ೩ ಹ.ಗುಂ. + ೩ ಹ.ಗುಂ.
= ೯/೧೬	= ೯ ಹ. ಗುಂ.

(೩) ನೆಯ ಲೆಕ್ಕವನ್ನು ಹೀಗೆ ಮಾಡಿಸಬಹುದು.

$\frac{೧೨}{೧೬} \div ೪$	ದೃಷ್ಟಾಂತ
$=$ ೧೨ ಹದಿನಾರನೆಯ ಅಂಶ ÷ ೪	೧೨ ಹ. ಗುಂ. ÷ ೪ = ೩ ಹ. ಗುಂ.
$=$ ೩ ಹದಿನಾರನೆಯ ಅಂಶ	
$=\frac{೩}{೧೬}$	

(೪) ನೆಯ ಲೆಕ್ಕವನ್ನು ಹೀಗೆ ಮಾಡಿಸಬಹುದು.

(ಅ)	(ಬ)	(ಕ)	(ಡ)	(ಇ)
$\frac{೩}{೪}\times\frac{೩}{೪}$	$\frac{೩}{೪}\times\frac{೩}{೪}$	$\frac{೩}{೪}\times\frac{೩}{೪}$	$\frac{೩}{೪}\times\frac{೩}{೪}$	$\frac{೩}{೪}\times\frac{೩}{೪}$
$=\frac{೩}{೪}\div\frac{೪}{೩}$	$=(\frac{೩}{೪}\div ೪)\times ೩$	$=(\frac{೩}{೪}\div ೪)\times ೩$	$=\frac{೩}{೧೬}\times ೩$	$=\frac{೯}{೧೬}$
$=(\frac{೩}{೪}\div ೪)\times ೩$	$=(\frac{೧೨}{೧೬}\div ೪)\times ೩$	$=\frac{೩}{೧೬}\times ೩$	$=\frac{೯}{೧೬}$	
$=(\frac{೧೨}{೧೬}\div ೪)\times ೩$	$=\frac{೩}{೧೬}\times ೩$	$=\frac{೯}{೧೬}$		
$=\frac{೩}{೧೬}\times ೩$	$=\frac{೯}{೧೬}$			
$=\frac{೯}{೧೬}$				

ಹಲವು ಲೆಕ್ಕಗಳನ್ನು 'ಅ'ದಲ್ಲಿ ತೋರಿಸಿದಂತೆ ಬಿಡಿಸಿಕೊಂಡ ಬಳಿಕ ಒಂದೊಂದೇ ಮೆಟ್ಟನ್ನು ಕಡಿಮೆ ಮಾಡುತ್ತ ಹೋಗಬಹುದು.

(೪) ನೆಯ ಲೆಕ್ಕವನ್ನು ಹೀಗೂ ಬಿಡಿಸಬಹುದು.

$\frac{೩}{೪}$ ರೂಪಾಯಿಯ $\frac{೩}{೪}$

$=$(೧೨ ಆಣೆ ÷ ೪) × ೩

$=$ ೩ ಆಣೆ × ೩

$=$ ೯ ಆಣೆ

$=\frac{೯}{೧೬}$ ರೂ.

೧ನೆಯ, ೨ನೆಯ, ೩ನೆಯ ಲೆಕ್ಕಗಳನ್ನು ಗುಣಾಕಾರದ ಯಾಂತ್ರಿಕ ರೀತಿಯನ್ನು ಕಲಿಸುವದಕ್ಕಿಂತ ಮುಂಚೆ ಕಲಿಸುವದು ಒಳ್ಳೆಯದು. ಹಾಗೆ ಮಾಡದಿದ್ದರೂ $\frac{\text{ಅಂಶ}\times\text{ಅಂಶ}}{\text{ಛೇದ}\times\text{ಛೇದ}}$ ಎಂಬ ರೀತಿಯನ್ನು ಕುರುಡುತನದಿಂದ ಆ ಲೆಕ್ಕಗಳಿಗೆ ಹಚ್ಚಬಾರದು.

$\frac{೩}{೧೬}\times ೩$ ಈ ಗುಣಾಕಾರವನ್ನು $\frac{೩}{೧೬}\times\frac{೩}{೧}$ ಹೀಗೆ ಇಟ್ಟುಕೊಳ್ಳಲಿಕ್ಕೆ ಕೊಡಬಾರದು.

ಸಂಖ್ಯೆಗಳನ್ನು ಅಪೂರ್ಣಾಂಕಗಳಂತೆ ಬರೆದುಕೊಳ್ಳುವ ಹುಚ್ಚು ಹುಡುಗರಿಗೆ ಬಹಳ ಇರುವದು. ೧೦ + ೧೨ − ೮ ಈ ಲೆಕ್ಕವನ್ನು ಎಷ್ಟೋ ಹುಡುಗರು $\frac{೧೦}{೧}+\frac{೧೨}{೧}=\frac{೨೨}{೧}$; $\frac{೨೨}{೧}-\frac{೮}{೧}=\frac{೧೪}{೧}$ ಹೀಗೆ ಮಾಡುವದು ಅಪರೂಪವಲ್ಲ.

ಇದರ ಕಾರಣವೇನೆಂದರೆ ಅಧಿಕ ಋಣ ಮುಂತಾದ ಚಿಹ್ನಗಳಿಂದ ಕೂಡಿದ ಲೆಕ್ಕಗಳು ಅಪೂರ್ಣಾಂಕಗಳಲ್ಲಿಯೇ ಬರುವವೆಂಬ ಅವರ ಭಾವನೆ. ಇದು ನಮ್ಮ ತಪ್ಪೋ ಅವರ ತಪ್ಪೋ?

೩. ಅಪೂರ್ಣಾಂಕಗಳ ಭಾಗಾಕಾರ: –

(ಅ)
$$\frac{೨}{೩} \div \frac{೫}{೪}$$
$$= \frac{೮}{೧೨} \div \frac{೧೫}{೧೨}$$
$$= \frac{೮}{೧೫}$$

(ಬ)
$$\frac{೨}{೩} \div \frac{೫}{೪}$$
$$= \frac{೨ \times ೪}{೩ \times ೫}$$
$$= \frac{೮}{೧೫}$$

(ಕ)
$$\frac{೨}{೩} \div \frac{೫}{೪}$$
$$= \frac{೨}{೩} \times \frac{೪}{೫}$$
$$= \frac{೮}{೧೫}$$

(ಕ) ದಲ್ಲಿ ತೋರಿಸಿದಂತೆ ಒಂದೇ ರೀತಿಯನ್ನು ಯಾವಾಗಲೂ ಬೇಸರ ಬರುವಂತೆ ಉಪಯೋಗಿಸದೆ ಶಿಕ್ಷಕರು (ಅ) (ಬ) ಮಾದರಿಗಳನ್ನೂ ಹುಡುಗರಿಗೆ ಕಲಿಸಿ ಕೆಲವು ದಿವಸ (ಅ) ದಲ್ಲಿಯ ರೀತಿಯನ್ನೂ ಕೆಲವು ದಿನ (ಬ) ದಲ್ಲಿಯ ರೀತಿಯನ್ನೂ ಕೆಲವು ಸಾರೆ (ಕ) ದಲ್ಲಿ ತೋರಿಸಿದಂತೆಯೂ ಮಾಡಿಸಿಕೊಂಡರೆ ಭಾಗಾಕಾರದ ಕೃತಿಯ ಜ್ಞಾನವು ಹುಡುಗರಿಗೆ ಈಗಳಿಗಿಂತ ಹೆಚ್ಚು ಚೆನ್ನಾಗಿ ಆಗುವದೆಂಬದರಲ್ಲಿ ಸಂಶಯವಿಲ್ಲ. ಯಾಕೆಂದರೆ ವಸ್ತುಗಳನ್ನು ಉಪಯೋಗಿಸಲಿ, ಉಪಯೋಗಿಸದಿರಲಿ, ಹೇಗೇ ಕಲಿಸಲಿ; ಈ ಮಾದರಿಗಳು ಪೂರಾ ಯಾಂತ್ರಿಕ ರೀತಿಗೆ ಒಯ್ದು ಹಚ್ಚುವ ಮೆಟ್ಟಿಲುಗಳಾಗಿರುತ್ತವೆ ಇವುಗಳಲ್ಲಿ ವಿದ್ಯಾರ್ಥಿಗಳ ಮಾನಸಿಕ ಚಟುವಟಿಕೆಗೂ, ಬುದ್ಧಿಗೂ ರೀತಿಗಳನ್ನು ತಿಳಿದು ನೋಡಿ ಹಚ್ಚುವ ಕುಶಲತೆಗೂ ಅವಕಾಶವನ್ನು ಕೊಟ್ಟಿರುತ್ತದೆ. ನಮ್ಮ ಶಾಲೆಗಳಲ್ಲಿ ಹೊಸ ಪಾಠಕ್ಕೂ, ರೂಢಿಯ ಪಾಠಗಳಿಗೂ ನಡುವಿನ ಅವಧಿಯಲ್ಲಿ ಯಾವ ಪದ್ಧತಿಯಿಂದ ಕಲಿಸಬೇಕೆಂಬದರ ಕಡೆಗೆ ಶಿಕ್ಷಕರ ಲಕ್ಷವು ಸಾಕಷ್ಟು ಹೋಗಿಲ್ಲ. ಇಂಥ ಪದ್ಧತಿಗಳನ್ನು ಚರ್ಚಿಸುವದು ನನಗೆ ಅನುಭವದಿಂದ ಇಷ್ಟವಾಗಿ ತೋರುವದರಿಂದ ನನ್ನ ಬಾಂಧವರಾದ ಶಿಕ್ಷಕರಿಗಾಗಿ ನನಗೆ ಬಂದ ಕೆಲವು ಮಾತುಗಳನ್ನು ಬರೆದಿದ್ದೇನೆ.

ಸಾಮಾನ್ಯ (ವ್ಯವಹಾರೀ) ಅಪೂರ್ಣಾಂಕಗಳು

ಹಿಂದಿನ, ಈಗಿನ ಅಂಕಗಣಿತ ಶಿಕ್ಷಣ ಪದ್ಧತಿಯೊಳಗಿನ ತಾರತಮ್ಯವನ್ನು ಸ್ವಲ್ಪದರಲ್ಲಿ ಹೇಳಬೇಕಾದರೆ ವಿದ್ಯಾರ್ಥಿಯು ಹಳೆಯ ಪದ್ಧತಿಯಲ್ಲಿ ಶಿಕ್ಷಕನು ಹೇಳಿದ್ದನ್ನು ಚನ್ನಾಗಿ ಕೇಳಿಕೊಂಡು ಅದನ್ನು ಸರಿಯಾಗಿ ನೆನಪಿನಲ್ಲಿಟ್ಟುಕೊಂಡು ಅದರಂತೆ ಮಾಡಲಿಕ್ಕೆ ಕಲಿಯಬೇಕಾಗಿತ್ತು. ಹೊಸ ಪದ್ಧತಿಯಲ್ಲಿ ವಿದ್ಯಾರ್ಥಿಯು ತನಗೆ ಮಾಡಲಿಕ್ಕೆ ಇಷ್ಟವೆಂದು ಅನಿಸುವ ವ್ಯವಹಾರದಲ್ಲಿ ಬರಬಹುದಾದಂಥ ಒಂದು ಕೆಲಸದಲ್ಲಿ ತನ್ನ ಯಾವತ್ತು ಮನಸ್ಸನ್ನು ಹಾಕುವಂತೆ ಮಾಡಬೇಕಾಗಿರುವದು. ಹಿಂದಿನ ಪದ್ಧತಿಯಲ್ಲಿ, ಹೇಳಿದ ರೀತಿಗಳನ್ನು ಸರಿಯಾಗಿ ನೆನಪಿಟ್ಟುಕೊಳ್ಳುವದಕ್ಕೂ ಕೊಟ್ಟ ಲೆಕ್ಕಗಳಿಗೆ ಯಾವ ರೀತಿಗಳು ಹತ್ತುವವೆಂಬದನ್ನು ನಿರ್ಣಯಿಸುವ ಜಾಣತನಕ್ಕೂ ವಿಶೇಷ ಮಹತ್ವವಿದ್ದಿತು. ಹೊಸ ಪದ್ಧತಿಯಲ್ಲಿ ಕೊಟ್ಟ ಕೆಲಸವನ್ನು ಮಾಡುವದರಲ್ಲಿ ವಿದ್ಯಾರ್ಥಿಯು ತನ್ನ ಮನ

ಸ್ಸಿನ ಶಕ್ತಿಗಳನ್ನು ಎಲ್ಲ ಬಗೆಯಿಂದಲೂ ಉಪಯೋಗಿಸಬೇಕಾಗಿರುತ್ತದೆ. ಆ ಕೆಲಸವನ್ನು ಹೇಗೆ ಮಾಡಬೇಕೆಂಬುದನ್ನೂ ತಾನೇ ಹುಡುಕಿಕೊಳ್ಳಬೇಕು. ತನಗೆ ಗೊತ್ತಿದ್ದ ಸಂಗತಿಗಳನ್ನು ಅವರಲ್ಲಿ ಅವನು ಉಪಯೋಗಿಸಿಕೊಳ್ಳಬೇಕು. ಮಾಡಿದ ಕೆಲಸವು ಸರಿಯಾಗಿರುವದೆಂದೂ ಅವನೇ ಮನಗಾಣಬೇಕು. ಇದಕ್ಕಾಗಿ ನಾವು ಮೊದಲು ಕಲಿಸುತ್ತಿದ್ದ ಪದ್ಧತಿಗಳಲ್ಲಿ ಹೆಚ್ಚುಕಡಿಮೆಮಾಡಬೇಕು.

ಮೊದಲು ೪ನೇ ಇಯತ್ತೆಗೆ ಅಪೂರ್ಣಾಂಕಗಳವಿಷಯವು ಪ್ರಾರಂಭವಾಗುತ್ತಿತ್ತು. ಈಗ ಅವನ್ನು ೨ನೇ ಇಯತ್ತೆಯಿಂದ ಹೆಚ್ಚು ಹೆಚ್ಚು ವ್ಯಾಪಕವಾಗಿ ಕಲಿಸಬೇಕು, ಅಪೂರ್ಣಾಂಕಗಳ ವಿಷಯವು ಅಂಕಗಣಿತದಲ್ಲಿ ಬಹಳ ಮಹತ್ವವುಳ್ಳದ್ದು. ಯಾಕೆಂದರೆ ಅಂಕಗಣಿತದ ಮುಂದಿನ ಅಭ್ಯಾಸ ಕ್ರಮದಲ್ಲಿ ಅವುಗಳ ಉಪಯೋಗವು ಮೇಲಿಂದಮೇಲೆ ಆಗುವದಲ್ಲದೆ ಅವುಗಳ ಸಂಬಂಧದ ಕೃತಿಗಳನ್ನು ಚನ್ನಾಗಿ ತಿಳಿದುಕೊಂಡು ಮಾಡಿದ (ಈ ತಿಳುವಳಿಕೆಯಲ್ಲಿ ವಿದ್ಯಾರ್ಥಿಯ ಯೋಗ್ಯತೆಗನುಸರಿಸಿ ಹೆಚ್ಚೆಚ್ಚಿನ ಅಂತಸ್ತುಗಳಿರುವವು) ಗಣಿತ ಶಾಸ್ತ್ರದ ಹೆಚ್ಚಿನ ಬೆಳವಣಿಗೆಯು ಹೇಗಾಯಿತೆಂಬದರ ಚಿಕ್ಕ ಮಾದರಿಯು ಈ ವಿಷಯದಲ್ಲಿ ಪ್ರಥಮತಃ ವಿದ್ಯಾರ್ಥಿಗೆ ಕಾಣುವದು. ಗಣಿತ ಶಾಸ್ತ್ರದ ವಿಧಿಗಳು ಎಲ್ಲ ಪ್ರಕಾರದ ಸಂಖ್ಯೆಗಳಿಗೂ ಏಕಪ್ರಕಾರವಾಗಿ ಹತ್ತಬೇಕೆಂಬದೊಂದು ಶಾಸ್ತ್ರಜ್ಞರ ದೃಷ್ಟಿಯಿದ್ದಿತು. ೩ರಲ್ಲಿ ೫ ನ್ನು ಕಳೆಯಲಿಕ್ಕೆ ಬರುವದೇನು? ಇಲ್ಲ. ಆದರೆ ಶಾಸ್ತ್ರ ದೃಷ್ಟಿಯಿಂದ ಬರುವದಿಲ್ಲವೆಂದು ಅನ್ನುವದಿಲ್ಲ. ಕಳೆದರೆ ಋಣ ೨ (–೨) ಬರುವದೆಂದು ಹೇಳುವ ರೂಢಿ ಇದೆ. ಋಣ ಸಂಖ್ಯೆಗಳ ರೀತಿಗಳನ್ನು ಒಮ್ಮೆ ಕಲಿತೆವೆಂದರೆ ಲೆಕ್ಕಗಳನ್ನು ಮಾಡುವಾಗ ವಿಶೇಷ ಸೌಕರ್ಯವು ಅದರಿಂದ ಲಭಿಸುವದು. ಹಾಗೆಯೇ ೧ಕ್ಕೆ ೩ರಿಂದ ಭಾಗಿಸಲಿಕ್ಕೆ ಬರುವದಿಲ್ಲವೆಂದು ಹೇಳುವದಿಲ್ಲ, ಆದರೆ ಉತ್ತರವು ಒಂದು ಮೂರನೆಯ ಅಂಶವು ಬಂದಿತೆಂದು ಅನ್ನುವೆವು.

ಅಪೂರ್ಣಾಂಕಗಳನ್ನು ಕಲಿಯುವ ಮುಂಚೆ ಭಾಗಾಕಾರವನ್ನೂ ವಿವಿಧ ಪರಿಮಾಣಗಳ ರೂಪಾಂತರನ್ನೂ ಕಲಿತಿರುವೆವು. ರೂಪಾಂತರದಲ್ಲಿ ಇಳಿಕೆಯ ಮತ್ತು ಏರಿಕೆಯ ರೂಪಾಂತರಗಳೆಂದು ಎರಡು ವಿಧವಾಗಿರುವವು. ಏರಿಕೆಯ ರೂಪಾಂತರದಲ್ಲಿ ಸಿಕ್ಕ ಸಿಕ್ಕ ಹಾಗೆ ಲೆಕ್ಕವನ್ನು ಹೇಳಿದರೆ ನಮಗೆ ಬರುವದಿಲ್ಲ. ಉದಾ– ೬೦ ಪೈಗಳಿಗೆ ಆಣೆಗಳ ರೂಪ ಕೊಡಿರಿ ಎಂದರೆ ಬರುವದು; ಆದರೆ ೫ ಪೈಗಳಿಗೆ ಆಣೆಗಳ ರೂಪ ಕೊಡಿರಿ ಎಂದರೆ ಬರುವದಿಲ್ಲೆಂದು ಸುಮ್ಮನೇ ಕೂಡಬೇಕಾಗುವದು. ಹೀಗೆ ರೂಪಾಂತರ ಮಾಡುವ ಅಗತ್ಯವು ಲೆಕ್ಕಗಳಲ್ಲಿ ಮೇಲಿಂದಮೇಲೆ ಬೀಳುತ್ತದೆ. ಇದನ್ನು ಸಾಧ್ಯ ಮಾಡುವದೊಂದು ನಮಗೆ ಅಪೂರ್ಣಾಂಕಗಳ ಪ್ರಯೋಜನವು.

ಭೌತಿಕ ಶಾಸ್ತ್ರದ ಅಭ್ಯಾಸಕ್ಕಾಗಿ ಸೂಕ್ಷ್ಮವಾದ ಅಳತೆಗಳನ್ನು ಮಾಡಬೇಕಾಗುವದು. ಅದಕ್ಕೆ ಸಾಕಷ್ಟು ಸಣ್ಣ ಪರಿಮಾಣಗಳು ವ್ಯವಹಾರದಲ್ಲಿ ಇಲ್ಲ. ಉದಾ– ಈಗ ನಾನು ಬರೆಯುತ್ತಿರುವ ಕಾಗದವು ಎಷ್ಟು ದಪ್ಪವಿದೆ ಎಂಬದನ್ನು ಹೇಳಬೇಕಾದರೆ

ಇಂಚಿನಿಂದ ಇಲ್ಲವೆ ನೂಲಿನಿಂದ ಅಳೆಯಲಿಕ್ಕೆ ಹೇಗೆ ಸಾಧ್ಯವಾಗಬೇಕು? ಇದಕ್ಕಾಗಿ ಬೇರೆ ಎಕ್ಕಮುಗಳನ್ನು ಕಲ್ಪಿಸಬೇಕಾಗುವದು. ಇಂಥ ಎಕ್ಕಮುಗಳನ್ನು ಒಂದು ವ್ಯವಸ್ಥಿತ ರೀತಿಯಿಂದ ರಚಿಸುವದೇ ಅಪೂರ್ಣಾಂಕಗಳ ಕೆಲಸವು.

ಯಾವದೇ ಒಂದು ಹೊಸ ಕಲ್ಪನೆಯನ್ನು ಹುಡುಗರಿಗೆ ಕಲಿಸುವಾಗ ಬರಿಯ ಬಾಯಿಂದ ಹೇಳದೆ ಪ್ರತ್ಯಕ್ಷ ವಸ್ತುಗಳಿಂದ ಅವರ ಅನುಭವವನ್ನು ತಂದುಕೊಡಬೇಕು. ಇಂಥ ಕಲ್ಪನೆಗಳು ಅಪೂರ್ಣಾಂಕಗಳ ವಿಷಯದಲ್ಲಿ ಯಾವವು ಎಂಬದನ್ನು ತುಸು ಪರೀಕ್ಷಿಸೋಣ.

(೧) ೩/೮, ೫/೮, ೭/೮ ಇತ್ಯಾದಿ ಅಪೂರ್ಣಾಂಕಗಳಲ್ಲಿ ಸ್ವಲ್ಪ ನಾವೀನ್ಯವಿರುವದು.

(ಆದರೆ ೧/೩, ೧/೬, ೧/೮ ಎಂಬವು ಮಾತ್ರ ಹೊಸರೀತಿಯಿಂದ ಬರೆಯಲ್ಪಟ್ಟಿರುವವಷ್ಟೇ ಹೊರತು ಅವುಗಳಲ್ಲಿಯ ಅರ್ಥವು ಹುಡುಗರಿಗೆ ಹೊಸದಲ್ಲ) ೧ ವಸ್ತುವಿನ ಮೂರನೆಯ ಭಾಗ ಉದಾ— ೧ ರೂಪಾಯಿಯ ಮೂರನೆಯಭಾಗ, ೧ ಫೂಟಿನ ಮೂರನೆಯಭಾಗ, ೧ ಆಣೆಯ ೬ನೆಯಭಾಗ, ೧ ದಿವಸದ ೮ನೆಯಭಾಗ ಇವುಗಳ ಅರ್ಥವು ಹೊಸದಾಗಿ ಆಗತಕ್ಕದ್ದಿರುವದಿಲ್ಲ. ಯಾಕೆಂದರೆ, ಹಾಗಿದ್ದರೆ ೧ ತಾಸಿಗೆ ೮ರಿಂದ ಭಾಗಿಸಿರಿ ಎಂಬ ಲೆಕ್ಕವನ್ನು ಹೇಳಿದಾಗ ಹುಡುಗನು ಏನು ತಿಳಿದುಕೊಂಡು ಅವನ್ನು ಮಾಡುವನು? ಭಾಗಾಕಾರದಲ್ಲಿ ೧ ದಿವಸದಲ್ಲಿ ೮ ಸರಿಯಾದ ಭಾಗಗಳನ್ನು ಮಾಡಿದರೆ ಒಂದು ಭಾಗವು ಎಷ್ಟು ಬರುವದು ಎಂಬ ಪ್ರಶ್ನೆಯ ಉತ್ತರವನ್ನೆ ತೆಗೆಯುವದಿರುವದಷ್ಟೇ ೨೪ ತಾಸು ÷ ೮=೩, ತಾಸು ಈ ಲೆಕ್ಕವನ್ನು ಹುಡುಗನು ಮಾಡಬಲ್ಲನಷ್ಟೇ. ಇನ್ನು ೩ ತಾಸು ಇದು ೧ ದಿನದ ೮ನೇ ಭಾಗವು ಎಂದು ಹುಡುಗನು ಅನ್ನುತ್ತಿರಲಿಕ್ಕಿಲ್ಲ; ಮತ್ತು, ಸಾಧಾರಣವಾಗಿ ಭಾಗಾಕಾರವನ್ನು ಕಲಿಸುವಾಗ ಹಾಗೆ ಅನ್ನಲಿಕ್ಕೆ ಕಲಿಸಿರುವದಿಲ್ಲ. ೨೪ ತಾಸುಗಳಲ್ಲಿ ೮ ಸರಿಯಾದ ಭಾಗಗಳನ್ನು ಮಾಡಿದರೆ ೧ ಭಾಗಕ್ಕೆ ೩ ತಾಸು ಬರುವದು ಎಂಬ ಮಾತಿನ ಅರ್ಥವು ಹುಡುಗರಿಗೆ ಹೊಸದಲ್ಲ. ಆದರೆ ೩/೮ ದಿನ ವೆಂಬವರಲ್ಲಿ ಮಾತ್ರ ಹೊಸ ಕ್ರಮವೊಂದಿಷ್ಟಿರುವದು. ಅದೇನೆಂದರೆ ೨೪ ತಾಸಿನಲ್ಲಿ ೮ ಸರಿಯಾದ ಭಾಗಗಳನ್ನು ಮಾಡಿ ಒಂದು ಭಾಗದ ಬೆಲೆಯನ್ನು ನಾವು ತೆಗೆಯಲಿಕ್ಕೆ ಕಲಿತಿದ್ದರೂ ಇದುವರೆಗೆ ಬರುವ ಒಂದೇ ಭಾಗಕ್ಕೆ ನಾವು ನಮ್ಮ ಲಕ್ಷವನ್ನು ಕೊಡುತ್ತಿದ್ದೆವು. ೮ನೆಯ ಭಾಗವೆಂಬ ಏಕವಚನಾಂತ ಶಬ್ದವನ್ನೇ ಇದುವರೆಗೆ ಉಪಯೋಗಿಸುವ ಲೆಕ್ಕಗಳು ಬರುತ್ತಿದ್ದವು. ೮ನೆಯ ಭಾಗವನ್ನು ತೆಗೆದು ಅಂಥ ೫ ಭಾಗಗಳನ್ನು ತಕ್ಕೊಂಡರೆ ಎಷ್ಟು ಬರುವದು? ಅಂಥ ೭ ಭಾಗಗಳನ್ನು ತಕ್ಕೊಂಡರೆ ಎಷ್ಟು ಬರುವದು? ಇತ್ಯಾದಿ ಪ್ರಶ್ನೆಗಳನ್ನು ನಾವು ಕೇಳುತ್ತಿರಲಿಲ್ಲ. ಒಂದು ವೇಳೆ ಕೇಳಿದರೂ (೨೪ ತಾಸನ್ನು ೮ ರಿಂದ ಭಾಗಿಸಿರಿ; ಬಂದ ಭಾಗಾಕಾರದ ೫ ರಷ್ಟು ತೆಗೆದುಕೊಳ್ಳಿರಿ ಎಂದು ಲೆಕ್ಕವನ್ನು ಹೇಳಿದರೆ ಹುಡುಗರು ಮಾಡಿಯೇ ಮಾಡುವರು) ಬಂದ ಉತ್ತರಕ್ಕೆ ೫/೮ನೆಯ ಭಾಗ, ೭/೮ನೆಯ ಭಾಗ ಎಂದು ಎಂದೂ ಅಂದಿಲ್ಲ. ಇದೇ ಇದರಲ್ಲಿ ಹೊಸ ಕ್ರಮವು. ೮ರಿಂದ ಭಾಗಿಸಿ ಬಂದ

ಭಾಗಾಕಾರಕ್ಕೆ ೮ನೆಯ ಭಾಗವೆನ್ನುವದೂ ಸ್ವಲ್ಪಹೊಸದು; ಭಾಗಾಕಾರದಿಂದ ಬರುವ ಎಂಟೂ ಭಾಗಗಳನ್ನು ಒಂದು ೮ನೆಯ ಭಾಗ, ಎರಡು ೮ನೇ ಭಾಗಗಳು, ಮೂರು ೮ನೇ ಭಾಗಗಳು, ನಾಲ್ಕು ೮ನೆಯ ಭಾಗಗಳು ಎಂದು ಎಣಿಸುವದು ಹೊಸದಾದ ಒಂದು ಪದ್ಧತಿಯನ್ನು ಹಾಕಿಕೊಡುವದಿರುತ್ತದೆ. ಆದ್ದರಿಂದ ೧/೮, ೨/೮, ೩/೮, ೪/೮ ಇವು ಹುಡುಗರಿಗೆ ಹೊಸ ಕಲ್ಪನೆಗಳೆಂದು ಅನ್ನಬಹುದು. ಅದಕ್ಕಾಗಿ ಅವುಗಳನ್ನು ಪ್ರತ್ಯಕ್ಷ ವಸ್ತುಗಳ ಭಾಗಗಳನ್ನು ತೋರಿಸಿ ಅವುಗಳನ್ನು ಹುಡುಗರಿಂದ ಮೇಲೆ ಬರೆದಂತೆ ಎಣಿಸಲಿಕ್ಕೆ ಹಚ್ಚುವದು ಶಿಕ್ಷಕರ ಮೊದಲನೇ ಪಾಠವಾಗಿರುತ್ತದೆ.

(೨) ಸೂಕ್ಷ್ಮವಾಗಿ ಅಳತೆಮಾಡಲಿಕ್ಕೆ ಬರಬೇಕೆಂದು ವಿವಿಧ ಪರಿಮಾಣಗಳನ್ನು ಕಲ್ಪಿಸಿಕೊಂಡಿರುವಂತೆ ಅಪೂರ್ಣಾಂಕಗಳನ್ನು ಕಲ್ಪಿಸಿದ್ದೇವೆ. ೧ ಆಣೆಯ ಕೆಲವು ಭಾಗಗಳಿಗೆ ಮಾತ್ರ ವ್ಯವಹಾರದಲ್ಲಿ ಸ್ವತಂತ್ರವಾದ ಹೆಸರುಗಳಿರುವವು, ಉದಾ— ಪೈ, ದುಡ್ಡು ಆದರೆ ಅಪೂರ್ಣಾಂಕಗಳ ರೀತಿಯಿಂದ ೧ ಆಣೆಯ ೨ನೆಯ ಭಾಗ, ೩ನೆಯಭಾಗ, ೪ನೆಯಭಾಗ, ೬ನೆಯಭಾಗ, ೮ನೆಯಭಾಗ ಹೀಗೆ ಬೇಕಾದಷ್ಟು ಅಳತೆಗಳನ್ನು ಮಾಡಿಕೊಳ್ಳಲಿಕ್ಕೆ ಬರುತ್ತದೆ. ಆದ್ದರಿಂದ ಈ ಭಾಗಗಳು ವಿವಿಧ ಪರಿಮಾಣಗಳನ್ನು ಹೋಲುವವು, ಶಿಕ್ಷಕರು ಈ ಮಾತನ್ನು ಚನ್ನಾಗಿ ನೆನಪಿನಲ್ಲಿಡಬೇಕು. ಯಾಕೆಂದರೆ ಇದರ ಮೇಲಿಂದ ಕೂಡಲೆ ಒಂದು ಮಹತ್ವದ ಅನುಮಾನವು ಹೊರಡುವದು. ಅದಾವದೆಂದರೆ ವಿವಿಧ ಪರಿಮಾಣಗಳಿಗೆ ರೂಪಾಂತರವಿರುವಂತೆ ಅಪೂರ್ಣಾಂಕಗಳೆಂದು ಅನ್ನುವ ಈ ಭಾಗಗಳಿಗೆ ಸಹ ರೂಪಾಂತರವಿರಬೇಕು. ನಿಜವಾಗಿ ಹಾಗೆ ಇರುವದು,

೧೨ ಪೈಗಳನ್ನು ನಾವು ಬೇರೆ ಬೇರೆ ಅಳತೆಗಳಲ್ಲಿ ಬರೆಯಬಹುದು. ಹೀಗೆ—

೧೨ (೧ ಪೈ)* = ೬(೨ ಪೈ) = ೩(೪ ಪೈ) = ೪(೩ ಪೈ) = ೨(೬ ಪೈ)

ಇದರಂತೆ ೧೨/೧೨ ಆ = ೬/೬ ಆ = ೩/೩ ಆ = ೪/೪ ಆ = ೨/೨ ಆ

ಇವೆಲ್ಲ ೧ ಆಣೆಗೆ ಸರಿ ಇರುವದರಿಂದ ೨/೨ ಆ = ೪/೪ ಆ; ∴ ೧/೨ ಆ = ೨/೪ ಆ

೨/೨ ಆ = ೬/೬ ಆ; ∴ ೧/೨ ಆ = ೩/೬ ಆ

೨/೨ ಆ = ೧೨/೧೨ ಆ; ∴ ೧/೨ ಆ = ೬/೧೨ ಆ

೩/೩ ಆ = ೬/೬ ಆ; ∴ ೧/೩ ಆ = ೨/೬ ಆ

೩/೩ ಆ = ೧೨/೧೨ ಆ; ∴ ೧/೩ ಆ = ೪/೧೨ ಆ

ಪೈ, ದುಡ್ಡು ಎಂಬ ಪರಿಮಾಣಗಳು ವ್ಯವಹಾರದಲ್ಲಿ ಬಳಕೆಯಲ್ಲಿದ್ದದರಿಂದ ೧೨ ಪೈ=೪ ದುಡ್ಡು ಎಂಬ ಮಾತಿನ ಜ್ಞಾನವು ಬೇಗನೆ ಮಕ್ಕಳಿಗೆ ಆಗುವದು. ಬೇರೆ ಬೇರೆ ಪರಿಮಾಣಗಳ ನಡುವಿನ ಇಂಥ ಎಷ್ಟೋ ಪರಸ್ಪರ ಸಂಬಂಧಗಳನ್ನು ನಾವು ಕೋಷ್ಟಕಗಳಲ್ಲಿ ಬಾಯಿಪಾಠಮಾಡುತ್ತೇವೆ. ಸಣ್ಣಮಕ್ಕಳ ಲಕ್ಷದಲ್ಲಿ ಅವು ಚನ್ನಾಗಿ ಬರಬೇಕೆಂದು ಪ್ರತ್ಯಕ್ಷ ಅಳತೆ ತೂಕಗಳಿಂದ ಅವುಗಳನ್ನು ದೃಢಪಡಿಸುತ್ತೇವೆ. ಇದರಂತೆ ಅಪೂರ್ಣಾಂ

* ಆವರಣದ (ಕಂಸದ) ಹಿಂದೆ ಗುಣನ ಚಿಹ್ನವದೆ ಎಂದು ತಿಳಿಯಬೇಕು.

ಕದ ರೀತಿಯಿಂದ ಕಲ್ಪಿಸಿಕೊಂಡ ಅಸಂಖ್ಯ ಭಾಗಗಳಿರುವವು (ಇವುಗಳಲ್ಲಿ ಬಹಳ ಸ್ವಲ್ಪ ಭಾಗಗಳಿಗೆ ಮಾತ್ರ ರೂಢಿಯ ಹೆಸರುಗಳಿರುವವು). ಹಿಂದೆ ಹೇಳಿದಂತೆ ಒಂದು ೩ನೇ ಅಂಶವೆಂಬ ಮಾತು ಹುಡುಗರಿಗೆ ಸ್ವಲ್ಪ ಹೊಸದು; ಎರಡು ೭ನೆಯ ಅಂಶವೆಂಬದು ಇನ್ನೂ ಹೆಚ್ಚು ಗಡಚಾದ ಕಲ್ಪನೆ; ಅವುಗಳ ನಡುವಿನ ಪರಸ್ಪರ ಸಂಬಂಧವೆಂಬದೊಂದು ಮಾತು ಸೇರಿದರೆ ಇನ್ನಿಷ್ಟು ತೊಡಕುಳ್ಳ ಕಲ್ಪನೆಯಾಗುವದು. ಆದ್ದರಿಂದ ದೃಶ್ಯ ವಸ್ತುವಿನ ಸಾಧನದಿಂದ ಅವನ್ನು ಉದಾಹರಿಸುವದು ಅತ್ಯಂತ ಅವಶ್ಯವಿರುವದು.

ಅಪೂರ್ಣಾಂಕಗಳ ಬೇರೀಜು ವಜಾಬಾಕಿಗಳನ್ನೂ ಹೀಗೆ ಕಣ್ಣಿಗೆ ಕಾಣುವಂತೆ ಆಕೃತಿ ಮೊದಲಾದವುಗಳನ್ನು ತೆಗೆದು ತೋರಿಸಬಹುದು. ಆದರೆ ಆಕೃತಿಯ ಸಹಾಯದಿಂದ ನಾಲ್ಕಾರು ಬೇರೀಜಿನ ಲೆಕ್ಕಗಳ ಉತ್ತರಗಳನ್ನು ತೆಗೆದು ಆ ಉತ್ತರಗಳನ್ನು ನಿರೀಕ್ಷಿಸಿ ಅವುಗಳ ಮೇಲಿಂದ ಒಂದು ಯಾಂತ್ರಿಕ ವಿಧಿಯನ್ನು ಹೊಂದಿಸಿಕೊಂಡರೆ ನಾವು ಲೆಕ್ಕಮಾಡಲಿಕ್ಕೆ ಕಲಿತಂತಾಗುವದಿಲ್ಲವೆಂಬವನ್ನು ಶಿಕ್ಷಕರು ಇಲ್ಲಿ ವಿಮರ್ಶಿಸಬೇಕು. ಅಪೂರ್ಣಾಂಕಗಳ ಗುಣಾಕಾರವನ್ನು ಕಲಿಸುವಾಗ ಬಹುತರ ಎಲ್ಲ ಶಿಕ್ಷಕರು ಈ ತರದ ಭ್ರಾಮಕ ಕಲ್ಪನೆಗೆ ಅವಕಾಶವನ್ನು ಕೊಡುವದುಂಟು.

(೩) ಇದುವರೆಗೆ ಅಪೂರ್ಣಾಂಕಗಳ ವಿಷಯದಲ್ಲಿ ಬರುವ ಎರಡು ಹೊಸ ಕಲ್ಪನೆಗಳನ್ನು ಹೇಳಿದೆವು. ಇನ್ನೊಂದು ತೊಡಕುಳ್ಳ ಕಲ್ಪನೆಯಿರುವದು. ಉದಾ— ೧ ವಸ್ತುವಿನ ೩ನೇ ಭಾಗದ ನಾಲ್ಕನೇ ಭಾಗವು ಅದರ ೧೨ನೇ ಭಾಗವಾಗುವದು—ಎಂಬ ಮಾತು. ಇಲ್ಲಿಯಾದರೂ ಆ ಕಲ್ಪನೆಗಿಂತ ಅದರ ಅರ್ಥವನ್ನು ಹೇಳುವ ಭಾಷೆಯೇ ಹೆಚ್ಚು ಗಡಚಾದದ್ದು ಎಂದು ಹೇಳಬೇಕು. ಯಾಕೆಂದರೆ "೧ ಹಣ್ಣಿನಲ್ಲಿ ಮೊದಲು ನಾವು ೩ ಸರಿಯಾದ ಪಾಲುಗಳನ್ನು ಮಾಡಿದೆವು. ಆ ಮೇಲೆ ಒಂದೊಂದು ಪಾಲಿನಲ್ಲಿ ಮತ್ತೆ ನಾಲ್ಕು ನಾಲ್ಕು ಸರಿಯಾದ ಸಣ್ಣ ಹೋಳುಗಳನ್ನು ಮಾಡಿದೆವು. ಈಗ ಆ ಹಣ್ಣಿನಲ್ಲಿ ಸಣ್ಣ ಸಣ್ಣ ಹೋಳುಗಳು ಒಟ್ಟಿಗೆಷ್ಟಾದವು? " ಎಂಬ ಪ್ರಶ್ನೆಯು ಬರಿಯ ಮಗ್ಗಿಯಮೇಲಿನ ಬಾಯಿ ಲೆಕ್ಕವಾಗಿರುತ್ತದೆಂದು ಹೇಳಬಹುದು. "ಒಂದು ಪಾಲಿನಲ್ಲಿ ೪ ಹೋಳುಗಳಾದರೆ ೩ ಪಾಲಿನಲ್ಲಿ ಎಷ್ಟು" ! "ನಾಲ್ಕುಮೂರಲೆ ಹನ್ನೆರಡು " ಆದ್ದರಿಂದ ೩ನೇ ಭಾಗದ ೪ನೇ ಭಾಗವು ೧೨ನೇ ಭಾಗವಾಗುವದು. ೩ನೇ ಭಾಗದ ನಾಲ್ಕನೇ ಭಾಗವೆಂಬದು ಸೂಕ್ಷ್ಮವಾದ ಕಲ್ಪನೆಯಾದ್ದರಿಂದ ಅದನ್ನು ಪ್ರತ್ಯಕ್ಷವಾಗಿ ಯಾವದೊಂದು ವಸ್ತುವಿನಲ್ಲಿ ಭಾಗಮಾಡಿ ತೋರಿಸಬೇಕು. ಈ ಕಲ್ಪನೆಯೇ ಗುಣಾಕಾರದ ಅರ್ಥವನ್ನು ತಿಳಿದುಕೊಳ್ಳಲಿಕ್ಕೆ ಸಹಾಯಮಾಡುವದು.

(೪) ಅಪೂರ್ಣಾಂಕಗಳ ಭಾಗಾಕಾರವನ್ನು ಪ್ರತ್ಯಕ್ಷ ವಸ್ತುಗಳ ದೃಷ್ಟಾಂತದಿಂದ ತೋರಿಸುವದು ಸುಲಭವಾಗಿಲ್ಲ. ತೋರಿಸಲಿಕ್ಕೊಂದು ಕೆಲವು ಸುಲಭವಾದ ಪ್ರಕಾರಗಳನ್ನು ತಕ್ಕೊಳ್ಳಬಹುದು. ಆದರೆ ಆಕೃತಿಯನ್ನು ತೆಗೆದ ಮಾತ್ರದಿಂದ ಇಲ್ಲವೆ ಕಾಗದದ

ಭಾಗಗಳಿಂದ ಒಂದು ಲೆಕ್ಕದ ಉತ್ತರವನ್ನು ತಿಳಿದುಕೊಂಡ ಮಾತ್ರದಿಂದ ಶಿಕ್ಷಕನು ಆ ವಿಷಯವನ್ನು ಕಲಿಸಿದಂತಾಯಿತೆಂದು ತಿಳಿಯಬಾರದು. ಪೂರ್ಣಾಂಕಗಳ ಕೃತಿಗಳನ್ನು ಹೋಲುವಂಥ ಸಣ್ಣ ಸಣ್ಣ ಲೆಕ್ಕಗಳನ್ನು ಮಾಡುತ್ತ ಮಾಡುತ್ತ ಪಾಠದಲ್ಲಿ ಪ್ರಕೃತವಾದ ಮುಖ್ಯ ಲೆಕ್ಕವನ್ನು ಮಾಡಲಿಕ್ಕೆ ವಿದ್ಯಾರ್ಥಿಯು ಕಲಿಯಬೇಕೆಂಬದನ್ನು ಮರೆಯಬಾರದು. ಪೂರ್ಣಾಂಕಗಳ ಕೃತಿಗಳಿಂದ ಅಪೂರ್ಣಾಂಕಗಳ ಕೃತಿಗಳ ಅರ್ಥವನ್ನು ತಿಳಿಸಬೇಕು. ಅಂದರೆ ಹುಡುಗನ ಮೊದಲಿನ ಜ್ಞಾನಕ್ಕೂ ಹೊಸ ಜ್ಞಾನಕ್ಕೂ ಏಕಜೀವವಾಗುವದು. ಹಾಗೆ ಮಾಡದೆ ಬರಿಯ ಪ್ರತ್ಯಕ್ಷ ವಸ್ತುಗಳನ್ನು ಉಪಯೋಗಿಸಿದ ಮಾತ್ರಕ್ಕೆ ಹುಡುಗನಿಗೆ ಪಾಠದಲ್ಲಿ ನಿಜವಾದ ಆಸ್ಥೆಯುಂಟಾಯಿತೆಂದಾಗಲಿ ಅದರಿಂದ ಅವನಿಗೆ ಹೊಸ ಜ್ಞಾನವಾಯಿತೆಂದಾಗಲಿ ತಿಳಿಯಬಾರದು. "ಪ್ರತ್ಯಕ್ಷ ವಸ್ತುಗಳನ್ನು ಉಪಯೋಗಿಸಿ ಕಲಿಸಿರಿ" ಎಂಬ ಒಂದು ಮಂತ್ರೋಪದೇಶದಿಂದ ಶಿಕ್ಷಕರ ಕೈಯಲ್ಲಿ ಶಿಕ್ಷಣಸಾರ ಸರ್ವಸ್ವವನ್ನು ಕೊಟ್ಟಂತಾಯಿತೆಂದು ಈಗಿನ ೧೦೦ಕ್ಕೆ ೯೦ ವಿದ್ಯಾರ್ಥಿ-ಶಿಕ್ಷಕರ (ಟ್ರೇಂಡರಾಗತಕ್ಕವರ) ತಲೆಯಲ್ಲಿರುವದು.

ಅಂಕಗಣಿತ ಶಿಕ್ಷಣವನ್ನು ಕುರಿತು ಕೆಲವು ಸಾಮಾನ್ಯ ವಿಚಾರಗಳು

ಪಂಡಿತ ಭೀ. ಜೀ. ಹುಲಿಕವಿ, ಎಸ್. ಟಿ. ಸಿ.

ಉಪಾಧ್ಯಾಪಕ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ

(೧)

ಅಂಕಗಣಿತ ಶಿಕ್ಷಣದ ಉದ್ದೇಶ

ಅಂಕಗಣಿತವು ಗಣಿತಶಾಸ್ತ್ರದ ಒಂದು ಭಾಗವು; ಪ್ರತಿಯೊಂದು ಶಾಸ್ತ್ರದ ಬೆಲೆಯನ್ನು ಇಲ್ಲವೆ ಮಹತ್ತ್ವವನ್ನು ಎರಡು ಪ್ರಕಾರದ ದೃಷ್ಟಿಯಿಂದ ನಿರ್ಣಯಿಸ ಬೇಕಾಗುತ್ತದೆ. (೧) ವ್ಯವಹಾರೋಪಯುಕ್ತವಾದ ಸಾಧನವೆಂಬ ದೃಷ್ಟಿಯಿಂದ; ಮತ್ತು (೨) ಆಯಾ ಶಾಸ್ತ್ರದ ಅಧ್ಯಯನವೇ ಆವಶ್ಯಕವೆಂಬ ದೃಷ್ಟಿಯಿಂದ ಗಣಿತಶಾಸ್ತ್ರಕ್ಕಾದರೂ ಈ ಮಾತು ಚೆನ್ನಾಗಿ ಅನ್ವಯಿಸುತ್ತದೆ. ಆದದರಿಂದ ಗಣಿತಶಾಸ್ತ್ರದ ಒಂದು ಭಾಗವಾದ ಅಂಕಗಣಿತವನ್ನು ಕಲಿಸುವ ಉದ್ದೇಶವನ್ನಾದರೂ ಈ ಎರಡು ತರದ ದೃಷ್ಟಿಯಿಂದ ಗೊತ್ತು ಮಾಡಿಕೊಳ್ಳಬೇಕು.

(೧) ಅಂಕಗಣಿತವು ಮನುಷ್ಯನ ವ್ಯವಹಾರದಲ್ಲಿ ಅತ್ಯುಪಯುಕ್ತವಾದ ಒಂದು ಸಾಧನವು. ಆದದರಿಂದ ಅದರ ರೀತಿಗಳೆಲ್ಲವೂ ಮನುಷ್ಯನ ಸಾಧನಗಳೇ. ಅಂತೇ ಆ

ರೀತಿಗಳು ವಿದ್ಯಾರ್ಥಿಗಳಿಗೆ ಚೆನ್ನಾಗಿ ಮನವಟ್ಟಾಗಲಿಕ್ಕೆ ಬೇಕು; ಮತ್ತು ಸರ್ವಾಂಗ ಪರಿಪೂರ್ಣವಾದ ರೀತಿಯಿಂದಲೂ, ಯೋಗ್ಯವಾದ ಪ್ರಭುತ್ವದಿಂದಲೂ ಸಾಕಷ್ಟು ತ್ವರಿ ಯಿಂದಲೂ ವ್ಯವಹಾರದಲ್ಲಿ ಅವುಗಳ ಉಪಯೋಗವನ್ನು ಸುಲಭವಾಗಿ ಮಾಡಿಕೊಳ್ಳುವ ತಿಳಿವಳಿಕೆಯು ಅವರಲ್ಲಿ ಉಂಟಾಗಲಿಕ್ಕೆ ಬೇಕು. ಆದದರಿಂದ ಅಂಕಗಣಿತದ ಪಾಠಗ ಳೆಲ್ಲವೂ ಅನುಭವದ ತಳಹದಿಯ ಮೇಲೆ ರಚಿಸಲ್ಪಟ್ಟವುಗಳಾಗಿರಬೇಕು; ಮತ್ತು ವ್ಯವ ಹಾರೋಪಯುಕ್ತತೆಯು ಅವುಗಳ ಮುಖ್ಯವಾದ ಗುರಿಯಾಗಿರಬೇಕು.

(೨) ಗಣಿತಶಾಸ್ತ್ರದ ತತ್ತ್ವಗಳನ್ನೂ ಇತಿಹಾಸವನ್ನೂ ಕಲಿಸುವದರಿಂದ, ಆ ವಿಷ ಯದಲ್ಲಿ ವಿದ್ಯಾರ್ಥಿಗಳ ಅಭಿರುಚಿಯೂ ಕುತೂಹಲವೂ ಹೆಚ್ಚುವವು. ಗಣಿತಶಾಸ್ತ್ರದ ಕ್ಷೇತ್ರವು ಎಷ್ಟು ವಿಸ್ತೃತವೂ ವ್ಯಾಪಕವೂ ಆಗಿದೆಯೆಂಬುದನ್ನು ಅರಿತರೆ, ಆ ವಿಷಯದ ಲ್ಲಿಯ ವಿದ್ಯಾರ್ಥಿಗಳ ಪ್ರೀತಿಯು ಬೆಳೆಯುವದು. ಉದಾ: ವಾಸ್ತುಶಾಸ್ತ್ರ, ಯುದ್ಧ ಶಾಸ್ತ್ರ, ಜ್ಯೋತಿಃಶಾಸ್ತ್ರ ಮೊದಲಾದ ಅನೇಕ ವಿಷಯಗಳಲ್ಲಿ ಒಂದಿಲ್ಲೊಂದು ರೂಪದಿಂದ ಗಣಿತದ ಪ್ರವೇಶವು ಇದ್ದೇ ಇದೆಯೆಂಬದನ್ನು ತಿಳಿದರೆ, ಯಾವ ವಿದ್ಯಾರ್ಥಿಯ ಮನಸ್ಸು ಆ ವಿಷಯದಲ್ಲಿ ಪೂಜ್ಯಬುದ್ಧಿಯುಳ್ಳದ್ದಾಗಲಿಕ್ಕಿಲ್ಲ ! ಹೀಗೆಯೇ 'ಸತ್ಯಪ್ರಿಯತೆ'ಯು ಗಣಿತದ ಮೂಲತತ್ತ್ವನೆಂಬುವನ್ನು ಮನವರಿಕೆ ಮಾಡಿಕೊಟ್ಟರೆ, ಹುಡುಗರು ಆ ವಿಷ ಯವನ್ನು ಮನಮುಟ್ಟಿ ಪ್ರೀತಿಸುವರೆಂಬಲ್ಲಿ ಸಂದೇಹವೇನು ?

(೨)

ಶಿಕ್ಷಕನ ಸಿದ್ಧತೆ

ಅಂಕಗಣಿತವನ್ನು ಕಲಿಸುವ ಶಿಕ್ಷಕನು ವರ್ಗದಲ್ಲಿ ಪಾಠವನ್ನು ಕಲಿಸುವದಕ್ಕೆ ಆರಂಭ ಮಾಡುವ ಮೊದಲು, ಕೆಲವೊಂದು ಪೂರ್ವಸಿದ್ಧತೆಯನ್ನು ಮಾಡಿಕೊಂಡು ಹೋಗುವದು ಅತ್ಯವಶ್ಯವು. ಅಂತಹ ಪೂರ್ವಸಿದ್ಧತೆಯನ್ನು ಕೆಳಗೆ ವಿವರಿಸಿದಂತೆ ಸಾಮಾನ್ಯವಾಗಿ ಐದು ಭಾಗಗಳಲ್ಲಿ ವಿಂಗಡಿಸಬಹುದು.

(೧) **ಅಭ್ಯಾಸ ಪತ್ರಿಕೆ:**—ಪ್ರತಿಯೊಂದು ವರ್ಗದ ಸಲುವಾಗಿ ಗೊತ್ತುಪಡಿ ಸಿದ ಬೇರೆ ಬೇರೆ ವಿಷಯಗಳ ಅಭ್ಯಾಸಪತ್ರಿಕೆಯನ್ನು ಚೆನ್ನಾಗಿ ಓದಿ ತಿಳಿದುಕೊಂಡಿರು ವದು, ಆಯಾ ವರ್ಗಕ್ಕೆ ಆಯಾ ವಿಷಯಗಳನ್ನು ಕಲಿಸುವ ಶಿಕ್ಷಕರ ಆವಶ್ಯಕವಾದ ಮತ್ತು ಮೊದಲನೆಯ ಕರ್ತವ್ಯವು. ಆದರೂ ಶಿಕ್ಷಕನು ತನ್ನ ವರ್ಗಕ್ಕೆ ತಾನು ಕಲಿಸ ತಕ್ಕ ವಿಷಯದ ಅಭ್ಯಾಸಪತ್ರಿಕೆಯನ್ನಷ್ಟೇ ಚೆನ್ನಾಗಿ ಅರಿತುಕೊಂಡರೆ ಸಾಲದು. ತನ್ನ ಸಾಲೆಯಲ್ಲಿರುವ ಪ್ರತಿಯೊಂದು ಇಯತ್ತೆಯಲ್ಲಿಯೂ ತನ್ನ ವಿಷಯವು ಎಷ್ಟೆಷ್ಟು ಕಲಿಸ ಲ್ಪಡಬೇಕೆಂಬದನ್ನಾದರೂ ಅವನು ಚೆನ್ನಾಗಿ ಅರಿತಿರಬೇಕು; ಅದರಲ್ಲಿಯೂ ತಾನು ಕಲಿ ಸತಕ್ಕ ಇಯತ್ತೆಯ ಹಿಂದಿನ ಮತ್ತು ಮುಂದಿನ ವರ್ಗಗಳಿಗೆ ತನ್ನ ವಿಷಯವು ಎಷ್ಟೆಷ್ಟು ಆಗತಕ್ಕದ್ದೆಂಬದನ್ನಂತೂ ವಿಶೇಷ ರೀತಿಯಿಂದ ತಿಳಿದುಕೊಂಡಿರಲಿಕ್ಕೆಬೇಕು; ಅಂದರೆ

ತನ್ನ ಕೈಕೆಳಗಿನ ಹುಡುಗರು ಏನನ್ನು ಕಲಿತು ಬಂದಿದ್ದಾರೆ ? ಮುಂದೆ ಏನನ್ನು ಕಲಿಯುವದಕ್ಕೆ ಹೋಗತಕ್ಕವರು ? ಎಂಬ ಕಲ್ಪನೆಯು ಸರಿಯಾಗಿ ಅವನ ಮನಸ್ಸಿನಲ್ಲಿ ಉಳಿಯುವದಲ್ಲದೆ, ಅದಕ್ಕನುಗುಣವಾಗಿ ತನ್ನ ಪಾಠಗಳನ್ನು ಏರ್ಪಡಿಸಿಕೊಳ್ಳಲು ಅನುಕೂಲವಾಗುವದು. ಅಂಕಗಣಿತದ ಅಭ್ಯಾಸ ಪತ್ರಿಕೆಯನ್ನಾದರೂ ಮೇಲೆ ಹೇಳಿದ ಸಾಮಾನ್ಯರೀತಿಯಿಂದ ನಿರೀಕ್ಷಿಸುವದಲ್ಲದೆ, ಮುಂದೆ ಹೇಳುವ ದೃಷ್ಟಿಗಳಿಂದಾದರೂ ಶಿಕ್ಷಕನು ಚೆನ್ನಾಗಿ ವಿಚಾರಮಾಡಿ ಅಧ್ಯಯನಮಾಡತಕ್ಕದ್ದು. (ಅ) **ಶಾಲೆಯ ಸ್ಥಿತಿಗತಿ**— ಹಳ್ಳಿಯೋ ? ಪಟ್ಟಣವೋ ? ವಿದ್ಯಾರ್ಥಿಗಳು ಸಾಮಾನ್ಯವಾಗಿ ಬಡವರ ಮಕ್ಕಳೋ? ಶ್ರೀಮಂತರ ಮಕ್ಕಳೋ? ವಿದ್ಯಾರ್ಥಿಗಳು ಮನೆಯಲ್ಲಿ ಮಾಡಹೇಳಿದ ಪಾಠಗಳನ್ನು ಕಲಿಯಲು ಸಮರ್ಥರೋ ಅಸಮರ್ಥರೋ? ಇತ್ಯಾದಿ.(ಆ) **ವಿದ್ಯಾರ್ಥಿಗಳು ಶಾಲೆಯನ್ನು ಬಿಡುವ ಸಾಮಾನ್ಯ ವಯೋಮಾನವು**(ಇ)ವಿದ್ಯಾರ್ಥಿಗಳ ಸರ್ವಸಾಧಾರಣವಾದ ಮೇಧಾಶಕ್ತಿಯು.(ಈ) **ಶಿಕ್ಷಕನ ಸ್ಥಿತಿಗತಿ**:—ತಾನು ಕಲಿಸತಕ್ಕ ವಿಷಯಗಳೆಷ್ಟು ? ವರ್ಗಗಳೆಷ್ಟು ? ಇತ್ಯಾದಿ. ಉದಾ: —ಒಂದೊಂದು ವರ್ಗಕ್ಕೆ ಒಬ್ಬೊಬ್ಬ ಶಿಕ್ಷಕನಿರುವ ಶಾಲೆಯಲ್ಲಿ ಕಲಿಸಬೇಕಾಗುವ ರೀತಿಯೂ, ಒಂದಕ್ಕಿಂತ ಹೆಚ್ಚು ವರ್ಗಗಳಿಗೆ ಒಬ್ಬನೇ ಶಿಕ್ಷಕನಿರುವ ಶಾಲೆಯಲ್ಲಿ ಕಲಿಸಬೇಕಾಗುವ ರೀತಿಯೂ ಒಂದೇ ಆಗಲಾರವು. (ಉ) ಎಷ್ಟು ಹುಡುಗರು ಹೆಚ್ಚಿನ ಅಧ್ಯಯನಕ್ಕಾಗಿ ಹೋಗತಕ್ಕವರು? ಎಷ್ಟು ಹುಡುಗರು ಪ್ರಸ್ತುತ ಶಾಲೆಯ ಅಭ್ಯಾಸ ಕ್ರಮವನ್ನಷ್ಟೇ ಮುಗಿಸಿ ಬಿಡತಕ್ಕವರು? ಶಾಲೆಯ ಕಟ್ಟಡ ಮತ್ತು ವರ್ಗದ ಕೋಣೆಯ ಅನುಕೂಲ್ಯತೆ, ವ್ಯವಹಾರೋಪಯುಕ್ತವಾಗುವ ರೀತಿಯಿಂದ ವಿಷಯವನ್ನು ಕಲಿಸಲಿಕ್ಕೆ ಎಷ್ಟು ತರದ ಸ್ಥಾನಿಕಾನುಕೂಲತೆಗಳಿವೆ ? ಇವೇ ಮೊದಲಾದ ಮಾತುಗಳನ್ನು ಚೆನ್ನಾಗಿ ವಿಚಾರಮಾಡಿ ಶಿಕ್ಷಕನು ಅಭ್ಯಾಸ ಪತ್ರಿಕೆಯನ್ನು ಮನನಮಾಡಿಕೊಂಡಿರಬೇಕು. ಒಟ್ಟಿನಲ್ಲಿ ಅಭ್ಯಾಸ ಪತ್ರಿಕೆಯ ವಿಷಯದಲ್ಲಿ ಹೇಳತಕ್ಕದ್ದನ್ನು ಒಂದೇ ಮಾತಿನಲ್ಲಿ ಹೀಗೆ ಹೇಳಬಹುದು. **ಶಿಕ್ಷಕನು ಅಭ್ಯಾಸಪತ್ರಿಕೆಯ ಇಂಗಿತವನ್ನು ಪೂರ್ಣವಾಗಿ ಅರಿತು ಅದನ್ನು ತನ್ನ ಕೈವಶಮಾಡಿಕೊಂಡಿರಬೇಕೇ ಹೊರತು ತಾನು ಅದಕ್ಕೆ ವಶವರ್ತಿಯಾಗಿ ಎಂದೂ ಇರಕೂಡದು.**

(೨) **ವಿಷಯಗಳ ಪರಸ್ಪರ ಸಂಬಂಧ**:—ವಿದ್ಯಾರ್ಥಿಗಳು ಕಲಿಯಬೇಕಾದ ಇತರ ವಿಷಯಗಳೊಡನೆ ಅಂಕಗಣಿತವನ್ನು ಸಂಬಂಧಿಸಿ ಹೇಗೆ ಕಲಿಸಬಹುದೆಂಬದನ್ನು ಶಿಕ್ಷಕನು ಮೊದಲೇ ಆಲೋಚಿಸಲಿಕ್ಕೆ ಬೇಕು. ಬೇರೆ ವಿಷಯಗಳೊಡನೆ ಅಂಕಗಣಿತವನ್ನು ಹೇಗೆ ಸಂಬಂಧಿಸಬಹುದೆಂಬವನ್ನು ತೋರಿಸುವದಕ್ಕಾಗಿ ಒಂದೆರಡು ಉದಾಹರಣೆಗಳನ್ನು ಇಲ್ಲಿ ಕೊಡುವೆವು.(ಅ) **ಭೂಮಿತಿಯ ರೇಖೆಗಳನ್ನು ತೆಗೆಯುವದು** ೨.೭", ೩.೫" ಮತ್ತು ೧೯" ಉದ್ದಳತೆಗಳುಳ್ಳ ರೇಖೆಗಳನ್ನು ತೆಗೆ. ಅವೆಲ್ಲವುಗಳ ಉದ್ದಳತೆಯು ಎಷ್ಟಾಯಿತೆಂಬದನ್ನು ಲೆಕ್ಕಮಾಡಿ ಹೇಳು. ಮತ್ತು ರೇಖೆಯನ್ನು ತೆಗೆದ ತೋರಿಸು. ೨೦ ಫೂ = ೧ ಇಂ. ಈ ಸ್ಕೇಲನ್ನು ಹಿಡಿದು ವರ್ಗದ ಕೋಣೆಯ ಸ್ಥಳದ

ನಕ್ಷೆಯನ್ನು ತೆಗೆ. ಆದರ ನೆಲಕ್ಕೆ ಕಟ್ಟಿಗೆಯ ಹಲಗೆಗಳನ್ನು ಕೂಡ್ರಿಸಬೇಕಾದರೆ ಎಷ್ಟು ಚೌರಸ ಫೂಟು ಕಟ್ಟಿಗೆಯು ಬೇಕಾಗುವದು ? (ಆ) **ಭೂಗೋಲ**–ನಕ್ಷೆಯ ಸ್ಕೇಲು ಹೇಗಿದೆಯೆಂಬದನ್ನು ನಿರೀಕ್ಷಿಸು. ಒಂದು ಪಟ್ಟಣದಿಂದ ಇನ್ನೊಂದು ಪಟ್ಟಣದ ಅಂತರವೆಷ್ಟು ? ಕಾಲುನಡಿಗೆಯಿಂದ, ಕಾಲುಗಾಡಿಯಿಂದ ಇಲ್ಲವೆ ಮೋಟರಿನಿಂದ ಪ್ರವಾಸ ಮಾಡಲು ಎಷ್ಟು ವೇಳೆ ಹಿಡಿಯುವದು ? ಒಂದು ಪಟ್ಟಣದಿಂದ ಇನ್ನೊಂದು ಪಟ್ಟಣದ ನಡುವೆ ಇರುವ ನಿಜವಾದ ಅಂತರವು ನಕ್ಷೆಯಲ್ಲಿಯ ಅಂತರದ ಎಷ್ಟು ಮಡಿ ಇರುವದು? (ಇ) **ಇತಿಹಾಸ:**— ಮುಸಲ್ಮಾನರು, ಮೊಗಲರು ಮತ್ತು ಮಹಾರಾಷ್ಟ್ರರು ಇವರು ಹಿಂದುಸ್ಥಾನದಲ್ಲಿ ಆಳಿದ ವರ್ಷ ಸಂಖ್ಯೆಯು ಚೆನ್ನಾಗಿ ತಿಳಿಯುವಂತೆ ಒಂದು ಪಟವನ್ನು ಮಾಡಿತೋರಿಸು. ಬೇರೆ ಬೇರೆ ಯುದ್ಧಗಳಲ್ಲಿದ್ದ ಸೈನಿಕರ ಸಂಖ್ಯೆಯನ್ನು ತೆಗೆದುಕೊಂಡು ಅವುಗಳಲ್ಲಿ ಮಡಿದವರ ಪ್ರಮಾಣವು ನೂರಕ್ಕೆ ಎಷ್ಟರಂತೆ ಆಗುವ ದೆಂಬದನ್ನು ತೋರಿಸು.

(೩) **ಪಠ್ಯಪುಸ್ತಕ:**—ಅಂಕಗಣಿತವನ್ನು ಕಲಿಸುವಾಗ ಪಠ್ಯಪುಸ್ತಕವನ್ನು ಬಹಳ ಜಾಣತನದಿಂದ ಉಪಯೋಗಿಸಬೇಕಾಗುವದು. ಯಾಕಂದರೆ ಇನ್ನೊಬ್ಬರಿಂದ ರಚಿತವಾದ ಪಠ್ಯ ಪುಸ್ತಕವು ನಮ್ಮ ಕೊರತೆಗಳನ್ನು ಚೆನ್ನಾಗಿ ಪೂರಯಿಸಲು ಎಂದೂ ಸಮರ್ಥವಾಗಲಾರದು. ಆದದರಿಂದ ಪಠ್ಯಪುಸ್ತಕವನ್ನೇ ಸಂಪೂರ್ಣವಾಗಿ ಅವಲಂಬಿಸು ವದು ಹಿತಕರವಲ್ಲ. ಹುಡುಗರಿಗೆ ಹೇಳತಕ್ಕ ಉದಾಹರಣೆಗಳು ರೂಢಿಯ ವ್ಯವಹಾರಕ್ಕೆ ತಕ್ಕವೂ, ಸಂದಿಗ್ಧವಲ್ಲದವೂ ಇರಬೇಕು; ಅವು ಕ್ರಮಕ್ರಮವಾಗಿ ಕಠಿನವಾದವುಗಳಿರ ಬೇಕು; ಒಂದೇ ಮಾದರಿಯ ಉದಾಹರಣಗಳು ಬೇಸರವಾಗುವಷ್ಟು ಬಹು ಸಂಖ್ಯಾಕ ವಾಗಿರಬಾರದು; ರೂಢಿಯು ಸಾಕಷ್ಟು ಆಗದೆ, ರೀತಿಯಾಗಲಿ ತತ್ತ್ವವಾಗಲಿ ಮರೆತು ಹೋಗುವಷ್ಟು ಅಲ್ಪಸಂಖ್ಯಾಕವಾಗಿಯೂ ಇರಬಾರದು. ಇವೇ ಮುಂತಾದ ಸಂಗತಿ ಗಳನ್ನು ವಿಚಾರಮಾಡಿ ಶಿಕ್ಷಕನು ಸ್ವಂತದ ಅನುಭವ, ಜ್ಞಾನ, ಕುಶಲತೆ ಮತ್ತು ಕಲ್ಪ ಕತ್ವ ಇವೆಲ್ಲವುಗಳನ್ನು ಸಂಪೂರ್ಣವಾಗಿ ಬೆರೆಸಿ ಪಠ್ಯಪುಸ್ತಕವನ್ನು ಉಪಯೋಗಿಸ ತಕ್ಕದ್ದು.

(೪) **ಸಾಲೆಯಲ್ಲಿ ರೂಢವಾಗಿರುವ ಪದ್ಧತಿಗಳು:**— ಅಂಕಗಣಿತದ ಕೆಲವು ವಿಶಿಷ್ಟವಾದ ಪದ್ಧತಿಗಳು ಸಾಲೆಯ ಎಲ್ಲ ಇಯತ್ತೆಗಳಲ್ಲಿ ಒಂದೇ ವಿಧವಾಗಿ ರುವದು ಒಳ್ಳೆಯದು. ಉದಾ: ವ್ಯವಕಲನ, ವರ್ಗಮೂಲ ಇಲ್ಲವೆ ಘನಮೂಲ, ದಶಾಂಶಗಳ ಭಾಗಾಕಾರ ಇತ್ಯಾದಿಗಳನ್ನು ಒಂದಕ್ಕಿಂತ ಹೆಚ್ಚು ರೀತಿಗಳಿಂದ ಮಾಡ ಬಹುದು. ಆದರೆ ಸಾಲೆಯೊಳಗಿನ ಎಲ್ಲ ವಿದ್ಯಾರ್ಥಿಗಳು ಇಂತಹವನ್ನು ಒಂದೇ ರೀತಿ ಯಿಂದ ಬಿಡಿಸುವ ಪದ್ಧತಿಯನ್ನು ರೂಢಗೊಳಿಸುವದು ಒಳ್ಳೆಯದು. ಶಿಕ್ಷಕನು ಸಾಲೆ ಯಲ್ಲಿ ರೂಢವಾಗಿರುವ ಈ ಪದ್ಧತಿಗಳನ್ನು ಅವಶ್ಯವಾಗಿ ತಿಳಿದುಕೊಂಡಿರಬೇಕು.

(೫) **ಅಂಕಗಣಿತದ ತತ್ತ್ವಗಳೂ ಇತಿಹಾಸವೂ:**— ಅಂಕಗಣಿತದೊಳ ಗಿನ ತತ್ತ್ವಗಳು ಸ್ವತಃಸಿದ್ಧವಾಗಿಯೂ ತ್ರಿಕಾಲಾಬಾಧಿತವಾಗಿಯೂ ಇವೆ; ಇದರೊ

ಳಗಿನ ಪ್ರತಿಯೊಂದು ನಿಯಮವು ಸಕಾರಣವಾಗಿರುತ್ತದೆ. ಇಂತಹ ತತ್ತ್ವಗಳನ್ನೂ ನಿಯಮಗಳನ್ನೂ ಶಿಕ್ಷಕರು ಸ್ಪಷ್ಟವಾಗಿ ತಿಳಿದುಕೊಂಡಿರಲಿಕ್ಕೆ ಬೇಕು. ವರ್ಗದಲ್ಲಿ ಆಕಸ್ಮಿಕವಾಗಿ ಜಿಜ್ಞಾಸುವಾದ ವಿದ್ಯಾರ್ಥಿಯು ಒಂದಾನೊಂದು ಪ್ರಶ್ನೆಯನ್ನು ಕೇಳಿದರೆ, ಅದನ್ನು ಸ್ಪಷ್ಟವಾಗಿ ತಿಳಿಸಿಕೊಡಲು ಶಿಕ್ಷಕನು ಸಿದ್ಧನಿರಬೇಕು. ಉದಾ:— ಗುಣಿಸುವದರಿಂದ ಉತ್ತರವು ಹೆಚ್ಚು ಬರುತ್ತದೆ; ಮತ್ತು ಭಾಗಿಸುವದರಿಂದ ಉತ್ತರವು ಕಡಿಮೆ ಬರುತ್ತದೆ; ಎಂದಬಳಿಕ ೩⁄೮ ಕ್ಕೆ ⅔ ದಿಂದ ಗುಣಿಸಿದರೆ ೧⁄೪ ಮತ್ತು ೩⁄೮ ಕ್ಕೆ ⅔ ದಿಂದ ಭಾಗಿಸಿದರೆ ೭⁄೧೬ ಯಾಕೆ ಬರುತ್ತದೆ? ಇನ್ನು ಅಂಕಗಣಿತದ ಇತಿಹಾಸವನ್ನು ಕುರಿತು ಪ್ರಸಂಗ ಬಂದಾಗ ತಕ್ಕ ಸಂಗತಿಗಳನ್ನು ಹೇಳುತ್ತಿದ್ದರೆ, ಹುಡುಗರ ಅಭಿರುಚಿಯೂ ಕುತೂಹಲವೂ ಹೆಚ್ಚಾಗುವದೆಂಬಲ್ಲಿ ಸಂದೇಹವಿಲ್ಲ; ಅದರಂತೆಯೇ ಅಂಕಗಣಿತದ ಇತಿಹಾಸವನ್ನು ಕುರಿತು ಬೇರೆ ಬೇರೆ ಪಾಠಗಳನ್ನಾದರೂ ಶಿಕ್ಷಕನು ಕಲಿಸಬಹುದು. ಇದರಿಂದ ಈ ಮೊದಲೇ ಹೇಳಿದಂತೆ ವಿದ್ಯಾರ್ಥಿಗಳು ಗಣಿತ ವಿಷಯದಲ್ಲಿ ಹೆಚ್ಚು ಪ್ರೀತಿಯುಳ್ಳವರಾಗುವರು. ಉದಾ:— ನಾಗರಿಕತೆಯ ಆರಂಭ ಕಾಲದಿಂದಲೂ ಎಣಿಕೆಯು ಮನುಷ್ಯಪ್ರಾಣಿಗೆ ಅವಶ್ಯವಾಗಿದೆ. ಮೊದಲು ೧ ಆಕಳು+೧ ಆಕಳು+೧ ಆಕಳು ಈ ವಿಧವಾಗಿ ಬಾಯಿಂದಾಗಲಿ, ಬೆರಳಿನಿಂದಾಗಲಿ ಎಣಿಸುವದೇ ಮುಖ್ಯವಾಗಿತ್ತು. ೧ ಆಕಳು + ೧ ಆಕಳು = ೨ ಆಕಳು ಎಂಬ ಎಣಿಸಲಿಕ್ಕೆ ಬರಬೇಕಾದರೆ ಎಷ್ಟೋ ವರ್ಷಗಳು ಹಿಡಿದವು. ಅನಂತರ ಎಷ್ಟೋ ವರ್ಷಗಳು ಕಳೆದ ಬಳಿಕ ಬೆರಳುಗಳು, ಹರಳುಗಳು,ಬೀಜಗಳು ಮತ್ತು ಕಾಳುಗಳು ಇಂತಹವುಗಳಿಂದ ಎಣಿಸುವದು ಪ್ರಚಾರದಲ್ಲಿ ಬಂತು. ಲಿಪಿಯು ಶೋಧವಾದ ಬಳಿಕ, ಬೆರಳುಗಳಿಗೆ ವರ್ಣಮಾಲೆಯೊಳಗಿನ ಅಕ್ಷರಗಳನ್ನು ಉಪಯೋಗಿಸಹತ್ತಿದರು. ರೋಮನರ ಅಂಕೆಗಳೆಂದರೆ ಎರಡೂ ಕೈಬೆರಳುಗಳ ಚಿಹ್ನಗಳೇ ಆಗಿವೆ. ಹಿಂದೂ ಜನರು ದಶಾಂಶ ಪದ್ಧತಿಯನ್ನು ಕಂಡುಹಿಡಿದರು; ಈ ಪದ್ಧತಿಯು ಮೂರರಿಂದಲೂ ಅರಬರಿಂದಲೂ ಯುರೋಪಖಂಡದಲ್ಲಿ ಪ್ರಸೃತವಾಯಿತು. ಇತ್ಯಾದಿ.

(೩)

ಅಂಕಗಣಿತದ ಪಾಠಗಳು

ಶಿಕ್ಷಕನು ಅಂಕಗಣಿತದೊಳಗಿನ ಪ್ರತಿಯೊಂದು ಪಾಠದ ಉದ್ದೇಶವನ್ನು ಚೆನ್ನಾಗಿ ತನ್ನ ಕಣ್ಣಮುಂದೆ ಇಟ್ಟುಕೊಳ್ಳಲಿಕ್ಕೆ ಬೇಕು; ಮತ್ತು ಆ ಉದ್ದೇಶವು ಈಡೇರುವಂತೆ ತನ್ನ ಕಲಿಸುವ ಪದ್ಧತಿಯನ್ನು ಏರ್ಪಡಿಸಿಕೊಳ್ಳಬೇಕು. ಅಂಕಗಣಿತದೊಳಗಿನ ಪಾಠದ ಕೆಲವು ಪ್ರಕಾರಗಳನ್ನು ಇದರಡಿಯಲ್ಲಿ ಕೊಡುವೆವು.

(೧) **ಹೊಸ ಪಾಠಗಳು:—** ಅಂಕಗಣಿತದೊಳಗಿನ ಯಾವದೊಂದು ಹೊಸ ವಿಷಯವನ್ನಾಗಲಿ, ತತ್ತ್ವವನ್ನಾಗಲಿ ವಿದ್ಯಾರ್ಥಿಗಳಿಗೆ ಕಲಿಸುವಂತಹ ಪಾಠಗಳು ಈ ವರ್ಗದಲ್ಲಿ ಬರುತ್ತವೆ. ಈ ಪಾಠಗಳನ್ನು ಆರಂಭಿಸುವ ಮುಂಚೆ ವಿದ್ಯಾರ್ಥಿಗಳ ಮೊದ

ಲಿನ ಜ್ಞಾನವು ಎಷ್ಟರ ಮಟ್ಟಿಗಿದೆಯೆಂಬದನ್ನು ಚೆನ್ನಾಗಿ ಪರೀಕ್ಷಿಸಬೇಕು. ಯಾಕಂದರೆ ಶಿಕ್ಷಕನ ಶಿಕ್ಷಣವು ಯಶಸ್ವಿಯಾಗುವದಾಗಲಿ, ಅಯಶಸ್ವಿಯಾಗುವದಾಗಲಿ ಇಂತಹ ಜ್ಞಾನವನ್ನೂ ಈ ಜ್ಞಾನಕ್ಕೂ ಕಲಿಸತಕ್ಕ ಹೊಸ ಪಾಠಕ್ಕೂ ಇರುವ ಸಂಬಂಧವನ್ನೂ ಹೆಚ್ಚಾಗಿ ಅವಲಂಬಿಸಿರುತ್ತದೆ. ಆದಸರಿಂದ ಹೊಸ ಪಾಠಗಳನ್ನು ಯಾವಾಗಲೂ 'ಗೊತ್ತಿದ್ದದರಿಂದ ಗೊತ್ತಿಲ್ಲದ್ದಕ್ಕೆ ಸಾಗು' ಎಂಬ ತತ್ತ್ವವನ್ನು ಅನುಸರಿಸಿ ಕಲಿಸತಕ್ಕದ್ದು. ಗೊತ್ತಿದ್ದ ಸಂಗತಿಯನ್ನು ನೆನಪು ಮಾಡುವದಕ್ಕಾಗಿಯೂ, ಅವರ ಸ್ಮರಣವನ್ನು ದೃಢಪಡಿಸುವದಕ್ಕಾಗಿಯೂ ಅದೇ ಸಂಗತಿಯ ಪುನರಾವೃತ್ತಿಯನ್ನು ಮಾಡುವದು ಒಳ್ಳೆಯದು. ಹೊಸ ಪಾಠಗಳ ಶಿಕ್ಷಣದಲ್ಲಿ 'ನಿಗಮನ' ಪದ್ಧತಿಯನ್ನೇ ಉಪಯೋಗಿಸಬೇಕು. ಇದರಿಂದ ವಿದ್ಯಾರ್ಥಿಯು ತನ್ನಷ್ಟಕ್ಕೆ ತಾನೇ ಗಣಿತದ ಸತ್ಯತ್ವವನ್ನಾಗಲಿ ತತ್ತ್ವವನ್ನಾಗಲಿ ಕಂಡು ಹಿಡಿಯುವ ಚಟವುಳ್ಳವನಾಗುವನು. ಮತ್ತು ಅವನ ಊಹಾಶಕ್ತಿಯೂ ಬೆಳೆಯುವದು; ಅಲ್ಲದೆ ವಿಷಯವನ್ನು ಚೆನ್ನಾಗಿ ಮನನಮಾಡಿಕೊಡಲಿಕ್ಕೆ ಶಿಕ್ಷಕನಿಗೆ ಒಳ್ಳೆಯ ಅವಕಾಶವು ದೊರೆಯುವದು; ಅಪವಾದಾತ್ಮಕವಾದ ಸಂಗತಿಗಳನ್ನು ಮಾತ್ರ ಶಿಕ್ಷಕನು ಅವಶ್ಯವಿದ್ದಾಗ ಹೇಳಿಕೊಡಬಹುದು. ಪಾಠಗಳನ್ನು ಕಲಿಸುವ ಸಮಯದಲ್ಲಿ ಆವಶ್ಯಕವಾಗಿ ಬೇಕಾಗುವ ಉಪಕರಣಗಳನ್ನೆಲ್ಲ ಶಿಕ್ಷಕನು ವ್ಯವಸ್ಥಿತವಾಗಿ ಇಟ್ಟುಕೊಂಡು ಸಕಾಲದಲ್ಲಿ ಅವುಗಳ ಯೋಗ್ಯೋಪಯೋಗವನ್ನು ಮಾಡಿಕೊಳ್ಳಬೇಕು. ಉಪಕರಣಾದಿಗಳನ್ನು ಇಟ್ಟುಕೊಳ್ಳುವ ಅವ್ಯವಸ್ಥೆಯ ಮೂಲಕ, ವೇಳೆಯು ವ್ಯರ್ಥವಾಗುವದಲ್ಲದೆ, ವಿಷಯಸಂಬಂಧವು ಕಡಿದಂತಾಗುವದು; ಮತ್ತು ವಿದ್ಯಾರ್ಥಿಗಳಾದರೂ ಅನವಧಾನವಿಲ್ಲದವರಾಗುವರು.

(೨) **ರೂಢಿಯ ಅಥವಾ ಆವರ್ತನದ ಪಾಠಗಳು**— ವಿದ್ಯಾರ್ಥಿಗಳು ಯಾವದೊಂದು ತತ್ತ್ವವನ್ನು ಅನುಸರಿಸಿಯಾಗಲಿ ಯಾವದೊಂದು ರೀತಿಯನ್ನು ಅನುಸರಿಸಿಯಾಗಲಿ ತಪ್ಪಿಲ್ಲದ ಪರಿಪೂರ್ಣವಾದ ಪದ್ಧತಿಯಿಂದಲೂ ಸಾಕಷ್ಟು ವೇಗದಿಂದಲೂ ಉದಾಹರಣಗಳನ್ನು ಬಿಡಿಸಲು ಶಕ್ತರಾಗ, ಬೇಕೆಂಬುದೇ ಇಂತಹ ಪಾಠಗಳ ಮುಖ್ಯೋದ್ದೇಶವು. ಯಾವದೊಂದು ತತ್ತ್ವವನ್ನಾಗಲಿ, ರೀತಿಯನ್ನಾಗಲಿ ಕಲಿತಬಳಿಕ, ಅದರ ರೂಢಿಯನ್ನು ಮಾಡುವದಕ್ಕಾಗಿ ವಿದ್ಯಾರ್ಥಿಗಳಿಗೆ ತಕ್ಕಷ್ಟು ಅವಕಾಶವನ್ನು ಕಲ್ಪಿಸಿಕೊಡುವದು ಶಿಕ್ಷಕನ ಕರ್ತವ್ಯವು ಇಂತಹ ಪಾಠಗಳಲ್ಲಿ ವಿದ್ಯಾರ್ಥಿಗಳು ತಮ್ಮ ಉಪಕರಣಗಳನ್ನು ಸರಿಯಾಗಿ ಇಟ್ಟುಕೊಂಡು ಒಮ್ಮೆಲೆ ಕೆಲಸವನ್ನು ಆರಂಭಿಸತಕ್ಕದ್ದು. ಹೊಸ ಪಾಠಗಳಲ್ಲಿ ಶಿಕ್ಷಕರೂ ಹುಡುಗರೂ ಮಾತಾಡುತ್ತಿರಬೇಕಾಗುತ್ತದೆ. ಆದರೆ ರೂಢಿಯ ಅಥವಾ ಆವರ್ತನದ ಪಾಠಗಳಲ್ಲಿ ವಿದ್ಯಾರ್ಥಿಗಳು ಮಾತನಾಡುವ ಆವಶ್ಯಕತೆಯೇ ಇಲ್ಲ. ಯಾವತರದ ಸಪ್ಪನ್ನೂ ಮಾಡದೆ, ಅವರು ತಮ್ಮ ಕೆಲಸದಲ್ಲಿಯೇ ನಿರತರಾಗಿರತಕ್ಕದ್ದು. ಶಿಕ್ಷಕನು ಕೇವಲ ಮೇಲ್ವಿಚಾರಕನಾಗಿ ವಿದ್ಯಾರ್ಥಿಗಳು ತಮ್ಮ ಕರ್ತವ್ಯವನ್ನು ಗಮನಿಸುವದು ಮಾತ್ರವಲ್ಲದೆ, ಇತರ ಯಾವ ಕಡೆಗೂ ಲಕ್ಷ್ಯಗೊಡದಂತೆ ವ್ಯವಸ್ಥೆಯನ್ನು ಕಾಯ್ದುಕೊಳ್ಳುತ್ತಿರಬೇಕು. ಆವಶ್ಯಕತೆ

ವಿದ್ದರೆ ಅವನು ಮಾರ್ಗದರ್ಶಕನಂತೆ ವರ್ತಿಸಬಹುದು; ವಿದ್ಯಾರ್ಥಿಗಳ ತಪ್ಪನ್ನು ತೋರಿಸಬಹುದು; ಆದರೆ ತಮ್ಮ ತಪ್ಪನ್ನು ವಿದ್ಯಾರ್ಥಿಗಳು ತಾವೇ ತಿದ್ದಿಕೊಳ್ಳುವದು ಅವಶ್ಯವೆಂಬದನ್ನು ಮರೆಯಕೂಡದು.

(೩) **ಸಂಯುಕ್ತ ಪಾಠಗಳು**—ಮೇಲಿನ ೧ನೆಯ ಮತ್ತು ೨ನೆಯ ವರ್ಗದ ಪಾಠಗಳ ತತ್ತ್ವಗಳು ಯಾವ ಒಂದೇ ಪಾಠದಲ್ಲಿ ಕೂಡಿಕೊಂಡಿರುವವೋ, ಅಂತಹ ಪಾಠಕ್ಕೆ ಸಂಯುಕ್ತ ಪಾಠವೆಂಬ ಹೆಸರನ್ನು ಕೊಟ್ಟಿದ್ದೇವೆ. ಯಾವದೊಂದು ತತ್ತ್ವವನ್ನಾಗಲಿ ರೀತಿಯನ್ನಾಗಲಿ ಶಿಕ್ಷಕನು ವರ್ಗದಲ್ಲಿ ಕಲಿಸಿದ ಬಳಿಕ, ತನ್ನ ವರ್ಗದೊಳಗಿನ ವಿದ್ಯಾರ್ಥಿಗಳಲ್ಲಿ ಮೂರು ಭಾಗಗಳನ್ನು ಮಾಡಬಹುದು. (೧) ಜಾಣರಾದ ವಿದ್ಯಾರ್ಥಿಗಳು. (೨) ಸಾಮಾನ್ಯ ವಿದ್ಯಾರ್ಥಿಗಳು. (೩) ಸಾಮಾನ್ಯ ವಿದ್ಯಾರ್ಥಿಗಳಿಗಿಂತ ಕೆಳಗಿನವರು. ಮೊದಲನೆಯ ವರ್ಗದ ವಿದ್ಯಾರ್ಥಿಗಳು ತಮ್ಮಷ್ಟಕ್ಕೆ ತಾವೇ ಬಿಡಿಸಬಹುದಾದಂತಹ ಅಭ್ಯಸನಗಳನ್ನು ಕೊಟ್ಟು ಬಿಡಬೇಕು. ದೊಡ್ಡ ಇಯತ್ತೆಯ ವಿದ್ಯಾರ್ಥಿಗಳಿಗೆ ಉತ್ತರಗಳಿಂದ ಕೂಡಿದ ಅಭ್ಯಸನಗಳ ಪುಸ್ತಕಗಳನ್ನು ಕೊಟ್ಟು, ಅವುಗಳಲ್ಲಿಯ ನಿಯಮಿತ ಅಭ್ಯಸನಗಳನ್ನು ಅವರಿಂದ ಬಿಡಿಸಿಕೊಳ್ಳಬೇಕು. ಇದರಿಂದ ಆತ್ಮವಿಶ್ವಾಸವೂ, ಧೈರ್ಯವೂ, ಸಾಕಷ್ಟು ರೂಢಿಯೂ ಅವರಲ್ಲಿ ಉಂಟಾಗುವವು. ೨ನೆಯ ವರ್ಗದ ವಿದ್ಯಾರ್ಥಿಗಳಿಗೆ ಶಿಕ್ಷಕನ ಮಾರ್ಗದರ್ಶಕತ್ವದಿಂದ ಬಿಡಿಸಬಹುದಾದ ಅಭ್ಯಸನಗಳನ್ನು ಕೊಡತಕ್ಕದ್ದು. ಈ ವರ್ಗದ ವಿದ್ಯಾರ್ಥಿಗಳನ್ನು ಕಾಲಕಾಲಕ್ಕೆ ತಕ್ಕಂತೆ ೧ನೆಯ ವರ್ಗಕ್ಕೆ ಕಳಿಸಬಹುದು. ೩ನೆಯ ವರ್ಗದ ವಿದ್ಯಾರ್ಥಿಗಳಿಗೆ ಮಾತ್ರ ಶಿಕ್ಷಕನ ಸಾಹಾಯ್ಯವು ಸಂಪೂರ್ಣವಾಗಿ ಬೇಕು. ಅವರಿಗೆ ಅವಶ್ಯವಿದ್ದರೆ ಕಲಿಸಿದ್ದನ್ನೇ ಮತ್ತೆ ಕಲಿಸಬೇಕು; ವೈಯಕ್ತಿಕವಾಗಿ ಅವರ ತಪ್ಪು ಕಲ್ಪನಾದಿಗಳನ್ನು ದೂರಮಾಡಬೇಕು. ಒಟ್ಟಿನಲ್ಲಿ ಈ ವರ್ಗದ ವಿದ್ಯಾರ್ಥಿಗಳಿಗೆ ಶಿಕ್ಷಣಕೊಡುವಾಗ ಶಿಕ್ಷಕನು ತನ್ನ ಬುದ್ಧಿಚಾತುರ್ಯವನ್ನೂ, ಶಿಕ್ಷಣ ಕೌಶಲವನ್ನೂ, ಮನಃಸಮಾಧಾನವನ್ನೂ ಸಂಪೂರ್ಣವಾಗಿ ಉಪಯೋಗಿಸಬೇಕು, ೧ನೆಯ ಮತ್ತು ೨ನೆಯ ವರ್ಗದ ವಿದ್ಯಾರ್ಥಿಗಳನ್ನು ಅವರವರ ಕೆಲಸಕ್ಕೆ ಹಚ್ಚಿ, ತನ್ನ ಶಕ್ತಿಯನ್ನೆಲ್ಲ ಶಿಕ್ಷಕನು ೩ನೆಯ ವರ್ಗದ ವಿದ್ಯಾರ್ಥಿಗಳ ಶಿಕ್ಷಣದಲ್ಲಿಯೇ ವಿನಿಯೋಗಿಸಬೇಕು.

(೪) **ವಿದ್ಯಾರ್ಥಿಗಳು ತಮ್ಮಷ್ಟಕ್ಕೆ ತಾವೇ ಕಲಿಯತಕ್ಕ ಪಾಠಗಳು**—ವರ್ಗದ ಕೋಣೆಯ ಉದ್ದ, ಅಗಲ, ಎತ್ತರಗಳನ್ನು ಅಳೆಯುವದು, ಕರಿಯ ಹಲಗೆಯ ಉದ್ದಗಲಳತೆಗಳನ್ನು ಅಳೆಯುವದು, ವರ್ಗದೊಳಗಿನ ವಿದ್ಯಾರ್ಥಿಗಳ ಎತ್ತರದ ಅಳತೆ ಮಾಡುವದು, ವರ್ಗದೊಳಗಿನ ವಿದ್ಯಾರ್ಥಿಗಳ ಸರಾಸರಿ ವಯೋಮಾನವನ್ನು ತೆಗೆಯುವದು, ಕರಿಯ ಹಲಗೆಯ ಇಲ್ಲವೆ, ವರ್ಗದ ಕೋಣೆಯ ಕ್ಷೇತ್ರಫಲವನ್ನು ತೆಗೆಯುವದು ಇವೇ ಮೊದಲಾದ ಪಾಠಗಳು ಈ ವರ್ಗದಲ್ಲಿ ಬರುತ್ತವೆ. ಉದಾಹರಣಗಳನ್ನು ಬಿಡಿಸಬೇಕಾದರೆ ಆವಶ್ಯಕವಾಗಿ ಕೊಟ್ಟಿರಬೇಕಾದ ಸಂಗತಿಗಳನ್ನು ವಿದ್ಯಾರ್ಥಿಗಳು

ತಾವಾಗಿಯೇ ಗೊತ್ತುಪಡಿಸಿಕೊಳ್ಳುವದು ಇಂತಹ ಪಾಠಗಳ ಮುಖ್ಯೋದ್ದೇಶವು. ಇದರಿಂದ ಹಾಗೆಯೇ ಮುಂದಕ್ಕೆ ಸಾಗುತ್ತ ವಿದ್ಯಾರ್ಥಿಗಳಿಂದ ಬೇರೆ ಬೇರೆ ಉದಾಹರಣೆಗಳನ್ನಾದರೂ ರಚಿಸಿಕೊಂಡು, ಅವುಗಳನ್ನು ಅವರಿಂದ ಬಿಡಿಸಿಕೊಳ್ಳುತ್ತ ಹೋಗಬೇಕು.

(೪)

ಕೆಲವು ಸೂಚನೆಗಳು

ಅಂಕಗಣಿತದ ಯಾವದೊಂದು ಪಾಠವನ್ನು ಕಲಿಸುವಾಗ ಶಿಕ್ಷಕನು ಅನುಸರಿಸಬೇಕಾದ ಕೆಲವು ಸಾಮಾನ್ಯ ಸೂಚನೆಗಳನ್ನು ಇಲ್ಲಿ ಕೊಡುವೆವು. ಅವುಗಳಲ್ಲಿ ಮುಖ್ಯವಾಗಿ– (೧) ವಿದ್ಯಾರ್ಥಿಗಳ ಸಿದ್ಧತೆಗೆ ಸಂಬಂಧಿಸಿದವು. (೨) ಪ್ರಶ್ನೋತ್ತರಗಳಿಗೆ ಸಂಬಂಧಿಸಿದವು. (೩) ಅಭ್ಯಸನಗಳಿಗೆ ಸಂಬಂಧಿಸಿದವು; ಮತ್ತು (೪) ಸಮ್ಮಿಶ್ರ ಸೂಚನೆಗಳು ಎಂದು ನಾಲ್ಕು ಭಾಗಗಳನ್ನು ಮಾಡಿದ್ದೇವೆ.

(೧) ವಿದ್ಯಾರ್ಥಿಯು ಅನ್ಯಸಾಹಾಯ್ಯವನ್ನು ಬಯಸದೆ ತನ್ನಷ್ಟಕ್ಕೆ ತಾನೆ ಕೆಲಸ ಮಾಡುವ ಚಟವುಳ್ಳವನಾಗಬೇಕೆಂಬ ಧ್ಯೇಯವನ್ನು ಶಿಕ್ಷಕನು ಎಂದೂ ಮರೆಯಬಾರದು. ಉದಾಹರಣವನ್ನು ಬಿಡಿಸಲು ಆವಶ್ಯಕವಾದ ಎಲ್ಲ ಉಪಕರಣಗಳು ವಿದ್ಯಾರ್ಥಿಯಲ್ಲಿ ಇವೆಯೋ ಇಲ್ಲವೋ ಎಂಬದನ್ನು ನೋಡಬೇಕು; ಆ ಉಪಕರಣಗಳನ್ನು ಅವನು ವ್ಯವಸ್ಥಿತವಾಗಿ ಇಟ್ಟುಕೊಂಡಿರಲಿಕ್ಕೆ ಬೇಕು. ಇಂತಹ ಎಲ್ಲ ಉಪಕರಣಗಳನ್ನು ಸರಿಯಾಗಿ ಉಪಯೋಗಿಸುವ ರೀತಿಯನ್ನು ಅವರಿಗೆ ಮೊದಲೇ ಚೆನ್ನಾಗಿ ಕಲಿಸಿರಲಿಕ್ಕೆಬೇಕು. ಕಲಿತಂಥ ಎಷ್ಟೋ ಸಂಗತಿಗಳನ್ನು ವಿದ್ಯಾರ್ಥಿಗಳು ಪ್ರತ್ಯಕ್ಷ ಕೃತಿಯಿಂದ ಮಾಡಿ ಮನಗಾಣುವಂತೆ ಮಾಡಬೇಕು. ಹಿಂದೆ ಕಲಿತ ಸಂಗತಿಗಳನ್ನು ಮರೆಯದಂತೆಯೂ, ದೃಢವಾಗಿ ನೆನಪಿನಲ್ಲಿಡುವಂತೆಯೂ ತಕ್ಕ ಪಾಠಗಳನ್ನು ಏರ್ಪಡಿಸಿ ಅವಕಾಶವನ್ನು ಕಲ್ಪಿಸಿಕೊಡಬೇಕು. ಹೇಗೆ! ಯಾಕೆ! ಎಂಬದಾಗಿ ಪ್ರಶ್ನೆಗಳನ್ನು ಕೇಳುವ ಚಟವನ್ನು ಹುಡುಗರಲ್ಲಿ ಹುಟ್ಟಿಸಬೇಕು. ತಾವು ಕಲಿತಂತಹ ಉದಾಹರಣೆಗಳನ್ನು ತಾವಾಗಿಯೇ ಹೊಸದಾಗಿ ರಚಿಸುವದಕ್ಕೆ ಕಲಿಸಬೇಕು. ಸುತ್ತುಮುತ್ತಲಿನ ವಸ್ತುಗಳನ್ನು ನೋಡಿ ಅವುಗಳನ್ನು ಕುರಿತು ಬೇರೆ ಬೇರೆ ತರದ ಉದಾಹರಣೆಗಳನ್ನು ರಚಿಸುವದಕ್ಕೆ ಕಲಿಸಬೇಕು.

(೨) ಪ್ರಶ್ನೆಗಳನ್ನು ಕೇಳುವಾಗ ಶಿಕ್ಷಕನು ಆನಂದವೃತ್ತಿಯುಳ್ಳವನಾಗಿರಬೇಕು; ಅವನ ಭಾಷೆಯು ಶುದ್ಧವಾದದ್ದೂ, ಸಂಕ್ಷಿಪ್ತವಾದದ್ದೂ, ಸ್ಪಷ್ಟಾರ್ಥವುಳ್ಳದ್ದೂ ಇರಬೇಕು. ಬಹಳ ತ್ವರೆಯಿಂದಲೂ ಪ್ರಶ್ನೆಗಳನ್ನು ಕೇಳಬಾರದು, ಬಹಳ ಸಾವಕಾಶವಾಗಿಯೂ ಕೇಳಬಾರದು. ಪ್ರಶ್ನೆಗಳು ವಿದ್ಯಾರ್ಥಿಗಳ ಮನಸ್ಸನ್ನು ಎಳೆಯುವಂತಹವಿರಬೇಕು; ಮತ್ತು ವರ್ಗದೊಳಗಿನ ಎಲ್ಲ ವಿದ್ಯಾರ್ಥಿಗಳಿಗೂ ಉತ್ತರ ಹೇಳುವ ಪಾಳಿಯು ಬರುವಂತೆ ಕೇಳುತ್ತಿರಬೇಕು. ಜಾಣ ಹುಡುಗರಿಗೆ ಪ್ರಶ್ನೆಗಳನ್ನು ಕೇಳಲೇಬೇಕು; ಆದರೆ ವ್ಮೈಮರೆತು ನಿರ್ಲಕ್ಷ್ಯದಿಂದ ಕುಳಿತ ಹುಡುಗರಾದ್ದರೂ ಲಕ್ಷ್ಯಗೊಡು

ವಂತೆಯೂ, ವಿಚಾರಮಾಡುವಂತೆಯೂ, ಕೆಲಸಕ್ಕೆ ಹತ್ತುವಂತೆಯೂ ಪ್ರಶ್ನೆಗಳನ್ನು ಕೇಳಬೇಕು. ಹುಡುಗರು ವಿಚಾರಪೂರ್ವಕವಾಗಿ ಉತ್ತರಕೊಡುವಂತಹ ಪ್ರಶ್ನೆಗಳನ್ನು ಕೇಳಬೇಕು. ಆದರೆ ಕೇವಲ ಊಹೆಯಿಂದ ಹೇಳುವಂತಹ ಪ್ರಶ್ನೆಗಳನ್ನು ಕೇಳಬಾರದು. ವಿಚಾರಪೂರ್ವಕವಾಗಿಯೇ ಪ್ರಶ್ನೆಗಳನ್ನು ಕೇಳಬೇಕು; ಮತ್ತು ಉತ್ತರಗಳನ್ನು ಹೇಳುವವರಾದರೂ ಚೆನ್ನಾಗಿ ವಿಚಾರಮಾಡಿಯೇ ಹೇಳುವಂತಿರಬೇಕು. ಕೇವಲ "ಹೌದು" ಇಲ್ಲವೆ, "ಅಲ್ಲ" ಎಂಬ ಉತ್ತರ ಬರುವಂತಹ ಪ್ರಶ್ನೆಗಳನ್ನು ಕೇಳಬಾರದು; ಒಂದು ವೇಳೆ ಕೇಳಿದರೂ "ಯಾಕೆ?" ಎಂಬ ಪ್ರಶ್ನೆಯನ್ನು ಕೂಡಲೆ ಕೇಳಬೇಕು. ಗಣಿತ ವಿಷಯದಲ್ಲಾಗಲಿ ಇತರ ವಿಷಯಗಳಲ್ಲಾಗಲಿ ಹುಡುಗರು ಮೊದಲೇ ಸಂಪಾದಿಸಿದ ಜ್ಞಾನವನ್ನು ಸಂಬಂಧಿಸಿಕೊಂಡೇ ಪ್ರಶ್ನೆಗಳನ್ನು ಕೇಳಹತ್ತಬೇಕು. ವರ್ಗದ ಎಲ್ಲ ವಿದ್ಯಾರ್ಥಿಗಳಿಗೂ ಚೆನ್ನಾಗಿ ಕೇಳಿಸುವಂತಹ ಸ್ಪಷ್ಟ ಸ್ವರದಿಂದ ಪ್ರಶ್ನೆಗಳನ್ನು ಕೇಳಬೇಕು; ಮತ್ತು ವಿದ್ಯಾರ್ಥಿಗಳಾದರೂ ಅಷ್ಟೇ ಸ್ಪಷ್ಟ ಸ್ವರದಿಂದ ಉತ್ತರ ಹೇಳುವಂತೆ ಮಾಡಬೇಕು. ಪೂರ್ಣವಾದ ಮತ್ತು ಸ್ಪಷ್ಟವಾದ ಉತ್ತರಗಳನ್ನೇ ವಿದ್ಯಾರ್ಥಿಗಳಿಂದ ಹೇಳಿಸಿಕೊಳ್ಳಬೇಕು. ಯಾರೂ ಉತ್ತರವನ್ನು ಹೇಳದಿದ್ದರೆ, ಶಿಕ್ಷಕನು ತಾನು ಹೇಳುವದಕ್ಕಿಂತ ಮೊದಲು, ತನ್ನ ಪ್ರಶ್ನೆಯಲ್ಲೇನಾದರೂ ಕುಂದಿದೆಯೋ ಎಂದು ವಿಚಾರಮಾಡಿ, ಮತ್ತೊಂದು ರೀತಿಯಿಂದ ಅದೇ ಅರ್ಥದ ಪ್ರಶ್ನೆಯನ್ನು ಕೇಳಿ ನೋಡಬೇಕು. ವಿಚಾರಪೂರ್ವಕವಾಗಿ ಕೊಟ್ಟ ಉತ್ತರಗಳನ್ನು ಪ್ರೋತ್ಸಾಹಿಸಬೇಕು; ಅಂತಹ ಉತ್ತರಗಳು ತಪ್ಪಾದವಿದ್ದರೆ, ವಿದ್ಯಾರ್ಥಿಗೆ ಆತನ ತಪ್ಪನ್ನು ತೋರಿಸಿಕೊಟ್ಟು ಅದನ್ನು ತಿದ್ದಿಕೊಳ್ಳಲು ಹೇಳಬೇಕು.

(೩) ವಿದ್ಯಾರ್ಥಿಗಳಿಗೆ ಬಾಯಿಂದ ಮಾಡಹೇಳುವ ಅಭ್ಯಸನಗಳ ಮಹತ್ತ್ವವು ಬಹಳವಾಗಿದೆ. ಬರೆಹದಿಂದ ಮಾಡುವ ಅಭ್ಯಸನಗಳಿಗೆ ಇವು ಅಸ್ತಿವಾರದಂತಿರುತ್ತವೆ. ಬಾಯಿಂದ ಮಾಡುವ ಅಭ್ಯಸನಗಳಿಂದ ವಿದ್ಯಾರ್ಥಿಗಳಿಗೆ ಬಾಹ್ಯ ಜಗತ್ತಿನ ಸಂಬಂಧವು ಕೂಡಲೆ ಉಂಟಾಗುತ್ತದೆ; ಅವರ ಮಾನಸಿಕ ಶಿಕ್ಷಣಕ್ಕೆ ಅವಕಾಶವು ದೊರೆಯುತ್ತದೆ. ಮೊದಮೊದಲು ಇಂತಹ ಅಭ್ಯಸನಗಳ ಉತ್ತರಗಳನ್ನು ಬಾಯಿಂದಲೇ ಕೇಳಿಕೊಳ್ಳಬೇಕು; ಆ ಮೇಲೆ ಉತ್ತರವನ್ನು ಮಾತ್ರ ಬರೆಯಲಿಕ್ಕೆ ಹೇಳಬೇಕು. ಬಾಯಿಂದ ಉದಾಹರಣಗಳನ್ನು ತೀವ್ರವಾಗಿ ಬಿಡಿಸುವ ಕುಶಾಗ್ರಬುದ್ಧಿಯ ವಿದ್ಯಾರ್ಥಿಗಳಿಂದ ಅವರ ರೀತಿಯನ್ನು ವಿಶದವಾಗಿ ಕೇಳಿಕೊಳ್ಳಬೇಕು; ಮತ್ತು ಹೊಸ ಹೊಸ ಉದಾಹರಣೆಗಳನ್ನಾದರೂ ಅವರಿಗೆ ರಚಿಸಲಿಕ್ಕೆ ಹೇಳಬೇಕು. ಅಭ್ಯಸನಗಳ ಪುಸ್ತಕವನ್ನು ವಿದ್ಯಾರ್ಥಿಗಳಿಗೆ ಕೊಟ್ಟು, ನಿಯಮಿತ ಉದಾಹರಣೆಗಳನ್ನು ಬಿಡಿಸಲಿಕ್ಕೆ ಹೇಳುವದಾದರೂ ಒಂದು ದೃಷ್ಟಿಯಿಂದ ಒಳ್ಳೆಯದು. ಯಾಕಂದರೆ ಇದರಿಂದ ವೇಳೆಯು ಉಳಿಯುವದು; ಶಿಕ್ಷಕನ ಶ್ರಮವು ಕಡಿಮೆಯಾಗುವದು; ಮತ್ತು ಹಿಂದೆ ಹೇಳಿದಂತೆ ದಡ್ಡ ಹುಡುಗರನ್ನು ತಿದ್ದಲು ಶಿಕ್ಷಕನಿಗೆ ಅನುವು ದೊರೆಯುವದು. ಆದರೂ ಪಠ್ಯಪುಸ್ತಕದ ವಿಷಯದಲ್ಲಿ ಹಿಂದೆ

ಹೇಳಿದ ಮಾತನ್ನು, ಇಲ್ಲಿ ಮರೆಯಕೂಡದು. ಶಿಕ್ಷಕರು ತಮ್ಮ ಬುದ್ಧಿಶಕ್ತಿಯನ್ನೂ ವ್ಯವಹಾರ ಜ್ಞಾನವನ್ನೂ ಉಪಯೋಗಿಸಿ ತಕ್ಕ ರೀತಿಯಿಂದ ಅಭ್ಯಸನಗಳ ಪುಸ್ತಕವನ್ನು ಉಪಯೋಗಿಸಬೇಕು. ಇಂತಹ ಸಂದರ್ಭಗಳಲ್ಲಿ ಹುಡುಗರು ಬೇರೆಯವರ ರೀತಿಯನ್ನು ನೋಡಿ ಮಾಡದಂತೆ ಶಿಕ್ಷಕನು ತಕ್ಕ ವ್ಯವಸ್ಥೆಯನ್ನಿಟ್ಟು ಎಚ್ಚರದಿಂದಿರಬೇಕು. ಸಾಧಾರಣವಾದ ವ್ಯವಹಾರದಲ್ಲಿ ರೂಢಿಯಲ್ಲಿಲ್ಲದಂತಹ ದೊಡ್ಡ ದೊಡ್ಡ ಸಂಖ್ಯೆಗಳ ಗುಣಾಕಾರಾದಿಗಳನ್ನು ಮಾಡಬೇಕಾಗುವ ಉದಾಹರಣೆಗಳು, ವ್ಯಾವಹಾರಿಕ ದೃಷ್ಟಿಯಿಂದ ನಿರುಪಯೋಗಿಗಳೆಂದು ತೋರಿದರೂ ಅಂತಹ ಕೆಲವನ್ನು ಮಾಡಿಸುವದು ಒಳ್ಳೆಯದು; ಯಾಕಂದರೆ, ವಿದ್ಯಾರ್ಥಿಗಳಲ್ಲಿ ಅದರಿಂದ ಸಹನಶೀಲತೆ, ಮನಮುಟ್ಟಿ ಕೆಲಸ ಮಾಡುವ ಚಟ ಮೊದಲಾದ ಅನೇಕಗುಣಗಳು ಉಂಟಾಗುತ್ತವೆ. ಇದರಂತೆಯೇ ಯಾಂತ್ರಿಕ ರೀತಿಯಿಂದ ಮಾಡಬಹುದಾದ ಕೆಲವು ಉದಾಹರಣೆಗಳನ್ನಾದರೂ ವಿದ್ಯಾರ್ಥಿಗಳಿಗೆ ಹೇಳುತ್ತಿರಬೇಕು. ಉತ್ತರಗಳನ್ನು ಹೇಳುವ ಅಥವಾ ತೋರಿಸುವ ಮುಂಚೆ, ತಮ್ಮ ಉತ್ತರವು ಸರಿಯಾಗಿರುವದೋ ಇಲ್ಲವೋ ಎಂದು 'ತಾಳೆ' ಮಾಡಿ ನೋಡಿ ಮನಗಾಣುವ ಚಟವನ್ನು ವಿದ್ಯಾರ್ಥಿಗಳಲ್ಲಿ ಹುಟ್ಟಿಸಬೇಕು; ವಿದ್ಯಾರ್ಥಿಗಳು ರೀತಿಯನ್ನು ಬರೆಯುವ ಪದ್ಧತಿಯು ಸ್ಪಷ್ಟವಾದದ್ದೂ ಸಶಾಸ್ತ್ರವಾದದ್ದೂ ಇರುವಂತೆ ನೋಡಿಕೊಳ್ಳಬೇಕು. ಆವರ್ತನದ ಅಭ್ಯಸನಗಳಾದರೂ ಬಹಳ ಮಹತ್ತ್ವದವು. ಇವುಗಳಿಂದ ತಾನು ಕಲಿಸಿದ ವಿಷಯವು ವಿದ್ಯಾರ್ಥಿಗಳಿಗೆ ಎಷ್ಟರ ಮಟ್ಟಿಗೆ ತಿಳಿದಿದೆ ? ತಾನು ಕಲಿಸಿದ ರೀತಿಯನ್ನು ಇಲ್ಲವೆ ರೀತಿಗಳನ್ನು ವಿದ್ಯಾರ್ಥಿಗಳು ಸರಿಯಾದ ರೀತಿಯಿಂದ ಉಪಯೋಗಿಸಲು ಬಲ್ಲರೋ ಇಲ್ಲವೋ ! ಇವೇ ಮೊದಲಾದ ಸಂಗತಿಗಳು ಶಿಕ್ಷಕನಿಗೆ ತಿಳಿಯುವವು.

(೪) ವರ್ಷದಲ್ಲಿ ತಾನು ಕಲಿಸಬೇಕಾದ ವಿಷಯಗಳಲ್ಲಿ ಮಹತ್ತ್ವದ ಪಾಠಗಳ ಒಂದು ಪಟ್ಟಿಯನ್ನು ಶಿಕ್ಷಕನು ಸಿದ್ಧಗೊಳಿಸಬೇಕು. ಪ್ರತಿಯೊಂದು ಪಾಠವನ್ನು ಹೇಗೆ ಕಲಿಸತಕ್ಕದ್ದೆಂಬದನ್ನು ನಿರ್ಣಯಿಸಿ ತನಗೋಸ್ಕರವಾಗಿ 'ಪಾಠದ ಟಿಪ್ಪಣಿ' ಯನ್ನು ಸಿದ್ಧಮಾಡಿಟ್ಟುಕೊಳ್ಳಬೇಕು. ವಿದ್ಯಾರ್ಥಿಗಳಿಗೆ ತಿಳಿದುಕೊಳ್ಳಲು ಯಾವ ಯಾವ ಭಾಗಗಳು ಕಷ್ಟಕರವಾಗಬಹುದೆಂಬದನ್ನು ಆಲೋಚನೆ ಮಾಡಿ ಅವೆಲ್ಲವುಗಳನ್ನು ಬರೆದಿಟ್ಟಿರಬೇಕು. ವಿದ್ಯಾರ್ಥಿಗಳು ಮಾಡುವ ತಪ್ಪುಗಳನ್ನು ಚೆನ್ನಾಗಿ ನಿರೀಕ್ಷಿಸಬೇಕು. ಆ ತಪ್ಪುಗಳ ಕಾರಣಗಳನ್ನು ಕಂಡುಹಿಡಿದು, ಅವುಗಳನ್ನು ಹೋಗಲಾಡಿಸುವದಕ್ಕೆ ತಕ್ಕ ಉದಾಹರಣೆಗಳನ್ನು ಕೊಡುತ್ತ ಹೋಗಬೇಕು. ಉದಾಹರಣೆಯನ್ನು ಬಿಡಿಸುವ ಸರಿಯಾದ ರೀತಿ ಮತ್ತು ಸರಿಯಾದ ಪದ್ಧತಿ ಇವುಗಳ ಕಡೆಗೆ ಚೆನ್ನಾಗಿ ಲಕ್ಷ್ಯಗೊಡಬೇಕು. ಶಿಕ್ಷಕನು ಯಾವಾಗಲೂ ಒಳ್ಳೆಯದನ್ನು ಹುಡುಗರ ಮುಂದಿಡಬೇಕೇ ಹೊರತು ಕೆಟ್ಟದ್ದನ್ನು ಇಡಬಾರದು.

(೫)

ಉಪಸಂಹಾರ

ಅಂಕಗಣಿತವು ಒಂದು ಪರಿಪೂರ್ಣವಾದ ಶಾಸ್ತ್ರವು. ತ್ರಿಕಾಲಾಬಾಧಿತವಾದ ಸತ್ಯವನ್ನು ಕಂಡುಹಿಡಿಯುವದು ಅದರ ಧ್ಯೇಯವು. ಪೊಳ್ಳು ಮಾತುಗಳಿಗೆ ಈ ಶಾಸ್ತ್ರದಲ್ಲಿ ಅನುವಿಲ್ಲ; ಅದರಂತೆಯೇ ಕೇವಲ ಊಹೆಯು ಈ ಶಾಸ್ತ್ರದಲ್ಲಿ ಯಾವ ಕೆಲಸಕ್ಕೂ ಬಾರದು. ಅಂಕಗಣಿತವು ಒಂದು ಕಲೆಯೂ ಆಗಿದೆ. ಆದದರಿಂದ ಈ ಶಾಸ್ತ್ರದಲ್ಲಿ ಪ್ರಗತಿಯಾಗಬೇಕಾದರೆ ಸಂತತವಾದ ರೂಢಿಯು ಆವಶ್ಯಕವಾಗಿದೆ. ತತ್ತ್ವ, ಅನುಭವ, ಪ್ರಯೋಗ ಇವುಗಳಿಂದ ತನಗೆ ಉತ್ತಮವೆಂದು ತೋರಿದಂತಹ ಒಂದು ಮಾರ್ಗವನ್ನು ಗೊತ್ತುಮಾಡಿಕೊಂಡು ಶಿಕ್ಷಕನು ಅದನ್ನು ಅನುಸರಿಸಬೇಕು. ಇಂತಹ ಶಿಕ್ಷಕನಲ್ಲಿ ಕಲಿತ ವಿದ್ಯಾರ್ಥಿಗಳ ಬುದ್ಧಿಶಕ್ತಿಯೂ ಚಿಕಿತ್ಸಕತ್ವವೂ ಬೆಳೆಯುವವು ಅವರಲ್ಲಿ ಕೆಲಸ ಮಾಡುವ ಹವ್ಯಾಸವು ಹೆಚ್ಚುವದು; ಅವರ ಆತ್ಮವಿಶ್ವಾಸವೂ ವೃದ್ಧಿಂಗತವಾಗುವದು. ಈ ವಿಷಯದ ಶಿಕ್ಷಣದಿಂದ ಇಂತಹ ಸತ್ಪರಿಣಾಮವನ್ನು ಸಾಧಿಸಬೇಕಾದರೆ, ಅಸಾಧಾರಣವಾದ ತಾಳ್ಮೆಯೂ, ದಿಟವಾದ ಸಹಾನುಭೂತಿಯೂ, ಅವಿಶ್ರಾಂತವಾದ ಶ್ರಮವೂ ಅಗತ್ಯವಾಗಿ ಬೇಕಾಗುವವು.

ಮಹತ್ವ ಮಾಪನ

ಮಿ. ನಾರಾಯಣರಾವ ಕುರಡಿ ಹೆ. ಮಾ. ಪ್ರಾ. ಸ್ಕೂ. ಧಾರವಾಡ.

ಗಣಿತ ವಿಷಯದ ಹೊಸ ಅಭ್ಯಾಸ ಕ್ರಮದಲ್ಲಿ ೪ನೆಯ ಇಯತ್ತೆಗೆ ಮಹತ್ವ ಮಾಪನವನ್ನು ಕಲಿಸಬೇಕೆಂದು ಗೊತ್ತಾಗಿದೆ. ಮತ್ತು ಈ ಸದರಿನಲ್ಲಿ

(ಅ) ಪ್ರತ್ಯಕ್ಷ ಅಳತೆ ಮಾಡಿ ನೋಡಿ ಕಾಟಕೋನ ಚೌಕೋನಾಕೃತಿಗಳ ಕ್ಷೇತ್ರಫಲ ತೆಗೆಯುವದು, ನೆಲಕ್ಕೆ ಕಲ್ಲು ಹಾಸಿಗೆ ಮಾಡುವದು, ಬಣ್ಣ ಹಚ್ಚುವದು ಇವುಗಳ ವೆಚ್ಚವನ್ನು ತೆಗೆಯುವ ಲೆಕ್ಕಗಳು.

ಚೌರಸ ಅಳತೆ (ಚೌರಸ, ಕಾ. ಚೌಕೋನ ಇವುಗಳ ಕ್ಷೇತ್ರಫಲಮಾತ್ರ)

(ಬ) ಸುಲಭ ಆಕೃತಿಗಳ ಘನ. ಫಲ ತೆಗೆಯುವದು. (ಘನಅಳತೆ, ಘನ, ಇಟ್ಟಿಗೆಯ ಆಕೃತಿ ಇವುಗಳ ಘನಫಲಮಾತ್ರ) ಇಷ್ಟು ವಿಷಯಗಳನ್ನು ಕಲಿಸಬೇಕೆಂದು ಹೇಳಿದೆ. ಮತ್ತು ಈ ಇಯತ್ತೆಗೆ ಗೊತ್ತುಪಡಿಸಿದ 'ಭೂಮಿತಿ' ಈ ವಿಷಯದಲ್ಲಿ

(೧) ವರ್ತುಳ ಕೋನಗಳ ಕಲ್ಪನೆ

(೨) ಕ್ಷೇತ್ರಫಲ (ಕಾ. ಚೌಕೋನ ಮತ್ತು ತ್ರಿಕೋನ ಇವುಗಳ ಕ್ಷೇ. ಫಲ ತೆಗೆಯುವದು.

ಕಾ. ಚೌ. ದ ಕ್ಷೇತ್ರ = ತಳ × ಎತ್ತರ

ತ್ರಿ. ದ ಕ್ಷೇತ್ರ = ½ ತಳ × ಎತ್ತರ

(೩) **ಘನ ಫಲ** ಯಾವದೊಂದು ಘನಾಕೃತಿಯನ್ನು ನೀರು ತುಂಬಿದ ಪಾತ್ರೆಯಲ್ಲಿ ಬಿಟ್ಟು ಹೊರಚಲ್ಲಿದ ನೀರಿನ ಅಳತೆಯನ್ನು ಮಾಡಿ ಆ ಘನಾಕೃತಿಯ ಘನ. ಫಲ ತೆಗೆಯುವದು ಮತ್ತು ಲೆಕ್ಕದಿಂದ ತೆಗೆಯುವದು. + ಈ ವಿಷಯಗಳ ಸಮಾವೇಶವಾಗಿದೆ.

ಮೇಲಿನ ವಿವರಣೆಯನ್ನು ಓದುವದರಿಂದ ಮಹತ್ವಮಾಪನ ಭೂಮಿತಿ ಈ ಎರಡೂ ಸದರುಗಳಲ್ಲಿ ಹೇಳಿರುವ ವಿಷಯಗಳು ಪರಸ್ಪರ ನಿಕಟ ಸಂಬಂಧವುಳ್ಳವುಗಳಿರುವವೆಂದೂ ಒಂದರಿಂದೊಂದು ತೀರ ಭಿನ್ನವಾಗಿಲ್ಲವೆಂದೂ ತಿಳಿಯಬಹುದು. ಈ ವಿಷಯಗಳನ್ನು ಹೇಗೆ ಕಲಿಸಬಹುದೆಂಬ ವಿಚಾರದ ದಿಗ್ದರ್ಶನ ಮಾಡುವದೇ ಪ್ರಕೃತ ಲೇಖನದ ಉದ್ದೇಶವಾಗಿದೆ.

ಮಹತ್ವಮಾಪನವನ್ನು ಕಲಿಸುವದಕ್ಕಿಂತ ಮೊದಲು ಬಾಲಕರಿಗೆ ಕೆಲವು ಪ್ರಾರಂಭದ ಕಲ್ಪನೆಗಳ ಜ್ಞಾನವು ಸರಿಯಾಗಿ ಆಗಿರುವದು ಅವಶ್ಯವದೆ.

ಬಿನ್ ಇಯತ್ತೆಯ 'ಭೂಮಿತಿ' ವಿಷಯದಲ್ಲಿ ಪೈ, ಏಣು, ಮೂಲೆಗಳನ್ನು ಘನಾಕೃತಿಗಳನ್ನು ಉಪಯೋಗಿಸಿ ತಿಳಿಸಿಕೊಡಬೇಕೆಂಪೂ ಇಂಥ ಆಕೃತಿಗಳನ್ನು ಪಾಟಿಯ ಮೇಲೆ, ಇಲ್ಲವೆ ಕರಿಹಲಗೆಯ ಮೇಲೆ ಇಟ್ಟು ಸುತ್ತಲು ಗೆರೆ ಕೊರೆದು ಆಕೃತಿಗಳನ್ನು ರಚಿಸಬೇಕೆಂದೂ ಕಾಗದ ಮಡಚಿ ಚೌರಸ, ಕಾಟಕೋನ ಚೌಕೋನಾಕೃತಿಗಳನ್ನು ರಚಿಸಬೇಕೆಂದೂ ಹೇಳಿದೆ. ಮತ್ತು ಮೊದಲನೆಯ ಇಯತ್ತೆಯಲ್ಲಿ ಸರಳ ರೇಖೆಗಳಿಂದಲೂ ಟಿಮ್ಮುಗಳಿಂದಲೂ ಚೌರಸ ಇಲ್ಲವೆ ಕಾಟಕೋನ ಚೌಕೋನಾಕೃತಿಗಳಲ್ಲಿ ಡಿಝೈಾಯಿನಗಳನ್ನು ರಚಿಸುವದಕ್ಕೆ ಕಲಿಸಬೇಕೆಂದೂ ಹೇಳಿದೆ. ಇದರಿಂದ ೪ನೆಯ ಇಯತ್ತೆಯ ಬಾಲಕರ ಮನಸ್ಸಿನಲ್ಲಿ ಬಿಂದು, ರೇಖೆ, ಕ್ಷೇತ್ರಮಾಪನ ಘನಮಾಪನ, ಇವುಗಳ ಪರಸ್ಪರ ಸಂಬಂಧದ ವಿಷಯದಲ್ಲಿ ತಕ್ಕ ಕಲ್ಪನೆಯುಂಟಾಗಿದೆ ಎಂದು ತಿಳಿಯಲು ಅಭ್ಯಂತರವಿಲ್ಲ. ಆದರೂ ಈ ಮಾತನ್ನು ಹೆಚ್ಚು ದೃಢಪಡಿಸಲು ಕೆಲವು ಕೃತಿಗಳನ್ನು ಬಾಲಕರಿಂದ ಮಾಡಿಸಿಕೊಳ್ಳುವದು ಅವಶ್ಯವಾಗಿದೆ. ಒಂದೇ ಆಕಾರದ ಹಲವು ಕಾಗದದ ಹಾಳಿಗಳನ್ನು ಒಂದರ ಮೇಲೊಂದು ಇಟ್ಟು, ಅದೊಂದು ಉದ್ದ, ಅಗಲ, ಎತ್ತರ ಈ ಮೂರು ಅಳತೆಗಳಿರುವ ಘನಾಕೃತಿಯಾಗುವದೆಂದೂ ಅವೆಲ್ಲ ಹಾಳಿಗಳನ್ನು ಬಿಡಿಸಿ ಬಿಟ್ಟರೆ ಅವು ಉದ್ದ, ಅಗಲ ಎಂಬ ಎರಡೇ ಅಳತೆ

+ ಟಿಪ್ಪಣಿ:— ಅಡ್ಡತಿಡ್ಡ ಆಕಾರದ ಘ. ಪದಾರ್ಥಗಳ ಘ. ಫಲ ತೆಗೆಯುವದಕ್ಕಾಗಿಯೇ ಈ ಪ್ರಯೋಗ ಮಾಡಬೇಕೆಂದು ಹಲವರು ತಿಳಿದುಕೊಂಡಂತೆ ಇರುವದು. ಆದರೆ ಹಾಗೆ ಅರ್ಥ ಮಾಡುವ ಕಾರಣವಿಲ್ಲ. ಈ ಪ್ರಯೋಗದಿಂದ ತೆಗೆದ ಅಳತೆಗೂ ಲೆಕ್ಕದಿಂದ ತೆಗೆದ ಅಳತೆಗೂ ಹೋಲಿಸಿ ನೋಡಿ ಲೆಕ್ಕದಿಂದ ತೆಗೆದ ಅಳತೆಯು ಸರಿಯದೆ ಎಂದು ಮನಗಾಣಿಸುವದಕ್ಕಾಗಿ ಈ ಪ್ರಯೋಗವನ್ನು ಮಾಡಬಹುದು.

ಗಳಿರುವ ಕ್ಷೇತ್ರದರ್ಶಕ ಮೇಲ್ಮೈ ಆಗುವದೆಂದೂ ತೋರಿಸಿಕೊಡಬಹುದು. ಮತ್ತು ಘನ ಘನಾಕೃತಿ, ಚೌರಸ ಕಾಟಕೋನ ಚೌಕೋನ ಇವುಗಳಲ್ಲಿರುವ ಭೇದವನ್ನು ಬಾಲಕರಿಗೆ ಸರಿಯಾಗಿ ಮನಗಾಣಿಸಿ ಕೊಡಬೇಕು.

ಇಷ್ಟಾದ ಬಳಿಕ ಕ್ಷೇತ್ರಮಾಪನದ ಮತ್ತು ಘನಮಾಪನದ ಕೋಷ್ಟಕದ ಕಲ್ಪನೆಯನ್ನು ತಂದು ಕೊಡುವದು ಅವಶ್ಯವುಂಟು. *

ಚೌರಸದ ಅಳತೆಯ ಕೋಷ್ಟಕದಲ್ಲಿ ಚೌರಸ ಇಂಚು, ಚೌರಸ ಫೂಟು, ಚೌರಸ ಯಾರ್ಡು, ಗುಂಠೆ, ಎಕರೆ, ಆಣೆ ಇವುಗಳ ಕಲ್ಪನೆಯನ್ನು, ಅವುಗಳ ಪರಸ್ಪರ ಸಂಬಂಧವನ್ನು ತಿಳಿಸಿಕೊಡಬೇಕಾಗುವದು. ಇದಕ್ಕಾಗಿ ಶಿಕ್ಷಕರು ಶಾಲೆಯಲ್ಲಿ ೧೪೪ ಚೌ. ಇಂಚುಗಳನ್ನು ತೋರಿಸುವ ಒಂದು ಚೌರಸ ಫೂಟಿನ (೧೨"×೧೨") ಹಾಗು ೧ ಚೌರಸ ಯಾರ್ಡಿನ (೩'×೩') ರಟ್ಟುಗಳನ್ನು ತೂಗಹಾಕಬೇಕು. ಸಾಲೆಯ ಮುಂದಿನ ಅಂಗಳದಲ್ಲಿ ೧ ಗುಂಠೆಯ (೧೧ ಯಾ. ಉದ್ದ × ೧೧ ಯಾ. ಅಗಲ ಅಥವಾ ೧೬ ಅಣೆ ತೋರಿಸುವ) ಕ್ಷೇತ್ರವನ್ನೂ ಅನುಕೂಲವಿದ್ದರೆ ೧ ಎಕರೆ ಕ್ಷೇತ್ರವನ್ನೂ ತೋರಿಸುವ ಭಾಗವನ್ನು ಗುರುತಿಸಿಟ್ಟಿರಬೇಕು.

ಇಂಚು, ಫೂಟು, ಯಾರ್ಡುಗಳು ಉದ್ದಳತೆಯನ್ನು ಅಳೆಯುವ ಸಾಧನಗಳಾಗಿರುವಂತೆ ಚೌರಸ ಇಂಚು, ಚೌ. ಫೂಟು ಯಾರ್ಡು ಮೊದಲಾದವು ಕ್ಷೇತ್ರವನ್ನು ಅಳೆಯುವ ಸಾಧನಗಳಾಗಿರುವವೆಂದು ಬಾಲಕರಿಗೆ ಮನಗಾಣಿಸಿಕೊಡಬೇಕು. ಕ್ಷೇತ್ರಮಾಪನದ ಕೋಷ್ಟಕದ ಕಲ್ಪನೆಯನ್ನು ತಂದುಕೊಡುವಾಗಲೇ ಕ್ಷೇತ್ರಫಲ ತೆಗೆಯುವ 'ಉದ್ದ×ಅಗಲ= ಕ್ಷೇತ್ರ' ಎಂಬ ಸಾಮಾನ್ಯ ತತ್ವದ ಕಲ್ಪನೆಯನ್ನು ಬಾಲಕರ ಮನಸ್ಸಿನಲ್ಲಿ ಸಹಜವಾಗಿ ಬಿಂಬಿಸಬಹುದು. ಉದಾ— ೧ ಚೌ. ಫೂಟು=೧೪೪ ಚೌ. ಇ. = ೧೨"×೧೨" ಮತ್ತು ಕ್ಷೇತ್ರಮಾಪನದ ವ್ಯಾವಹಾರಿಕ ಆವಶ್ಯಕತೆಯನ್ನೂ ಬಾಲಕರ ಲಕ್ಷದಲ್ಲಿ ತಂದು ಕೊಡಬೇಕು. ಉದಾ— ಎರಡು ಕೋಣೆಗಳಲ್ಲಿ ಯಾವದು ದೊಡ್ಡದು ? ಎರಡು ಹೊಲಗಳಲ್ಲಿ ಯಾವದು ಸಣ್ಣದು ? ಕ್ಷೇತ್ರಮಾನವನ್ನು ಅವಲಂಬಿಸಿ ಬೆಲೆಯನ್ನು ನಿರ್ಣಯಿಸಬೇಕಾಗುವ ಪ್ರಸಂಗಗಳು ಮುಂತಾದವುಗಳು.

---

* ಗಣಿತ ವಿಷಯದ ಹೊಸ ಅಭ್ಯಾಸ ಪತ್ರಿಕೆಯ ಕೊನೆಯಲ್ಲಿ ದಕ್ಷಿಣ ಭಾಗದ ಬಗ್ಗೆ ಕೋಷ್ಟಕಗಳು ಎಂಬ ವಿಭಾಗದಲ್ಲಿ ಕೆಲವು ಕೋಷ್ಟಕಗಳನ್ನು ಕೊಟ್ಟಿರುತ್ತದೆ. ಆಯಾ ಇಯತ್ತೆಗಳ ವಿಷಯಗಳಿಗೆ ಸಂಬಂಧಿಸಿದ ಕೋಷ್ಟಕಗಳನ್ನು ಅಲ್ಲಲ್ಲಿಯೇ ಕಲಿಸ ಬೇಕಲ್ಲದೆ ಎಲ್ಲವನ್ನು ಏಕ ಕಾಲಕ್ಕೆ ಯಾವದೊಂದು ಇಯತ್ತೆಯಲ್ಲಿಯೇ ಕಲಿಸಬೇಕೆಂಬ ಕಲ್ಪನೆಯನ್ನು ಶಿಕ್ಷಕರು ಎಂದೂ ಮಾಡಿಕೊಳ್ಳಕೂಡದು. ಉದಾ— ದೇಶೀಯ ನಾಣ್ಯಗಳ ಕೋಷ್ಟಕಗಳನ್ನು ೧ನೆಯ ಇಯತ್ತೆಯಲ್ಲಿಯೂ (ಘನ ಅಳತೆಯ ಕೋಷ್ಟಕಗಳನ್ನು ಚೌರಸ ಅಳತೆಯ ಕೋಷ್ಟಕಗಳನ್ನು) ೪ನೆಯ ಇಯತ್ತೆಯಲ್ಲಿಯೂ ಕಲಿಸುವದು ಯೋಗ್ಯವಾಗುವದು.

ವರ್ತುಳಗಳ ಸಹಾಯದಿಂದ ಕೋನ, ಕಾಟಕೋನಗಳ ಕಲ್ಪನೆ ಮಾಡಿಕೊಟ್ಟ ತರುವಾಯ ಚೌಕೋನ (ನಾಲ್ಕುಕೋಣಗಳುಳ್ಳ ಆಕೃತಿ) ಕಾಟಕೋನ ಚೌಕೋನ (ನಾಲ್ಕು ಕಾಟಕೋನಗಳುಳ್ಳ ಆಕೃತಿ) ಚೌರಸ (ನಾಲ್ಕು ಕೋನಗಳು ಕಾಟಕೋನಗಳಾಗಿದ್ದು ಅವುಗಳ ಎಲ್ಲ ಭುಜಗಳು ಸರಿಯಾಗಿರುವ ಆಕೃತಿ) ಇವುಗಳ ಕಲ್ಪನೆಗಳನ್ನು ಬಾಲಕರಿಗೆ ಸರಿಯಾಗಿ ಮಾಡಿಕೊಡಬೇಕು. ಬಳಿಕ ಉದ್ದ, ಅಗಲಳತೆಗಳು ಪೂರ್ಣ ಇಂಚುಗಳಿರುವ ಬೇರೆ ಬೇರೆ ಅಳತೆಯ ಕಾಗದಗಳನ್ನು ಬಾಲಕರ ಕೈಗೆ ಕೊಟ್ಟು ಅವುಗಳ ಮೇಲೆ ಇಂಚುಗಳನ್ನು ಗುರ್ತಿಸಿ ಗೆರೆಗಳನ್ನು ಕೊರೆಯಿಸಿ ಅವುಗಳಲ್ಲಿ ಚೌರಸ ಇಂಚುಗಳಾಗುವಂತೆ ಮಾಡಿಸಬೇಕು.

ಉದಾ ೪" × ೩"; ೫" × ೨"; ೫" × ೩" ಇತ್ಯಾದಿ

	೧	೨	೩	೪
೧	೧	೨	೩	೪
೨	೫	೬	೭	೮
೩	೯	೧೦	೧೧	೧೨

೩"×೪"=೧೨ ಚೌ. ಇ.

ಮತ್ತು ಈ ಕಾಗದಗಳಲ್ಲಿ ಆಗುವ ಚೌರಸ ಇಂಚುಗಳನ್ನು ಪ್ರತ್ಯಕ್ಷ ಎಣಿಸಿ ನೋಡಿ ೪ ಇಂಚು ಉದ್ದ ೩ ಇಂಚು ಅಗಲ ಇರುವ ಕಾಗದದ ಕ್ಷೇತ್ರಫಲವು ೧೨ ಚೌ ಇಂ. ಆಗುವದೆಂದು ಬಾಲಕರು ಪ್ರತ್ಯಕ್ಷವಾಗಿ ಮನಗಾಣುವಂತೆ ಮಾಡಬೇಕು.

ಆ ಮೇಲೆ ಶಾಲೆಯ ಕೋಣೆಯ ಉದ್ದಗಲಳತೆಗಳನ್ನು (ಪೂರ್ಣ ಫೂಟುಗಳಿದ್ದ ಮಾತ್ರ ಸಾಧ್ಯವಾಗುವದು) ಅಳೆದು ಅವುಗಳ ಫೂಟುಗಳನ್ನು ಗುರುತಿಸಿ ಗೆರೆ ಕೊರೆಯಿಸಿ ಶಾಲೆಯ ಕೋಣೆಯ ಕ್ಷೇತ್ರವು ಎಷ್ಟು ಚೌ. ಫೂ. ಆಗುವದೆಂಬದನ್ನು ಎಣಿಸಿ ತೋರಿಸಿ ಕೊಡಬೇಕು. ಮತ್ತು ಶಾಲೆಯ ಅಂಗಳದಲ್ಲಿ ಬೇರೆ ಬೇರೆ ಅಳತೆಯ ಕಾಟಕೋಣ ಚೌಕೋಣಗಳನ್ನು ರಚಿಸಿ ಉದ್ದಗಲ ಅಳತೆಗಳಲ್ಲಿ ಫೂಟುಗಳನ್ನು ಗುರುತಿಸಿ ಗೆರೆ ಕೊರೆಯಿಸಿ ಅವುಗಳ ಕ್ಷೇತ್ರಫಲಗಳನ್ನು ತೆಗೆಯಿಸಬೇಕು.

ಈ ರೀತಿ ಹಲವು ಉದಾಹರಣಗಳನ್ನು ಪ್ರತ್ಯಕ್ಷ ಪರೀಕ್ಷಿಸಿ ನಿರೀಕ್ಷಿಸಿದ ತರುವಾಯ ಕಾಟಕೋನ ಚೌಕೋನದ ಕ್ಷೇತ್ರ = ತಳ × ಎತ್ತರ = ಉದ್ದ × ಅಗಲ ಎಂಬ ಸಾಮಾನ್ಯ ಸಿದ್ಧಾಂತವನ್ನು ನಿರ್ಣಯಿಸಬೇಕು. ಬಳಿಕ ನೆಲಕ್ಕೆ ಕಲ್ಲು ಹಾಸುವದು ಗೋಡೆಗೆ ಬಣ್ಣ ಹಚ್ಚುವದು ಮುಂತಾದ ಕ್ಷೇತ್ರಮಾಪನಕ್ಕೆ ಸಂಬಂಧಿಸಿದ ವ್ಯಾವಹಾರಿಕ ಉದಾಹರಣೆಗಳನ್ನು ಮಾಡಿಸಬೇಕು.

ಮಹತ್ವ ಮಾಪನ

ಚೌರಸವು ಕಾಟಕೋನ ಚೌಕೋನದ ವಿಶಿಷ್ಟ ಪ್ರಕಾರವು. ಕಾಟಕೋನ ಚೌಕೋನಕ್ಕಿರುವಂತೆ ಚೌರಸಕ್ಕಾದರೂ ಉದ್ದಗಲಳತೆಗಳು ಇರುವವು. ಕಾಟಕೋನ ಚೌಕೋನದಲ್ಲಿ ಉದ್ದವು ಅಗಲಕ್ಕಿಂತ ಹೆಚ್ಚಿರುವದು, ಆದರೆ ಚೌರಸದಲ್ಲಿ ಎರಡೂ ಸರಿ ಇರುವವು. ಎಂಬ ವಿಶಿಷ್ಟ ಸಂಗತಿಯನ್ನು ಬಾಲಕರಿಗೆ ಲಕ್ಷದಲ್ಲಿ ತಂದುಕೊಡ ಬೇಕು. ಮತ್ತು ಕಾಟಕೋನ ಚೌಕೋನದ ಕ್ಷೇತ್ರಫಲವನ್ನು ತೆಗೆಯುವ ರೀತಿಯೇ ಚೌರಸಕ್ಕೂ ಸಂಬಂಧಿಸುವದೆಂಬದನ್ನು ಮನಗಾಣುವಂತೆ ಮಾಡಿಕೊಡಬೇಕು.

೫ ಮೊಳದ ರುಮಾಲಕ್ಕೆ ೬ ರೂ. ೪ ಆಣೆ ಬೆಲೆಯಾದರೆ ೬ ಮೊಳದ ರುಮಾಲದ ಬೆಲೆ ಎಷ್ಟು ? ಇತ್ಯಾದಿ ವ್ಯಾವಹಾರಿಕ ಉದಾಹರಣೆಗಳನ್ನು ಹೇಳಬಹುದು.

ಇಷ್ಟಾದ ಬಳಿಕ ಕಾಟಕೋನ ಚೌಕೋನವನ್ನು (ಅಥವಾ ಚೌರಸವನ್ನು) ಕರ್ಣ ದಲ್ಲಿ ಮಡಿಚಿದರೆ ಎರಡು ಸರಿಯಾದ ಕಾಟಕೋನ ತ್ರಿಕೋಣಗಳಾಗುವವೆಂಬದನ್ನೂ ಕಾ. ಚೌ. ಕ್ಷೇತ್ರ=ತಳ × ಎತ್ತರ. ಕಾಟಕೋನ ತ್ರಿಕೋನದ ಕ್ಷೇತ್ರ = $\frac{\text{ತಳ} \times \text{ಎತ್ತರ}}{೨}$ ಎಂಬ ದನ್ನೂ ಬಾಲಕರು ಮನಗಾಣುವರು.

ಮತ್ತು ಕಾಟಕೋನ ಚೌಕೋನ = ಅಷ್ಟೇ ಎತ್ತರವುಳ್ಳ ಎರಡು ತ್ರಿಕೋಣ ಗಳು ಎಂಬದನ್ನು ಈ ಕೆಳಗಿನ ಕೃತಿಯಿಂದ ಪ್ರತ್ಯಕ್ಷವಾಗಿ ಕಂಡುಕೊಳ್ಳಬಹುದು.

ಎರಡು ಏಕರೂಪ (ಒಂದರ ಮೇಲೊಂದು ಇಟ್ಟರೆ ಸರ್ವಾತ್ಮನಾ ಹೊಂದಿಕೆಯಾ ಗುವ) ತ್ರಿಕೋನಾಕಾರದ ಕಾಗದಗಳನ್ನು ತೆಗೆದುಕೊಂಡು ಒಂದನ್ನು ಅದರ ಶಿರೋಬಿಂ ದುವಿನಿಂದ ತಳರೇಖೆಗೆ ಲಂಬವಾಗುವ ಗೆರೆಗುಂಟ ಮಡಿಚಿ ಹರಿಯಬೇಕು. ತ್ರಿಕೋನದ ತಳದ ಅಂಚುಗಳನ್ನು ಸರಿಯಾಗಿ ಹೊಂದಿಕೆ ಆಗುವಂತೆ ಒಂದು ಭುಜವನ್ನು ಇನ್ನೊಂದು ಭುಜದ ಕಡೆಗೆ ಸರಿಸಿ ಮಡಿಚಿದರೆ ಅದರ ಎತ್ತರವನ್ನು ತೋರಿಸುವ ಗೆರೆಯು ಹೊರ ಡುವದು. ಮತ್ತು ಆ ಎರಡು ತ್ರಿಕೋನಾಕೃತಿಯಾದ ತುಂಡುಗಳನ್ನು ಇನ್ನೊಂದು ತ್ರಿಕೋನದ ಅನುರೂಪ ಭುಜಗಳಿಗೆ ಹೊಂದಿಸಿ ಇಟ್ಟರೆ ಒಂದು ಕಾಟಕೋನ ಚೌಕೋನ ವಾಗುವದು ಮತ್ತು ಆ ಕಾ. ಚೌ. ದ ತಳ ಎತ್ತರಗಳು ಕ್ರಮವಾಗಿ ಮೂಲ ತ್ರಿಕೋನದ ತಳ ಎತ್ತರಗಳಷ್ಟೇ ಇರುವವೆಂಬದೂ ಹೊಸ ಕಾ. ಚೌ.ವು ಮೂಲ ತ್ರಿಕೋನದ ಇಮ್ಮಡಿ ಇರುವವೆಂಬದೂ ಸಹಜವೇ ಸರಿ.



ಕ=ತ್ರಿಕೋನದ ಎತ್ತರ ಅ ಬ ಅ+ಬ=ತ್ರಿಕೋನದ ತಳ

ಮೇಲಿನ ಕೃತಿಯಲ್ಲಿ ತೆಗೆದುಕೊಂಡ ತ್ರಿಕೋನಗಳ (ಕಾಟಕೋನವುಳ್ಳ) ತಳ ಎತ್ತರಗಳು ಅಷ್ಟೇ ಇದ್ದರೆ ಅವೆರಡನ್ನು ಕರ್ಣದಗುಂಟ ಹೊಂದಿಸಿದರೆ ಚೌರಸವಾಗುವ

ವರ್ತುಳಗಳ ಸಹಾಯದಿಂದ ಕೋನ, ಕಾಟಕೋನಗಳ ಕಲ್ಪನೆ ಮಾಡಿಕೊಟ್ಟ ತರುವಾಯ ಚೌಕೋನ (ನಾಲ್ಕು ಕೋಣಗಳುಳ್ಳ ಆಕೃತಿ) ಕಾಟಕೋನ ಚೌಕೋನ (ನಾಲ್ಕು ಕಾಟಕೋನಗಳುಳ್ಳ ಆಕೃತಿ) ಚೌರಸ (ನಾಲ್ಕು ಕೋನಗಳು ಕಾಟಕೋನಗಳಾಗಿದ್ದು ಅವುಗಳ ಎಲ್ಲ ಭುಜಗಳು ಸರಿಯಾಗಿರುವ ಆಕೃತಿ) ಇವುಗಳ ಕಲ್ಪನೆಗಳನ್ನು ಬಾಲಕರಿಗೆ ಸರಿಯಾಗಿ ಮಾಡಿಕೊಡಬೇಕು. ಬಳಿಕ ಉದ್ದ, ಅಗಲಳತೆಗಳು ಪೂರ್ಣ ಇಂಚುಗಳಿರುವ ಬೇರೆ ಬೇರೆ ಅಳತೆಯ ಕಾಗದಗಳನ್ನು ಬಾಲಕರ ಕೈಗೆ ಕೊಟ್ಟು ಅವುಗಳ ಮೇಲೆ ಇಂಚುಗಳನ್ನು ಗುರ್ತಿಸಿ ಗೆರೆಗಳನ್ನು ಕೊರೆಯಿಸಿ ಅವುಗಳಲ್ಲಿ ಚೌರಸ ಇಂಚುಗಳಾಗುವಂತೆ ಮಾಡಿಸಬೇಕು.

ಉದಾ ೪" × ೩"; ೫" × ೨"; ೫" × ೩" ಇತ್ಯಾದಿ

	೧	೨	೩	೪
೧	೧	೨	೩	೪
೨	೫	೬	೭	೮
೩	೯	೧೦	೧೧	೧೨

೩"×೪"=೧೨ ಚೌ. ಇ.

ಮತ್ತು ಈ ಕಾಗದಗಳಲ್ಲಿ ಆಗುವ ಚೌರಸ ಇಂಚುಗಳನ್ನು ಪ್ರತ್ಯಕ್ಷ ಎಣಿಸಿ ನೋಡಿ ೪ ಇಂಚು ಉದ್ದ ೩ ಇಂಚು ಅಗಲ ಇರುವ ಕಾಗದದ ಕ್ಷೇತ್ರಫಲವು ೧೨ ಚೌ. ಇಂ. ಆಗುವದೆಂದು ಬಾಲಕರು ಪ್ರತ್ಯಕ್ಷವಾಗಿ ಮನಗಾಣುವಂತೆ ಮಾಡಬೇಕು.

ಆ ಮೇಲೆ ಶಾಲೆಯ ಕೋಣೆಯ ಉದ್ದಗಲಳತೆಗಳನ್ನು (ಪೂರ್ಣ ಫೂಟುಗಳಿದ್ದರೆ ಮಾತ್ರ ಸಾಧ್ಯವಾಗುವದು) ಅಳೆದು ಅವುಗಳ ಫೂಟುಗಳನ್ನು ಗುರುತಿಸಿ ಗೆರೆ ಕೊರೆಯಿಸಿ ಶಾಲೆಯ ಕೋಣೆಯ ಕ್ಷೇತ್ರವು ಎಷ್ಟು ಚೌ. ಫೂ. ಆಗುವದೆಂಬದನ್ನು ಎಣಿಸಿ ತೋರಿಸಿ ಕೊಡಬೇಕು. ಮತ್ತು ಶಾಲೆಯ ಅಂಗಳದಲ್ಲಿ ಬೇರೆ ಬೇರೆ ಅಳತೆಯ ಕಾಟಕೋಣ ಚೌಕೋಣಗಳನ್ನು ರಚಿಸಿ ಉದ್ದಗಲ ಅಳತೆಗಳಲ್ಲಿ ಫೂಟುಗಳನ್ನು ಗುರುತಿಸಿ ಗೆರೆ ಕೊರೆಯಿಸಿ ಅವುಗಳ ಕ್ಷೇತ್ರಫಲಗಳನ್ನು ತೆಗೆಯಿಸಬೇಕು.

ಈ ರೀತಿ ಹಲವು ಉದಾಹರಣಗಳನ್ನು ಪ್ರತ್ಯಕ್ಷ ಪರೀಕ್ಷಿಸಿ ನಿರೀಕ್ಷಿಸಿದ ತರುವಾಯ ಕಾಟಕೋನ ಚೌಕೋನದ ಕ್ಷೇತ್ರ = ತಳ × ಎತ್ತರ = ಉದ್ದ × ಅಗಲ ಎಂಬ ಸಾಮಾನ್ಯ ಸಿದ್ಧಾಂತವನ್ನು ನಿರ್ಣಯಿಸಬೇಕು. ಬಳಿಕ ನೆಲಕ್ಕೆ ಕಲ್ಲು ಹಾಸುವದು ಗೋಡೆಗೆ ಬಣ್ಣ ಹಚ್ಚುವದು ಮುಂತಾದ ಕ್ಷೇತ್ರಮಾಪನಕ್ಕೆ ಸಂಬಂಧಿಸಿದ ವ್ಯಾವಹಾರಿಕ ಉದಾಹರಣೆಗಳನ್ನು ಮಾಡಿಸಬೇಕು.

ಚೌರಸವು ಕಾಟಕೋನ ಚೌಕೋನದ ವಿಶಿಷ್ಟ ಪ್ರಕಾರವು. ಕಾಟಕೋನ ಚೌಕೋನಕ್ಕಿರುವಂತೆ ಚೌರಸಕ್ಕಾದರೂ ಉದ್ದಗಲಳತೆಗಳು ಇರುವವು. ಕಾಟಕೋನ ಚೌಕೋನದಲ್ಲಿ ಉದ್ದವು ಅಗಲಕ್ಕಿಂತ ಹೆಚ್ಚಿರುವದು, ಆದರೆ ಚೌರಸದಲ್ಲಿ ಎರಡೂ ಸರಿ ಇರುವವು. ಎಂಬ ವಿಶಿಷ್ಟ ಸಂಗತಿಯನ್ನು ಬಾಲಕರಿಗೆ ಲಕ್ಷದಲ್ಲಿ ತಂದುಕೊಡ ಬೇಕು. ಮತ್ತು ಕಾಟಕೋನ ಚೌಕೋನದ ಕ್ಷೇತ್ರಫಲವನ್ನು ತೆಗೆಯುವ ರೀತಿಯೇ ಚೌರಸಕ್ಕೂ ಸಂಬಂಧಿಸುವದೆಂಬದನ್ನು ಮನಗಾಣುವಂತೆ ನೋಡಿಕೊಡಬೇಕು.

೫ ಮೊಳದ ರುಮಾಲಕ್ಕೆ ೬ ರೂ. ೪ ಆಣೆ ಬೆಲೆಯಾದರೆ ೬ ಮೊಳದ ರುಮಾಲದ ಬೆಲೆ ಎಷ್ಟು ? ಇತ್ಯಾದಿ ವ್ಯಾವಹಾರಿಕ ಉದಾಹರಣೆಗಳನ್ನು ಹೇಳಬಹುದು.

ಇಷ್ಟಾದ ಬಳಿಕ ಕಾಟಕೋನ ಚೌಕೋನವನ್ನು (ಅಥವಾ ಚೌರಸವನ್ನು) ಕರ್ಣ ದಲ್ಲಿ ಮಡಿಚಿದರೆ ಎರಡು ಸರಿಯಾದ ಕಾಟಕೋನ ತ್ರಿಕೋಣಗಳಾಗುವವೆಂಬದನ್ನೂ ಕಾ. ಚೌ. ಕ್ಷೇತ್ರ=ತಳ × ಎತ್ತರ. ಕಾಟಕೋನ ತ್ರಿಕೋನದ ಕ್ಷೇತ್ರ = $\frac{\text{ತಳ}\times\text{ಎತ್ತರ}}{೨}$ ಎಂಬ ದನ್ನೂ ಬಾಲಕರು ಮನಗಾಣುವರು.

ಮತ್ತು ಕಾಟಕೋನ ಚೌಕೋನ = ಅಷ್ಟೇ ಎತ್ತರವುಳ್ಳ ಎರಡು ತ್ರಿಕೋಣ ಗಳು ಎಂಬದನ್ನು ಈ ಕೆಳಗಿನ ಕೃತಿಯಿಂದ ಪ್ರತ್ಯಕ್ಷವಾಗಿ ಕಂಡುಕೊಳ್ಳಬಹುದು.

ಎರಡು ಏಕರೂಪ (ಒಂದರ ಮೇಲೊಂದು ಇಟ್ಟರೆ ಸರ್ವಾತ್ಮನಾ ಹೊಂದಿಕೆಯಾ ಗುವ) ತ್ರಿಕೋನಾಕಾರದ ಕಾಗದಗಳನ್ನು ತೆಗೆದುಕೊಂಡು ಒಂದನ್ನು ಅದರ ಶಿರೋಬಿಂ ದುವಿನಿಂದ ತಳರೇಖೆಗೆ ಲಂಬವಾಗುವ ಗೆರೆಗುಂಟ ಮಡಿಚಿ ಹರಿಯಬೇಕು. ತ್ರಿಕೋನದ ತಳದ ಅಂಚುಗಳನ್ನು ಸರಿಯಾಗಿ ಹೊಂದಿಕೆ ಆಗುವಂತೆ ಒಂದು ಭುಜವನ್ನು ಇನ್ನೊಂದು ಭುಜದ ಕಡೆಗೆ ಸರಿಸಿ ಮಡಿಚಿದರೆ ಅದರ ಎತ್ತರವನ್ನು ತೋರಿಸುವ ಗೆರೆಯು ಹೊರ ಡುವದು. ಮತ್ತು ಆ ಎರಡು ತ್ರಿಕೋನಾಕೃತಿಯಾದ ತುಂಡುಗಳನ್ನು ಇನ್ನೊಂದು ತ್ರಿಕೋನದ ಅನುರೂಪ ಭುಜಗಳಿಗೆ ಹೊಂದಿಸಿ ಇಟ್ಟರೆ ಒಂದು ಕಾಟಕೋನ ಚೌಕೋನ ವಾಗುವದು ಮತ್ತು ಆ ಕಾ. ಚೌ. ದ ತಳ ಎತ್ತರಗಳು ಕ್ರಮವಾಗಿ ಮೂಲ ತ್ರಿಕೋನದ ತಳ ಎತ್ತರಗಳಷ್ಟೇ ಇರುವವೆಂಬದೂ ಹೊಸ ಕಾ. ಚೌ.ವು ಮೂಲ ತ್ರಿಕೋನದ ಇಮ್ಮಡಿ ಇರುವವೆಂಬದೂ ಸಹಜವೇ ಸರಿ.



ಕ=ತ್ರಿಕೋನದ ಎತ್ತರ ಅ+ಬ=ತ್ರಿಕೋನದ ತಳ

ಮೇಲಿನ ಕೃತಿಯಲ್ಲಿ ತೆಗೆದುಕೊಂಡ ತ್ರಿಕೋನಗಳ (ಕಾಟಕೋನವುಳ್ಳ) ತಳ ಎತ್ತರಗಳು ಅಷ್ಟೇ ಇದ್ದರೆ ಅವೆರಡನ್ನು ಕರ್ಣದಗುಂಟ ಹೊಂದಿಸಿದರೆ ಚೌರಸವಾಗುವ

ದೆಂದೂ ತಳ ಎತ್ತರಗಳು ಅಸಮಾನವಾಗಿದ್ದರೆ ಅವುಗಳ ಹೊಂದಿಕೆಯಿಂದ ಕಾಟಕೋನ ಚೌಕೋನವಾಗುವದೆಂದೂ ಹುಡುಗರು ಪರೀಕ್ಷಿಸಬಹುದು.

ಕ್ಷೇತ್ರ ಮಾಪನಕ್ಕೆ ಚೌರಸ ಅಳತೆಯ ಕೋಷ್ಟಕಗಳ ಜ್ಞಾನವು ಅವಶ್ಯವಾಗಿದ್ದಂತೆ ಘನ ಮಾಪನಕ್ಕೆ ಘನ ಅಳತೆಯು ಕೋಷ್ಟಕಗಳ ಜ್ಞಾನವು ಅವಶ್ಯವೆಂಬದು ಸಹಜವು. ಈ ಮಾತನ್ನು ಅನೇಕ ಉದಾಹರಣೆಗಳ ಮೇಲಿಂದ ವಿವರಿಸಿ ಹೇಳಬೇಕು.

೧ ಘ. ಫೂ. = ೧' ಉ×೧' ಅ × ೧' ಎ = ೧೨" × ೧೨" ಅ × ೧೨" ಎ= ೧೭೨೮ ಘನ ಇಂಚು.

ಈ ವಿಚಾರವನ್ನು ಕಲಿಸುವಾಗ ಶಾಲೆಯಲ್ಲಿ ೧ ಘ. ಫೂ. ೧ ಘ. ಇಂಚು ಇವನ್ನು ಕಟ್ಟಿಗೆಯಿಂದ ತಯಾರಿಸಿಕೊಂಡಿರಬೇಕು. ಮತ್ತು ಆ. ಘ. ಫೂ. ನ ಕಟ್ಟಿಗೆಯ ಆರೂ ಮೈಗಳಿಗೆ ಚೌರಸ ಇಂಚುಗಳನ್ನು ತೋರಿಸುವ ಗೆರೆ ಕೊರೆದಿದ್ದರೆ ಒಳ್ಳೆಯದು. ಮತ್ತು ಅದರ ಒಂದು ಮೈಯಲ್ಲಿ ಒಂದು ಇಂಚು ದಪ್ಪವಾದ ಒಂದು ಹಲಿಗೆಯನ್ನು ಕೊರೆದಿಟ್ಟುಕೊಂಡು ಅದರದೊಂದು ಮೂಲೆಯಲ್ಲಿ ಒಂದು ಘನ ಇಂಚನ್ನು ಕತ್ತರಿಸಿ ಬೇರೆ ಮಾಡಿಟ್ಟಿರಬೇಕು. ಮತ್ತು ಹೆಚ್ಚು ಅನುಕೂಲವಿರುವಲ್ಲಿ ೧' ಉ ೧' ಅ ೧" ದಪ್ಪ ಇಂಥ ಬೇರೊಂದು ಹಲಗೆಯನ್ನೂ ಅದರಲ್ಲಿ ೧೪೪ ಘನ ಇಂಚುಗಳಾಗುವವೆಂಬದನ್ನು ತೋರಿಸುವದಕ್ಕಾಗಿ ೧೪೪ ಘನ ಇಂಚಿನ ತುಂಡುಗಳನ್ನೂ, ಇಂಥ ೧೭೨೮ ತುಂಡುಗಳನ್ನೂ ಒದಗಿಸಿಟ್ಟುಕೊಳ್ಳಬಹುದು. ಕಿಂಡರಗಾರ್ಟನ್ನಿನ ೩ನೆಯ ಕರಣದ ಪೆಟ್ಟಿಗೆಗಳನ್ನು ಘನಮಾಪನದ ವಿಚಾರಗಳನ್ನು ಕಲಿಸುವಾಗ ಆಗಾಗ ಉಪಯೋಗ ಮಾಡಿಕೊಳ್ಳಬಹುದು.

ಈ ರೀತಿ ಉಪಕರಣಗಳ ಸಹಾಯದಿಂದ ಉದ್ದ ಅಗಲ ಎತ್ತರ ಈ ಮೂರು ಅಳತೆಗಳನ್ನು ಅನುಲಕ್ಷಿಸಿ ಘನಘನಾಕೃತಿಯ ಅಳತೆಗಳನ್ನು ಗೊತ್ತು ಮಾಡಬೇಕೆಂಬ ವಿಚಾರವನ್ನೂ ಘನ ಅಳತೆಯ ಕೋಷ್ಟಕಗಳನ್ನೂ ಕಲಿಸಿದ ತರುವಾಯ ಘನಘನಾಕೃತಿಗಳ ಘನಫಲವನ್ನು ತೆಗೆಯುವ ವಿಚಾರವನ್ನು ತಿಳಿಸುವದು ಕಠಿಣವಾಗದು.

ಚೌರಸ ಇಂಚು, ಚೌರಸ ಫೂಟು ಚೌರಸಯಾರ್ಡು ಇತ್ಯಾದಿಗಳು ಕ್ಷೇತ್ರ ಮಾಪನದ ಸಾಧನಗಳಾಗುವಂತೆ ಘನ ಇಂಚು, ಘನ ಫೂಟು ಇವು ಘನ ಮಾಪನದ ಸಾಧನಗಳಾಗುವವು.

ಕಿಂಡರಗಾರ್ಟನದ ೩ನೆ ಕರಣದಲ್ಲಿರುವ ೧ ಇಂಚಿನ ಘನಗಳ ಸಹಾಯದಿಂದ ೫" ಉ×೪"ಅ×೩" ಎ=೬೦ ಘನ ಇಂಚು. ಮುಂತಾದ ಹಲವು ಕೃತಿಗಳನ್ನು ಪ್ರತ್ಯಕ್ಷ ರಚನೆಮಾಡಿ ಬಾಲಕರು ಮನಗಂಡ ತರುವಾಯ ಉ×ಅ×ಎ=ಘನಫ. ಎಂಬ ಸಾಮಾನ್ಯ ತತ್ವವನ್ನು ನಿರ್ಣಯಿಸಬೇಕು.

ಯಾವದಾದರೊಂದು ಘನಾಕೃತಿಯನ್ನು ನೀರು ತುಂಬಿದ ಪಾತ್ರೆಯಲ್ಲಿಟ್ಟು, ಹೊರಚಲ್ಲಿದ ನೀರಿನ ಅಳತೆಯಿಂದ ಆ ಘನಾಕೃತಿಯ ಘನಫಲ ತೆಗೆಯುವದು ಸುಲಭವಲ್ಲ.

ಈ ಪ್ರಯೋಗವನ್ನು ಸಾಧಿಸಲಿಕ್ಕೆ ಮಳೆಯನ್ನು ಅಳೆಯುವ ಗ್ಲಾಸಿನಂಥ ಘ. ಇಂಚು, ಘನಸೂಟು ನೀರಿನ ಅಳತೆಯ ಗೆರೆ ಕೊರೆದ ಪಾತ್ರೆಗಳು ಬೇಕಾಗುವವು. ಅಲ್ಲದೆ ಆ ಘನಪದಾರ್ಥವು ನೀರನ್ನು ಹೀರಿಕೊಳ್ಳುವಂಥದಾಗಲಿ ತೇಲುವಂಥದಾಗಲಿ ಕರಗುವಂಥದಾಗಲಿ ಇದ್ದರೆ ತೊಂದರೆಯಾಗುವದು.

ಹೀಗೆ ನೀರಿನಲ್ಲಿ ಮುಳುಗಿಸುವ ಪ್ರಯೋಗದಿಂದ ಘನಫಲವನ್ನು ತೆಗೆಯುವಂತೆ ಕುಟ್ಟಿ ಪುಡಿಮಾಡಲು ಸಾಧ್ಯವಿರುವಂಥ ಘನ ಪದಾರ್ಥಗಳನ್ನು ಪುಡಿಮಾಡಿ ಆ ಪುಡಿಯ ಅಳತೆಯಿಂದ ಅವುಗಳ ಘನ ಫಲವನ್ನು ಸಾಮಾನ್ಯವಾಗಿ ಕಂಡುಹಿಡಿಯಬಹುದು.

ಪ್ರಾಥಮಿಕ ಶಾಲೆಗಳ ಹೊಸದಾಗಿ ತಿದ್ದಿ ಬೆಳೆಯಿಸಿದ ಗಣಿತ ವಿಷಯದ ಅಭ್ಯಾಸಪತ್ರಿಕೆ

ಲೇಖಕ— ಮಿ. ಸಾಕೀನಹಳ್ಳಿ

ಈ ಪತ್ರಿಕೆಯು ಬಾಲಕರ ವರ್ಗದಿಂದ ಆರಂಭವಾಗಿರುವದು ಸಹಜವು. ಈ ವರ್ಗದ ಹೊಸ ಅಭ್ಯಾಸ ಪತ್ರಿಕೆಯಲ್ಲಿ ಅಂಕಗಣಿತ, ಭೂಮಿತಿ ಎಂದು ಎರಡು ಭಾಗಗಳಿರುವವು. ಅಂಕಗಣಿತದ ವಿಷಯವು ಎಂದಿನಿಂದಲೂ ಇಷ್ಟೇ ಇದ್ದಿತು. ಯಾವ ಕಾರಣದಿಂದಲೋ ಏನೋ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿ ಗಣಿತ ವಿಷಯವನ್ನು ಪದ್ಧತಿಗೆ ಸರಿಯಾಗಿ ಕಲಿಸದ್ದರಿಂದ ಹುಡುಗರಿಗೆ ಅಪೂರ್ಣ ಜ್ಞಾನವಾದದ್ದು ತೋರಿಬಂದದ್ದರಿಂದ ಸಂಖ್ಯಾಜ್ಞಾನವೆಂಬ ಒಂದೇ ವಿಷಯವನ್ನು ವಿಭಾಗಿಸಿ,

(ಅ) ಸಂಖ್ಯೆಗಳ ಎಣಿಕೆ.

(ಬ) ಗುಂಪುಗಳನ್ನು ಮಾಡುವದು.

(ಕ) ಬಾಯಿಂದ ಬೇರೀಜು ಮಾಡುವದು.

ಇತ್ಯಾದಿ. ವಿಷಯಗಳನ್ನು ನಿಯತವಾಗಿ ಕಲ್ಪಿಸುವ ಪ್ರಸಂಗವು ಬಂದಿರಬಹುದು.

ಎರಡನೆಯ ಭಾಗವಾದ ಭೂಮಿತಿ ಎಂಬ ವಿಷಯವಾದರೂ ಕಿಂಡರ ಗಾರ್ಟನ್ ಕ್ರಮದಲ್ಲಿ ಎಂದಿನಿಂದಲೂ ಇದ್ದೇ ಇದ್ದಿತು. ಕಿಂಡರ ಗಾರ್ಟನ ಕ್ರಮವಾದರೂ ಮೇಲಿನಂತೆಯೇ ಎಲ್ಲ ಶಾಲೆಗಳಲ್ಲಿ ರೂಢವಾಗಲಿಲ್ಲ. ಒಂದು ವೇಳೆ ನಡೆದರೂ ಸರಿಯಾದ ಪದ್ಧತಿಯಿಂದ ನಡೆಯಲಿಲ್ಲ. ಇದಕ್ಕೆ ಅಲ್ಲಲ್ಲಿಯ ತೊಂದರೆಗಳೇ ಕಾರಣವಾಗಿರಬಹುದು. ಆದದರಿಂದ ಆ ವಿಷಯವನ್ನು ವಿಭಾಗಿಸಿ,

(ಅ) ಮೈ, ಏಣು, ಮೂಲೆ, ವಕ್ರರೇಣುಗಳ ಜ್ಞಾನ.

(ಬ) ವಸ್ತುಗಳನ್ನು ಇಟ್ಟು ಗೆರೆ ಹೊಡೆಯುವದು.

(ಕ) ಕಾಗದ ಮಡಿಚುವದು.

ಈ ಪ್ರಕಾರ ವರ್ಗೀಕರಣ ಮಾಡಿದರು.

ಈ ಎರಡೂ ವಿಷಯುಗಳನ್ನು ಪರಸ್ಪರ ಸಂಬಂಧಿಸಿ ಕಲಿಸಲಿಕ್ಕೆ ಬರುವದು ಹಾಗು ಎರಡನೆ ವಿಷಯುಗಳಿಗೆ ಸಂಬಂಧಿಸಿ ಕಲಿಸಲಿಕ್ಕೆ ಸಹ ಅನುಕೂಲವಿರುವದು

ಸರಿಯಾದ ಪದ್ಧತಿ, ಪ್ರತ್ಯಕ್ಷ ವಸ್ತುಗಳ ಸಾಹಾಯ್ಯ, ಪಾಠಗಳ ಪರಸ್ಪ ಸಂಬಂಧ ಈ ಅನುಕೂಲತೆಗಳನ್ನಿಟ್ಟುಕೊಂಡು ಆಟಗಳ ದ್ವಾರದಿಂದ ಮನೋರಂಜ ವಾಗಿ ಆದಷ್ಟು ಹೆಚ್ಚು ಇಂದ್ರಿಯುಗಳಿಗೆ ಶಿಕ್ಷಣವು ದೊರೆಯುವಂತೆ ಕಲಿಸುವದೇ ಹೊ ಪದ್ಧತಿಯು ನಿಜವಾದ ದಾರಿಯಾಗಿರುವದೆಂದೂ ಆ ಪದ್ಧತಿಯು ಲಾಭಕರವಾದದ್ದೆಂದ ಮುಂದಿನ ವಿವರಣೆಯಿಂದ ಗೊತ್ತಾಗುವದು.

ಗಣಿತ ವಿಷಯುವು ಮಹತ್ವದ್ದು— ಈ ವಿಷಯುವನ್ನು ತಕ್ಕ ಪದ್ಧತಿಯಿಂ ಕಲಿಸಿದರೆ ಬಾಲಕರಲ್ಲಿ ಯೋಗ್ಯಕಾಲದಲ್ಲಿ ತಕ್ಕ ಗುಣಗಳ ರಕ್ಷಣೆಯಾಗುತ್ತದೆ. ಈ ವಿ ಯುವು ಮಾನಸಿಕ ಶಿಕ್ಷಣದ ಉತ್ತಮವಾದ ಸಾಧನವಾಗಿರುತ್ತದೆ. ಈ ವಿಷಯುದ ಸ ಯಾದ ಶಿಕ್ಷಣದಿಂದ ವಿಚಾರಮಾಡುವ ಲಕ್ಷವನ್ನು ಕೇಂದ್ರೀಕರಿಸುವ ಶಕ್ತಿಯು ಬ ಪಡುತ್ತದೆ. ನಿಗಮನ, ವಿಗಮನ ಪದ್ಧತಿಗಳ ಉಪಯೋಗವು ಈ ವಿಷಯುದಲ್ಲಿ ಹೆಚ್ ಗಲಿಕ್ಕೆ ತಕ್ಕ ಅನುಕೂಲತೆಯು ಇದ್ದಷ್ಟು ಬೇರೆ ವಿಷಯುಗಳಲ್ಲಿ ಇರುವದಿಲ್ಲ.

ಹೊಸ ಅಭ್ಯಾಸ ಪತ್ರಿಕೆಯು ಕಿಂಡರ ಗಾರ್ಟನ್ ಕ್ರಮಕ್ಕೆ ಅನುಸರಿಸಿದೆ.

ಕಿಂಡರ ಗಾರ್ಟನ್ ಕ್ರಮದಿಂದ ಎಲ್ಲ ವಿಷಯುಗಳನ್ನು ಆಟವಾಡುತ್ತ ಕಲಿಸಲಿಕ ಬರುತ್ತದೆ. ಶಿಕ್ಷಣವು ಕೃತ್ರಿಮವಲ್ಲ. ಸಹಜವೃತ್ತಿಗೆ ಅನುಸರಿಸಿದ್ದಾಗಿರುತ್ತ ಮಕ್ಕಳು ಶಾಲೆಗೆ ಬರಲಾರಂಭಿಸಿದಾಗ ವ್ಯವಹಾರದಲ್ಲಿ ಮಾತು ಓದು, ಬರೆಹಗ ತಾವಾಗಿ ಒಮ್ಮೆಲೆ ಆರಂಭವಾಗುತ್ತವೆ. ಶಾಲೆಯು ಅಭ್ಯಾಸಕ್ಕನುಸರಿಸಿ ಆಗ ಮಕ್ಕ ಮನೋವೃತ್ತಿಯು ತಕ್ಕ ಭೂಮಿಕೆಯಾಗಿರುತ್ತದೆ. ಆಗ ಹುಡುಗರು ಬಿದ್ದ ಕಾಗ ಗಳನ್ನು ತೆಗೆದುಕೊಂಡು ಸುಳ್ಳೇ ಓದಲಿಕ್ಕೂ, ಬರೆಯಲಿಕ್ಕೂ, ಹೂವು ಕಾ ಮೊದಲಾದ ಸೃಷ್ಟಿಯ ವಸ್ತುಗಳನ್ನು ತೆಗೆದುಕೊಂಡು ಮೂಸುವದು, ಒಡೆಯುವದು ತೇಯುವದು, ಗೀಚುವದು ಕ್ರಮವಾಗಿ ಬಿಚ್ಚುವದು ಇತ್ಯಾದಿ ವಿಷಯುಗಳನ್ನು ಆ ರೂಪದಿಂದ ಒತ್ತಟ್ಟಿಗೆ ಲಕ್ಷವಿಟ್ಟು ಮಾಡುವರು. ಆದದರಿಂದ ನಿರೀಕ್ಷಣೆ, ಎಣಿಕೆ ಓದು, ಬರಹ, ಕಾಗದ ಮಡಿಚುವದು, ಕತ್ತರಿಸುವದು, ಮಾತು (ಕಥೆ) ಇತ್ಯಾ ವಿಷಯುಗಳನ್ನು ಒಂದೇ ಕಾಲಕ್ಕೆ ಆರಂಭಿಸಿ ಅವರ ಮನೋವೃತ್ತಿಗೆ ತಕ್ಕಂತೆ ರೂ ಕೊಟ್ಟು ಕಲಿಸುವದು ಸೃಷ್ಟಿನಿಯಮಕ್ಕನುಸರಿಸಿದ್ದಾಗಿರುತ್ತದೆ.

ಕಿಂಡರ ಗಾರ್ಟನ್ ಕ್ರಮದಲ್ಲಿ ಚಂಡು, ಗೋಲ, ಘನ, ಶಿಲಿಂಡರ ಮೊದಲಾ ಉಪಕರಣಗಳೊಂದಿಗೆ ಆಟವಾಡುವಾಗ ಭೂಮಿತಿ ವಿಷಯುವನ್ನು, ಅಂದರೆ ಏಣುಗಳ

(ರೇಖೆಗಳು) ಮೂಲೆಗಳು (ಕೋನಗಳು) ವಕ್ರಏಣುಗಳು (ವರ್ತುಲ ವರ್ತುಲದ ಭಾಗ) ಇವುಗಳ ಜ್ಞಾನವನ್ನು ಮಾಡಿಕೊಡಲಿಕ್ಕೆ ಅವಕಾಶವಿರುತ್ತದೆ. ಸೃಷ್ಟಿಯೊಳಗಿನ ವಸ್ತುಗಳನ್ನು ಇವುಗಳಿಗೆ ಹೋಲಿಸುತ್ತ, ಅವುಗಳನ್ನು ಸಹ ಉಪ ಕರಣಗಳನ್ನು ಮಾಡಿಕೊಂಡು ಅವುಗಳ ಮೇಲ್ಮೈಯು ನಿರೀಕ್ಷಣೆಯಿಂದ ಆಕೃತಿಗಳ ಜ್ಞಾನಮಾಡಿಕೊಡಬೇಕು. ಪ್ರತಿನಿತ್ಯ ಕಾಣುವ ಸಂಗತಿಗಳು ಅಲ್ಪವಾಗಿ ತೋರಿ ದರೂ ಅವು ಉಪಯೋಗ ಮಾಡಿಕೊಳ್ಳುವದಕ್ಕೆ ಶಾಸ್ತ್ರಶೋಧದ ಉಪಕರಣಗಳಂತೆ ಇರುತ್ತವೆ.

ಕಾರ್ಯಾಭಿನಿವೇಶವು ಮಗುವಿನ ಸಹಜ ಲಕ್ಷಣವಾಗಿರುವುದು. ಈ ಕುತೂ ಹಲವನ್ನು ಕ್ರಮವಾದ ದಾರಿಗೆ ತಿರುಗಿಸಿಕೊಂಡು ಕೆಲಸ ಮಾಡುವದು ಶಿಕ್ಷಕನ ಕರ್ತವ್ಯವು. ಕಿಂಡರಗಾರ್ಟನ್ ಕ್ರಮದಲ್ಲಿಯ ಉಪಕರಣಗಳು ಅಂದರೆ ಚೆಂಡು, ಘನ, ಘನದಲ್ಲಿಯೇ ಕೊರೆತ ಹಾಕಿ ಮಾಡಿದ ಸಣ್ಣ ಘನ, ಆಯು, ಅದನ್ನು ಕೊರೆದು ಮಾಡಿದ ಬೇರೆ ಆಕೃತಿಗಳು ಇವೆಲ್ಲವುಗಳ ಮುಖಾಂತರವಾಗಿ ಆಯಾ ಆಕೃತಿಗಳ ಜ್ಞಾನ ಮಾಡಿಕೊಡುವದಲ್ಲದೆ ಆ ಜ್ಞಾನದ ದೃಢೀಕರಣಕ್ಕಾಗಿ ಪಟದಲ್ಲಿಯ ಆಕೃತಿಗಳಿಗೆ ತುಲನೆ ಹಚ್ಚುವದರಿಂದ ತುಲನಾಶಕ್ತಿಯು ಬೆಳವಣಿಗೆಯೂ ಆಗುತ್ತದೆ. ಇವೆಲ್ಲವುಗಳ ದ್ವಾರದಿಂದ ಎಣಿಕೆ, ಬಾಯಿ ಬೇರೀಜು, ವಜಾಬಾಕಿ ಮಾಡುವದು, ಆಕೃತಿ ತೆಗೆ ಯುವದು ಮುಂತಾದವುಗಳನ್ನು ಮಾಡಿಕೊಂಡು ಬೇರೆ ಬೇರೆ ಪಾಠಗಳ ಪರಸ್ಪರ ಸಂಬಂಧವಿಟ್ಟುಕೊಳ್ಳಲಿಕ್ಕೆ ಬರುತ್ತದೆ. ಬೇರೆ ಪಾಠದಲ್ಲಿ ಇವೇ ಉಪಕರಣಗಳೂ ಉದಾಹರಣೆಗಳೂ ಎನಿಸಿಕೊಳ್ಳುತ್ತವೆ. ಏಣುಗಳ ಹತ್ತಿಕ್ಕುವಿಕೆ, ಪಾತಳಿಗಳ ಮೇಲೆ ಕೈಯಾಡಿಸೋಣ, ಘನಗೋಲಗಳ ವ್ಯತ್ಯಾಸ, ಇವೇ ಮೊದಲಾದ ಕ್ರಿಯೆಗಳಿಂದ ತತ್ಕ್ರಿಯಾವಾಹಿಗಳಾದ ನರಗಳಲ್ಲಿ ಚಟುವಟಿಕೆಯುಂಟಾಗಿ ಇಂದ್ರಿಯಗಳ ಶಕ್ತಿ ವೃದ್ಧಿಯೂ ಆಗುವದು. ಹೀಗೆ ಯೋಗ್ಯ ಕಾಲದಲ್ಲಿ ಅವು ಬೆಳವಣಿಗೆ ಹೊಂದದಿದ್ದರೆ ಮುಂದೆ ಅವುಗಳ ಶಕ್ತಿಯು ಕುಗ್ಗುವದು. ಅಥವಾ ಉಪಯೋಗದ ಅಭಾವದಿಂದ ಶಕ್ತಿಯು ಇಲ್ಲದಂತೆ ಸಹ ಆಗಬಹುದು.

ಶೈಶವಾವಸ್ಥೆಯು ಭಾವೀ ಆಯುಷ್ಯದ ಉಗಮಸ್ಥಾನವಾಗಿರುವದು. ಸೊಂಪಾಗಿ ಬೆಳೆದ ಮೊಗ್ಗೇ ಒಳ್ಳೆಯ ಹೂವು ಆಗುವಂತೆ ಶೈಶವಾವಸ್ಥೆಯನ್ನು ಸರಿಯಾದ ರೀತಿ ಯಲ್ಲಿ ಕಳೆದ ಮಕ್ಕಳೇ ಉತ್ತಮರಾದ ಮನುಷ್ಯರಾಗುವರೆಂದು ಮಾನಸ ಶಾಸ್ತ್ರಜ್ಞರು ಹೇಳುತ್ತಾರೆ.

ಇದಕ್ಕೆ ವಿಪರೀತವಾಗಿ ಕ್ರಮವಿಲ್ಲದ ಯಾಂತ್ರಿಕ ರೀತಿಯ ಹಳೆಯ ಪದ್ಧತಿಯಿಂದ ಈ ಶಿಕ್ಷಣವನ್ನು ಸಾಗಿಸಿದರೆ ಸರಿಯಾಗಿ ವಿಚಾರ ಮಾಡುವ ಚಟವು ಮಕ್ಕಳಲ್ಲಿ ಇಲ್ಲ ದಂತಾಗುವದು. ಆದದರಿಂದ ಎಲ್ಲ ಇಂದ್ರಿಯಗಳು ಸರಿಯಾಗಿ ಬೆಳವಣಿಗೆ ಹೊಂದ

ಲಾರವು- ಸಂಬಂಧವಿಲ್ಲದ ಜ್ಞಾನದಿಂದ ತನ್ನಷ್ಟಕ್ಕೆ ತಾನೇ ನೆಟ್ಟಗಾದರಾಯಿತು, ಇಲ್ಲದಿದ್ದರೆ ಇಲ್ಲ. ಈ ರೀತಿಯಾಗಿ ಬೆಳೆದ ಮಕ್ಕಳು ಅರ್ಧ ಮನುಷ್ಯರಾಗಿ ಮುಂದೆ ಪರೀಕ್ಷೆಗಳಲ್ಲಿ, ತೀರ ಅಬದ್ಧ ಉತ್ತರಗಳನ್ನು ಕೊಟ್ಟ ಉದಾಹರಣೆಗಳು ಅನೇಕವುಂಟು. ಅಥವಾ ಪರೀಕ್ಷೆಯಲ್ಲಿ ಪಾಸಾದರೂ ಕೆಲಸ ನಿರ್ವಹಿಸಲಿಕ್ಕೆ ಅಸಮರ್ಥರಾದ ಉದಾಹರಣೆಗಳೂ ವೆಗ್ಗಳವಾಗಿರುವವು.

ಬಾಲಕರ ಅಂಕಗಣಿತದ ಅಭ್ಯಾಸ ಕ್ರಮದಲ್ಲಿ ಸಂಖ್ಯೆಗಳ ಎಣಿಕೆಯು ಮೊದಲನೆಯದಾಗಿರುವದು. ಸಂಖ್ಯಾಜ್ಞಾನ, ಸಂಖ್ಯಾಲೇಖನ, ಈ ವಿಷಯದಲ್ಲಿ ಮುಖ್ಯವಾಗಿ ನೆನಪಿಡತಕ್ಕ ಸಂಗತಿಗಳನ್ನೂ, ಶಿಕ್ಷಣ ಪದ್ಧತಿಯನ್ನೂ ತೀರ ಸಂಕ್ಷೇಪವಾಗಿ ಹೇಳುವೆವು.

ಸಂಖ್ಯಾಜ್ಞಾನದಲ್ಲಿ ವಸ್ತುಗಳ ಸಹಾಯವನ್ನು ತೆಗೆದುಕೊಂಡೇ ಶಿಕ್ಷಣವನ್ನು ಆರಂಭಿಸತಕ್ಕದ್ದು. ಸಂಖ್ಯಾಜ್ಞಾನ, ಸಂಖ್ಯಾಲೇಖನ ಪಾಠಗಳನ್ನು ಕಲಿಸುವಾಗ ಹಿಂದೆ ಕಲಿತ ೩ ನೆ ಕರಣದ ಕಿಂಡರಗಾರ್ಟನ್ ಪಾಠದ ಉಪಯೋಗವನ್ನು ಮಾಡಿಕೊಳ್ಳಬಹುದು. ಅವುಗಳಿಂದ ಕಲಿತ ಸಂಖ್ಯೆಗಳ ಬೇರೀಜು, ವಜಾಬಾಕಿ ೨ ರ ೪ ರ ಗುಂಪುಗಳನ್ನು ಪ್ರತ್ಯಕ್ಷ ಕಟ್ಕೋಣ ಇತ್ಯಾದಿ ಕೃತಿಗಳಿಂದ ಪಾಠಗಳ ಪರಸ್ಪರ ಸಂಬಂಧವನ್ನಿಟ್ಟುಕೊಂಡಂತೆ ಆಗುವದಲ್ಲದೆ ಪ್ರತ್ಯಕ್ಷ ವಸ್ತುಗಳ ಸಹಾಯದಿಂದ ಶಿಕ್ಷಣ ಸಾಗಿಸಿದಂತೆ ಆಗುತ್ತದೆ. ಈ ತರಹದ ಸಂಖ್ಯಾಜ್ಞಾನದ ಪಾಠಗಳಿಂದ ಅಪ್ರತ್ಯಕ್ಷವಾಗಿ ೨ ರ, ೪ ರ ಮೊಗ್ಗಿಗಳನ್ನು ಕಲಿಸಿದಂತೆ ಆಗುವದಲ್ಲದೆ ಪೇಟೆಯೊಳಗಿನ ಹಣ್ಣು, ಕಾಯಿಪಲ್ಲೆಗಳ ವ್ಯವಹಾರದ ಲೆಕ್ಕಗಳನ್ನು ಸಹ ಕಲಿಸಿದಂತೆ ಆಗುತ್ತದೆ.

ಮೊದಲು ಸಂಖ್ಯೆಯ ಅರ್ಥ ಜ್ಞಾನ, ಆ ಮೇಲೆ ಅದರ ಹೆಸರು, ಅದನ್ನು ಬರೆಯುವ ರೀತಿ ಈ ಕ್ರಮದಿಂದ ಕಲಿಸಬೇಕು. ಅಕ್ಷರ ಗುಂಪುಗಳಲ್ಲಿ ಅಂಕಿಗಳನ್ನು ಸೇರಿಸಿ ಸಹ ಕಲಿಸಬಹುದು. ಈ ರೀತಿಯಿಂದ ಅಕ್ಷರ ಪಾಠ, ಅಂಕೆಯ ಪಾಠಗಳು ಪರಸ್ಪರ ಪೂರಕವಾಗುವವು. ಈ ಪೂರಕ ಪಾಠಗಳು ಶಿಕ್ಷಣದಲ್ಲಿ ಬೆಲೆಯುಳ್ಳವು ಆಗಿರುವವು.

ಸಂಖ್ಯೆಗಳಲ್ಲಿ ಒಂದು ಸೇರಿಸಿದರೆ ಮುಂದಿನ ಸಂಖ್ಯೆಯಾಗುವದು. ಈ ವಿಷಯವನ್ನು ಮಣಿಗಳನ್ನೇ ದಾರದಲ್ಲಿ ಪೋಣಿಸುತ್ತ ಮನೋರಂಜಕವಾಗಿ ಶಿಕ್ಷಣ ಸಾಗಿಸಲಿಕ್ಕೆ ಬರುತ್ತದೆ. ಸಂಖ್ಯೆ ಕಲಿಸುವಾಗ, ಎರಡು ಎಂಬ ಸಂಖ್ಯೆ, ಎರಡನೆಯ ಎಂಬ ಕ್ರಮವಾಚಕ ಸಂಖ್ಯೆ ಇವುಗಳೊಳಗಿನ ಅರ್ಥವನ್ನು ಸರಿಯಾಗಿ ತಿಳಿಸಲಿಕ್ಕೆ ಮರೆಯಬಾರದು.

೯ರಲ್ಲಿ ಒಂದು ಸೇರಿಸಿ ೧೦ರ ಸರ ಮಾಡಲಿಕ್ಕೂ ಅದನ್ನು ಬರೆಯುವಾಗ ಸರದ ಸಂಖ್ಯೆ ತೋರಿಸಲಿಕ್ಕೆ ೧ ನ್ನೂ ಏನೂ ಇಲ್ಲದ ಗುರುತನ್ನು ತೋರಿಸಲಿಕ್ಕೆ O ಯನ್ನು ಬರೆದು ಹತ್ತರ ಬರಹವನ್ನು ಕಲಿಸಬೇಕು.

ಈ ರೀತಿಯಾಗಿ ಎಣಿಕೆಯ ಜ್ಞಾನ, ಸಂಖ್ಯೆಯ ಅರ್ಥಜ್ಞಾನ ಬಳಿಕ ಬರಹದ ಜ್ಞಾನ ಇವುಗಳನ್ನು ದೃಢಪಡಿಸುವದಕ್ಕಾಗಿ ಕೂಡಿಸುವದು, ಕಳೆಯುವದು ಇತ್ಯಾದಿಗಳ ರೂಢಿಮಾಡಿಸಬೇಕು. ಬೇರೀಜಿನಲ್ಲಿ ಕೈಲೆ ಬರಪಂಥ ಅಂಕೆಗಳಿರಬೇಕು.

೧೦ರ ಗಂಟಿನ ಜ್ಞಾನವಾದ ಬಳಿಕ ೯೦ರ ವರೆಗೂ ಇದೇ ರೀತಿಯಾಗಿ ಗಂಟು ಬಿಡಿಕಾಳುಗಳ ಸಹಾಯದಿಂದ ಜ್ಞಾನಮಾಡಿಕೊಡಬೇಕು. ಆಗ ಸಹ ೨೩+೭, ೩೩+೬ ಈ ಬಗೆಯ ಕೈಲೆ ಬರದಂಥ ಬೇರೀಜಿನ ರೂಢಿ ಮಾಡಿಸಬೇಕು. ಆಗ ಜಾಣರಾದ ಹುಡುಗರು ಕೈಲೆ ಬರುವಂಥ ಬೇರೀಜುಗಳಿದ್ದರೆ ಕೂಡಿಸುವ ಅಂಕೆಯನ್ನು ಒಡೆದು ಕೂಡಿಸಲು ಇಚ್ಛಿಸುವರು. ತಾವಾಗಿಯೇ ಬಾಲಕರು ಹೆಚ್ಚಿನ ಜ್ಞಾನಕ್ಕಾಗಿ ಹಾತೊರೆಯುವದು ಶಿಕ್ಷಣದ ನಿಜವಾದ ದಾರಿಯಾಗಿರುವದು. ಶಿಕ್ಷಕನು ತಾನಾಗಿ ಸರಳವಾದ ಶಿಕ್ಷಣ ಕ್ರಮದಲ್ಲಿ ಹೆಚ್ಚಿನ ತೊಂದರೆ ಸೇರಿಸಿಕೊಳ್ಳಬಾರದು.

ಬರಹದ ಜ್ಞಾನವನ್ನು ದೃಢಪಡಿಸುವಾಗ ಕಾಳುಗಳಿಂದಾಗಲಿ, ಉಂಗುರಗಳಿಂದಾಗಲಿ ಸಂಖ್ಯೆಗಳ ಆಕೃತಿಯ ರೂಢಿಯನ್ನು ಮಾಡಿಸಿದರೆ ಪಾಠವು ದೃಢವೂ ಮನೋರಂಜನೆಯೂ ಉಳ್ಳದ್ದಾಗುವದು.

ಭೂಮಿತಿ— ಕಿಂಡರ ಗಾರ್ಟನ್ ಕ್ರಮದಲ್ಲಿಯ ಇಟ್ಟಿಗೆ ಘನ ಮೊದಲಾದವುಗಳಲ್ಲಿ ಮೂಲೆ, ಅಂಚು, ವಕ್ರ ಏಣು ಇತ್ಯಾದಿಗಳ ಜ್ಞಾನಮಾಡಿಕೊಡತಕ್ಕದ್ದಿರುತ್ತದೆ. ಅದರ ಉಪಯೋಗವನ್ನೇ ಅಂಕೆಗಳ ಪಾಠದಲ್ಲಿ ಮೂಲೆಗಳ ಸಂಖ್ಯೆ, ಅವುಗಳ ಬೇರೀಜು, ವಜಾಬಾಕಿ ಮೊದಲಾದವುಗಳನ್ನು ಕೇಳಿಕೊಂಡರೆ ಅಂಕೆಯ ಪಾಠ, ಕಿಂಡರ ಗಾರ್ಟನ್ ಕ್ರಮ, ಭೂಮಿತಿ ಈ ಎಲ್ಲ ಪಾಠಗಳನ್ನು, ಪರಸ್ಪರ ಸಂಬಂಧಿಸಿಕೊಂಡು ಕಲಿಸಿದಂತೆ ಆಗುತ್ತದೆ.

ಘನಗಳನ್ನು ಹಿಟ್ಟಿನ ಮೇಲಾಗಲಿ, ಬಣ್ಣದ ಪುಡಿಯ ಮೇಲಾಗಲಿ ಹತ್ತಿಕ್ಕಲು ಆಕೃತಿಗಳು ಮೂಡುವವು. ಇವೇ ಘನದ ಮೇಲ್ಮೈಯ ಚಿತ್ರ, ಅಥವಾ ಆಕಾರಗಳಾಗಿರುವವು. ಇವೇ ಆಕಾರಗಳು ಆಕೃತಿಗಳ ಪಟದಲ್ಲಿರುವವು. ಒಂದೇ ಮಾದರಿಯ ಆಕೃತಿಗಳನ್ನು ಬೇರೆ ಬೇರೆ ಬಣ್ಣದ ರಟ್ಟುಗಳಲ್ಲಿ ಕತ್ತರಿಸಿಟ್ಟುಕೊಂಡಿದ್ದರೆ ಬಣ್ಣಗಳು ಭಿನ್ನವಾಗಿದ್ದರೂ ಎಲ್ಲವುಗಳಲ್ಲಿಯೂ ಆಕಾರ ಸಾಮ್ಯವಿರುವದೆಂದು ಹುಡುಗರ ಮನಸ್ಸಿನಲ್ಲಿ ಬಿಂಬಿಸುವದು. ಈ ಪ್ರಕಾರ ಆಕೃತಿಜ್ಞಾನವನ್ನು ತುಲನಾತ್ಮಕ ದೃಷ್ಟಿಯಿಂದ ದೃಢಪಡಿಸಬೇಕು.

ಚೌಕು, ದುಂಡ ಆಕಾರಗಳುಳ್ಳ ಸೃಷ್ಟಿಯ ವಸ್ತುಗಳನ್ನು ಪಾಟಿಯ ಮೇಲೆ ಇಟ್ಟು ಗೆರೆ ಹೊಡೆಯಲಿಕ್ಕೆ ಹಚ್ಚಬೇಕು. ಈ ರೀತಿಯಾಗಿ ಆಕೃತಿ ಪಾಠಗಳಿಗೂ ಡ್ರಾಯಿಂಗದ ಪಾಠಗಳಿಗೂ ಸಂಬಂಧಿಸಿ ಕಲಿಸಲಿಕ್ಕೆ ಬರುತ್ತದೆ.

ಕಿಂಡರ ಗಾರ್ಟನ್ ಕ್ರಮದಲ್ಲಿಯ ಕಡಿಗಳನ್ನು ಒಂದಕ್ಕೊಂದು ಕೂಡಿಸುವದ ರಿಂದ ಇಂಥವೇ ಆಕೃತಿಗಳಾಗುತ್ತವೆ. ಅವನ್ನೇ ಅವರು ಚಂದಕಾಣಿಸುವಂತೆ ಕೂಡಿ ಸುತ್ತ ಹೋದರೆ ಕಲ್ಪನೆಯಿಂದ ಚಂದಕಾಣುವ ತೊಡಕು ಆಕೃತಿಗಳನ್ನು ರಚಿಸ ಲಿಕ್ಕೆ ಬರುತ್ತದೆ.

ಇವು ಭೂಮಿತಿಗೂ ಡ್ರಾಯಿಂಗಿಗೂ ಮಧ್ಯಸ್ಥವಾದ ಪಾಠಗಳಾಗುವವು. ಇದ ರಿಂದ ಹುಡುಗರಲ್ಲಿ ತುಲನಾಶಕ್ತಿ, ಕಲ್ಪನಾ ಶಕ್ತಿಗಳು ಬೆಳೆಯುವವು.

ಆಕೃತಿಗಳ ಹೆಸರನ್ನು ಕಠಿನ ಶಬ್ದಗಳಿಂದ ಹೇಳದೆ ರೂಢಿಯೊಳಗಿನ ವಸ್ತುಗಳ ಹೆಸರಿನಿಂದ ಹೇಳಬಹುದು.

ಚಿಕ್ಕಮಕ್ಕಳ ಅಭ್ಯಾಸ ಕ್ರಮದಲ್ಲಿ ಚಿತ್ರ ನಿರೀಕ್ಷಣ, ತೆಗೆಸೋಣ ಇವುಗಳಿಗೆ ಬಹಳ ಬೆಲೆ ಇರುತ್ತದೆ.

ಪೆಸ್ಟಲಾಸ್ಟಿಯೆಂಬ ಶಿಕ್ಷಣ ಶಾಸ್ತ್ರಜ್ಞನು ಚಿತ್ರ ಬರೆಯುವದು ಅಭ್ಯಸ್ತವಾದ ಮೇಲೆಯೇ ಬರೆವಣಿಗೆಯನ್ನು ಕಲಿಸಬೇಕೆಂದು ಹೇಳಿರುವನು.

ಬರೆವಣಿಗೆಯನ್ನು ಕಲಿಯುವಾಗ ಮಗುವು ಸುಲಭವಾದ ಅಕ್ಷರಗಳನ್ನೂ ಅವುಗ ಳಿಂದಾಗುವ ಮಾತುಗಳನ್ನೂ ಮೊದಲು ಕಲಿಯಬೇಕೆಂದು ಇವನ ಉದ್ದೇಶವಾಗಿದ್ದಿತು. ಸಂಖ್ಯಾಶಾಸ್ತ್ರವೇ ಉಳಿದ ಶಾಸ್ತ್ರಗಳಿಗೆ ಆಧಾರವಾಗಿರುವದರಿಂದ ಇದನ್ನು ಎಚ್ಚರದಿಂದ ಕಲಿಸಬೇಕೆಂದೂ ಇಂಥ ಪ್ರಸಂಗದಲ್ಲಿ ಚಿಕ್ಕೆಗಳು, ವಿಭಾಗಿಸಿದ ಚೌಕುಗಳು ಮುಂತಾದ ಸ್ಥೂಲ ನಿದರ್ಶನಗಳನ್ನು ಉಪಯೋಗಿಸಬೇಕೆಂದು ಹೇಳುತ್ತಿದ್ದನು. ಅವನ ಶಿಕ್ಷಣ ಕ್ರಮದಲ್ಲಿ ಭಾಷೆಯನ್ನು ಕಲಿಸುವದಕ್ಕೆ ಸಹ ಇಂಥ ಚೌಕಾದ ಮನೆಗಳೇ ಸ್ಥೂಲ ನಿದರ್ಶನಗಳಾಗಿದ್ದವು.

ಪೆಸ್ಟಲಾಸ್ಟಿಯು ಚೌಕಾದ ಮನೆಗಳನ್ನು ವಿಶೇಷವಾಗಿ ಉಪಯೋಗಿಸುತ್ತಿದ್ದನು. ಈ ಮನೆಗಳನ್ನು ಸಣ್ಣ ಚೌಕುಗಳನ್ನಾಗಿ ವಿಭಾಗಿಸಿ ರೇಖಾ ಗಣಿತವನ್ನು ಕಲಿಸುತ್ತಿದ್ದನು.

ಕಾಗದಗಳ ಮಡಿಕೆಯಿಂದ ರೇಖೆಗಳನ್ನು, ಆಕೃತಿಗಳನ್ನು ರಚಿಸಲಿಕ್ಕೆ ಬರುತ್ತದೆ ಒಂದೇ ಕ್ರಮದಿಂದ ಅನೇಕ ಮಡಿಕೆಗಳನ್ನು ಎದುರು ಬದರು ಹಾಕುವದರಿಂದ ಬೇರೆ ಬೇರೆ ಆಕೃತಿಗಳಾಗುವವು. ಪಾಕೀಟುಗಳು ಹಡಗುಗಳು, ಮೊದಲಾದ ವ್ಯಾವಹಾರಿಕ ಆಕೃತಿಗಳನ್ನು ಮಡಿಚುವಿಕೆಯಿಂದ ಮಾಡಿಸಬೇಕು.

ಗಣಿತ ವಿಷಯವನ್ನು ಕಲಿಸುವಾಗ ಅನುಸರಿಸತಕ್ಕ ನಿಯಮಗಳು

೧. ಗಣಿತ ವಿಷಯವನ್ನು ಪ್ರತ್ಯಕ್ಷ ವಸ್ತುಗಳದ್ವಾರದಿಂದಲೇ ಸಾಗಿಸಬೇಕು. ಕೂಡಿಸುವದು, ಕಳೆಯುವದು, ಗಂಟು ಕಟ್ಟುವದು ಮೊದಲಾದ ಕೃತಿಗಳನ್ನು ಎಲ್ಲರೂ ಮಾಡುತ್ತ ಉತ್ತರ ಕೊಡುವಂತೆ ಮಾಡಬೇಕು.

೨. ಅಂಕಿಗಳ ಬರಹ, ಬರಹದ ಪದ್ಧತಿ ಇವುಗಳನ್ನು ಮೊದಲಿನಿಂದಲೂ ಸರಿಯಾಗಿ ಬರೆಯಿಸಬೇಕು.

೩. ಕಲಿಸಿದ ವಿಷಯವು ಎಲ್ಲ ಹುಡುಗರಿಗೂ ತಿಳಿಯಿತು, ಇಲ್ಲವೆಂಬದನ್ನು ತಿಳಿಯಬೇಕು. ಇಲ್ಲದಿದ್ದರೆ ಮುಂದೆ ಇವೇ ಹುಡುಗರೇ ಲೆಕ್ಕ ಹೇಳಿದ ಕೂಡಲೆ ಸುಮ್ಮನೆ ಗುಣಿಸುತ್ತ ಕಾಲಕಳೆಯುತ್ತ ಬೇಸರ ಹುಟ್ಟಿಸುವರು.

೪. ಅಂಕೆಗಳ ಬೇರೀಜು, ವಜಾಬಾಕಿಗಳನ್ನು ವ್ಯವಹಾರಕ್ಕನುಸರಿಸಿದ ಉದಾಹರಣಗಳೊಂದಿಗೆ ಬೇಗ ಮಾಡುವ ಚಟವನ್ನು ಹಚ್ಚಿಸಬೇಕು.

೫. ಅವ್ಯವಸ್ಥಿತ ರೀತಿಯಿಂದ ಮಾಡಿ ಸುಮ್ಮನೆಉತ್ತರ ಹೇಳುವ ಚಟ ಹಚ್ಚಬಾರದು. ತಾನು ಉತ್ತರ ತೆಗೆದ ಬಳಿಕ ಅದು ಯೋಗ್ಯವೆಂದು ಮನಗಾಣಿಸುವದಕ್ಕಾಗಿ ತಾಳೆಗಳನ್ನು ತಾನೇ ನೋಡಿಕೊಳ್ಳಲಿಕ್ಕೆ ಹಚ್ಚಬೇಕು.

೬. ಗಣಿತದ ಪಾಠಗಳಲ್ಲಿ ಪ್ರಶ್ನಪದ್ಧತಿಯಿಂದ ವಿದ್ಯಾರ್ಥಿಗಳಲ್ಲಿ ಮನೋವಿಕಾಸವನ್ನುಂಟುಮಾಡಬೇಕು. ಏಕೀಕರಣ ಪೃಥಕ್ಕರಣ ಪದ್ಧತಿಗಳನ್ನು ಉಪಯೋಗಿಸಬೇಕು.

೭. ಗಣಿತ ವಿಷಯವನ್ನು ಇತರ ವಿಷಯಗಳಿಗೆ ಸಂಬಂಧಿಸಿ ಕಲಿಸಬೇಕು.

ಬೇರೀಜು ವಜಾಬಾಕಿ

ಬಾಲಕರ ವರ್ಗ

ಲೇ:– ಶ್ರೀಯುತ ಬೋಧರಾವ ಪುರೋಹಿತ. ಅ. ಮಾ.ಟ್ರೇ. ಸ್ಕೂ. ಧಾರವಾಡ

ಈಚೆಗೆ ಸರಕಾರದವರು ಗೊತ್ತುಪಡಿಸಿದ ಅಂಕಗಣಿತದ ಹೊಸ ಅಭ್ಯಾಸ ಪತ್ರಿಕೆಯ ಮೇರೆಗೆ ೧೦೦ರ ವರಗಿನ ಯಾವದೇ ಸಂಖ್ಯೆಯಲ್ಲಿ ೫ರ ವರೆಗಿನ ಯಾವದೇ ಸಂಖ್ಯೆಯನ್ನು ವಸ್ತುಗಳ ಸಹಾಯದಿಂದ ಕೂಡಿಸಲಿಕ್ಕೆ ಬರಬೇಕಾಗಿದೆ. ಕಾಳು. ಕಡ್ಡಿ, ಹರಳು, ರಟ್ಟಿನ ತುಂಡು, ಮಣ್ಣಿನ ಗುಳಿಗೆ, ಗುಂಡಿನ ಚೌಕಟ್ಟು ಇವುಗಳ ಸಹಾಯದಿಂದ ಒಂದೂ ಒಂದೂ ಎರಡು, ಎರಡೂ ಒಂದೂ ಮೂರು, ಈ ಹತ್ತರೊಳಗಿನ ಸಂಖ್ಯಗಳಲ್ಲಿ ೫ರ ವರೆಗೆ ಸಂಖ್ಯ ಕೂಡಿಸಲಿಕ್ಕೆ ರೂಢಿಮಾಡಿಸಬೇಕು. ಇದರಂತೆ ೧೧ರಿಂದ ೨೦ರ ವರೆಗೆ ಸಂಖ್ಯಗಳಲ್ಲಿ ೧ರಿಂದ ೫ರ ವರೆಗಿನ ಸಂಖ್ಯಗಳನ್ನು ಕೂಡಿಸಬೇಕು. ಇಲ್ಲಿ ೧೬ರಲ್ಲಿ ೫, ೧೭ರಲ್ಲಿ ೪, ೧೮ರಲ್ಲಿ ೩, ೪, ೫, ೧೯ರಲ್ಲಿ ೨, ೩, ೪, ೫ ಈ ಸಂಖ್ಯಗಳನ್ನು ಕೂಡಿಸಲಿಕ್ಕೆ ಹೇಳಬಾರದು. ಈ ಪ್ರಕಾರ ೧೦೦ರ ವರೆಗಿನ ಸಂಖ್ಯಗಳಲ್ಲಿ ೫ರ ವರೆಗಿನ ಸಂಖ್ಯಗಳನ್ನು ಕೂಡಿಸಲಿಕ್ಕೆ ಕಲಿಸಬೇಕು. ವಸ್ತುಗಳ ಸಹಾಯದಿಂದ ಕೂಡಿಸುವದು ಬಾಯಿಂದಲೇ ಸಾಗತಕ್ಕದ್ದು, ಪಾಟಿಯ ಮೇಲೆ ಅಂಕೆಗಳನ್ನು ಹಾಕಿಸಿ ಕೂಡಿಸಲಿಕ್ಕೆ ಹೇಳಬಾರದು.

೪೨ರಲ್ಲಿ ೫ ಕೂಡಿಸೆಂದು ಹೇಳಿದಾಗ ೪೨ರಲ್ಲಿ ೪ ಹ. ಗಂ. ಮತ್ತು ೨ಬಿಡಿಕಾಳು ಇರುವವು. ಇವುಗಳಲ್ಲಿ ೫ಬಿಡಿಕಾಳು ಕೂಡಿಸಬೇಕಾಗಿದೆ. ೪ ಹ. ಗಂಟೆಗಳು ಹಾಗೆಯೇ ಉಳಿವವು. ೨ ಬಿ. ಕಾಳಿನಲ್ಲಿ ೫ ಬಿಡಿಕಾಳು ಕೂಡಿಸಿದರೆ, ೭ ಬಿ. ಕಾ. ಆದವು. ಆದ್ದರಿಂದ ೪ ಹ. ಗಂ. ಮತ್ತು ೭ ಬಿಡಿಕಾಳು ಅಂದರೆ ೪೭ ಆಯಿತೆಂದು ವಿದ್ಯಾರ್ಥಿಗಳು ಹೇಳಬೇಕು. ಮತ್ತು ವಸ್ತುಗಳ ಸಹಾಯದಿಂದ ಸರಿಯಾಗಿ ಮಾಡಿ ತೋರಿಸಲಿಕ್ಕೆ ಹುಡುಗರು ಸಮರ್ಥರಾಗಿರಬೇಕು.

ಬೇರೆ ಬೇರೆ ಬಣ್ಣದ ಕಾಗದದ ಚೌಕುಗಳನ್ನು (ಒಂದು ಇಂಚಿನವು ಅಥವಾ ಅರ್ಧ ಇಂಚಿನವು) ಶಿಕ್ಷಕರು ದೊರಕಿಸಿಕೊಂಡು ಕೆಂಪು ಚೌಕು = ಬಿ. ಕಾ. ಹಳದಿ ಚೌಕು = ದಹಂ, ನೀಲಿ ಚೌಕು = ಶತಂ.

ಕೆಂಪು ಕೆಂಪು ಕೆಂಪು

ಮತ್ತು ಕೆಂಪು ಕೆಂಪು ಕೂಡಿ ೫ ಚೌಕು ಕಾಗದಗಳು.

ಹಳದಿ ಕೆಂಪು ಕೆಂಪು = ೧೨

ಮತ್ತು ಕೆಂಪು ಕೆಂಪು ಕೆಂಪು = ೩ ಕೂಡಿ ೧೫ ಆಯಿತು

೩೫ ರಲ್ಲಿ ಹ. ಗಂ. ಎಷ್ಟು? ಬಿ. ಕಾ. ಎಷ್ಟು ?

ಹ ಹ ಹ ಕೆ ಕೆ ಕೆ ಕೆ ಕೆ

ಹ. ಗಂಟು ೩ ಅವೆ ಬಿ. ಕಾಳು ೫ ಅವೆ. ೩ ಹ. ಗಂ, ಲ್ಲಿ ೫ ಬಿ. ಕಾಳು ಕೂಡಿಸಿದರೆ ೩೫ ಆಗುವದು.

ಈ ಪ್ರಕಾರದ ಅನೇಕ ಬೇರೀಜುಗಳನ್ನು ಪ್ರತ್ಯಕ್ಷ ಮಾಡಿಸಿ ಒಂದು ಪುಸ್ತಕದಲ್ಲಿ ಅಂಟಿಸಿ ಇಡಿಸಬೇಕು. ಅಚ್ಚುಕಟ್ಟಾಗಿಯೂ ಸ್ವಚ್ಛವಾಗಿಯೂ ಈ ಕೆಲಸವನ್ನು ಹುಡುಗರು ಮಾಡುವಂತೆ ಶಿಕ್ಷಕರು ನೋಡುತ್ತಿರಬೇಕು.

೧ ನೆಯ ಇಯತ್ತೆಯಲ್ಲಿ " ೧೦೦ ರ ವರೆಗಿನ ಯಾವುದೇ ಸಂಖ್ಯೆಯಲ್ಲಿ ೧೦ ರ ವರೆಗಿನ ಯಾವುದೇ ಸಂಖ್ಯೆಯನ್ನು ಬಾಯಿಂದ ಕೂಡಿಸುವದು ಅಥವಾ ಕಳೆಯುವುದು ಸುಲಭವಾದ ಮತ್ತು ವ್ಯವಹಾರದಲ್ಲಿಯ ಎರಡು ಅಂಕೆಗಳುಳ್ಳ ಸಂಖ್ಯೆಗಳ ಬೇರೀಜು ವಜಾಬಾಕಿಯನ್ನು ಪಾಟಿಯ ಮೇಲೆ ಮಾಡುವುದು. ನಾಣ್ಯದ ಸಂಬಂಧದ ಸುಲಭ ಬೇರೀಜು ವಜಾಬಾಕಿಯ ಲೆಕ್ಕಗಳು " ಇಷ್ಟು ಭಾಗವನ್ನು ಕಲಿಸಬೇಕೆಂದು ಗೊತ್ತುಪಡಿಸಿರುವದು.

ಬಾಲಕರ ವರ್ಗಕ್ಕಾಗಿ ಗೊತ್ತುಪಡಿಸಿದ ಅಭ್ಯಾಸವನ್ನು ಪೂರ್ಣ ಮುಗಿಸಿದ್ದರೆ ಮಾತ್ರ ಈ ಇಯತ್ತೆಯಲ್ಲಿಯ ಭಾಗವನ್ನು ಕಲಿಯಲಿಕ್ಕೆ ವಿದ್ಯಾರ್ಥಿಗಳಿಗೆ ಬಹಳ ಅನುಕೂಲವಾಗುವುದು. ಹಿಂದಿನ ಭಾಗದ ಉಜಳಣಿಯನ್ನು ಪ್ರಾರಂಭದಲ್ಲಿ ಪೂರ್ಣ ಮಾಡಿಸಿ ಮುಂದೆ ಸಾಗುವುದು ಒಳ್ಳೆಯದು. ಈ ಇಯತ್ತೆಯಲ್ಲಿ ಬಾಯಿ ಬೇರೀಜನ್ನು ಮುಂದೆ ಸಾಗಿಸಬೇಕು. ೨, ೩, ೪ ರಂತೆ ಕಾಳುಗಳ ಗುಂಪಿ ಮಾಡಿಟ್ಟುಕೊಂಡು ೨, ೪, ೬ ಹೀಗೆ ಎರಡೆರಡರಂತೆ, ೩, ೬, ೯ ಹೀಗೆ ಮೂರು ಮೂರರಂತೆ ಕೂಡಿಸುವದಕ್ಕೆ ಬಹಳ ರೂಢಿ ಮಾಡಿಸಬೇಕು. ಮುಂದೆ ೧ ರಲ್ಲಿ ೨ ರಂತೆ, ೧ ರಲ್ಲಿ ೩ ರಂತೆ ಕೂಡಿಸುವುದಕ್ಕೆ ಹಚ್ಚಬೇಕು.

ಇವುಗಳಿಗಾಗಿ ಶಿಕ್ಷಕರು ಪಟಗಳನ್ನು ತಯಾರಿಸಿಕೊಳ್ಳಬೇಕು.

○	೧	○ ○	೨
○ ○ ○	೩	○ ○ ○ ○	೪
○ ○ ○ ○ ○	೫	○ ○ ○ ○ ○ ○	೬
○ ○ ○ ○ ○ ○ ○	೭	○ ○ ○ ○ ○ ○ ○ ○	೮
○ ○ ○ ○ ○ ○ ○ ○ ○	೯	○ ○ ○ ○ ○ ○ ○ ○ ○ ○	೧೦
□○	೧೧	□○ ○	೧೨
□○ ○ ○	೧೩	□○ ○ ○ ○	೧೪
□○ ○ ○ ○ ○	೧೫	□○ ○ ○ ○ ○ ○	೧೬
□○ ○ ○ ○ ○ ○ ○	೧೭	□○ ○ ○ ○ ○ ○ ○ ○	೧೮
□○ ○ ○ ○ ○ ○ ○ ○ ○	೧೯	□ □	೨೦

ಸೂಚನೆ: □ = ಹ. ಗಂಟು ○ = ಬಿ. ಕಾಳು

೧,	೨,	೩
೪,	೫,	೬
೭,	೮,	೯
೧೦,	೧೧,	೧೨
೧೩,	೧೪,	೧೫
೧೬,	೧೭,	೧೮
೧೯,	೨೦,	೨೧
೨೨,	೨೩,	೨೪
೨೫,	೨೬,	೨೭
೨೮,	೨೯,	೩೦

೧	೨	೩	೪
೫	೬	೭	೮
೯	೧೦	೧೧	೧೨

ಇತ್ಯಾದಿ.

೧	೨	೩	೪	೫
೬	೭	೮	೯	೧೦
೧೧	೧೨	೧೩	೧೪	೧೫
೧೬	೧೭	೧೮	೧೯	೨೦
೨೧	೨೨	೨೩	೨೪	೨೫

ಇತ್ಯಾದಿ

ಈ ಪ್ರಕಾರದ ಪಟಗಳನ್ನು ಬಾಯಿಬೇರೀಜಿಗಾಗಿಯೂ ಮಗ್ಗಿಗಳಿಗಾಗಿಯೂ ಉಪಯೋಗಿಸಿಕೊಳ್ಳಬೇಕು.

ಇಲ್ಲಿ— ಒಂದೂ ಎರಡೂ ಮೂರೂ
ಮೂರೂ ಎರಡೂ ಐದು
ಐದೂ ಎರಡೂ ಏಳೂ

ಎಂದು ಪ್ರಾರಂಭದಲ್ಲಿಯ ಓದುವ ರೂಢಿಯನ್ನೂ ಬರಬರುತ್ತ ಬಿಟ್ಟು ೧, ೩, ೫, ೭, ಮತ್ತು ೨, ೪, ೬, ೮, ೧೦ ಈ ಪ್ರಕಾರ ಕೂಡಿಸಬಹುದಾದ ಕಾಳಿನ ಸಂಖ್ಯೆಯನ್ನು ನೋಡಿ ಎಣಿಕೆ ಮಾಡುವ ರೂಢಿಯು ವಿದ್ಯಾರ್ಥಿಗಳಿಗೆ ಬಹಳವಾಗಬೇಕು.

ಸುಲಭ ಉದಾಹರಣೆಗಳ ವಜಾಬಾಕಿಯನ್ನು ಬಾಯಿಂದ ಮಾಡುವದಕ್ಕೆ ವಸ್ತುಗಳ ಸಹಾಯದಿಂದ ಕಲಿಸಬೇಕು. ಬಳಿಕ ೧೯ ರಲ್ಲಿ ೧ ರಂತೆ, ೨ ರಂತೆ, ೩ ರಂತೆ ಕಳೆಯುವದಕ್ಕೆ ರೂಢಿ ಮಾಡಿಸಬೇಕು. ವ್ಯವಹಾರಕ್ಕೆ ಅನುಸರಿಸಿದ ಲೆಕ್ಕಗಳನ್ನೇ ಹೇಳಬೇಕು. ಕಾಳು ಮೊದಲಾದವುಗಳ ಸಹಾಯದಿಂದ ಉತ್ತರವು ಸರಿಯೆಂದು ಹುಡುಗರು ಮನಗಾಣುವಂತೆ ಎಚ್ಚರಗೊಳ್ಳತಕ್ಕದ್ದು. ದಶಕ ಮತ್ತು ಶತಕಗಳ ಬೇರೀಜನ್ನೂ ಬಾಯಿಂದ ಮಾಡುವ ರೂಢಿ ಮಾಡಿಸಬೇಕು. ಉದಾ —(೧) ೫ ದಹಮಿನಲ್ಲಿ ೩ ದಹಮು ಕೂಡಿಸಿದರೆ ಎಷ್ಟು?

(೨) ೩ ನೂರು ರೂ. ಗಳಲ್ಲಿ ೫ ನೂರು ರೂ. ಕೂಡಿಸಿದರೆ ಎಷ್ಟು?

(೩) ೭ ದಹಮಿನಲ್ಲಿ ೪ ದಹಮು ಕಳೆದರೆ ಎಷ್ಟು?

(೪) ೧೮ ದಹಮಿನಲ್ಲಿ ೭ ದಹಂ ಕಳೆದರೆ ಎಷ್ಟು?

(೫) ೯ ಶತಕಗಳಲ್ಲಿ ೪ ಶತಕಗಳನ್ನು ಕೊಟ್ಟರೆ ಎಷ್ಟು ಉಳಿಯುವದು?

ಇಷ್ಟಾದ ಬಳಿಕ ಪಾಟಿಯಮೇಲೆ ಮೊದಲು ಒಂಟಿ ಅಂಕೆಗಳ ಬೇರಿಜು ಕಲಿಸಬೇಕು.

೫, ೩, ೯, ೧, ೮, ೭, ೨ ಇವುಗಳ ಬೇರೀಜು ಎಷ್ಟು? ಇಂಥ ಲೆಕ್ಕಗಳಲ್ಲಿ ಹತ್ತರ ಗುಂಪುಗಳಾಗುವಂತೆ ಆಯಾ ಅಂಕೆಗಳ ಜೋಡು ಪ್ರಾರಂಭದಲ್ಲಿ ಮಾಡಿಸಿ ಬೇರಿಜು ಸುಲಭವಾಗುವಂತೆ ಮಾಡುವದಕ್ಕೆ ಶಿಕ್ಷಕರು ಎಚ್ಚರಗೊಳ್ಳಬೇಕು. ಸಾಲಾಗಿ ಕೆಳಗಿನಿಂದ ಮೇಲೆ, ಮೇಲಿಂದ ಕೆಳಗೆ ಅಥವಾ ಎಡ, ಬಲದಿಂದ ಬೇರೀಜು ಮಾಡುವಾಗ ೧೦,೨೦ ಆಗುವಷ್ಟೇ ಅಂಕೆಯುಗಳ ಭಾಗವನ್ನು ತೆಗೆದು ಕೂಡಿಸಿ ಉಳಿದದ್ದನ್ನೂ ಕೂಡಿಸಬೇಕೆಂಬದನ್ನಾದರೂ ವಿದ್ಯಾರ್ಥಿಗಳಿಗೆ ತಿಳಿಸಿಕೊಡಬೇಕು.

ಮೇಲಿನ ಲೆಕ್ಕವನ್ನು ಎಡದಿಂದ ಬಲಕ್ಕೆ ಬೇರೀಜು ಮಾಡತಕ್ಕದ್ದೆಂದು ತಿಳಿಯಿರಿ. ಐದು, ಎಂಟು, ಬಳಿಕ ೯ ಕೂಡಿಸತಕ್ಕದ್ದದೆ. ಅದರಲ್ಲಿಯ ೨ ಮೊದಲು ಮನದಲ್ಲಿ ಕೂಡಿಸಿ ಮುಂದೆ ಉಳಿದ ೭ ಕೂಡಿಸಲಿಕ್ಕೆ ಅಡ್ಡಿಯಿಲ್ಲವೆಂದು ತಿಳಿಸಬೇಕು. ಆದ್ದರಿಂದ ಐದು, ಎಂಟು (ಹತ್ತು ಹದಿನೇಳು) ಹದಿನೇಳು ಹದಿನೆಂಟು (ಇಪ್ಪತ್ತು, ಇಪ್ಪತ್ತೆರು) (ಮೂವತ್ತು, ಮೂವತ್ತುಮೂರು) ಮೂವತ್ತುಮೂರು,ಮೂವತ್ತೈದು ಹೀಗೆ ಬೇರೀಜು ಮಾಡಿಸಬೇಕು. ಪ್ರಾರಂಭದಲ್ಲಿ ಇದಕ್ಕೂ ಸಣ್ಣ ಸಣ್ಣ ಉದಾಹರಣೆಗಳನ್ನು ತೆಗೆದುಕೊಳ್ಳಬೇಕು.

ಪಾಟಿಯ ಮೇಲಿನ ಲೆಕ್ಕಗಳನ್ನು ತಿಳಿಸಿಕೊಡುವಾಗ್ಗೆ ಪ್ರಾರಂಭದಲ್ಲಿ ಪ್ರತ್ಯಕ್ಷ ವಸ್ತುಗಳನ್ನು ಉಪಯೋಗಿಸಿ ಕಲಿಸಬೇಕು. ಉದಾ:— ೩೫ ಪೆನ್ಸಿಲುಗಳಲ್ಲಿ ೮ ಪೆನ್ಸಿಲು ಕೂಡಿಸಿರಿ.



ಈ ರೀತಿಯಾಗಿ ಇಟ್ಟುಕೊಂಡು ಬಿಡಿಗಳನ್ನೂ ಹತ್ತುಗಳನ್ನೂ ಬೇರೆ ಬೇರೆಯಾಗಿ ಕೂಡಿಸ ಹಚ್ಚಬೇಕು. ಬಿಡಿಗಳನ್ನು ಕೂಡಿಸಿದಾಗ್ಗೆ ೧ ಹ. ಗಂಟು ಆಗಿ ೩ ಬಿ. ಕಾ. ಉಳಿದವು. ಈ ಹ. ಗಂಟನ್ನೂ ಹ. ಗಂಟುಗಳಲ್ಲಿ ಕೂಡಿಸಿರಿ.

ದಹಂ	ಎಕ್ಕಂ
೩	೫ ೮
೩	೧೩
* ೧	
೪	೩

ಮುಂದಿನ ಮೆಟ್ಟಿನಲ್ಲಿ ಪ್ರತ್ಯಕ್ಷ ವಸ್ತುಗಳನ್ನು ಬಿಟ್ಟುಕೊಟ್ಟು ಇಲ್ಲಿ ತೋರಿಸಿದಂತೆ ಮನೆಗಳಲ್ಲಿ ಸಂಖ್ಯೆ ಇಟ್ಟುಕೊಂಡು ಎಕ್ಕಮುಗಳನ್ನು ಎಕ್ಕಮುಗಳಲ್ಲಿಯೂ ದಹಮುಗಳನ್ನು ದಹಮುಗಳಲ್ಲಿಯೂ ಕೂಡಿಸಲಿಕ್ಕೆ ಕಲಿಸಬೇಕು.

೪೩ ಪೇನ್ಸಿಲು.

ಮುಂದಿನ ಮೆಟ್ಟಿನಲ್ಲಿ ೪೫ ರೂಪಾಯಿಗಳಲ್ಲಿ ೫೩ ರೂಪಾಯಿ ಕೂಡಿಸು. ಇಂಥ ಕೈಲೆ ಬಾರದ ಜೋಡು ಅಂಕೆಗಳ ಲೆಕ್ಕ ಕಲಿಸಬೇಕು.

ಹ. ಗ. ಬಿಡಿಕಾಳು



ದಹಂ	ಎಕ್ಕಂ
೪ ೫	೫ ೩
೯	೮

೫ ಎಕ್ಕಮುಗಳಲ್ಲಿ ೩ ಎಕ್ಕಮು ಕೂಡಿಸಿದರೆ ೮ ಎಕ್ಕಮು.
೪ ದಹಮುಗಳಲ್ಲಿ ೫ ದಹನು ,, ೯ ದಹಮು.
ಆದ್ದರಿಂದ ೯೮ ರೂ ಗಳು ಉತ್ತರ.

ಮುಂದೆ ೩–೪–ಸಂಖ್ಯೆಗಳನ್ನು ಕೂಡಿಸುವಾಗ್ಗೆ ಬಿಡಿ ಕಾಳುಗಳನ್ನು ಕೂಡಿಸಿ ಹತ್ತರಗಂಟು ಮಾಡಿಕೊಂಡು ಹತ್ತರ ಗಂಟುಗಳಲ್ಲಿ ಕೈಲೆಬಂದ ಹತ್ತರ ಗಂಟುಗಳನ್ನು ಕೂಡಿಸುತ್ತ ಹೋಗಬೇಕು. ಆಯಾ ಮೆಟ್ಟುಗಳಲ್ಲಿ ಅದಕ್ಕೆ ಅನುರೂಪವಾದ ಲೆಕ್ಕಗಳನ್ನು ಹೇಳಬೇಕು. ಪಾಟಿಯ ಮೇಲಿನ ಲೆಕ್ಕಕ್ಕಿಂತ ಮೊದಲು ಆಯಾ ಮೆಟ್ಟುಗಳಿಗೆ ಅನುಕೂಲವಾಗಿರುವಂಥ ಬಾಯಿಲೆಕ್ಕಗಳನ್ನು ಮಾಡಿಸುತ್ತಿರಬೇಕು. ಕಠಿಣವಾದ ಮೆಟ್ಟು ತಿಳಿಸುವಾಗ್ಗೆ ವಸ್ತುಗಳನ್ನೂ ಶತಂ ದಹಂ ಎಕ್ಕಂ ಸ್ಥಾನದ ಮನೆಗಳನ್ನೂ ಉಪಯೋಗಿಸಿಕೊಂಡು ಲೆಕ್ಕ ಬಿಡಿಸುವದು ಸಾಕಷ್ಟು ರೂಢಿಯಾದ ಬಳಿಕ ಇಂಥ ಮನೆಗಳ ಸಹಾಯವನ್ನು ಬಿಟ್ಟುಕೊಟ್ಟು ಕೇವಲ ಸಂಖ್ಯೆಯನ್ನಿಟ್ಟುಕೊಂಡು ಬೇರೀಜು ಮಾಡಿಸಹಚ್ಚಬೇಕು.

ಪಾಟಿಯ ಮೇಲಿನ ವಜಾಬಾಕಿ

(ಉಜಳಣಿ)

೮ ದುಡ್ಡುಗಳಲ್ಲಿ ೫ ದುಡ್ಡು ಕೊಟ್ಟರೆ ಎಷ್ಟು ಉಳಿಯುವವು?
೭ ಆಣೆಗಳಲ್ಲಿ ೩ ಆಣೆಗಳನ್ನು ಕೂಡಿಸಿದರೆ ಎಷ್ಟು ಆಣೆಗಳಾಗುವವು?

---

* ಕೈಲೆ ಬಂದದ್ದು.

೮ ದಶಕಗಳಲ್ಲಿ ೩ ದಶಕಗಳನ್ನು ಕಳೆದರೆ ಎಷ್ಟು ಉಳಿಯುವದು?
೧೪ ರಲ್ಲಿ ೫ ಕಳೆದರೆ ಎಷ್ಟು ಉಳಿಯುವದು?
೧೦ ಹಣ್ಣುಗಳಲ್ಲಿ ಇನ್ನೆಷ್ಟು ಕೂಡಿಸಿದರೆ ೧೫ ಹಣ್ಣು ಆಗುವವು?
೩೬ ಕ್ಕಿಂತ ೩೦ ಎಷ್ಟರಿಂದ ಕಡಿಮೆ ಅದೆ?

ಇಂಥ ಬಾಯಿಲೆಕ್ಕಗಳನ್ನು ಆಯಾ ಮೆಟ್ಟಿನಲ್ಲಿ ಹೇಳಿ ಪಾಟಿಯ ಮೇಲಿನ ಲೆಕ್ಕ ಗಳನ್ನು ಪ್ರಾರಂಭಿಸಬೇಕು.

ಇಲ್ಲಿ ಅನುಕೂಲವಾಗಿ ಮಾಡಿಕೊಳ್ಳಬಹುದಾದ ಮೆಟ್ಟುಗಳು:—

೧ನೆಯ ಮೆಟ್ಟು— (ಅ) ಒಂಟಿ ಅಂಕಿಯಲ್ಲಿ ಒಂಟಿ ಅಂಕಿಗಳನ್ನು ಕಳೆಯುವದು.

ಉದಾ:— ೫ ಗುಂಡುಗಳಲ್ಲಿ ೩ ಗುಂಡು ಹೋದರೆಷ್ಟು ಉಳಿಯುವವು?

(ಬ) ದಶಕಗಳ ವಜಾಬಾಕಿ.

ಉದಾ: — ೭ ಹ. ಗಂಟುಗಳಲ್ಲಿ ೫ ಹ. ಗ. ಕೊಟ್ಟರೆ ಎಷ್ಟು ಉಳಿಯುವವು?

(ಕ) ಶತಕಗಳ ವಜಾಬಾಕಿ.

ಉದಾ:—೬ನೂರ ಬಾಳೆಯ ಹಣ್ಣುಗಳಲ್ಲಿ ४ನೂರ ಹಣ್ಣುಗಳ ಮಾರಾಟವಯಿತು. ಆದರೆ ಉಳಿದ ಹಣ್ಣುಗಳೆಷ್ಟು?

೨ನೆಯ ಮೆಟ್ಟು:— ಜೋಡು ಅಂಕೆಗಳ ಸಂಖ್ಯೆಯಲ್ಲಿ ಒಂಟಿ ಅಂಕೆಗಳುಳ್ಳ ಸಂಖ ಕಳೆಯುವದು.

(೧) ಮೊದಲು ಕಳಿಸಿಕೊಳ್ಳುವ ಸಂಖ್ಯೆಯಲ್ಲಿಯ ಎಕ್ಕಂ ಸ್ಥಾನದ ಅಂಕೆಯು ಕಳೆಯುವ ಅಂಕೆಗಿಂತ ದೊಡ್ಡದಿರಬೇಕು.

(೨) ಬಳಿಕ ಕಳಿಸಿಕೊಳ್ಳುವ ಸಂಖ್ಯೆಯಲ್ಲಿ ಎಕ್ಕಂ ಸ್ಥಾನದ ಅಂಕೆಯು ಕಳೆಯು ಅಂಕೆಗಿಂತ ಸಣ್ಣದಿರಬೇಕು.

೩ನೇಮೆಟ್ಟು:— ಜೋಡು ಅಂಕೆಗಳುಳ್ಳ ಸಂಖ್ಯೆಯಲ್ಲಿ ಜೋಡು ಅಂಕೆಯ ಸಂ ಯನ್ನು ಕಳೆಯುವದು.

(ಅ) ಎಕ್ಕಮ್ಮಿನಲ್ಲಿಯ ಅಂಕೆಯು ದೊಡ್ಡದಿದ್ದಾಗ್ಗೆ.

(ಬ) ,, ,, ಸಣ್ಣದಿದ್ದಾಗ್ಗೆ

ಅ ಮತ್ತು ಬ ಎಂಬ ೨ ಕಾಳಿನ ಗುಂಪಿಗಳಿವೆ ಎಂದು ತಿಳಿಯಿರಿ. ಅ ಗುಂಪಿನಲ್ಲಿ ಬ ಗುಂಪಿಗಿಂತ ಎಷ್ಟು ಕಾಳು ಹೆಚ್ಚು ಅವೆ. ಎಂದು ತಿಳಿದುಕೊಳ್ಳಬೇಕಾದರೆ ನಾವು ಎರಡು ಪ್ರಕಾರದಿಂದ ತಿಳಿದುಕೊಳ್ಳಬಹುದು.

(ಅ) ಅ ಗುಂಪಿನೊಳಗಿಂದ ಬ ಗುಂಪಿನೊಳಗೆ ಇರುವಷ್ಟು ಕಾಳುಗಳನ್ನು ತೆಗೆದಿಟ್ಟರೆ ಉಳಿಯುವ ಕಾಳಿನ ಸಂಖ್ಯೆಯು ಅ ಗುಂಪಿನಲ್ಲಿ ಹೆಚ್ಚಾದ ಕಾಳು.

(ಬ) ಬ ಗುಂಪು ಅ ಗುಂಪಿನಷ್ಟು ಆಗಬೇಕಾದರೆ ಎಷ್ಟು ಕಾಳುಗಳನ್ನು ಕೂಡಿಸಬೇಕು, ಎಂಬದನ್ನು ಗೊತ್ತು ಮಾಡಿಕೊಂಡರೆ ಅ ಗುಂಪಿನಲ್ಲಿ ಹೆಚ್ಚಿದ್ದ ಕಾಳು ಅಥವಾ ಅ ಮತ್ತು ಬ ಗುಂಪಿನಲ್ಲಿಯ ಕಾಳುಗಳ ಸಂಖ್ಯೆಯಲ್ಲಿಯ ಅಂತರವು ಗೊತ್ತಾಗುವದು.

ಇವೆರಡೂ ರೀತಿಗಳಿಂದ ಹೊರಡುವ ಫಲಿತವು ಒಂದೇ ಆಗಿರುವದು. ಕೆಳಗಿನಂತೆ ವಸ್ತುಗಳ ಸಹಾಯದಿಂದ ಇದನ್ನು ಸ್ಪಷ್ಟೀಕರಿಸಬಹುದು.

೧ ನೆಯ ರೀತಿ

ಅ ಗುಂಪು ○ ○ ○ ○ ○ ಎರಡು ಕಾಳು ಉಳಿದವು.

ಬ ಗುಂಪು ○ ○ ○

೨ ನೆಯ ರೀತಿ

ಅ ಗುಂಪು ○ ○ ○ ○ ○

ಬ ಗುಂಪು ○ ○ ○ ● ● ಎರಡು ಕಾಳು ಕೂಡಿಸಬೇಕಾಯಿತು.

ಇವೆರಡರಲ್ಲಿ ಬೇಕಾದ ರೀತಿಯನ್ನು ಉಪಯೋಗಿಸಬಹುದು.

೨ ನೆಯ ರೀತಿಯು ಸುಲಭವಿರುವದಲ್ಲದೆ ವಜಾಬಾಕಿಯು ಬೇರೀಜಿನ ಕೃತಿಯೇ ಎಂದು ತಿಳಿದು ಬರುವದು.

ಸರ ಗಂಟು, ಬಿಡಿವಸ್ತುಗಳು ಇವುಗಳನ್ನು ಉಪಯೋಗಿಸಿಕೊಂಡು ವಜಾಬಾಕಿಗಳನ್ನು ಪ್ರತ್ಯಕ್ಷವಾಗಿ ವಸ್ತುಗಳ ಸಹಾಯದಿಂದ ಪ್ರಾರಂಭದಲ್ಲಿ ಕಲಿಸಬೇಕು.

೧ನೇ ಮೆಟ್ಟು :— ಒಂಟಿ ಅಂಕೆಯಲ್ಲಿ ಒಂಟಿ ಅಂಕೆಯನ್ನು ಕಳೆಯುವದು ಬಹುತರವಾಗಿ ಬಾಯಿಂದಲೇ ಸಾಗಬೇಕು. ಪಾಟಿಯ ಮೇಲೆ ಅಂಕೆಗಳನ್ನು ಇಟ್ಟುಕೊಳ್ಳುವ ಪದ್ಧತಿಯನ್ನು ತಿಳಿಸಿಕೊಡಬೇಕು.

೬ ಹಣ್ಣುಗಳಲ್ಲಿ ೩ ಹಣ್ಣು ತಿಂದೆವು, ಉಳಿದವೆಷ್ಟು?

ಎಣಿಕೆಯ ವಸ್ತುಗಳ ಸಹಾಯದಿಂದ ಸಹಜವಾಗಿ ಹುಡುಗರು ಈ ಲೆಕ್ಕವನ್ನು ಮಾಡುವರು.

೬ ಹಣ್ಣು ○ ○ ○ ○ ○ ○

೩ ಹಣ್ಣು ○ ○ ○

೩ ಹಣ್ಣು ೩ ಹಣ್ಣು ಉಳಿದವು.

೨ ನೇ ಮೆಟ್ಟು:— (ಅ) ೨೫ ಗುಂಡುಗಳಲ್ಲಿ ೪ ಗುಂಡು ಕಳೆದುಕೊಂಡೆವು. ಉಳಿದವೆಷ್ಟು?

೮ ದಶಕಗಳಲ್ಲಿ ೩ ದಶಕಗಳನ್ನು ಕಳೆದರೆ ಎಷ್ಟು ಉಳಿಯುವದು?
೧೪ ರಲ್ಲಿ ೫ ಕಳೆದರೆ ಎಷ್ಟು ಉಳಿಯುವದು?
೧೦ ಹಣ್ಣುಗಳಲ್ಲಿ ಇನ್ನೆಷ್ಟು ಕೂಡಿಸಿದರೆ ೧೫ ಹಣ್ಣು ಆಗುವವು?
೩೭ ಕ್ಕಿಂತ ೩೦ ಎಷ್ಟರಿಂದ ಕಡಿಮೆ ಅದೆ?

ಇಂಥ ಬಾಯಿಲೆಕ್ಕಗಳನ್ನು ಆಯಾ ಮೆಟ್ಟಿನಲ್ಲಿ ಹೇಳಿ ಪಾಟಿಯ ಮೇಲಿನ ಲೆಕ್ಕಗಳನ್ನು ಪ್ರಾರಂಭಿಸಬೇಕು.

ಇಲ್ಲಿ ಅನುಕೂಲವಾಗಿ ಮಾಡಿಕೊಳ್ಳಬಹುದಾದ ಮೆಟ್ಟುಗಳು:—

೧ನೆಯ ಮೆಟ್ಟು— (ಅ) ಒಂಟಿ ಅಂಕಿಯಲ್ಲಿ ಒಂಟಿ ಅಂಕಿಗಳನ್ನು ಕಳೆಯುವದು.

ಉದಾ:— ೫ ಗುಂಡುಗಳಲ್ಲಿ ೩ ಗುಂಡು ಹೋದರೆಷ್ಟು ಉಳಿಯುವವು?

(ಬ) ದಶಕಗಳ ವಜಾಬಾಕಿ.

ಉದಾ: — ೭ ಹ. ಗಂಟುಗಳಲ್ಲಿ ೫ ಹ. ಗ. ಕೊಟ್ಟರೆ ಎಷ್ಟು ಉಳಿಯುವವು?

(ಕ) ಶತಕಗಳ ವಜಾಬಾಕಿ.

ಉದಾ:—೬ನೂರ ಬಾಳೆಯ ಹಣ್ಣುಗಳಲ್ಲಿ ೪ನೂರ ಹಣ್ಣುಗಳ ಮಾರಾಟವಾಯಿತು. ಆದರೆ ಉಳಿದ ಹಣ್ಣುಗಳೆಷ್ಟು?

೨ನೆಯ ಮೆಟ್ಟು: — ಜೋಡು ಅಂಕೆಗಳ ಸಂಖ್ಯೆಯಲ್ಲಿ ಒಂಟಿ ಅಂಕೆಗಳುಳ್ಳ ಸಂಖ್ಯೆ ಕಳೆಯುವದು.

(೧) ಮೊದಲು ಕಳೆಸಿಕೊಳ್ಳುವ ಸಂಖ್ಯೆಯಲ್ಲಿಯ ಎಕ್ಕಂ ಸ್ಥಾನದ ಅಂಕೆಯು ಕಳೆಯುವ ಅಂಕೆಗಿಂತ ದೊಡ್ಡದಿರಬೇಕು.

(೨) ಬಳಿಕ ಕಳೆಸಿಕೊಳ್ಳುವ ಸಂಖ್ಯೆಯಲ್ಲಿ ಎಕ್ಕಂ ಸ್ಥಾನದ ಅಂಕೆಯು ಕಳೆಯುವ ಅಂಕೆಗಿಂತ ಸಣ್ಣದಿರಬೇಕು.

೩ನೇ ಮೆಟ್ಟು:— ಜೋಡು ಅಂಕೆಗಳುಳ್ಳ ಸಂಖ್ಯೆಯಲ್ಲಿ ಜೋಡು ಅಂಕೆಯ ಸಂಖ್ಯೆಯನ್ನು ಕಳೆಯುವದು.

(ಅ) ಎಕ್ಕಮ್ಮಿನಲ್ಲಿಯ ಅಂಕೆಯು ದೊಡ್ಡದಿದ್ದಾಗ್ಗೆ.

(ಬ) ,, ,, ಸಣ್ಣದಿದ್ದಾಗ್ಗೆ

ಅ ಮತ್ತು ಬ ಎಂಬ ೨ ಕಾಳಿನ ಗುಂಪಿಗಳಿವೆ ಎಂದು ತಿಳಿಯಿರಿ. ಅ ಗುಂಪಿನಲ್ಲಿ ಬ ಗುಂಪಿಗಿಂತ ಎಷ್ಟು ಕಾಳು ಹೆಚ್ಚು ಅವೆ. ಎಂದು ತಿಳಿದುಕೊಳ್ಳಬೇಕಾದ ನಾವು ಎರಡು ಪ್ರಕಾರದಿಂದ ತಿಳಿದುಕೊಳ್ಳಬಹುದು.

(ಅ) ಅ ಗುಂಪಿನೊಳಗಿಂದ ಬ ಗುಂಪಿನೊಳಗೆ ಇರುವಷ್ಟು ಕಾಳುಗಳನ್ನು ತೆಗೆಟ್ಟರೆ ಉಳಿಯುವ ಕಾಳಿನ ಸಂಖ್ಯೆಯು ಅ ಗುಂಪಿನಲ್ಲಿ ಹೆಚ್ಚಾದ ಕಾಳು

(ಬ) ಬ ಗುಂಪು ಅ ಗುಂಪಿನಷ್ಟು ಆಗಬೇಕಾದರೆ ಎಷ್ಟು ಕಾಳುಗಳನ್ನು ಕೂಡಿಸಬೇಕು, ಎಂಬದನ್ನು ಗೊತ್ತು ಮಾಡಿಕೊಂಡರೆ ಅ ಗುಂಪಿನಲ್ಲಿ ಹೆಚ್ಚಿದ್ದ ಕಾಳು ಅಥವಾ ಅ ಮತ್ತು ಬ ಗುಂಪಿನಲ್ಲಿಯ ಕಾಳುಗಳ ಸಂಖ್ಯೆಯಲ್ಲಿಯ ಅಂತರವು ಗೊತ್ತಾಗುವದು.

ಇವೆರಡೂ ರೀತಿಗಳಿಂದ ಹೊರಡುವ ಫಲಿತವು ಒಂದೇ ಆಗಿರುವದು. ಕೆಳಗಿನಂತೆ ವಸ್ತುಗಳ ಸಹಾಯದಿಂದ ಇದನ್ನು ಸ್ಪಷ್ಟೀಕರಿಸಬಹುದು.

೧ ನೆಯ ರೀತಿ

ಅ ಗುಂಪು ○ ○ ○ ○ ○ ಎರಡು ಕಾಳು ಉಳಿದವು.

ಬ ಗುಂಪು ○ ○ ○

೨ ನೆಯ ರೀತಿ

ಅ ಗುಂಪು ○ ○ ○ ○ ○

ಬ ಗುಂಪು ○ ○ ○ ● ● ಎರಡು ಕಾಳು ಕೂಡಿಸಬೇಕಾಯಿತು.

ಇವೆರಡರಲ್ಲಿ ಬೇಕಾದ ರೀತಿಯನ್ನು ಉಪಯೋಗಿಸಬಹುದು.

೨ ನೆಯ ರೀತಿಯು ಸುಲಭವಿರುವದಲ್ಲದೆ ವಜಾಬಾಕಿಯು ಬೇರೀಜಿನ ಕೃತಿಯೇ ಎಂದು ತಿಳಿದು ಬರುವದು.

ಸರ ಗಂಟು, ಬಿಡಿವಸ್ತುಗಳು ಇವುಗಳನ್ನು ಉಪಯೋಗಿಸಿಕೊಂಡು ವಜಾಬಾಕಿಗಳನ್ನು ಪ್ರತ್ಯಕ್ಷವಾಗಿ ವಸ್ತುಗಳ ಸಹಾಯದಿಂದ ಪ್ರಾರಂಭದಲ್ಲಿ ಕಲಿಸಬೇಕು.

೧ನೇ ಮೆಟ್ಟು:— ಒಂಟಿ ಅಂಕೆಯಲ್ಲಿ ಒಂಟಿ ಅಂಕೆಯನ್ನು ಕಳೆಯುವದು ಬಹುತರವಾಗಿ ಬಾಯಿಂದಲೇ ಸಾಗಬೇಕು. ಪಾಟಿಯ ಮೇಲೆ ಅಂಕೆಗಳನ್ನು ಇಟ್ಟುಕೊಳ್ಳುವ ಪದ್ಧತಿಯನ್ನು ತಿಳಿಸಿಕೊಡಬೇಕು.

೬ ಹಣ್ಣುಗಳಲ್ಲಿ ೩ ಹಣ್ಣು ತಿಂದೆವು, ಉಳಿದವೆಷ್ಟು?

ಎಣಿಕೆಯ ವಸ್ತುಗಳ ಸಹಾಯದಿಂದ ಸಹಜವಾಗಿ ಹುಡುಗರು ಈ ಲೆಕ್ಕವನ್ನು ಮಾಡುವರು.

೬ ಹಣ್ಣು ○ ○ ○ ○ ○ ○

೩ ಹಣ್ಣು ○ ○ ○

೩ ಹಣ್ಣು ೩ ಹಣ್ಣು ಉಳಿದವು.

೨ ನೇ ಮೆಟ್ಟು:— (ಅ) ೨೫ ಗುಂಡುಗಳಲ್ಲಿ ೪ ಗುಂಡು ಕಳೆದುಕೊಂಡೆವು. ಉಳಿದವೆಷ್ಟು?

ವಸ್ತುಗಳ ಸಹಾಯದಿಂದ

▭ ▭ ○ ○ ○ ○ ○
○ ○ ○ ○

▭ ▭ ○

ಹ. ಗಂ. (ದಶಕ)	ಬಿ. ಕಾ. (ಏಕ್ಕಂ)
೨	೫
೨	೧

೨೧ ಗುಂಡುಗಳು ಉಳಿದವು.

(ಬ) ೨೫ ರೂಪಾಯಿಗಳಲ್ಲಿ ೧೦ ರೂಪಾಯಿಗಳು ಖರ್ಚು ಆದವು. ಉಳಿದವೆಷ್ಟು ?

▭ ▭ ○ ○ ○ ○ ○
▭

▭ ○ ○ ○ ○ ○

ದಹಂ	ಏಕ್ಕಂ
೨	೫ ರೂ.
೧	೦ ರೂ.
೧	೫ ರೂ. ಉಳಿದವು.

೨ನೇ ಮೆಟ್ಟು— (ಬ)

ಮಾದರಿಯ ಲೆಕ್ಕ:— ರಾಮನ ಹತ್ತರ ೨೫ ದುಡ್ಡುಗಳಿದ್ದವು. ಅವನು ೮ ದುಡ್ಡು ಕೊಟ್ಟು ಕಾಗದ ಕೊಂಡನು. ಅವನ ಹತ್ತರ ಉಳಿದ ದುಡ್ಡು ಎಷ್ಟು?

ಇಲ್ಲಿ ೮ ದುಡ್ಡು ಖರ್ಚಾಗಿವೆ. ಆದ್ದರಿಂದ ವಜಾಬಾಕಿ ಮಾಡಬೇಕು.

ವಸ್ತುಗಳ ಸಹಾಯದಿಂದ

▭ ▭ ○ ○ ○ ○ ○
○ ○ ○ ○ ○ ○ ○ ○

ದಹಂ	ಏಕ್ಕಂ
೨	೫ ದುಡ್ಡು
	೮ ದುಡ್ಡು

ಈ ಲೆಕ್ಕದಲ್ಲಿ ಬಿಡಿಕಾಳು ೫ ಇರುವವು. ಅವುಗಳಲ್ಲಿ ೮ ಬಿಡಿಕಾಳು ಕೊಡಲಿಕ್ಕೆ ಬರುವದಿಲ್ಲ. ಆದ್ದರಿಂದ ಒಂದು ಹತ್ತರ ಗಂಟನ್ನು ಬಿಚ್ಚಿ ಬಿಡಿಕಾಳನ್ನು ಮಾಡಿಕೊಂಡು ಕೆಳಗಿನಂತೆ ಇಟ್ಟುಕೊಳ್ಳಬೇಕು.

ಈ ಮೆಟ್ಟಿನಲ್ಲಿ ವಸ್ತುಗಳು ಕೆಳಗಿನಂತೆ ತೋರುವವು.

▭ ○ ○ ○ ○ ○
○ ○ ○ ○ ○
○ ○ ○ ○ ○

▭ ○ ○ ○ ○ ○
○ ○

ದಹಂ	ಏಕ್ಕಂ
೧	೧೫ (೫ ಮತ್ತು ೧೦ ಕೂಡಿ ೧೫)
	೮
೧	೭

ಈಗ ಬಿಡಿಯಾದ ಹತ್ತು ಮತ್ತು ಐದು ಕಾಳುಗಳಲ್ಲಿ ೮ ಕಾಳು ಕೊಡಲಿಕ್ಕೆ ಬರುವವು. ೧೭ ಕಾಳುಗಳು ಉಳಿಯುವವು. ಅಂದರೆ ೧೭ ದುಡ್ಡು ಉತ್ತರ.

೩ನೆಯ ಮೆಟ್ಟು (ಅ) ೪೫ ಪೆನ್ಸಿಲುಗಳಲ್ಲಿ ೨೪ ಪೆನ್ಸಿಲುಗಳು ಮಾರಿದವು. ಉಳಿದ ಪೆನ್ಸಿಲುಗಳು ಎಷ್ಟು ?

ಇಲ್ಲಿ ಪೆನ್ಸಿಲುಗಳು ಮಾರಿದ್ದರಿಂದ ಅವು ಇಲ್ಲದಂತಾದವು. ಆದ್ದರಿಂದ ವಜಾಬಾಕಿ. ವಸ್ತುಗಳನ್ನು ಬಿಟ್ಟುಕೊಡುವಷ್ಟು ಪ್ರಗತಿಯು ಆಗಿದ್ದರೆ ದಹಂ ಏಕ್ಕಮುಗಳ ಮನೆಗಳ ಸಹಾಯದಿಂದ ಇಂಥ ಲೆಕ್ಕಗಳನ್ನು ತಿಳಿಸಬೇಕು. ಬಳಿಕ ಸಾಕಷ್ಟು ಲೆಕ್ಕ

ಗಳನ್ನು ಮಾಡಿಸಿ ರೂಢಿಮಾಡಿಸಬೇಕು. ಈ ಮೆಟ್ಟಿನ ಪ್ರಾರಂಭದಲ್ಲಿ ಮೆಟ್ಟಿಗೆ ಸಂಬಂಧಿಸಿದಂಥ ಬಾಯಿಲೆಕ್ಕಗಳನ್ನು ಹೇಳುವದಂತೂ ಅತ್ಯಅವಶ್ಯವಾವದ್ದು.

ದಹಂ	ಏಕ್ಕಂ
೪	೫
೨	೪
೨	೧

ಏಕ್ಕಮಿನ ವಜಾಬಾಕಿ—೫ರಲ್ಲಿ ೪ ಕಳೆದರೆ ೧ ಉಳಿಯಿತು. ಆ ಸ್ಥಾನದ ಕೆಳಗೆ ಬರೆ.

ದಹಮಿನ ವಜಾಬಾಕಿ—೪ರಲ್ಲಿ ೨ ಕಳೆದರೆ ೨. ದಹಂಸ್ಥಾನದ ಕೆಳಗೆ ಬರೆ.

೨೧ ಪೇನ್ಸಿಲು ಉಳಿದವು.

(ಬ) ೩೨ ಹಣ್ಣಿನಲ್ಲಿ ೧೮ ಹಣ್ಣು ಖರ್ಚಾದರೆ ಉಳಿದವೆಷ್ಟು?

ಇಲ್ಲಿ ವಜಾಬಾಕಿ ಮಾಡಬೇಕೆಂಬುವದು ಸ್ಪಷ್ಟವು.



ದಹಂ	ಏಕ್ಕಂ
೩	೨
೧	೮

ಇಲ್ಲಿ ಬಿ. ಕಾಳು ೨ ಇರುವವು. ಅವುಗಳಲ್ಲಿ ೮ ಬಿ. ಕಾ. ಕೊಡಲಿಕ್ಕೆ ಬರುವದಿಲ್ಲ. ಆದ್ದರಿಂದ ಒಂದು ಹತ್ತರ ಗುಂಪನ್ನು ಬಿಚ್ಚಿ ಬಿಡಿಕಾಳುಗಳನ್ನು ಮಾಡಿಕೊಂಡು ಇಟ್ಟುಕೊಂಡಾಗ ವಸ್ತುಗಳು ಕೆಳಗಿನಂತೆ ಕಾಣಿಸಿದವು.



ದಹಂ	ಏಕ್ಕಂ
೨	೨+೧೦ (=೧೨)
೧	೮
೧	೪

೧೪ ಹಣ್ಣು ಉತ್ತರ.

ತುಸು ಪ್ರಗತಿಯಾದ ಕೂಡಲೆ ವಸ್ತುಗಳನ್ನು ಬಿಟ್ಟುಕೊಟ್ಟು ಇದೇ ಉದಾಹರಣೆಯನ್ನು ದಹಂ ಏಕ್ಕಂ ಮನೆಗಳಲ್ಲಿ ಇಟ್ಟುಕೊಂಡು ಏಕ್ಕಂ ಸ್ಥಾನದಲ್ಲಿಯ ೨ ಬಿಡಿಕಾಳುಗಳನ್ನೂ ೧೦ ಬಿಡಿಕಾಳುಗಳನ್ನೂ ಕೂಡಿಸಿ ಎಡಕ್ಕೆ ತೋರಿಸಿದಂತೆ ಇಟ್ಟು ಕೊಂಡಾಗ್ಗೆ ಮೇಲಿನ ಅಂಕೆಗಳು ಕಳೆಯತಕ್ಕ ಅಂಕೆಗಳಿಗಿಂತ ದೊಡ್ಡವಿರುವದರಿಂದ ಹಿಂದಿನಂತೆ ಸುಲಭವಾಗಿ ವಜಾಬಾಕಿಯನ್ನು ಮಾಡಲಿಕ್ಕೆ ಬರುತ್ತದೆ. ಕೊನೆಗೆ ಹತ್ತರಗಂಟನ್ನು ನಿಜವಾಗಿ ಮುರಿಯದೆ ಮುರಿಯುವ ಗಂಟನ್ನು ಮನದಲ್ಲಿ ಮುರಿದೆವೆಂದು ತಿಳಿದು ಹತ್ತು ಎರಡು ಹನ್ನೆರಡದಲ್ಲಿ

ದಹಂ	ಏಕ್ಕಂ
೩	+೧೦ ೨ =೧೨
೧+೧ (=೨)	೮
೧	೪

೮ ಕಳೆದರೆ ೪ ಆದ್ದರಿಂದ ೪. ಕೆಳಗೆ ಇಟ್ಟು ಮನಸಿನಲ್ಲಿ ಮುಂದಂಥ ಹತ್ತರ ಗಂಟನ್ನೂ ಕಳೆಯಬಹುದಾದ ಹತ್ತರ ಗಂಟಿನಲ್ಲಿ ಕೂಡಿಸಿ ಮೇಲಿನ ಹತ್ತರ ಗಂಟುಗಳಲ್ಲಿ ಕಳೆದು ಬಿಡಬೇಕು. ಈ ಪ್ರಕಾರ ಕೂಡಿಸಿದ ಒಂದಕ್ಕೆ “ **ಕೈಲೆ ಬಂದ ಒಂದು** ” ಎಂದು ಅನ್ನುವರು.

	ದ	ಏ
	೩	೨
	೧	೮
ಕೈಲೆಬಂದದ್ದು	೧	
	೧	೪

ಎಲ್ಲಕ್ಕೂ ಕೊನೆಗೆ ಮನೆಗಳನ್ನು ಬಿಟ್ಟುಕೊಟ್ಟು ಸಂಖ್ಯೆಗಳನ್ನು ಬದಿಗೆ ತೋರಿಸಿ ದಂತೆ ಇಟ್ಟುಕೊಂಡು ವಜಾಬಾಕಿಯನ್ನು ಮಾಡಲಿಕ್ಕೆ ರೂಢಿ ಮಾಡಿಸಬೇಕು.

೩	೨
೧	೮
೧	
೧	೪

ಈ ಇಯತ್ತೆಯಲ್ಲಿ ಹಣದ ಕೋಷ್ಟಕವನ್ನು ವಿದ್ಯಾರ್ಥಿಗಳು ಕಲಿಯುವರು. ವ್ಯವಹಾರಕ್ಕೆ ಅನುಸರಿಸಿದ ತೀರ ಸುಲಭವಾದಹಣದ ಬೇರೀಜು ವಜಾಬಾಕಿಗಳನ್ನು ಕಲಿಸಬೇಕು.

ಕೋಷ್ಟಕದ ಸಹಾಯದಿಂದ ಆದಷ್ಟು ಬಾಯಿಂದ ಮಾಡಲಿಕ್ಕೆ ಬರುವಂಥ ಹಣದ ಬೇರೀಜು ವಜಾಬಾಕಿಗಳನ್ನಷ್ಟೇ ಹೇಳತಕ್ಕದ್ದು: — ಅವು ಎಂಥವೆಂದರೆ:—

(೧) ರಾಮನ ಹತ್ತರ ೯ಆ. ಇದ್ದವು ಅವರ ಕಕ್ಕನು ಅವನಿಗೆ ೪ಆ. ಕೊಟ್ಟನು ಆದರೆ ಅವನ ಹತ್ತರ ಎಷ್ಟು ಆಣೆಯಾದವು? ೯ ಆಣೆಯಲ್ಲಿ ೪ ಆಣೆ ಕೂಡಿಸಿದರೆ, } ೧೩ಆ. ಆಗುವದು

(೨) ನನ್ನ ಹತ್ತರ ೧೩ ಆಣೆಗಳಿವೆ. ಇನ್ನೂ ೫ ಆಣೆಗಳನ್ನು ಕೊಟ್ಟ ನನ್ನ ಹತ್ತರ ಎಷ್ಟು ರೂ. ಮತ್ತು ಆಣೆಯಾದವು ?

೧೩ ಆಣೆಯಲ್ಲಿ ೫ ಆಣೆಗಳನ್ನು ಕೂಡಿಸಿದರೆ ೧೮ ಆಣೆಯಾಯಿತು. ಅಂದ ೧ರೂ. ೨ಆಣೆಯಾಯಿತು.

(೩) ನಾನು ಪೇಟೆಗೆ ೧೪ ಆಣೆ ತಗೆದುಕೊಂಡು ಹೋದೆನು. ಅಲ್ಲಿ ೩ ಆ ಕೊಟ್ಟು ಪಲ್ಲೆ ತಂದರೆ ನನ್ನ ಹತ್ತರ ಎಷ್ಟು ಉಳಿಯುವವು ?

೧೪ ಆಣೆಯಲ್ಲಿ ೩ ಆಣೆ ಕೊಟ್ಟರೆ ೧೧ ಆಣೆ ಉಳಿಯುವದು.

(೪) ನಾನು ಸಾಲಿಗೆ ೧ರೂ. ತೆಗೆದುಕೊಂಡು ಹೋದೆನು. ಅಲ್ಲಿ ಮಾಸ್ತರರಿಗೆ ೪ಆಣೆ ಪುಸ್ತಕ ಕೊಂಡಬಗ್ಗೆ ಕೊಟ್ಟೆನು. ಆದರೆ ನನ್ನ ಹತ್ತರ ಉಳಿಯುವ ಹಣವೆಷ್ಟು?

೧ರೂಪಾಯಿಗೆ ೧೬ ಆಣೆಗಳು ಅವುಗಳಲ್ಲಿ ೪ಆಣೆ ಪುಸ್ತಕದ ಬಗ್ಗೆ ಕೊಟ್ಟದ್ದರಿಂದ ೧೨ಆಣೆಗಳು ಉಳಿದವು.

೨ನೆಯ ಇಯತ್ತೆಯಲ್ಲಿ—“೧೦,೦೦೦ ದ ವರೆಗಿನ ಸಂಖ್ಯೆಗಳ ಬೇರೀಜು ವಜಾಬಾಕಿ, + ಮತ್ತು – ಚಿಹ್ನಗಳ ಉಪಯೋಗ ” ಇವುಗಳನ್ನು ಕಲಿಸಬೇಕೆಂದು ಗೊತ್ತಾಗಿದೆ.

೧ನೆಯ ಇಯತ್ತೆಯಲ್ಲಿಯ ಎಲ್ಲ ಭಾಗವನ್ನು ಸರಿಯಾಗಿ ಉಜಳಣಿ ಮಾಡಿಕೊಂಡು ಎಂದೆ ಸಾಗತಕ್ಕದ್ದು:—ವಜಾಬಾಕಿಯ ಭಾಗವು ಎಷ್ಟರ ಮಟ್ಟಿಗೆ ತಿಳಿದಿರುವದೆಂಬದನ್ನು ಗೊತ್ತುಮಾಡಿಕೊಂಡು ಆ ವಿಷಯದಲ್ಲಿ ಸಾವಕಾಶವಾಗಿ ಸಾಗಿ ಈ ಇಯತ್ತೆಯಲ್ಲಿ ಕೈಲೆಬರುವ ವಜಾಬಾಕಿಯು ಹೆಚ್ಚು ಉತ್ತಮವಾಗಿ ತೀವ್ರ ಮಾಡಲಿಕ್ಕೆ ಬರುವಂತೆ ಶಿಕ್ಷಕರು ಎಚ್ಚರಗೊಳ್ಳಬೇಕು.

ಈ ಇಯತ್ತೆಯಲ್ಲಿ ಬೇರೀಜು ವಜಾಬಾಕಿಗಳ ಚಿಹ್ನಗಳ ಜ್ಞಾನಮಾಡಿಕೊಡಬೇಕು. " + " ಇದು ಅಧಿಕ ಚಿಹ್ನವು, ಇದರ ಅರ್ಥವು ಕೂಡಿಸು, ಬೇರೀಜುಮಾಡು ಎಂದು ಇರುವದು " – " ಇದು ಊಣಕ (ಋಣಕ) ಚಿಹ್ನವು ಇದರ ಅರ್ಥವು ಕಳೆ, ವಜಾಬಾಕಿ ಮಾಡು ಎಂದು ಇರುವದು.

ಬೇರೀಜಿನಲ್ಲಿಯ ಮೆಟ್ಟುಗಳು

೧ನೆಯ ಮೆಟ್ಟು:— (ಅ) ಹಿಂದಿನ ಇಯತ್ತೆಯಲ್ಲಿಯ ಬಾಯಿಬೇರೀಜನ್ನು ಹೆಚ್ಚು ದೃಢಪಡಿಸುವದು ಮತ್ತು ಅದನ್ನೇ ಮುಂದುವರಿಸುವದು.

(ಬ) ಶತಕಗಳಲ್ಲಿ ದಶಕಗಳನ್ನೂ ಶತಕಗಳನ್ನೂ ಬಾಯಿಂದ ಕೂಡಿಸಲಿಕ್ಕೆ ಹಚ್ಚುವದು.

೨ನೆಯ ಮೆಟ್ಟು:— (ಅ) ಶತಂಸ್ಥಾನದ ವರೆಗಿನ ಸಂಖ್ಯೆಯಲ್ಲಿ ಜೋಡು ಅಂಕೆಗಳುಳ್ಳ ಸಂಖ್ಯೆ ಕೂಡಿಸುವದು.

(ಬ) ಮೂರು ಅಂಕೆಯುಳ್ಳ ಸಂಖ್ಯೆ ಕೂಡಿಸುವದು.

೩ನೆಯ ಮೆಟ್ಟು:— (ಅ) ೪೩೯೪+೮೩೪

(ಬ) ೮೦೭೫+೪೯೦೮

(ಕ) ೫೦೩೫+೪೩೬+೭೩೮

(ಡ) ೮೪೩೮+೯೫೦೬+೪೩೯

(ಇ) ೫೦೮+೬೯೪೭+೫೯+೭೪೧೯

(ಫ) ೧೨೪೩೫
+೮೦೬೭
+೩೬೮೦

(ಗ) ೨೫೦೮೩
+೧೭೪೦೩
+ ೯೮೦೫

ಈ ಮಾದರಿಯ ಕೆಲಮೆಟ್ಟುಗಳಲ್ಲಿ ೩,೪,೫ ಸಂಖ್ಯೆ ಕೂಡಿಸಲಿಕ್ಕೆ ರೂಢಿ ಮಾಡಿಸಬೇಕು.

ವ್ಯವಹಾರಕ್ಕೆ ಅನುಸರಿಸಿದ ಲೆಕ್ಕಗಳೇ ಬಹಳಮಟ್ಟಿಗೆ ಇರತಕ್ಕದ್ದು. ರೂಢಿಯಾಗುವವರ ವೆಶೆಯಿಂದ ಸಂಖ್ಯೆಗಳನ್ನಷ್ಟೇ ಕೂಡಿಸಲಿಕ್ಕೆ ಹೇಳಬಹುದು.

ಅಧಿಕ ಚಿಹ್ನದೊಡನೆ ಬರೆದ ಸಂಖ್ಯೆಗಳ ಬೇರೀಜು ಮಾಡುವಾಗ ರೂಢಿಯಲ್ಲಿಯಂತೆ ಒಂದು ಸಂಖ್ಯೆಯು ಕೆಳಗೆ ಮತ್ತೊಂದು ಸಂಖ್ಯೆ ಇಟ್ಟುಕೊಳ್ಳದೆ, ಬಲದಿಂದ ಎಡಕ್ಕಾಗಲಿ ಎಡದಿಂದ ಬಲಕ್ಕಾಗಲಿ ಬೇರೀಜು ಮಾಡುವ ರೂಢಿ ಮಾಡಿಸತಕ್ಕದ್ದು.

ವಜಾಬಾಕಿ

ಈ ಇಯತ್ತೆಯಲ್ಲಿಯ ವಜಾಬಾಕಿಯ ವಿಷಯದಲ್ಲಿ ಕೈಲೆ ಬರುವ ವಜಾಬಾಕಿಯನ್ನು ಶಿಕ್ಷಕರು ಹೆಚ್ಚು ಎಚ್ಚರದಿಂದ ಕಲಿಸಬೇಕು. ಬಿಚ್ಚುಗಂಟಿನ ಪದ್ಧತಿಯು ದೊಡ್ಡದೊಡ್ಡ ಸಂಖ್ಯೆಗಳ ವಜಾಬಾಕಿಯಲ್ಲಿ ಉಪಯೋಗಬೀಳುವದಿಲ್ಲ. ಆದ್ದರಿಂದ ಸಮಸಂಖ್ಯೆ ಕೂಡಿಸುವ ಪದ್ಧತಿಯಿಂದಲೇ ಲೆಕ್ಕ ಮಾಡಲಿಕ್ಕೆ ತಿಳಿಸಿಕೊಡಬೇಕು.

೬−೪=೨

(೬+೧೦)−(೪+೧೦)=೨ ಇಲ್ಲಿ ಎರಡೂ ಸಂಖ್ಯೆಗಳಲ್ಲಿ ೧೦ ಕೂಡಿಸಿದೆ.

∵ ೧೬−೧೪=೨

೮−೫=೩

(೮+೧೦)−(೫+೧೦)=೩ ಇಲ್ಲಿಯೂ ೧೦ ಕೂಡಿಸಿದೆ.

∴ ೧೮−೧೫=೩

ಇವುಗಳಿಂದ ಕಳೆಯಿಸಿಕೊಳ್ಳುವ ಸಂಖ್ಯೆಯಲ್ಲಿಯೂ ಕಳೆಯುವ ಸಂಖ್ಯೆಯಲ್ಲಿಯೂ (ಕಳೆಯುವ ಸಂಖ್ಯೆಯಲ್ಲಿ ೧ ಹತ್ತರಗಂಟು ಕೂಡಿಸಿ) ಸಮ ಸಂಖ್ಯೆ ಕೂಡಿಸಿ (ಅಂದರೆ ಕಳೆಯಿಸಿಕೊಳ್ಳುವ ಸಂಖ್ಯೆಯಲ್ಲಿ ಹತ್ತು ಬಿ. ಕಾ. ಕೂಡಿಸಿ) ವಜಾಬಾಕಿ ಮಾಡಿದರೆ ಉತ್ತರದಲ್ಲಿ ಹೆಚ್ಚು ಕಡಿಮೆಯಾಗುವದಿಲ್ಲ ಎಂದು ತಿಳಿಸುವದು.

೬−೪=೨

೪+೨=೬

ಆದ್ದರಿಂದ ೬ ಮತ್ತು ೪ ಇವುಗಳ ಅಂತರವನ್ನು ಅಥವಾ (೧) ದೊಡ್ಡ ಅಂಕೆಯೊಳಗೆ ಸಣ್ಣದನ್ನು ವಜಾ ಮಾಡಿ (೨) ಕಳೆಯುವ ಸಂಖ್ಯೆಯೊಳಗೆ ಎಷ್ಟು ಕೂಡಿಸಿದರೆ ಕಳಿಸಿಕೊಳ್ಳುವ ಸಂಖ್ಯೆ ಬರುವದೆಂಬದನ್ನು ನೋಡಿ, ತೆಗೆಯಬೇಕು.

ಮಾದರಿ ಲೆಕ್ಕ ೬೫, ೩೮ ಈ ಸಂಖ್ಯೆಗಳ ಅಂತರವು ಎಷ್ಟು ?

ಇಲ್ಲಿ ಅಂತರವನ್ನು ತೆಗೆಯಬೇಕಾಗಿದೆ. ಆದ್ದರಿಂದ ವಜಾಬಾಕಿ ಎಕ್ಕಂ ೮ ರಲ್ಲಿ

೬೫ ೩೮ —— ೧ —— ೨೭	ಎಷ್ಟು ಕೂಡಿಸಿದರೆ ಎಕ್ಕಮಿನಲ್ಲಿ ೫ ಬರುವದು? ೮ ಮತ್ತು ೭ ೧೫ ಕೈಲೆ ೧ (ದಹಂ) ದಹಂ—೧, ೪, ಮತ್ತು ೨, ೬ ೨೭ ಅಂತರ.

ಈ ಪ್ರಕಾರ ಲೆಕ್ಕಗಳನ್ನು ಮಾಡಿಸಿ ಪೂರಕ ಪದ್ಧತಿಯು ವಿದ್ಯಾರ್ಥಿಗಳಿಗೆ ಸದಟ್ಟಾಗುವಂತೆ ಎಚ್ಚರಗೊಳ್ಳಬೇಕು. ೩ನೆಯ ಇಯತ್ತೆಯಲ್ಲಿಯೂ ಬೇರೀಜು ಜಾಬಾಕಿಗಳ ಕಠಿಣವಾದ ಲೆಕ್ಕಗಳನ್ನು ಕಲಿಯುತಕ್ಕದ್ದೆಂದು ಗೊತ್ತುಪಡಿಸಿದೆ. ಡ್ಡ ಸಂಖ್ಯೆಗಳ ಬೇರೀಜು ವಜಾಬಾಕಿಗಳನ್ನು ಕಲಿಯುವದಲ್ಲದೆ ಬೇರೀಜು ವಜಾ ಕಿಗಳನ್ನು ಒಮ್ಮೆಲೆ ಮಾಡಲಿಕ್ಕೆ ರೂಢಿ ಮಾಡಿಸಬೇಕು.

ಬಾಲಕರ ವರ್ಗದಲ್ಲಿ ಸೂಚಿಸಿದಂತೆ ೧ನೇ, ೨ನೇ ಇಯತ್ತೆ ಬಣ್ಣದ ಚೌಕು ದಗಳಿಂದ, ಚೌಕು ಮನೆಗಳಿಂದ, ಸುಲಭವಾದ ವಜಾಬಾಕಿಗಳನ್ನು ಒಳಗೊಂಡು ಲಸವನ್ನು ಮಾಡಿಸಿ ಒಂದು ಎಕ್ಸರಸಾಯಿಜದಂಥ ಪುಸ್ತಕದಲ್ಲಿ ಅಂಟಿಸಿ ಇಡಿಸಬೇಕು. ಬಣ್ಣಗಳನ್ನು ಸಹಸ್ರ, ದಶಸಹಸ್ರ, ಲಕ್ಷಕ್ಕಾಗಿ ಇಟ್ಟುಕೊಳ್ಳಬೇಕು.

ಜಾಹೀರಾತು

ಎಲ್ಲ ಶಿಕ್ಷಕರಿಗೂ ತಿಳಿಸುವದೇನಂದರೆ :—ಕೆಳಗೆ ಬರೆದ ಪತ್ತೆಯ ಮೇಲೆ ವಿವರಿಸಿದ ಉಪಯೋಗಕಾರಕವಾದ ಶಿಕ್ಷಣದ ಉಪಕರಣಗಳು ದೊರೆಯುತ್ತವೆ. ಶಾಸ್ತ್ರೀಯ ವಿಷಯದ ಸಾಮಾನುಗಳು, ನೀರು ಜಗ್ಗುವ ನಳಿಕೆಗಳು, ಬ್ರಹ್ಮಾ ತೂಕದ ಆರ್ಕಿಮಿಡಿಸನ್ ಮಾದರಿಯ ತಕ್ಕಡಿಗಳು, ಕಾರಂಜಿಗಳು, ಸೂರ್ಯ ಋತುಗಳು, ಚಂದ್ರನಕಲೆಗಳು ಇವುಗಳನ್ನು ತೋರಿಸುವ ಉಪಕರಣಗಳು, ನಕಾಶಗಳು, ಗೋಡೆಗೆ ಹಾಕುವ ನಕಾಶಗಳು, ತೊಗಲಿನ ಬೋರ್ಡುಗಳು, ಉಣ್ಣೆಯ ಬೋರ್ಡುಗಳು ಸಹ ಮಾಂಟೆಸೋರಿ ಹಾಗು ಕಿಂಡರಗಾರ್ಟನ್ ಯ ಉಪಕರಣಗಳು ದೊರೆಯುವವು. ಬೇಕಾದವರು ಕೆಳಗಿನ ಪತ್ತೆಗೆ ಬಾಲ ಇಲ್ಲವೆ ಇಂಗ್ಲಿಷ ಲಿಪಿಯಿಂದ ಬರೆದು ಕ್ಯಾಟಲಾಗ ತರಿಸಿಕೊಳ್ಳಬೇಕು.

ಸಾಮಾನು ದೊರೆಯುವ ವಿಳಾಸ :—

Kashibhai C. Patel

ಕಾಶೀಭಾಯಿ ಸಿ. ಪಟೇಲ

ಶಿಕ್ಷಣ ಸಾಹಿತ್ಯ ಕಾರ್ಯಾಲಯ ದೇಹಗಾಂವ (ಅಹಮ್ಮದಾಬಾದ)

Sikshan Sahitya Karyalaya Dehgam (Ahamedabad)

ಜಾಹೀರಾತು

ಸ್ಯಾಂಪಲ್] [ಫುಕ್ಕಟೆ

ಉತ್ತಮ ಮಸೀ ಚೀಟುಗಳು

ನೀಲೀಕಪ್ಪು, ಕೆಂಪು, ಜಾಂಬಳಿ ಮಸಿಯ ಚೀಟುಗಳು ಈ ಕಂಪನಿಯು ಬಹಳ ಜನರಿಂದ ಶಿಫಾರಸ ಪಡೆದು. ಮೆಡಲ್ಲುಗಳನು ಸಂಪಾದಿಸಿರುತ್ತದೆ.

ದರಗಳು

೧೦೦	ಚೀಟುಗಳಿಗೆ	೦—೭—೦
೫೦೦	,,	೨—೦—೦
೧೦೦೦	,,	೩—೮—೦
೧೦೦೦೦	,,	೩೦—೦—೦ (ರೇಲ್ವೆ ಫ್ರಿ

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ,
ಬಾಗಲಕೋಟ.

REGISTERED NO R 2567

From
The Manager,
Kannada Prathamik Sikshana
Dharwar

LIST NO ೨೦

Reg. No. B 2567

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Sikshana

MAY & JUNE 1931

ಸಂಪಾದಕ—ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ

ಸಂಪುಟ ೬೮
ವರ್ಷ ೩ } ಮೇ—ಜೂನ ೧೯೩೧ { ೩ನೆ ವ. ಸಂ ೨-೩

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.		ಲೇಖಕರು	ಪುಟ
೧	ಸ್ಫುಟವಿಚಾರಗಳು	...	...	೧
೨	ಗಣಿತವಿಷಯದ ಹೊಸ ಅಭ್ಯಾಸಕ್ರಮವೂ ಬಾಯಿಲೆಕ್ಕಗಳೂ			೪
೩	ಹಾಳಾದ ಹಳ್ಳಿ	...	...	೮
೪	ಚಿಕ್ಕಪ್ಪ ಒಡೆಯರು	...	...	೧೦
೫	ಶಿಕ್ಷಣದ ಮಹತ್ವದ ಸಾಧನಗಳು		...	೧೩
೬	ಪ್ರಾಥಮಿಕ ಶಿಕ್ಷಕ		...	೧೮
೭	ಜೀವನಕ್ರಾಂತಿಯೂ ಶಿಕ್ಷಣಕ್ರಾಂತಿಯೂ		...	೨೨
೮	ಮೀರಾಬಾಯಿ	...	...	೨೬
೯	ಟ್ರೇ. ಸ್ಕೂಲಿನ ವಾರ್ಷಿಕ ಪ. ಪರಿಣಾಮವು		...	೩೬
೧೦	ಫೀ. ಟ್ರೇ. ಕಾ. ದ ೧ನೆಯ ವ. ಪ. ಪರಿಣಾಮವು		...	೩೮
೧೧	ಪ್ರಕಟನೆಗಳು	...	...	೩೯
೧೨	ಟ್ರೇ. ಕಾಲೇಜ ಹೊಸವರ್ಷ	...	...	೪೩
೧೩	ಕವಿತೆ	...	...	೪೪

Printed by K. R. Bhise at the Karnatak Printing Works, Dharwar
Published by H. G. Deshpande, B A.,
Head-Master, Training College for Men, Dharwar, at his Office

ಜಾಹೀರಾತ.

ಕೈ. ವಾ. ಗೋ. ಕೃ. ಗೋಖಲೆ ಇವರಿಂದ ರಚಿಸಲ್ಪಟ್ಟ ವಿ. ಗೆಜ್ಜಿಯವರಿಂದ
ಕನ್ನಡದಲ್ಲಿ ಭಾಷಾಂತರಿಸಲ್ಪಟ್ಟ **ಅಂಕಗಣಿತ** ಪುಸ್ತಕಗಳು.

೧ನೆಯ ಭಾಗ ಅಂಕಗಣಿತ	ಬೆಲೆ	೦-೫-೦
೨ನೆಯ ಭಾಗ ಅಂಕಗಣಿತ		೦-೧೦-೦
೩ನೆಯ ಭಾಗ ಅಂಕಗಣಿತ		೧-೪-೦

ಮೇಲಿನ ಪುಸ್ತಕಗಳಿಗೆ ವ್ಯಾಪಾರಸ್ಥರಿಗೆ ನೂರಕ್ಕೆ ೨೦ ರಂತೆ ಕಮೀಶ ಕೊಡಲ್ಪಡುವದು.

೫,೬,೭ನೆಯ ಇಯುತ್ತೆಗಳಿಗಾಗಿ **ರಾ. ಜ. ಗೋಖಲೆಯವರಿಂದ** ರಚಿಸಲ್ಪಟ್ಟ **ಕನ್ನಡ ಭೂವರ್ಣನೆ** (೩ನೆಯ ಭಾಗ) ಬೆಲೆ ೧-೮-೦ ಈ ಪುಸ್ತಕಕ್ಕೆ ವ್ಯಾಪಾರಸ್ಥರಿಗೆ ೧೦೦ಕ್ಕೆ ೧೫ರಂತೆ ಕಮೀಶನು ದೊರೆಯುವದು.

ಇವಲ್ಲದೆ ಕನ್ನಡ ಬಾಲಬೋಧಿನಿಯಿಂದ ೭ ನೆಯ **ಪುಸ್ತಕದ** ವರೆಗಿನ ಎ ಕ್ರಮಿಕ ಪುಸ್ತಕಗಳು ನಮ್ಮಲ್ಲಿ ದೊರೆಯುವವು. ಅವುಗಳಿಗೂ ಯೋಗ್ಯ ಕಮೀಶನ ಕೊಡಲ್ಪಡುವದು.

ಪುಸ್ತಕಗಳು ದೊರೆಯುವ ಸ್ಥಳ— **ಲಕ್ಷ್ಮಣ ನಾರಾಯಣ ಗೋಡಬೋ**
ಬುಕ್ ಸೆಲರ್, ಲಕ್ಷ್ಮೀರೋಡ. ಪುಣೆ ನಂ. ೨

ಜಾಹೀರಾತು

ಎಲ್ಲ ಶಿಕ್ಷಕರಿಗೂ ತಿಳಿಸುವದೇನಂದರೆ:—ಕೆಳಗೆ ಬರೆದ ಪತ್ತೆಯ ವೇ ಕೆಳಗೆ ವಿವರಿಸಿದ ಉಪಯೋಗಕಾರಕವಾದ ಶಿಕ್ಷಣದ ಉಪಕರಣಗಳು ದೊರೆಯುತ್ತ

ಶಾಸ್ತ್ರೀಯ ವಿಷಯದ ಸಾಮಾನುಗಳು. ನೀರು ಜಗ್ಗುವ ನಳಿಕೆಗಳು, ಬ್ರ ಪ್ರೆಸ್ಸ, ತೂಕದ ಆರ್ಕಿಮಿಡಿಸನ್ ಮಾದರಿಯ ತಕ್ಕಡಿಗಳು, ಕಾರಂಜಿಗಳು, **ಸೂರ** ಮಾಲೆ, ಋತುಗಳು, ಚಂದ್ರನಕಲೆಗಳು ಇವುಗಳನ್ನು ತೋರಿಸುವ ಉಪಕರಣಗ ರಿಲೀಫ ನಕಾಶಗಳು, ಗೋಡೆಗೆ ಹಾಕುವ ನಕಾಶಗಳು, ತೊಗಲಿನ ಬೋರ್ಡುಗ ರೇಶಿಮೆ ಉಣ್ಣೆಯ ಬೋರ್ಡುಗಳು ಸಹ ಮಾಂಟಿಸೋರಿ ಹಾಗು ಕಿಂಡರಗಾರ್ಟನ ಪದ್ಧತಿಯ ಉಪಕರಣಗಳು ದೊರೆಯುವವು. ಬೇಕಾದವರು ಕೆಳಗಿನ ಪತ್ತೆಗೆ ಬಾ ಬೋಧ ಇಲ್ಲವೆ ಇಂಗ್ಲಿಷ ಲಿಪಿಯಿಂದ ಬರೆದು ಕ್ಯಾಟಲಾಗ ತರಿಸಿಕೊಳ್ಳಬೇಕು.

ಸಾಮಾನು ದೊರೆಯುವ ವಿಳಾಸ:—

Kashibhai C. Patel
ಕಾಶೀಭಾಯಿ ಸಿ. ಪಟೇಲ

ಶಿಕ್ಷಣ ಸಾಹಿತ್ಯ ಕಾರ್ಯಾಲಯ ದೇಹಗಾಂವ (ಅಹಮ್ಮದಾಬಾದ)

Sikshan Sahitya Karyalaya Dehgam (Ahamedabad)

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:— ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.,

ಸಂಪುಟ ೬೭–೬೮
ವರ್ಷ ೨–೩

ಮೇ–ಜೂನ ೧೯೩೧

ಸಂಚಿಕೆ ೨–೩

ಸ್ಫುಟ ವಿಚಾರಗಳು

೧. ಶಿಕ್ಷಣದ ಮಹತ್ವವೂ ಕಾರ್ಯಕ್ರಮವೂ

ಓದುಬರಹ, ಗಣಿತ ವಿಷಯಗಳನ್ನಷ್ಟೇ ಕಲಿಸುವದು ಶಿಕ್ಷಣದ ಮುಖ್ಯ ಉದ್ದೇಶ ಅಲ್ಲ. ದೇಶದೊಳಗಿನ ಜನರು ಉತ್ತಮ ನಾಗರಿಕರಾಗುವಂತೆಯೂ ದೇಶದ ಪ್ರಗತಿಯು ಸುವ್ಯವಸ್ಥಿತವಾಗಿ ನಡೆಯುವಂತೆಯೂ ಮಾಡುವದು ಶಿಕ್ಷಣದ ಕಾರ್ಯವಾಗಿರುವದು. ಇವಲ್ಲದೆ ಸಮಾಜದಲ್ಲಿ ನೆಲೆಗೊಂಡ ರೂಢಿಗಳನ್ನೂ ಕಲ್ಪನೆಗಳನ್ನೂ ಪರಿಸ್ಥಿತಿಗೆ ಅನರೂಪವಾಗಿ ಬದಲಿಸಬೇಕೆಂಬ ಅಗತ್ಯವು ಯೋಗ್ಯವಾದ ಶಿಕ್ಷಣದಿಂದಲೇ ತಿಳಿಯುವದು. ನಮ್ಮ ದೇಶವು ಜಗತ್ತಿನಲ್ಲಿ ಸುಧಾರಿಸಿದ ರಾಷ್ಟ್ರಗಳ ಕೂಡ ಸಮಾನಸ್ಕಂಧವಾಗಿ ನಡೆಯಬೇಕಾದರೆ ರಾಷ್ಟ್ರದಲ್ಲಿ ಔದ್ಯೋಗಿಕ ಸುಧಾರಣೆಯು ಹೆಚ್ಚು ಹೆಚ್ಚು ನಡೆಯಲೇಬೇಕು. ನಮ್ಮ ಜೀವಿತದ ಸಲುವಾಗಿ ಎರಡನೆಯ ದೇಶಗಳ ಮೇಲೆ ಅವಲಂಬಿಸಿದಷ್ಟು ಸಮರ್ಥವಾದ ಸ್ವಾವಲಂಬನದ ತತ್ವವು ಪ್ರತಿಯೊಬ್ಬ ನಾಗರಿಕನ ಮನಸ್ಸಿನಲ್ಲಿ ಬೆಳೆಯುತ್ತಿರಬೇಕು. ನಮ್ಮ ದೇಶದ ಜನರು ಔಷಧ, ವಿಲಾಸ, ಅರಿವೆ, ಬಣ್ಣ ಮೊದಲಾದ ಪದಾರ್ಥಗಳನ್ನು ಪರದೇಶದಿಂದ ತರಿಸುತ್ತಿರುವರು. ಈ ಪದಾರ್ಥಗಳನ್ನು ಮಾಡುವದಕ್ಕೆ ಅವಶ್ಯವಾದ ಮೂಲ ದ್ರವ್ಯಗಳು ನಮ್ಮಲ್ಲಿಯೇ ದೊರೆಯುತ್ತಿರುವವು. ಆದರೆ ಈ ಹೊಸ ಪ್ರಕಾರದ ಉದ್ಯೋಗಗಳು ನಮ್ಮಲ್ಲಿ ನೆಲೆಗೊಳ್ಳದೆ ಇರುವದರಿಂದ

ಸುಶಿಕ್ಷಿತರಲ್ಲಿ ನಿರುದ್ಯೋಗಿತನವು ಹೆಚ್ಚಾಗಿದೆ. ನಮ್ಮ ದೇಶದ ಹಳ್ಳಿಪಳ್ಳಿಗಳಲ್ಲಿ ಇದ್ದ ಜನರು ಸಹ ಮೋಟರಗಳ ಉಪಯೋಗವನ್ನು ಮಾಡದೆ ಇದ್ದಂಥವರು ತೀರ ಅಪರೂಪ. ಆದರೆ ಮೋಟರದ ಸಣ್ಣ ಮೊಳೆಯು ಹೋದರೆ ಅದನ್ನು ಸಿದ್ಧ ಮಾಡುವ ಸಾಮರ್ಥ್ಯವು ನಮ್ಮಲ್ಲಿ ಎಂಥ ಕುಶಲ ಶಿಲ್ಪಿಗಾದರೂ ಅಶಕ್ಯವಾಗಿದೆ. ಆದರೆ ಈ ಮೊಳೆಯನ್ನು ಸಿದ್ಧ ಮಾಡಲಿಕ್ಕೆ ಬೇಕಾಗುವ ಉಕ್ಕು ಅಥವಾ ಕಬ್ಬಿಣವು ನಮ್ಮಲ್ಲಿಯೇ ದೊರೆಯುವದು. ಇತ್ತಲಾಗಿ ಆಕಾಶ ನೌಕಾಯಾನವು ಸಾಮಾನ್ಯವಾಗಹತ್ತಿದೆ. ಆದರೆ ಉಚ್ಚ ಶಿಕ್ಷಣದ ಕಾಲೇಜಗಳಲ್ಲಿ ಶಾಸ್ತ್ರೀಯ ಶಿಕ್ಷಣ ಪಡೆದ ಪದವೀಧರರಿಗೆ ಸಹ ಆಟದ ವಾತನಾವೆಗಳನ್ನು ಮಾಡಲಿಕ್ಕೆ ಸಹ ಬರುವದಿಲ್ಲ. ಆದರೆ ಅಮೇರಿಕಾ ಜಪಾನ ಮೊದಲಾದ ಸುಧಾರಿಸಿದ ರಾಷ್ಟ್ರಗಳಲ್ಲಿ ಪ್ರಾಥಮಿಕ ಶಾಲೆಗಳ ಬಾಲಕರು ಸಹ ಇಂಥ ಆಟದ ವಾತನಾವೆಗಳನ್ನು ಮಾಡಿ ಹಾರಿಸುತ್ತಲಿರುವರು. ಆದಕಾರಣ ಶಿಕ್ಷಣದಿಂದ ಕೇವಲ ಪುಸ್ತಕ ಜ್ಞಾನವನ್ನಷ್ಟೇ ಮಾಡಿಕೊಂಡರೆ ಈ ಯುಗದಲ್ಲಿ ಕಾರ್ಯಸಾಫಲ್ಯವಾಗಲಾರದು. ಈ ಕೊರತೆಯನ್ನು ಕಂಡುಹಿಡಿದು ಮೊನ್ನೆ ನೋಬೆಲ್ ಪ್ರಾಯಿಝದ ಬಹುಮಾನವನ್ನು ಪಡೆದ ಸರ ಚಂದ್ರಶೇಖರ ವೆಂಕಟರಾಮನ್ ಎಂಬ ಪ್ರಸಿದ್ಧ ವಿಜ್ಞಾನಶಾಸ್ತ್ರ ಶೋಧಕರು ಔದ್ಯೋಗಿಕ ಶಾಲೆಯನ್ನು ಸ್ಥಾಪಿಸಲಿಕ್ಕೆ ನಮ್ಮ ದೇಶದ ಶ್ರೀಮಂತ ಜನರಿಂದ ೧೦ ಲಕ್ಷ ರೂಪಾಯಿಗಳನ್ನು ಬೇಡಿರುವರು. ಇಷ್ಟರಲ್ಲಿ ಅವರನ್ನು ಬೆಂಗಳೂರಿನ ಟಾಟಾ ಎಂಬವರು ಸ್ಥಾಪಿಸಿದ ರಿಸರ್ಚ ಇನ್‌ಸ್ಟಿಟ್ಯೂಟದ ಡಾಯರೆಕ್ಟರನ್ನಾಗಿ ನೇಮಿಸಿದ್ದರಿಂದ ಔದ್ಯೋಗಿಕ ಶಿಕ್ಷಣದಲ್ಲಿ ಸುಧಾರಣೆಯಾಗಬಹುದೆಂದು ನಂಬುತ್ತೇವೆ.

೨. ಪಠ್ಯಪುಸ್ತಕಗಳು

ಪ್ರಾಥಮಿಕ ಶಾಲೆಗಳಲ್ಲಿ ಈಗ ಉಪಯೋಗಿಸುತ್ತಿರುವ ಕ್ರಮಿಕ ಪುಸ್ತಕಗಳನ್ನು ೩೦ ವರ್ಷಗಳ ಹಿಂದೆ ಬರೆದದರಿಂದ ಅವುಗಳಲ್ಲಿ ಸದ್ಯದ ಪರಿಸ್ಥಿತಿಗನುಸರಿಸಿ ಅವುಗಳಲ್ಲಿ ಸುಧಾರಣೆಮಾಡುವದು ಅವಶ್ಯವೆಂದು ತೋರಹತ್ತಿದೆ. ಇದಕ್ಕಾಗಿ ದಕ್ಷಿಣ ಭಾಗದ ಸ್ಕೂಲುಬೋರ್ಡುಗಳ ಚೆಅರಮನ್ನರೂ ಅಧಿಕಾರಸ್ಥರೂ ಒಟ್ಟುಗೂಡಿ ಮೇ ತಿಂಗಳ ಕೊನೆಗೆ ಒಂದು ಸಂಸ್ಥೆಯನ್ನು ನಿರ್ಮಾಣಮಾಡಿ ಅದರ ದ್ವಾರವಾಗಿ ಹೊಸ ಪಠ್ಯಪುಸ್ತಕಗಳನ್ನು ಏರ್ಪಡಿಸಬೇಕೆಂದು ಆಲೋಚಿಸಿದ್ದಾರೆ. ಅದಕ್ಕಾಗಿ ಸದ್ಯಕ್ಕೆ ೫ ಸಾವಿರದವರೆಗೆ ದ್ರವ್ಯನಿಧಿಯು ಬೇಕೆಂದೂ ಅದನ್ನು ಎಲ್ಲ ಬೋರ್ಡಿನವರು ತಮ್ಮ ವೆಚ್ಚದ ಪ್ರಮಾಣದಿಂದ ಕೊಡಬೇಕೆಂದೂ ಗೊತ್ತುಮಾಡಿರುವರು. ಈ ಸಂಸ್ಥೆಯವರು ಹಿಂದುಸ್ಥಾನದ ಎಲ್ಲ ಭಾಷೆಗಳ ಪ್ರಾಥಮಿಕ ಪಠ್ಯಪುಸ್ತಕಗಳನ್ನು ತರಿಸಿಕೊಂಡು ಪ್ರಾಥಮಿಕ ಶಾಲೆಗಳ ಇಯತ್ತೆಗಳ ಕ್ರಮಿಕ ಪುಸ್ತಕಗಳೊಳಗಿನ ವಿಷಯಗಳನ್ನು ಆರಿಸಬೇಕೆಂದೂ, ಅವುಗಳನ್ನು ತಜ್ಞರಿಂದ ಬರೆಯಿಸಬೇಕೆಂದೂ ನಿರ್ಧರಿಸಿದ್ದಾರೆ. ಹೊಸ ಪಾಠಗಳನ್ನು ಬರೆಯುವಾಗ ಪಾಶ್ಚಾತ್ಯ ದೇಶಗಳಲ್ಲಿ ಕಂಡುಬರುವ ಪುಸ್ತಕಗಳಲ್ಲಿಯ ಪಾಠಗಳ ಉಪ

ಯೋಗವನ್ನು ಮಾಡಿಕೊಳ್ಳುವದು ಅವಶ್ಯವಿದೆ. ಪುಸ್ತಕಗಳು ಸಿದ್ಧವಾಗಿ ಮಾರಿದ ಬಳಿಕ ಬಂದ ಲಾಭವನ್ನು ಬೋರ್ಡಿನವರು ತಾವು ಕೊಟ್ಟ ಹಣದ ಪ್ರಮಾಣದಿಂದ ತೆಗೆದುಕೊಳ್ಳಬಹುದು. ಆದದರಿಂದ ಸಧ್ಯಕ್ಕೆ ಬೋರ್ಡಿನವರು ವೆಚ್ಚ ಮಾಡುವ ಹಣವು ತುಂಬಿ ಬರಬಹುದಾಗಿದೆ.

ಈಗಿನ ಕ್ರಮಿಕ ಪುಸ್ತಕಗಳನ್ನು ಬರೆದು ೩೦ ವರುಷಗಳಾಗಿರುವದರಿಂದ ಅವುಗಳಲ್ಲಿ ಸುಧಾರಣೆಯಾಗುವದು ಅವಶ್ಯವಿದೆ. ಅವುಗಳಲ್ಲಿ ಸೇರಿಸಿರುವ ಇತಿಹಾಸ, ಭೂಗೋಲ ಪಾಠಗಳನ್ನು ತೆಗೆದು ಹಾಕಿ ಬೇರೆ ಉಪಯುಕ್ತ ಪಾಠಗಳನ್ನು ಸೇರಿಸಬೇಕು. ಯಾಕೆಂದರೆ ಈ ಪಾಠಗಳಿಂದ ವಿಷಯಜ್ಞಾನವು ಸರಿಯಾಗಿ ಆಗುವದೆಂದು ತಿಳಿಯುವದು ಸಮರ್ಪಕವಾಗಲಾರದು. ವರ್ಷ ವರ್ಷ ಕಲಿಸಿದ್ದನ್ನೇ ಕಲಿಸಿದಂತೆ ಆಗಿರುವದರಿಂದ ವಿಷಯ ವೈಚಿತ್ರ್ಯತೆಯು ಶಿಕ್ಷಕರಿಗೂ ಹಳೆ ವಿದ್ಯಾರ್ಥಿಗಳಿಗೂ ದೊರೆಯದಂತೆ ಆಗಿದೆ. ಆದದರಿಂದ ಬೇಗನೆ ಹೊಸ ಪುಸ್ತಕಗಳನ್ನು ರಚಿಸಿದರೆ ಬೋರ್ಡಿನವರು ಶಿಕ್ಷಣದಲ್ಲಿ ಸುಧಾರಣೆ ಮಾಡಿದಂತೆ ಆಗುವದು.

೩ ವಿಶೇಷ ಸಂಚಿಕೆಗಳು

ಗಣಿತ ವಿಷಯದ ಸಂಚಿಕೆಯನ್ನು ಮಾರ್ಚ ಎಪ್ರಿಲ ತಿಂಗಳಲ್ಲಿ ತಜ್ಞರಿಂದ ಬರೆಯಿಸಿ ಹೊರಡಿಸಿದೆ. ಈ ವಿಷಯದ ಬಗ್ಗೆ ಎಷ್ಟು ಲೇಖಗಳನ್ನು ಬರೆದರೂ ಕಡಿಮೆ. ಇನ್ನು ಯಾರಾದರೂ ಅವುಗಳನ್ನು ಲೇಖಕರು ಶೀಘ್ರವಾಗಿ ನಮ್ಮ ಕಡೆಗೆ ಕಳಿಸಿದರೆ ಬೇಗನೆ ಪ್ರಕಟಿಸುವೆವು. ಹಾಗೆಯೇ ಮುಂದೆ ಬೇರೆ ಬೇರೆ ವಿಷಯಗಳ ಸಂಚಿಕೆಯನ್ನು ಹೊರಡಿಸುವ ವಿಚಾರವದೆ. ಭಾಷಾ, ಇತಿಹಾಸ, ಭೂಗೋಲ ವಿಷಯಗಳ ಮೇಲಿನ ಲೇಖಗಳನ್ನು ತಜ್ಞರು ಬರೆದು ಕಳಿಸಿಕೊಟ್ಟರೆ ಕ್ರಮದಿಂದ ಅವನ್ನು ಪ್ರಕಟಿಸುವೆವು. ಈ ತರದ ಲೇಖಗಳಿಂದ ಪ್ರಾಥಮಿಕ ಶಿಕ್ಷಕರಿಗೆ ಶಿಕ್ಷಣ ಕಾರ್ಯಕ್ಕೆ ಸುಗಮತೆಯು ಉಂಟಾಗುವದು ಸಹಜವದೆ. ಈ ಸುಧಾರಣೆಯ ಕೆಲಸಕ್ಕೆ ಅವಶ್ಯವಾಗಿ ಸಾಹಾಯ್ಯ ಮಾಡಬೇಕೆಂದು ಕೋರುವೆವು.

ಗಣಿತ ವಿಷಯದ ಹೊಸ ಅಭ್ಯಾಸಕ್ರಮವೂ ಬಾಯಿಲೆಕ್ಕಗಳೂ

ಲೇಖಕ:—ಸಂ. ಮ. ಪ್ರ. ಪೂಜಾರ, ಅಸಿ. ಮಾ. ಟ್ರೇ. ಸ್ಕೂ. ಧಾರವಾಡ.

ಹೇಳಿದ ಲೆಕ್ಕವನ್ನು ಮನಸ್ಸಿನಲ್ಲಿಟ್ಟುಕೊಂಡು ಬರಹದ ಸಾಧನಗಳನ್ನು ಉಪಯೋಗಿಸದೆ ವಿದ್ಯಾರ್ಥಿಗಳಿಗೆ ಅವುಗಳ ಉತ್ತರಗಳನ್ನು ತೆಗೆಯುವ ರೂಢಿಯು ಮಾಡಿಸುವದು ಮೊದಲಿನಿಂದಲೂ ನಡೆದು ಬಂದಿದೆ. ಕೆಲವು ವರ್ಷಗಳ ಪೂರ್ವದಲ್ಲಿ ಬರಹದ ಸಾಧನಗಳಿಂದ ಪಾಟಿಯ ಮೇಲೆ ಇಲ್ಲವೆ ಕಾಗದದ ಮೇಲೆ ಮಾಡುವ ಲೆಕ್ಕಗಳು ಬೇರೆ, ಬಾಯಿಲೆಕ್ಕಗಳು ಬೇರೆ ಎಂಬ ಕಲ್ಪನೆ ಉಂಟಾಗಿದ್ದಿತು. ಆದದರಿಂದ ಆಗ ಪಾಟಿಯ ಮೇಲಿನ ಲೆಕ್ಕಗಳಿಗೆ ಸಂಬಂಧವಿಲ್ಲದಂತಹ, ವಿವಿಧ ಪರಿಮಾಣಗಳ ಬೇರೆ ಬೇರೆ ಕೋಷ್ಟಕ ಸಂಖ್ಯೆಗಳ ಗುಣನ, ಭಾಜನ ಮೊದಲಾದ ಕೃತಿಗಳುಳ್ಳ ಲೆಕ್ಕಗಳನ್ನೇ ಬಾಯಿಲೆಕ್ಕಗಳೆಂದು ಹೇಳುವ ವಾಡಿಕೆಯುಂಟಾಯಿತು.

ಗಣಿತ ಶಾಸ್ತ್ರವು ಬುದ್ಧಿವಿಕಾಸ ಸಾಧನವೆಂದು ನಮಗೆ ಅತ್ಯಾವಶ್ಯಕವಾಗಿದ್ದರೂ ಆ ವಿಷಯದ ವ್ಯವಹಾರೋಪಯುಕ್ತತೆಯು ಪ್ರಾಥಮಿಕ ಶಾಲೆಗಳಲ್ಲಂತೂ ಮುಖ್ಯ ಪ್ರಯೋಜನವೆಂದು ಪರಿಗಣಿಸಲ್ಪಟ್ಟಿದೆ. ಪ್ರಾಥಮಿಕ ಶಾಲೆಗಳ ಗಣಿತ ವಿಷಯದ ಅಭ್ಯಾಸಕ್ರಮದಲ್ಲಿ ಈ ವ್ಯವಹಾರೋಪಯುಕ್ತತೆಯ ಕಡೆಗೆ ಅಲಕ್ಷವಾಗುತ್ತ ನಡೆದಂತೆ ಗಣಿತದಲ್ಲಿ ಕೇವಲ ಭಾವಸಂಖ್ಯೆಗಳೂ, ವ್ಯವಹಾರಕ್ಕೆ ಸಂಬಂಧ ಪಡದ ವಿಚಾರಗಳೂ ಸಮಾವೇಶವಾಗುತ್ತ ನಡೆದವು. ಗಣಿತ ವಿಷಯವನ್ನು ಹೆಚ್ಚಾಗಿ ಕಲಿತ ವಿದ್ಯಾರ್ಥಿಗಳು ಕೂಡ ಸಂತೆ ಅಂಗಡಿ ಮುಂತಾದವುಗಳಲ್ಲಿ ಬೇಕಾಗುವ ಸಾಮಾನ್ಯ ವ್ಯವಹಾರಗಳಲ್ಲಿ ಕೆಲಸಕ್ಕೆ ಬಾರದವರೆನಿಸತೊಡಗಲು, ಅವರಲ್ಲಿ ವ್ಯವಹಾರೋಪಯುಕ್ತತೆಯನ್ನು ಉಂಟು ಮಾಡುವದಕ್ಕಾಗಿ ಬಾಯಿಲೆಕ್ಕಗಳು ಮುಂದೆ ಬಂದವು. ಸಂತೆ ಅಂಗಡಿ ಮುಂತಾದವುಗಳಲ್ಲಿಯ ವ್ಯವಹಾರಗಳನ್ನು ಸಾಗಿಸುವಾಗ ಬರಹದ ಸಾಧನಗಳನ್ನು ಉಪಯೋಗಿಸುವದು ತೊಂದರೆಯಾದದರಿಂದ ಬಾಯಿಂದ ಲೆಕ್ಕಗಳನ್ನು ಮಾಡುವದಕ್ಕೆ ಬರಬೇಕೆಂದು ಬಾಯಿಲೆಕ್ಕಗಳನ್ನು ಹೇಳುವ ವಾಡಿಕೆ ಬಂದಿತು. ತೊಲೆಯಿಂದ ಗುಂಜಿಗೆ, ಗುಂಜಿಯಿಂದ ತೊಲೆಗೆ, ಮಣದಿಂದ ಸೇರಿಗೆ, ಸೇರಿನಿಂದ ಮಣಕ್ಕೆ ಬೆಲೆಗಳನ್ನು ಕೇಳುವ ಲೆಕ್ಕಗಳು ಭರದಿಂದ ಪ್ರಚಾರದಲ್ಲಿ ಬಂದವು. ಇಂತಹ ಲೆಕ್ಕಗಳನ್ನು ಅಂಗಡಿಕಾರನು ಸ್ವಲ್ಪ ವೇಳೆಯಲ್ಲಿ ಮಾಡುವನು; ಅವನಂತೆ ಸಾಲೆಯ ಹುಡುಗರೂ ಸ್ವಲ್ಪ ವೇಳೆಯಲ್ಲಿ ಮಾಡಬೇಕೆಂಬ ಮೋಹವು ಶಿಕ್ಷಕರನ್ನು ಆವರಿಸಲು ಅವರು ಅಂಗಡಿಕಾರನಿಗಿಂತ ಮುಂಚೆ ಹುಡುಗರು ಉತ್ತರಗಳನ್ನು ಹೇಳುವದಕ್ಕೆ ಅನುಕೂಲವಾಗುವಂತೆ ಬಾಯಿಲೆಕ್ಕಗಳ ಸಾರಣಿಗಳನ್ನು ಇಲ್ಲವೆ ಸೂತ್ರಗಳನ್ನು ನಿರ್ಮಾಣ ಮಾಡಿ ಅವುಗಳನ್ನು ವಿದ್ಯಾರ್ಥಿಗಳಿಂದ ಪಾಠ ಮಾಡಿಸಿ ಅವುಗಳ ಸಹಾಯದಿಂದ ಬಾಯಿಲೆಕ್ಕಗ

ಳನ್ನು ಮಾಡಿಸಲಾರಂಭ ಮಾಡಿದರು. ದಾಮು, ರೇಸು, ಫಟ್ಟಿ ಆಣೆಗಳೆಂಬ ಕಲ್ಪಿತ ಪರಿಮಾಣಗಳ ಸಾಹಾಯ್ಯದಿಂದ ಹುಡುಗರು ಬಾಯಿಲೆಕ್ಕಗಳನ್ನು ತೀವ್ರವಾಗಿ ಮಾಡತೊಡಗಿದರು. ಅಂಗಡಿಕಾರನನ್ನು ಹಿಂದೆ ಹಾಕಿದರು. ಆದರೆ ಗಣಿತ ವಿಷಯದ ಅಭ್ಯಾಸದಿಂದ ಆಗುವ ಪರಮಪ್ರಯೋಜನಕ್ಕೆ—ಬುದ್ಧಿವಿಕಾಸಕ್ಕೆ—ವಂಚಿತರಾದರು. ಆ ಸೂತ್ರಗಳನ್ನು ಪಾಠ ಮಾಡಿ, ಅವನ್ನು ಉಪಯೋಗಿಸುವ ರೂಢಿಯನ್ನು ಹೆಚ್ಚಿಗೆ ಮಾಡಿಕೊಂಡು, ಕೇವಲ ಯಾಂತ್ರಿಕ ರೀತಿಯಿಂದ ತಟ್ಟನೆ ಉತ್ತರವನ್ನು ಹೇಳುವದಕ್ಕೆ ಬಂದರೆ ಕೃತಕೃತ್ಯರಾದೆವೆಂದು ಭಾವಿಸಿದರು. ಮುಂದೆ ಬಾಯಿಲೆಕ್ಕಗಳು ವ್ಯವಹಾರಕ್ಕೆ ಉಪಯೋಗವಾಗಬೇಕೆಂಬ ವಿಚಾರವು, ತಿಳಿದೂತಿಳಿಯದಂತೆ ಹಿಂದುಳಿಯಿತು. ವಿದ್ಯಾರ್ಥಿಯು “ಹೇರಿನಿಂದ ಗಿರಪಾವಿಗೆ” “ಖಂಡಗದಿಂದ ಪಾವುಸೇರಿಗೆ” ತಟ್ಟನೆ ಉತ್ತರವನ್ನು ಹೇಳಿದರೂ ಮೂರೂಮುಕ್ಕಾಲು ಆಣೆಗೊಂದರಂತೆ ೩ ಸಾಬಾಣಗಳನ್ನೂ, ೫ ದುಡ್ಡಿಗೆ ೨ ಸೇರಿನಂತೆ ೩ ಸೇರು ಬೆಲ್ಲವನ್ನೂ ಕೊಂಡು ೧ ರೂಪಾಯಿ ಕೊಟ್ಟರೆ ಅಂಗಡಿಕಾರನಿಂದ ಮರಳಿ ಎಷ್ಟು ಬರುವದೆಂಬದು ಅಂಗಡಿಯ ಇದಿರಿಗೆ ಎಷ್ಟು ಹೊತ್ತು ಲೆಕ್ಕ ಮಾಡಿದರೂ ವಿದ್ಯಾರ್ಥಿಗೆ ತಿಳಿಯದಂತೆಯೇ ಆಯಿತು. ಅಂಗಡಿಕಾರನು ಎರಡಾಣೆ ಹತ್ತುವರೆ ಪೈಗಳನ್ನು ಮರಳಿ ಕೊಡುವದಕ್ಕೆ ಬದಲಾಗಿ ಎರಡಾಣೆ ಏಳುವರೆ ಪೈಗಳನ್ನು ಕೊಟ್ಟರೂ ಜೇಬಿನಲ್ಲಿ ಹಾಕಿಕೊಂಡು ಅದೇ ಲೆಕ್ಕದ ವಿಚಾರವನ್ನು ಮನೆತನಕ ಮಾಡುತ್ತ ಬರುವವರೇ ಹೆಚ್ಚು. ಹೀಗಿರುವಾಗ ಧಾರವಾಡದಲ್ಲಿ ಅಕ್ಕಿಯು ರೂಪಾಯಿಗೆ ೫ ಸೇರೂ, ಬೆಳಗಾಂವಿಯಲ್ಲಿ ೯॥ ಸೇರೂ ಇದ್ದರೆ ಎಲ್ಲಿ ಅಗ್ಗವಾಯಿತೆಂಬದೂ, ಬೆಣ್ಣೆಯು ಬೆಳಗಾಂವಿಯಲ್ಲಿ ೨ ಆಣೆಗೆ ೭ ಆಣೆ ತೂಕ, ಮತ್ತು ಧಾರವಾಡದಲ್ಲಿ ೩॥ ಆಣೆಗೆ ಸೇರು ಇದ್ದರೆ ಯಾವ ಊರಲ್ಲಿ ತುಟ್ಟಿಯಾಯಿತೆಂಬದೂ ತಿಳಿಯುವದಂತೂ ದೂರಕ್ಕೆ ಉಳಿಯಿತು. ಹೀಗಾಗಿ ಈ ಬಾಯಿಲೆಕ್ಕಗಳು ಬುದ್ಧಿವಿಕಾಸ, ವ್ಯವಹಾರ ಇವುಗಳಲ್ಲೊಂದೂ ಪ್ರಯೋಜನವನ್ನು ಸಾಧಿಸದಂತಾದವು. ಈ ತರದ ಬಾಯಿಲೆಕ್ಕಗಳು ಹೊಸ ಅಭ್ಯಾಸಕ್ರಮದಲ್ಲಿ ಇಲ್ಲ. ದೊಡ್ಡ ಸಂಖ್ಯೆಗಳಿರುವಲ್ಲಿ ಬಾಯಿಂದ ಮಾಡಲು ಬಾರದಂತಹ ಲೆಕ್ಕಗಳನ್ನು ಪಾಟಿಯ ಮೇಲೆ ಮಾಡುವದೇ ಹೊರತು ಪಾಟಿಯ ಮೇಲಿನ ಲೆಕ್ಕಗಳಿಂದ ಭಿನ್ನವಾದ ಬಾಯಿಲೆಕ್ಕಗಳೆಂಬವು ಇಲ್ಲ; ಇಲ್ಲವೆ ಬಾಯಿಲೆಕ್ಕಗಳಿಂದ ಭಿನ್ನವಾದ ಪಾಟಿಯ ಮೇಲಿನ ಲೆಕ್ಕಗಳು ಇಲ್ಲವೆಂದು ಹೇಳಬಹುದು. ನಾವು ಪಾಟಿಯ ಮೇಲೆ ಲೆಕ್ಕಗಳನ್ನು ಮಾಡುವಾಗಲೂ ಒಂದೊಂದೇ ಮೆಟ್ಟನ್ನು ಬಾಯಿಂದ ಮೊದಲು ಬಿಡಿಸಿ, ಎಂದರೆ ಅದನ್ನು ಬಿಡಿಸುವ ರೀತಿಯನ್ನು ಗೊತ್ತು ಮಾಡಿಕೊಂಡು ಬಳಿಕ ಕೃತಿಯನ್ನು ಮಾಡುವೆವು. ಈ ಮೇರೆಗೆ ಬಾಯಿಲೆಕ್ಕಗಳೂ ಪಾಟಿಯ ಮೇಲಿನ ಲೆಕ್ಕಗಳೂ ಪ್ರಾಯಃ ಒಂದೇ ಆಗಿರುವದರಿಂದ ಹೊಸ ಅಭ್ಯಾಸಕ್ರಮದಲ್ಲಿ ಸ್ವತಂತ್ರವಾಗಿ ಬಾಯಿಲೆಕ್ಕ ಎಂಬ ವಿಷಯವೂ, ಇಯತ್ತೆಯನುಸಾರವಾಗಿ ಅದರಲ್ಲಿ ವಿಭಾಗವೂ ಇಲ್ಲ; ಆಯಾ ಇಯತ್ತೆಗೆ ಹೇಳುವ ಪಾಟಿಯ ಮೇಲಿನ ಲೆಕ್ಕಗಳ ಸುಲಭ ಸ್ವರೂಪದ ಲೆಕ್ಕಗಳೇ ಆಯಾ ಇಯತ್ತೆಗೆ ಬಾಯಿಲೆಕ್ಕಗಳು.

Pg No. 7 to 9
Missing.

ಬಾಯಿಲೆಕ್ಕಗಳನ್ನು ಹೇಳುವ ಉದ್ದೇಶಗಳು:—

(೧) ವ್ಯವಹಾರೋಪಯುಕ್ತತೆಯ ದೃಷ್ಟಿಯಿಂದ–

(ಅ) ಲೆಕ್ಕಗಳನ್ನು ನೆನಪಿನಲ್ಲಿಟ್ಟುಕೊಳ್ಳುವ ಸಾಮರ್ಥ್ಯವನ್ನುಂಟುಮಾಡುವದು.

(ಆ) ತೀವ್ರವಾಗಿ ಲೆಕ್ಕಗಳನ್ನು ಮಾಡುವ ಚಟುವಟಿಕೆಯನ್ನುಂಟು ಮಾಡುವದು.

ಂಪಾತೀರದಲ್ಲಿರುವ ವಿಜಯನಗರವೆಂಬ ಪಟ್ಟಣಕ್ಕೆ ಹೋಗಬೇಕೆಂದು ಮೋಳಮ್ಮನು ಬಂದು ಚಕ್ರತೀರ್ಥದ ಬಳಿಯಲ್ಲಿರುವ, ಶ್ರೀ ಕೋದಂಡ ರಾಮಸ್ವಾಮಿಯ ದೇವಾಲಯದ ಬಳಿಯಲ್ಲಿ ಆ ಸಣ್ಣ ಬಾಲಕನಾದ ಚಿಕ್ಕಪ್ಪನನ್ನು ಬಿಟ್ಟು ತಾನು ನಗರದೊಳಗೆ ಭಿಕ್ಷವೆತ್ತುವದಕ್ಕೆ ಹೊರಟಳು. ಇತ್ತ ಆ ಬಾಲಕನು ರಾಮಸ್ವಾಮಿಯ ಗುಡಿಯ ಹತ್ತಿರ ಮಲಗಿಕೊಂಡಿದ್ದನು. ಸಮೀಪದಲ್ಲಿ ಹಾವಿನ ಹುತ್ತವು ಇತ್ತು. ಅದರೊಳಗಿಂದ

ಬಾಯಿಲೆಕ್ಕಗಳನ್ನು ಹೇಳುವ ಉದ್ದೇಶಗಳು:—

(೧) ವ್ಯವಹಾರೋಪಯುಕ್ತತೆಯ ದೃಷ್ಟಿಯಿಂದ–

(ಅ) ಲೆಕ್ಕಗಳನ್ನು ನೆನಪಿನಲ್ಲಿಟ್ಟುಕೊಳ್ಳುವ ಸಾಮರ್ಥ್ಯವನ್ನುಂಟುಮಾಡುವದು.

(ಆ) ತೀವ್ರವಾಗಿ ಲೆಕ್ಕಗಳನ್ನು ಮಾಡುವ ಚಟುವಟಿಕೆಯನ್ನುಂಟು ಮಾಡುವದು.

(ಇ) ಬರಹದ ಸಾಧನಗಳ ಆವಶ್ಯಕತೆಯನ್ನು ಇಲ್ಲದಂತೆ ಮಾಡುವದು.

(೨) ಬುದ್ಧಿವಿಕಾಸದ ದೃಷ್ಟಿಯಿಂದ—(ಅ) ದೊಡ್ಡ ಸಂಖ್ಯೆಗಳುಳ್ಳ ಮತ್ತು ಹಲವು ಮೆಟ್ಟುಗಳುಳ್ಳ ಲೆಕ್ಕಗಳ ಕಲ್ಪನೆಯನ್ನು ತಂದು ಕೊಡುವದು.

ಬಾಯಿಲೆಕ್ಕಗಳ ಪ್ರಕಾರಗಳು:—

(೧) ವಿವಿಧ ಸಂಖ್ಯೆಗಳ ಕೋಷ್ಟಕಗಳಿಂದ ಸಂಕಲನ ವ್ಯವಕಲನ ಗುಣಾಕಾರ ಮುಂತಾದ ಕೃತಿಗಳನ್ನು ಮಾಡಿ ಉತ್ತರವನ್ನು ತೆಗೆಯುವಂತಹವು.

(೨) ಕೆಲವು ಯುಕ್ತಿ ಸಾರಣಿ ಮುಂತಾದವುಗಳಿಂದ ಮಾಡಿದರೆ ಮಾತ್ರ ಸುಲಭವಾಗುವಂತಹವು.

(೩) ಗಣಿತದ ಸುಲಭ ಕೃತಿಗಳಿಂದ ಮಾಡಿದರೆ ಮಾತ್ರ ಸುಲಭವಾಗುವಂತಹವು.

(೪) ದೊಡ್ಡ ಸಂಖ್ಯೆಗಳೂ, ಹಲವು ಮೆಟ್ಟುಗಳೂ ಉಳ್ಳ ಲೆಕ್ಕಗಳನ್ನು ಬಿಡಿಸುವ ರೀತಿಯ ಕಲ್ಪನೆ ಬರುವದಕ್ಕಾಗಿ ಸಣ್ಣ ಸಂಖ್ಯೆಗಳನ್ನೂ ಒಂದೊಂದೇ ಮೆಟ್ಟನ್ನೂ ತೆಗೆದುಕೊಂಡು ಮಾಡುವಂತಹವು.

ಉದಾಹರಣೆಗಳು:—

(೧) ತೊಲೆ ಬಂಗಾರಕ್ಕೆ ೨೦ರೂ. ಗಳಾದರೆ ೨ ಗುಂಜಿಗಳಿಗೆಷ್ಟು ?
೧ ಗುಂಜಿ ಬಂಗಾರಕ್ಕೆ ೨॥ ಆಣೆಯಾದರೆ ೧ ತೊಲೆಗೆಷ್ಟು ?

(೨) ೪೫ ಈ ಸಂಖ್ಯೆಯ ವರ್ಗವನ್ನು ಹೇಳು.

(ಅ) $(ಅ+ಬ)^{೨} = ಅ^{೨}+ಬ^{೨}+೨ ಅಬ$, ಈ ಸಾರಣಿಯಿಂದ

$$೪೫^{೨} = (೪೦+೫)^{೨} = ೪೦^{೨}+೫^{೨}+೨ (೪೦\times೫)$$

(ಈ ಸಾರಣಿಯಿಂದ ಲೆಕ್ಕವನ್ನು ಸುಲಭವಾಗಿ ಬಾಯಿಂದ ಬಿಡಿಸಬಹುದು.)

(ಬ) $\frac{೧}{೨}+\frac{೧}{೪}+\frac{೧}{೮}+\frac{೧}{೧೬}+\frac{೧}{೩೨}+\frac{೧}{೬೪}+\frac{೧}{೧೨೮}=$?

ಕ್ರಮದಿಂದ ಇಮ್ಮಡಿಯಾದ ಭೇದಗಳಿದ್ದಲ್ಲಿ ಶ್ರೇಢಿಯ ತತ್ತ್ವದಿಂದ ಕೊನೆಯ ಅಪೂರ್ಣಾಂಕದ ಭೇದಕ್ಕಿಂತ ೧ರಿಂದ ಕಡಿಮೆಯಾದ ಅಂಶವೂ, ಕಡೆಯ ಅಪೂರ್ಣಾಂ

ಹಂಪಾತೀರದಲ್ಲಿರುವ ವಿಜಯನಗರವೆಂಬ ಪಟ್ಟಣಕ್ಕೆ ಹೋಗಬೇಕೆಂದು ಮೇಳಮ್ಮನು ಬಂದು ಚಕ್ರತೀರ್ಥದ ಬಳಿಯಲ್ಲಿರುವ, ಶ್ರೀ ಕೋದಂಡ ರಾಮಸ್ವಾಮಿಯ ದೇವಾಲಯದ ಬಳಿಯಲ್ಲಿ ಆ ಸಣ್ಣ ಬಾಲಕನಾದ ಚಿಕ್ಕಪ್ಪನನ್ನು ಬಿಟ್ಟು, ತಾನು ನಗರದೊಳಗೆ ಭಿಕ್ಷವೆತ್ತುವದಕ್ಕೆ ಹೊರಟಳು. ಇತ್ತ ಆ ಬಾಲಕನು ರಾಮಸ್ವಾಮಿಯ ಗುಡಿಯ ಹತ್ತಿರ ಮಲಗಿಕೊಂಡಿದ್ದನು. ಸಮೀಪದಲ್ಲಿ ಹಾವಿನ ಹುತ್ತವು ಇತ್ತು. ಅದರೊಳಗಿಂದ ಘಟಸರ್ಪವು ಬಂದು, ಈ ಚಿಕ್ಕವನಿಗೆ ಮುಖದಮೇಲೆ ಬಿಸಿಲು ಬೀಳದ ಹಾಗೆ, ತನ್ನ ಹೆಡೆಗಳನ್ನು ಬಿಚ್ಚಿ ನೆರಳುಮಾಡಿಕೊಂಡು ಆಡುತ್ತಿರುವ ಸಮಯದಲ್ಲಿ, ನಾಗಾಭೋಗಿ ಎಂಬ ಹಾವಾಡಿಗನು ಕಂಡು ಆಶ್ಚರ್ಯಪಟ್ಟನು. ಸ್ವಲ್ಪ ಹೊತ್ತಿನಲ್ಲಿ ಸರ್ಪವು ಸರಿದು ಹೋಗಿ ತನ್ನ ಬಿಲವನ್ನು ಸೇರಿತು.

ಆಗ ನಾಗಾಭೋಗಿಯು—ಈ ಬಾಲಕನು ಮುಂದೆ ಭಾಗ್ಯವಂತನಾಗುವ ಸಂಭವ ವಿರುವದು. ಇದನ್ನು ಪರೀಕ್ಷಿಸಬೇಕೆಂದು ನಾಗಸ್ವರವನ್ನು ಊದಿದನು. ಆ ಬಿಲದಿಂದ ಸರ್ಪವು ಬಂದು ಮೊದಲಿನಂತೆಯೇ ಆ ಚಿಕ್ಕಪ್ಪನಿಗೆ ನೆರಳುಮಾಡಿ ಅವನ ಮೇಲೆ ಆಡಿ ಸರಿದುಹೋಯಿತು. ಇದನ್ನು ಕಂಡೊಡನೆ ನಾಗಾ ಭೋಗಿಯು ಬಾಲಕನಿಗೆ, ಆಲಿಂಗನಮಾಡಿ " ನೀನು ಮುಂದೆ ಭಾಗ್ಯಪುರುಷನಾದರೆ ನನಗೇನು ಕೊಡುವಿ " ಎಂದು ಕೇಳಿದನು. ಅದಕ್ಕೆ ಚಿಕ್ಕವನಾದ ಚಿಕ್ಕಪ್ಪನು— "ನಾನು ಭಾಗ್ಯವಂತನಾದರೊ ನಿನ್ನ ಹೆಸರಿನಿಂದ ಒಂದು ಕೆರೆಯನ್ನೂ ಗ್ರಾಮವನ್ನೂ ಕಟ್ಟಿಸುವೆ"ನೆಂದು ಹೇಳಿದನು ಆಗ ನಾಗಾಭೋಗಿಯು ಮಾರ್ಗಸ್ಥನಾಗಿ ಹೊರಟು ಹೋದನು. ಅಷ್ಟರಲ್ಲಿ ಮೇಳಮ್ಮನು ಭಿಕ್ಷತೆಗೆದುಕೊಂಡು ಅಲ್ಲಿಗೆ ಬಂದಳು.

ಹೀಗೆ ಕೆಲವು ದಿವಸ ಮುಗಿದನಂತರ ಬುಕ್ಕರಾಯನ ಮಂತ್ರಿಯಾದ ನಾರಾಯಣಪ್ಪನ ಆಶ್ರಯದಲ್ಲಿ ಚಿಕ್ಕಪ್ಪನು ಬಂದು ಸೇರಿದನು. ಕೆಲವು ದಿವಸ ಅವರ ಸೇವಾತತ್ಪರನಾಗಿ ಕಾಲಕಳೆದನು. ಪ್ರಧಾನಿಯು, ಚಿಕ್ಕಪ್ಪನಿಗೆ ಕೆಲವು ದಿವಸಗಳಲ್ಲಿಯೇ ಉಪನಯನ ಮಾಡಿಸಿ ವಿದ್ಯಾಭ್ಯಾಸ ಮಾಡಿಸಿದನು. ಚಿಕ್ಕಪ್ಪನು ಮಂತ್ರಿಯ ಹಿಂದೆ ಪ್ರತಿ ದಿನದಲ್ಲು ರಾಜನ ಅರಮನೆಗೆ ಹೋಗಿಬರುತ್ತಾ ಇದ್ದನು. ಹೀಗಿರಲಾಗಿ ಚಿಕ್ಕಪ್ಪನು ಓದುಬರಹದಲ್ಲಿ ಬುದ್ಧಿವಂತನಾದನು.

ಹೀಗೆ ಚಿಕ್ಕಪ್ಪನು ಪ್ರಧಾನಿಯ ಬಳಿಯಲ್ಲಿರುತ್ತಿರಲಾಗಿ ಒಂದು ದಿನದಿಲ್ಲಿ ಬಾದಶಹನ ಕಡೆಯಿಂದ ಒಂದು ಲೇಖನವನ್ನುಚಾರನು ಬುಕ್ಕರಾಯನಿಗೆ ತಂದಿದ್ದನು. ಅದನ್ನು ಓದಿ ಹೇಳಲು, ರಾತ್ರಿಸಮಯವಾದ್ದರಿಂದ ಕಚೇರಿಯಲ್ಲಿ ಯಾರೂ ಇದ್ದಿಲ್ಲ. ಅದಕ್ಕೆ ಬುಕ್ಕರಾಯನು, ಗ್ರಾಮದಲ್ಲಿ ಓದುಬಲ್ಲವರನ್ನು ಕರೆದುಕೊಂಡು, ಬರುವದಾಗಿ ಸೇವಕರಿಗೆ ಆಜ್ಞೆಯನ್ನಿತ್ತನು. ರಾತ್ರಿ ಸಮಯವಾದ್ದರಿಂದ, ಸೇವಕರಿಗೆ ಯಾರು ಸಿಕ್ಕಲಿಲ್ಲ. ಪ್ರಧಾನಿಯ ಮನೆಯ ಮುಂದೆ ಚಿಕ್ಕಪ್ಪನು ಮಲಗಿದ್ದನು. ಸೇವಕರು " ನಿನ್ನನ್ನು ಅರಸನು ಕರೆಯುವನೆ"ಂದು ಚಿಕ್ಕಪ್ಪನನ್ನು ಕರೆದುಕೊಂಡು ಹೋದರು. ಚಿಕ್ಕಪ್ಪನು

ರಾಯನಿಗೆ ಮುಜುರೆಮಾಡಿ ನಿಂತುಕೊಂಡನು. ಆಗ ರಾಯನು ಪತ್ರವನ್ನು ಕೈಯಲ್ಲಿ ಕೊಟ್ಟು ಇದನ್ನು ಓದು ಎಂದು ಹೇಳಿದನು.

ಚಿಕ್ಕಪ್ಪನು ಬಹು ವಿರಳವಾಗಿ ಓದಿ ತಿಳಿಸಿದ್ದರಿಂದ ಅರಸನು ಸಂತೋಷಬಟ್ಟು, ನೀನು "ಮಲಗಿಕೊಳ್ಳಲು ಹೋಗಬಹುದು" ಎಂದು ಅಪ್ಪಣೆಯನ್ನಿತ್ತನು. ಬೆಳಗಾದ ಮೇಲೆ ದಿಲ್ಲಿಯಿಂದ ಬಂದ ಚಾರನು ಪ್ರತ್ಯುತ್ತರ ಬರೆದು ಕೊಡುವದಾಗಿ ಕೇಳಿದನು. ಅರಸನು ರಾಯಭಾರಿಗಳಿಗೆ ಉತ್ತರ ಬರೆದು ಕೊಡಲು ಹೇಳಿದನು. ರಾಯಭಾರಿಯು "ಬಂದ ಪತ್ರವನ್ನು ನೋಡಿ ಬರೆಯುವೆನೆಂ"ದನು. ಆ ಪತ್ರವನ್ನು ಎಲ್ಲಿಯೋ ಚೆಲ್ಲಿಬಿಟ್ಟಿದ್ದರು. ರಾತ್ರಿ ಓದಿದವರ್ಯಾರು ಅವನನ್ನು ಕರೆಕಳುಹಿಸಿ ಕೇಳಬೇಕೆಂದು, ಅರಸನು ಚಿಕ್ಕಪ್ಪನನ್ನು ಕರೆಯಿಸಿ 'ರಾತ್ರಿ ಓದಿದ ಸಂಗತಿಗಳು ನೆನಪಿನಲ್ಲಿರುವವೊ ? ಎಂದು ಕೇಳಿದನು. ಚಿಕ್ಕಪ್ಪನು ಓದಿದ ಸಂಗತಿಯನ್ನು ನಕಲುಮಾಡಿ ಕೊಟ್ಟನು.'

ತರುವಾಯ ಕಸದ ಕುಪ್ಪೆಯಲ್ಲಿ ಪತ್ರವು ಸಿಕ್ಕಿತು. ಚಿಕ್ಕಪ್ಪನು ನಕಲುಮಾಡಿದ ಪತ್ರಕ್ಕೂ ದಿಲ್ಲಿಯಿಂದ ಬಂದ ಪತ್ರಕ್ಕೂ ಏನೂ ವ್ಯತ್ಯಾಸ ಇಲ್ಲದಿರುವದನ್ನು ಕಂಡು, ಇವನು ಬುದ್ಧಿವಂತನೆಂದು ಅರಸನು ತಿಳಿದು ಅವನಿಗೆ ಪ್ರಧಾನಿಯ ಸಮಕ್ಷಮ ಶಿಖಾ ವಸ್ತ್ರ ತಾಂಬೂಲಕೊಟ್ಟು, ಅಂದಿನಿಂದ ಪ್ರಧಾನಿ ಪಟ್ಟವನ್ನೂ, ಚಿಕ್ಕಪ್ಪ ಒಡೆಯರೆಂದು ಬಿರುದನ್ನೂ ಕೊಟ್ಟನು.

ಉತ್ತರ ಭಾಗಕ್ಕೆ ರಾಯರು ರಾಜ್ಯಕಾರಭಾರದ ಸಲುವಾಗಿ ಹೊರಡುವ ಕೆಲಸವಿತ್ತು. ಆಗ ಚಿಕ್ಕಪ್ಪ ಒಡೆಯರಿಗೆ ಸಕಲ ವ್ಯವಹಾರ, ಬೀಗಮುದ್ರೆ, ಬೊಕ್ಕಸಕೂಡ ಸ್ವಾಧೀನಕ್ಕೊಪ್ಪಿಸಿ ತಾನು ರಾಜಕಾರ್ಯಕ್ಕೆ ಹೊರಟನು. ಚಿಕ್ಕಪ್ಪ ಒಡೆಯರು ಕೆಲವು ದಿವಸ ರಾಜ್ಯಭಾರವನ್ನು ಚನ್ನಾಗಿ ಜರುಗಿಸಿದರು.

ತರುವಾಯ ಅರಸನು ಹಿಂತಿರುಗಿ ಬಂದು ಚಿಕ್ಕಪ್ಪನಿಗೆ ಕೆಲವು ಗುಪ್ತ ಸಂಗತಿಗಳನ್ನು ವಿಚಾರಿಸಲು ಅದಕ್ಕೆ ಚಿಕ್ಕಪ್ಪನು ಒಪ್ಪಿಕೊಂಡನು. ಅರಸನು—"ಆದರೂ ಚಿಂತೆಯಿಲ್ಲ ನಿನಗೇನು ಬೇಕು ಕೇಳು" ಎಂದು ಅಂದನು. ಚಿಕ್ಕಪ್ಪನು ಈಬಳಗಾಗಿ ಸಂಪಾದಿಸಿದ ಬೊಕ್ಕಸವನ್ನು ಕೊಡಬೇಕೆಂದು ಕೇಳಿದನು. ಅರಸನು ಮರುಮಾತಾಡದೆ ಕೊಟ್ಟುಬಿಟ್ಟನು.

ಇತ್ತ ಚಿಕ್ಕಪ್ಪನು ಸಂತೋಷದಿಂದ, ವಾಪಿ, ಕೂಪ, ತಟಾಕಗಳನ್ನು ಕಟ್ಟಿಸಬೇಕೆಂದು, ಪೂರ್ವರಾಜ್ಯಕ್ಕೆ ಬರುವ ಮಾರ್ಗದಲ್ಲಿ ಪೆನುಗೊಂಡಕ್ಕೆ ದಕ್ಷಿಣದಿಂದ ಉತ್ತರಕ್ಕೆ ಬರುವ ಹಳ್ಳವನ್ನು ನೋಡಿ ಎರಡೂ ಕಣಿವೆಗಳ ನಡುವೆ ತಟಾಕವನ್ನು ಕಟ್ಟಿಸಬೇಕೆಂದು ಮನಸ್ಸಿನಲ್ಲಿ ತಂದುಕೊಂಡು ಅಲ್ಲಿ ತಟಾಕವನ್ನು ಕಟ್ಟಿಸಿ ತಾನು ಪೂರ್ವದಲ್ಲಿ ಶ್ರೀ ಕೋದಂಡರಾಮಸ್ವಾಮಿಯ ಗುಡಿಯಹತ್ತರ ನಾಗಾಭೋಗಿಗೆ ಮಾತುಕೊಟ್ಟ ಪ್ರಕಾರ ಅವನ ಹೆಸರಿಲೆ ಒಂದು ಗ್ರಾಮವನ್ನು ಕಟ್ಟಿಸಿ ಅದಕ್ಕೆ ನಾಗಸಮುದ್ರವೆಂದು ಹೆಸರಿಟ್ಟನು.

ತರುವಾಯ ಪೂರ್ವರಾಜ್ಯದ ಒಳ್ಳೇ ಸ್ಥಳಗಳನ್ನು ಹುಡುಕುತ್ತಾ ಮೈಸೂರು ಬೆಟ್ಟಗಳಲ್ಲಿ ಹುಟ್ಟಿ ಅನಂತಪೂರು, ಕಡಪ ಜಿಲ್ಲೆಗಳಲ್ಲಿ ಹರಿಯುವ ಪಿನಾಕಿನಿ ಎಂಬ ನದಿಯು, ಅಗಸ್ತ್ಯಾಶ್ರಮದ ಗುಡ್ಡಗಳನ್ನು ಭೇದಿಸಿಕೊಂಡು ಬರುವ ಕಿಂಡಿಯ ಹತ್ತಿರ ತಟಾಕವನ್ನು ಕಟ್ಟಬೇಕೆಂದು ಅನೇಕ ಮಂದಿ ಜನರನ್ನು ಕೂಡಿಸಿಕೊಂಡು ತಟಾಕ ಕಟ್ಟಲು ಪ್ರಾರಂಭಮಾಡಿದನು. ಆದಿನ ರಾತ್ರಿ ಚಿಕ್ಕ ಒಡೆಯರಿಗೆ ಸ್ವಪ್ನದಲ್ಲಿ ಪಿನಾಕಿನಿ ಸ್ತ್ರೀರೂಪವಾಗಿ ಬಂದು “ ಇಲ್ಲಿ ನೀನು ಕೆರೆಯನ್ನು ಕಟ್ಟಬೇಡ ನಾನು ನಿಲ್ಲುವದಿಲ್ಲ ” ಎಂದು ಹೇಳಲು, ಚಿಕ್ಕಪ್ಪನು ಮುಂದಿನ ಗತಿಯೇನೆಂದು ಕೇಳಿದನು. ಆಗ ಪಿನಾಕಿನಿಯು —“ಇಲ್ಲಿಗೆ ದಕ್ಷಿಣ ಭಾಗದಲ್ಲಿ ನನ್ನ ತಂಗಿಯಾದ ಚಿತ್ರಾವತಿ ಎಂಬ ನದಿಯು ಪ್ರವಹಿಸುತ್ತಿರುವದು. ಅಲ್ಲಿ ನೀನು ಕೆರೆಯನ್ನು ಕಟ್ಟಿದರೆ ನಿಲ್ಲುವದು ” ಎಂದು ಹೇಳಿದಳು.

ಚಿಕ್ಕಪ್ಪ ಒಡೆಯರು ಪಿನಾಕಿನಿ ನದಿಗೆ ತೆರೆಯನ್ನು ಕಟ್ಟುವದು ಬಿಟ್ಟು ತಂಬುಗಿರಿ ಶ್ರೀ ಸ್ವಾಮಿಯ ಕುಂಡಕ್ಕೆ ಹೋಗಿ ಅಲ್ಲಿ ಪಾಂಡುನದಿ ಹುಟ್ಟಿಬರುವದನ್ನು ಕಂಡು ಇಲ್ಲಿ ತಟಾಕವನ್ನು ನಿರ್ಮಾಣ ಮಾಡಬೇಕೆಂದು ಯೋಚಿಸಿ ಅಲ್ಲಿ ತಟಾಕವನ್ನು ನಿರ್ಮಾಣಮಾಡಿ ಉಭಯ ಪಾರ್ಶ್ವದಲ್ಲಿ ಎರಡು ಪಟ್ಟಣಗಳನ್ನು ಕಟ್ಟಿಸಿ ತಮ್ಮ ಅರಸನಾದ ಬುಕ್ಕರಾಯನ ಹೆಸರಿನಿಂದ ಬುಕ್ಕರಾಯ ಸಮುದ್ರವೆಂದೂ, ಇನ್ನೊಂದಕ್ಕೆ ತಮ್ಮ ದೊರೆಸಾನಿಯ ಹೆಸರಿನಿಂದ, ಅನಂತಸಾಗರವೆಂದೂ ಹೆಸರಿಟ್ಟು ತಟಾಕವನ್ನು ಶಾ. ಶ. ೧೨೮೭ರಲ್ಲಿ ಕಟ್ಟಿಸಿದನು. ಆ ತೆರೆಯ ಕಟ್ಟೆಯ ಮೇಲೆ ಕೆಲವು ದೇವಸ್ಥಾನಗಳನ್ನು ಪ್ರತಿಷ್ಠೆಮಾಡಿದನು.

ತರುವಾಯ ಬುಕ್ಕರಾಯ ಸಮುದ್ರಕ್ಕೆ ದಕ್ಷಿಣ ಭಾಗದಲ್ಲಿ ಹದಿನಾರು ಹರದಾರಿಯ ಮೇಲೆ ಶ್ರೀವೆಂಕಟೇಶನ ಗುಡ್ಡಗಳ ಹತ್ತಿರ ಚಿತ್ರಾವತಿ ನದಿಗೆ ಒಡ್ಡುಹಾಕಿಸಿ ಒಂದು ದೊಡ್ಡ ತಟಾಕವನ್ನು ನಿರ್ಮಾಣಮಾಡಿ ಆ ಕೆರೆಯ ಪೂರ್ವ ದಿಕ್ಕಿನಲ್ಲಿ ಬುಕ್ಕಪಟ್ಟಣವೆಂಬ ಗ್ರಾಮವನ್ನು ಪಶ್ಚಿಮಕ್ಕೆ ಅನಂತ ಸಾಗರವೆಂಬ ಗ್ರಾಮವನ್ನು ನಿರ್ಮಾಣಮಾಡಿಸಿದನು. ಅಲ್ಲಿ ಚೌಡೇಶ್ವರಿ, ಮತ್ತು, ವಿಶ್ವೇಶ್ವರನ ದೇವಾಲಯಗಳನ್ನು ಕಟ್ಟಿಸಿ, ಕೆಲವು ದಿನಗಳು ಸುಖದಿಂದ ಬಾಳಿ ಕೊನೆಗೆ ಅಂತರ್ಧಾನವಾಗಿ ಹೋದನು.

ಶಿಕ್ಷಣದ ಮಹತ್ವದ ಸಾಧನಗಳು

ಲೇಖಕ— ಶಾಂತೇಶ ಧಾರವಾಡ

ಶಿಕ್ಷಣವೆಂದರೆ— ಬಾಲಕರ ಶಾರೀರಿಕ ಮಾನಸಿಕ ನೈತಿಕ ಸಾಮರ್ಥ್ಯಗಳನ್ನು ಬೆಳೆಯಿಸಿ ಅವರನ್ನು ವ್ಯವಹಾರಕ್ಕೆ ತಕ್ಕವರನ್ನಾಗಿ ಮಾಡುವದೆಂದು ಸಾಮಾನ್ಯವಾಗಿ ಹೇಳಬಹುದು. ಈ ವ್ಯಾಖ್ಯೆಯಿಂದ ಶಿಕ್ಷಣಕ್ಕೆ ಕೇವಲ ಕೃತ್ರಿಮತ್ವವನ್ನು ಕಲ್ಪಿಸಿದಂತೆ

ಆಗುತ್ತದೆ. ಹೀಗೆ ತಿಳಿಯುವದು ತಪ್ಪು. ಜಗತ್ತಿನಲ್ಲಿಯ ಯಾವ ಕೆಲಸಗಳಾದರೂ ತನ್ನಿಂದ ತಾನೇ ಆಗುತ್ತಿರುವದಿಲ್ಲ. ಉದಾ—ಬೆಳೆಯು, ಮಳೆ-ಹವೆ-ಘಟಕದ್ರವ್ಯ ಇವೇ ಮೊದಲಾದ ನಿಸರ್ಗಸಿದ್ಧ ಆಧಾರಗಳನ್ನೇ ಅವಲಂಬಿಸಿದ್ದರೂ ಒಕ್ಕಲಿಗನು ಎತ್ತು, ರೆಂಟೆ, ಗೊಬ್ಬರ, ಕಾಲುವೆ ಮೊದಲಾದವುಗಳನ್ನು ಕ್ರಮವಾಗಿ ಸಂಬಂಧಿಸಿ ಬೇಕಾದ ಇಚ್ಛಿತ ಪೈರನ್ನು ಬೆಳೆದುಕೊಳ್ಳುತ್ತಾನೆ. ಅದರಂತೆಯೇ ಶಿಕ್ಷಕನು ಸೃಷ್ಟಿಯ ಉದಾಹರಣದಿಂದಲೂ ಮಕ್ಕಳಿಗೆ ತಕ್ಕ ಅನುಕೂಲತೆಗಳ ಜೋಡಣೆಯಿಂದಲೂ ತಕ್ಕ ಅನುಭವವನ್ನು ತಂದುಕೊಟ್ಟು ಜ್ಞಾನಾರ್ಜನೆಯ ದಾರಿಯನ್ನು ತೋರಿಸುತ್ತಾನೆ. ಶಿಕ್ಷಣವು ಕೃತ್ರಿಮವಲ್ಲದ್ದರಿಂದಲೇ ಬಾಲಕನು ತನಗೆ ಗೊತ್ತಾದ ದಾರಿಯ ಬಲದಿಂದ ಸೃಷ್ಟಿಯ ಅನುಭವವನ್ನು ಹೆಚ್ಚಾಗಿ ಪಡೆದುಕೊಂಡು ಗುರುವಿಗಿಂತಲೂ ಅಧಿಕವಾಗಬಹುದು. ಸೃಷ್ಟಿಯ ಗೂಢ ತತ್ತ್ವಗಳನ್ನು ತಿಳಿದುಕೊಳ್ಳುವದೇ ನಿಜವಾದ ಶಿಕ್ಷಣದ ಅಂತಿಮ ಉದ್ದೇಶವಾಗಿರುತ್ತದೆ. ಈ ಪ್ರಕಾರ ತಿಳಿದುಕೊಳ್ಳುತ್ತ ನಡೆದಿರುವದರಿಂದಲೇ ಮನುಷ್ಯನ ಜೀವನಕ್ರಮಕ್ಕೂ ಜಗತ್ತಿನ ಸುಧಾರಣೆಗೂ ನೂತನಸ್ವರೂಪವು ಬರುತ್ತ ನಡೆದಿರುವದು ಈ ಎಲ್ಲ ವಿವರಣೆಯ ಮೇಲಿಂದ ವಿಚಾರಿಸಿದರೆ ಸೃಷ್ಟಿಯೇ ನಮ್ಮ ನಿಜವಾದ ಗುರುವಾಗಿರುವದು. ಆದದರಿಂದಲೇ ಪ್ರತಿನಿತ್ಯದಲ್ಲಿ ಕಾಣುವ ಸಾಧಾರಣ ಸಂಗತಿಗಳು ಸಹ ವಿಚಾರಾರ್ಹವಾಗಿರುತ್ತವೆ. ಅವನ್ನೆಲ್ಲ ಬಿಟ್ಟು ಗಿಳಿ ಓದಿನಂತೆ ಶಿಕ್ಷಣ ಸಾಗಿಸುವದು ತೀರ ತಪ್ಪಾಗಿರುವದು. ಸೃಷ್ಟಿ ಮತ್ತು ಅನುಭವ ಇವೇ ಶಿಕ್ಷಣಮಂದಿರದ ಹೆಬ್ಬಾಗಿಲುಗಳಾಗಿವೆ. ಸೃಷ್ಟಿಯ ನಿರೀಕ್ಷಣೆಯು ಮನುಷ್ಯನಿಗೆ ಹೊಸ ಸಂಗತಿಗಳನ್ನು ಬೋಧಿಸಿ ತದ್ವಾರವಾಗಿ ಜ್ಞಾನವನ್ನೂ ಅನುಭವವನ್ನೂ ಬೆಳೆಯಿಸುತ್ತದೆ. ಹ್ಯಾಗಂದರೆ—

(೧) **ಸೃಷ್ಟಿ ಶಿಕ್ಷಣದ ಮಹತ್ವ**—ಹಿಮವತ್ಪರ್ವತದ ಶಿಖರದ ಮೇಲೆ ನಿಂತು ಸುತ್ತಲು ನೋಡಿದರೆ ಕಾಣುವ ಭವ್ಯ ಶೋಭೆಯಿಂದ ಮನುಷ್ಯನು ಆಶ್ಚರ್ಯಚಕಿತನಾಗುತ್ತಾನೆ. ಸದಾಸ್ವೈರವಾಗಿ ಸಂಚರಿಸುವ ಆತನ ಮನಸ್ಸು ಕೆಲ ಹೊತ್ತು ಸ್ತಬ್ಧವಾಗುತ್ತದೆ. ಗರಗರನೆ ತಿರುಗುವ ಬೊಗರಿಗೆ ಕೈತಾಗಿಸಿದರೆ ಅದರ ಗತಿಯು ಕುಂಠಿತವಾಗುವಂತೆ ಸೃಷ್ಟಿಯ ಭವ್ಯ ಹಾಗು ವಿಶಾಲಸ್ವರೂಪದ ನಿರೀಕ್ಷಣೆಯಿಂದ ಇಂದ್ರಿಯಗಳ ಪ್ರತಿನಿತ್ಯದ ಬಾಹ್ಯಪ್ರೇರಣೆಯು ಆಗ ಒಳಗೇ ಪ್ರವಹಿಸತೊಡಗುತ್ತದೆ. ಸುತ್ತಲು ಕಾಣುವ ಕ್ರೂರಶ್ವಾಪದ, ತಗ್ಗಾದ ದರಿ, ದುರ್ಗಮಮಾರ್ಗ, ತೈಲಮಯವಾದ ಎಲೆಗಳಿಂದ ಹಸರುಮಯಿದು ಎತ್ತರವಾಗಿ ಬೆಳೆದ ಘನವೃಕ್ಷಗಳು ಇವೆಲ್ಲವುಗಳ ಅನುಭವವು ನಮಗೆ ಇದ್ದರೂ ಅವುಗಳ ಕಡೆಗೆ ನಮ್ಮ ಲಕ್ಷವೇ ಹೋಗುವದಿಲ್ಲ. ಆಗ ಮೇಲೆ ಕಾಣುವ ವಿಸ್ತೀರ್ಣವಾದ ಆಕಾಶ, ಕೆಳಗಿನ ವಿಪುಲವಾದ ಪೃಥ್ವಿ ಇವೆರಡನ್ನೇ ಮಾತ್ರ ಕಾಣುತ್ತೇವೆ. ಗಾಳಿಯಲ್ಲಿ ಹಾರಿಬಿಟ್ಟ ಪಟವು ಹ್ಯಾಗೆ ನಿಶ್ಚಲವಾಗಿದ್ದಂತೆ ಕಾಣುವದೋ ಅದೇ ಪ್ರಕಾರ ನಮ್ಮ ಮನಸ್ಸು ಆಗ ಗಂಭೀರವಾದ ವಾತಾವರಣದಲ್ಲಿ

ತೇಲಿದಂತೆ ಆಗುತ್ತದೆ. ಬಹಳವಾಗಿ ಹೇಳುವದೇನು ? ಪ್ರತ್ಯಕ್ಷವಾಗಿ ಆಕಾಶಕ್ಕೆ ಹೋಗಿ ಸ್ಪರ್ಶಿಸಿದಂತೆ ಆಗುತ್ತದೆ ಅಂಥ ಹೊತ್ತಿನಲ್ಲಿ ಸೃಷ್ಟಿಯ ಮಲಿನತ್ವದ ಬಾಧೆಯು ನಮಗೆ ಸೋಂಕದು. ಅಧೋಗತಿಗೆ ಒಯ್ಯುವ ವಿಚಾರದ ಬಂಧನವು ಶಿಥಿಲವಾಗುವದು. ಆಗ ಮನಸ್ಸಿಗಾಗುವ ಒಂದು ತರದ ಸಂವೇದನೆಯಿಂದ ನಮ್ಮ ಮನಸ್ಸಿನ ಸಂಕುಚಿತತ್ವವು ಕಡಿಮೆ ಕಡಿಮೆಯಾಗುತ್ತ ಹೋಗುವದು. ಇಂಥ ಪ್ರಸಂಗದಲ್ಲಿ ವಿಶಾಲಸೃಷ್ಟಿಯು ಮೂಕಭಾಷೆಯಿಂದ ಮೆಲ್ಲನೆ ಆತ್ಮಜ್ಞಾನವನ್ನು ಮಾಡಿಕೊಡುತ್ತಿಂದರೂ ಸಲ್ಲುವದು. ಈ ಜ್ಞಾನಕ್ಕೆ ತುಲನೆಯೇ ಇಲ್ಲವೆಂದು ಹೇಳಬಹುದು. ಕ್ವಚಿತ್ತಾಗಿ ದೊರೆತ ಇಂಥ ಗಂಭೀರವಾದ ಅಲ್ಪವೇಳೆಯು ನಮ್ಮ ಆಯುಷ್ಯದಲ್ಲಿ ಒಳ್ಳೇ ಮಹತ್ವದ್ದಾಗಿರುತ್ತದೆ. ಆಗ ನಮ್ಮ ಅಹಂಕಾರವು ಕೆಲ ಹೊತ್ತು ಕರಗಿ ಚರಾಚರದಲ್ಲಿ ತುಂಬಿರುವ ಶಾಶ್ವತ ತತ್ವದ ಪ್ರತ್ಯಕ್ಷತ್ವದ ಅಮೂಲ್ಯ ಪಾಠವು ನಮ್ಮ ಪ್ರತ್ಯಯಕ್ಕೆ ಬರುವದು. ಆದದರಿಂದ ಸೃಷ್ಟಿ ಶಿಕ್ಷಣವು ದಿವ್ಯವಾದದ್ದಲ್ಲವೋ ? ಪ್ರಸಿದ್ಧ ವರ್ಡಸ್ ವರ್ಥನು ಅನ್ನುವದೇನೆಂದರೆ—

> " One impulse from the vernal wood
> May teach you more of man
> Of moral evil and of good,
> Than all the sages can. "

(೨) **ನಮ್ಮ ತೀರ್ಥಗಳ ಸ್ಥಾನಮಹಾತ್ಮ್ಯ ಹಾಗು ಅವುಗಳಿಂದ ದೊರೆಯುವ ಶಿಕ್ಷಣ:**—ನಮ್ಮ ಧರ್ಮವು ಸನಾತನವಾದದ್ದು. ಪ್ರಾಚೀನಋಷಿವರ್ಯರಾಗಲಿ, ಧರ್ಮಗಳ ಜನಕರಾಗಲಿ ಹೇಳುತ್ತ ಬಂದ ಸಂಗತಿಗಳಲ್ಲಿ ತಥ್ಯಾಂಶವು ಇದ್ದೇ ಇರುವದು. ಎಲ್ಲ ಪಂಗಡದವರೂ ತಮ್ಮ ತಮ್ಮ ಪೂರ್ವ ಪರಂಪರಾಗತ ಮಹತ್ವದ ಸ್ಥಳಗಳನ್ನು ತೋರಿಸುತ್ತಲೇ ಇರುವರು. ಬದರಿಕೇದಾರದಲ್ಲಿ ನರನಾರಾಯಣರ ಸಂಗಮವಿರುವದರಿಂದ ಅದು ಮಹತ್ವದ ಸ್ಥಳವು; ತ್ರಿವೇಣೀಸಂಗಮದಲ್ಲಿ ದೇವತೆಗಳ ಸಾನ್ನಿಧ್ಯವಿರುವದು; ಕೈಲಾಸವು ಈಶ್ವರನ ನಿವಾಸಸ್ಥಾನವು. ಇತ್ಯಾದಿ. ಜ್ಯೋತಿರ್ಲಿಂಗಗಳ ದರ್ಶನದಿಂದ ನಮ್ಮ ಹೃದಯದಲ್ಲಿ ಈಶ್ವರನ ಸಂಬಂಧವಾದ ಉಚ್ಚ ಪ್ರಕಾಶವು ಮೂಡುವದು. ತೀರ್ಥಯಾತ್ರೆಗಳ ಯೋಗದಿಂದ ದೇವರ ಸಂಬಂಧವಾದ ಅಂಥದೇ ತೇಜವು ಮೂರ್ತಿಮಂತವಾಗುವದು. ಮನುಷ್ಯನಿಗೆ ಇಂಥ ಧಾರ್ಮಿಕ ಸಂಗತಿಗಳಿಂದ ಮಾನಸಿಕ ಶಿಕ್ಷಣವು ದೊರೆಯುವದು. ಇಂಥ ಜನರು ಅಶಾಶ್ವತವಾದ ಸುಖಗಳಿಗೆ ಬಾಯಿಬಿಟ್ಟು ಕೆಟ್ಟ ಕೆಲಸಗಳನ್ನು ಮಾಡಲಾರರು. ಯಾವಾಗಲೂ ಶಾಂತಿಯಿಂದಲೂ ಪ್ರಸನ್ನ ಮನಸ್ಸಿನಿಂದಲೂ ಕಾಲಕಳೆಯುವರು. ಪವಿತ್ರಮಯವಾದ ಸಮುದ್ರ, ನದಿ, ಕ್ಷೇತ್ರ ಇವುಗಳ ಮಾಹಾತ್ಮ್ಯವು ಸುಳ್ಳಲ್ಲ. ಜ್ಞಾನಚಕ್ಷುವಿದ್ದರೆ ಈ ತತ್ವವು ನಿಜವಾಗಿಯೇ ಇರುವದು. ತೀರ್ಥಕ್ಷೇತ್ರಗಳಲ್ಲಿ ಮಾಡುವ ವ್ರತಗಳಿಂದ ಮಾನಸಿಕ ಶಿಕ್ಷಣವು

ಚೆನ್ನಾಗಿ ದೊರೆಯುವದು. ಈಗಲೂ ಕೆಲವರು ಮಹಾತ್ಮರು ಉಪವಾಸ ಮೊದಲಾದ ವ್ರತಗಳಿಂದ ಮನಸ್ಸು ಗಟ್ಟಿಯಾಗುವದೆಂದೂ ಸಮಾಧಾನವುಳ್ಳದ್ದಾಗುವದೆಂದೂ ತಮ್ಮ ಆಚರಣದ ಉದಾಹರಣೆಯಿಂದ ತೋರಿಸುತ್ತಲಿರುವರು. ಗುರುದೇವರ ಸ್ಮರಣದಿಂದಾಗುವ ಜ್ಞಾನವು ಮತ್ತೆ ಯಾತರಿಂದಲೂ ಆಗದು.

(೩) ಕವಿ, ಸಾಧು, ಸಂತ, ಋಷಿ ಇವರ ಮಾಹಾತ್ಮ್ಯ:—ಸೃಷ್ಟಿಯು ಹುಡುಕುವವರಿಗೆ ಆಗರವಾಗಿರುವದು. ಶ್ರೇಷ್ಠರಿಗೆ ಸೃಷ್ಟಿಯು ಮೂಕಭಾಷೆಯಿಂದ ತತ್ವಗಳನ್ನು ಬೋಧಿಸುವದೆಂದರೂ ಸಲ್ಲುವದು. ಎಲ್ಲರಿಗೂ ಕಣ್ಣು ಇದ್ದೇ ಇರುವವು. ಆದರೆ ರವೀಂದ್ರರು ನೋಡಿ ಬಣ್ಣಿಸಿದ ಪದ್ಯಗಳು ಹೊಸವೂ ಮನೋರಂಜಕವೂ ನೀತಿಬೋಧಕವೂ ಆಗಿರುವವು. ಅವರು ಸೃಷ್ಟಿ ಮತ್ತು ಜನತೆ ಇವರ ನಡುವಿನ ದುಭಾಷಿಗಳೆಂದರೂ ಸಲ್ಲುವದು. ಅವರು ನುಡಿದ ಪದ್ಯಗಳೆಂದ ಮಾತ್ರಕ್ಕೆ ಕೇಳುವವರ ಮನಸ್ಸು ಚೈತನ್ಯಗೊಳ್ಳುವದು. ಅವುಗಳ ಅರ್ಥವು ಎಲ್ಲರಿಗೂ ತಿಳಿಯುವದು. ಆದರೆ ತಿರುಗಿ ಅಂಥ ಭಾಷೆ, ವಿಚಾರಗಳಿಂದ ಹೇಳಲಿಕ್ಕೆ ಯಾರೂ ಸಮರ್ಥರಾಗಲಾರರು. ಆದದರಿಂದ ಅವರು ಇಡೀ ಸೃಷ್ಟಿಯಲ್ಲಿ ನಾಮಾಂಕಿತರೂ ಶ್ರೇಷ್ಠರೂ ಆಗಿರುವರು. ಅವರ ಪೂರ್ತೆ ಸೃಷ್ಟಿಯು ಹೊಸ ಭಾಷೆ, ವಿಚಾರಗಳನ್ನು ಹೇಳುತಲಿರುವದೋ ಏನೋ ಎನಿಸುವಂತೆ ಇರುವದು.

ಹಾಗೆಯೇ ಪುರಂದರದಾಸ, ಕನಕದಾಸ, ಕಬೀರದಾಸರ ಪದ್ಯಗಳೂ ತುಕಾರಾಮ ರಾಮದಾಸರ ಹಾಗು ಬಸವಣ್ಣನವರ ವಚನಗಳೂ ಸರ್ವಜ್ಞನ ಕವಿತೆಗಳೂ ನಿಜವಾಗಿ ಮನನೀಯವೂ ಪಠನೀಯವೂ ಆಗಿರುವವು. ಎಂಥ ನಾಸ್ತಿಕನಿದ್ದರೂ ಪುರಂದರ ದಾಸರ ಭಕ್ತಿಪೂರಿತಸರಾಗದ ಪದ್ಯಗಳನ್ನು ಆಲಿಸಿದೊಡನೆ ಜೆಪ್ಪಾಗುವನು. ಇವರ ವಚನಗಳು ನೀತಿತತ್ವಗಳ ಶೃಂಖಲೆಯೆಂದರೂ ಒಪ್ಪುವದು. ಮಾಂತ್ರಿಕನ ಪುಂಗಿಯು ಸರ್ಪವನ್ನು ತಡೆವಂತೆ ಈ ವಚನಗಳಿಂದ ದುರ್ಮಾರ್ಗಿಯ ಕುಮಾರ್ಗವು ಕುಂಠಿತವಾಗುವದು. ಅಂದ ಮೇಲೆ ಅವು ನಿಜವಾಗಿ ಮಂತ್ರಗಳೇ ಆಗಿರುವವು. ಇವುಗಳ ಪಠನಮಾಡುವವರು ಬಾಯಿಗೆ ಬಂದದ್ದನ್ನು ಕೊಚ್ಚದೆ ಧ್ಯಾನನಿರತರಾಗಿ ದೇವರ ನಾಮಾಮೃತದಿಂದ ತುಷ್ಟರಾಗುವರು. ಇಂಥ ಧ್ಯಾನನಿರತರಾದ ಸತಿಸುತರುಳ್ಳ ಕುಟುಂಬವು ಸದ್ಗೃಹಸ್ಥನಮನೆ ಎನಿಸುವದು. ಯಾವಾಗಲೂ ಹಾಳುಹರಟೆಹೊಡೆಯುವ ಮನೆಯು ಅರಣ್ಯಕ್ಕಿಂತ ಕಡೆಯಾಗುವದು. ಹೊಸ ಮಾತನ್ನು ಕಲಿಸುವದಕ್ಕಾಗಲಿ ಇದ್ದ ನೀತಿಯನ್ನು ಕಾಯುವದಕ್ಕಾಗಲಿ ಸೃಷ್ಟಿದೇವತೆಯು ಸಾಧುಸಂತರನ್ನು ಅವತರಿಸಲಿಕ್ಕೆ ಪ್ರೇರಣೆಕೊಟ್ಟಳೆಂದರೂ ಸಲ್ಲುವದು.

ಸೃಷ್ಟಿಯು ತನ್ನ ಗೂಢಸಂದೇಶವನ್ನು ಅಂದರೆ ಅನುಭವ ಜ್ಞಾನಾಮೃತವನ್ನು ಅವತಾರಿಗಳ ಮುಖಾಂತರವಾಗಿ ಜಗತ್ತಿನಲ್ಲಿ ಜನತೆಯ ಹಿತಕ್ಕೋಸ್ಕರವಾಗಿ ಪ್ರಕಟಿಸುತ್ತದೆ. ಅವೇ ಪದ್ಯಗಳಾಗಲಿ ಕವಿತೆಗಳಾಗಲಿ ವಚನಗಳಾಗಲಿ ಆಗಿ ನಮ್ಮ ಪುಸ್ತಕ

ದಲ್ಲಿ ಉಳಿದಿರುವವು. ಅವು ಕವಿ, ಸಾಧುಸಂತರ ಹೃದಯದಿಂದ ಹೊರಟಂಥವು ಆಗಿರುವದರಿಂದ ಅವು ನಿಜವಾಗಿ ಮರ್ಮಭೇದಕವಾಗಿರುವವು. ವಿದ್ಯಾರ್ಥಿಗಳ ಮನಸ್ಸಿನಲ್ಲಿ ಇವು ಇಳಿದು ಪರಿಣಮಿಸುವದಕ್ಕಾಗಿ ಇಂಥ ಕವನ, ವಚನಗಳನ್ನು ಗಟ್ಟಿಮಾಡಿಸಬೇಕು. ಪರಮೇಶ್ವರನಾಗಲಿ ಸೃಷ್ಟಿಯಾಗಲಿ ತನ್ನ ಗೂಢಸಂದೇಶವನ್ನು ಕವಿ, ಸಾಧುಸಂತ, ಋಷಿ ಇವರಿಗೇ ತಿಳಿಸುತ್ತಾರಲ್ಲದೆ ಅನ್ಯರಿಗೆ ಇಲ್ಲ. ಅವರಿಗೆ ಈ ಜಗತ್ತು ಬರೆದಿಟ್ಟ ಪಾನಿನಂತೆ ಅರ್ಥದ್ಯೋತಕವಾಗಿರುವದು. ಹೀಗಿರುವದರಿಂದಲೇ ಅವರು ತಮಗೆ ತಿಳಿದ ಸಂಗತಿಗಳಿಗಾಗಿ ಕಷ್ಟಪಡಲಿಕ್ಕೆ ಹಿಂದು ಮುಂದು ನೋಡಿಲ್ಲ. ಸಿದ್ಧಾರ್ಥನು ಯಶೋಧರೆಯಂಥ ಸ್ತ್ರೀರತ್ನವನ್ನು ತೊರೆದು ನಿರ್ವಾಣಪದ ಪ್ರಾಪ್ತಿಗಾಗಿ ಅಡವಿಗೆ ಹೋದನು. ಹಾರಾಪರ್ವತದ ಗುಹೆಯಲ್ಲಿ ಕಾಬಾಗುಡಿಯಲ್ಲಿ ಮೂರ್ತಿ ವಿಷಯಕವಾಗಿ ಚಿಂತಿಸುತ್ತ ಮಹಮ್ಮದ ಪೈಗಂಬರರು ಕುಳಿತರು. ಜಾನ್ ದಿ ಬ್ಯಾಪ್ಟಿಸ್ಟನ ಕೂಡ ಪ್ರಭು ಯೇಶುವು ಹೊಸ ಧರ್ಮದ ಸಂದೇಶವನ್ನು ಹೇಳುತ್ತ ತಿರುಗಾಡಿದರು. ಭಗವಾನ್ ಶ್ರೀಕೃಷ್ಣನು ಕುಂಜವನದಲ್ಲಿ ಪ್ರೇಮದ ವೇಣು ನಿನಾದಗೈದನು. ಗುರುನಾನಕನು ಮಾರಡಾನಾ ಎಂಬ ಹೆಸರಿನ ಮಿತ್ರನ ಕೂಡ ತನ್ನ ಹಾಡುಗಳನ್ನು ಹಾಡುತ್ತ ದೇಶದೇಶಗಳನ್ನು ತಿರುಗಿದನು. ಸ್ವಾಮಿ ದಯಾನಂದರು ಸಾಂಬ ಮೂರ್ತಿಯ ಮೈಮೇಲಿನ ಇಲಿಯನ್ನು ಕಂಡು ವೈರಾಗ್ಯದ ತೆರೆಗಳಲ್ಲಿ ಮುಳುಗಿದರು. ಇಂಥ ದೊಡ್ಡ ದೊಡ್ಡ ವಿಭೂತಿಗಳನ್ನು ಪರಮೇಶ್ವರನು ಲೋಕೋದ್ಧಾರಕ್ಕೆ ಕಳಿಸಿದನಲ್ಲದೆ ಬೇರೆ ಕೆಲಸಕ್ಕಲ್ಲ. ಇವರು ಮಾನವ ಜಾತಿಗೆ ಜ್ಞಾನದಾತೃಗಳಾಗಿರುವರು. ಇವರಿಂದ ಮಾನವಜಾತಿಯು ಒಂದೊಂದು ಪಾವಟಿಗೆಯಂತೆ ಏರುತ್ತ ಜ್ಞಾನಮಂದಿರದ ಬಾಗಿಲದ ವರೆಗೆ ಹೋಗುವದೆಂದು ಹೇಳಬಹುದು.

ಜ್ಞಾನಿಗಳಿಗೆ ಈಶ್ವರನು ದಿವ್ಯ ಚಕ್ಷುವನ್ನು ದಯಪಾಲಿಸಿರುವನು. ಅದರ ಬಲದಿಂದ ಅವರು ಬೇಕಾದದ್ದನ್ನು ತಿಳಿಯಬಲ್ಲರು. ಗಿಡದ ಮೇಲಿಂದ ಕಡಕೊಂಡು ಬೀಳುವ ಹಣ್ಣಿನ ನೋಟದಿಂದ ಸೃಷ್ಟಿದೇವಿಯ ನಡೆವಳಿಕೆಯ ಅನುಲ್ಲಂಘನೀಯ ಪ್ರಕಾರವನ್ನು ಅವರು ತಿಳಿಯಬಲ್ಲರು. ಆಕಾಶದಲ್ಲಿಯ ತಾರೆಗಳ ನಿರೀಕ್ಷಣೆಯಿಂದ ಸೃಷ್ಟಿಸ್ಥಿತಿಯ ಆಟ ಮಾಟವನ್ನು ತರ್ಕಿಸುವರು. ಸಜೀವ ಸೃಷ್ಟಿಯನ್ನು ಕಣ್ದೆರೆದು ನೋಡಿ ಸೃಷ್ಟಿಯ ರಹಸ್ಯವನ್ನು ತಿಳಿಯುವರು. ಶಾಸ್ತ್ರಜ್ಞರು ಸುಂದರ ಧ್ವನಿಯನ್ನು ಶ್ರವಣ ಮಾಡಿ ವಾತಾವರಣದಲ್ಲಿಯ ಸೂಕ್ಷ್ಮ ಅನಾಹುತ ಧ್ವನಿಯ ಶಕ್ತಿಯನ್ನು ಗೊತ್ತುಹಚ್ಚಬಲ್ಲರು. ಅವರು ಒಲೆಯ ಮೇಲೆ ಇಟ್ಟ ಪಾತ್ರೆಯಲ್ಲಿಯ ಎಸರು ಬರುವ ನೀರಿನ ಶಕ್ತಿಯಿಂದ ಸೃಷ್ಟಿಶಕ್ತಿಗಳ ಕಲ್ಪನಾತೀತ ಸಾಮರ್ಥ್ಯವನ್ನು ತಿಳಿಯುವರು. ಇಂಥವರ ಕಿವಿಯಲ್ಲಿ ಆಕಾಶವು ತನ್ನಲ್ಲಿದ್ದ ಮೋಡಗಳ ಆಘಾತದಿಂದ ಹುಟ್ಟಿದ ಚಕಮಕಿಯಿಂದ ಒಂದು ಹೊಸ ಶಕ್ತಿಯ ಪ್ರಭಾವವನ್ನು ಮೆಲ್ಲಗೆ ಹೇಳಿರುವದೆಂದರೂ ಸಲ್ಲುವದು.

(ಸಶೇಷ.)

ಪ್ರಾಥಮಿಕ ಶಿಕ್ಷಕ

ಲೇಖಕ:-ದೇ. ಸಂ. ಪಾಟೀಲ ಅ. ಮಾ. ಕ. ಗ. ಶಾ. ನಂ. ೫ ಹುಬ್ಬಳ್ಳಿ.

ಕನ್ನಡ ಪ್ರಾಥಮಿಕ ಶಿಕ್ಷಣವೆಂಬ ಈ ಮಾಸಪತ್ರಿಕೆಯು ಕರ್ನಾಟಕದ ಎಲ್ಲ ಭಾಗದಲ್ಲಿ ತನ್ನ ಕೆಲಸವನ್ನು ಉತ್ತಮರೀತಿಯಿಂದ ಮಾಡುತ್ತಿರುವದು. ವಾಙ್ಮಯುವ ನ್ನೊಳಕೊಂಡು, ಪ್ರಾಥಮಿಕ ಶಿಕ್ಷಣಕೊಡುವವರಿಗೆ, ಸಹಾಯವಾಗಲೆಂದೇ, ಇದರ ಪ್ರಧಾನ ಧ್ಯೇಯವು. ಕಲಿಸುವ ಭಾಷೆಗಳು ಬೇರೆಯಾದರೂ, ಎಲ್ಲ ಪ್ರಾಥಮಿಕ ಶಿಕ್ಷ ಕರ ಕೃತಿಯು ಒಂದೇ ಎಂದು ಹೇಳಬಹುದು. ಸದ್ಯದ ಪರಿಸ್ಥಿತಿಯಲ್ಲಿ ಕರ್ನಾಟಕ ದೊಳಗೆ, ಪ್ರತಿಯೊಂದು ಭಾಷೆಯ ಶಿಕ್ಷಕರಿಗೆ, ಅಲ್ಪಸ್ವಲ್ಪ ಕನ್ನಡದ ಜ್ಞಾನವುಂಟೆಂದು ಹೇಳಬಹುದು. ಆದ್ದರಿಂದ ಪ್ರತಿಯೊಂದು ಭಾಷೆಯ ಶಿಕ್ಷಕರು ಇದನ್ನು ಕೊಳ್ಳಲು ಅಡ್ಡಿಯಿಲ್ಲ. ಒಮ್ಮೆ ಓದಿನೋಡಿದರೆ ತನ್ನ ಹೆಸರಿಗೆ, ಸರಿಯಾಗಿ ಪ್ರತಿಯೊಬ್ಬನಿಗೆ, ತಕ್ಕಮಟ್ಟಿಗೆ ಶಿಕ್ಷಣವನ್ನು ಕೊಟ್ಟೇಕೊಡುತ್ತದೆಂದು ಧ್ವನಿತವಾಗುತ್ತದೆ. ಶಿಕ್ಷಕರಿಗಂತೂ ಅತ್ಯುಪಯುಕ್ತವಾದ್ದು. ಇದರಿಂದ ಜಂಗುಹತ್ತಿದ ಅಸ್ತ್ರವನ್ನು ತಿಂಗಳಿಗೊಮ್ಮೆ ಸಾಣೇ ಮಾಡಿಸಿದಂತಾಗುತ್ತದೆ. ಆದ್ದರಿಂದ ಪ್ರತಿ ಒಬ್ಬ ಶಿಕ್ಷಕನು ಇದರ ಪ್ರತಿಗಳನ್ನು ಸಂಗ್ರಹಿಸಿಡುವಂತೆ ಅದೆ. ಓದುಬರಹ ಬಲ್ಲ ಉಳಿದವರಿಗೂ ಕೆಲವು ಮಟ್ಟಿಗೆ ಸಹಾಯ ವಾಗುತ್ತದೆ. ಇನ್ನು ಮೇಲೆ ಪ್ರಾ. ಶಿಕ್ಷಕನ ವಿಷಯಕ್ಕೆ ಒಂದೆರಡು ಮಾತುಗಳನ್ನು ಸ್ವಲ್ಪದರಲ್ಲಿ ಹೇಳಿ ಲೇಖವನ್ನು ಮುಗಿಸುವೆನು.

ಶಿಕ್ಷಣದ ಹೋರೆಯನ್ನು ಕೈಕೊಂಡವರಲ್ಲಿ ಪ್ರಾಥಮಿಕ ಶಿಕ್ಷಕನು ಮೊದಲನೆಯ ಪ್ರತಿಯ ಶಿಕ್ಷಕನಾಗಿರುತ್ತಾನೆ. ಋಗ್ವೇದ, ಮನುಸ್ಮೃತಿಗಳಲ್ಲಿ ತಂದೆತಾಯಿಗಳಿಗೆ ಹೇಗೆ ಗೌರವವಿರುತ್ತದೆಯೋ ಅದರಷ್ಟೇ ಕಿಂಬಹುನಾ ಹೆಚ್ಚು ಗೌರವವು ಪ್ರಾಥ ಮಿಕ ಶಿಕ್ಷನಿಗೆ ಇರುವದೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಸಾಮಾನ್ಯ ವಾಗಿ ಪ್ರಾಥಮಿಕ, ಮಾಧ್ಯಮಿಕ, ಉಚ್ಚತರಗತಿ ಎಂಬ ಮೂರು ವಿಧವಾದ ಶಿಕ್ಷ ರುಂಟು.

ಪ್ರಾಥಮಿಕ ಶಿಕ್ಷಣವೆಂದರೆ ಚಿಕ್ಕ ಚಿಕ್ಕ ಬಾಲಕರಿಗೆ, ಕೆಲವು ಇಯತ್ತೆಗಳವರೆಗೆ ಕಲಿಸಿ ಮುಂದಿನ ತರಗತಿಗೆ ತಕ್ಕವರನ್ನಾಗಿ ಮಾಡುವದಿರುತ್ತದೆ. ಬರೀ ಕೆಲವು ಇಯ ತ್ತೆಗಳವರೆಗೆ ಕಲಿಸಿದ್ದಾದರೆ ಪ್ರಾಥಮಿಕ ಶಿಕ್ಷಕನ ಹೋರೆಯು ಮುಗಿಯಲಿಲ್ಲ. ಅ ರಾದರೂ ಅಷ್ಟಕ್ಕೇ ಕೃತಾರ್ಥರಾದೆವೆಂದು ಹೆಮ್ಮೆಪಡುವ ಹಾಗಿಲ್ಲ. ನೀತಿ, ನಡತೆ ಸತ್ಯತೆ, ಹೊಸ ವಿಷಯಗಳನ್ನು ಗೊತ್ತುಹಚ್ಚುವ ಜಾಣ್ಮೆ, ಆರೋಗ್ಯ, ಸಂತೋ ವೃತ್ತಿ, ನಿಷ್ಕಪಟತ್ವ, ವಾಙ್ಮಯ, ನುಡಿಯಂತೆ ನಡೆ, ಆತ್ಮಪ್ರವೃತ್ತಿ, ಮಾತೃಭೂಮಿಯ ಅಭಿಮಾನ ಈ ಎಲ್ಲ ವಿಷಯಗಳನ್ನೊಳಗೊಂಡು, ವಿಸ್ತೃತ ಬುದ್ಧಿಯುವರಾಗುವಂ

ಕೆಲವು ಇಯತ್ತೆಗಳನ್ನು ಕಲಿಸುವದು ಇರುತ್ತದೆ, ಇಷ್ಟಾದರೆ ಗಟ್ಟಿಗೆಹಚ್ಚಿ ಕಡಿದು, ಮುರುಮ್, ಗಚ್ಚು ಮೊದಲಾದವುಗಳಿಂದ ಶಿಕ್ಷಣವೆಂಬ ಮನೆಗೆ ಪಾಯಾಹಾಕಿದಂತೆ ಆಗುತ್ತದೆ. ಈ ಪಾಯಾದ ಮೇಲೆ, ಮಾಧ್ಯಮಿಕ, ಉಚ್ಚತರಗತಿಯು ಎರಡು ಇಮಾರತುಗಳು ಬಹು ಶೋಭಾಯಮಾನವಾಗಿ ಅಚ್ಚಳಿಯದೆ ನಿಲ್ಲಬೇಕಾಗುತ್ತದೆ. ಈ ಇಮಾರತುಗಳು ಕುಶಿಬೀಳದೆ ಬಹುದಿವಸದ ವರೆಗ ಬಾಳಿ, ವಿರೂಪಾಕ್ಷ, ಪಂಡಿತ ಕವಿಯು ಹೇಳಿದ ವಾಸ್ತುಕ್ರಮದ ಪದ್ಧತಿಯಂತೆ ಮನೆಯು ಶೋಭಿಸುತ್ತದೆ, ಆ ಮನೆಯ ಪಾಯಾ ಹಾಕಿದವನನ್ನೂ, ಅವನ ಸಹಾಯಕನ್ನೂ, ಹೇಗೆ ಶ್ಲಾಘಿಸುವರೋಹಾಗೆ ಈ ತನುವೆಂಬಮನೆಯು ಬಹುದಿವಸದ ವರೆಗೆ ಬಾಳಿ ಜಗತ್ತಿನಲ್ಲಿ ಜಾಣ್ಮೆಯನ್ನು ತೋರಿಸಿ ಜನರ ಕಣ್ಣನ್ನು ಕುಕ್ಕಿಸುವಂಥ ತೇಜೋನ್ನತಿಯನು ಉಂಟು ಮಾಡಿದ ಶ್ರೇಯಸ್ಸು ಪ್ರಾಥಮಿಕ ಶಿಕ್ಷಕರದಲ್ಲವೆ? ಅಂದಮೇಲೆ ಮಾನವಕೋಟಿಯು ಉದ್ಧಾರಕನು ಪ್ರಾಥಮಿಕ ಶಿಕ್ಷಕನಲ್ಲವೆ?

ಮಾನವಕೋಟಿಯ ಪಾವನತೆಯಲ್ಲಿ ಹೆಚ್ಚು ಭಾಗವು ಪ್ರಾ. ಶಿಕ್ಷಕರಿಂದ ದೊರಿತದ್ದೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ತಾಯಿಯು ನವಮಾಸಗಳವರೆಗೆ ಗರ್ಭದಲ್ಲಿಧರಿಸಿ, ದೇವರ ಪ್ರೇರಣೆಯಿಂದ ಪ್ರಸೂತಿಸಿದನಂತರ, ಕೂಸಿನ ಮಲಮೂತ್ರಗಳಿಗೆ ಹೇಸಿಕೊಳ್ಳದೆ, ಅತಿ ಅಕ್ಕರೆಯಿಂದ ಪಕ್ಕದಲ್ಲಿಟ್ಟುಕೊಂಡು ತನ್ನ ಶರೀರವನ್ನಾದರೂ ಕೃಶಗೊಳಿಸಿ ಎವೆಇಕ್ಕದೆ, ಅಹೋರಾತ್ರಿ ಕೂಸಿನ ಬೆಳವಣಿಗೆಯಲ್ಲಿ ಚಿಂತಾಮಗ್ನಳಾಗಿರುತ್ತಾಳೆ. ದೇವರಿಗೆ ಅನೇಕ ರೀತಿಯಿಂದ ಹರಿಕೆಹೊತ್ತು, ಬೇನೆ ಬೇಸರಿಕೆಗಳ, ಭೂತ–ಪ್ರೇತಗಳ ಬಾಧೆಯಾಗದಂತೆ ನನ್ನ ಕೂಸನ್ನು ರಕ್ಷಿಸೆಂದು ದೇವರಿಗೆ ಬೇಡಿಕೊಳ್ಳುತ್ತಾಳೆ. ನೋಡಿದರೆ ಓಕರಿಕೆ ಬರುವಂಥ ಮಲಮೂತ್ರಗಳ ವಿಷಯಕ್ಕೆ ಹೇಸಿಕೊಳ್ಳದೆ ಅನೇಕ ರೀತಿಯಿಂದ ಸ್ವಚ್ಛಮಾಡಿ ಪಾವನತೆಯನ್ನು ಉಂಟುಮಾಡುತ್ತಾಳೆ. ಆದ್ದರಿಂದ ಋಗ್ವೇದದಲ್ಲಿ "ತಾಯಿಗಿಂತ ಅಧಿಕವಾದ ದೇವರಿಲ್ಲ" ಎಂದು ಹೇಳಿರುತ್ತದೆ. ಅವಳು ಈ ಕಾರ್ಯಭಾರವನ್ನು ಹೊರಲಿಕ್ಕೆ ಒಲ್ಲೆಂದರೆ ಅವಳ ಮೇಲೆ ಯಾರ ಆಗ್ರಹವೂ ನಡೆಯದು. ಆದ್ದರಿಂದ "ಭೂತಳದಲ್ಲಿ ಮಾತೆಯೇ ದೇವತೆಯು". ಮನುಷ್ಯನು ಉತ್ತಮ ಮಾತೆಯ ಪ್ರೇಮವನ್ನೂ ದೊರಕಿಸಿದ್ದಾದರೆ ಅವನ ಧನ್ಯವಾದಕ್ಕೆ ಬೆಲೆಯೇ ಇಲ್ಲ.

ತಾಯಿಗೆ ಇರುವಷ್ಟೇ ಗೌರವವು, ಪ್ರಾ-ಶಿಕ್ಷಕನಿಗೆ ಉಂಟೆಂದು ಹಿಂದೆ ಹೇಳಿರುತ್ತದೆ. ಮಕ್ಕಳು ೭–೮ ವರುಷದವರಾದ ಬಳಿಕ ತಾಯಿ ತಂದೆಗಳು ಅವರನ್ನು ಸಾಲೆಗೆ ಕಳಿಸುತ್ತಾರೆ. ಇತ್ತಿತ್ತಲಾಗಿ ನಾಲ್ಕು ವರುಷ ಆಗುವದೊಂದೇ ತಡ, ಸಲೆಗೆ ಕಳಿಸುತ್ತಾರೆ. ಹುಡುಗರಿಗೆ ಸಾಲೆಯವರೆಗೆ ನಡೆಯಲಿಕ್ಕೆ ಸಹ ಬರುತ್ತಿರುವದಿಲ್ಲ. ಅಂಥ ಹುಡುಗರನ್ನು ತಾವೇ ಎತ್ತಿಕೊಂಡು ಬಂದು ಸಾಲೆಯಲ್ಲಿ ಇಳಿಸಿ ಹೋಗುತ್ತಾರೆ. ಇಷ್ಟು ಮಾಡಿದರೆಂದರೆ ತಾಯಿತಂದೆಗಳು ತಾವು ದೊಡ್ಡದೊಂದು ಕೆಲಸ ಮಾಡಿದೆವೆಂದು ತಿಳಿದು

ಕೊಳ್ಳುತ್ತಾರೆ. ಸಾಲೆಗೆ ಬಂದ ಇಂಥ ಕೂಸುಗಳ ಎಲ್ಲ ವ್ಯವಸ್ಥೆಯನ್ನು ನೋಡಿಕೊಳ್ಳು ವದು, ಪ್ರಾ. ಶಿಕ್ಷಕನಿಗೆ ಹತ್ತಲಿಲ್ಲವೆ ? ಪ್ರೇಮದ ಮೂರ್ತಿಯಾದ ಪ್ರಾ. ಶಿಕ್ಷಕನು ಆ ಹುಡುಗರ ಸುಂಬಳ, ಮಲ, ಮೂತ್ರ ಮುಂತಾದವುಗಳ ಕಾಳಜಿ ತಕ್ಕೊಳ್ಳುವದಲ್ಲದೆ ಉತ್ತಮ ಶಿಕ್ಷಣ ಕೊಡುವದರಲ್ಲಿ ಹೆಚ್ಚು ಶ್ರಮಪಡುತ್ತಾನೆ. ಇಷ್ಟೆಲ್ಲ ವಹಿಸಿದ ಅವನ ಗೋಳನ್ನು ದೇವರೇ ಬಲ್ಲ. ಇಷ್ಟಾದರೂ ಸಿಟ್ಟೇ? ಇಲ್ಲ. ಸಿಟ್ಟು ಮಾಡಿದರೆ ಹುಡು ಗರು ಮಾರನೆಯ ದಿನ ಸಾಲೆಗೆ ಬರುವದಿಲ್ಲ. ಬಿಟ್ಟೀ ಬೇಸರ ಮಾಡದೆ ಮೂವತ್ತೂ ಹುಡುಗರು ತನ್ನ ಮನೆಯವೆಂದು ತಿಳಿಯುತ್ತಾನೆ. ಈಗಂತು ಒಂದು ಕ್ಲಾಸಿಗೆ ೪೦ ಹುಡುಗರನ್ನು ಮಾಡಿರುವರು. ಇದರ ಗೋಳನ್ನು ದೇವರೇ ಬಲ್ಲ. ತಾಯಿತಂದೆ ಗಳಿಗೆ ಮೂವರು ಮಕ್ಕಳು ಹುಟ್ಟಿದರೆ, ಹುಡುಗರ ಉಪದ್ರವವು ಹೆಚ್ಚಾಯಿತೆಂದು, ಆ ಹುಡುಗರಿಗೆ ಬೈಯುವದನ್ನೂ, ಹೊಡೆಯುವದನ್ನೂ ನಾನು ನೋಡಿರುತ್ತೇನೆ. ತಾಯಿತಂದೆಗಳ ನಡುವೆ ಹಂಚಿದರೆ ಒಬ್ಬರ ಪಾಲಿಗೆ ಎಷ್ಟು ಬಂದವು.? ನೋಡಿರಿ ಒಂದುವರೆ ಹುಡುಗರ ಉಪದ್ರವನ್ನು ತಾಳಲಾರದೆ ವಯಸ್ಸು ಚಿಕ್ಕದಿದ್ದರೂ ಮೊದಲ ನೆಯ, ಎರಡನೆಯ ಹುಡುಗರನ್ನು ಸಾಲೆಗೆ ತಂದು ಇಳಿಸಿ ಹೋಗುತ್ತಾರೆ. ಎಂದಾದರು ಒಂದು ದಿವಸ ಸಾಲೆಗೆ ಸೂಟಿಯಿದ್ದರೆ, ಮನೆಯೊಳಗೆ ಹುಡುಗರ ಉಪದ್ರವಕ್ಕೆ, ತಂದೆ ತಾಯಿಗಳಿಗೆ ದೊಡ್ಡದೊಂದು ಗಂಡಾಂತರವೇ ಬಂದಂತಾಗಿರುತ್ತದೆ. ಒಂದು ಹುಡು ಗನ ಉಪದ್ರವನ್ನು ಸಹ ತಡಕೊಳ್ಳಲಿಕ್ಕೆ ಆಗದೆ ಇರುವಾಗ; ಒಂದು ಕ್ಲಾಸಿಗೆ ೪೦ ಹುಡು ಗರ ಗೊತ್ತುವಳಿ ಮಾಡಿದ್ದನ್ನು ನೋಡಿದರೆ, ಪ್ರಾ. ಶಿಕ್ಷಕನ ಸಹನ ಶೀಲತ್ವವು ಎಷ್ಟೆಂ ಬದು ಒಡೆದು ಕಾಣುತ್ತದೆ. ಪ್ರಾ. ಶಿಕ್ಷಣ ಕೊಡುವದೆಂದರೆ, ಬೈಲೊಳಗೆ ಕೂಡ್ರಿಸಿ ಕೊಂಡು ಉಪನ್ಯಾಸ ಮಾಡುವದಲ್ಲ; ಹುಡುಗರೊಳಗೆ ಶಿಕ್ಷಕನು ಬೆರೆತು ಶಿಕ್ಷಣ ಕೊಡುವದು.

ಪ್ರಾ. ಶಿಕ್ಷಕನೆಂದರೆ ಶಾಂತಿಯ ಆಗರವೆಂದು ಹೇಳಬಹುದು. ಒಂದುದಿವಸದಲ್ಲಿ ಚಿಕ್ಕ ಬಾಲಕರಿಗೆ ೧೧-೧೨ ತಾಸು ನಿದ್ರೆ ಬೇಕಾಗುತ್ತದೆ. ನಿದ್ರೆಯಲ್ಲಿ ೧೧ ತಾಸು, ಊಟಗಳಿಗೆಲ್ಲ ೨ ತಾಸು, ಆಟನೊದಲಾದವುಗಳಿಗೆಲ್ಲ ೨-೩ ತಾಸು, ಪ್ರಾ.-ಶಿಕ್ಷಕನಲ್ಲಿ ೬ತ್ತಿ ತಾಸು, ಕಳೆದ ಮೇಲೆ ತಂದೆತಾಯಿಗಳಲ್ಲಿ ಹೆಚ್ಚು ಅಂದರೆ ೨-೩ ತಾಸು ಇದ್ದಂ ತಾಯಿತು. ಇದರ ಮೇಲಾದರೂ ಯಾರ ಶ್ರಮವು ಹೆಚ್ಚೆಂಬುವದು ಹೊಳೆಯುತ್ತದೆ. ಮನೆಯ ಕಟ್ಟುವ ಕೆಲಸದಲ್ಲಿ ಎಲ್ಲ ಎಂಜಿನಿಯರರೂ, ಅವರ ಸಹಾಯಕರೂ ಒಲ್ಲೆ ವೆಂದರೆ, ಏನು ಮಾಡುವದು. ಬೈಲಿನಲ್ಲಾಗಲಿ, ಹೊದರಿನಲ್ಲಾಗಲಿ ಇರುವ ಪ್ರಸಂಗ ಬರಲಿಕ್ಕಿಲ್ಲವೆ? ಅದರಂತೆ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರು, ಉಪಶಿಕ್ಷಕರು ಪ್ರಾ. ಶಿಕ್ಷಣದ ಭಾರವನ್ನು ಹೊರದಿದ್ದರೆ, ಮಾಧ್ಯಮಿಕ ಮತ್ತು ಉಚ್ಚತರಗತಿಯ ಶಿಕ್ಷಕರಿಂಗ ತಿಳಿಯುತ್ತಿತ್ತು. ಮಾನವಜನ್ಮಕ್ಕೆ ಸದ್ಗುರುವಿನ ಬೋಧೆಯೊಂದಿಲ್ಲದೆ, ಜೀವನ್ಮುಕ್ತಿ ದೊರೆಯುವದಿಲ್ಲೆಂಬದು ಹೇಗೆ ಸೃಷ್ಟಿಯ ನಿಯಮವಿರುವದೋ, ಹಾಗೆ ಪ್ರಾ. ಶಿಕ್ಷಕ

ರಿಂದ ನಿಜವಾದ ಶಿಕ್ಷಣವು ದೊರೆಯದಿದ್ದರೆ, ಮನುಷ್ಯತ್ವವು ಉಂಟಾಗಲಾರದೆಂಬಹೂ ಸೃಷ್ಟಿಯ ನಿಯಮವಿರುವದು. "ಗುರುವರನ ಕರುಣದಿಂದ ಭರದಿಂದ ವಿದ್ಯೆ ಬರುವದು ಬಾಲಾ" ಎಂದು ಹೇಳಿದ ಅರ್ಥನಾದರೂ ಇದನ್ನೇ ಮುಂದೆ ನೂಡುತ್ತದೆ. ಇದರಿಂದ ಪ್ರಾ. ಶಿಕ್ಷಕರಿಗೆ, ಆದರವ್ರೋ ! ಅನಾದರವ್ರೋ ? ನೀವೇ ವಿಚಾರಿಸಿರಿ.

"ಮೂರು ವರುಷದ ಬುದ್ಧಿ, ನೂರು ವರುಷದ ವರೆಗೆ"ಯೆಂಬ ನಾಡನುಡಿಯಂತೆ ಪ್ರಾ. ಶಿಕ್ಷಕನು ಹಾಕಿದ ವಿಷಯಗಳ ಮೆಟ್ಟಿಗಳೇ, ಮನಸ್ಸು ವಿಕಾಸಹೊಂದಿದಂತೆ, ಅವೂ ವಿಸ್ತೃತವಾಗುತ್ತವೆ. ಹೆಣ್ಣು ಮಗಳು ಗಂಡನ ಮನೆಗೆ ಹೋಗಿ, ಉತ್ತಮರೀತಿ ಯಿಂದ ಬಾಳ್ವೆ ಮಾಡಿ, ಸಾಧ್ವಿಮಣಿ ಅನ್ನಿಸಿಕೊಂಡರೆ, ಎಲ್ಲ ಜನರು ಈ ಸಾಧ್ವಿಮಣಿ ಯನ್ನು ಹಡೆದ ತಂದೆತಾಯಿಗಳು ಎಂಥವರು ? ಅವರೆಷ್ಟು ಬುದ್ಧಿವಂತರು ? ಅವರ ದಯವೆಷ್ಟಿರಬಹುದು? ಎಂದು ಅವರ ಸಾಧುತ್ವನವನ್ನು ಕೊಂಡಾಡುತ್ತಾರೆ. ನಮ್ಮಲ್ಲಿ ರಾಜಕೀಯ, ಸಾಮಾಜಿಕ, ನೈತಿಕ, ಧಾರ್ಮಿಕ, ಮೊದಲಾದ ಎಲ್ಲ ವಿಷಯಗಳಲ್ಲಿ ಅನೇಕ ವಿದ್ವನ್ಮಣಿಗಳು, ಎಲ್ಲೆಲ್ಲಿಯೂ ಕಂಡುಬರುವರು. ಅವರನ್ನು ನೋಡಿದಾಗಲೆ, ಇಲ್ಲವೆ ಅವರ ಕೀರ್ತಿಯನ್ನು ಕೇಳಿದಾಗಲೆ ಪ್ರಾ. ಶಿಕ್ಷಕರ ನೆನಪು ಎಲ್ಲರಲ್ಲಿಯೂ ಉದ್ಭವಿಸುತ್ತ ದೆಂದು ನನಗೆ ಅನಿಸುತ್ತದೆ. ಉಚ್ಚತರಗತಿಯೊಳಗೆ ಇರುವವನಾದರೂ ಪ್ರಾ. ಶಿಕ್ಷಕರ ಬೋಧದ ಪೂರ್ವದ ಸ್ಮರಣೆಯನ್ನು ಎಂದೂ ಮರೆಯಲಾರರೆಂದು ನನ್ನ ಸ್ವಂತ ಅನುಭವ ದಿಂದ ಖಂಡಿತವಾಗಿ ಹೇಳುತ್ತೇನೆ. "ಊರಲ್ಲಿ ಹೋಗುವ ತನಕ ಒಬ್ಬ, ಊರು ಹೊಕ್ಕ ಮೇಲೆ ಅನೇಕ ಮಂದಿ" ಎಂಬಂತೆ ಪ್ರಾ. ಶಿಕ್ಷಕನು ಎಲ್ಲ ವಿಷಯಗಳ ಬೀಜ ವನ್ನು ಬಿತ್ತಿ ಉತ್ತಮ ಸಸಿಗಳನ್ನು ಉಂಟು ಮಾಡಿದ ಮೇಲೆ, ಆ ಸಸಿಗಳನ್ನು ನೋಡಿ ಇವು ಉತ್ತಮ ಫಲಗಳನ್ನು ಕೊಡತಕ್ಕವುಗಳಾಗುತ್ತವೆಂದು, ಉಳಿದವರು ಬೆಳೆಯಿಸ ಲಿಕ್ಕೆ ಪ್ರಯತ್ನ ಮಾಡುತ್ತಾರೆ. ಇದರ ಮೇಲಿಂದ ಪ್ರಾ. ಶಿಕ್ಷಕನ ಗೌರವವು ಎಷ್ಟೆಂಬ ದನ್ನು ನೀವೇ ಅಳೆಯಿರಿ. ಒಟ್ಟಿನ ಮೇಲೆ ಮಾನವಕೋಟಿಯು ಎಂಜಿನಿಯರನು ಯಾರೆಂ ಬವನ್ನು ತಾವೇ ವಿಚಾರಿಸಿರಿ. ಇಂಥ ಸ್ತುತಿಗೆ ಪಾತ್ರರಾಗುವಂಥ ಪ್ರಾ. ಶಿಕ್ಷಕರಿಗೆ, ಶಿಕ್ಷಣವನ್ನೂ ಶಾಸ್ತ್ರೋಕ್ತರೀತಿಯಿಂದ ಕೊಟ್ಟಂಥವರ ಗೌರವವಾದರೂ ವರ್ಣನೀಯ ವಾದದ್ದು. ನನ್ನ ಗತಿಯನ್ನು ಬೆಳೆಯಿಸಿದಂಥ ಪೂಜ್ಯಗುರುವರ್ಯರಾದ, ಸದ್ಯದ ಟ್ರೇನಿಂಗ ಸ್ಕೂಲ ಹೆ|| ಮಾಸ್ತರ ದೇಶಪಾಂಡೆ ಹನುಮಂತರಾಯರನ್ನು ನಾನು ಎಂದೂ ಮರೆಯಲಾರೆನು.

ಜೀವನ ಕ್ರಾಂತಿಯೂ ಶಿಕ್ಷಣ ಕ್ರಾಂತಿಯೂ

ಲೇಖಕ:—ಪ್ರೊ. ವ್ಹಿ. ಎಸ್. ಇಟಗಿ, ಧಾರವಾಡ.

ಕಾಲವು ತರ್ಕಿಸಲಿಕ್ಕೆ ಅಸಾಧ್ಯವಾದದ್ದಾಗಿದೆ. ಭೂಮಿಯು ಆರಂಭದಿಂದ ಎಷ್ಟೋ ಕಾಲದವರೆಗೆ ಮನುಷ್ಯನ ಸ್ಥಿತಿಗತಿಯ ಸಿಂಹಾವಲೋಕನ ಮಾಡಲಿಕ್ಕೆ ಇತಿಹಾಸದ ಆಧಾರವೇ ಇಲ್ಲ. ಮನುಷ್ಯ ಪ್ರಾಣಿಯು ಸುಧಾರಿಸಿದನಂತರ ತನ್ನ ಸ್ಥಿತಿಗತಿಯ ಅವಲೋಕನ ಮಾಡುತ್ತ ನಡೆದ ಬಳಿಕ ಮನುಷ್ಯನ ಉದ್ಯೋಗ, ಕಲೆ, ಶಿಕ್ಷಣ ಮೊದಲಾದವುಗಳೆಲ್ಲ ಅಸ್ತಿತ್ವದಲ್ಲಿ ಬಂದವು. ಹೊತ್ತು ಬಂದತ್ತ ಕೊಡೆ ತಿರುಗಿಸುವಂತೆ ಕಾಲವು ನಡೆ ನಡೆದ ಹಾಗೆ ಮಾನವ ಜಾತಿಯು ಹೊಸ ಆಯುಷ್ಯಕ್ರಮದ, ಹೊಸ ಭಾವನೆಯ, ನೂತನ ವಿಚಾರದ ಕ್ಷೇತ್ರದಲ್ಲಿ ಸೇರುತ್ತ ಸಾಗಿರುವದು. ಈಗ ನೂರಾರು ವರ್ಷಗಳಲ್ಲಿ ನಮ್ಮ ದೇಶದಲ್ಲಿ ಅನೇಕ ಹೆಚ್ಚು ಕಡಿಮೆಗಳಾಗಿರುವವು. ಮನಷ್ಯನ ಜೀವನ ಕ್ರಮದಲ್ಲಿಯೂ ಕುಟುಂಬಕ್ರಮದಲ್ಲಿಯೂ ಶಿಕ್ಷಣದ ಸ್ಥಿತಿಯಲ್ಲಿಯೂ ಉಂಟಾದ ತಾರತಮ್ಯವನ್ನು ಕೆಳಗೆ ವಿವರಿಸಿರುವೆವು.

ತೀರ ಪ್ರಾಚೀನ ಕಾಲದಿಂದ ಎಲ್ಲ ದೇಶಗಳಲ್ಲಿ ಅವಿಭಕ್ತ ಕುಟುಂಬ ಪದ್ಧತಿಯೇ ಸಾಮಾನ್ಯವಾಗಿದ್ದಿತು. ಕುಟುಂಬದ ಹಿರಿಯನ ಆಜ್ಞೆಗೆ ಒಳಗಾಗಿ ಮಿಕ್ಕವರೆಲ್ಲರೂ ನಡೆಯುತ್ತಿದ್ದರು. ಎಲ್ಲರೂ ಗಳಿಸಿದ ಧನವು ಮುಖ್ಯಸ್ಥನ ಕೈಸೇರುತ್ತಿದ್ದಿತು. ಸ್ವತಂತ್ರ ಧನಸಂಚಯದ ಅಧಿಕಾರವು ಹಿರಿಯನ ಹೊರತು ಮಿಕ್ಕವರಿಗೆ ಇರುತ್ತಿದ್ದಿಲ್ಲ. ಲಗ್ನ, ಮೌಂಜೀ ಬಂಧನ ಮೊದಲಾದ ಕಾರ್ಯಗಳು ಪ್ರತ್ಯಕ್ಷ ತಂದೆತಾಯಿಗಳಿಂದ ನಡೆಯದೆ ಕುಟುಂಬದ ಹಿರಿಯನ ಅನುಮತಿಯ ಮೇರೆಗೆ ಸಾಗುತ್ತಿದ್ದವು. ಮನೆತನದ ಎಲ್ಲ ಜನರ ಕಡೆಗೂ ಮುಖ್ಯಸ್ಥನೇ ಲಕ್ಷಪೂರಯಿಸಿ ಜವಾಬದಾರಿಯನ್ನು ಹೊತ್ತು ಕಾರ್ಯಗಳನ್ನು ನಿರ್ವಹಿಸುತ್ತಿದ್ದನು.

ಈ ಪ್ರಕಾರದ ಕುಟುಂಬದ ವ್ಯವಸ್ಥೆಯು ನೆಲೆಗೊಳ್ಳಲಿಕ್ಕೆ ನಮ್ಮ ದೇಶದಲ್ಲಿ ಬಹುತರವಾಗಿ ಬಳಕೆಯಲ್ಲಿದ್ದ ಒಕ್ಕಲತನವೇ ಮೂಲ ಕಾರಣವಾಗಿದ್ದಿತು. ಒಕ್ಕಲತನವು ಯಶಸ್ವಿಯಾಗಿ ಜೀವನ ಕ್ರಮವು ಸರಸವಾಗಿ ನಡೆಯಬೇಕಾದರೆ ಸಣ್ಣವರಿಂದ ದೊಡ್ಡವರ ವರೆಗೆ ಎಲ್ಲರ ಸಾಹಾಯ್ಯವೂ ಬೇಕಾಗುತ್ತಿದ್ದಿತು. ಇಂಥ ಜನರುಳ್ಳ ಕುಟುಂಬವೇ ಒಕ್ಕಲತನಕ್ಕೆ ಯೋಗ್ಯವಾದದ್ದಾಗುತ್ತಿದ್ದಿತು. ದೇಶದಲ್ಲಿಯ ಮಿಕ್ಕ ಉದ್ಯೋಗಗಳೆಲ್ಲ ಸಣ್ಣ ಪ್ರಮಾಣದಿಂದ ನಡೆಯುತ್ತಿದ್ದವು. ಹೊರದೇಶದ ಪ್ರಯಾಣವಂತೂ ತೀರ ಕಡಿಮೆಯಾಗಿದ್ದಿತು. ಆದದರಿಂದ ತಂದೆಯು ಮರಣದನಂತರ ಮಕ್ಕಳು ಬೇರೆ ಕಡೆಗೆ ಹೋಗದೆ ಅಲ್ಲಿಯೇ ವಾಸವಾಗಿರುತ್ತಿದ್ದರು. ಈ ಸ್ಥಿತಿಯು ಕಡೆತನಕ ಇರುವದು ಅಶಕ್ಯವೇ ಸರಿ. ಕಾಲಕ್ಕನುಸರಿಸಿ ದೇಶದಲ್ಲಿ ಅನೇಕ ಹೆಚ್ಚುಕಡಿ

ವೆಗಳಾದವು:—ಬೇರೆ ಬೇರೆ ದೇಶದ ಬೇರೆ ಬೇರೆ ಸಂಸ್ಕೃತಿಯ ಜನಾಂಗಗಳು ಬರಲಾರಂಭಿಸಿದವು. ವ್ಯಾಪಾರೋದ್ಯೋಗಗಳು ಬೆಳೆದವು. ರಾಜ್ಯಕ್ರಾಂತಿಗಳಾದವು. ನವೀನ ಔದ್ಯೋಗಿಕ ಯುಗಗಳು ಉಂಟಾದವು. ಒಕ್ಕಲತನದ ಹೊರತಾಗಿ ಉಪಜೀವನದ ಮಾರ್ಗಗಳು ಅನೇಕವಾದವು. ಆದದರಿಂದ ಭಿನ್ನ ರುಚಿಯ ಜನರು ಬೇರೆ ಬೇರೆ ಹೊಸ ಹೊಸ ಉದ್ಯೋಗಗಳನ್ನು ಕೈಕೊಂಡರು. ಈ ಬದಲಾವಣೆಯ ಪರಿಣಾಮವು ಮನುಷ್ಯನ ಕುಟುಂಬದ ಮೇಲೆಯೂ ಜೀವನ ಕ್ರಮದ ಮೇಲೆಯೂ ಶಿಕ್ಷಣಕ್ರಮದ ಮೇಲೆಯೂ ಚೆನ್ನಾಗಿ ತೀವ್ರ ಪರಿಣಮಿಸಿತು.

ಹೊಸ ಯುಗಕ್ಕನುಸರಿಸಿ ಹೊಸ ಹೊಸ ಉದ್ಯೋಗಗಳೂ ವಿದ್ಯೆಗಳೂ ವಿಚಾರ ಸರಣಿಗಳೂ ಉಂಟಾದವು. ವಾಯುವೇಗದ ಉಗಿಬಂಡಿಗಳೂ, ತಾತ್ಕಾಲಕ್ಕೆ ಬೇಕಾದಲ್ಲಿಗೆ ಸುದ್ದಿ ಕಳಿಸುವ ತಾರಾಯಂತ್ರಗಳೂ, ಪೋಸ್ಟಗಳೂ ಬಳಿಕೆಯಲ್ಲಿ ಬಂದವು. ಅರಿವೆ ಅಂಚಡಿಗಳಿಗೋಸ್ಕರ ಮೊದಲಿನಿಂದ ಇದ್ದ ಸಣ್ಣ ಸಣ್ಣ ಮಗ್ಗದ ಮನೆಗಳಿಗೆ ಬದಲಾಗಿ ಭವ್ಯವಾದ ಯಂತ್ರಾಲಯಗಳು ರಚಿಸಲ್ಪಟ್ಟವು. ಎಣ್ಣೆಯ ಗಾಣಗಳ ಬದಲಾಗಿ ಎಣ್ಣೆಯ ಗಿರಣಿಗಳು ರೂಢಿಯಲ್ಲಿ ಬಂದವು. ಮಾರ್ಗಕ್ರಮಣಕ್ಕಾಗಿ ಮೋಟಾರಗಳೂ ವಿಮಾನಗಳೂ ಭರದಿಂದ ತಿರುಗಲಾರಂಭಿಸಿದವು. ಇವೂ ಅಲ್ಲದೆ ಇನ್ನೂ ನೂರಾರು ಹೆಚ್ಚುಕಡಿಮೆಗಳಾದವು. ಹೀಗಾದದರಿಂದ ನೂಲಿನ ಅರಿವೆಗಳ ಗಿರಣಿಗಳೂ, ಕಬ್ಬಿಣದ ಕಾರಖಾನೆಗಳೂ, ಬಣ್ಣ ತೆಗೆಯುವ ಮನೆಗಳೂ, ವಿದ್ಯುದ್ದೀಪದ ದಿವ್ಯ ಮನೆಗಳೂ ಅಚ್ಚು ಹಾಕುವ ಆಲಯಗಳೂ, ಸಾಬಾಣಮಾಡುವ, ಕಾಗದ ಸಿದ್ಧಪಡಿಸುವ, ಕಾಜುಗಳನ್ನುಂಟುಮಾಡುವ ಮೋಟಾರಗಳನ್ನು ಭವ್ಯಪಡಿಸುವ ಆಲಯಗಳೂ ಎಲ್ಲಕಡೆಗೆ ತೋರಲಾರಂಭಿಸಿವೆ. ಸಾಂಸಾರಿಕರು ಲ್ಲಿಗೆ ಹೋಗಿ ಉದ್ಯೋಗ ಮಾಡಿ ಉಪಜೀವಿಸುವದರಿಂದ ಮೊದಲಿನ ಅವಿಭಕ್ತ ಕುಟುಂಬಗಳು ಮಾಯವಾಗ ತೊಡಗಿವೆ ಮೊದಲಿನ ಕುಟುಂಬದ ಹಿರಿಯನ ಅಧಿಕಾರದ ಬದಲಾಗಿ ತಲೆ ತಲೆಗೆ ಪಟ್ಟವು ಒರಲಾರಂಭಿಸಿದೆ. ವ್ಯಕ್ತಿಸ್ವಾತಂತ್ರ್ಯ ಸ್ತ್ರೀಸ್ವಾತಂತ್ರ್ಯಗಳ ಸುಳಿಗಾಳಿಯು ಬೀಸ ತೊಡಗಿದೆ. ಬುದ್ಧಿಯುಳ್ಳವನೂ ಕಲಾಕೌಶಲ್ಯವುಳ್ಳವನೂ ಚಿಕ್ಕವನಿದ್ದರೂ ತನ್ನ ಉದ್ಯೋಗದಲ್ಲಿಯೂ ಮುಂದುವರೆದು ನಾಗರಿಕನಾಗುತ್ತಲಿರುವನು. ಈ ರೀತಿಯಾದ್ದರಿಂದ ಮೊದಲಿನ ಕುಟುಂಬಕ್ರಮ ಜೀವನ ಕ್ರಮಗಳಲ್ಲಿ ವ್ಯತ್ಯಾಸವಾದದ್ದು ಪ್ರತ್ಯಕ್ಷ ಕಾಣುವದು. ಜನಸಂಖ್ಯೆಯು ಬೆಳೆದು ತೀವ್ರ ವೇಗದ ವಾಹನಗಳು ಬಂದದ್ದರಿಂದ ದೇಶದ ಜನರು ಒತ್ತಟ್ಟಿಗೇ ನೆಲೆಸಿದಂತೆ ಆಗಿದೆ. ಆದದರಿಂದ ಉಪಜೀವನದ ಸಾಮಗ್ರಿಗಳ ಬೆಲೆಯು ಬೆಳೆದು ನಿತ್ಯದ ವ್ಯವಹಾರವು ಕಠಿಣವಾದ್ದರಿಂದ ಮೊದಲಿನ ಧರ್ಮಾಚರಣೆಯ ಯುಗವು ಬದಲಾಗಿ ಉದ್ಯೋಗದ ಯುಗವು ಆರಂಭವಾಗಿದೆ. ಯಂತ್ರಗಳು ವ್ಯವಹಾರದಲ್ಲಿಯೇ ಅಲ್ಲದೆ ಅಡಿಗೆಯ ಮನೆಗಳಲ್ಲಿ ಸಹ ಸೇರತೊಡಗಿವೆ. ಒಟ್ಟಿನಿಂದ ಮನುಷ್ಯನ ನಿತ್ಯದ ಎಲ್ಲ ಕೆಲಸಗಳಿಗೂ ಯಂತ್ರವೇ ಸಹಾಯಕಾರಿಯಾಗಿವೆಂದು ಹೇಳ

Pg No. 25 to 36

Missing.

ಬಹುದು. ಇಂಥ ಎಲ್ಲ ಬಗೆಯ ಯಂತ್ರಗಳಿಗೂ ಪಶ್ಚಿಮದೇಶವೇ ತವರುಮನೆಯಾದ್ದ ರಿಂದ ಔದ್ಯೋಗಿಕ ಶಿಕ್ಷಣಕ್ಕೆ ಅತ್ತ ವೊಗದಿರುಹಿದ ಹೊರತು ಗತ್ಯಂತರವೇ ಇಲ್ಲ. ವೊದಲಿಗೆ ವಿದ್ಯೆಗೂ ಉದೋಗಕ್ಕೂ ಸಂಬಂಧವೇ ಇದ್ದಿಲ್ಲ. ವಿದ್ಯೆಕಲಿತವನು ಸರಕಾರದ ಸೇವೆಮಾಡುತ್ತಿದ್ದನು. ನಿರಕ್ಷರಿಯಾದವನು ಒಕ್ಕಲತನ ವ್ಯಾಪಾರ ನೇಕಾರಿಕೆ

Pg no.
Mis

ಧಾರವಾಡ ಟ್ರೇ. ಸ್ಕೂಲ ವಾರ್ಷಿಕ ಪರೀಕ್ಷೆಯ ಪರಿಣಾಮವು

ಕಮತರಹುಸೇನ ಜಾಫರಹುಸೇನ ಜಹಾಗೀರದಾರ

ಕ್ರಿಮಿನಲ್ ಟ್ರಾಯಿಬ್ಜ ಸೆಟಲಮೆಂಟ

ಕ.ಮ.ಸ ಹಣಮಂತಪ ಖಾನಾಪುರ

5/6 3R

sing.

ಬಹುದು. ಇಂಥ ಎಲ್ಲ ಬಗೆಯ ಯಂತ್ರಗಳಿಗೂ ಪಶ್ಚಿಮದೇಶವೇ ತವರುಮನೆಯಾದ್ದರಿಂದ ಔದ್ಯೋಗಿಕ ಶಿಕ್ಷಣಕ್ಕೆ ಅತ್ತ ಮೊಗವಿರುಹಿದ ಹೊರತು ಗತ್ಯಂತರವೇ ಇಲ್ಲ. ಮೊದಲಿಗೆ ವಿದ್ಯೆಗೂ ಉದ್ಯೋಗಕ್ಕೂ ಸಂಬಂಧವೇ ಇದ್ದಿಲ್ಲ. ವಿದ್ಯೆಕಲಿತವನು ಸರಕಾರದ ಸೇವೆಮಾಡುತ್ತಿದ್ದನು. ನಿರಕ್ಷರಿಯಾದವನು ಒಕ್ಕಲತನ ವ್ಯಾಪಾರ ನೇಕಾರಿಕೆಗಳಲ್ಲಿ ತೊಡಗುತ್ತಿದ್ದನು. ಇನ್ನೂ ಹಳ್ಳಿಗಳಲ್ಲಿ ಈ ಅನುಭವವು ತೋರುತ್ತಿರುವದು. ಆದರೆ ಹೊಸದಾಗಿ ಎಲ್ಲ ಉದ್ಯೋಗಗಳು ಯಂತ್ರಗಳಮೇಲೆಯೇ ನಡೆಯುತ್ತಿದ್ದದರಿಂದ ಇಂಗ್ಲಿಷ ಭಾಷೆಯ ಅಭ್ಯಾಸವೂ ಯಂತ್ರರಚನೆಯ ಜ್ಞಾನವೂ ಅವಶ್ಯವಾದ್ದರಿಂದ ಉದ್ಯೋಗಕ್ಕೂ ಬೌದ್ಧಿಕ ಶಿಕ್ಷಣಕ್ಕೂ ಮೇಳ ಬೀಳಬೇಕಾಗಿದೆ. ಆರಂಭದಲ್ಲಿ ಕಲಿತ ಜನರು ಸ್ವಲ್ಪವಾದ್ದರಿಂದ ವಿದ್ಯಾಭ್ಯಾಸಮಾಡಿದವರೆಲ್ಲರು ರಾಜಸೇವೆಯಲ್ಲಿ ಅಧಿಕಾರದ ಕೆಲಸಗಳನ್ನು ಕೈಕೊಂಡರು. ಅದನ್ನು ಕಂಡು ಎಲ್ಲರೂ ಕೇವಲ ವಿದ್ಯಾಭ್ಯಾಸಕ್ಕೇ ಮುಗಿಬಿದ್ದರು. ಎಲ್ಲ ಜನಾಂಗದವರೂ ತಮ್ಮ ತಮ್ಮ ಉದ್ಯೋಗಗಳನ್ನು ಬಿಟ್ಟು ಕೇವಲ ಬೌದ್ಧಿಕ ಶಿಕ್ಷಣಕ್ಕೇ ಗಮನಕೊಟ್ಟಿರುವರು. ಆದರೆ ಈಗ ಕಲಿತವರ ಸಂಖ್ಯೆಯು ಚಾಕರಿಯ ಸ್ಥಳಗಳಿಗಿಂತ ಹೆಚ್ಚಾದ್ದರಿಂದ ಕಲಿತವರು ಸುಮ್ಮನೆ ಕೂಡಬೇಕಾಗಿದೆ. ಕಲಿತವರು ಮೊದಲಾದ ವೆಚ್ಚವನ್ನು ಗಳಿಸಲು ಅಸಮರ್ಥರಾಗಿರುವರು. ಆದದ್ದರಿಂದ ಬೌದ್ಧಿಕ ಶಿಕ್ಷಣದಿಂದ ಒಡಗೂಡಿದ ಔದ್ಯೋಗಿಕ ಶಿಕ್ಷಣವು ಬೇಕೆಂದು ಜನರು ಅನ್ನ ತೊಡಗಿರುವರು. ದೇಶದ ಪ್ರಗತಿಯು ಹೆಚ್ಚಾದ ಮಾನದಿಂದ ಕಾಲಕ್ಕನುಸರಿಸಿ ಶಿಕ್ಷಣ ಕ್ರಮದಲ್ಲಿಯೂ ಹೆಚ್ಚುಕಡಿಮೆಯಾಗುವದು ಅವಶ್ಯವಾಗಿರುವದು. ಇಂಗ್ಲಂಡ ಅಮೇರಿಕಾ ದೇಶಗಳಲ್ಲಿ ಸಹ ಪ್ರಮುಖರು ಶಿಕ್ಷಣಕ್ರಮದ ಹೊಸ ಯೋಜನೆಯ ವಿಷಯವಾಗಿ ಹಗಲಿರುಳು ಚಿಂತಿಸಿ ಯತ್ನಮಾಡುತ್ತ ಲಿರುವರು. ಪಾಶ್ಚಾತ್ಯದೇಶಗಳಲ್ಲಿ ಶಿಕ್ಷಣ ಪದ್ಧತಿಯ ಹೊಸಹೊಸ ಪ್ರಯೋಗಿಕ ಶಾಲೆಗಳು ಹುಟ್ಟುತ್ತಲೇ ಇರುವವು. ನೂತನ ಪದ್ಧತಿಗಳು ದಿನಾಲು ಬೆಳಕಿಗೆ ಬರುತ್ತಿರುವವು. ಇಂದಿನ ಪದ್ಧತಿಯು ನಾಳೆಗೆ ಹಳೆಯದು ಆಗುವದು. ಶಿಕ್ಷಣದ ನಿಜವಾದ ಕಳಕಳಿಯು ಪಾಶ್ಚಾತ್ಯದೇಶಗಳಲ್ಲಿ ಎಂದಿನಿಂದಲೂ ಕಂಡುಬರುವದು. ದೇಶದ ನಿಜವಾದ ಹಿತವು ಕಣ್ಣಮುಂದೆ ಕಟ್ಟಿ ಹಾಳು ಉಸಾಬರಿಗಳ ಮೋಹವು ಕಡಿಮೆಯಾಗುತ್ತ ನಡೆದಂತೆ ನಮ್ಮಲ್ಲಿಯೂ ಈ ತರಹದ ವಿಚಾರಗಳು ನೆಲಿಸಬಹುದು. ೧೦೦ ಕ್ಕೆ ೬ ರಂತೆ ಶಿಕ್ಷಿತರ ಸಂಖ್ಯೆಯು ನಮ್ಮಲ್ಲಿ ಇರುವದರಿಂದ ನಿಜವಾದ ವಿಚಾರಗಳು ಹೊಳೆಯುವಷ್ಟು ಶಕ್ತಿಯು ಇನ್ನೂ ಜನತೆಯಲ್ಲಿ ಬಂದಿರುವದಿಲ್ಲ. ದೇಶದ ಪರಿಸ್ಥಿತಿಗನುಸರಿಸಿ ಶಿಕ್ಷಣಕ್ರಮವು ಇರತಕ್ಕದ್ದು. ಎಲ್ಲ ದೇಶಕ್ಕೂ ಒಂದೇ ಶಿಕ್ಷಣಕ್ರಮದ ಶಾಲೆಗಳು ಉಪಯೋಗಬೀಳಲಾರವು. ಡೆನ್ಮಾರ್ಕ ದೇಶದವರು ತಮ್ಮ ದೇಶದ ಪರಿಸ್ಥಿತಿಗನುಸರಿಸಿ ಒಕ್ಕಲತನಕ್ಕೇ ಹೆಚ್ಚು ಬೆಲೆ ಕೊಟ್ಟು ಶಿಕ್ಷಣಕ್ರಮವನ್ನು ಇಟ್ಟುಕೊಂಡಿರುವರು. ನಮ್ಮ ದೇಶದಲ್ಲಿಯೂ ಸರಕಾರದವರಿಂದ ಒಕ್ಕಲತನಕ್ಕೆ ಸಂಬಂಧಿಸಿದ ಕೆಲವು ಶಾಲೆಗಳು ರಚಿಸಲ್ಪಟ್ಟಿರುವವು. ಜನತೆಯು

೮ ಕಮಮತರಹುಸೇನ ಜಾಫರಹುಸೇನ ಜಹಾಗೀರದಾರ ೪೯

ಕ್ರಿಮಿನಲ್ ಟ್ರಾಯಿಬ್ಸ ಸೆಟಲಮೆಂಟ

೧ ಕೃಷ್ಣಪ್ಪ ಹಣಮಂತಪ್ಪ ಖಾನಾಪೂರ ೬೨

೨ ಬಸಪ್ಪ ರಾಮಪ್ಪ ಉಪ್ಪಲದಿನ್ನಿ ೬೧

ನೇಟವ್ಹ ಸ್ಟೇಟ್ಸ

೧ ಶ್ರೀಧರ ನರಸಿಂಹ ಪುರಾಣಿಕ ೫೩

೨ ಹನುಮಂತಾಚಾರ್ಯ ರಾಘವೇಂದ್ರಾಚಾರ್ಯ ನಾಮಾವಳಿ ೫೨

೩ ಅಡಿವೆಪ್ಪ ಹಣಮಂತಪ್ಪ ಮ್ಯಾದಾರ ೫೧

ಏಡೆಡ್‌ಸ್ಕೂಲ ಅಥಣಿ

೧ ಗುರುಪಾದಪ್ಪ ಶಿವಲಿಂಗಪ್ಪ ಕಿತ್ತೂರ ೫೧

ಮಿಶನ್ ಸಂಸ್ಥೆ

೧ ರಾಘವೇಂದ್ರ ಬಾಪೂಜಿ ಮನಗೂಳಿ

ಧಾರವಾಡ
೨೩-೫-೧೯೩೧

ಕೆ. ಎಸ್. ವಕೀಲ
ಎ. ಇ. ದ. ಭಾಗ

ಬರೆದು ಬಂದ ಪತ್ರಗಳ ಸಾರಾಂಶ

ಶಾಳಾ ಕೊಡಗಾನೂರ ಜಿ. ವಿಜಾಪೂರ ಇಲ್ಲಿಯ ಮಿ. ಅ. ರಾ. ಉಪನಾಳ ಇವರಿಂದ-

ಈ ಊರ ಗ್ರಾಮಸ್ಥರಾದ ಮ. ಹಣಮಂತರಾಯರು ಹಾಗು ಗುರುನಾಥ ಅಂತಾಜಿ ಕುಲಕರ್ಣಿ ಇವರು ಪರಿಶ್ರಮಮಾಡಿ ವರ್ಗಣಿ ಮಾಡಿದ ೩೦ ರೂ. ಗಳಿಂದ ಶಾಲೆಗೆ ಕಲ್ಲು ಫರಸ ಮಾಡಿಸಿದೆ. ಈ ಕೆಲಸವು ಸ್ತುತ್ಯವದೆ. ಹೀಗೆಯೇ ಉಳಿದ ಕಡೆಯಲ್ಲಿಯೂ ಸ್ಕೂಲ ಪಂಚರೂ ಗಾಢ. ರೂ ಯತ್ನಿಸಬೇಕು.

ತಾ. ೧೧-೬-೩೧

ಧಾರವಾಡ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದ ೧೯೩೧ನೇ ಇಸವಿಯ ಎಪ್ರೀಲ ತಿಂಗಳಲ್ಲಿ ಆದ ೧ನೇ ವರ್ಷದ ಸರ್ಟಿಫಿಕೇಟ ಪರೀಕ್ಷೆಯ ಪರಿಣಾಮವು

ನಂ.	ಪೂರ್ಣಹೆಸರು	ಒಟ್ಟು ಗುಣಗಳಲ್ಲಿ ೧೦೦ಕ್ಕೆ ಬಿದ್ದ ಗುಣಗಳು
೧	ರಿಂದವ್ವಾ ಮಂಟೂರ	೭೦.೯
೨	ಕೃಷ್ಣಾಬಾಯಿ ನೇಗಿನಹಾಳ	೬೯.೬
೩	ಸಂಗವ್ವ ಅಂಗಡಿ	೬೫.೮
೪	ಲಿಂಗವ್ವ ಸಿಂಗಡಿಯವರ	೬೦.೪
೫	ಚಂದ್ರಾ ಆಸಂಗಿ	೫೭.೪
೬	ಗದಿಗೆವ್ವ ಗುರುಪಾದ ದೇವರಮಠ	೫೭
೭	ಪೃಥಳಾ ಗಿರಣೀ ಒಡ್ಡರ	೫೬.೪
೮	ರೋದಾ ಅಮರಾವತಿ	೫೬.೨
೯	ರಾಜಮಾ ಬಟಾಬಟ್ಟಿ	೫೬
೧೦	ಮಹಬೂಬಿ ಭಾವೀಕಟ್ಟಿ	೫೫.೯
೧೧	ರೋಸಾ ಮುತ್ತಲಗೇರಿ	೫೫.೫
೧೨	ಮಲ್ಲವ್ವಾ ಮಾಸೂರ	೫೫.೨
೧೩	ಸೀತಾ ಹಾವಲೆ	೫೩.೫
೧೪	ಗುಂಡವ್ವ ಪೂಜಾರ	೫೨.೮
೧೫	ಮಹಾಲಕ್ಷ್ಮಿ ಹೆಗಡೆ	೫೨.೪
೧೬	ಮನೋರಮಾ ಮೋಟೇಬೆನ್ನೂರ	೫೨
೧೭	ಬುದ್ಧಿವಂತಿ ಬೋವೇರ	೫೧.೮
೧೮	ಭಾಗೀರಥಿ ಕುಂಬಾರ	೫೧.೬
೧೯	ಬಸ್ತಿನ್ ಲುದ್ರಿಕ್	೫೧.೫
೨೦	ಅಂದವ್ವಾ ಪಲ್ಲೇದ	೪೮.೩

ಕೆ. ಎಸ್. ವಕೀಲ

ಎ. ಇ. ದ. ಭಾ.

ಕೆಳಗೆ ಬರೆದ ಪ್ರಕಾರ ಮೆ. ಎ. ಇ. ಸಾ. ರವರಿಂದ ಪುಸ್ತಕಗಳು ಮಂಜೂರ ಮಾಡಲ್ಪಟ್ಟವೆ. ನಂ 8132 / 2/3/1931

ನಂ.	ಪುಸ್ತಕದ ಹೆಸರು.	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು.	ಬೆಲೆ.	ಯಾತಕ್ಕೋಸ್ಕರ ಮಂಜೂರ ಮಾಡಲ್ಪಟ್ಟಿರುತ್ತದೆ.
೧	ಪ್ರೌಢ ಅಂಕಗಣಿತ	ಮಿ. ಆರ್. ಅಳ್ವಾರ ಅಯ್ಯಂಗಾರ	ಆರ್. ಅಳ್ವಾರ ಅಯ್ಯಂಗಾರ	೧–೧೨–೦	ಟ್ರೇ. ಕಾಲೇಜಗಳ ಟೆಕ್ಸ್ಟ (ಪಠ್ಯ) ಬುಕ್ಕಾಗಿ
೨	ಹಾರ್ಮೋನಿಯಮ್ ಶಿಕ್ಷಣ ಭಾಗ ೧-೨-೩	ಮಿ. ಬಿ. ವ್ಹಿ. ಘಾಟಕ	ಬಿ. ವ್ಹಿ. ಘಾಟಕ ರಾಯಟರ ಗಲ್ಲಿ ಧಾರವಾಡ	೧–೦–೦ ಪ್ರ. ೧ ಭಾ.	ವ್ಹ. ಟ್ರೇ. ಕಾ. ಗಳ ಮತ್ತು ಪ್ರಾ. ಶಾಲೆಗಳ ಲಾಯಬ್ರರಿ ಬುಕ್ಕಾಗಿ
೩	ಅಳಲೋ ನಗಲೋ	ಮಿ. ಬಿ. ವ್ಹಿ. ರಾವ	ದಿ. ಸ್ಟೂಡಂಟ್ಸ ಸ್ಟೇಶನರಿ ಸೊಸಾಯಟಿ ಗಣಪತಿಹಾಯ ಸ್ಕೂಲು ಮಂಗಳೂರ	೦–೮–೦	ವ್ಹ. ಟ್ರೇ. ಕಾ. ಗಳ ಹಾಗು ಪ್ರಾ. ಶಾ. ಗಳ ಪ್ರಾಯಿಝು ಬುಕ್ಕಾಗಿ
೪	ಮಕ್ಕಳ ನಾಟಕ	ಮಿ. ಬಿ. ಎನ್. ರಾವ	,,	೦–೪–೦	ಪ್ರಾ. ಶಾಲೆಗಳ ಪ್ರಾಯಿಝು ಬುಕ್ಕಾಗಿ
೫	ಆನಂದಸಾಮ್ರಾಜ್ಯ	ಆರ್. ಹಣಮಂತಾಚಾರ್ಯ	ಬೆಂಗಳೂರ ಪ್ರೆಸ್ ಮೈಸೂರ ಕೋಟ	೦–೧೦–೦	ವ್ಹ. ಟ್ರೇ. ಕಾ. ಗಳ, ಮಾ. ಶಾಲೆಗಳ ಹಾಗು ಪ್ರಾ. ಶಾ. ಗಳ ಪ್ರಾಯಿಝು ಹಾಗು ಲಾ. ಬುಕ್ಕಾಗಿ
೬	ನುಡಿಗನ್ನಡಿ ಭಾಗ ೨	ಮಿ. ಎಮ್. ಪಿ. ಪೂಜಾರ	ಮಿ. ಎಮ್. ಪಿ. ಪೂಜಾರ ಲೈನಬಝಾರ ಧಾರವಾಡ	೦–೪–೦	ಪ್ರಾಥಮಿಕ ಶಾಲೆಗಳ ಮಾಸ್ತರರ ಲಾಯಬ್ರರಿ ಬುಕ್ಕಾಗಿ

೭	ಅಂಕಗಣಿತ (೩ನೆಯ ಇಯತ್ತೆಗಾಗಿ	ಮೆಸರ್ಸ ಮುಗದಾಳ ಮತ್ತು ಪುರೋಹಿತ,	ಮಿ. ರಾಘವೇಂದ್ರರಾವ ಪುರೋಹಿತ ಬಿ. ಎ. ಎಲ್. ಎಲ್. ಬಿ. ಗಿಬ್ ಟಾವುನ ಧಾರವಾಡ	೦–೪–೦	ಟ್ರೇ. ಕಾ. ಗಳ ಹಾಗು ಪ್ರಾ. ಶಾಲೆಗಳ ಶಿಕ್ಷಕರ ಲಾಯಬ್ರರಿ ಬುಕ್ಕಾಗಿ
೮	ಆರೋಗ್ಯಪ್ರತಾಪ	ಮಿ. ಕೆ. ಎಸ್. ರಾವ	ಕೋರ್ಡಾಕಲ್ ಶ್ರೀನಿವಾಸ ರಾವ ಟೀಚರ, ಬೋರ್ಡ H. S. ಉಡುಪಿ	೦–೧೦–೦	ಪ್ರಾ. ಶಾ. ಗಳ ಪ್ರಾಯಿಜ್ ಹಾಗು ಲಾಯಬ್ರರಿ ಬುಕ್ಕಾಗಿ

ಮೆ. ಎ. ಇ. ಸಾ. ೮ ನಂ. 47/P. 632 6/4/31

೧	ಬಾಲರಂಜನ	ಮಿ. ನರಸಿಂಹಾಚಾರ್ಯ ಪುಣೇಕರ	ಮಿ. ಶ್ರೀಪತಿರಾವ ದೇಶಪಾಂಡೆ, ವಿದ್ಯಾರ್ಥಿಗಳ ಗುಂಪು ಧಾರವಾಡ	೦–೧–೦	ಪ್ರಾಥಮಿಕ ಶಾಲೆಗಳ ಲಾಯಬ್ರರಿ ಬುಕ್ಕಾಗಿ
೨	ಭಾರತದ ಸವಿಕಟ್ಟು	ಮಿ. ಹೊಸಕೇರಿ ಶ್ರೀನಿವಾಸ ಮೂರ್ತಿ	ಭಕ್ತಬಂಧು ಕಾರ್ಯಾಲಯ, ಬಸವನಗುಡಿ ಬೆಂಗಳೂರು	೦–೧೨–೦	ಪ್ರಾಥಮಿಕ ಶಾಲೆಗಳ ಹಾಗು ಟ್ರೇನಿಂಗ ಸಂಸ್ಥೆಗಳ ಪ್ರಾಯಿಜ್ ಹಾಗು ಲಾಯಬ್ರರಿ ಬುಕ್ಕಾಗಿ
೩	ಹಕ್ಕಿ ಹಾರುತಿದೆ	ಮಿ. ಬೇಂದ್ರೆ ದತ್ತರಾಯರು	ಗೆಳೆಯರ ಗುಂಪು ಧಾರವಾಡ	೦–೮–೦	,, ,,
೪	ಭಾರ್ಗವಿ	ಮಿ. ದೇವುಡು ನರಸಿಂಹಶಾಸ್ತ್ರಿ	ಅಣ್ಣಾಚಾರ್ಯ ಹೊಸಕೇರಿ ವಿಜಯ ಪ್ರೆಸ್ ಧಾರವಾಡ	೦–೧–೦	ಪ್ರಾ. ಶಾಲೆಗಳ ಪ್ರಾಯಿಜ್ ಹಾಗು ಲಾಯಬ್ರರಿ ಬುಕ್ಕಾಗಿ
೫	ಕರ್ನಾಟಕದ ವೀರ ರತ್ನಗಳು	ಮಿ. ವ್ಹಿ. ಬಿ. ಆಲೂರ	ರಾಮರಾವ ಹುಕ್ಕೇರಿ ಎಮ್. ಎ. ಧಾರವಾಡ	೧–೦–೦	ಪ್ರಾಥಮಿಕ ಶಾಲೆಗಳ ಹಾಗು ಟ್ರೇನಿಂಗ ಸಂಸ್ಥೆಗಳ ಪ್ರಾಯಿಜು ಹಾಗು ಲಾಯಬ್ರರಿ ಬುಕ್ಕಾಗಿ

೬	ದೇವದಾನವರು	ಮಿ. ಎಸ್. ಕೆ. ಕುಲಕರ್ಣಿ ನೂಲವಿ	ಎಸ್. ಕೆ. ಕುಲಕರ್ಣಿ ನೂಲವಿ ಪೋ. ಅರಳೀಕಟ್ಟಿ ಜಿ. ಧಾರವಾಡ	೦-೧೨-೦	,,

ಮೈ. ಎ. ಇ. ಸಾ. ರ ನಂ. 47/P. 1137/26/5/31

೧	ಭಾರತದ ಸವಿಕಟ್ಟು	ಮಿ. ಹೊಸಕೇರಿ ಶ್ರೀನಿವಾಸ ಮೂರ್ತಿ	ಅಧ್ಯಾತ್ಮ ಪ್ರಕಾಶ ಮುದ್ರಣಾಲಯ ಬೆಂಗಳೂರ	೦-೧೨-೦	ಪ್ರಾಥಮಿಕ ಹಾಗು ಮಾಧ್ಯಮಿಕ ಶಾಲೆಗಳ ಸಪ್ಲಿಮೆಂಟರ ರೀಡರಾಗಿ
೨	ಹಕ್ಕಿ ಹಾರುತಿದೆ	ಮಿ. ಬೇಂದ್ರೆ ದತ್ತರಾಯರು	ಎಸ್. ಜಿ. ಕುಲಕರ್ಣಿ ಜಯ ಕರ್ನಾಟಕ ಕಾರ್ಯಾಲಯ ಧಾರವಾಡ	೦-[illegible]-೦	ಮಾ. ಶಾ. ಯ ವಿದ್ಯಾರ್ಥಿಗಳ ಪ್ರಾಯಿಜ್ ಹಾಗು ಲಾಯಬ್ರರಿ ಬುಕ್ಕಾಗಿ
೩	ಮ್ಯಾಕಮಿಲನರ ಕನ್ನಡ ಪ್ರಾಥಮಿಕ ಕ್ರಮಿಕ ಬುಕ್ಕುಗಳು		ಮ್ಯಾಕಮಿಲನ್ ಆ್ಯಂಡ ಕೋ ಹಾರ್ನಬಿ ರೋಡ ಮುಂಬೈ		
	ಬಾಲಬೋಧಿನಿ			೦-೩-೦	ಪ್ರಾಥಮಿಕ ಶಾಲೆಗಳ ಸಪ್ಲಿಮೆಂಟರಿ ಬುಕ್ಕಾಗಿ
	ಕ್ರಮಿಕ ೧ನೇ ಬುಕ್ಕು			೦-೩-೦	
	,, ೨ನೇ ಬುಕ್ಕು			೦-೮-೦	
	,, ೩ನೇ ಬುಕ್ಕು			೦-೧೦-೦	
	,, ೪ನೇ ಬುಕ್ಕು			೦-೧೨-೦	
೪	ಸಚಿತ್ರ ಕರ್ನಾಟಕ ಬಾಲಬೋಧೆ ಭಾಗ ೨	ಮಿ. ಪಿ. ಆರ್. ಕರಿಬಸವ ಶಾಸ್ತ್ರಿ	ಮಿ. ಎಚ್. ಜಿ. ಲಿಂಗಣ್ಣ ಆ್ಯಂಡ ಸನ್ಸ ಬೆಂಗಳೂರ	೦-೪-೦	ಪ್ರಾಥಮಿಕ ಶಾಲೆಗಳ ಸಪ್ಲಿಮೆಂಟರಿ ಬುಕ್ಕಾಗಿ
೫	ಕರ್ನಾಟಕ ವೀರ ರತ್ನಗಳು	ಮಿ. ವ್ಹಿ. ಬೀ. ಆಲೂರ	ಮಿ. ರಾಮರಾವ ಕುಲಕರ್ಣಿ ಕರ್ನಾಟಕಶಿಕ್ಷಣಸಮಿತಿ ಧಾ.	೧-೦-೦	ಮಾ. ಶಾಲೆಗಳ ಪ್ರಾಯಿಜ್ ಹಾಗು ಲಾಯಬ್ರರಿ ಬುಕ್ಕಾಗಿ

೧	ದೇವದಾನವರು	ಮಿ. ಶಂಕರರಾವ ಕುಲಕರ್ಣಿ	ಶಂಕರರಾವ ಕುಲಕರ್ಣಿ ನೂಲವಿ Post ಅರಳೀಕಟ್ಟಿ ಧಾರವಾಡ	೦–೧೨–೦	ಮಾಧ್ಯಮಿಕ ಶಾಲೆಗಳ ಪ್ರಾಯಿಜ ಹಾಗು ಲಾಯಬ್ರರಿ ಬುಕ್ಕಾಗಿ
೨	ಕಥಾಪಂಚಕ	ಮಿ. ಬಿ. ಜೆ. ಹುಲಿಕವಿ	ಬಿ. ಜೆ. ಹುಲಿಕವಿ ಅಸಿ, ಮಾ. ಕಾರವಾರ ಹಾಯಸ್ಕೂಲ	೦–೧೦–೧	ಪ್ರಾ. ಶಾಲೆಗಳ ಸಪ್ಲಿಮೆಂಟರಿ ರೀಡರಾಗಿ

ಕೆ. ಎಸ್. ವಕೀಲ,

ಎ. ಇ ದ. ಭಾಗ

ಧಾರವಾಡ ಟ್ರೇ. ಕಾ. ದ. ಹೊಸ ವರ್ಷ (೧೯೩೧)

ಈ ವರ್ಷ ಶಿಕ್ಷಣದ ದೆಶೆಯಿಂದ ಬೇರೆ ಬೇರೆ ಸಂಸ್ಥೆಯವರು ಹೆಚ್ಚು ಶಿಕ್ಷಕರನ್ನು ಕಳಿಸಲಿಕ್ಕೆ ಬೇಡಿಕೊಂಡಿದ್ದರೂ ಸರಕಾರದವರು ಕಾಲೇಜದಲ್ಲಿ ಒಂದೇ ಕ್ಲಾಸವಿರುವ ಮೂಲಕ ಕೆಳಗೆ ಬರೆದಂತೆ ಶಿಕ್ಷಕರನ್ನು ಆರಿಸಿಕೊಂಡಿರುವರು.

	ಧಾರವಾಡ ಡಿ. ಎಲ್. ಬಿ.	೫
	ವಿಜಾಪುರ ,,	೩
	ಬೆಳಗಾವ ,,	೫
	ಧಾರವಾಡ ಮ್ಯು. ಪಾ.	೨
	ಹುಬ್ಬಳ್ಳಿ ,,	೧
	ಗದಗ ,,	೧
	ವಿಜಾಪುರ ,,	೬
	ಬಾಗಲಕೋಟೆ ,,	೨
ಸೆಟಲಮೆಂಟ	ಕ್ರಿ ಟ್ರೈ. ಸ ,,	೨
	ಅಥಣಿ ಎಡೆಡ್ ಸ್ಕೂಲ	೨
	ಸ್ಟೇಟ ,,	೩
	ಮಿಶನ್ ಸಂಸ್ಥೆಯಿಂದ	೧
		೩೩

ಜಾತಿಯಂತೆ ಅವರ ವಿವರವು ಹೀಗೆ ಇರುವದು

ಬ್ರಾಹ್ಮಣ ,,	೫
ಲಿಂಗವಂತ ,,	೧೪
ಇತರ ಹಿಂದು ,,	೯
ಮುಸಲ್ಮಾನ ,,	೧
ಕ್ರಿಶ್ಚಿಯನ್ ,,	೨
ಅಸ್ಪೃಶ್ಯ ,,	೨
	೩೩

ಹೆ. ಮಾ. ಟ್ರೇ. ಕಾ. ಧಾರವಾಡ

ಪ್ರಭಾಕರನ ಪವಿತ್ರತೆ

(ಕವಿ:-ಗಣೇಶ ಸೂರ್ಯನಾರಾಯಣಭಟ್ಟ ಕೆಕ್ಕಾರ, ವಿದ್ಯಾರ್ಥಿ)

ವಾ॥ ಷ॥

ಮಹಿಯೊಳಗೆ ಮಾನವರ್ ಭವಮದನ ಬಾಧೆಯಂ !
ಸಹಿಸಲಾರದೆ ಬಹಳ ಬಳಲಿ ನಿದ್ರಾಂಗನೆಯು
ಸಹವಾಸದೊಳ್ ಸುಖಸ್ವಾದವಂ ಸೇವಿಸುತ್ತಿರ್ದರತಿ ಸಂತಸದೊಳು ॥
ಅಹಹ! ಆನಂದ ಮಧುವಿಂ ಮತ್ತರಾಗಿರಲ್
ಬಹು ಶಾಂತಮಯವಾದ "ಆನಂದ ಸಾಮ್ರಾಜ್ಯ"
ವಿಹುದು ಜಗವೆಂಬ ಭಾವನೆಯು ಬೀಜವು ಭರದೊಳಂಕುರಿಸಿತವರ ಮನದೆ ॥೧॥

ಆನಂದವೇ ಸುಖವೊ ! ಸುಖವೆ ಆನಂದವೋ ?
ಆನಂದದೊಳ್ ಸುಖವೊ? ಸುಖದೊಳಾನಂದವೋ?
ಆನಂದ ಸುಖಗಳಿಗೆ ಮನವೆ ಕಾರಣವೊ? ಎಂದವರರಿಯದಿರ್ದರಾಗ ॥
ಪ್ರಾಣಿಗಳ ಗುಣಧರ್ಮವಿರ್ಪವಿದು ತಾವು ತ ।
ಲ್ಲೀನವಾಗಿಹ ಪದಾರ್ಥದ ರೂಪದಿಂದಲೀ
ಕ್ಷೋಣಿಯನ್ನೀಕ್ಷಿಸುವ ವನ್ಯರೂಪದ ಭಾವನೆಯು ಸರ್ವಥಾ ಬಾರದು ॥೨॥

ಇರಲಿಂತು ಮೈ ಮರೆತು ಮನುಜರೆಲ್ಲರ್, ತನ್ನ ।
ಪರಿವಾರಗಳ ಕೂಡಿ ಬಹಳ ವೈಭವದಿಂದೆ ।
ಹರಿತಂದು ಗಗನಾಂಗಣದ ಮಧ್ಯದೊಳ್ ಸುಧಾಕರನು ಶೋಭಿಸುತಿರ್ದನು ॥
ಹರುಷದಿಂ ಸಾಗರನು ತನ್ನ ತನುಜನಿಗೆ ಶುಭ ।
ವಿರಲೆನ್ನುತವನ ಸೊಬಗಂ ನೋಡಿ ಹರಸುತ್ತ ।
ಲಿರದೆ ಹಿರಿಹಿರಿ ಹಿಗ್ಗುತುಬ್ಬಿದಂ ಪುತ್ರವಾತ್ಸಲ್ಯಕಾವುದು ಸರಿಯಹ! ॥೩॥

ಧರೆಯೊಳೆಲ್ಲೆಲ್ಲಿಯುಂ ಶಾಂತತೆಯು ನೆಲಸಿರಲ್ ।
ಸ್ಮರಶರನ ಬಾಧೆಯಂ ಬಳಲಿ ಬೆಂಡಾಗಿಹಳ್
ತರುಣಿಮಣಿನಿಶೆಯು ದೀನಸ್ಥಿತಿಯ ಕಂಡು ಮನಕರಗಲಾಶೀತಕರನು ॥
ಭರದೆನಿಜಸತಿಯು ಸಂತೃಪೆನೆಂದೆನುತಾಗ ।
ಸರಸವಾಡಲು ಯೋಗ್ಯ ಕಾಲವಾಗಿಹುದದೆಂ ।
ದರಿತು ಸಂತೋಷದಿಂ ಸ್ತ್ರೀಸುಖವನನುಭೋಗಿಸಲ್ ತೊಡಗಿದಂ ಮೋಹದೆ ॥೪॥

ಮುದ್ರಕರು—ಬಂ. ರಾ ಭಿಸೆ, ಕ. ಪ್ರಿಂ. ವರ್ಕ್ಸ, ಧಾರವಾಡ. ೨೦೪,೩೧,೮೦೦

ಉತ್ತಮ ಸಂಧಿ   ಅಲಭ್ಯ ಲಾಭ

ಮೋಟರ ಡ್ರಾಯವ್ಹಿಂಗ ಮತ್ತು ಮೆಕಾನಿಕಲ್ ಜ್ಞಾನ.

ನಮ್ಮಲ್ಲಿ ಮೋಟರ ಡ್ರಾಯವ್ಹಿಂಗ, ಹಾಗು ಮೆಕ್ಯಾನಿಕಲ್ ಜ್ಞಾನ ಎರಡೂ ಮಾಡಿಕೊಡುವೆವು. ಯೋಗ್ಯ ಫೀ ದರ, ನಮ್ಮಲ್ಲಿ ತೇರ್ಗಡೆಹೊಂದಿದ ಮೇಲೆ ಬ್ರಿಟಿಶ ಹಿಂದುಸ್ಥಾನದಲ್ಲಿ ನಡೆಯುತಕ್ಕ ಎಲ್ಲ ಮೋಟರುಗಳ ಸರಕಾರಿ ಲಾಯಸನ್ಸ ಕೊಡಿಸುತ್ತೇವೆ. ವಿಶೇಷ ಮಾಹಿತಿ ಸಮಕ್ಷಮ, ಅಗರ ಪತ್ರದ್ವಾರ.

ತಮ್ಮ ಹಿತಚಿಂತಕ

ಪ್ರೊ. ವ್ಹಿ. ಎಸ್. ಇಟಗಿ,

ಮುನಸಿಫ್ ಕೋರ್ಟಿನ ಹತ್ತರ ಧಾರವಾಡ

ಜಾಹೀರಾತು

ಸ್ಯಾಂಪಲ್] [ಪುಕ್ಕಟೆ

ಉತ್ತಮ ಮಸೀ ಚೀಟುಗಳು

ನೀಲೀಕಪ್ಪು, ಕೆಂಪು, ಜಾಂಬಳಿ ಮಸಿಯ ಚೀಟಿಗಳು. ಈ ಕಂಪನಿಯು ಬಹಳ ಜನರಿಂದ ಶಿಫಾರಸ ಪಡೆದು ಮೆಡಲ್ಲುಗಳನ್ನು ಸಂಪಾದಿಸಿರುತ್ತದೆ.

ದರಗಳು

೧೦೦ ಚೀಟುಗಳಿಗೆ		೦—೭—೦
೫೦೦	,,	೨—೦—೦
೧೦೦೦	,,	೩—೮—೦
೧೦೦೦೦	,,	೩೦—೦—೦ (ರೇಲ್ವೆ ಫ್ರಿ)

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ,

ಬಾಗಲಕೋಟ.

ಪ್ರಕಟನೆ

೧೯೩೨ನೇ ಇಸವಿಯಲ್ಲಿ ಆಗುವ ಕನ್ನಡ ಗಂಡು ಹುಡುಗರ ವ್ಹ. ಫಾ. ಪರೀಕ್ಷೆಗೆ ಕೆಳಗೆ ಬರೆದಂತೆ ಗದ್ಯ ಪದ್ಯಗಳು ಇಡಲ್ಪಟ್ಟಿರುತ್ತವೆ.

ಪದ್ಯ— ಕನ್ನಡ ೭ನೆಯ ಪುಸ್ತಕ (೧೯೨ ರಲ್ಲಿ ಅಚ್ಚಾದದ್ದು) ಪಾಠಗಳು ೩—೭—೧೧—೧೩-೧೯-೨೪ ಹಾಗು ೨೮ನೆ ಪಾಠಗಳು

ಗದ್ಯ— ಕನ್ನಡ ೭ನೆಯ ಬುಕ್ಕಿನ (೧೯೨೯ರಲ್ಲಿ ಅಚ್ಚಾದ) ಎಲ್ಲ ಪಾಠಗಳು

ಕೆ. ಎಸ್. ವಕೀಲ

ಎ. ಇ. ದ. ಭಾ.

REGISTERED NO B 2567

LIST NO. ೨೦

From
The Manager,
Kannada Prathamik Sikshana
Dharwar

Reg. No. B 2567

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Sikshana

JULY 1931

ಸಂಪಾದಕ—ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ

ಸಂಪುಟ ೬೮ ವರ್ಷ ೩ | ಜುಲೈ ೧೯೩೧ | ೩ನೆವ. ಸಂ. ೪

ವಿಷಯಾನುಕ್ರಮಣಿಕೆ

ಅ. ಸಂ.	ವಿಷಯ.	ಪುಟ
೧	ಸಚ್ಛಿಕ್ಷಕ	೧
೨	ಪರಮೇಶಪ್ರಾರ್ಥನೆ	೬
೩	ಶಿಕ್ಷಣದ ಮಹತ್ವದ ಸಾಧನಗಳು	೮
೪	ಪ್ರಕೃತಿವಿಮರ್ಶೆ ಮತ್ತು ತೋಟದ ಕೆಲಸ	೧೩
೫	ಪ್ರಕೃತಿ ವಿಮರ್ಶೆಯ ಅಭ್ಯಾಸಪತ್ರಿಕೆ	೧೫
೬	ಪ್ರಾಕ್ಟಿಸಿಂಗಸ್ಕೂಲಿನಲ್ಲಿ ನಡೆದಿರುವ ಪ್ರಕೃತಿವಿಮರ್ಶೆ	೧೯
೭	ಅಪೂರ್ಣಾಂಕ ಕಲಿಸುವವರಿಗೆ ಪ್ರಶ್ನೆಗಳು	೨೩
೮	ಸೆಕಂಡರಿ ಟೀಚರ್ಸ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು	೨೭
೯	ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯ ಪರಿಣಾಮವು	೨೮
೧೦	ಪುಸ್ತಕ ಪರಿಚಯ	೩೨

Printed by K. R. Bhise at the Karnatak Printing Works, Dharwar
Published by H. G. Deshpande, B A.,
Head-Master, Training College for Men, Dharwar, at his Offic

From
The Manager,
Kannada Prathamik Sikshana
Dharwar

REGISTERED NO B 2567

LIST NO. ೨೦

ಜಾಹೀರಾತು

ಸ್ಯಾಂಪಲ್] [ಪುಕ್ಕಟೆ

ಉತ್ತಮ ಮಸೀ ಚೀಟುಗಳು

ನೀಲೀಕಪ್ಪು, ಕೆಂಪು, ಜಾಂಬಳಿ ಮಸಿಯ ಚೀಟುಗಳು. ಈ ಕಂಪನಿಯು ಬಹಳ ಜನರಿಂದ ಶಿಫಾರಸ ಪಡೆದು ಮೆಡಲ್ಲುಗಳನ್ನು ಸಂಪಾದಿಸಿರುತ್ತದೆ.

ದರಗಳು

೧೦೦ ಚೀಟುಗಳಿಗೆ		೦—೭—೦
೫೦೦	,,	೨—೦—೦
೧೦೦೦	,,	೩—೮—೦
೧೦೦೦೦	,,	೩೦—೦—೦ (ರೇಲ್ವೆ ಫ್ರಿ)

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ,
ಬಾಗಲಕೋಟೆ.

ಪ್ರಕಟನೆ

೧೯೩೨ನೇ ಇಸವಿಯಲ್ಲಿ ಆಗುವ ಕನ್ನಡ ಗಂಡು ಹುಡುಗರ ವ್ಹ. ಫಾ. ಪರೀಕ್ಷೆಗೆ ಕೆಳಗೆ ಬರೆದಂತೆ ಗದ್ಯ ಪದ್ಯಗಳು ಇಡಲ್ಪಟ್ಟಿರುತ್ತವೆ.

ಪದ್ಯ— ಕನ್ನಡ ೭ನೆಯ ಪುಸ್ತಕ (೧೯೨೦ರಲ್ಲಿ ಅಚ್ಚಾದದ್ದು) ಪಾಠಗಳು ೩—೭—೧೧—೧೩-೧೯-೨೪ ಹಾಗು ೨೮ನೆ ಪಾಠಗಳು

ಗದ್ಯ— ಕನ್ನಡ ೭ನೆಯ ಬುಕ್ಕಿನ (೧೯೨೯ರಲ್ಲಿ ಅಚ್ಚಾದ) ಎಲ್ಲ ಪಾಠಗಳು

ಕೆ. ಎಸ್. ವಕೀಲ
ಎ. ಇ. ದ. ಭಾ.

Reg. No. B 2567

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Sikshana

JULY 1931

ಸಂಪಾದಕ—ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ

ಸಂಪುಟ ೬೮ ವರ್ಷ ೩ | ಜುಲೈ ೧೯೩೧ | ೩ನೆ ವ. ಸಂ. ೪

ವಿಷಯಾನುಕ್ರಮಣಿಕೆ

ಅ. ಸಂ.	ವಿಷಯ.	ಪುಟ
೧	ಸಚ್ಛಿಕ್ಷಕ	೧
೨	ಪರಮೇಶ ಪ್ರಾರ್ಥನೆ	೬
೩	ಶಿಕ್ಷಣದ ಮಹತ್ವದ ಸಾಧನಗಳು	೮
೪	ಪ್ರಕೃತಿವಿಮರ್ಶೆ ಮತ್ತು ತೋಟದ ಕೆಲಸ	೧೩
೫	ಪ್ರಕೃತಿ ವಿಮರ್ಶೆಯ ಅಭ್ಯಾಸಪತ್ರಿಕೆ	೧೫
೬	ಪ್ರ್ಯಾಕ್ಟಿಸಿಂಗಸ್ಕೂಲಿನಲ್ಲಿ ನಡೆದಿರುವ ಪ್ರಕೃತಿವಿಮರ್ಶೆ	೧೯
೭	ಅಪೂರ್ಣಾಂಕ ಕಲಿಸುವವರಿಗೆ ಪ್ರಶ್ನೆಗಳು	೨೩
೮	ಸೆಕಂಡರಿ ಟೀಚರ್ಸ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನಗಳು	೨೬
೯	ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯ ಪರಿಣಾಮವು	೨೮
೧೦	ಪುಸ್ತಕ ಪರಿಚಯ	೩೨

Printed by K. R. Bhise at the Karnatak Printing Works, Dharwar
Published by H. G. Deshpande, B. A.,
Head-Master, Training College for Men, Dharwar, at his Offic

ಜಾಹೀರಾತು

ಎಲ್ಲ ಶಿಕ್ಷಕರಿಗೂ ತಿಳಿಸುವದೇನಂದರೆ:—ಕೆಳಗೆ ಬರೆದ ಪತ್ತೆಯ ಮೇ ಕೆಳಗೆ ವಿವರಿಸಿದ ಉಪಯೋಗಕಾರಕವಾದ ಶಿಕ್ಷಣದ ಉಪಕರಣಗಳು ದೊರೆಯುತ್ತ

ಶಾಸ್ತ್ರೀಯ ವಿಷಯದ ಸಾಮಾನುಗಳು, ನೀರು ಜಗ್ಗುವ ನಳಿಕೆಗಳು, ಬ್ರಹ ಪ್ರೆಸ್ಸು, ತೂಕದ ಆರ್ಕಿಮಿಡಿಸನ್ ಮಾದರಿಯ ತಕ್ಕಡಿಗಳು, ಕಾರಂಜಿಗಳು, ಸೂರ್ಯ ಮಾಲೆ, ಋತುಗಳು, ಚಂದ್ರನ ಕಲೆಗಳು ಇವುಗಳನ್ನು ತೋರಿಸುವ ಉಪಕರಣ ರಿಲೀಫ ನಕಾಶಗಳು, ಗೋಡೆಗೆ ಹಾಕುವ ನಕಾಶಗಳು, ತೊಗಲಿನ ಬೋರ್ಡುಗ ರೇಶಿಮೆ ಉಣ್ಣೆಯ ಬೋರ್ಡುಗಳು ಸಹ ಮಾಂಟಿಸೋರಿ ಹಾಗು ಕಿಂಡರಗಾರ್ಟ ಪದ್ಧತಿಯ ಉಪಕರಣಗಳು ದೊರೆಯುವವು. ಬೇಕಾದವರು ಕೆಳಗಿನ ಪತ್ತೆಗೆ ಬ ನೋಂದ ಇಲ್ಲವೆ ಇಂಗ್ಲಿಷ ಲಿಪಿಯಿಂದ ಬರೆದು ಕ್ಯಾಟಲಾಗ ತರಿಸಿಕೊಳ್ಳಬೇಕು

ಸಾಮಾನು ದೊರೆಯುವ ವಿಳಾಸ:—

Kashibhai C. Patel

ಕಾಶೀಭಾಯಿ ಸಿ. ಪಟೇಲ

ಶಿಕ್ಷಣ ಸಾಹಿತ್ಯ ಕಾರ್ಯಾಲಯ ದೇಹಗಾಂವ (ಅಹಮ್ಮದಾಬಾದ)

Sikshan Sahitya Karyalaya Dehgam (*Ahamedabad*)

ಹೊಸ ಪುಸ್ತಕಗಳು

೩ನೆಯ ಭಾಗ - ನುಡಿಗನ್ನಡಿ

ಲೇ—ಎಂ. ಪಿ. ಪೂಜಾರ, ಕನ್ನಡ ಪಂಡಿತ ಟ್ರೇ. ಸ್ಕೂ. ಧಾರವಾಡ

ಪ್ರಾಥಮಿಕ ಶಾಲೆಗಳ ೪।೫ ತರಗತಿಗಳಿಗಾಗಿಯೂ ಇಂಗ್ಲಿಶ್ ಶಾಲೆಗಳ ಕೆಳ ತರಗತಿಗಳಿಗಾಗಿಯೂ ರಚಿತವಾದದ್ದು. ಈ ವರೆಗೆ ಕನ್ನಡ ೫ನೆಯ ಇಯತ್ತೆಗೆ ತ ವ್ಯಾಕರಣ ಪುಸ್ತಕವು ಇಲ್ಲದ್ದರಿಂದ ೬।೭ ಇಯತ್ತೆಗಳಿಗೆ ಕಲಿಸುವ ವ್ಯಾಕರಣ ಪುಸ್ತ ಲ್ಲಿ ಆರಂಭದ ಕೆಲವು ಪುಟಗಳನ್ನು ಮಾತ್ರ ಆ ಇಯತ್ತೆಗೆ ಕಲಿಸುವ ವಾಡಿಕೆಯಿತ್ತು ದರೆ ಹಾಗೆ ಕಲಿಸುವದು ಅಭ್ಯಾಸಪತ್ರಿಕೆಯನ್ನನುಸರಿಸುವದಿಲ್ಲ. ಈ ಕೊರತೆಯ ಹೋಗಲಾಡಿಸುವದಕ್ಕಾಗಿ ಏಕಕೇಂದ್ರಕ್ರಮದಿಂದ ವ್ಯಾಕರಣದ ಎಲ್ಲ ವಿಷಯಗಳ ಸ್ಥೂಲಮಾನದಿಂದ ಕಲಿಸುವದಕ್ಕೆ ಅನುಕೂಲವಾಗಬೇಕೆಂದು ಈ ಪುಸ್ತಕವು ಬರೆ ಲ್ಪಟ್ಟಿದೆ. ೫ನೆಯ ಇಯತ್ತೆಗೆ ಕಲಿಸುವ ವಿಷಯಗಳಲ್ಲಿಯೇ ಮುಖ್ಯವಾದವುಗಳ ೪ನೆಯ ಇಯತ್ತೆಗೆ ಕಲಿಸುವದಿರುವದರಿಂದ ಈ ಪುಸ್ತಕವು ೪ನೆಯ ಇಯತ್ತೆಗೂ ಉ ಯುಕ್ತವಾಗಿರುವದು. ಆದದರಿಂದ ೪।೫ ಇಯತ್ತೆಗಳ ವಿದ್ಯಾರ್ಥಿಗಳೂ, ಶಿಕ್ಷಕ ಇದರ ಉಪಯೋಗವನ್ನು ಅವಶ್ಯವಾಗಿ ಮಾಡಿಕೊಳ್ಳಬೇಕೆಂದು ಕೋರುವೆವು. ಬಹಳ ಕಡಿಮೆ (೪ ಆಣೆ ಮಾತ್ರ) ಪುಸ್ತಕಗಳು ಎಲ್ಲ ಬುಕ್‌ಡಿಪೋಗಳಲ್ಲಿಯೂ, ಗ್ರ ಕರ್ತರಲ್ಲಿಯೂ, ನಮ್ಮಲ್ಲಿಯೂ ದೊರೆಯುವವು.

ಗಣಿತಾದರ್ಶ—(೩ನೆಯ ಇಯತ್ತೆಗೆ) ಲೇ—ಎಚ್. ಆರ್. ತಪ್ಪ ಬಿ. ಎ., ಮತ್ತು ಜೆ

—ಜೋಶಿ ಬ್ರದರ್ಸ ಬುಕ್‌ಡಿಪೋ ಲೆ. ನ ಬಜಾರ ಧಾರವಾಡ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:— **ಹನುಮಂತ ಗೋವಿಂದರಾವ ದೇಶಪಾಂಡೆ**, ಬಿ. ಎ.,

ಸಂಪುಟ ೬೭—೬೮ ವರ್ಷ ೩ ||| ಜುಲೈ ೧೯೩೧ ||| ೩ನೆ. ನ. ಸಂ. ೪

ಸಚ್ಛಿಕ್ಷಕ

ಶಿಕ್ಷಣದ ಸಾಫಲ್ಯವು ಮುಖ್ಯವಾಗಿ ಶಿಕ್ಷಕನನ್ನು ಅವಲಂಬಿಸಿದೆ. ಆದ್ದರಿಂದ ಶಿಕ್ಷಕನು ಮಾನಸಶಾಸ್ತ್ರವನ್ನು ಅರಿತವನೂ ವಿದ್ವಾಂಸನೂ ಸದ್ಗುಣಿಯೂ ವ್ಯವಸ್ಥಿತನೂ ಸಹಾನುಭೂತಿಯುಳ್ಳವನೂ ಆಗಿರಬೇಕು. ಸಚ್ಛಿಕ್ಷಕನಲ್ಲಿರಬೇಕಾದ ಈ ಬಗೆಯ ಗುಣಗಳು ಯಾವವೆಂಬದನ್ನು ನೋಡುವಾ —

(೧) **ವಿಷಯಜ್ಞಾನ:**— ಶಿಕ್ಷಕನು ಬಾಲಕರಿಗೆ ಕಲಿಸತಕ್ಕ ವಿಷಯಗಳಲ್ಲಿ ಸಂಪೂರ್ಣ ನಿಷ್ಣಾತನಿರಬೇಕು. ಅಂದರೆ ಆ ವಿಷಯವನ್ನು ಬಾಲಕರಿಗೆ ಸಮಾಧಾನ ಕರವಾಗಿ ತಿಳಿಸುವನು. ತನಗೆ ಅರ್ಧಮರ್ಧ ತಿಳಿದ ವಿಷಯವನ್ನು ಚೆನ್ನಾಗಿ ಕಲಿಸ ಲಿಕ್ಕೆ ಯಾವನೂ ಸಮರ್ಥನಾಗಲಾರನು. ಪದ್ಧತಿಯು ಶಿಕ್ಷಣದ ಸುಗಮತೆಯ ಮಾರ್ಗ ವಾಗಿರುವದು. ಆದರೆ ವಿಷಯಜ್ಞಾನವು ಶಿಕ್ಷಕನ ನಿಧಿಯಾಗಿರುವದು. ಈ ಜ್ಞಾನವು ಸಾಕಷ್ಟು ಇರದಿದ್ದರೆ ಬರಿಯ ಪದ್ಧತಿಯು ಹುರುಳಿಲ್ಲದ್ದಾಗುವದು. ಶಿಕ್ಷಕನು ತಾನು ಕಲಿಸುವ ವಿಷಯವನ್ನು ಪೂರಾ ಬಲ್ಲವನಾಗಿದ್ದರೆ ಒಂದಿಲ್ಲೊಂದು ರೀತಿಯಿಂದ ಬಾಲಕ ರಿಗೆ ತಿಳಿಸಿಕೊಡಲು ಸಮರ್ಥನಾಗುವನು. ಶಿಕ್ಷಣದ ಕಾರ್ಯವು ನಡೆದಾಗ ಇಂಥ ಶಿಕ್ಷಕನು ಹೊಸ ಹೊಸ ಉದಾಹರಣಗಳಿಂದ ಕಠಿಣ ವಿಷಯವನ್ನು ಕೂಡ ಸುಗಮ ವಾಗುವಂತೆ ಮಾಡುವುದರಿಂದ ಬಾಲಕರ ಉತ್ಸಾಹವು ಹೆಚ್ಚುತ್ತ ಹೋಗುವದು. ಈ ಬಗೆಯಿಂದ ವರ್ಗದಲ್ಲಿ ಜೀವಕಳೆಯು ಸಂಪೂರ್ಣವಾಗಿ ಬಾಲಕರು ಶಿಕ್ಷಕನ ವಿಷಯ ವಾಗಿ ಆದರಬುದ್ಧಿಯುಳ್ಳವರೂ ವಿಧೇಯರೂ ಆಗುವರು. ವಿಷಯಜ್ಞಾನವುಳ್ಳ ಶಿಕ್ಷಕನಲ್ಲಿ ಕಲಿಸುವ ಧೈರ್ಯವೂ ಆತ್ಮವಿಶ್ವಾಸವೂ ಕಂಡುಬರುವವು. ಮೇಲಿನ ವರ್ಗ

ಗಳಲ್ಲಿ ಕಲಿಯುತಕ್ಕ ವಿಷಯುಗಳನ್ನು ಅಂಕುರರೂಪದಿಂದ ಬಾಲಕರು ಪ್ರಾ. ಶಾಲೆಗಳಲ್ಲಿ ಅರಿಯಬೇಕಾಗುವದರಿಂದ ಶಿಕ್ಷಕನು ತಾನು ಕಲಿಸತಕ್ಕ ವಿಷಯುಗಳಲ್ಲಿ ಪಾರಂಗತನಿದ್ದಂತೆ ಕಠಿಣ ವಿಷಯುಗಳನ್ನು ಬಾಲಕರಿಗೆ ಅತಿ ಸುಲಭವಾಗುವಂತೆ ತಿಳಿಸಬಲ್ಲನು. ವಿಷಯ ಪಾರಂಗತತೆಯು ಪ್ರಾ. ಶಿಕ್ಷಕರಿಗೆ ಅವಶ್ಯವಿಲ್ಲೆಂದು ಕೆಲವರು ಅನ್ನುವರು. ಇಂಥವರ ಶಿಕ್ಷಣ ಕಾರ್ಯದ ಕಲ್ಪನೆಯು ತೀರ ಸಂಕುಚಿತವೆಂದು ಹೇಳಬಹುದು. ಮ್ಯಾಟ್ರಿಕ್ಯು ಲೇಶನ್ ಪರೀಕ್ಷೆ ಪಾಸಾದ ಗೃಹಸ್ಥನಿಗೆ ಇರುವಷ್ಟು ಸಾಮಾನ್ಯ ಜ್ಞಾನವು ಪ್ರತಿಯೊಬ್ಬ ಪ್ರಾ. ಶಿಕ್ಷಕರಿಗೂ ಇರತಕ್ಕದ್ದು. ಆದದರಿಂದ ಟ್ರೇನಿಂಗ ಸಂಸ್ಥೆಗಳಲ್ಲಿ ವಿದ್ಯಾರ್ಥಿ ಗಳಿಗೆ ಇಷ್ಟು ಸಾಮಾನ್ಯಜ್ಞಾನವನ್ನುಂಟುಮಾಡಿಕೊಡುವಂತೆ ಕನಿಷ್ಟ ಪಕ್ಷಕ್ಕೆ ೩ವರ್ಷ ಗಳ ವರೆಗೆ ಟ್ರೇನಿಂಗ ಕೊಡುವದು ಅವಶ್ಯವೆಂದು ಕಂಡುಬರುತ್ತದೆ. ಈಗಿನಂತೆ ಕೇವಲ ವ್ಹ. ಫಾ. ಪರೀಕ್ಷೆ ಪಾಸಾದ ಜನರಿಂದ ಶಿಕ್ಷಣ ಕಾರ್ಯವು ಯಶಸ್ವಿಯಾಗಿ ನಡೆಯಲಾರದೆಂಬದನ್ನು ಮರೆಯಕೂಡದು.

೨ **ಪದ್ಧತಿಗಳ ರೂಢಿ:—** ಪದ್ಧತಿಯಲ್ಲಿ ಪಾಠಕ್ಕೆ ಬೇಕಾದ ಉಪಕರಣಗ ಳನ್ನು ಸಿದ್ಧಪಡಿಸಿಕೊಂಡು ಅವುಗಳನ್ನು ಉಪಯೋಗಿಸುವದು, ತಕ್ಕ ಪ್ರಶ್ನಗಳನ್ನು ಕೇಳುವುದು, ಸಮರ್ಪಕವಾದ ದೃಷ್ಟಾಂತಗಳಿಂದ ವಿಷಯನಿರೂಪಣೆ ಮಾಡುವದು, ಕರಿಹಲಿಗೆಯ ಮೇಲೆ ಅವಶ್ಯವುಳ್ಳ ಚಿತ್ರ, ವಿಷಯದ ಸಾರಾಂಶ ಮೊದಲಾದವುಗಳನ್ನು ಬರೆಯುವದು ಇವೇ ಮೊದಲಾದವುಗಳು ಸಮಾವೇಶವಾಗುತ್ತವೆ. ಇದಲ್ಲದೆ ಬಾಲಕರ ವಿಷಯಜ್ಞಾನವು ಎಷ್ಟಿರುವದೆಂಬದನ್ನು ಅರಿತು ಅದಕ್ಕೆ ತಕ್ಕಂತೆ ಹೊಸ ಪಾಠಗಳ ಯೋಜನೆಯನ್ನು ಮಾಡಿಕೊಳ್ಳುವದೂ ಮಹತ್ವದ ಸಂಗತಿಯಾಗಿರುತ್ತದೆ.

ಶಿಕ್ಷಕರಿಗೂ ಬಾಲಕರಿಗೂ ಅನಾಯಾಸವಾಗುವಂತೆ ವಿಷಯುವನ್ನು ಸಾಗಿಸುವ ಕ್ರಮಕ್ಕೆ ಪದ್ಧತಿಯನ್ನಬಹುದು. ಟ್ರೇನಿಂಗ ಸಂಸ್ಥೆಗಳಲ್ಲಿ ಶಿಕ್ಷಣಶಾಸ್ತ್ರ ಮತ್ತು ಶಿಕ್ಷಣಕಲೆ ಇವುಗಳ ಜ್ಞಾನವು ವಿದ್ಯಾರ್ಥಿಗಳಿಗೆ ಉಂಟಾಗುವದು. ಇವಲ್ಲದೆ ಪಾಶ್ಚಾತ್ಯ ದೇಶಗಳಲ್ಲಿ ಬಾಲಕರ ಶಿಕ್ಷಣದ ವಿಷಯುವಾಗಿ ಯಶಸ್ವಿಯಾದ ಪ್ರಯೋಗಗಳನ್ನು ಮಾಡಿದ ಫ್ರೊಬೆಲ್, ಮಾಂಟಿಸೋರಿ, ಪಾರ್ಕರ್ಸ್ನ ಮೊದಲಾದವರ ಪದ್ಧತಿಗಳಿಂದ ಅನೇಕ ಉಪಯುಕ್ತವಾದ ಸಂಗತಿಗಳನ್ನು ತಿಳಿದುಕೊಳ್ಳಬೇಕು. ಪರಿಸ್ಥಿತಿಗನುಸರಿಸಿ ಪದ್ಧತಿ ಗಳಲ್ಲಿ ಹೆಚ್ಚುಕಡಿಮೆಯಾಗಬಹುದು. ಪಟ್ಟಣಗಳಲ್ಲಿ ಪಾಲಕರು ಸಾಮಾನ್ಯವಾಗಿ ಸುಶಿಕ್ಷಿತರಿರುವದರಿಂದ ಬಾಲಕರಿಗೆ ಎಷ್ಟೋ ಸಂಗತಿಗಳ ಜ್ಞಾನವಿರುವದು. ಮತ್ತು ಅವರು ಹೆಚ್ಚು ವ್ಯವಸ್ಥಿತವಾಗಿರುವರು. ಆದರೆ ಹಳ್ಳಿಗಳಲ್ಲಿಯ ವಾತಾವರಣವು ಶಿಕ್ಷಣಕ್ಕೆ ಅಷ್ಟು ಅನುಕೂಲವಾಗಿರುವದಿಲ್ಲ. ಪದ್ಧತಿಪೂರ್ವಕವಾಗಿ ಕೊಡುವ ಶಿಕ್ಷಣವು ಫಲಕಾರಿ ಯಾಗಿರುವದರಲ್ಲಿ ಸಂದೇಹವಿಲ್ಲ; ಯಾಕಂದರೆ ಪದ್ಧತಿಯು ಒಂದು ಬಗೆಯ ಹಂಚಿಕೆ ಯಾಗಿರುವದು. ಔಷಧವು ಒಂದೇ ಆಗಿದ್ದರೂ ಅನುಪಾನಗಳಿಂದ ಅದರ ಉಪಯೋ ಗವು ಆಗುವಂತೆ ಶಿಕ್ಷಣವು ಕೂಡ ಬೇರೆ ಬೇರೆ ಪದ್ಧತಿಗಳಿಂದ ಫಲಕಾರಿಯಾಗುವದು.

೩ ಆಳಿಕೆಯ ಸಾಮರ್ಥ್ಯ— ಶಿಕ್ಷಣ ಕಾರ್ಯವನ್ನು ಸಾಗಿಸುವವನು ಕವಿಯಂತೆ ಜನ್ಮಸಿದ್ಧ ಶಿಕ್ಷಕನಾಗಿದ್ದರೆ ಅವನಲ್ಲಿ ಆಳಿಕೆಯ ಸಾಮರ್ಥ್ಯವು ಹುಟ್ಟುಗುಣವಾಗಿರುವದು. ವರ್ಗದಲ್ಲಿ ವ್ಯವಸ್ಥೆಯನ್ನು ಕಾದುಕೊಳ್ಳಲಿಕ್ಕೆ ಈ ಗುಣವು ಅವಶ್ಯಕವಾದದ್ದು. ಗಾಂಭೀರ್ಯ, ಸಹನಶೀಲತೆ, ತಕ್ಕ ಧ್ವನಿ, ಧೈರ್ಯ ಇವೇ ಮೊದಲಾದ ಗುಣಗಳು ಶಿಕ್ಷಕನಲ್ಲಿ ಇದ್ದಹಾಗೆ ಅವನ ಆಳಿಕೆಯ ಸಾಮರ್ಥ್ಯಕ್ಕೆ ಹೆಚ್ಚು ಕಳೆ ಏರುವದು. ಇಂತಹ ಶಿಕ್ಷಕರಿಗೆ ಬಾಲಕರು ಸ್ವಾಭಾವಿಕವಾಗಿ ವಿಧೇಯರಾಗುವರು. ಶಿಕ್ಷಕನು ಎಷ್ಟೇ ಜಾಣನಿದ್ದರೂ ಆಳಿಕೆಯ ಸಾಮರ್ಥ್ಯವೊಂದು ಅವನಲ್ಲಿರದಿದ್ದರೆ ಆ ಜಾಣತನದ ಉಪಯೋಗವಾಗಲಾರದು. ವರ್ಗದ ಸುವ್ಯವಸ್ಥೆಯಿಂದ ಶಾಂತತೆಯು ನೆಲೆಗೊಳ್ಳುವದು. ಶಾಂತತೆಯೇ ಬಾಲಕರ ಅವಧಾನದ ಜೀವಾಳವಾಗಿರುವದು. ಇಂತಹ ಶಿಕ್ಷಕನು ಅವರ ಮನಸ್ಸನ್ನು ಶಿಕ್ಷಣ ಚಾತುರ್ಯದಿಂದ ತನ್ನ ವಶದಲ್ಲಿಟ್ಟುಕೊಂಡು ಶಿಕ್ಷಣದ ರುಚಿಯು ಮಕ್ಕಳಿಗೆ ಹತ್ತುವಂತೆ ಮಾಡುವನು. ಪ್ರಾ. ಶಿಕ್ಷಣದ ಕಾಲವು ಬಹಳ ಮಹತ್ವದ್ದಾಗಿರುವದರಿಂದ ಆಳಿಕೆ ಸಾಮರ್ಥ್ಯವುಳ್ಳ ಶಿಕ್ಷಕನಿಂದ ಬಾಲಕರು ಅನೇಕ ಸದ್ಗುಣಗಳನ್ನು ಕಲಿಯುವರು. ಹುಡುಗರ ಮುಖಲಕ್ಷಣದಿಂದ ಅವರ ಇಂಗಿತವನ್ನು ತಿಳಿದುಕೊಳ್ಳುವ ಜ್ಞಾನವಿದ್ದ ಶಿಕ್ಷಕನ ವರ್ಗದಲ್ಲಿ ಗದ್ದಲವಾಗಲಾರದು. ಸನ್ನೆಯಿಂದಲೇ ವ್ಯವಸ್ಥೆಯನ್ನು ಕಾದುಕೊಂಡರೆ ವ್ಯವಸ್ಥೆಗೆ ಭಂಗವು ಬರುವದಿಲ್ಲ. ಶಿಕ್ಷಕನ ರೂಪವೂ ಉಡುಗೆತೊಡಿಗೆಗಳೂ ವ್ಯವಸ್ಥೆಗೆ ಒಮ್ಮೊಮ್ಮೆ ಕಾರಣವಾಗುತ್ತವೆ. ಹೀಗೆ ಅನೇಕ ಸಂಗತಿಗಳು ಆಳಿಕೆಯ ಸಾಮರ್ಥ್ಯಕ್ಕೆ ಸಂಬಂಧಿಸಿರುವವು. ಯೋಗ್ಯ ಶಿಕ್ಷಕರ ಅನುಕರಣದಿಂದಲೂ ಪ್ರಯತ್ನದಿಂದಲೂ ಈ ಗುಣವನ್ನು ಸಂಪಾದಿಸಬಹುದು.

೪. ಪ್ರೀತಿ— ಶಿಕ್ಷಕನಲ್ಲಿ ಬಾಲಕರ ವಿಷಯವಾಗಿ ಸಂಪೂರ್ಣ ಪ್ರೀತಿಯಿರುವದು ಅವಶ್ಯವಿದೆ. ಚಿಕ್ಕಮಕ್ಕಳು ಮನೆಯಲ್ಲಿ ತಾಯಿತಂದೆ ಬಳಗದವರ ಕೂಡ ಪ್ರೇಮದಿಂದ ಬೆಳೆದು ನಡೆನುಡಿ ಮೊದಲಾದವುಗಳನ್ನು ಕಲಿತಿರುವರು. ಆದದರಿಂದ ಶಾಲೆಯಲ್ಲಿ ಮನೆಯಂತೆಯೇ ಮಮತೆಮಾಡುವ ಶಿಕ್ಷಕನಿದ್ದರೆ ಬಾಲಕರು ಸಂತೋಷದಿಂದ ಶಾಲೆಗೆ ಬರುವರು; ಹೇಳಿದ ಮಾತುಗಳನ್ನು ಕೇಳುವರು; ಕಲಿಸಿದ ಪಾಠಗಳನ್ನು ಕಲಿಯುವರು. ಶುದ್ಧ ಪ್ರೇಮದಿಂದ ನಡೆಯುವ ಗುಣವಿದ್ದವರೇ ಉತ್ತಮ ಶಿಕ್ಷಕರಾಗುವರು.

ಶಾಲೆಗೂ ಮನೆಗೂ ಭೇದ ತೋರಬಾರದೆಂದೇ ಆರಂಭದ ಶಿಕ್ಷಕರು ಸ್ತ್ರೀಯರಿರಬೇಕೆಂದು ಕೆಲವರು ಹೇಳುವರು. ಮಕ್ಕಳ ವಿಷವಾಗಿ ಸ್ತ್ರೀಯರಲ್ಲಿರುವಂತೆ ಶುದ್ಧ ಪ್ರೇಮವು ಶಿಕ್ಷಕನಲ್ಲಿದ್ದರೆ ಸಾಕು; ಶಿಕ್ಷಣ ಕಾರ್ಯವು ಫಲಕಾರಿಯಾಗುವದು. ಚಿಕ್ಕ ಮಕ್ಕಳ ಮನೋವೃತ್ತಿಗಳು ಕೋಮಲವಾಗಿರುವದರಿಂದ ಅವು ವಿಕಾಸಹೊಂದುವಂತೆ ತಕ್ಕರೀತಿಯಿಂದ ಬೆಳೆಯಿಸಲಿಕ್ಕೆ ಶಿಕ್ಷಕನಿಗೆ ಪ್ರೇಮದಂಥ ಮತ್ತೊಂದು ಸಾಧನವು ಯಾವದೂ ಇಲ್ಲವೆಂದು ಹೇಳಬಹುದು. ಇದಕ್ಕೆ ವಿಪರೀತವಾಗಿ ಶಿಕ್ಷಕನು ಶೀಘ್ರ ಕೋಪಿಯೂ ಕಠೋರ ವೃತ್ತಿಯುಳ್ಳವನೂ ಆದರೆ ಶಿಕ್ಷಣವು ಕೆಟ್ಟು ಹೋಗುವದು.

ಆದ್ದರಿಂದ ಶಿಕ್ಷಣದ ಸುಪರಿಣಾಮವು ಶಿಕ್ಷಕನಲ್ಲಿರುವ ಮಕ್ಕಳ ಮೇಲಿನ ಶುದ್ಧ ಪ್ರೇಮವನ್ನೇ ಅವಲಂಬಿಸಿರುವದು. ಜಗತ್ತೇ ಪ್ರೇಮಮಯವಾಗಿರುವದರಿಂದ ಶಾಲೆಗಳು ಜನತೆಯಲ್ಲಿ ಪ್ರೇಮ ಭಕ್ತಿ ವಿಶ್ವಾಸಗಳನ್ನು ಉಂಟುಮಾಡುವ ಸಂಸ್ಥೆಗಳೆಂದು ತಿಳಿದುಕೊಂಡು ಶಿಕ್ಷಣ ಕಾರ್ಯದಲ್ಲಿ ತೊಡಗುವ ಶಿಕ್ಷಕರು ಸಂಪೂರ್ಣ ಯಶಸ್ವಿಗಳಾಗುವರು.

೫. **ವರ್ಣನಾ ಶಕ್ತಿ:**—ವರ್ಣನಾಶಕ್ತಿಯು ಶಿಕ್ಷಕನಲ್ಲಿ ಹೆಚ್ಚು ಹೆಚ್ಚು ಇದ್ದ ಹಾಗೆ ಶಿಕ್ಷಣದ ಅಭಿರುಚಿಯು ಹುಡುಗರಲ್ಲಿ ಉಂಟಾಗುತ್ತ ಹೋಗುವದು. ಬಾಲಕರಿಗೆ ಹೊಸ ಹೊಸ ವಿಷಯಗಳು ತಿಳಿಯುತ್ತ ಹೋದಂತೆ ಅವರ ಬುದ್ಧಿಯು ಹೆಚ್ಚು ತೀಕ್ಷ್ಣವೂ, ಅವರ ಜಿಜ್ಞಾಸೆಯು ಪ್ರಬಲವೂ ಆಗುವದರಿಂದ ಅವರು ವಿದ್ಯೆಯಲ್ಲಿ ಮುಂದುವರಿಯುವರು. ಉದಾ:— ಕಥೆಗಳನ್ನು ಹೇಳುವದಕ್ಕೂ, ಕವಿತೆ ವಾಚನಪಾಠಗಳ

Pg No. 5 to
Mi

ಅವನೇ ನಿಜವಾದ ಶಿಕ್ಷಕನು. ಕಲಿಸುವ ಮಾತು ಸಣ್ಣದೇ ಇದ್ದರೂ ಅದರ ಸ್ಪಷ್ಟ ಜ್ಞಾನವಾಗಲಿಕ್ಕೆಬೇಕು. ಅಂದರೆ ಬಾಲಕರಿಗೆ ಸ್ಪಷ್ಟಜ್ಞಾನದ ರುಚಿಯು ಹತ್ತಲಿಕ್ಕೆ ಬೇಕು. ಯಾರು ನಮ್ಮನ್ನು ಹೆಚ್ಚು ದೂರದವರೆಗೆ ನೋಡಲಿಕ್ಕೆ ಕಲಿಸುವರೋ ಅವರೇ ಖರೇ ಜ್ಞಾನಿಗಳಾಗಿರುವರು. ಹೆಚ್ಚು ಹೆಚ್ಚು ಆಳವಾದ ನಿಜವಾದ ನಿರೀಕ್ಷಣೆಯೇ ಸತ್ಯ ಸಂಗತಿಯ ಶೋಧನೆಯಾಗುವದು. ಯಾವನು ಮೃತ್‌ಪಿಂಡಕ್ಕೆ ಚೈತನ್ಯ ಸ್ವರೂಪಗೊಡುವನೋ ಅವನೇ ಸಾಮರ್ಥ್ಯಶೀಲನಾದ ಆಚಾರ್ಯನು. ಯಾರು ನಮಗೆ ವಿಚಾರದ ರೆಕ್ಕೆಗಳನ್ನು ಕೊಟ್ಟು ಜ್ಞಾನದ ಉಚ್ಚ ವಾತಾವರಣದಲ್ಲಿ ವಿಹರಿಸಲಿಕ್ಕೆ ಕಲಿಸುವರೋ ಅವರೇ ನಮ್ಮ ಗುರುವಾಗಿರುವರು. ಒಂದು ವೇಳೆ ಒಬ್ಬರು ಬುದ್ಧಿಸಂ

8

king

Pg No. 5 to 8

Missing

ಆದ್ದರಿಂದ ಶಿಕ್ಷಣದ ಸುಪರಿಣಾಮವು ಶಿಕ್ಷಕನಲ್ಲಿರುವ ಮಕ್ಕಳ ಮೇಲಿನ ಶುದ್ಧ ಪ್ರೇಮವನ್ನೇ ಅವಲಂಬಿಸಿರುವದು. ಜಗತ್ತೇ ಪ್ರೇಮಮಯವಾಗಿರುವದರಿಂದ ಶಾಲೆಗಳು ಜನತೆಯಲ್ಲಿ ಪ್ರೇಮ ಭಕ್ತಿ ವಿಶ್ವಾಸಗಳನ್ನು ಉಂಟುಮಾಡುವ ಸಂಸ್ಥೆಗಳೆಂದು ತಿಳಿದುಕೊಂಡು ಶಿಕ್ಷಣ ಕಾರ್ಯದಲ್ಲಿ ತೊಡಗುವ ಶಿಕ್ಷಕರು ಸಂಪೂರ್ಣ ಯಶಸ್ವಿಗಳಾಗುವರು.

೫ **ವರ್ಣನಾ ಶಕ್ತಿ:**—ವರ್ಣನಾಶಕ್ತಿಯು ಶಿಕ್ಷಕನಲ್ಲಿ ಹೆಚ್ಚು ಹೆಚ್ಚು ಇದ್ದ ಹಾಗೆ ಶಿಕ್ಷಣದ ಅಭಿರುಚಿಯು ಹುಡುಗರಲ್ಲಿ ಉಂಟಾಗುತ್ತ ಹೋಗುವದು. ಬಾಲಕರಿಗೆ ಹೊಸ ಹೊಸ ವಿಷಯಗಳು ತಿಳಿಯುತ್ತ ಹೋದಂತೆ ಅವರ ಬುದ್ಧಿಯು ಹೆಚ್ಚು ತೀಕ್ಷ್ಣವೂ, ಅವರ ಜಿಜ್ಞಾಸೆಯು ಪ್ರಬಲವೂ ಆಗುವದರಿಂದ ಅವರು ವಿದ್ಯೆಯಲ್ಲಿ ಮುಂದುವರಿಯುವರು. ಉದಾ:— ಕಥೆಗಳನ್ನು ಹೇಳುವದಕ್ಕೂ, ಕವಿತೆ ವಾಚನಪಾಠಗಳ ಭಾವವನ್ನು ತಿಳಿಸುವದಕ್ಕೂ, ಇತಿಹಾಸದಲ್ಲಿಯ ಚರಿತ್ರೆಗಳನ್ನು ವಿವರಿಸಲಿಕ್ಕೂ ಶಿಕ್ಷಕನಿಗೆ ಈ ಶಕ್ತಿಯು ಅವಶ್ಯವಾದ ಸಾಧನವು. ಸವಿಯಾಗಿ ಮಾತಾಡುವ ಶಿಕ್ಷಕರ ಮಾತುಗಳನ್ನು ಆಲಿಸಲು ಬಾಲಕರು ಉತ್ಸುಕರಾಗುವರು. ಆದರೆ ತೊದಲುತ್ತ ಪಾಠಗಳನ್ನು ನಡಿಸುವ ಶಿಕ್ಷಕನ ಪಾಠಗಳು ಬಾಲಕರಲ್ಲಿ ತಲೆಬೇಸರವನ್ನು ಹುಟ್ಟಿಸುವವು. ಆದ್ದರಿಂದ ಸುಲಭವಾದ ಶಬ್ದಗಳಿಂದ ಬಾಲಕರಿಗೆ ಮನೋರಂಜಕವಾಗುವಂತೆ ಪಾಠಗಳನ್ನು ನಡಿಸಲು ಸಮರ್ಥರಾದ ಶಿಕ್ಷಕರು ತಮ್ಮ ಕೆಲಸದಲ್ಲಿ ಹೊಗಳಿಸಿಕೊಳ್ಳುವರು. ಒಮ್ಮೊಮ್ಮೆ ಪಾಠಗಳನ್ನು ವಿಸ್ತರಿಸಿ ಮನೋರಂಜಕವಾಗುವಂತೆ ಹೇಳಬೇಕಾಗುವದು. ಕಠಿಣ ವಿಷಯಗಳ ಶಿಕ್ಷಣವು ಗಹನವಾಗಿರುವದರಿಂದ ಗಣಿತ, ವ್ಯಾಕರಣ ಮೊದಲಾದ ವಿಷಯಗಳ ಪಾಠಗಳನ್ನು ಪೂರಕಪಾಠಗಳಂತೆ ಬೇರೆ ವಿಷಯಗಳಿಗೆ ಸಂಬಂಧಿಸಿಯಾಗಲಿ ಅಥವಾ ಲೋಕವ್ಯವಹಾರಕ್ಕೆ ಹೊಂದಿಸಿಯಾಗಲಿ ಹೇಳಿದರೆ ಹುಡುಗರು ಬೇಸರಿಲ್ಲದೆ ಕಲಿಯುವರು. ಮತ್ತು ಹೆಚ್ಚು ಕಠಿಣ ವಿಷಯಗಳನ್ನು ಒಂದೇಸವನೆ ಅಭ್ಯಾಸಿಸಲಿಕ್ಕೆ ಯೋಗ್ಯರಾಗುವರು. ಶಿಕ್ಷಣಶಾಸ್ತ್ರವು ಶಿಕ್ಷಣದ ದಾರಿಯನ್ನು ತೋರಿಸುವದು. ಅದರಂತೆಯೇ ಶಿಕ್ಷಣದ ಪದ್ಧತಿಯು ವಿಷಯ ನಿರೂಪಣೆಯ ಮಾರ್ಗವನ್ನು ತಿಳಿಸುವದು. ಆದರೆ ಶಿಕ್ಷಣದಲ್ಲಿಯ ತೊಂದರೆಗಳನ್ನು ನೀಗಿಸಲಿಕ್ಕೆ ವರ್ಣನಾಶಕ್ತಿಯೇ ಮುಖ್ಯ ಸಾಧನವು. ಬಾಲಕರಿಗೆ ಬೇಸರ ಬಂದಾಗ ಅಥವಾ ವಿಷಯವು ಕಠಿಣವೆನಿಸಿದಾಗ ಶಿಕ್ಷಕನಲ್ಲಿರುವ ವರ್ಣನಾಶಕ್ತಿಯು ಬಹಳ ಉಪಯೋಗ ಬೀಳುವದು. ಈ ಶಕ್ತಿಯು ಕಲೆಯಾಗಿರುವದು. ವಿಷಯವನ್ನು ಉತ್ತಮರೀತಿಯಿಂದ ವರ್ಣಿಸುವದು ಸಾಮಾನ್ಯ ಕೆಲಸವಲ್ಲ. ಶಿಕ್ಷಕನು ಅನೇಕ ಸಂಗತಿಗಳನ್ನು ಓದಿದವನೂ ಬಹುಶ್ರುತನೂ ಆಗುವದಲ್ಲದೆ ಹೊಸ ಹೊಸ ಪುಸ್ತಕಗಳನ್ನು ಓದುವವನಾಗಬೇಕು. ಶಸ್ತ್ರವೈದ್ಯನಿಗೆ ಶಸ್ತ್ರಗಳು ಅವಶ್ಯವಿದ್ದಂತೆ ಶಿಕ್ಷಕನಿಗೆ ಪುಸ್ತಕಗಳು ಅವಶ್ಯವು. ಶಿಕ್ಷಕನಿಗೆ ಸಂಗೀತದ ಅಭಿರುಚಿ ಇದ್ದರೆ ಚಿಕ್ಕ ಮಕ್ಕಳನ್ನು ಅವನು ಕೂಡಲೆ ವಶಮಾಡಿಕೊಳ್ಳುವನು.

ಅವನೇ ನಿಜವಾದ ಶಿಕ್ಷಕನು. ಕಲಿಸುವ ಮಾತು ಸಣ್ಣದೇ ಇದ್ದರೂ ಅದರ ಸ್ಪಷ್ಟ ಜ್ಞಾನವಾಗಲಿಕ್ಕೆಬೇಕು. ಅಂದರೆ ಬಾಲಕರಿಗೆ ಸ್ಪಷ್ಟಜ್ಞಾನದ ರುಚಿಯು ಹತ್ತಲಿಕ್ಕೆ ಬೇಕು. ಯಾರು ನಮ್ಮನ್ನು ಹೆಚ್ಚು ದೂರದವರೆಗೆ ನೋಡಲಿಕ್ಕೆ ಕಲಿಸುವರೋ ಅವರೇ ಖರೇ ಜ್ಞಾನಿಗಳಾಗಿರುವರು. ಹೆಚ್ಚು ಹೆಚ್ಚು ಆಳವಾದ ನಿಜವಾದ ನಿರೀಕ್ಷಣೆಯೇ ಸತ್ಯ ಸಂಗತಿಯ ಶೋಧನೆಯಾಗುವದು. ಯಾವನು ಮೃತ್‍ಪಿಂಡಕ್ಕೆ ಚೈತನ್ಯ ಸ್ವರೂಪಗೊಡುವನೋ ಅವನೇ ಸಾಮರ್ಥ್ಯಶೀಲನಾದ ಆಚಾರ್ಯನು. ಯಾರು ನಮಗೆ ನಿಚಲರದ ರೆಕ್ಕೆಗಳನ್ನು ಕೊಟ್ಟು ಜ್ಞಾನದ ಉಚ್ಚ ವಾತಾವರಣದಲ್ಲಿ ವಿಹರಿಸಲಿಕ್ಕೆ ಕಲಿಸುವರೋ ಅವರೇ ನಮ್ಮ ಗುರುವಾಗಿರುವರು. ಒಂದು ವೇಳೆ ಒಬ್ಬರು ಬುದ್ಧಿಸಂಪನ್ನರಿದ್ದರೂ ನಮ್ಮ ನಿರ್ಮಲ ದೃಷ್ಟಿಗೆ ಅಡ್ಡಿ ತರುವರಾದರೆ ಅವರು ನಮಗೆ ಶಿಕ್ಷಕರಾಗ ಬಾರರು. ಪ್ರತ್ಯಕ್ಷವಾಗಲಿ ಅಪ್ರತ್ಯಕ್ಷವಾಗಲಿ ಆತ್ಮಕ್ಕೆ ನಿಜವಾದ ಬೋಧನೆಯನ್ನು ಕೊಟ್ಟು ಅಶುದ್ಧವಾದ ಮನಸ್ಸನ್ನು ಶುದ್ಧೀಕರಿಸಿ ಮುಂದಿನ ಜ್ಞಾನಮಾರ್ಗಶೋಧನೆಗೆ ಯಾರು ಪ್ರವೃತ್ತಿಸುವರೋ ಅವರೇ ನಿಜವಾದ ಗುರುಗಳು.

ಮೇಲೆ ವಿವರಿಸಿದಂಥ ಶಿಕ್ಷಕರಾಗಲಿ ಗುರುವಾಗಲಿ ಅಲೌಕಿಕವಾಗಿರುವಸರಿಂದ ದೊರೆಯುವದು ದುರ್ಲಭ. ಸ್ಮಶಾನವು ಯಾವಾಗಲಾದರೊಮ್ಮೆ ಫಾಸ್ಫರಸದ ಪ್ರಕಾಶದಿಂದ ಬೆಳಗಿದಂತೆಯೂ ದಟ್ಟವಾದ ಕಗ್ಗತ್ತಲೆಯ ರಾತ್ರಿಯು ವಿದ್ಯುತ್‍ಪ್ರಕಾಶದಿಂದ ಥಳಥಳಿಸಿದಂತೆಯೂ ಶ್ವಾನಪುಚ್ಛಸರಲತೆಯಂತೆ ಸುಖಾಭಾಸವಾಗಿರುವ ಈ ಜಗತ್ತಿನಲ್ಲಿ ಜಗದೀಶನ ಚೈತನ್ಯಮಯ ಕಲ್ಪನೆಯು ಒಮ್ಮೊಮ್ಮೆ ಚಕಚಕಿಸುತ್ತಲಿರುವದು. ಅದರ ಪ್ರಭಾವದಿಂದಲೇ ಮಾನವೀ ಸಮಾಜದಲ್ಲಿ ಸುಖಶಾಂತಿಗಳು ಕಿಂಚಿತ್ಕಾಲ ನೆಲಸಿರುವವು. ಈಶ್ವರನ ಅಂಥ ಚೈತನ್ಯಮಯಕಲ್ಪನೆಯ ಜ್ಞಾನಮಾಡಿಕೊಡುವದೇ ಗುರುವಿನ ಕರ್ತವ್ಯವಾಗಿರುವದು. ನಿಜವಾದ ಜ್ಞಾನದ ಯೋಗದಿಂದ ಸುಖಶಾಂತಿಗಳನ್ನುಉಂಟುಮಾಡಿ ಕೊಡುವದು ಸಾಮಾನ್ಯ ಶಿಕ್ಷಕರಿಗೆ ಅಸಾಧ್ಯವಾಗಿದ್ದರೂ ಹಿಂದೆ ಆಗಿಹೋದ ಜ್ಞಾನದಾತೃಗಳು ಜಗತ್ತಿಗೆ ಯಾವ ಸಂದೇಶವನ್ನು ಯಾವಕಾಲಕ್ಕೆ ಕಳಿಸಿಕೊಟ್ಟಿರುವರೋ ಅಂಥ ಪರಿಸ್ಥಿತಿಗಳನ್ನು ನಿರ್ಮಿಸಿಕೊಡಲಿಕ್ಕೂ ಅಕಸ್ಮಾತ್ತಾಗಿ ಅಂಥ ಪರಿಸ್ಥಿತಿಗಳು ತಾವಾಗಿ ಬಂದರೆ ಆ ಸಂದೇಶಗಳ ನೆನಪುಮಾಡಲಿಕ್ಕೂ ನಾವು ಸಮರ್ಥರಾಗಬಹುದು. ಜಗತ್ತಿನಲ್ಲಿರುವ ಪವಿತ್ರ, ಸುಂದರ ವಸ್ತುಗಳನ್ನು ನಿರೀಕ್ಷಿಸುವ ರುಚಿಯಿಲ್ಲದ ಮನುಷ್ಯನು ಯೋಗ್ಯ ಶಿಕ್ಷಕನಾಗಲಾರನು. ಅನೇಕರೀತಿಯಿಂದ ಅನೇಕ ಬಗೆಗಳಿಂದ ಹೊಸ ಸಂಗತಿಗಳನ್ನು ಸಂಗ್ರಹಿಸಿದ ಹೊರತು ಎರಡನೆಯವರಿಗೆ ಕಲಿಸುವಬಗೆ ಹೇಗೆ ? ಯಾವನಲ್ಲಿ ಸೃಷ್ಟಿಯ ಮೂಲಭೂತ ಪ್ರಶ್ನೆಗಳನ್ನು ತಿಳಿದುಕೊಳ್ಳುವ ಉತ್ಸುಕತೆಯು ಇರುವದಿಲ್ಲವೋ, ಸದ್ವಿಚಾರಗಳು ಯಾರ ಹೃದಯದಮೇಲೆ ಪರಿಣಮಿಸಲಾರವೋ, ಜ್ಞಾನಿಗಳ ವಿಷಯವಾಗಿ ಯಾರಲ್ಲಿ ಆದರಬುದ್ಧಿಯು ಜನಿಸುವದಿಲ್ಲವೋ, ಶ್ರೇಷ್ಠಭಾವನೆಗಳಿಂದ ಯಾರ ಹೃದಯವು ಉಕ್ಕಿಬರುವದಿಲ್ಲವೋ ಅಂಥವರು ಶ್ರೇಷ್ಠ ಶಿಕ್ಷಕರಾಗುವರೇ ?

ತನ್ನ ಪೂರ್ತಿ ತಾನು, ಎಂದೆನ್ನುವ ಸ್ವಾರ್ಥಪರರೂ, ಕೇವಲ ಐಹಿಕಸುಖದಲ್ಲಿ ಆಸಕ್ತರಾಗಿ ಉಡುಬುಡು ಮಾಡುವವರೂ, ಕಠೋರ ಪರಿಸ್ಥಿತಿಗಳಿಂದ ತಲೆತಿರುಗಿದವರೂ ಉದರ ವಿವಂಚನೆಯಿಂದ ಗ್ರಸ್ತರಾದವರೂ ಜ್ಞಾನದಾನದಂಥ ಪವಿತ್ರ ಕರ್ತವ್ಯಕ್ಕೆ ಅಪಾತ್ರರೇ ಸರಿ. ಪವಿತ್ರಭಾವನೆಗಳಿಂದ ಎರಡನೆಯವರ ಕಿಲ್ಮಿಷ ವಿಚಾರಗಳನ್ನು ತೊಳೆದು ಉದಾತ್ತವಾದ ವಿಚಾರಗಳ ಪ್ರಕಾಶವನ್ನು ಅನ್ಯರ ಮನಸಿನಲ್ಲಿ ಉಂಟುಮಾಡಿ ತಾನೇ ಅವರಾಗಿ ಅವರ ಮನಸ್ಸನ್ನು ಬದಲಿಸಿ ಅವೇಸ್ಥಳಗಳಲ್ಲಿ ಶ್ರೇಷ್ಠಭಾವನೆಗಳ ಬೀಗಳನ್ನು ಬಿತ್ತುವದು ಶ್ರೇಷ್ಠಪ್ರತಿಯ ಮಾದರಿ ಪುರುಷರ ಕಾರ್ಯಗಳಾಗಿವೆ. ಅಂಥ ಮಹನೀಯರೇ ಶಂಕರಾಚಾರ್ಯರು; ಅವರೇ ಪುರಂದರದಾಸ, ಕನಕದಾಸರು!

ಉದಾತ್ತ ವಾಙ್ಮಯಗಳ ಕಾರ್ಯಗಳು ಹಾಗು ಅವುಗಳಿಂದ ಯೋಗ್ಯ ಶಿಕ್ಷಕರ ಮನಸ್ಸಿನಮೇಲೆ ಆಗುವ ಪರಿಣಾಮ

ಸೃಷ್ಟಿಯಲ್ಲಿ ವಿಶಾಲವಾದ ಅಘಟಿತ ಪ್ರಸಂಗಗಳಿಂದ ಬಹುಜನ ಸಮಾಜದ ಮನಸ್ಸಿನ ಮೇಲೆ ವಿಲಕ್ಷಣವಾದ ಪರಿಣಾಮಗಳಾಗುತ್ತವೆ. ಯುದ್ಧಗಳು, ಬರಗಳು, ಭೂಕಂಪಗಳು, ಪೂರಗಳು, ಉತ್ಕಾಪಾತಗಳು (ಸಿಡಿಲು ಮು.) ಇವೇ ಮೊದಲಾದವುಗಳಿಂದ ನಮ್ಮ ಮನಸ್ಸಿನ ಯಾವ ಭಾವನೆಗಳು ಉದ್ದೀಪಿತವಾಗುವವೋ ಅವೇ ಭಾವನೆಗಳನ್ನೇ ಕವಿಗಳೂ, ಶಿಲ್ಪಕಾರರೂ, ಚಿತ್ರಕಾರರೂ ತಮ್ಮ ಕಲ್ಪನಾಸಾಮರ್ಥ್ಯದಿಂದ ಮಾಡಬಲ್ಲರು. ಅವರು ತಮ್ಮ ಕಲ್ಪನಾಸಾಮರ್ಥ್ಯದಿಂದ ಕವಿತೆಗಳಿಂದಾಗಲಿ, ಮಾತುಗಾರಿಕೆಯಿಂದಾಗಲಿ, ಚಿತ್ರಪಟಗಳಿಂದಾಗಲಿ ಬಹುಜನ ಸಮಾಜದ ಪರಿಸ್ಥಿತಿಯನ್ನೇ ಬದಲು ಮಾಡಿ ನೂತನ ಪ್ರಗತಿಯ ಕರ್ತಾರರಾಗುವರು "यदा यदा हि धर्मस्य ग्लानिर्भवति भारत । अभ्युत्थानमधर्मस्य आत्मानं सृजाम्यहम्" ಎಂಬ ಭಗವಂತನ ಉಕ್ತಿಯ ಅರ್ಥವಾದರೂ ಇದೇ ಇರುತ್ತದೆ. ಉದಾತ್ತವಾದ ವಾಙ್ಮಯಗಳ ಪ್ರಕಾಶದಿಂದ ಒಮ್ಮಿಂದೊಮ್ಮೆ ಜನತೆಯ ಚಿತ್ತವು ಬದಲಿಸಿ ವಿಲಕ್ಷಣವಾದ ಕ್ರಾಂತಿಯೊಂದಿಗೆ ಹೊಸಯುಗವೇ ಆಗುವದು. ವ್ಯಾಸಮಹರ್ಷಿಯ ಕಲ್ಪನೆಯ ರಸವು ಶಿವಾಜಿ ಮಹಾರಾಜನ ಹೃದಯದಮೇಲೆ ಬಲವತ್ತರವಾದ ಆಘಾತವನ್ನು ಮಾಡಿ ಅಘಟಿತ ಕಾರ್ಯದ ಬೀಜಾರೋಪಣ ಮಾಡಿತು. ಶ್ರೀರಾಮದಾಸರ ದಾಸಬೋಧಾಮೃತದ ಶ್ರವಣವು ಅದಕ್ಕೆ ಗೊಬ್ಬರ ನೀರುಗಳನ್ನು ಹಣಿಸಿತು. ಶೆಕ್ಸಪೀಯರ ಕವಿಯ ಶೋಕಪರ್ಯವಸಾಯೀ ನಾಟಕಗಳ ವಾಚನದಿಂದ ವಿವಿಧವಾದ ಪ್ರಶ್ನಪರಂಪರೆಗಳು ನಮ್ಮ ಮನಸ್ಸಿನಲ್ಲಿ ಉಂಟಾಗುತ್ತವೆ. ಈ ತರಹದ ಅನೇಕ ವಾಚನಗಳಿಂದ ರವೀಂದ್ರರಂಥ ನೂತನ ಕವಿಗಳೂ ತತ್ವಜ್ಞಾನಿಗಳೂ ಬೆಳಕಿಗೆ ಬರುವರು. ಶಿಕ್ಷಕರು ಇಂಥ ವಾಙ್ಮಯಗಳೊಡನೆ ಸಮರಸವಾಗುತ್ತ ನಡೆದಂತೆ ಅವರ ಹೃದಯಕ್ಕೆ ಸೇರಿ ಜೇರಿ ಆಘಾತಗಳಾಗುವವು. ಆ ಹೊಡೆತಗಳಿಂದ ಹೃದಯಭೂಮಿಗೆ ನವೀನವಾದ ಗೆಯ್ಮೆವಾಗುವದೆಂದು ಹೇಳಿದರೂ ಸಲ್ಲುವದು. ಬೀಳುಬಿದ್ದು ಶಕ್ತಿಯನ್ನು ಸಂಗ್ರಹಿಸಿದ ಭೂಮಿಗೆ ಒಮ್ಮೆಲೆ ಗೆಯ್ತ

ನಾದರೆ ಅಮರ್ಯಾದವಾದ ನೀರನ್ನು ಉಂಡು ಬಹು ದೂರದಾಗಿ ನೆಲ ಹಸಿಯನ್ನು ಪಡೆದು ಉತ್ತಮ ಬೆಳೆಗೆ ತಕ್ಕದ್ದಾಗುವದೋ ಅದೇ ರೀತಿಯಾಗಿ ಮೇಲೆ ಉಲ್ಲೇಖಿಸಿದ ವಾಙ್ಮಯಗಳು ಅವರವರ ಬುದ್ಧಿಗೆ ಅನುಸರಿಸಿ ಮನೋಭೂಮಿಕೆಗಳನ್ನು ಸಿದ್ಧಪಡಿಸುತ್ತವೆ. ಈಪ್ರಕಾರವಾಗಿ ಉದಾತ್ತ ವಾಙ್ಮಯಗಳ ಯೋಗದಿಂದ ನಮ್ಮ ಭಾವನೆಗಳಿಗೆ ನಮಗೆ ತಿಳಿಯದಲೆ ಶಿಕ್ಷಣವು ದೊರೆಯುವದು. ನಮ್ಮಲ್ಲಿ ತಿಳಿಯದಲೆ ಉಂಟಾದ ಭಾವನೆಗಳ ಬದಲಾವಣೆಯನ್ನು ತಿಳಿದು ನಮಗೆ ಹಿಂದುಗಡೆಯಲ್ಲಿ ಆಶ್ಚರ್ಯವಾಗುವದು. ಕರಿಯ ಕಲ್ಲುಗಳ ತಳಹದಿಯಲ್ಲಿ ಸ್ವಚ್ಛವಾದ ನೀರು ಸುಳುಸುಳುಗುಟ್ಟುವಂತೆ ನಮ್ಮ ಹೃದಯದ ಆಳವಾದ ತಳದಲ್ಲಿ ಶ್ರೇಷ್ಠವಾದ ಭಾವನೆಗಳು ಅಡಗಿ ತಮ್ಮ ಕಾರ್ಯವನ್ನು ನಡೆಯಿಸುತ್ತವೆ. ಇದೇನು ಸಾಮಾನ್ಯ ಶಿಕ್ಷಣದ ಫಲವೋ ?

ಅಂತಃಕರಣದ ವಿಕಾಸದ ಪರಿಣಾಮವು:—ಪ್ರಾಸಾದಿಕ ವಾಣಿಗಳ ಅಭ್ಯಾಸದ ಒಲವಿನ ಚಟದಿಂದ ಸ್ಥೂಲದಿಂದ ಸೂಕ್ಷ್ಮದ ಕಡೆಗೆ ಓದುಗರ ವಿಶೇಷವಾಗಿ ಶಿಕ್ಷಕರ ಮನಸ್ಸು ಹರಿಯುತ್ತದೆ. ಯಾವದು ಪವಿತ್ರವಾದದ್ದೂ ಸುಂದರವಾದದ್ದೂ ಇರುತ್ತದೆಯೋ ಅದು ಎಷ್ಟೇ ಸಣ್ಣದು ಇದ್ದರೂ ಅವರ ಕಡೆಗೇ ನಮ್ಮ ಮನಸ್ಸು ಎಳೆಯುತ್ತದೆ. ನಮ್ಮ ಮನಸ್ಸು, ವಾಙ್ಮಯಗಳ ಪರಿಶೀಲನದಿಂದ ಉತ್ತರೋತ್ತರ ಸುಸಂವೇದ್ಯವಾಗುತ್ತದೆ. ಎರಡನೆಯವರ ಪಾಪದ ಕಡೆಗೆ ನಮ್ಮ ಲಕ್ಷವು ಎಳೆಯದೆ ಅವರ ಪುಣ್ಯದ ಕಡೆಗೆ ನಮ್ಮ ಮನಸ್ಸು ಹರಿಯತೊಡಗುವದು. ಅಂದರೆ ವಸ್ತುಗಳ ಸ್ವಾಭಾವಿಕ ದುರ್ಗುಣಗಳ ಕಡೆಗೆ ಅಲಕ್ಷಿಸಿ ಅವುಗಳ ಸದ್ಗುಣಗಳ ಕಡೆಗೆ ನಾವು ಒಲಿಯುತ್ತೇವೆ. ಹುಳುಕಿನ ಕಡೆ ಲಕ್ಷಗೊಡದೆ ದೋಸಿಯ ಕಡೆಗೆ ಚಿತ್ತಗೊಟ್ಟಂತೆ ಈ ಪ್ರಪಂಚದಲ್ಲಿ ಶಿಕ್ಷಕರು ಧರ್ಮರಾಜನಂತೆ ಕೇವಲ ಗುಣಗಳನ್ನೇ ಲಕ್ಷಿಸುವರು. ಈ ಪ್ರಕಾರ ಶಿಕ್ಷಕರ ಪ್ರವೃತ್ತಿಯು ಉದಾತ್ತತೆಯನ್ನು ಪಡೆಯುತ್ತ ಸಾಗುವದು.

ಈ ಪ್ರಕಾರ ಮನಸ್ಸು ದೊಡ್ಡದಾಗುತ್ತ ನಡೆದರೆ ಜಗತ್ತಿನ ಸಂಬಂಧದಿಂದ ಶಿಕ್ಷಕರಲ್ಲಿ ಆದರಬುದ್ಧಿಯು ನೆಲೆಗೊಳ್ಳುವದು. ‘ ಬಹುರತ್ನಾವಸುಂಧರಾ ’ ಎಂಬ ಮಾತಿನ ಪ್ರತ್ಯಕ್ಷತೆಯು ಆಗ ಅವರಿಗೆ ತೋರುತ್ತದೆ. ಮೂಲದಿಂದ ಕಲಿಯುವದು ಬಹಳವದೆಯೆಂದು ಅವರ ಪ್ರತ್ಯಯಕ್ಕೆ ಬರಲಾರಂಭಿಸುವದು. ಪರರ ಮಕ್ಕಳೆಂದರೆ ನಮ್ಮ ವಶಕ್ಕೆ ಕೊಟ್ಟ ಅಮೂಲ್ಯವಾದ ನಿಧಿಯೆಂದು ಅವರು ತಿಳಿಯಲಾರಂಭಿಸುವರು. ಶಿಕ್ಷಕನಾಮದ ಖರೆಯ ಅರ್ಥವು ತಿಳಿದು ಧರ್ಮ, ಪಂಥಗಳ ಅಭಿಮಾನವು ಹೊರಟು ಹೋಗಲಾರಂಭಿಸುವದು. ವಿಶಿಷ್ಟಮತ (ISM) ದ ಪುರಸ್ಕಾರಮಾಡಲು ಅವರು ಮುಂದುವರಿಯುವದಿಲ್ಲ. ಪೂಜ್ಯಭಾವದಿಂದ ಅರ್ಪಿಸಲ್ಪಟ್ಟ ಮಕ್ಕಳ ಶಿಕ್ಷಣದ ಜವಾಬದಾರಿಯ ಭಾರವು ಅವರನ್ನು ಮೇಲೆ ಮೇಲೆ ಚುಚ್ಚಲಾರಂಭಿಸುವದು. ಮಕ್ಕಳ ವಿಕಾಸೋನ್ಮುಖ ಚೈತನ್ಯಮಯ ಜೀವನವು ಅವರ ಮುಂದೆ ನಿರಂತರ ನಿಂತಂತೆ ತೋರಲಾರಂಭಿಸುವದು. ಮಾನವೀ ಜೀವವೆಂದರೆ ದನಕರುಗಳಲ್ಲ; ಯಃಕಶ್ಚಿತವಾಗಿ

ತೋರುವ ಬೇಟಿನಾಯಿಗಳಿಗೆಕೂಡ ತಕ್ಕ ಪಾಲನಪೋಷಣ ಮಾಡಿ ಭಾವೀ ಆಯುಷ್ಕ್ರಮಣದ ಕರ್ತವ್ಯಕ್ಕೆ ತಕ್ಕ ಶಿಕ್ಷಣಕೊಡುವದನ್ನು ಕಣ್ಣುಟ್ಟಿ ನೋಡುತ್ತೇವೆ. ಅಂದ ಮೇಲೆ ಮಕ್ಕಳ ಸಂಸಾರಯಾತ್ರೆಯ ಕರ್ತವ್ಯ ಶಿಕ್ಷಣದ ಆರಂಭದ ಪಾತವು ನಡೆಯುವಲ್ಲಂತೂ ಶಿಕ್ಷಕನ ಜವಾಬುದಾರಿಯು ಎಷ್ಟಿರುವದೆಂಬ ಯೋಚನೆಯು ಅವನ ಮುಂದೆ ನಿಲ್ಲುವದು. ಬಾಲಕರೆಂದರೆ ಗುಲಾಮರಲ್ಲ, ಒತ್ತಾಯದಿಂದ ಇಂತಿಷ್ಟು ಕೆಲಸಕೊಟ್ಟು ಜುಲುಮೆಯಿಂದ ಅಷ್ಟು ಮಾಡಿಸಿಕೊಳ್ಳತಕ್ಕದ್ದಲ್ಲ; ಹಾಗೆ ಮಾಡಿದ್ದೇ ಆದರೆ ಅದು ಮಹಾಪರಾಧವು, ಎಂದು ತನ್ನೊಳಗೆ ತಾನೇ ಶಿಕ್ಷಕನು ಅಂಜುವನು ಇದರಿಂದ ಹಳೆಯ ಪದ್ಧತಿಯಿಂದ ಬಾಲಕರನ್ನು ಹೊಡೆದು ಬಡೆದು ಅಕ್ಷರ ಕಲಿಸುವದು ಎಷ್ಟು ತಪ್ಪಾದದ್ದೆಂಬದು ತಾನೇ ಗೊತ್ತಾಗುವಂತಿದೆ. ಅವರ ಅಂತಃಕರಣ (ಹೃದಯ) ವನ್ನು ಬೆಳಿಸಿದರೆ ಅಂತಃಕರಣದ ವಿಶಿಷ್ಟ ಧರ್ಮಗಳು ಬೆಳೆಯುವವು. ಇಲ್ಲದಿದ್ದರೆ ಕುಗ್ಗುವವು. ಅವನ್ನು ಬೆಳೆಯಿಸುವದೇ ನಮ್ಮ ಆದ್ಯಕರ್ತವ್ಯವೆಂದು ಅವರು ತಿಳಿಯುವರು. ಕೋಮಲ ಬಾಲಕರಿಗೆ ಕೃತ್ರಿಮ ಬಂಧನತೊಡಿಸುವದು ಸರಿಯಲ್ಲ. ಯಾವದೊಂದು ವಿಚಾರದ ಬಲಾತ್ಕಾರದ ಶೃಂಖಲೆಯನ್ನು ಹಾಕುವದೂ ತಕ್ಕದ್ದಲ್ಲ, ಅದು ಒಂದು ಪ್ರಕಾರದ ಹಿಂಸೆಯೆಂದು ಅವರು ಹೇಸುವರು. ಬುದ್ಧಿ, ಭಾವನೆ ಇಂದ್ರಿಯಗಳು ಕೂಡಿದ ಈ ಮನುಷ್ಯನ ಚಿಕ್ಕ ಮೂರುತಿಯು ಬೇರೆಯೆಂದು ತಿಳಿಯದೆ ಅವು ಪೂರ್ಣ ವಿಕಾಸವಾಗಬೇಕೇಹೊರತು ಅವು ಮುಗುಳು ಮುರಿಯಬಾರದೆಂದು ಯೋಚಿಸಲಾರಂಭಿಸುವನು. **ಇದೇ ಶಿಕ್ಷಕನ ನಿಜವಾದ ಧರ್ಮವು.** ಸಾರಾಂಶ ವೇನಂದರೆ ಹೂವಿನಂತೆ ಕೋಮಲವಾದ, ಅದರೊಳಗಿನ ತಂತುಗಳಂತೆ ಸತೇಜವಾದ ನೀರಿನಂತೆ ಪವಿತ್ರವಾದ ಬಾಲಕರನ್ನು ಕಂಡು ಶಿಕ್ಷಕನ ಮನಸ್ಸು ಸಹಜವಾಗಿ ವಿಕಾಸ ಹೊಂದಬೇಕು. ಮಕ್ಕಳ ನಿರ್ಮಲವಾದ ಮನಸ್ಸನ್ನು ಕಂಡು ಆತನ ಅಂತಃಕರಣ ಉಕ್ಕತಕ್ಕದ್ದು. ಅವರ ರಸಮಯವಾದ ಕಳೆಯನ್ನೂ ಕುತೂಹಲಪೂರ್ಣ ನೇತ್ರಗಳನ್ನೂ ಕಂಡು ಶಿಕ್ಷಕನಿಗೆ ಸಮಾಧಾನವಾಗಬೇಕು. ಈ ರೀತಿಯಾಗಿ ಶಿಕ್ಷಕರ ಕಾಲ ಅವರ ಪವಿತ್ರ ಉದ್ಯೋಗದಲ್ಲಿ ಸವೆಯುತ್ತ ನಡೆದಂತೆ ಅವರಿಗೆ ಆನಂದವಾಗಬೇಕು ತದ್ದ್ವಾರವಾಗಿ ಮಕ್ಕಳಿಗೆ ಆನಂದವೂ ಸುಖವೂ ಆಗಬೇಕು. ಇದೇ ಹೊಸ ಶಿಕ್ಷಣ ನಿಜವಾದ ಮರ್ಮವು.

ಪ್ರಕೃತಿವಿಮರ್ಶೆ ಮತ್ತು ತೋಟದ ಕೆಲಸ

ಲೇ:— ಶ್ರೀ. ಬಿ. ಎಸ್. ಪುರೋಹಿತ. ಬಿ. ಎ. ಅ। ವ್ಹಾ. ಟ್ರೇ. ಕಾ. ಧಾರವಾಡ

ಸರಕಾರದವರು ಹತ್ತು ವರ್ಷಗಳ ಹಿಂದೆ ಪ್ರಾಥಮಿಕ ಶಾಲೆಗಳಲ್ಲಿ ಪ್ರಕೃತಿವಿಮರ್ಶೆಯನ್ನು ಇತರ ವಿಷಯುಗಳೊಡನೆ ಕಲಿಸಬೇಕೆಂದು, ಗೊತ್ತುಪಡಿಸಿದರು. ಆದರೆ ಅದರಂತೆ ಈ ವಿಷಯದ ವಿಚಾರವು ಎಷ್ಟೋ ಸಾಲೆಗಳಲ್ಲಿ ನಡೆದಿರುವದಿಲ್ಲ. ೧೯೧೫ನೆಯ ಇಸವಿಯಿಂದ ಟ್ರೇನಿಂಗ ಕಾಲೇಜಿನಲ್ಲಿ ಈ ವಿಷಯುವನ್ನು ಕಲಿತು ಹೋದ ಶಿಕ್ಷಕರು ಅನೇಕರಿರುವರು. ದೊಡ್ಡ ದೊಡ್ಡ ಊರುಗಳಲ್ಲಿರುವ ಫುಲ್‌ಪ್ರಾಯ್ಮರಿ ಸಾಲೆಗಳಲ್ಲಿ ಬಹುತರವಾಗಿ ಒಬ್ಬಿಬ್ಬರಾದರೂ ಇಂತಹ ಶಿಕ್ಷಕರು ಇರುವರು. ಪ್ರಕೃತಿವಿಮರ್ಶೆಯನ್ನು ಮಾಡಿಸುವದು ತಮ್ಮ ಕರ್ತವ್ಯವಾದುದರಿಂದಲೂ ಸಾಲೆಗಳಲ್ಲಿ ಕಲಿಸಬೇಕಾದ ಆವಶ್ಯಕ ವಿಷಯುಗಳಲ್ಲಿ ಇದು ಒಂದಾಗಿರುವದರಿಂದಲೂ ಪ್ರಕೃತಿವಿಮರ್ಶೆ ಮತ್ತು ತೋಟದ ಕೆಲಸ ಇವುಗಳ ಬಗ್ಗೆ ಸರಕಾರದವರು ಗೊತ್ತುಪಡಿಸಿದ ಅಭ್ಯಾಸಪತ್ರಿಕೆಯನ್ನು ಇದರಡಿಯುಲ್ಲಿ ಪ್ರಸಿದ್ಧಪಡಿಸಿದ್ದೇವೆ. ಅದನ್ನು ಎಲ್ಲ ಶಿಕ್ಷಕರು ಮನನಮಾಡಿಕೊಂಡು ಪ್ರತ್ಯಕ್ಷ ನಿರೀಕ್ಷಣೆಯಿಂದ ಸುತ್ತುಮುತ್ತಲಿನ ಸೃಷ್ಟಿಯ ಜ್ಞಾನವನ್ನು ಮಾಡಿಕೊಳ್ಳುವ ಲವಲವಿಕೆಯುನ್ನು ಬಾಲಕರಲ್ಲಿ ಹುಟ್ಟಿಸಲಿಕ್ಕೆ ಹವಣಿಸುವರೆಂದು ನಂಬಿದ್ದೇವೆ.

ಈ ವಿಷಯುವನ್ನು ಕಲಿಸುವದಕ್ಕೆ ಉಪಯೋಗವಾಗುವಂತೆ ಸರಕಾರದವರು ಶಿಕ್ಷಕರಿಗೋಸ್ಕರ ವಿವರವಾದ ಸೂಚನೆಗಳನ್ನೂ ಬರೆಯಿಸಿ ೮—೧೦ ವರ್ಷಗಳ ಹಿಂದೆಯೇ ಪ್ರಸಿದ್ಧಪಡಿಸಿದ್ದಾರೆ. ಅದನ್ನು ಓದಿಕೊಂಡರೆ ಈ ವಿಷಯುವನ್ನೂ ಕಲಿಸುವದಕ್ಕೆ ಅನುಕೂಲವಾಗುವದು. ಈ ಸೂಚನೆಯು ಪತ್ರಿಕೆಗಳು ಮುಂಬೈಯುಲ್ಲಿ ಪ್ರಿಂಟಿಂಗ ಮತ್ತು ಸ್ಟೇಶನರಿ ಸುಪರಿಂಡೆಂಟರ ಕಡೆಗೆ ದೊರೆಯುವವು.

ಪ್ರಕೃತಿವಿಮರ್ಶೆ ಸಾಗಿಸುವದು ಪ್ರಾಥಮಿಕ ಶಾಲೆಗಳಲ್ಲಿ ಸಾಧ್ಯವಾದದ್ದಲ್ಲವೆಂದು ಕೆಲವರ ತಪ್ಪುತಿಳವಳಿಕೆಯಿರಬಹುದು. ಕೆಲವರು ಪ್ರಕೃತಿ ವಿಮರ್ಶೆಯುಂದರೆ ವನಸ್ಪಗಳ ನಿರೀಕ್ಷಣೆಯೊಂದೇ ಎಂದು ತಿಳಿಯುವರು. ತೋಟದ ಕೆಲಸವು ಪ್ರಕೃತಿ ವಿಮರ್ಶೆಯ ಒಂದು ಅಂಗವು. ತೋಟದ ಕೆಲಸವನ್ನೇ ನಾವು ಮುಖ್ಯವೆಂದು ಇಟ್ಟುಕೊಂಡರೆ ವನಸ್ಪತಿಗಳನ್ನು ಬೆಳೆಯಿಸಲು ಅನುಕೂಲವಾಗುವಂತಹ ಭೂಮಿಯೂ ನೀರಿನ ಪೂರೈಕೆಯೂ ಇರಬೇಕಾಗುವದು. ಈ ಎರಡೂ ಅನುಕೂಲತೆಗಳು ಒಟ್ಟಾಗಿ ಇರುವದು ಹಲವೆಡೆಗಳಲ್ಲಿ ಕಂಡುಬರುವದಿಲ್ಲ. ಶಾಲೆಗೆ ಹೊಂದಿ ಸ್ಥಳವು ಇರಬಹುದು, ಅಲ್ಲಿ ನೀರಿನ ಅಭಾವವಿರಬಹುದು. ಒಂದು ಊರಲ್ಲಿ ಶಾಲೆಯ ಬಳಿಯಲ್ಲಿ ನೀರಿನ ವಿಪುಲತೆ ಇರಬಹುದು, ಆದರೆ ಅಲ್ಲಿ ಶಾಲೆಯ ಸಮೀಪದಲ್ಲಿ ಭೂಮಿಯು ಇರುವದಿಲ್ಲ. ಈ ಎರಡೂ ಅನುಕೂಲತೆಗಳಿಲ್ಲದ ಶಾಲೆಗಳೂ ಹಲವು ಇರುವವು. ಆದದರಿಂದ ಇಂತಹ ಪರಿಸ್ಥಿತಿಯಲ್ಲಿ ಸಸ್ಯಗಳ ಜೀವನ ಕ್ರಮದ ನಿರೀಕ್ಷಣವು ಸರಿಯಾಗಿ ಸಾಗಲಾರದೆಂಬ

ದೇನೋ ನಿಜ. ಆದರೆ ಪ್ರಕೃತಿವಿಮರ್ಶೆಯಲ್ಲಿ ಇದೊಂದೇಸಂಗತಿಯು ಸಮಾವೇಶವಾಗಿಲ್ಲ. ಬೇರೆ ಬೇರೆ ಸಜೀವ ಪ್ರಾಣಿಸೃಷ್ಟಿಯನ್ನು ನಿರೀಕ್ಷಿಸಿ, ಅಭ್ಯಾಸಿಸುವದು, ಬೇರೆ ಬೇರೆ ಭೂಪ್ರದೇಶ, ನದಿ, ಕೊಳ್ಳ, ಶಿಲಾಸ್ತರ ಮುಂತಾದವನ್ನು ನಿರೀಕ್ಷಿಸುವದು, ಆಕಾಶ ದಲ್ಲಿಯ ಸೂರ್ಯ ಚಂದ್ರ ನಕ್ಷತ್ರ ಗಾಳಿಯ ಪ್ರವಾಹ, ಹವೆಯ ಉಷ್ಣಮಾನ, ಮೋಡ ಮಳೆ, ಮಂಜು ಇಬ್ಬನಿ ಇವುಗಳ ನಿರೀಕ್ಷಣೆಯು, ಚಂದ್ರನ ಕಲೆಗಳು, ಇಂದ್ರಧನುಷ್ಯ ಮೃಗಜಲ, ಕೋಲಿನನೆರಳಿನ ನಿರೀಕ್ಷಣೆಯಿಂದ ದಿಕ್ಕು ತಿಳಿದುಕೊಳ್ಳುವದು, ಆಯಾ ಊರುಗಳ ಅಕ್ಷಾಂಶವನ್ನು ಗೊತ್ತುಮಾಡಿಕೊಳ್ಳುವದು, ಗ್ರಹಣ ಮುಂತಾದ ಸೃಷ್ಟಿ ಚಮತ್ಕಾರಗಳ ನಿರೀಕ್ಷಣೆ ಇವೆಲ್ಲವೂ ಪ್ರಕೃತಿವಿಮರ್ಶೆಯೇ ಸರಿ. ಪ್ರಕೃತಿವಿಮ ರ್ಶೆಯು ಇಷ್ಟು ವ್ಯಾಪಕವಾದ ಸ್ವರೂಪವುಳ್ಳದ್ದಿರುವದು. ಇವುಗಳಲ್ಲಿ ಹಲವು ವಿಷಯು ಗಳ ನಿರೀಕ್ಷಣೆಗೆ ವಿಶೇಷ ಅನುಕೂಲತೆಯು ಅಷ್ಟೊಂದು ಅವಶ್ಯವಿಲ್ಲ.

ಸಸ್ಯಗಳ ನಿರೀಕ್ಷಣೆಗೆ ಕೂಡ ವಿಶೇಷ ಅನುಕೂಲತೆಯಿಲ್ಲದೆ ಸಾಗಬಹುದು ಶಾಲೆಯ ಬಳಿಯಲ್ಲಿ ಸ್ಥಳವಿಲ್ಲದ ಹಲವೆಡೆಗಳಲ್ಲಿ ಹೊಲದೊಳಗೆ ಬೀಜಗಳನ್ನು ಹಾಕಿ ಬೆಳಿಸಿದ ಪೈರುಗಳ ನಿರೀಕ್ಷಣೆಮಾಡಿಸಬಹುದು. ನೀರು ಇರುವಲ್ಲಿ ತಕ್ಕ ಅನುಕೂಲತೆಗಳನ್ನು ಬದಗಿಸಿಕೊಂಡು ಶಿಕ್ಷಕರು ವನಸ್ಪತಿಗಳ ನಿರೀಕ್ಷಣೆ ಯನ್ನು ಸಾಗಿಸುವದು ಸಾಧ್ಯವಿದೆ. ಆದರೆ ನೀರೇ ಇಲ್ಲದ ಊರುಗಳಲ್ಲಿ ಈ ಕೆಲಸವು ಸಾಧ್ಯವಾಗಲಾರದಾದರೂ ಅವರು ಮಳೆಗಾಲದಲ್ಲಿಯಾದರೂ ಹಲವು ಸಸ್ಯಗಳನ್ನೂ ಬೆಳೆಯಿಸಿ ನಿರೀಕ್ಷಣೆಗೆ ಅನುಕೂಲಮಾಡಿಕೊಳ್ಳಬಹುದು. ನೀರು, ಶಾಲೆಯ ತೋಟಕ್ಕೆ ಭೂಮಿ ಇವುಗಳ ಅನುಕೂಲತೆಯು ಸ್ವಲ್ಪವೂ ಇಲ್ಲದಂಥ ಊರು ಗಳಲ್ಲಿ ಪೈರು ಬೆಳೆದು ನಿಂತಾಗ ಹೊಲ ಇಲ್ಲವೆ ತೋಟ ಇವುಗಳಿಗೆ ಬಾಲಕರನ್ನು ನಿರೀಕ್ಷಣೆಗಾಗಿ ಕರೆದುಕೊಂಡು ಹೋಗಬಹುದು. ಸ್ವಾಭಾವಿಕವಾಗಿ ಬೆಳೆದಿರುವ ಗಿಡ ಮರಗಳನ್ನೂ ಬಳ್ಳಿಗಳನ್ನೂ ತೋರಿಸಿ ಅವುಗಳ ಅವಯವ ಮತ್ತು ಕಾರ್ಯಗಳ ಜ್ಞಾನ ವನ್ನು ಮಾಡಿಕೊಡಬಹುದು. ಬೆಕ್ಕು, ನಾಯಿ, ಮೊಲ, ಪಾರಿವಾಳ, ಕೋಳಿ, ಕಪ್ಪೆ ಮೀನು ಮೊದಲಾದ ಪ್ರಾಣಿ ಸೃಷ್ಟಿಯ ನಿರೀಕ್ಷಣೆಗೂ ಕೋಲಿನ ನೆರಳಿನ ಸಹಾಯ ದಿಂದ ಸೂರ್ಯನ ಸ್ಥಾನದ ನಿರೀಕ್ಷಣೆ, ಚಂದ್ರನ ಕಲೆ, ರಾಶಿ ನಕ್ಷತ್ರಗಳ ಉದಯಾಸ್ತ ಗಳ ನಿರೀಕ್ಷಣೆ, ಹವೆಯ ಉಷ್ಣಮಾನ, ಮಳೆ ಮೊದಲಾದವುಗಳಿಗೂ ನೀರು ಹಾಗು ಭೂಮಿಯ ಅವಶ್ಯಕತೆಯಿಲ್ಲ. ಈ ವಿಷಯುಗಳ ನಿರೀಕ್ಷಣೆಗೆ ಬೇಕಾಗುವ ಕೆಲವು ಉಪ ಕರಣೆಗಳಿಗಾಗಿ ಸ್ವಲ್ಪ ದ್ರವ್ಯವು ಬೇಕಾಗುವದೇನೋ ನಿಜ. ಆದರೆ ಅದು ಬಹು ಸ್ವಲ್ಪ ವಾದುದೆಂಬುದನ್ನು ಶಿಕ್ಷಕರು ಮರೆಯಬಾರದು.

ಸಾಲೆಗೆ ಹೊಂದಿ ಅನುಕೂಲವಾದಂಥ ತೋಟವಿರುವದು ಅತಿ ಮಹತ್ವದ ಸಂಗ ತಿಯು. ಆದರೆ ಅಂಥದು ಇಲ್ಲದೆ ಇರುವಾಗ ಶಕ್ಯವಿದ್ದಷ್ಟು ಸಸ್ಯ ಪ್ರಾಣಿ ಮೊದಲಾದ ಮೇಲೆ ವಿವರಿಸಿದ ಅನೇಕ ಸಂಗತಿಗಳ ನಿರೀಕ್ಷಣೆ ಮಾಡಿಸದೆ ಸುಮ್ಮನೆ ಕುಳಿತರೆ ನಿಜ ವಾದ ಶಿಕ್ಷಣದ್ವಾರಗಳೆನಿಸುವ ಪಂಚೇಂದ್ರಿಯಗಳಿಗೆ ಬೀಗಮುದ್ರೆಮಾಡಿದಂತಾಗುವ

ದೆಂಬದನ್ನೂ ಶಿಕ್ಷಕರು ಮರೆಯಲಾಗದು. ಆದ್ದರಿಂದ ಎಲ್ಲ ಶಿಕ್ಷಕರು ಪ್ರಕೃತಿವಿಮರ್ಶೆ ಮತ್ತು ತೋಟದ ಕೆಲಸದ ಸಾಧ್ಯವಿದ್ದ ಭಾಗವನ್ನಷ್ಟೇ ವಿಮರ್ಶೆಗಾಗಿಟ್ಟು ಕೊಂಡು ಅವುಗಳ ಸರಿಯಾದ ನಿರೀಕ್ಷಣೆಯನ್ನು ಬಾಲಕರಿಂದ ಮಾಡಿಸಬೇಕು. ಚಿಕ್ಕ ಮಕ್ಕಳು ತಮ್ಮ ನಿರೀಕ್ಷಣ ಶಕ್ತಿಯನ್ನು ಬೆಳೆಯಿಸಿಕೊಂಡು ಪಂಚೇಂದ್ರಿಯಗಳ ಮುಖಾಂತರವಾಗಿ ಜ್ಞಾನವನ್ನು ಸಂಪಾದಿಸಿಕೊಳ್ಳುವಂಥ ಮುಖ್ಯ ತತ್ವವನ್ನು ಆಚರಣೆಯಲ್ಲಿ ತರುವದು ಈ ಪ್ರಕೃತಿ ಪಾಠಗಳ ಮುಖ್ಯವಾದ ಧ್ಯೇಯವಾಗಿರುವದು.

ಪ್ರಕೃತಿ ವಿಮರ್ಶೆಯ ಅಭ್ಯಾಸ ಪತ್ರಿಕೆ

ಬಾಲಕರ ವರ್ಗ

(ಅ) ಹೊಲದಲ್ಲಿ ಅಥವಾ ತೋಟದಲ್ಲಿ ಕಂಡುಬರುವ ಸಾಮಾನ್ಯ ಗಿಡಬಳ್ಳಿಗಳ ಹಾಗೂ ಪಶು ಪಕ್ಷಿಗಳ ಸಂಭಾಷಣದ ಪಾಠಗಳು.

ತೋಟದ ಕೆಲಸ

ಬಾಲಕರು ತಮ್ಮ ಮನೆಯಿಂದ ಸಣ್ಣ ಹರಿವಾಣಗಳನ್ನಾಗಲಿ ಪರಟಿಗಳನ್ನಾಗಲಿ ತಂದು, ಅವುಗಳಲ್ಲಿ ಮಣ್ಣು ತುಂಬಿ, ಬೀಜಗಳನ್ನು ಹಾಕಿ, ಅವುಗಳನ್ನು ಕಾಪಾಡುವದು. ಹಾಗೂ ಸಾಲೆಯ ಸಾಮಾನ್ಯ ತೋಟದಲ್ಲಿ ಅಥವಾ ವರ್ಗದಲ್ಲಿ ನಿಯಮಿಸಿಕೊಟ್ಟ ಮಡಿಗಳಲ್ಲಿ ಶಿಕ್ಷಕರ ಸಂಗಡ ಕಳೆ ತೆಗೆಯುವದು. ಮತ್ತು ಕಲ್ಲು ಆರಿಸುವದು. ಒಣಗಿದ ಎಲೆ ಮುಂತಾದವುಗಳನ್ನು ಒಟ್ಟುಗೂಡಿಸುವದು.

೧ನೇ ಇಯತ್ತೆ

(ಅ) ಗಿಡಗಳಿಗೆ ಜೀವವಿದೆಯೆಂದೂ ಅವು ಬೆಳೆಯುತ್ತವೆಯೆಂದೂ, ವಿದ್ಯಾರ್ಥಿಗಳಿಗೆ ಮನವರಿಕೆಯಾಗುವಂತೆ ಮಾಡುವದಕ್ಕಾಗಿ ಶಾಲೆಯ ತೋಟದೊಳಗಿನ ಅಥವಾ ಅದರ ಹತ್ತರ ಇರುವ ಗಿಡಗಳ ಭಾಗಗಳನ್ನು ಪರೀಕ್ಷಿಸುವದು. ಬೀಜಗಳಿಂದ ಸಸಿಗಳು ಹೇಗೆ ಆಗುತ್ತವೆಂಬದನ್ನು ನೋಡಲಿಕ್ಕೆ ಸಿಗುವಂತೆ ಹಸಿಯಾದ ಉಸುಕಿನಲ್ಲಿ ಬೀಜಗಳನ್ನು ಬಿತ್ತುವದು.

ಸಿಗುವಂತಿರುವ ಐದಾರು ಗಿಡಬಳ್ಳಿಗಳ ಮತ್ತು ಅವುಗಳ ಕೆಲ ಕೆಲವು ಬೇರೆ ಬೇರೆ ಭಾಗಗಳ ಎಂದರೆ ಬೇರು, ಕಾಂಡ, ಎಲೆ, ಹೂವು, ಕಾಯಿ, ಇವುಗಳ ನಿರೀಕ್ಷಣೆ ಮಾಡುವದು.

(ಬ) ೧— ಎಮ್ಮೆ ಮತ್ತು ಆಕಳು; ಅಥವಾ ಕೋಣ ಮತ್ತು ಎತ್ತು.

೨— ಆಡು ಮತ್ತು ಕುರಿ

೩— ಗಿಳಿ ಮತ್ತು ಕಾಗೆ.

ಇವುಗಳ ತುಲನೆ ಮಾಡುವದು ಮತ್ತು ಇವುಗಳೊಳಗಿನ ಭೇದ ತಿಳಿದುಕೊಳ್ಳು ವದು.

(ಕ) ಆಕಾಶ ಮತ್ತು ಅದರಲ್ಲಿ ಕಾಣುವ ವಸ್ತುಗಳು—

ಮುಗಿಲು, ಮೋಡಗಳು ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು ಮಳೆಯ ನೀರು; ಅದು ಎಲ್ಲಿಂದ ಬರುತ್ತದೆ; ಎಲ್ಲಿ ಹೋಗುತ್ತದೆ; ಮತ್ತು ಅದರಿಂದ ಏನು ಪ್ರಯೋಜನ ವಾಗುತ್ತದೆ; ಎಂಬದು.

ತೋಟದ ಕೆಲಸ

ಕುರ್ಚಿಗೆಯ ಉಪಯೋಗ; ಮತ್ತು ವರ್ಗದ ಮಡಿಯೊಳಗಿನ ಮೆತ್ತಗಾದ ನೆಲ ದಲ್ಲಿ ಆಗಿಯುವ ಅಭ್ಯಾಸ. ಆರುಏಳು ಸಸಿಗಳನ್ನು ಬೆಳೆಯಿಸುವದು; ಮತ್ತು ಸಾಮಾ ನ್ಯವಾಗಿ ಶಿಕ್ಷಕನ ಹೇಳಿಕೆಯಂತೆ ಕೆಲಸಮಾಡುವದು. ವಾಡಿಕೆಯಾಗಿ ಒಂದೊಂದು ಸರ ತಿಗೆ ೧೫ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಕೆಲಸ ಮಾಡಬಾರದು.

೨ನೇ ಇಯತ್ತೆ

(ಅ) ಆಯಾ ಸ್ಥಳಗಳಲ್ಲಿ ಹುಟ್ಟುವ ೧೫ ಗಿಡಬಳ್ಳಿಗಳ ಮತ್ತು ಅವುಗಳ ಮುಖ್ಯ ಮುಖ್ಯ ಭಾಗಗಳ ನಿರೀಕ್ಷಣೆ ಮಾಡಿ ಅದನ್ನು ಅರಿತುಕೊಳ್ಳುವದು. ಉದಾಹರ ಣಾರ್ಥವಾಗಿ:-ಸಜ್ಜೆ, ಜೋಳ, ಗೋಧಿ, ಬತ್ತ, ಕಬ್ಬು, ಮುಕ್ಕೆ ಜೋಳ, ಮಾವು, ಪೇರಲ, ದಾಳಿಂಬ, ಉತ್ತತ್ತಿ, ತೆಂಗು, ನಿಂಬೆ, ತೊಗರೆ, ಕಡಲೆ, ಅವರೆ, ಬಟ್ಟಗಡಲೆ, ನೆಲಗಡಲೆ, ಗುಲಾಬಿ, ಜಾಜಿಮಲ್ಲಿಗೆ, ಸೂರ್ಯಪಾನ, ಗುಲ್‌ಮೋಹರ, ಚೆಂಡುಮಲ್ಲಿಗೆ, ತುಳಸಿ, ಸವತೆ, ಕಲ್ಲಂಗಡಿ, ಕುಂಬಳ.

(ಬ) ಐದು ಸಾಮಾನ್ಯ ಪಶುಪಕ್ಷಿಗಳ ಆಕಾರ ಮತ್ತು ಗುಣಧರ್ಮ ಇವುಗಳ ನಿರೀಕ್ಷಣೆ ಮಾಡುವದು, ಉದಾ:-ಬಾತುಗೋಳಿ, ಕೋಳಿ, ಗುಬ್ಬಿ, ಪಾರಿವಾಳ, ಕುದುರೆ, ಕತ್ತೆ, ಒಂಟೆ, ಬಸವನ ಹುಳ.

(ಕ) ಕೋಲಿನ ನೆರಳು ಬೀಳುವ ದಿಕ್ಕನ್ನು ನೋಡಿ ಅವುಗಳ ಮೇಲಿಂದ ಸೂರ್ಯನ ಬೇರೆ ಬೇರೆ ಸ್ಥಾನಗಳ ನಿರೀಕ್ಷಣೆ ಮಾಡುವದು. ಆಕಾಶದಲ್ಲಿ ಸೂರ್ಯನು ಇರುವ ಸ್ಥಾನವನ್ನು ನೋಡಿ ಅದರ ಮೇಲಿಂದ ಹೊತ್ತು ಹೇಳುವದು. ಗಾಳಿಯು ಯಾವ ದಿಕ್ಕಿನಿಂದ ಬೀಸುವದೆಂಬದನ್ನು ಗೊತ್ತು ಹಚ್ಚುವದು.

ತೋಟದ ಕೆಲಸ

ಹುಡುಗರು ಮಾದರಿಯ ೩'×೩' ಮಡಿಗಳಲ್ಲಿ ಶಿಕ್ಷಕನು ಕೆಲಸ ಮಾಡುವದನ್ನು ನೋಡಿಕೊಳ್ಳುವದು. ಆ ಮೇಲೆ ಇಬ್ಬರು ಹುಡುಗರು ತಮ್ಮ ಮಡಿಯಲ್ಲಿ ಅದೇ

ಕೆಲಸವನ್ನು ಮಾಡುವದು. ಶಕ್ಯವಿದ್ದಷ್ಟುಮಟ್ಟಿಗೆ ಪ್ರಕೃತಿವಿಮರ್ಶೆಯ ಅಭ್ಯಾಸ ಕ್ರಮಕ್ಕೆ ಬೇಕಾದ ಎಲ್ಲ ಸಸ್ಯಗಳನ್ನು ಬೆಳೆಯಿಸುವದು.

೩ನೆಯ ಇಯತ್ತೆ

(ಅ) ಗಿಡದಬೇರು, ಮತ್ತು ಗಿಡಕ್ಕೆ ಅದರಿಂದಾಗುವ ಉಪಯೋಗ. ಇವು ಗಳಲ್ಲಿ ತೊಡಕು ಬೇರು, ಕಾಯಿಬೇರು, ಮತ್ತು ಗಡ್ಡೆಬೇರು, ಇವುಗಳೊಳಗಿನ ಭೇದ ಹೇಳಬೇಕು.

ದೇಟು ನೀಟಾದದ್ದು, ನೆಲದ ಮೇಲೆ ಹೋಗುವಂಥದು, ಗಿಡ ಮುಂತಾದವು ಗಳ ಮೇಲೆ ಏರುವಂಥಾದ್ದು, ನೆಲದೊಳಗೆ ಹೋಗುವಂಥಾದ್ದು ಮುಂತಾದ ಭಿನ್ನ ಭಿನ್ನ ಪ್ರಕಾರಗಳು; ಅವುಗಳ ಉಪಯೋಗಗಳು, ಗಣ್ಣುಗಳುಳ್ಳ ಅಥವಾ ಗಣ್ಣುಗಳಿಲ್ಲದ ದೇಟುಗಳ ಅಡ್ಡಕಡಿತದ ನಿರೀಕ್ಷಣೆ.

ಎಲೆಗಳು—ಹುಡುಗರಿಗೆ ತರತರದ ಎಲೆಗಳನ್ನು ಒಟ್ಟುಗೂಡಿಸಲಿಕ್ಕೆ ಹೇಳಿ ಅವುಗಳೊಳಗಿನ ಭೇದವನ್ನು ತೋರಿಸಲಿಕ್ಕೆ ಕಲಿಸುವದು.

(ಬ) ಹುಡುಗರಿಗೆ ಗೊತ್ತಿದ್ದ ಪಕ್ಷಿಗಳ ಸಾಮಾನ್ಯ ಗುಣಧರ್ಮಗಳು—ಮತ್ತು ಅವುಗಳ ಸ್ವಭಾವಗಳು. ಪಕ್ಷಿಗಳು ಇರುವ ಸ್ಥಳ, ತಿನ್ನುವ ಆಹಾರ, ಅವುಗಳ ಚುಂಚು ಮತ್ತು ನಖ ಇವುಗಳ ಮೇಲಿಂದ ಅವುಗಳ ವರ್ಗೀಕರಣಮಾಡುವದು.

(ಕ) ಪ್ರತಿದಿನ ಚಂದ್ರನ ಸ್ಥಾನದಲ್ಲಿಯೂ ಆಕಾರದಲ್ಲಿಯೂ ಆಗುವ ಭೇದ ಗಳನ್ನು ನಿರೀಕ್ಷಣೆಮಾಡುವದು. ಮೋಡಗಳು, ರಚನೆ ಮತ್ತು ಪ್ರಕಾರಗಳು (ಜಡ ಮತ್ತು ಹಗುರು) ಗಾಳಿಯಿಂದ ಮೋಡಗಳಮೇಲೆ ಆಗುವ ಪರಿಣಾಮಗಳು, ಬಂಡೆಗಳು ಮತ್ತು ಭೂಮಿ, ಹರಿಯುವನೀರಿನಿಂದ ಅವುಗಳಮೇಲೆ ಆಗುವ ಪರಿಣಾಮ.

ತೋಟದ ಕೆಲಸ

ನೆಲವನ್ನು ಹಸನಮಾಡುವದು ಹೇಗೆಂಬದನ್ನು ಎಲ್ಲರಿಗೂ ಒಟ್ಟಿಗೆ ಕಲಿಸುವದು. ಶಕ್ಯವಿದ್ದಲ್ಲಿ ಮೂರುಮೂರು ಹುಡುಗರ ಸಂಗಡಗಳು ೫'×೭' ಮಡಿಗಳಲ್ಲಿ ಒಟ್ಟಿಗೆ ಕೆಲಸಮಾಡಿ ಪ್ರಕೃತಿವಿಮರ್ಶೆಗೆ ಬೇಕಾಗುವ ಸಸಿಗಳನ್ನು ಬೆಳೆಯಿಸುವದು. ಮತ್ತು ಅವು ಯಾವವೆಂದರೆ, ''ಮೂಲಂಗಿ'' ಗಜ್ಜರಿ, ಮುಂತಾದ ಮೂಲಗಳು ; ಬಟಾಟೆ, ಅಲ್ಲ, ಅರಿಸಿಣ, ಉಳ್ಳೇಗಡ್ಡಿ, ಗೆಣಸು, ಮುಂತಾದ ಕಂದಗಳು; ಮೆಂತೆ, ಶಾವಿ, ರಾಜ ಗಿರಿ ಮುಂತಾದ ತೊಪ್ಪಲ ಪಲ್ಲೆಗಳು; ಮೆಣಸಿನಕಾಯಿ, ಬದನೇಕಾಯಿ, ಸವತೀಕಾಯಿ ಮುಂತಾದ ಕಾಯಪಲ್ಲೆಗಳು.

೪ನೆಯ ಇಯತ್ತೆ

(ಅ) ಪ್ರಕಾಶ ಮತ್ತು ನೀರು ಇವುಗಳಿಗೂ, ಎಲೆಗಳಿಗೂ ಇರುವ ಸಂಬಂಧ, ಹೂವಿನಭಾಗಗಳು ಮತ್ತು ಅವುಗಳ ಉಪಯೋಗಗಳು.

ಹಣ್ಣುಗಳು, ರಸಫಳ್ಳ ಮತ್ತು ಒಣವು. ಹಣ್ಣುಗಳ ಭಾಗಗಳು. ಬೀಜದಿಂದ ಸಸಿಯು ಹೇಗಾಗುತ್ತವೆಂಬದನ್ನು ತೋರಿಸುವ ಸಾದಾ ಪ್ರಯೋಗಗಳು.

(ಬ) ನಿರೀಕ್ಷಣದ ಸಲುವಾಗಿ ಇಟ್ಟ ಯಾವದಾದರೊಂದು ಜಂತು (ಉದಾಹರಣೆ-ಪತಂಗ ಅಥವಾ ರೇಶಿಮೆಯುಹುಳ.) ಮತ್ತು ಕಪ್ಪೆ ಇವುಗಳ ಜೀವನಕ್ರಮು-ನೀರಲ್ಲಿ ವಾಸವಾಗಿರಲಿಕ್ಕೆ ಮೀನದ ಮೈಯು ಹೇಗೆ ಯೋಗ್ಯವಿರುತ್ತದೆಂಬದನ್ನು ಅದರ ಭಾರ; ಆಕಾರ, ಕವಚ, ಮೈಯ ಉಷ್ಣತೆ, ಮತ್ತು ಚಲನವಲನ ಇವುಗಳಿಂದ ತಿಳಿಯುವದು.

(ಕ) ಎಲ್ಲಕ್ಕೂ ಹೆಚ್ಚು ಚಕಚಕಿಸುವ ತಾರಾಗಣಗಳ, ಹಾಗು ಇಷ್ಟವಿದ್ದಲ್ಲಿ ಕೆಲವು ನಕ್ಷತ್ರಗಳ ಗುರುತು ಹಿಡಿಯುವದು. ನೀರು, ಉಷ್ಣತೆ, ಚಳಿ ಮತ್ತು ಗಾಳಿ ಇವುಗಳಿಂದ ಬಂಡೆಗಳಮೇಲೂ ಭೂಮಿಗಳಮೇಲೂ ಉಂಟಾಗುವ ಪರಿಣಾಮುಗಳು.

ತೋಟದ ಕೆಲಸಗಳು

ಹೂಗಳ ಬೀಜಗಳಿಗಾಗಿ ಪೊಳ್ಳುಪೆಟ್ಟಿಗೆ ಅಥವಾ ಕುಂಡೆ ಇವುಗಳನ್ನು ಹೇಗೆ ತಯಾರಮಾಡುತ್ತಾರೆಂಬದನ್ನು ಎಲ್ಲರಿಗೂ ಒಟ್ಟಿಗೆ ಕಲಿಸುವದು. ಗೊಬ್ಬರಗಳ ಮತ್ತು ಗೊಬ್ಬರಹಾಕುವ ರೀತಿಗಳ ಅಭ್ಯಾಸ. ; ಎಲೆಯು ತೋಟಕ್ಕೆ ಶೋಭೆತರುವ ಬೇಲಿ ಮುಂತಾದವುಗಳ ಬಗ್ಗೆ ಎಚ್ಚರ ತೆಗೆದುಕೊಳ್ಳುವದು. ಟೊಂಗೆಗಳನ್ನು ಕಡಿದು, ಹಾಗೂ ಗಡ್ಡೆಗಳನ್ನು ವಿಭಾಗಿಸಿ ಸಸ್ಯಗಳನ್ನು ಹೆಚ್ಚಿಸುವದು; ಹಾಗು ನೇಜಿನಡುವದು; ಒಂದು ಕುಂಡದಿಂದ ಮತ್ತೊಂದು ಕುಂಡದಲ್ಲಿ ಹಾಕುವದು.

೫ನೆಯ ಇಯತ್ತೆ

(ಅ) (೧) **ಗಾಳಿ:** ಸಣ್ಣ ಪ್ರಾಣಿಗಳ ಮುಖಾಂತರ ಕೇಸರಗಳ ಸಂಯೋಗ.

(೨) ಫಲವತ್ತಾಗಿ ಮಾಡೋಣ.

(೩) ಬೆಳವಣಿಗೆ.

(೪) ಬೀಜ ಮೊಳೆಯುವ ಕ್ರಮು.

(೫) ಬೀಜಗಳ ಪ್ರಸರಣೆಯ ಅತಿ ಸಾಮಾನ್ಯವಾದ ರೀತಿಗಳು.

ಬೇರೆಬೇರೆ ಜಾತಿಯ ಗಿಡಬಳ್ಳಿಗಳು ಎಲ್ಲೆಲ್ಲಿ ನೆಲೆಗೊಳ್ಳುತ್ತವೆಂಬದು. ಹೂಬಿಡುವ ಮತ್ತು ಬಿಡದಿರುವ ವನಸ್ಪತಿಗಳೊಳಗಿನ ಭೇದ. ತಾವೆ, ಹಾವಸೆ, ಮತ್ತು ಅಳಂಬೆ ಇವುಗಳನ್ನು ಹೂಬಿಡದಂಥ ವನಸ್ಪತಿಗಳ ಉದಾಹರಣೆಗಾಗಿ ತೆಗೆದುಕೊಳ್ಳತಕ್ಕದ್ದು.

ಮಾವು, ಲೋರಾಂಥಸ್ (ಬಂದರಿಕೆ) ಮತ್ತು ಅಳಂಬೆ ಇವುಗಳ ಪೋಷಣಕ್ರಿಯೆ.

(ಬ) ಜೇನುಹುಳ ಅಥವಾ ಇರುವೆ, ನೊಣ. ಅಥವಾ ಗುಂಗಾಡು, ರೆಕ್ಕೆಹುಳ ಮತ್ತು ಮಳೆಹುಳ ಇವುಗಳ ಸಾಮಾನ್ಯ ಜ್ಞಾನ (ಆಕ್ಷೇಪವಿಲ್ಲದಿದ್ದಲ್ಲಿ) ಕೋಳಿಯ ತತ್ತಿಯ ರಚನೆಯನ್ನು ಪರೀಕ್ಷಿಸಿ ನೋಡೋಣ.

(ಕ) ಇಯತ್ತೆಯ ಕ್ರಮಿಕ ಪುಸ್ತಕದಲ್ಲಿ ಹೇಳಿದ ನಕ್ಷತ್ರ, ಗ್ರಹ, ಮುಂತಾದವುಗಳ ಅವಲೋಕನ. ಮಂಜು, ಇಬ್ಬನ್ನಿ, ಆಣೀಕಲ್ಲುಗಳ ಘಟನೆ; ಮಳೆಯನ್ನೂ, ಹವೆಯ ಉಷ್ಣತೆಯನ್ನೂ ಅಳೆಯುವದು. ಆಯಾ ಸ್ಥಳಗಳಲ್ಲಿರುವ ಬಂಡೆಗಳನ್ನೂ ನೆಲವನ್ನೂ ನಿರೀಕ್ಷಿಸುವದು.

ತೋಟದ ಕೆಲಸ

ತಾವೆ, ಹಾವಸೆಗಳನ್ನು ಬೆಳೆಸುವದಕ್ಕಾಗಿ ತೋಟದಲ್ಲಿ ನೆಳಲುಳ್ಳ ಭಾಗಗಳನ್ನು ತಯಾರಿಸುವದು. ೫'×೬' ಮಡಿಗಳಲ್ಲಿ ಬೆಂಡೆಕಾಯಿ, ಚಪ್ಪರಬದನೇಕಾಯಿ, ಕುಂಬಳಕಾಯಿ, ಬದನೇಕಾಯಿ, ಪುಂಡಿ, ಹತ್ತಿ, ಮೆಕ್ಕೇ ಜೋಳ ಇವುಗಳನ್ನು ಇಬ್ಬಿಬ್ಬರು ವಿದ್ಯಾರ್ಥಿಗಳಿಗೆ ಬೆಳೆಸಲಿಕ್ಕೆ ನೇಮಿಸಿಕೊಡುವದು.

ತೋಟದ ಸಾಮಾನ್ಯಭಾಗದಲ್ಲಿ ಪ್ರಕೃತಿವಿಮರ್ಶೆಗೆ ಬೇಕಾಗುವಷ್ಟು ಮತ್ತು ಅದರಲ್ಲಿ ಹಿಡಿಯುವಷ್ಟು ಹಣ್ಣು ಹಂಪಲಗಳ ಗಿಡಗಳಿರಬೇಕು.

ಚಿಗುರು ಮೊಗ್ಗಿಯನ್ನು ಹಚ್ಚಿ ಕಸಿ ಮಾಡುವರು. ಮತ್ತು ಕಲಮು ಮಾಡುವ ಸಂಬಂಧದಿಂದ ಪ್ರಯೋಗಗಳನ್ನು ಮಾಡಿ ತೋರಿಸುವದು. ತೋಟದೊಳಗಿನ ವನಸ್ಪತಿವಿನಾಶಕ ಹುಳ ಮುಂತಾದವುಗಳ ಜ್ಞಾನ; ತೋಟದ ರಚನೆಯು ಹೇಗೆ ಇರಬೇಕೆಂಬದು ಗೊತ್ತು ಮಾಡಿಕೊಡುವದು.

ಪ್ರ್ಯಾಕ್ಟಿಸಿಂಗ ಸ್ಕೂಲಿನಲ್ಲಿ ನಡೆದಿರುವ ಪ್ರಕೃತಿ ವಿಮರ್ಶೆ

ಬಾಲಕರವರ್ಗ— ಬಾಲಕರು ೨೦ ಪಣತಿಗಳಲ್ಲಿ ಹಸಿ ಉಸುಬು ಮಣ್ಣು ಹಾಕಿ ಗೋದಿ, ಜೋಳಗಳ ಬೀಜಗಳನ್ನು ಹಾಕಿ ಸಸ್ಯನಿರೀಕ್ಷಣೆ ನಡೆಯಿಸಿರುವರು. ಮತ್ತು ಮೇಲಿನ ಇಯತ್ತೆಯವರು ಸಿದ್ಧಪಡಿಸಿದ ತೋಟದಲ್ಲಿ ಕಲ್ಲು ಆರಿಸುವದು ಮೊದಲಾದ ಕೆಲಸಗಳನ್ನು ಮಾಡುವರು.

೧ನೆಯ ಇಯತ್ತೆ— ಇವರೂ ಬಾಲಕರ ವರ್ಗದಂತೆಯೇ ೨೦ ಪಣತಿಗಳಲ್ಲಿ ಹಸಿ ಉಸುಬು ಮಣ್ಣು ಹಾಕಿ ಕಡ್ಲಿ, ಹೆಸರು ಈ ಬೀಜಗಳನ್ನು ಬಿತ್ತಿ ನಿರೀಕ್ಷಣೆಯ ಕೆಲಸ ನಡೆಯಿಸಿರುವರು. ಸಾಲೆಯ ಸಾಮಾನ್ಯ ತೋಟದಲ್ಲಿ ಗಿಡಬಳ್ಳಿಗಳ ನಿರೀಕ್ಷಣೆ ಮಾಡುವರು. ಕುರ್ಚಿಗೆಯ ಉಪಯೋಗ ಮಾಡಿ ದೊಡ್ಡ ಹುಡುಗರ ತೋಟದಲ್ಲಿ ಕಳೆ ತೆಗೆಯುವರು.

೨ನೆಯ ಇಯತ್ತೆ— ಈ ಇಯತ್ತೆಯಲ್ಲಿ ೩೦ ಹುಡುಗರ ೨ ವರ್ಗಗಳಿರುವವು. ಇವರು ೫ನೆಯ ಇಯತ್ತೆಯುವರು ಸಿದ್ಧಪಡಿಸಿದ ತೋಟದಲ್ಲಿ ಕೆಲಸಮಾಡುವ ಅನು ಕೂಲ ಮಾಡಿರುವರು. ಈ ವರ್ಗದ ತೋಟದಲ್ಲಿ ೬ ಫೂಟು ಉದ್ದ, ೫ ಫೂಟು ಅಗ ಇಂಥ ೧೨ ಮಡಿಗಳು ಇರುವವು. ಒಂದೊಂದು ಮಡಿಯಲ್ಲಿ ೨-೩ ಹು. ರು ಕೆಲಸ ಮಾಡುವರು. ಎಲ್ಲರೂ ಕೂಡಿ ಕೆಲಸಮಾಡುವರು, ಶಿಕ್ಷಕನ ಸಹಾಯದಿಂದ ಒಟ್ಟಾಗಿ ನಿರೀಕ್ಷಿಸುವರು.

ಮಡಿಯಲ್ಲಿ ೫ ಸಾಲು ಗೋವಿನಜೋಳ, ತಿಂಗಳವರಿ, ಜೋಳ, ಹಕ್ಕರಿಕಿ, ಬದಿನಿ ಹೀಗೆ ಬೀಜ ಹಾಕಿರುವರು. ಕಡೆಗೆ ಹೆಚ್ಚಿನಸಾಲು, ಮೊದಲನೆ ಎರಡನೆ ಮಡಿಯಲ್ಲಿ ಮಾಡಿ ಮೆಂಥೆ ಹಾಕಿ ೨೦ ದಿವಸಗಳಲ್ಲಿ ಆ ಪೈರು ತೆಗೆದುಕೊಂಡಿರುವರು. ಆ ಸ್ಥಳದಲ್ಲಿ ಮತ್ತೆ ಹಕ್ಕರಿಕೆ ಹಾಕಿರುವರು.

೩ನೆಯ ಇಯತ್ತೆ— ಈ ವರ್ಗದಲ್ಲಿಯೂ ೩೨ ಹುಡುಗರು ಇದ್ದು ಅವರೆ ಲ್ಲರೂ ಸಸ್ಯನಿರೀಕ್ಷಣೆ, ತಮ್ಮ ಸಸ್ಯಗಳ ತೋಟದ ಕೆಲಸ ಮೊದಲಾದವುಗಳನ್ನು ಪ್ರತ್ಯೇಕವಾಗಿಯೇ ಮಾಡಿಕೊಂಡಿರುವರು.

ಈ ವರ್ಗದವರೂ ೬ ಫೂ. ಉ. ೫ ಫೂ. ಅಗಲ ಇಂಥ ೧೦ ಮಡಿಗಳನ್ನು ಮಾಡಿರು ವರು. ಪ್ರತಿಯೊಂದು ಮಡಿಗೆ ಅವಶ್ಯಬಿದ್ದಂತೆ ಇಬ್ಬರು ಮೂವರು ಕೆಲಸ ಮಾಡು ವರು. ಮಿಕ್ಕವರು ಅವರಿಗೆ ಸಹಾಯ ಮಾಡುವರು. ಪಾಳಿಯ ಪ್ರಕಾರ ಕೆಲಸ ಮಾಡುವರು. ಶಿಕ್ಷಕರ ಸಹಾಯದಿಂದ ಒಟ್ಟಾಗಿ ನಿರೀಕ್ಷಣೆ ಮಾಡುವರು.

ತಮ್ಮ ಮಡಿಯಲ್ಲಿ ನಾಲ್ಕು ಸಾಲನ್ನು ಅವರಿ, ಮೂಲಂಗಿ, ಚವಳಿ, ಬೆಂಡಿ, ಹೀಗೆ ಮಾಡಿರುವರು. ಬೀಜ ಬಿತ್ತಿದಂದಿನಿಂದ ಸಸ್ಯಗಳ ನಿರೀಕ್ಷಣೆ ಮಾಡಿ ತಾರೀಖುವಾರ ತಮಗೆ ಕಂಡುಬಂದ ಸಂಗತಿಗಳನ್ನು ಬೇರೆ ಬೇರೆ ಪೈರಿನ ಸದರಿನ ಕೆಳಗೆ ಟಿಪ್ಪಣಿ ಬರೆದಿಟ್ಟಿರುವರು. ಮೂಲಂಗಿಯಲ್ಲಿ ಕೆಂಪು ಬಿಳಿ ಎಂಬ ಎರಡು ಜಾತಿಗಳನ್ನು ಬಿತ್ತಿರು ವರು. ಇವರು ಹೆಚ್ಚಿನ ಸ್ಥಳದಲ್ಲಿ ಸಮೀಪದಲ್ಲಿಯೇ ಒಟ್ಟಿಗೆ ಸೇರಿ ಕೆಲಸಮಾಡಲಿಕ್ಕೆ ಸಾಮಾನ್ಯವಾದ ಮಡಿಗಳನ್ನು ಮಾಡಿರುವರು.

೪ನೆಯ ಇಯತ್ತೆ— ಈ ವರ್ಗದಲ್ಲಿ ೪೦ ಹುಡುಗರು ಇರುವರು. ಮೇಲಿ ನಂಥವೇ ೨೨ ಮಡಿಗಳನ್ನು ಮಾಡಿಕೊಂಡಿರುವರು. ಪ್ರತಿಯೊಂದು ಮಡಿಯಲ್ಲಿ ಇಬ್ಬಿಬ್ಬರು ಕೆಲಸ ಮಾಡುವರು. ಮಡಿಯಲ್ಲಿ ೪ ಸಾಲುಗಳನ್ನು ಮಾಡಿ ಗೋವಿನ ಜೋಳ, ಬೆಂಡಿ, ತಿಂಗಳಅವರಿ, ಮೂಲಂಗಿ ಈ ಪ್ರಕಾರ ಬಿತ್ತಿರುವರು. ಕಳೆತೆಗೆಯುವ ಬೇರಿಗೆ ಮಣ್ಣು ಏರಿಸುವ ಕಸತೆಗೆಯುವ, ಹರಳು ತೆಗೆಯುವ ಕೆಲಸಗಳನ್ನು ಶಿಕ್ಷಕನ

ನೇತೃತ್ವದ ಕೆಳಗೆ ಮಾಡುವರು. ಪ್ರತಿಯೊಂದು ಪೈರಿನ ಸದರಿನ ಕೆಳಗೆ ತಾರೀಖುವಾರ ಕ್ರಮಾಗಿ ಕಂಡು ಬಂದ ಸಂಗತಿಗಳನ್ನು ಪದ್ಧತಿಯ ಪ್ರಕಾರ ಬರೆದಿಡುವದು.

೫ನೆಯ ಇಯತ್ತೆಯವರ ಮಡಿಗಳ ವರ್ಣನೆಯು ೨ನೆಯ ಇ. ಯೇ. ಹೇಳಿದೆ.

ಈ ಪ್ರಕಾರವಾಗಿ ಬಿನ್ ಇಯತ್ತೆಯಿಂದ ೫ನೆಯ ಇಯತ್ತೆಯವರೆಗೂ ಸಸ್ಯದ ವಿಮರ್ಶೆಯು ಕೆಲಸವು ಸರಿಯಾಗಿ ನಡೆದಿರುವದು. ನೀರು, ಗೊಬ್ಬರ, ಭೂಮಿ, ಬೇರೆ ಸಾಧನಗಳು ಇವೆಲ್ಲ ಅನುಕೂಲತೆಗಳಿರುವದರಿಂದ ಕೆಲಸವು ನೆಟ್ಟಗೆ ನಡೆದದೆ. ಟ್ರೇನಿಂಗ ಸ್ಕೂಲಿನ ವಿದ್ಯಾರ್ಥಿಗಳು ಮಾಡಿದ ತೋಟಗಳಲ್ಲಿ ಗುಲಾಬಿ, ವಿಲಾಯತಿ ಹೂ ಮೊದಲಾದ ಟೊಂಗೆ ಕಡಿದಿಟ್ಟು ಹಚ್ಚಿದ ಮಡಿಗಳಲ್ಲಿ ಸಹ ನಿರೀಕ್ಷಣೆ ಮಾಡುವರು.

ಮೇಲೆ ವಿವರಿಸಿದಂಥ ಸಂಗತಿಗಳೆಲ್ಲ ಪ್ರ್ಯಾಕ್ಟಿಸಿಂಗ ಸ್ಕೂಲಿನಲ್ಲಿ ಜೂನ ತಿಂಗಳ ೧೨ನೆಯ ತಾರೀಖಿಗೆ ಶಾಲೆಯು ಸುರುವಾದಂದಿನಿಂದ ಆರಂಭಿಸಿದಂಥವು ಇರುತ್ತವೆ. ಇನ್ನು ಮುಂದೆ ಮಾಡತಕ್ಕ ಸಂಗತಿಗಳು ಅನೇಕವಿರುತ್ತವೆ. ಅಥವಾ ಹೋದ ವರ್ಷ ಕಲಿಸಿದ ಸಂಗತಿಗಳು ಅನೇಕವಿದ್ದವು.

ಪ್ರಕೃತಿವಿಮರ್ಶೆಯು ಕೇವಲ ಸಸ್ಯಗಳ ಪೂರ್ತೆಯೇ ಇರುವದಿಲ್ಲ. ೨ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ದಿಕ್ಕುಗಳ ಪಾಠ ಕಲಿಸುವಾಗ ೧ ಕೋಲನ್ನು ಲಂಬರೂಪವಾಗಿ ನಿಲ್ಲಿಸಿ ಪ್ರಾತಃಕಾಲದಿಂದ ಸಾಯಂಕಾಲದ ವರೆಗೆ ಬೀಳುವ ನೆರಳನ್ನು ಬೇರೆ ಬೇರೆ ಕಾಲಗಳಲ್ಲಿ ನಿರೀಕ್ಷಿಸಲಿಕ್ಕೆ ಹೇಳಿ ಬಳಿಕ ಪೂರ್ವ ಪಶ್ಚಿಮ ದಿಕ್ಕುಗಳನ್ನು ಅವರಿಗೆ ಗೊತ್ತುಮಾಡಿ ಕೊಡಬೇಕು. ಅದರಂತೆಯೇ ಉತ್ತರ ದಕ್ಷಿಣ ದಿಕ್ಕುಗಳನ್ನು ತೋರಿಸಬೇಕು. ಆ ಕೋಲಿನ ಸುತ್ತಲು ವರ್ತುಲಾಕೃತಿ ಗೆರೆ ತೆಗೆದು ಅದರಲ್ಲಿ ಪೂ. ಪ ಉ. ದ. ದಿಕ್ಕುಗಳನ್ನು ಸೂಚಿಸುವ ಹೆಸರುಗಳನ್ನು ಬರೆಯಬಹುದು. ಬಳಿಕ ಅದರಂತೆಯೇ ಗೂಟಗಳನ್ನು ಬಡಿದು ಮಧ್ಯದಲ್ಲಿ ಸರಿಭಾಗಗಳನ್ನು ಮಾಡಿ ಉಪದಿಕ್ಕುಗಳನ್ನು ತೋರಿಸಲಿಕ್ಕೆ ಬೇರೆ ತರದ ಗೂಟಗಳನ್ನು ಬಡಿಯಬೇಕು. ಆ ವರ್ತುಲವು ಸ್ಥಿರವಾಗಿ ಉಳಿಯಲಿಕ್ಕೆ ಗಚ್ಚಿನ ಉಪಯೋಗ ಮಾಡಿಕೊಂಡರೆ ನೆಟ್ಟಗೆ. ಜೂನ ತಿಂಗಳಿನಿಂದ ದಿಶಂಬರದ ವರೆಗೂ ಆ ನೆರಳನ್ನು ನಿರೀಕ್ಷಿಸುತ್ತ ಹೋದರೆ ಆರಂಭದ ನೆರಳು ಪರಮಾವಧಿ ಉತ್ತರಕ್ಕೂ ಪರಮಾವಧಿ ದಕ್ಷಿಣಕ್ಕೂ ಹೋದದ್ದು ಗೊತ್ತಾಗುವದು. ಈ ಮೇರೆಗೆ ಉತ್ತರಾಯಣ ದಕ್ಷಿಣಾಯನಗಳ ಪರಿಚಯ ಮಾಡಿಕೊಡಲಿಕ್ಕೆ ಬರುತ್ತದೆ. ಆ ವರ್ತುಲದಲ್ಲಿ ೩೬೦ ಭಾಗಗಳನ್ನು ಮಾಡಿ ಅವಕ್ಕೆ ಅಂಶಗಳೆಂಬ ಹೆಸರು ಕೊಟ್ಟದ್ದನ್ನು ತಿಳಿಸಿ ಮೇಲಿನ ನೆರಳು ಎಷ್ಟು ಅಂಶಗಳ ವರೆಗೆ ಉತ್ತರಕ್ಕೂ ಎಷ್ಟು ಅಂಶಗಳ ವರೆಗೆ ದಕ್ಷಿಣಕ್ಕೂ ಹೋಗುತ್ತದೆಂಬದನ್ನು ತೋರಿಸಲಿಕ್ಕೆ ಬರುತ್ತದೆ. ಈ ಬಗೆಯಾಗಿ ಈ ಕೋಲಿನ ಉಪಯೋಗವನ್ನು ನಮಗೆ ಹೆಚ್ಚಾಗಿ ಮಾಡಿಕೊಳ್ಳಲಿಕ್ಕೆ ಚೆನ್ನಾಗಿ ಬರುತ್ತದೆ. ಇನ್ನೂ ಹೆಚ್ಚಾಗಿ ಮೇಲಿನ ಇಯತ್ತೆಯ ವರೆಗೆ ಆಯಾ ಊರುಗಳಿದ್ದ ಅಕ್ಷಾಂಶಗಳನ್ನು ತೆಗೆಯಲಿಕ್ಕೆ ಸಹ ಉಪಯೋಗಮಾಡಿಕೊಳ್ಳಲಿಕ್ಕೆ ಬರುತ್ತದೆ.

ತೋಟಗಳಲ್ಲಿದ್ದ ಎಲೆ, ಹೂಗಳ ನಿರೀಕ್ಷಣೆ ಮಾಡಿಸಲಿಕ್ಕೆ ಹಚ್ಚಿ ಕ್ರಮವಾಗಿ ಹೂಗಳ ಅವಯವಗಳ ಜ್ಞಾನಮಾಡಿಕೊಡಲಿಕ್ಕೆ ಬರುತ್ತದೆ. ಬರಬರುತ್ತ ಬೀಜಧಾರಣೆಯ ರೀತಿ, ಕೇಸರಗಳ ಉಪಯೋಗ, ಪುಂಕೇಸರಗಳಿಲ್ಲದಲ್ಲಿ ಬೀಜಧಾರಣೆಯ ರೀತಿ, ಹೂಗಳ ಕಲಮುಕಟ್ಟುವ ರೀತಿ, (ಹತ್ತಿಯ ಗಿಡಗಳ ಉಪಯೋಗಮಾಡಿ ಬೇರೆ ತರದ ಹತ್ತಿಯು ಆಗುವ ಬಗೆ ತೋರಿಸಬೇಕು) ಇತ್ಯಾದಿ ಹೆಚ್ಚಿನ ರೀತಿಗಳನ್ನು ಆನೆಯು ಇಯತ್ತೆಯ ವರೆಗೆ ವಿದ್ಯಾರ್ಥಿಗಳಿಗೆ ಹೂಗಳ ಪಾಠಕಲಿಸುವಾಗ ನಿರೀಕ್ಷಣೆ ಮಾಡಲಿಕ್ಕೆ ಕ್ರಮವಾಗಿ ತೋಟಗಳಿಂದ ಉಪಯೋಗವಾಗುತ್ತದೆ.

ಆಗಾಗ ಆಗುವ ಹೆಚ್ಚುಕಡಿಮೆಗಳನ್ನು ತಾರೀಖವಾರ ನೋಟಬುಕ್ಕಿನಲ್ಲಿ ಬರೆದು ಡ್ರಾಯಿಂಗಿನ ಉಪಯೋಗಮಾಡಿಕೊಂಡು ಕೋಷ್ಟಕಮಾಡಿ ಕಡೆ ಕೋಷ್ಟಕದಲ್ಲಿ ಚಿತ್ರ ತೆಗೆಯಿಸಬೇಕು. ಕಲಮುಕಟ್ಟುವ ರೀತಿಯಿಂದಾಗಲಿ ಬೇರೆ ಬಗೆಯಿಂದಾಗಲಿ ಪ್ರಾಣಿಗಳಂತೆ ಸಸ್ಯಾದಿಗಳು ಸಜೀವವಾಗಿರುವವೆಂದೂ ಅವುಗಳ ಜೀವನಕ್ರಮವಾದರೂ ಪ್ರಾಣಿಗಳ ಜೀವನಕ್ರಮದಂತೆ ಇರುವದೆಂದೂ ಪ್ರತ್ಯಕ್ಷ ತೋರಿಸಲಿಕ್ಕೆ ಬರುತ್ತದೆ.

ನಾವು ಶಾಲೆಯಲ್ಲಿ ಮಾಡಿದ ತೋಟಗಳು ಎಷ್ಟು ಮಾಡಿದರೂ ಅಪೂರ್ಣವೇ. ಸರಿ ಕಬ್ಬಿನ, ಜೋಳದ ಪೈರು, ಮುಂದಿನ ರಸ ತೆಗೆಯುವ ರೀತಿ, ಜೋಳದ ಕಣ ಇತ್ಯಾದಿ ಸಂಗತಿಗಳಿಗಾಗಿ ಪ್ರತ್ಯಕ್ಷ ನೋಡಲಿಕ್ಕೆ ತೋಟ ಹೊಲಗಳಿಗೆ ವಿದ್ಯಾರ್ಥಿಗಳನ್ನು ಕರೆ ಕೊಂಡು ಹೋಗಬೇಕು. ಪ್ರವಾಸದ ಚಟದಿಂದ ವಿದ್ಯಾರ್ಥಿಗಳು ಬೇರೆ ಬೇರೆ ಸಸ್ಯಾದಿ ಗಳನ್ನು ನೋಡಲಿಕ್ಕೆ ಸಮರ್ಥರಾಗುತ್ತಾರೆ.

ಇದರಂತೆಯೇ ಪರ್ಜನ್ಯಮಾನಯಂತ್ರವನ್ನು ಶಾಲೆಯಲ್ಲಿ ಮಾಡಿಕೊಳ್ಳಬಹುದು. ಇಲ್ಲದಿದ್ದರೆ ಇದ್ದಲ್ಲಿಗೆ ಹೋಗಬೇಕು.

ನಿಶಾನೆಯನ್ನು ನಿಲ್ಲಿಸಿ ಗಾಳಿಯ ವೇಗವನ್ನೂ, ದಿಕ್ಕನ್ನೂ ನಿರೀಕ್ಷಿಸಿ ಹೇಳಬೇಕು.

ಆಕಾಶವು ನಿರಭ್ರವಾಗಿದ್ದಾಗ ಆಕಾಶದ ನಿರೀಕ್ಷಣೆ ಮಾಡುವ ರೂಢಿಯನ್ನು, ಅಕ್ಟೋಬರ, ಡಿಶಂಬರ, ಮುಂದೆ ಮಾರ್ಚ ಎಪ್ರಿಲವರೆಗೆ ಮಾಡಲಿಕ್ಕೆ ಬರುತ್ತದೆ. ಆಗ ನಕ್ಷತ್ರಗಳು ಸರಿಯುವ ಬಗೆ, ಚಂದ್ರನ ಕಲೆಗಳು, ಚಂದ್ರನು ಪೂರ್ಣನಾಗುವ ನಕ್ಷತ್ರ, ಆ ನಕ್ಷತ್ರದ ಹೆಸರನ್ನೇ ಆ ತಿಂಗಳಿಗೆ ಕೊಟ್ಟರೀತಿ, ಚಾಂದ್ರಮಾನದ ಎಣಿಕೆ, ಚಂದ್ರಗ್ರಹಣದ ರೀತಿ ಇತ್ಯಾದಿ ಎಲ್ಲ ಸಂಗತಿಗಳನ್ನು ಹೇಳಲಿಕ್ಕೆ ಬರುತ್ತದೆ. ಪ್ರಸಂಗ ವಿಶೇಷದಲ್ಲಿ ಗ್ರಹ, ನಕ್ಷತ್ರಗಳ ಪ್ರತ್ಯಕ್ಷ ನೋಟ, ಧೂಮಕೇತುಗಳ ರೀತಿಗಳನ್ನು ಸಹ ತೋರಿಸಲಿಕ್ಕೆ ಬರುತ್ತದೆ.

ಈ ಬಗೆಯಾಗಿ ಪ್ರಕೃತಿವಿಮರ್ಶೆಯು ಎಷ್ಟು ವ್ಯಾಪಕವಾಗಿರುವದೆಂದು ಗೊತ್ತಾ ಗುವದು. ಎಲ್ಲ ವಿಷಯಗಳಿಗಾಗಿ ಅನುಕೂಲವಿಲ್ಲದಿದ್ದವರು ತಮತಮಗೆ ಅನುಕೂಲ ವಿದ್ದಷ್ಟು ಸಂಗತಿಗಳನ್ನು ಆರಿಸಿಕೊಳ್ಳಲಿಕ್ಕೆ ಬರುವಷ್ಟು ಆ ವಿಷಯದ ಕ್ಷೇತ್ರವು ವಿಸ್ತಾರ ವಾಗಿರುವದು.

ಅಂದಮೇಲೆ ಪ್ರಾ. ಶಾ. ಗಳಲ್ಲಿ ಆ ವಿಷಯವನ್ನು ಕಲಿಸಲಿಕ್ಕೆ ಅನುಕೂಲವಿಲ್ಲ ವೆಂದು ಹೇಳಲಿಕ್ಕೆ ಬರುವಂತೆ ಇಲ್ಲ.

ಸ್ಥಾನಾನುಕೂಲತೆಯ ಮೇರೆಗೆ ನಮ್ಮಲ್ಲಿಯ ಪ್ರಕೃತಿವಿಮರ್ಶೆಯ ಗುರುಗಳು ಒಂದೊಂದು ಪೈರಿನ ಪೂರ್ಣ ಸಂಗತಿಯನ್ನು ಈ ಪತ್ರಿಕೆಯಲ್ಲಿ ಕ್ರಮವಾಗಿ ಕೊಡುವ ವಿಚಾರ ಮಾಡಿರುವರು.

ಅಪೂರ್ಣಾಂಕ ಕಲಿಸುವವರಿಗೆ ಪ್ರಶ್ನೆಗಳು

ಬರೆದವರು:—ಶ್ರೀ ಎಸ್. ಆರ್. ಶೆಟ್ಟಿ ಬಿ. ಎ., ಅಸಿ. ಮಾಸ್ತರ್ ಪ್ರೀಮೇಲ್ ಟ್ರೇ. ಕಾ. ಧಾರವಾಡ.

(೧) ಅಪೂರ್ಣಾಂಕಗಳನ್ನು ಕಲಿಸುವ ನಿಮ್ಮ ಪದ್ಧತಿಯಿಂದ ವಿದ್ಯಾರ್ಥಿಗಳಿಗೆ ಅವರ ಯೋಗ್ಯತೆಗೆ ತಕ್ಕಂಥ ಸ್ವಂತ ಪ್ರಯತ್ನಕ್ಕೆ ಸಾಕಷ್ಟು ಉತ್ತೇಜನವು ದೊರೆಯುವದೇನು ?

(೨) ಆಕೃತಿಯ ಸಹಾಯದಿಂದ ಯಾವದಾದರೊಂದು ಮಾತನ್ನು ನೀವು ತಿಳಿಸಿದರೆ ವಿದ್ಯಾರ್ಥಿಯು ಅದನ್ನು ನೋಡಿ ತಿಳುಕೊಂಡರಾಯಿತೋ ಅಥವಾ ಅವನಿಗೂ ಅದರಂತೆ ಆಕೃತಿ ತೆಗೆದು ಆ ಮಾತನ್ನು ತಿಳಿಸಿ ಕೊಡಲಿಕ್ಕೆ ಬರಬೇಕೆಂದು ಅಪೇಕ್ಷಿಸುವಿರೋ?

(೩) ಅಪೂರ್ಣಾಂಕಗಳನ್ನು ಭಾಗಾಕಾರಕ್ಕೆ ಸಂಬಂಧಿಸಿ ಕಲಿಸಬೇಕೆಂದು ನಿಮ್ಮ ಅಭಿಪ್ರಾಯವಿರುವದೇನು ? ಇದ್ದರೆ ಹ್ಯಾಗೆ ಸಂಬಂಧಿಸಬೇಕೆನ್ನುವಿರಿ ?

(೪) 'ದ' 'ಗಳ' ಇದ್ದಲ್ಲಿ ಗುಣಾಕಾರವಿರುವದೆಂದು ತಿಳಿಯಬೇಕು ಎಂಬ ನಿಯಮವು ಕೇವಲ ಅಪೂರ್ಣಾಂಕಗಳಿಗೆ ಮಾತ್ರ ಹತ್ತುವದೋ ಅಥವಾ ಅವು ಪೂರ್ಣಾಂಕಗಳ ನಡುವೆ ಬಂದರೂ ಅದೇ ಅರ್ಥವನ್ನು ಸೂಚಿಸುವವೋ ?

(೫) ಲೆಕ್ಕ ಮಾಡುವಾಗ ಒಂದು ಅಪೂರ್ಣಾಂಕಕ್ಕೆ ಅತಿಸಂಕ್ಷೇಪ ರೂಪಕೊಡುವದು ಬಂದರೆ ದೊಡ್ಡವರು ಅದನ್ನು ಹೇಗೆ ಮಾಡುವರು ? ಅಂಶ ಛೇದಗಳ ದೃಢಭಾಜಕನನ್ನು ತೆಗೆಯು ಹೋಗುವರೇನು ?

(೬) ಅಪೂರ್ಣಾಂಕಗಳಿಗೆ ಸಮುಚ್ಛೇದ ರೂಪವನ್ನು ಕೊಡುವಾಗ ಮೊದಲಿನಿಂದಲೇ ಆದಷ್ಟು ಸಣ್ಣ ಸಾಧಾರಣ ಛೇದವನ್ನು ತೆಗೆಯಲಿಕ್ಕೆ ಹೇಳುವದು ಎಷ್ಟರಮಟ್ಟಿಗೆ ಅವಶ್ಯವಿರುವದು ? (೧) ಬೇರೀಜು ವಜಾಬಾಕಿಗಳ ಕೆಲಸವು ಸಾಧ್ಯವಾಗಲಿಕ್ಕೆ ಅವಶ್ಯವಿರುವ ಕೃತಿ (೨) ಆ ಕೆಲಸವು ಹಗುರಾಗಬೇಕೆಂದು ಕೆಲವು ಪ್ರಸಂಗಗಳಲ್ಲಿ ಕೈಕೊಳ್ಳುವ ಉಪಾಯ. ಇವುಗಳಲ್ಲಿ ಭೇದವನ್ನು ಮಾಡುವದು ಶಿಕ್ಷಣದ ದೃಷ್ಟಿಯಿಂದ ಒಳ್ಳೆಯದಲ್ಲವೇ ?

(೭) ವ್ಯವಹಾರದಲ್ಲಿ ಮೇಲಿಂದ ಮೇಲೆ ಬಳಕೆಯಲ್ಲಿ ಬರುವ ಅಪೂರ್ಣಾಂಕ ಗಳಾವವು ? ಪ್ರಾರಂಭದಲ್ಲಿ ಈ ಅಪೂರ್ಣಾಂಕಗಳಿಗಷ್ಟೇ ಸಂಬಂಧಿಸಿ ಲೆಕ್ಕಗಳನ್ನು ಸಾಗಿಸುವದು ಇಷ್ಟವಾದದ್ದೆಂದು ನಿಮಗನಿಸುವದೇನು ?

(೮) ಅಪೂರ್ಣಾಂಕಗಳಿಗೆ ಸಂಬಂಧಿಸಿದ ಕೃತಿಗಳಲ್ಲಿ ಶಿಕ್ಷಕನ ಮೇಲ್ವಿಚಾರಣೆಯ ಕೆಳಗೆ ಹುಡುಗರು ತಾವಾಗಿ ಹುಡುಕಿ ತೆಗೆಯಬಹುದಾದಂಥ ಎಷ್ಟು ನಿಯಮಗಳಿರು ವವು ?

(೯) ಈ ಹುಡುಕಿ ತೆಗೆಯುವ ಕೆಲಸದಲ್ಲಿ ಶಿಕ್ಷಕನು ವಿದ್ಯಾರ್ಥಿಗಳಿಗೆ ಎಷ್ಟು ಸಹಾಯ ಮಾಡಬೇಕು ಮತ್ತು ಹೇಗೆ ಸಹಾಯ ಮಾಡಬೇಕು ? (ಅ) ಅವರ ವಯಸ್ಸು ಯೋಗ್ಯತೆಗೆ ತಕ್ಕಂಥ ಒಂದು ಸಣ್ಣ ಕೆಲಸವನ್ನು ಕೊಟ್ಟು ಅದನ್ನು ಅವರಿಗೆ ಮಾಡಲಿಕ್ಕೆ ಬಿಡುವದು (ಬ) ತಿಳಿದು ಹೇಳಲಿಕ್ಕೆ ಬರುವಂಥ ಒಂದು ಪ್ರಶ್ನೆಯನ್ನು ಕೇಳಿ ಅದ ಉತ್ತರವನ್ನು ಅವರಿಂದ ಹೊರಡಿಸುವದು (ಕ) ಹೇಗಾದರೂ ಮಾಡಿ ನಮಗೆ ಬೇಕಾ ದ್ದನ್ನು ಅವರ ಬಾಯಿಂದ ಅನಿಸುವದು. ಇವುಗಳಲ್ಲಿ (ಕ) ದಲ್ಲಿಯ ಉಪಾಯವನ್ನು ಬಿಟ್ಟು ನಮ್ಮ ಕಾರ್ಯವು ಸಿದ್ಧಿಸದಿದ್ದರೆ ಹುಡುಗರು ಯಾವದೊಂದು ನಿಯಮವನ್ನು ತಾವಾಗಿ ಹುಡುಕಿ ತೆಗೆದರೆಂದು ಅನ್ನಬಹುದೇನು ? ಮತ್ತು ಇಂಥ ಪ್ರಸಂಗಗಳಲ್ಲಿ ತಾವಾಗಿ ಕಂಡು ಹಿಡಿಯುವದರಿಂದ ಆಗುವ ಆನಂದವು ಅವರಿಗೆ ಆಗುವದೇನು ?

(೧೦) $\frac{೨}{೭}+\frac{೩}{೭}=\frac{೫}{೭}$; $\frac{೨}{೫}\times ೩=\frac{೬}{೫}$; $೧\frac{೫}{೪}\div ೩=\frac{೫}{೪}$

ಅಪೂರ್ಣಾಂಕದಲ್ಲಿ ಅಂಶವೇ ಮುಖ್ಯವಾದ ಸಂಖ್ಯೆಯೆಂಬ ಭಾವನೆಯನ್ನು ನಾವು ವಿದ್ಯಾರ್ಥಿಗಳಲ್ಲಿ ಹುಟ್ಟಿಸಿದರೆ ಮೇಲಿನ ಲೆಕ್ಕಗಳ ರೀತಿಯು ಹೆಚ್ಚು ಚನ್ನಾಗಿ ತಿಳಿಯು ದೇನು ? ಉದಾಹರಣಾರ್ಥವಾಗಿ ಮೊದಲನೇ ಬೇರೀಜಿನ ಲೆಕ್ಕದಲ್ಲಿ ಹುಡುಗರು ತಿಳಿದು ಕೊಳ್ಳಬೇಕಾದ ಮುಖ್ಯ ಸಂಗತಿಯೆಂದರೆ '೭' ಎಂಬುವದು ಒಂದು ಭಾಗದ ಹೆಸರಾ ರುವದೆಂಬ ಮಾತು ಅಕ್ಷರಗಳಿಂದ ೨ ಏಳನೆಯಭಾಗ+೩ ಏಳನೆಯಭಾಗ ಹೀಗೆ ಬರೆಯು ದಾದರೂ ಅದಕ್ಕಾಗಿಯೇ. ಅದ್ದರಿಂದ ಬಹುಕಾಲದಿಂದ ನಡೆದು ಬಂದ ಛೇದ ಎಂದ ಮಾಡಿದ ಭಾಗಗಳನ್ನು ತೋರಿಸುವದು 'ಅಂಶ' ಅಂದರೆ ತಕ್ಕೊಂಡ ಭಾಗಗಳನ್ನು ತೋರಿಸುವದು ಎಂಬ ಅರ್ಥವಿವರಣೆಯ ಪದ್ಧತಿಯನ್ನು ಬದಲಾಯಿಸುವದು ಅಗ ವೆಂದು ನಿಮಗೆ ತೋರುವದೇನು ? "ಅಂಶವು ಭಾಗಗಳ ಸಂಖ್ಯೆಯನ್ನು ತೋರಿಸುವದು ಛೇದವು ಭಾಗಗಳ ಜಾತಿಯನ್ನು ತೋರಿಸುವದು" ಎಂದು ಅನ್ನುವದು ಮೊದಲಿ ಪದ್ಧತಿಯಲ್ಲಿ ಸುಧಾರಣೆಯಾದಂತಾಗುವದೇನು ? ಇದು ಭಾಷೆಯಲ್ಲಿ ಅತ್ಯಲ್ಪವಾ ಬದಲಾವಣೆಯು ಮಾತ್ರ ಆಯಿತೆಂದು ಅನಿಸಿದರೂ ಅದರಿಂದ ಅಲ್ಪಸ್ವಲ್ಪವಾದರು ಪ್ರಯೋಜನವಾಗಿ ಹುಡುಗರಿಗೆ ಅಪೂರ್ಣಾಂಕಗಳ ಬಗ್ಗೆ ಹೆಚ್ಚು ವಾಸ್ತವಿಕವಾ ಕಲ್ಪನೆಯಾಗಬಹುದೇನು ?

೧೧. "ಯಾವದಾದರೊಂದು ಹೊಸ ಕೃತಿಯು ಬಗ್ಗೆ ನಿಯುವವನ್ನು ಕಲಿಸುವ ...ದ್ದರಿ ಅದರಲ್ಲಿ ಸುಲಭವಾದ ಮೆಟ್ಟಿಗಳನ್ನು ಕಲ್ಪಿಸಿ ಸಣ್ಣ ಸಣ್ಣ ಬಾಯಿಲೆಕ್ಕಗಳಿಂದ ...ಸುವನ್ನು ಪ್ರಾರಂಭಿಸಬೇಕು." ಅಪೂರ್ಣಾಂಕಗಳ ಗುಣಾಕಾರ ಭಾಗಾಕಾರ ...ಳನ್ನು ಕಲಿಸುವಾಗ ಇಂಥ ಸುಲಭವಾದ ಮೆಟ್ಟಿಗಳೂ ಬಾಯಿಲೆಕ್ಕಗಳೂ ಯಾವವು?

೧೨. ಉದಾಹರಣೆಗಳಿಂದ ಸಾಮಾನ್ಯ ನಿಯಮಕ್ಕೆ ಹೋಗುವ (ನಿಗಮನ) ...ದ್ಧತಿಯು ಈಗಿನ ಪ್ರಾಥಮಿಕ ಸಾಲೆಗಳಲ್ಲಿ ಅಂಕಗಣಿತವನ್ನು ಕಲಿಸುವಾಗ ಸಾಕಷ್ಟು ...ಪಯೋಗಿಸಲ್ಪಡುವದೇನು ?

...ದಾಹರಣೆ (೧) $\frac{೧೦}{೩} \div ೫ = \frac{೨}{೩}$ ಇಂಥ ಸಾಮಾನ್ಯಕೃತಿಯ ಅರ್ಥವು ತಿಳಿಯಲಿಕ್ಕೆ ಕೆಳಗೆ ತೋರಿಸಿದಂತೆ ಕ್ರಮವಾಗಿ ಪ್ರಶ್ನೆಗಳನ್ನು ಕೇಳಬಹುದು?

೧೦ ಮಾವಿನ ಹಣ್ಣು ÷ ೫ = ?
೧೦ ಫೂಟು ÷ ೫ = ?
೧೦ ಅರ್ಧಫೂಟು ÷ ೫ = ?
೧೦ ಅರ್ಧ ÷ ೫ = ?
೧೦ ಗಿರ್ಧ ÷ ೫ = ?
೧೦ ಮೂರನೆಯ ಅಂಶ ÷ ೫ = ?

...ಉದಾಹರಣೆ (೨) $\frac{೧೨}{೫} \div \frac{೪}{೫} = ?$

೧೨ ರೂಪಾಯಿ ÷ ೪ ರೂಪಾಯಿ = ?
೧೨ ಆಣೆ ÷ ೪ ಆಣೆ = ?
೧೨ ಪೈ ÷ ೪ ಪೈ = ?
೧೨ ಅರ್ಧ ÷ ೪ ಅರ್ಧ = ?
೧೨ ಗಿರ್ಧ ÷ ೪ ಗಿರ್ಧ = ?
೧೨ ಐದನೆಯ ಅಂಶ ÷ ೪ ಐದನೆಯ ಅಂಶ = ?

ಸೆಕಂಡರಿ ಟೀಚರ್ಸ್ ಸರ್ಟಿಫಿಕೇಟ್ ಪರೀಕ್ಷೆ

ಸೋಮವಾರ ೬ನೇ ಜುಲೈ ೧೯೩೧

೧ನೆಯ ಕಾಗದ

ಪ್ರತಿಯೊಂದು ಭಾಗದಲ್ಲಿ ೩ ಪ್ರಶ್ನೆಗಳನ್ನು ಬಿಡಿಸತಕ್ಕದ್ದು.

೧ನೆಯ ಭಾಗ

ಶಿಕ್ಷಣದ ಇತಿಹಾಸ

೧. ಪೆಸ್ಟಾಲೋಝಿಯ ಅಭಿಪ್ರಾಯದಂತೆ ಹೊಸ ಶಿಕ್ಷಣಪದ್ಧತಿ ಎಂದರೇನು ಅವನ ಶಾಲೆಗಳಲ್ಲಿ ನಡೆಯುತ್ತಿದ್ದ ಪದ್ಧತಿಯನ್ನು ವಿವರಿಸಿರಿ.

೨. ಕೆಳಗಿನ ಮತ್ತು ಮೇಲಿನ ವರ್ಗಗಳಿಗೆ ಫ್ರೊಬೆಲ್ಲನ ಪದ್ಧತಿಯಂತೆ ಶಿಕ್ಷಣ ವನ್ನು ಹೇಗೆ ಸಾಗಿಸಬೇಕೆಂಬದನ್ನು ಹೇಳಿರಿ. ಮತ್ತು ಆ ಪದ್ಧತಿಯ ಗುಣದೋಷಗಳನ್ನು ವಿವೇಚಿಸಿರಿ.

೩. ಕೆಳಗಿನ ಮಾತುಗಳ ಬಗ್ಗೆ ಟಿಪ್ಪಣಿ ಬರೆಯಿರಿ:—

(ಅ) ಬಹುವಿಧದ ಆಸ್ಥೆ.

(ಬ) ವಿದ್ಯಾಖಾತೆ ವಿರುದ್ಧ ಟ್ರೇನಿಂಗ.

(ಕ) ಮಾನಸಶಾಸ್ತ್ರದ ವಿಚಾರದಂತೆ ಮಹತ್ವದ ಸಂಧಿ.

(ಡ) ಇಂದ್ರಿಯ ಶಿಕ್ಷಣ.

೪. ಮಾಂಟೆಸೋರಿಯ ಪದ್ಧತಿಯ ಗುಣದೋಷಗಳನ್ನು ವಿವೇಚಿಸಿರಿ.

ಭಾಗ ೨

ಶಿಕ್ಷಣ ಪದ್ಧತಿಗಳು

೫. ಹರ್ಬಾರ್ಟನ ಪದ್ಧತಿಯಂತೆ ಪಾಠದಲ್ಲಿ ಯಾವ ಯಾವ ಭಾಗಗಳನ್ ಮಾಡಿಕೊಳ್ಳಬೇಕು? ಒಂದು ಪಾಠಕ್ಕೆ ಅನ್ವಯಿಸಿ ಅವುಗಳನ್ನು ವಿವರಿಸಿ

೬. 'ಪ್ರಾಜೆಕ್ಟ' ಪದ್ಧತಿ ಎಂದರೇನು ? ಶಾಲೆಗಳಲ್ಲಿ ಕಲಿಸಲ್ಪಡುವ ಎರ ವಿಷಯಗಳ ಸಂಬಂಧದಿಂದ 'ಪ್ರಾಜೆಕ್ಟ' ಹೇಗೆ ಸಿದ್ಧಪಡಿಸಿಕೊಳ್ಳುವಿ

೭. ಕೆಳಗಿನವುಗಳಲ್ಲಿ ಒಂದನ್ನು ಕುರಿತು ಪೂರ್ಣವಾಗಿ ವಿವೇಚಿಸಿರಿ:—

(ಅ) ಮಾಡುತ್ತ ಕಲಿಯಲಿ

(ಬ) ಗೊತ್ತಿದ್ದ ಸಂಗತಿಯಿಂದ ಗೊತ್ತಿಲ್ಲದ ಸಂಗತಿಗೆ ಸಾಗುವದು.

(ಕ) ನಿಗಮನ ಪದ್ಧತಿ.

೨ನೆಯ ಕಾಗದ

ಮಂಗಳವಾರ ೭ನೇ ಜುಲೈ ೧೯೩೧

ವಿಶಿಷ್ಟ ಪದ್ಧತಿಗಳು, ಶಾಲೆಯ ವ್ಯವಸ್ಥೆ ಮತ್ತು ಆರೋಗ್ಯ.

೧ನೆಯ ಭಾಗ

೧. ಕೆಳಗೆ ಹೇಳಿದ ವಿಷಯಗಳಲ್ಲಿ ಒಂದನ್ನು ಕುರಿತು ಪಾಠದ ಟಿಪ್ಪಣಿ ತೆಗೆಯಿರಿ.

ಹಿಂದುಸ್ಥಾನದ ವ್ಯಾಪಾರ

ಅಕಬರ ಮತ್ತು ಎಲಿಜಾಬೆಥ

ಬೀಜದ ಪ್ರಥಃಕರಣ

ಪಾಯಥ್ಯಾ ಗೊರಾಸನ ಪ್ರಮೇಯ

೨. ಶಾಲೆಗಳಲ್ಲಿ ವಾಕ್ಯರಚನೆ ಮತ್ತು ನಿಬಂಧ ಬರಹಗಳನ್ನು ಸುಧಾರಿಸಲಿಕ್ಕೆ ಯಾವ ಪದ್ಧತಿಗಳನ್ನು ಸೂಚಿಸುವಿರಿ ?

೩. ವ್ಯಾಪಾರವಿಷಯಕವಾದ, ರಾಜಕೀಯ, ಪ್ರಾಕೃತಿಕ, ಪ್ರಾದೇಶಿಕ ಮತ್ತು ಮಾನವಜಾತಿಗೆ ಸಂಬಂಧಿಸಿದ ಭೂಗೋಲವನ್ನು ಹೇಗೆ ಮತ್ತು ಯಾವ ಯಾವ ವರ್ಗಗಳಲ್ಲಿ ಕಲಿಸುವಿರೆಂಬದನ್ನು ಹೇಳಿರಿ.

೪. ಇತಿಹಾಸ ವಿಷಯದಲ್ಲಿ ಬಾಲಕರ ಆಸ್ಥೆಯು ಉಳಿಯುವಂತೆ ಯಾವ ಯಾವ ಉಪಾಯಗಳನ್ನು ಕೈಕೊಳ್ಳುವಿರೆಂಬದನ್ನು ಹೇಳಿರಿ.

೫ ನಿಮ್ಮ ವಿದ್ಯಾರ್ಥಿಗಳ ಜೀವನಕ್ರಮಕ್ಕೆ ಸಂಬಂಧಿಸಿ ವಿಜ್ಞಾನಶಾಸ್ತ್ರದ ಅಭ್ಯಾಸಪತ್ರಿಕೆಯನ್ನು ಹೇಗೆ ರಚಿಸುವಿರಿ ? ಈಗಿನ ಅಭ್ಯಾಸಪತ್ರಿಕೆಯು ನಿಮ್ಮ ವಿಚಾರದಂತೆ ಯಾವ ಸಂದರ್ಭದಲ್ಲಿ ಅಸಮಾಧಾನಕರವಾಗಿದೆಂಬದನ್ನು ಹೇಳಿರಿ.

೬. ಕೆಳಗೆ ಹೇಳಿದ ಸಂಗತಿಗಳ ವಿಷಯಕ್ಕೆ ಟಿಪ್ಪಣಿ ಬರೆಯಿರಿ.

ಬಾಯಿಲೆಕ್ಕ

ವರ್ಗದ ಕೋಣೆಯಲ್ಲಿ ಆಡುವ ಆಟಗಳು

ಗೃಹಪಾಠ

ಕೈ ಕೆಲಸ

೨ನೆಯ ಭಾಗ

೭. ಶಿಕ್ಷಣದ ದೃಷ್ಟಿಯಿಂದ ಕೆಳಗಿನ ಸಂಗತಿಗಳನ್ನು ವಿವೇಚಿಸಿರಿ.

(ಅ) ನಿಯಮಿತವಾದ ವಾರಪರೀಕ್ಷೆಗಳು ಮತ್ತು ಸೂಚನೆಯಿಲ್ಲದೆ ಪರೀ ತೆಗೆದುಕೊಳ್ಳುವದು.

(ಬ) ವಿಷಯ ಶಿಕ್ಷಕರು ಮತ್ತು ವರ್ಗದ ಶಿಕ್ಷಕರು.

(ಕ) ಕವಾಯಿತು ಮತ್ತು ವ್ಯವಸ್ಥಿತ ಆಟಗಳು.

೮. ನಿಮ್ಮ ಹುಡುಗರಿಗೆ ಸರಿಯಾದ ಕೂಡ್ರುವ ನಿಲ್ಲುವ ರೀತಿಗಳೂ ನೋಟವೂ, ಬರಹದ ಶೈಲಿಯೂ ಹತ್ತಬೇಕಾದರೆ ಯಾವ ಉಪಾಯಗಳನ್ನು ಕೈಕೊಳ್ಳುವಿರಿ ?

೯. ಕೆಳಗಿನ ಮಾತುಗಳ ವಿಷಯವಾಗಿ ಟಿಪ್ಪಣಿ ಬರೆಯಿರಿ.

(ಅ) ವ್ಯವಸ್ಥೆಯನ್ನು ಕಾದುಕೊಳ್ಳಲಿಕ್ಕೆ ಶಿಕ್ಷೆಯ ಉಪಯೋಗ

(ಬ) ೨ನೆಯ ಇಯತ್ತೆಯ ಮಧ್ಯಾಹ್ನದ ವೇಳಾಪತ್ರಿಕೆ.

(ಕ) ಆಂಗ್ಲೋ ವ್ಹರ್ನಾಕ್ಯುಲರ ಶಾಲೆಯಲ್ಲಿ ಮಾಡಬಹುದಾದ ಸಮಾಜಸೇವೆ (ಬಾಲಕರ ವಯ ೧೦–೧೩ ವರುಷ)

೧೦. ನೀವು ಶಾಲೆಯ ಹೆ|| ಮಾ|| ರೆಂದು ತಿಳಿದು ಕೆಳಗಿನ ಸಂದರ್ಭಗಳಲ್ಲಿ ಹೇಗೆ ನಡೆಯುವಿರಿ ಎಂಬದನ್ನು ಹೇಳಿರಿ.

(ಅ) ಇಡೀ ವರ್ಗದ ಬಾಲಕರು ವರ್ಗದ ಶಿಕ್ಷಕನ ವಿರುದ್ಧ ದೂರು ಹೇಳಿದರೆ

(ಬ) ಜಗಳಗಂಟ ಹುಡುಗನ ವಿರುದ್ಧ ದೂರು ಹೇಳಿದರೆ

(ಕ) ಕಲಿಯತಕ್ಕ ಪಾಠಗಳನ್ನು ದುರ್ಲಕ್ಷಿಸಿದ್ದಕ್ಕಾಗಿ ಒಬ್ಬ ವಿದ್ಯಾರ್ಥಿಯ ವಿರುದ್ಧ ದೂರು ಹೇಳಿದರೆ

೧೯೩೧ನೆಯ ಇಸವಿಯ ಮಾರ್ಚ ತಿಂಗಳಿನಲ್ಲಿ ಆದ ಹೆಣ್ಣು ಮಕ್ಕಳ ವ್ಹ. ಫಾ. ಪರೀಕ್ಷೆಯ ಪರಿಣಾಮವು

ನಂ.	ಹೆಸರು.	ವಯ.	ಪಡೆದ ಗುಣಗಳು
	ಧಾರವಾಡ ಸೆಂಟರ		
೧	ಶಾಂತು ಹನೋಕಪ್ಪ ಮೋಟಬೆನ್ನೂರ	೧೫	೪೦೯
೨	ಭಾಗೀರಥಿ ಮಾಗುಂಡಪ್ಪ ಬಾರೀಗಿಡ	೧೬	೩೯೮

೩	ಕೇಶವ್ವ ಲಚ್ಚಪ್ಪ ದೊಡ್ಡಮನಿ	೧೭	೩೯೨
೪	ಅವಿನಾನಬಿ ಚಂಪಮಾ ಭಾಸೀಕಟ್ಟಿ	೧೬	೩೭೨
೫	ನಾಗಮ್ಮ ಕೃಷ್ಣಪ್ಪ ಸೋನಾರ	೧೯	೩೬೫
೬	ತೋಪವ್ವ ಕೃಷ್ಣರಾವ ಪಾಸ್ತೆ	೨೬	೩೬೨
೭	ರೂಥ ಬೋವಸಪ್ಪ ಅಬ್ನೆಸ	೧೫	೩೬೧
೮	ಲೀಲಾವತಿ ರಾಜೀವಪ್ಪ ಲದ್ವಾ	೧೫	೩೫೫
೯	ಜೋಸ್ಫಿನ್ ಜೋಹನ್ ಶಿಲ್ವಾ	೧೭	೩೪೦
೧೦	ನೀಲವ್ವ ಚನ್ನಪ್ಪ ಸವಡಿ	೧೫	೩೩೪
೧೧	ಇಂದ್ರಾ ಯೋಹಾನಪ್ಪ ಡೇವಿಡ್	೧೭	೩೩೧
೧೨	ಸತ್ಯವ್ವ ಅಡಿವೆಪ್ಪಾ ಬಾಜೆರಿ	೧೮	೩೨೯
೧೩	ಕಾಂತು ರಾಜೀವಪ್ಪ ಲದ್ವಾ	೧೩	೩೨[illegible]
೧೪	ದಾಕ್ಷಾಯಣಿ ಗುರುಪಾದಪ್ಪ ರಪಾಟಿ	೧೨	೩೨೧
೧೫	ಕಾಂತು ಚಿನ್ನಪ್ಪ ಹಳ್ಳಿ	೧೫	೩೧೬
೧೬	ಕಾಶವ್ವ ದುಂಡಯ್ಯಾ ಹಿರೇಮಠ	೧೨	೩೧೫
೧೭	ಚಂದ್ರಾ ದತ್ತಾತ್ರಯರಾವ ಜಾಧವ	೧೪	೩೦೫
೧೮	ತಿಪ್ಪವ್ವ ಲಿಂಗಶೆಟ್ಟಿ ಹಡಪದ	೧೩	೨೯೦

ಹುಬ್ಬಳ್ಳಿ ಸೆಂಟರ

೧	ವೀರವ್ವ ರುದ್ರಗೌಡಾ ಪಾಟೀಲ	೨೪	೪೩೩
೨	ತಾರಾಬಾಯಿ ಜಾಕಾರೀಯಪ್ಪ ದಂಡಿನ	೧೫	೩೯೧
೩	ಅಚಾರ್ಲಿಂಗವ್ವ ವೀರಯ್ಯ ಪುರಾಣಿಕ ಮಠ	೧೫	೩೬೯
೪	ಗುರುಬಸವ್ವ ವೀರಭದ್ರಪ್ಪ ಸುಣಧಾಳ	೧೪	೩೫೨
೫	ಪಾರ್ವತೆವ್ವ ಶಿವಮೂರ್ತೆಪ್ಪ ದೊಡವಾಡ	೧೩	೩[illegible]೧
೬	ಮುರಿಗೆವ್ವ ಬಸವಣ್ಣೆಪ್ಪ ಕುಂದಗೋಳ	೧೨	೩೧೯
೭	ಸಾವಿತ್ರಿಬಾಯಿ ಅಜರಯ್ಯಪ್ಪ ಬನ್ನಿ	೧೪	೩೦೮

ಗದಗ ಸೆಂಟರ

೧	ವೀರವ್ವ ನಾರಾಯಣಸ್ವಾಮಿ ದೇವಾಂಗಮಠ	೧೮	ಬೆಟಗೇರಿ	೩೮೦
೨	ಶಾಂತಾಬಾಯಿ ಶಿವಯೋಗೆಪ್ಪ ಕಾತರಕಿ	೧೬	,,	೩೫೨
೩	ಗಂಗವ್ವ ಶಿವಯ್ಯ ಗಣಾಚಾರ್ಯ	೧೪	ಗದಗ	೩೩೭
೪	ಬಸವ್ವ ಫಕ್ಕೀರಪ್ಪ ಹೊಂಬಳ	೧೯	ಬೆಟಗೇರಿ	೩೨೩
೫	ಆನಂದಿಬಾಯಿ ತಿಪ್ಪೋಟೆಪ್ಪ ಪಿಸೆ	೧೭	,,	೩೨೨

೬	ಮರಿಯಾ ಮೂನೆಪ್ಪ ಗುಡಸಲಮನಿ	೧೪	ಬೆಟಗೇರಿ	೩೦೧
೭	ಸುಂದ್ರಾ ಕಾಶೀನಾಥಭಟ್ಟ ಅಲಬೂರ	೧೫	ಗದಗ	೩೦೦
೮	ಸುಂದ್ರಾಬಾಯಿ ಹೊನ್ನಪ್ಪ ಕುರಿ	೧೫	ಬೆಟಗೇರಿ	೨೯೯
೯	ಸರಸ್ವತಿಬಾಯಿ ಫಕೀರಪ್ಪ ಹೊಂಬಳ	೧೫	ಬೆಟಗೇರಿ	೨೯೩
೧೦	ಶಾಂತಾಬಾಯಿ ಗೋಪಾಳರಾವ ವಿಜಾಪೂರ	೧೪	ಶಿರಹಟ್ಟಿ (ಸಾಂಗಲಿ)	೨೯೦
೧೧	ಕೃಷ್ಣಾಬಾಯಿ ಲೋಕಪ್ಪ ಶಿಂಪಿ	೧೭	(ಹಾವನೂರ)	೨೮೬
೧೨	ಸಾವಿತ್ರೆವ್ವಾ ಶಂಕರೆಪ್ಪ ಕುಂದಗೋಳ	೧೪	ನಲವಡಿ	೨೬೭

ಬೆಳಗಾವ ಸೆಂಟರ

೧	ಪುಷ್ಪಾ ಶಿದ್ದಪ್ಪ ಅರಳೀಕಟ್ಟಿ	೧೩	ಬೆಳಗಾವ	೩೩೬
೨	ತಂಗೆವ್ವ ಮಲ್ಲಪ್ಪ ಪದ್ಮಣ್ಣವರ	೧೫	,,	೩೩೦
೩	ಲೀಲಾವತಿ ಅಪ್ಪಯ್ಯಪ್ಪ ಗದಗ	೧೨	ಸವದತ್ತಿ	೨೭೬

ವಿಜಾಪೂರ ಸೆಂಟರ

೧	ಕೆಂಚವ್ವ ಎಂಕಪ್ಪ ಎಟಿ	೧೧	ಶಿರೂರ (ಬಾಗಲಕೋಟಿ)	೩೭
೨	ಶಿವು ಯಮುನೆಪ್ಪ ಮಲ್ಲಾರಿ ಹೊಲೇರ	೧೩	ಹಿಪ್ಪರಗಿ (ಸಿಂದಗಿ)	೩೫
೩	ಶಿವು ಕಾಶೀನಾಥ ಅಂಡಿಗೆ	೧೪	ವಿಜಾಪೂರ	೩೩
೪	ಬಸಪ್ಪ ಮಡಿವಾಳಪ್ಪ ಶಿವಬಲ್ಲ	೧೩	ಇಳಕಲ್ಲ	೩೩
೫	ಕಣಮಪ್ಪ ಬಸಪ್ಪ ಸೂಳೀಭಾವಿ	೧೨	ಶಿರೂರ	೩೨
೬	ಗುರವ್ವ ಸಾಯಬಣ್ಣಾ ಉಪ್ಪಾರ	೧೬	ವಿಜಾಪೂರ	೩೭
೭	ಕಾಂತೂ ಚಿನ್ನಪ್ಪ ಹೂಲಿ	೧೬	,,	೩೧
೮	ಸಾವಿತ್ರಿ ಸಿದ್ದಪ್ಪ ಬಡಿಗೇರ	೧೪	ಶಿರೂರ	೩೧
೯	ಭೀಮವ್ವಾ ಭರಮಪ್ಪ ಗೌಡರ	೨೫	ವಿಜಾಪೂರ	೨೯
೧೦	ಶೆಟ್ಟೆವ್ವ ಸಾಂತಪ್ಪ ಹೊಲೇರ	೧೫	ವಿಜಾಪೂರ	೨೯
೧೧	ಸಾಲೋಮವ್ವಾ ಮ್ಯಾನುಅಲ್ಲಪ್ಪಾ ಆಡಿನ	೧೭	ವಿಜಾಪೂರ	೨೬

ಕಾರವಾರ ಸೆಂಟರ

ಇಲ್ಲ

ಮರಾಠಿ

ಮರಾಠಿ

ಧಾರವಾಡ ಸೆಂಟರ

೧	ಗಂಗಾಬಾಯಿ ಶಂಕರರಾವ ಗೋಖಲೆ	೩೬	ಧಾರವಾಡ	೩೧೮
೨	ಮಂಜುಳಾ ದಿನಕರರಾವ ಉತ್ತಂಗಿ	೧೬	,,	೨೯೯

ಬೆಳಗಾವ ಸೆಂಟರ

೧	ಸರಸ್ವತಿ ಶಿವಾಜಿ ಕುಲಕರ್ಣಿ	೧೩	ಬೆಳಗಾವ	೩೬೫
೨	ನರ್ಮದಾ ಮಾರುತಿ ಉಂಡಲೆ	೧೯	,,	೩೬೭
೩	ಹಿರಾ ವಾಮನರಾವ ಬೋತ	೧೩	,,	೩೫೫
೪	ರುಕ್ಮಿಣಿ ನಾರಾಯಣರಾವ ಘಾದತರೆ	೧೪		೩೨೧
೫	ಮೈನಾ ಲಕ್ಷ್ಮಣ ಓಗಳೆ	೧೩	ಶಹಾಪೂರ	೩೧೮
೬	ಸುಗಂಧಾ ಹರಿ ಸುತಾರ	೧೪	ನಿಪ್ಪಾಣಿ	೩೦೮
೭	ಸರಸ್ವತಿ ರಾಮಚಂದ್ರ ತಿನ್ಯೆಕರ	೧೪	ಬೆಳಗಾವ	೨೮೫
೮	ಕುಸುಮಮಾಲಾ ಧೋಂಡೀರಾಮ ಭೋಸಲೆ	೧೬	,,	೨೮೦
೯	ಕೃಷ್ಣಾಬಾಯಿ ಶಿವರಾಮ ಕಾಜರೇಕರ	೧೩	,,	೨೬೭

ಬೆಳಗಾವ ಸೆಂಟರ

ಇಲ್ಲ

ಕಾರವಾರ ಸೆಂಟರ

೧	ಮೀರಾ ಆನಂದರಾವ ವಾಘ	೧೩	ಕಾರವಾರ	೩೪೮
೨	ಸುಮತಿ ನೀಲಕಂಠ ದೇವಿಮನೆ	೧೪	,,	೩೪೭
೩	ಲಕ್ಷ್ಮಿ ಮಾರುತಿರಾವ ಕುಲಕರ್ಣಿ	೧೪	,,	೩೧೯
೪	ಎಲಿಝಾ ಸವಿಥೋರ ಫರ್ನಾಂಡೀಜ	೧೪	ಸದಾಶಿವಗಡ	೩೦೮

ಉರ್ದು ಹುಬ್ಬಳ್ಳಿ ಸೆಂಟರ

೧	ಆಶಾಬಿ ಮಹಮ್ಮದಸಾ ಸವನೂರ	೧೫	ಹುಬ್ಬಳ್ಳಿ	೨೯೭
೨	ಜನ್ನಾತಬಿ ಆದಮಸಾಹೇಬ ಪಂತೋಜಿ	೧೨	,,	೨೯೬
೩	ಸೊಗರಾಬಿ ಅಬ್ದುಲ್ ವಹಾಬಸಾ ಖಾಜಿ	೧೧	,,	೨೮೨

ಬೆಳಗಾವ ಸೆಂಟರ

೧	ಬಿಯಾಣಿಬಿ ಮಹಮ್ಮದಸಾಹೇಬ ಆಡಕೂರ	೧೪	ಬೆಳಗಾವ	೩೩೦
೨	ಹಜರಾಬಿ ಮಿರಾನಸಾಹೇಬ	೧೩	,,	೩೨೫

ಧಾರವಾಡ
೫-೬-೧೯೩೧

ಕೆ. ಎಸ್. ವಕೀಲ
ಎ. ಇ. ದ. ಭಾಗ.

ಪುಸ್ತಕ ಪರಿಚಯ

ಸದ್ಗುಣಾದರ್ಶ

ಪುಟ ೪+೧೩೨, ಬಾದಶಹರ ಚಿತ್ರದಿಂದ ಒಡಗೂಡಿವೆ.

ಅಂದವಾದ ಮುದ್ರಣ ಬೆಲೆ ೧೦ ಆಣೆ

ಗ್ರಂಥಕರ್ತ—ಶ್ರೀ. ಮ. ಪ್ರ. ಪೂಜಾರ ಪಂಡಿತ ಟ್ರೇನಿಂಗಸ್ಕೂಲ ಧಾರವಾಡ.

ಈ ಪುಸ್ತಕದಲ್ಲಿ ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ಆಗಿಹೋದ ಐತಿಹಾಸಿಕ ಪೌರಾಣಿಕ ಮಹಾಪುರುಷರ ಚರಿತ್ರದೊಳಗಿನ ಒಂದೊಂದು ಮಹತ್ವದ ಸಂಗತಿಯನ್ನು ಅವಲಂಬಿಸಿ ಒಂದೊಂದು ಸದ್ಗುಣವು ಓದುಗರ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ಸುಲಲಿತವಾದ ಶೈಲಿಯಲ್ಲಿ ಬರೆದ ಎಂಬತ್ತು ಕಥೆಗಳಿವೆ. ಈ ಪುಸ್ತಕದಲ್ಲಿರುವ ಒಂದೊಂದು ಕಥೆಯು ಒಂದೊಂದು ಸದ್ಗುಣವನ್ನು ಬೋಧಿಸುವದರಿಂದ ಪುಸ್ತಕವು ನಿಜವಾಗಿ ಸದ್ಗುಣಗಳ ಆದರ್ಶವಾಗಿದೆ. ಕಥೆಗಳಲ್ಲಿ ಆಯಾ ವ್ಯಕ್ತಿಗಳ ಚರಿತ್ರಗಳೊಳಗಿನ ಮಹತ್ವದ ಅಂಶವನ್ನಷ್ಟೇ ಆಯ್ದುಕೊಂಡಿರುವದರಿಂದ ಈ ಕಥೆಗಳು ಓದುವದಕ್ಕೆ ಕುತೂಹಲವನ್ನುಂಟುಮಾಡುತ್ತ ಮನಸ್ಸಿಗೆ ಬಹು ಸೊಗಸನ್ನುಂಟುಮಾಡುವವು. ಈ ರೀತಿಯಾಗಿ ಈ ಪುಸ್ತಕವು ಕಾದಂಬರಿಗಳಂತೆ ಚಿತ್ತಾಕರ್ಷಕವಾಗಿರುವದಲ್ಲದೆ ನೀತಿಗ್ರಂಥಗಳಂತೆ ನೀತಿಬೋಧಕವೂ ಆಗಿದೆ. ಸಾಧಾರಣ ಓದಬಲ್ಲವರು ಕೂಡ ಈ ಪುಸ್ತಕದಿಂದ ಪ್ರಯೋಜನವನ್ನು ಹೊಂದದಿರಲಾರರು. ಒಳ್ಳೆಯ ವಿಷಯ, ಪರಿಶುದ್ಧ ಮತ್ತು ಅಚ್ಚುಕಟ್ಟಾದ ಭಾಷೆ ಇವುಗಳಿಂದ ಇದು ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾದುದೆಂಬ ವಿಷಯದಲ್ಲಿ ಸಂಶಯವಿಲ್ಲ. ಈ ಮೊದಲು ಪ್ರಕಟಿತವಾದ ಇದೇ ಗ್ರಂಥಕರ್ತರ 'ಸತ್ಕಥಾಲಾಪ' ಎಂಬ ಪುಸ್ತಕದ ಪರಿಚಯವು ಅನೇಕರಿಗೆ ಉಂಟು. ಈ ಪುಸ್ತಕವೂ ಅದೇ ರೀತಿಯಿಂದ ಬರೆಯಲ್ಪಟ್ಟಿದೆ. ಪುಸ್ತಕಗಳು ಗ್ರಂಥಕರ್ತರಲ್ಲಿಯೂ ಜೋಶಿ ಬ್ರದರ್ಸ ಬುಕ್ ಡಿಪೋ ಲೈನಬಝಾರ ಧಾರವಾಡ ಮತ್ತು ವಾಗ್ವಿಲಾಸ ಬುಕ್ ಡಿಪೋ ಹುಬ್ಬಳ್ಳಿ ಇವುಗಳಲ್ಲಿಯೂ ದೊರೆಯುವವು.

ಸಂ—

ಮುದ್ರಕರು—ಹಿಂ. ರಾ. ಭಿಸೆ. ಕ. ಪ್ರಿಂ. ವ. ಧಾರವಾಡ. ೩೩೩,೩೧,೪೦೦.

ಸ್ವಲ್ಪ ವೆಚ್ಚ ! ಉತ್ತಮ ಸಂಧಿ !! ಅಲಭ್ಯ ಲಾಭ !!!

ಮೋಟರ ಡ್ರಾಯವ್ಹಿಂಗ ಮತ್ತು ಮೆಕಾನಿಕಲ್ ಜ್ಞಾನ.



ನಮ್ಮಲ್ಲಿ ಮೋಟರ ಡ್ರಾಯವ್ಹಿಂಗ ಹಾಗು ಮೆಕಾನಿಕಲ್ ಜ್ಞಾನ ಎರಡೂ ಮಾಡಿಕೊಡುವೆವು; ಇಷ್ಟೇ ಅಲ್ಲ, ಪ್ರತಿಯೊಬ್ಬ ವಿದ್ಯಾರ್ಥಿಯ ಕಡೆಯಿಂದ ಮೋಟರಿನ ಪ್ರತಿಯೊಂದು ಸಾಮಾನ ಬಿಚ್ಚಿಸಿ ಅವನ ಕಡೆಯಿಂದಲೇ ಕೂಡಿಸಿಕೊಳ್ಳುತ್ತೇವೆ. ಬರೆ ಡ್ರಾಯವ್ಹಿಂಗ ಕಲಿಸಲಿಕ್ಕೆ ಎರಡನೇ ಕಡೆಗೆ ಸ್ವಲ್ಪ ಫೀ ತುಂಬಿ ಚಿತ್ರವಿಚಿತ್ರ ಜಾಹೀರಾತಿಗೆ ಮರುಳಾಗಿ ಏನೂ ಜ್ಞಾನವಿಲ್ಲದೆ ಲಾಯಿಸನ್ಸ ಮಾತ್ರ ಕಿಸೆಯಲ್ಲಿ ಇಟ್ಟವರನ್ನು, ಕಣ್ಣಾರೆ ನೋಡುತ್ತೇವೆ. ಈ ಕಷ್ಟವನ್ನು ಹೋಗಲಾಡಿಸುವದಕ್ಕೋಸ್ಕರ ನಾವು ಬಹಳ ಶ್ರಮತಕ್ಕೊಂಡು ವಿದ್ಯಾರ್ಥಿಗಳ ಹಿತದ ಕಡೆಗೆ ಲಕ್ಷಗೊಡುತ್ತೇವೆ. ಈಗ ಎಷ್ಟೋ ವಿದ್ಯಾರ್ಥಿಗಳು ನಮ್ಮಲ್ಲಿ ಕಲಿತು ಸ್ವಾವಲಂಬಿಗಳಾಗಿ ಹೊಟ್ಟೆತುಂಬಿ ಕೊಳ್ಳುತ್ತಾರೆ. ಈ ಬಗ್ಗೆ ದೊಡ್ಡ ದೊಡ್ಡ ಗೃಹಸ್ಥರ ಸರ್ಟಿಫಿಕೇಟುಗಳಿವೆ.

ತಮ್ಮ ಹಿತಚಿಂತಕ

ಪ್ರೊ. ವ್ಹಿ. ಎಸ್ ಇಟಗಿ,

ಮುನಸಿಫ್ ಕೋರ್ಟಿನ ಹತ್ತರ ಧಾರವಾಡ

ಜಾಹೀರಾತು

ಸ್ಯಾಂಪಲ್] [ಪುಕ್ಕಟೆ

ಉತ್ತಮ ಮಸೀ ಚೀಟುಗಳು

ನೀಲೀಕಪ್ಪು, ಕೆಂಪು, ಜಾಂಬಳಿ ಮಸಿಯ ಚೀಟುಗಳು. ಈ ಕಂಪನಿಯು ಬಹಳ ಜನರಿಂದ ಶಿಫಾರಸ ಪಡೆದು ಮೆಡಲ್ಲುಗಳನ್ನು ಸಂಪಾದಿಸಿರುತ್ತದೆ.

ದರಗಳು

೧೦೦ ಚೀಟುಗಳಿಗೆ		೦—೭—೦
೫೦೦	,,	೨—೦—೦
೧೦೦೦	,,	೩—೮—೦
೧೦೦೦೦	,, ೩೦—೦—೦	(ರೇಲ್ವೆ ಫ್ರಿ)

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ

ಕರ್ನಾಟಕ ಇಂಕ ಕಂಪನಿ,
ಬಾಗಲಕೋಟೆ.

REGISTERED NO B 2567

From
The Manager,
Kannada Prathamik Sikshana
Dharwar

LIST NO. ೨೦

Reg. No. B 2567

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Sikshana

AUGUST 1931

ಸಂಪಾದಕ–ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ

ಸಂಪುಟ ೬೮ ವರ್ಷ ೩ | ಅಗಸ್ಟ ೧೯೩೧ | ೩ನೆಯ. ಸಂ. ೫

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ.
೧	ದಶಕ ಪದ್ಧತಿಯ ಕಲ್ಪನೆ	೧
೨	ಚಿಕ್ಕಮಕ್ಕಳ ಅಕ್ಷರಾಭ್ಯಾಸ	೪
೩	ರಾಮಪ್ರಸಾದ	೬
೪	ಸಿಂಹಳದ್ವೀಪ	೧೩
೫	ನಾಯಕ ನರೇಶರ ಅಮಾತ್ಯ ಗೋವಿಂದ ದೀಕ್ಷಿತರು	೧೯
೬	ಸನ್ಮಾರ್ಗಬೋಧೆ	೨೩
೭	೧೯೩೧ನೇ ಇಸ್ವಿಯ ಧಾರವಾಡ ಜಿಲ್ಹೆಯ ವ್ಹ. ಫಾ. ಪರೀಕ್ಷೆಯ ಪರಿಣಾಮವು	೩೧

Printed by K. R. Bhise at the Karnatak Printing Works, Dharwar
Published by H. G. Deshpande, B A.,
Head-Master, Training College for Men, Dharwar, at his Offic

ಸ್ವಲ್ಪ ವೆಚ್ಚ ! ಉತ್ತಮ ಸಂಧಿ !! ಅಲಭ್ಯ ಲಾಭ

ಮೋಟರ ಡ್ರಾಯವ್ಹಿಂಗ ಮತ್ತು ಮೆಕಾನಿಕಲ್ ಜ್ಞಾನ.



ನಮ್ಮಲ್ಲಿ ಮೋಟರ ಡ್ರಾಯವ್ಹಿಂಗ ಹಾಗು ಮೆಕಾನಿಕಲ್ ಜ್ಞಾನ ಎಂ
ಮಾಡಿಕೊಡುವೆವು; ಇಷ್ಟೇ ಅಲ್ಲ, ಪ್ರತಿಯೊಬ್ಬ ವಿದ್ಯಾರ್ಥಿಯ ಕಡೆಯಿಂದ ಮೋಟ
ಪ್ರತಿಯೊಂದು ಸಾಮಾನ ಬಿಚ್ಚಿಸಿ ಅವನ ಕಡೆಯಿಂದಲೇ ಕೂಡಿಸಿಕೊಳ್ಳುತ್ತೇವ
ಬರೇ ಡ್ರಾಯವ್ಹಿಂಗ ಕಲಿಸಲಿಕ್ಕೆ ಎರಡನೇ ಕಡೆಗೆ ಸ್ವಲ್ಪ ಫೀ ತುಂಬಿ ಚಿತ್ರವಿಚಿ
ಜಾಹೀರಾತಿಗೆ ಮರುಳಾಗಿ ಏನೂ ಜ್ಞಾನವಿಲ್ಲದೆ ಲಾಯಿಸನ್ಸ ಮಾತ್ರ ಕಿಸೆಯ
ಇಟ್ಟಿದ್ದನ್ನು, ಕಣ್ಣಾರೆ ನೋಡುತ್ತೇವೆ. ಈ ಕಷ್ಟವನ್ನು ಹೋಗಲಾಡಿಸುವದಕ್ಕೋಸ್ಕ
ನಾವು ಬಹಳ ಶ್ರಮ ತಕ್ಕೊಂಡು ವಿದ್ಯಾರ್ಥಿಗಳ ಹಿತದ ಕಡೆಗೆ ಲಕ್ಷಗೊಡುತ್ತೇ
ಈಗ ಎಷ್ಟೋ ವಿದ್ಯಾರ್ಥಿಗಳು ನಮ್ಮಲ್ಲಿ ಕಲಿತು ಸ್ವಾವಲಂಬಿಗಳಾಗಿ ಹೊಟ್ಟೆತುಂ
ಕೊಳ್ಳುತ್ತಾರೆ. ಈ ಬಗ್ಗೆ ದೊಡ್ಡ ದೊಡ್ಡ ಗೃಹಸ್ಥರ ಸರ್ಟಿಫಿಕೇಟುಗಳಿವೆ.

ತಮ್ಮ ಹಿತಚಿಂತಕ,

ಪ್ರೊ. ವ್ಹಿ. ಎಸ್. ಇಟಗಿ,

ಮುನಸಿಫ್ ಕೋರ್ಟಿನ ಹತ್ತರ ಧಾರವಾಡ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:—ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.,

ಸಂಪುಟ ೬೮ ವರ್ಷ ೩	ಅಗಸ್ಟ ೧೯೩೧	ಸಂಚಿಕೆ ೫

ದಶಕ ಪದ್ಧತಿಯ ಕಲ್ಪನೆ ಮಾಡಿಕೊಡುವದು

ಬರೆದವ:—ವಿ. ಗ. ಬಿ. ಜೋಶಿ ಅಸಿ. ಮಾಸ್ತರ್, ಪ್ರಾ. ಸ್ಕೂಲ್, ಟ್ರೇ. ಸ್ಕೂ. ಧಾರವಾಡ.

೧. ನೂರರ ನೋಟು, ಹತ್ತರ ನೋಟು, ಬಿಡಿ ರೂಪಾಯಿ:— ಸ್ಥಾನದ ಕಲ್ಪನೆಯನ್ನು ತಂದುಕೊಡುವ ಮೊದಲು ನೋಟುಗಳನ್ನು ಉಪಯೋಗಿಸು ವದು ಮುಂದಿನ ಕಲ್ಪನೆಗೆ ಪರಿಪೋಷಕವಾಗುವದು. ಉದಾ:—

೨ ಹತ್ತರ ನೋಟು ೩ ಬಿಡಿ ರೂಪಾಯಿ = ೨೩ ರೂ.

೩ ನೂರರ ನೋಟು, ೩ ಹತ್ತರ ನೋಟು ೫ ಬಿಡಿ ರೂಪಾಯಿ = ೩೩೫ ರೂ.

ಇಲ್ಲಿ ಹತ್ತರ ನೋಟುಗಳೂ, ನೂರರ ನೋಟುಗಳೂ ಎರಡೂ ಅಂಥ ಕಾಗದ ಗಳೇ ಇದ್ದರೂ ಅವುಗಳ ಬೆಲೆಯಲ್ಲಿ ಹೆಚ್ಚುಕಡಿಮೆ ಇರುವದನ್ನು ತಿಳಿಸುವದು. ಇದ ರಿಂದ ಮುಂದೆ ಬೇರೆ ಬೇರೆ ಸ್ಥಾನದಲ್ಲಿದ್ದಾಗ ಅಂಕೆಯು ಬೇರೆ ಬೇರೆ ಬೆಲೆಯನ್ನು ತೋರಿಸುವದೆಂಬ ಕಲ್ಪನೆ ಇಲ್ಲಿ ಬರುವದು. (ನೋಟು ದೊರೆಯುಲು ಶಕ್ಯವಾಗದಿದ್ದರೆ ಈ ಮೆಟ್ಟನ್ನು ಬಿಟ್ಟು ಬಿಡಬಹುದು.)

೨. ಬಣ್ಣದ ಪೆಟ್ಟಿಗೆಗಳನ್ನು ಉಪಯೋಗಿಸುವದು :— (ಎಡಕ್ಕೆ ತೋರಿಸಿದಂತೆ ಬೇರೆ ಬೇರೆ ಬಣ್ಣದ * ಪೆಟ್ಟಿಗೆಗಳನ್ನು ತೆಗೆದುಕೊಂಡು) ನೀಲಿಯ

* ಬೇಕಾದ ಬಣ್ಣದ ಪೆಟ್ಟಿಗೆಗಳನ್ನಾದರೂ ಉಪಯೋಗಿಸಬಹುದು. ಆದರೆ ನೀಲಿ, ಹಳದಿ, ಬಿಳಿದು, ಈ ಶಬ್ದಗಳಲ್ಲಿರುವ ನೀ. ಹ. ಬಿ. ಈ ಆದ್ಯಕ್ಷರಗಳು ನೂರು, ಹತ್ತು, ಬಿಡಿ ಈ ಶಬ್ದಗಳು ಸ್ಮರಣೆಯಲ್ಲಿ ಉಳಿಯುವದಕ್ಕೆ ಸಹಾಯವನ್ನುಂಟುಮಾಡುವವು.

ನೀಲಿಯು ಪೆಟ್ಟಿಗೆ	ಹಳದಿಯು ಪೆಟ್ಟಿಗೆ	ಬಿಳಿಯು ಪೆಟ್ಟಿಗೆ

ಬಣ್ಣದ ಪೆಟ್ಟಿಗೆಯಲ್ಲಿ ಒಂದು ಗುಂಡನ್ನು ಹಾಕಲು ಅದು ೧ ನೂರರ ಗುಂಪು ಎಂದು ತಿಳಿ; ಹಳದಿಯು ಪೆಟ್ಟಿಗೆಯಲ್ಲಿ ೧ ಗುಂಡನ್ನು ಹಾಕಲು ಅದು ೧ ಹತ್ತರ ಗುಂಪು ಎಂದು ತಿಳಿ. ಬಿಳಿಯು ಪೆಟ್ಟಿಗೆಯಲ್ಲಿ ೧ ಗುಂಡು ಹಾಕಿದರೆ ೧ ಬಿಡಿ ಗುಂಡು ಎಂದು ತಿಳಿ; ಪ್ರತಿ ಒಂದು ಪೆಟ್ಟಿಗೆಯಲ್ಲಿ ೯ಗುಂಡುಗಳನ್ನು ಹಾಕಲಿಕ್ಕೆ ಬರುವದು; ಅದಕ್ಕಿಂತ ಹೆಚ್ಚಿಗೆ ಹಾಕಕೂಡದು. ಎಂದು ಹೇಳಿ, ನೀಲಿಯು ಪೆಟ್ಟಿಗೆಯಲ್ಲಿ ೨ ಗುಂಡುಗಳನ್ನೂ, ಹಳದಿಯು ಪೆಟ್ಟಿಗೆಯಲ್ಲಿ ೩ ಗುಂಡುಗಳನ್ನೂ ಬಿಳಿಯು ಪೆಟ್ಟಿಗೆಯಲ್ಲಿ ೫ ಗುಂಡುಗಳನ್ನೂ ಹಾಕಿದರೆ ಎಷ್ಟು; ಎಂದು ಕೇಳುವದು.

೨ ನೂರರ ಗುಂಪು, ೩ ಹತ್ತರ ಗುಂಪು, ೫ ಬಿಡಿ ಹೀಗೆ ವಸ್ತುಗಳನ್ನು ತೋರಿಸಿದಂತಾಯಿತು. ಆದ್ದರಿಂದ ಇದನ್ನು ೨ ನೂರು ಮೂವತ್ತು ಐದು ಎಂದು ಓದಲಿ.

ಈ ಮೇರೆಗೆ ಬೇರೆ ಬೇರೆ ಸಂಖ್ಯೆಗಳನ್ನು ಸೂಚಿಸುವಂತೆ ಪೆಟ್ಟಿಗೆಗಳಲ್ಲಿ ಗುಂಡುಗಳನ್ನು ಹಾಕಿ ಓದಿಸಿಕೊಳ್ಳಬೇಕು. ಮತ್ತು ತಾನು ಸಂಖ್ಯೆಗಳನ್ನು ಹೇಳಿ ಆಯಾ ಪೆಟ್ಟಿಗೆಯಲ್ಲಿ ವಿದ್ಯಾರ್ಥಿಗಳಿಂದ ಗುಂಡುಗಳನ್ನು ಹಾಕಿಸಬೇಕು. ಹೀಗೆ ಗುಂಡುಗಳನ್ನು ಬೇರೆ ಬೇರೆ ಬಣ್ಣದ ಪೆಟ್ಟಿಗೆಯಲ್ಲಿ ಹಾಕಲು ಬೇರೆ ಬೇರೆ ಬೆಲೆಯನ್ನು ತೋರಿಸಬಹುದೆಂಬ ಕಲ್ಪನೆಯನ್ನು ತಂದು ಕೊಡಬೇಕು.

೩. ಪೆಟ್ಟಿಗೆಗಳ ಚಿತ್ರಗಳನ್ನು ಉಪಯೋಗಿಸುವದು:— ಮೇಲಿನಂತೆ ರೂಢಿಯಾದ ಬಳಿಕ ಪೆಟ್ಟಿಗೆಗಳನ್ನಿಡದೆ ಅವುಗಳ ಚಿತ್ರಗಳನ್ನು ಉಪಯೋಗಿಸಬೇಕು.

೦ ೦	೦ ೦ ೦	೦ ೦

ಬಲಗಡೆಯು ಚಿತ್ರದಲ್ಲಿ ಬಿಡಿ ವಸ್ತುಗಳು, ಬಳಿಕ ಹತ್ತರ ಗುಂಪುಗಳು, ಆ ಬಳಿಕ ನೂರರ ಗುಂಪುಗಳು ಇವುಗಳನ್ನು ತೋರಿಸುವ ಪೆಟ್ಟಿಗೆಯು ಚಿತ್ರಗಳೆಂದು ಹೇಳಿ, ಮೇಲೆ ಹೇಳಿದಂತೆ ಗುಂಡುಗಳ ಚಿತ್ರಗಳನ್ನು ಬರೆದು ಸಂಖ್ಯೆಗಳನ್ನು ಓದಿಸಿಕೊಳ್ಳುವ ರೂಢಿಯುಮಾಡಬೇಕು.

೪. ಗುಂಡುಗಳ ಬದಲು ಅಂಕೆಗಳನ್ನು ಉಪಯೋಗಿಸುವದು:— ೨ ಗುಂಡುಗಳ ಬದಲು ನೀಲಿಯು ಪೆಟ್ಟಿಗೆಯು ಖಾನೆಯಲ್ಲಿ ೨ ಬರೆದರೂ ೨ ನೂರರ

೨		

ಗುಂಪುಗಳಾಗುವವೆಂದು ತಿಳಿಯಬಹುದು; ಮೊದಲಾಗಿ ಅಂಕೆಗಳನ್ನು ಬೇರೆ ಬೇರೆ ಖಾನೆ (ಮನೆ) ಗಳಲ್ಲಿ ಬರೆಯುವದರಿಂದ ಉಂಟಾ

ಗುವ ಸಂಖ್ಯೆಗಳನ್ನು ತಿಳಿಸಿ ರೂಢಿ ಮಾಡಿಸಬೇಕು. ಇದರಿಂದ ಗುಂಡುಗಳು ಬೇರೆ ಬೇರೆ ಪೆಟ್ಟಿಗೆಯಲ್ಲಿ ಬಿಡಿ, ಹತ್ತರ ಗುಂಪು ನೂರರ ಗುಂಪುಗಳನ್ನು ತೋರಿಸುವಂತೆ ಈ ಅಂಕೆಗಳೂ ಬೇರೆ ಬೇರೆ ಸ್ಥಳದಲ್ಲಿ ಬೇರೆ ಬೇರೆ ಗುಂಪುಗಳನ್ನು ತೋರಿಸುವವು; ಎಂಬ ಕಲ್ಪನೆ ಬರುವದು. ಇಸ್ಪೇಟಿನ ಮೇಲೆ ಬರೆದ ಅಂಕೆಯ ಪಟಗಳನ್ನು ಬೇರೆ ಬೇರೆ ಮನೆಯಲ್ಲಿ ಹಾಕುತ್ತ ಸಂಖ್ಯೆಯನ್ನು ಓದಿಸುವ ರೂಢಿ ಮಾಡಿಸಬೇಕು.

೫. ಮನೆಯ ಬದಲು ಅಕ್ಷರಗಳನ್ನು ಬರೆಯುವದು:—ಮನೆಯ ಬರೆಯುವದನ್ನು ಬಿಟ್ಟು ಬರಿಯ ಅಂಕೆಗಳಿಂದಲೇ ಸಂಖ್ಯೆಗಳನ್ನು ಬರೆದು ಮೊದಲನೆಯ ಸ್ಥಾನವು ಬಿಡಿವಸ್ತುಗಳನ್ನೂ, ೨ನೆಯ ಸ್ಥಾನವು ಹತ್ತರ ಗುಂಪುಗಳನ್ನೂ, ೩ನೆಯ ಸ್ಥಾನವು ನೂರರ ಗುಂಪುಗಳನ್ನೂ ತೋರಿಸುವವೆಂಬವನ್ನು ರೂಢಿ ಮಾಡಿಸಬೇಕು ಮೊದ ಮೊದಲು ಬರಿಯ ನೂ. ಹ. ಬಿ ಮೊದಲಾಗಿ ಅಕ್ಷರಗಳನ್ನು ಉಪಯೋಗಿಸಬಹುದು. ಮೊದ ಮೊದಲು ಐದುನೂರು ಇದನ್ನು ೫ ನೂ. ಎಂದು ಬರೆಯಲಿ. ರೂಢಿಯಾದ ಬಳಿಕ ಅವನ್ನು ಬರೆಯುವದನ್ನು ಬಿಟ್ಟು ಬಿಡಬೇಕು.

೬. ಸೊನ್ನೆಯ ಕಲ್ಪನೆ:— ಯಾವ ಗುಂಪುಗಳಿಲ್ಲವೋ ಆ ಮನೆಯನ್ನು ಈ ಮೊದಲೇ ಬರಿದಾಗಿ ಬಿಡುತ್ತಿದ್ದೆವು. ಆದರೆ ಮನೆಗಳನ್ನು ಬಿಟ್ಟು ಹಾಗೇ ಒಂದರ ಮುಂದೆ ಒಂದು ಅಂಕೆಗಳನ್ನು ಬರೆಯುವಾಗ ತೆರವಿದ್ದ ಮನೆಯನ್ನು ತೋರಿಸದಿದ್ದರೆ ಹೇಗೆ ಅನರ್ಥವಾಗುವದೆಂಬದನ್ನು ತಿಳಿಸಿ, ತೆರವಿದ್ದ ಮನೆಯನ್ನು ಸೂಚಿಸುವದಕ್ಕಾಗಿ '0' ಈ ಗುರುತನ್ನು ಹಾಕಿದರೆ ಆ ತೊಂದರೆ ಹೇಗೆ ತಪ್ಪುವದೆಂಬದನ್ನು ಹೇಳಬೇಕು. ಉದಾ— ೫ ನೂರು ಇದನ್ನು ಬರೆಯುವಾಗ ಈ ಮೊದಲು ೫ ನೂ. ಎಂದು ಬರೆಯುತ್ತಿದ್ದೆವು. ಆದರೆ ಈಗ ೫ ಹೀಗೆ ಬರೆದರೆ ಇದನ್ನು ಏನೆಂದು ಓದುವಿರಿ. ಆದದರಿಂದ ಈ ತೊಂದರೆಯನ್ನು ತಪ್ಪಿಸುವದಕ್ಕಾಗಿ ಎಂದರೆ ೫ ಇದು ನೂರರ ಮನೆಯದು ಎಂಬದನ್ನು ತೋರಿಸುವದಕ್ಕಾಗಿ ಅದರ ಮುಂದಿನ ಹತ್ತರ, ಬಿಡಿಯ ಮನೆಗಳಲ್ಲಿ ಯಾವವೂ ಇಲ್ಲ ಎಂಬದನ್ನು ತೋರಿಸುವದಕ್ಕಾಗಿ '0' ಈ ಗುರುತನ್ನು ಹಾಕುವರು. ಇದಕ್ಕೆ ಸೊನ್ನೆ ಎಂಬ ಹೆಸರು.

ಈ ಮೇರೆಗೆ ಒಮ್ಮೆ ಸ್ಥಾನದ ಕಲ್ಪನೆಯಾದ ಬಳಿಕ ಎಡಕ್ಕೆ ಒಂದೊಂದೇ ಸ್ಥಾನದ ಹೆಸರನ್ನು ಹೇಳುತ್ತ ಸಾಗಬೇಕು. ಎಂದರೆ ಬೇಕಾದ ಸ್ಥಾನದ ವಿಷಯವಾಗಿಯಾದರೂ ವಿದ್ಯಾರ್ಥಿಗಳು ತಿಳಿಯಬಲ್ಲರು.

ಗಣಿತದ ಹೊಸ ಅಭ್ಯಾಸಪತ್ರಿಕೆಯಲ್ಲಿ ಬೇರೆಬೇರೆ ಇಯತ್ತೆಗೆ ಬೇರೆಬೇರೆ ಸ್ಥಾನದ ವರೆಗೆ ಸಂಖ್ಯೆಗಳನ್ನು ಕಲಿಸಬೇಕೆಂಬ ಉಲ್ಲೇಖವಿರುವದು. ಇದರಿಂದ ೨ನೆಯ ಇಯತ್ತೆಗೆ ಲಕ್ಷ, ದಶಲಕ್ಷ, ಕೋಟಿ ಮೊದಲಾದ ಸ್ಥಾನಗಳ ಕಲ್ಪನೆಯನ್ನು ಕೊಡಬಾರದೆಂತಲ್ಲ. ಕೇವಲ ಉದ್ದುದ್ದಾದ ಸಂಖ್ಯೆಯನ್ನು ಬರೆಯುವದರಲ್ಲಿಯೇ ವಿದ್ಯಾರ್ಥಿಗಳ ಹೆಚ್ಚು

ನೀಲಿಯ ಪೆಟ್ಟಿಗೆ	ಹಳದಿಯ ಪೆಟ್ಟಿಗೆ	ಬಿಳಿಯ ಪೆಟ್ಟಿಗೆ

ಬಣ್ಣದ ಪೆಟ್ಟಿಗೆಯಲ್ಲಿ ಒಂದು ಗುಂಡನ್ನು ಹಾಕಲು ಅದು ೧ ನೂರರ ಗುಂಪು ಎಂದು ತಿಳಿ; ಹಳದಿಯ ಪೆಟ್ಟಿಗೆಯಲ್ಲಿ ೧ ಗುಂಡನ್ನು ಹಾಕಲು ಅದು ೧ ಹತ್ತರ ಗುಂಪು ಎಂದು ತಿಳಿ. ಬಿಳಿಯ ಪೆಟ್ಟಿಗೆಯಲ್ಲಿ ೧ ಗುಂಡು ಹಾಕಿದರೆ ೧ ಬಿಡಿ ಗುಂಡು ಎಂದು ತಿಳಿ; ಪ್ರತಿ ಒಂದು ಪೆಟ್ಟಿಗೆಯಲ್ಲಿ ೯ಗುಂಡುಗಳನ್ನು ಹಾಕಲಿಕ್ಕೆ ಬರುವದು; ಅದಕ್ಕಿಂತ ಹೆಚ್ಚಿಗೆ ಹಾಕಕೂಡದು. ಎಂದು ಹೇಳಿ, ನೀಲಿಯ ಪೆಟ್ಟಿಗೆಯಲ್ಲಿ ೨ ಗುಂಡುಗಳನ್ನೂ, ಹಳದಿಯ ಪೆಟ್ಟಿಗೆಯಲ್ಲಿ ೩ ಗುಂಡುಗಳನ್ನೂ, ಬಿಳಿಯ ಪೆಟ್ಟಿಗೆಯಲ್ಲಿ ೫ ಗುಂಡುಗಳನ್ನೂ ಹಾಕಿದರೆ ಎಷ್ಟು; ಎಂದು ಕೇಳುವದು.

೨ ನೂರರ ಗುಂಪು, ೩ ಹತ್ತರ ಗುಂಪು, ೫ ಬಿಡಿ ಹೀಗೆ ವಸ್ತುಗಳನ್ನು ತೋರಿಸಿದಂತಾಯಿತು. ಆದ್ದರಿಂದ ಇದನ್ನು ೨ ನೂರು ಮೂವತ್ತು ಐದು ಎಂದು ಓದಲಿ.

ಈ ಮೇರೆಗೆ ಬೇರೆ ಬೇರೆ ಸಂಖ್ಯೆಗಳನ್ನು ಸೂಚಿಸುವಂತೆ ಪೆಟ್ಟಿಗೆಗಳಲ್ಲಿ ಗುಂಡುಗಳನ್ನು ಹಾಕಿ ಓದಿಸಿಕೊಳ್ಳಬೇಕು. ಮತ್ತು ತಾನು ಸಂಖ್ಯೆಗಳನ್ನು ಹೇಳಿ ಆಯಾ ಪೆಟ್ಟಿಗೆಯಲ್ಲಿ ವಿದ್ಯಾರ್ಥಿಗಳಿಂದ ಗುಂಡುಗಳನ್ನು ಹಾಕಿಸಬೇಕು. ಹೀಗೆ ಗುಂಡುಗಳನ್ನು ಬೇರೆ ಬೇರೆ ಬಣ್ಣದ ಪೆಟ್ಟಿಗೆಯಲ್ಲಿ ಹಾಕಲು ಬೇರೆ ಬೇರೆ ಬೆಲೆಯನ್ನು ತೋರಿಸಬಹುದೆಂಬ ಕಲ್ಪನೆಯನ್ನು ತಂದು ಕೊಡಬೇಕು.

೩. ಪೆಟ್ಟಿಗೆಗಳ ಚಿತ್ರಗಳನ್ನು ಉಪಯೋಗಿಸುವದು:— ಮೇಲಿನಂತೆ ರೂಢಿಯಾದ ಬಳಿಕ ಪೆಟ್ಟಿಗೆಗಳನ್ನಿಡದೆ ಅವುಗಳ ಚಿತ್ರಗಳನ್ನು ಉಪಯೋಗಿಸಬೇಕು.

○ ○	○ ○ ○	○ ○

ಬಲಗಡೆಯ ಚಿತ್ರದಲ್ಲಿ ಬಿಡಿ ವಸ್ತುಗಳು, ಬಳಿಕ ಹತ್ತರ ಗುಂಪುಗಳು, ಆ ಬಳಿಕ ನೂರರ ಗುಂಪುಗಳು ಇವುಗಳನ್ನು ತೋರಿಸುವ ಪೆಟ್ಟಿಗೆಯ ಚಿತ್ರಗಳೆಂದು ಹೇಳಿ, ಮೇಲೆ ಹೇಳಿದಂತೆ ಗುಂಡುಗಳ ಚಿತ್ರಗಳನ್ನು ಬರೆದು ಸಂಖ್ಯೆಗಳನ್ನು ಓದಿಸಿಕೊಳ್ಳುವ ರೂಢಿಯುಮಾಡಬೇಕು.

೪. ಗುಂಡುಗಳ ಬದಲು ಅಂಕೆಗಳನ್ನು ಉಪಯೋಗಿಸುವದು:— ೨ ಗುಂಡುಗಳ ಬದಲು ನೀಲಿಯ ಪೆಟ್ಟಿಗೆಯ ಖಾನೆಯಲ್ಲಿ ೨ ಬರೆದರೂ ೨ ನೂರರ

೨		

ಗುಂಪುಗಳಾಗುವವೆಂದು ತಿಳಿಯಬಹುದು; ಮೊದಲಾಗಿ ಅಂಕೆಗಳನ್ನು ಬೇರೆ ಬೇರೆ ಖಾನೆ (ಮನೆ) ಗಳಲ್ಲಿ ಬರೆಯುವದರಿಂದ ಉಂಟಾ

ಗುಣ ಸಂಖ್ಯೆಗಳನ್ನು ತಿಳಿಸಿ ರೂಢಿ ಮಾಡಿಸಬೇಕು. ಇದರಿಂದ ಗುಂಡುಗಳು ಬೇರೆ ಬೇರೆ ಪೆಟ್ಟಿಗೆಯಲ್ಲಿ ಬಿಡಿ, ಹತ್ತರ ಗುಂಪು ನೂರರ ಗುಂಪುಗಳನ್ನು ತೋರಿಸುವಂತೆ ಈ ಅಂಕೆಗಳೂ ಬೇರೆ ಬೇರೆ ಸ್ಥಳದಲ್ಲಿ ಬೇರೆ ಬೇರೆ ಗುಂಪುಗಳನ್ನು ತೋರಿಸುವವು; ಎಂಬ ಕಲ್ಪನೆ ಬರುವದು. ಇಸ್ಪೇಟಿನ ಮೇಲೆ ಬರೆದ ಅಂಕೆಯ ಪಟಗಳನ್ನು ಬೇರೆ ಬೇರೆ ಮನೆಯಲ್ಲಿ ಹಾಕುತ್ತ ಸಂಖ್ಯೆಯನ್ನು ಓದಿಸುವ ರೂಢಿ ಮಾಡಿಸಬೇಕು.

೫. ಮನೆಯ ಬದಲು ಅಕ್ಷರಗಳನ್ನು ಬರೆಯುವದು:—ಮನೆಯ ಬರೆಯುವದನ್ನು ಬಿಟ್ಟು ಬರಿಯ ಅಂಕೆಗಳಿಂದಲೇ ಸಂಖ್ಯೆಗಳನ್ನು ಬರೆದು ಮೊದಲನೆಯ ಸ್ಥಾನವು ಬಿಡಿವಸ್ತುಗಳನ್ನೂ, ೨ನೆಯ ಸ್ಥಾನವು ಹತ್ತರ ಗುಂಪುಗಳನ್ನೂ, ೩ನೆಯ ಸ್ಥಾನವು ನೂರರ ಗುಂಪುಗಳನ್ನೂ ತೋರಿಸುವವೆಂಬವನ್ನು ರೂಢಿ ಮಾಡಿಸಬೇಕು. ಮೊದ ಮೊದಲು ಬರಿಯ ನೂ. ಹ. ಬಿ ಮೊದಲಾಗಿ ಅಕ್ಷರಗಳನ್ನು ಉಪಯೋಗಿಸಬಹುದು. ಮೊದ ಮೊದಲು ಐದುನೂರು ಇದನ್ನು ೫ ನೂ. ಎಂದು ಬರೆಯಲಿ. ರೂಢಿಯಾದ ಬಳಿಕ ಅವನ್ನು ಬರೆಯುವದನ್ನು ಬಿಟ್ಟು ಬಿಡಬೇಕು.

೬. ಸೊನ್ನೆಯ ಕಲ್ಪನೆ:— ಯಾವ ಗುಂಪುಗಳಿಲ್ಲವೋ ಆ ಮನೆಯನ್ನು ಈ ಮೊದಲೇ ಬರಿದಾಗಿ ಬಿಡುತ್ತಿದ್ದೆವು. ಆದರೆ ಮನೆಗಳನ್ನು ಬಿಟ್ಟು ಹಾಗೇ ಒಂದರ ಮುಂದೆ ಒಂದು ಅಂಕೆಗಳನ್ನು ಬರೆಯುವಾಗ ತೆರವಿದ್ದ ಮನೆಯನ್ನು ತೋರಿಸದಿದ್ದರೆ ಹೇಗೆ ಅನರ್ಥವಾಗುವದೆಂಬದನ್ನು ತಿಳಿಸಿ, ತೆರವಿದ್ದ ಮನೆಯನ್ನು ಸೂಚಿಸುವದಕ್ಕಾಗಿ '0' ಈ ಗುರುತನ್ನು ಹಾಕಿದರೆ ಆ ತೊಂದರೆ ಹೇಗೆ ತಪ್ಪುವದೆಂಬದನ್ನು ಹೇಳಬೇಕು. ಉದಾ— ೫ ನೂರು ಇದನ್ನು ಬರೆಯುವಾಗ ಈ ಮೊದಲು ೫ ನೂ. ಎಂದು ಬರೆಯುತ್ತಿದ್ದೆವು. ಆದರೆ ಈಗ ೫ ಹೀಗೆ ಬರೆದರೆ ಇದನ್ನು ಏನೆಂದು ಓದುವಿರಿ. ಆದದರಿಂದ ಈ ತೊಂದರೆಯನ್ನು ತಪ್ಪಿಸುವದಕ್ಕಾಗಿ ಎಂದರೆ ೫ ಇದು ನೂರರ ಮನೆಯದು ಎಂಬದನ್ನು ತೋರಿಸುವದಕ್ಕಾಗಿ ಅದರ ಮುಂದಿನ ಹತ್ತರ, ಬಿಡಿಯ ಮನೆಗಳಲ್ಲಿ ಯಾವವೂ ಇಲ್ಲ ಎಂಬದನ್ನು ತೋರಿಸುವದಕ್ಕಾಗಿ '0' ಈ ಗುರುತನ್ನು ಹಾಕುವರು. ಇದಕ್ಕೆ ಸೊನ್ನೆ ಎಂಬ ಹೆಸರು.

ಈ ಮೇರೆಗೆ ಒಮ್ಮೆ ಸ್ಥಾನನ ಕಲ್ಪನೆಯಾದ ಬಳಿಕ ಎಡಕ್ಕೆ ಒಂದೊಂದೇ ಸ್ಥಾನದ ಹೆಸರನ್ನು ಹೇಳುತ್ತ ಸಾಗಬೇಕು. ಎಂದರೆ ಬೇಕಾದ ಸ್ಥಾನದ ವಿಷಯವಾಗಿಯಾದರೂ ವಿದ್ಯಾರ್ಥಿಗಳು ತಿಳಿಯಬಲ್ಲರು.

ಗಣಿತದ ಹೊಸ ಅಭ್ಯಾಸಪತ್ರಿಕೆಯಲ್ಲಿ ಬೇರೆಬೇರೆ ಇಯತ್ತೆಗೆ ಬೇರೆಬೇರೆ ಸ್ಥಾನದವರೆಗೆ ಸಂಖ್ಯೆಗಳನ್ನು ಕಲಿಸಬೇಕೆಂಬ ಉಲ್ಲೇಖವಿರುವದು. ಇದರಿಂದ ೨ನೆಯ ಇಯತ್ತೆಗೆ ಲಕ್ಷ, ದಶಲಕ್ಷ, ಕೋಟಿ ಮೊದಲಾದ ಸ್ಥಾನಗಳ ಕಲ್ಪನೆಯನ್ನು ಕೊಡಬಾರದೆಂತಲ್ಲ. ಕೇವಲ ಉದ್ದುದ್ದಾದ ಸಂಖ್ಯೆಯನ್ನು ಬರೆಯುವದರಲ್ಲಿಯೇ ವಿದ್ಯಾರ್ಥಿಗಳ ಹೆಚ್ಚು

ಕಾಲಹರಣವಾಗುವದೆಂಬೂ, ವ್ಯವಹಾರದಲ್ಲಿ ಇಷ್ಟೊಂದು ದೊಡ್ಡ ಸಂಖ್ಯೆಯ ಉಪಯೋಗವು ಮೇಲಿ ಮೇಲೆ ಆಗಲಾರದೆಂಬೂ ೨ ನೆಯ ಇಯತ್ತೆಗೆ ೧ ಲಕ್ಷದವರೆಗೆ ಸಂಖ್ಯಾ ವಾಚನವೂ ಲೇಖನವೂ ಹೇಳಲ್ಪಟ್ಟಿದೆ.

೭. ಸಂಖ್ಯಾ ವಾಚನದ ಉದಾ:— ಸಂಖ್ಯೆಗಳನ್ನು ಓದಲಿಕ್ಕಾಗಲಿ ಬರೆಯಲಿಕ್ಕಾಗಲಿ ಹೇಳುವಾಗ ವಸ್ತುವಾಚಕ ಸಂಖ್ಯೆಗಳನ್ನೇ ಹೇಳಬೇಕು. ಮತ್ತು ಅದನ್ನು ವಾಕ್ಯರೂಪದಿಂದ ಹೇಳಬೇಕು. ಉದಾ: ೩೪೨೮ ಇದನ್ನು ಓದು ಎಂದು ಹೇಳಿದರೆ ವಿದ್ಯಾರ್ಥಿಗಳು ಬೇಸರಗೊಳ್ಳುವರು. ಇದನ್ನೇ "ಮೊನ್ನೆ ಧಾರವಾಡಕ್ಕೆ ಬಂದ ವಿಮಾನವು ಒಂದೇ ದಿನದಲ್ಲಿ ೩೪೨೮ ಮೈಲು ಹೋಗುವದಂತೆ" ಹೀಗೆ ಬರೆದ ವಾಕ್ಯವನ್ನು ಅವರು ಓದಲು ಹುರುಪುಗೊಳ್ಳುವರು.

ಪ್ರಾರಂಭದಲ್ಲಿ ಚಿಕ್ಕಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸುವ ಪದ್ಧತಿ

ಲೇಖಕ:— ಬಿ. ಬಾಬಾಸಾಹೇಬ ಹೆಡ್ಮಾಸ್ತರು ಕಾಮಲಾಪುರ ಜಿಲ್ಲಾ ಬಳ್ಳಾರಿ.

ಉಪಾಧ್ಯಾಯನು ಒಂದು ಸಣ್ಣ ಶಬ್ದವನ್ನು ದೊಡ್ಡ ಅಕ್ಷರಗಳಿಂದ ಕಪ್ಪು ಹಲಿಗೆಯ ಮೇಲೆ ಬರೆಯಬೇಕು. ಅದನ್ನು ಬಾಲಕರು ಸ್ಲೇಟಿನ ಮೇಲೆ ಬರೆದುಕೊಂಡು ಅದರ ಆಕಾರ ತಿಳಿದನಂತರ ಅವರಿಗೆ ಉಚ್ಚಾರ ಮತ್ತು ಅದರ ಅರ್ಥ ಹೇಳಿ ಕೊಡಬೇಕು.

ಹಳ್ಳಿಗಳ ಶಾಲೆಗಳಲ್ಲಿ ಅಕ್ಷರ ತರಗತಿಯು ವಿದ್ಯಾರ್ಥಿಗಳಿಗೆ ವಾಚನವನ್ನು ಕಲಿಸುವದು ಸುಲಭವೆಂದೂ, ಆ ತರಗತಿಯ ಉಪಾಧ್ಯಾಯನು ಹೆಚ್ಚು ಓದಿಕೊಂಡು ಅನೇಕ ಸಂಗತಿಗಳನ್ನು ಅರಿತ (ಟ್ರೇಂಡನು) ವನು ಏಕೆ ಬೇಕು? ಅಗತ್ಯವಿಲ್ಲವೆಂದು ಕೆಲವರು ಸಹಜವಾಗಿ ಹೇಳುವುದುಂಟು. ಚಿಕ್ಕ ಮಕ್ಕಳಿಗೆ ಹಲಿಗೆಯ ಮೇಲೋ ಉಸುಕಿನಮೇಲೋ ಕೆಲವಕ್ಷರಗಳನ್ನು ಬರೆದುಕೊಟ್ಟು ತಿದ್ದಿಸುವ ವಾಡಿಕೆ ಇನ್ನೂ ದೂರವಾದಂತೆ ಕಾಣಲಿಲ್ಲ. ಆದ್ದರಿಂದ ವಿದ್ಯಾರ್ಥಿಗಳಿಗೆ ಅಕ್ಷರ ಜ್ಞಾನವಾಗಬೇಕಾದರೆ ಬಹಳ ಕಾಲವು ಬೇಕಾಗುತ್ತದೆ. ಹೀಗಾಗುವುದರಿಂದ ಕೆಲವು ವರ್ಷಗಳವರೆಗೆ ಮಕ್ಕಳಿಗೆ ಅಕ್ಷರಗಳು ಬರುವುದೇ ಇಲ್ಲ. ಆದ್ದರಿಂದ ಇಂಥಾ ಶಾಲೆಗಳ ಅಭಿವೃದ್ಧಿಯಲ್ಲಿ ಕುಂದು ಬರುವುದು

ಪ್ರತಿಯೊಂದು ಹಳ್ಳಿಗಳ ಶಾಲಾ ಉಪಾಧ್ಯಾಯರು ವರ್ಣಮಾಲೆಯ ಅಕ್ಷರಗಳನ್ನು ಒಂದರಹಿಂದೊಂದು ಕಲಿಸುತ್ತಾ ವ್ಯರ್ಥ ಕಾಲಹರಣ ಮಾಡದೆ ಒಂದೊಂದು ಶಬ್ದವನ್ನು ಮಕ್ಕಳಿಗೆ ಕಲಿಸುತ್ತಾ ಶಬ್ದಗಳ ಮೂಲಕ ಬಾಲಶಿಕ್ಷೆಯನ್ನೋದಿಸಲು ಪ್ರಯತ್ನ ಮಾಡಬೇಕು. ಹೊಸ ಶಿಕ್ಷಣಪದ್ಧತಿ ಪ್ರಕಾರ ಶಬ್ದಗಳನ್ನೇ ಪ್ರಯೋಗಿಸಿ ಮಕ್ಕಳಿಗೆ ಕೆಲವು

ಸಿಂಹಳದ್ವೀಪ

ಲೇಖಕ—ಕಾಶೀನಹಳ್ಳಿ

ನಮ್ಮ ಭರತಖಂಡದ ದಕ್ಷಿಣದ ಬದಿಗೆ ಪುರಾತನಕಾಲದಿಂದ ಪ್ರಸಿದ್ಧವಾದ ಸಿಂಹಲದ್ವೀಪವದೆ. ರಾಜಶೇಖರನಿಂದ ಪರಾಜಿತನಾದ ಸಿಂಹಳರಾಜನಿಂದ ಇದಕ್ಕೆ ಸಿಂಹಳದ್ವೀಪವೆಂಬ ಹೆಸರು ವಾಡಿಕೆಯಾಗಿದೆ. ಚಿತ್ತೂರಿನ ಪ್ರಸಿದ್ಧ ಸಾಧ್ವಿಯಾದ ಪದ್ಮಿನಿಯು ಸಿಂಹಳದೇಶದ ರಾಜನ ಮಗಳಾಗಿದ್ದಳು. ರಾಮಾಯಣ ಕಾಲದಿಂದ ಇದು ಹೆಸರಾಗಿದ್ದಿತೆಂಬದಕ್ಕೆ ಅಲ್ಲಿಯ ಭೂಭಾಗಗಳಿಗೆ ಬಿದ್ದಿರುವ ಹೆಸರುಗಳೇ ಸಾಕ್ಷಿಗಳಾಗಿವೆ. ಹಿಂದುಸ್ತಾನದ ದಕ್ಷಿಣದ ತುದಿಗೂ ಇದಕ್ಕೂ ನಡುವೆ ಎಷ್ಟೋ ಮೈಲು ಉದ್ದವಾದ ಉಸುಕಿನ ಒಂಡಿಯದೆ. ಅದಕ್ಕೆ 'ರಾಮನಸೇತುವೆ' ಎನ್ನುತ್ತಾರೆ, ಈ ಸೇತುವೆಯು ಸಮುದ್ರದ ಓಹಟಿಯ ಕಾಲದಲ್ಲಿ ಚೆನ್ನಾಗಿ ಕಾಣುತ್ತದೆ. ಈ ಸೇತುವೆಯ ಆಚೆಯ ಕೊನೆಗೆ ಮಾನಾರದ ನಡುಗಡ್ಡೆಯದೆ. ಅಲ್ಲಿ ಸಮುದ್ರವು ಆಳವಿಲ್ಲ.

ಹಿಂದುಸ್ತಾನ ಸಿಂಹಳದ್ವೀಪಗಳ ನಡುವೆ ಪಾಲ್ಕ ಸಾಮುದ್ರಧುನಿಯದೆ, ಅದರ ದಕ್ಷಿಣಕ್ಕೆ ಮಾನಾರದ ಅಖಾತವೆನ್ನುವರು. ಸಿಂಹಳ ದ್ವೀಪವು ಹಿಂದುಸ್ತಾನವೆಂಬ ಕರ್ಣಕ್ಕೆ ಜೋತುಬಿದ್ದ ಮುತ್ತಿನಂತೆಯೂ ನಡುವಿನ ಸಣ್ಣ ದ್ವೀಪಗಳು ಅದಕ್ಕೆ ಸಂಬಂಧಿಸಿದ ಸರಪಳಿಯಂತೆಯೂ ಕಂಗೊಳಿಸುವವು.

ಪ್ರಾಕೃತಿಕ ಸ್ವರೂಪವು—ಈ ದ್ವೀಪದ ನಡುವೆ ಬೆಟ್ಟಗಳಿದ್ದು ಅವು ದಕ್ಷಿಣಕ್ಕೆ ಹೋದಂತೆ ಹೆಚ್ಚು ಅಗಲವೂ ಹೆಚ್ಚು ಎತ್ತರವೂ ಆಗುತ್ತ ಹೋಗಿವೆ. ದಕ್ಷಿಣಕ್ಕೆ 'ಆಡಾಮ್ಸಪೀಕ'ವೆಂಬ ಶಿಖರವುಂಟು. ದಂಡೆಗುಂಟ ಅದು ಸ. ಸಪಾಟಿಯಿಂದ ೧೨೦೦೦ ಫೂ. ಎತ್ತರವದೆ. ಕೊಂಕಣದ ಪಟ್ಟಿಯಂತೆ ಸಮುದ್ರದಕಡೆಗೆ ಇಳಿಜಾರಾದ ಬೈಲು ಇರುತ್ತದೆ. ಈ ಬೈಲು ಉತ್ತರದಲ್ಲಿ ಹೆಚ್ಚು ಇರುತ್ತದೆ. ಈ ನಡುಗಡ್ಡೆಯ ಉತ್ತರ ಭಾಗವು ತಗ್ಗಾಗಿಯೂ ಸಪಾಟವಾಗಿಯೂ ಇರುವದು. ಮಿಕ್ಕ ಭಾಗವೆಲ್ಲ ಎತ್ತರವಾಗಿದ್ದು ಎದರತುಂಬ ಬೆಟ್ಟಗಳಿದ್ದು ಅಡವಿಗಳೂ ಗಿಡಗಳೂ ಹಬ್ಬಿವೆ.

ಹವೆ—ಈ ಭಾಗವು ವಿಷುವವೃತ್ತದಿಂದ ೮ ಅಂಶದ ಮೇಲೆ ಇರುವದರಿಂದ ಸಾಮಾನ್ಯವಾಗಿ ಇಲ್ಲಿಯ ಹವೆಯು ಉಷ್ಣವಿರುವದು. ತಗ್ಗು ಪ್ರದೇಶದ ಹವೆಯು ಹೆಚ್ಚು ಉಷ್ಣವೂ, ಎತ್ತರವಾದ ಭಾಗದ ಹವೆಯು ತಂಪಾಗಿಯೂ ಇರುವದು; ಆದದರಿಂದ ಉತ್ತರಭಾಗದ ಹವೆಯು ಶೆಕೆಯುಳ್ಳದ್ದೂ ದ. ಭಾ. ದ ಹವೆಯು ತಂಪಾಗಿಯೂ ಅದೆ. ಈ ದೇಶದ ಎಲ್ಲಭಾಗವು ಸಮುದ್ರಕ್ಕೆ ಸಮೀಪವಾಗಿರುವದರಿಂದ ಸಮಹವೆಯುಳ್ಳದ್ದಿದೆ. ತೀರ ಸಮುದ್ರದಂಡೆಗೆ ಆರ್ದ್ರತೆಗೂಡಿದ ಸಮಹವೆ ಇರುವದು. ಸಮುದ್ರದ ಕಡೆಯಿಂದ ಗಾಳಿಯು ಬೀಸುವ ಸ್ಥಳದ ಹವೆಯು ಸೊಗಸಾಗಿರುವದು. ಹಗಲು ರಾತ್ರಿ

ಕಾಲಹರಣವಾಗುವದೆಂದೂ, ವ್ಯವಹಾರದಲ್ಲಿ ಅಷ್ಟೊಂದು ದೊಡ್ಡ ಸಂಖ್ಯೆಯ ಉಪ
ಯೋಗವು ಮೇಲೆ ಮೇಲೆ ಆಗಲಾರದೆಂದೂ ೨ ನೆಯ ಇಯತ್ತೆಗೆ ೧ ಲಕ್ಷದವರೆ
ಸಂಖ್ಯಾ ವಾಚನವೂ ಲೇಖನವೂ ಹೇಳಲ್ಪಟ್ಟಿದೆ.

೭. ಸಂಖ್ಯಾ ವಾಚನದ ಉದಾ:—ಸಂಖ್ಯೆಗಳನ್ನು ಓದಲಿಕ್ಕಾಗಲಿ ಬರೆಯ
ಲಿಕ್ಕಾಗಲಿ ಹೇಳುವಾಗ ವಸ್ತುವಾಚಕ ಸಂಖ್ಯೆಗಳನ್ನೇ ಹೇಳಬೇಕು. ಮತ್ತು ಅದನ್ನು
ವಾಕ್ಯರೂಪದಿಂದ ಹೇಳಬೇಕು. ಉದಾಃ ೩೪೨೮ ಇದನ್ನು ಓದು ಎಂದು ಹೇಳಿದ
ವಿದ್ಯಾರ್ಥಿಗಳು ಬೇಸರಗೊಳ್ಳುವರು. ಇದನ್ನೇ " ಮೊನ್ನೆ ಧಾರವಾಡಕ್ಕೆ ಬಂದ ವಿಮಾ

Pg No. 5

ಸಿಂಹಳದ್ವೀಪ

ಲೇಖಕ—ಕಾಶೀನಹಳ್ಳಿ

ನಮ್ಮ ಭರತಖಂಡದ ದಕ್ಷಿಣದ ಬದಿಗೆ ಪುರಾತನಕಾಲದಿಂದ ಪ್ರಸಿದ್ಧವಾದ ಸಿಂಹಲದ್ವೀಪವದೆ. ರಾಜಶೇಖರನಿಂದ ಪರಾಜಿತನಾದ ಸಿಂಹಳರಾಜನಿಂದ ಇದಕ್ಕೆ ಸಿಂಹಳದ್ವೀಪವೆಂಬ ಹೆಸರು ವಾಡಿಕೆಯಾಗಿವೆ. ಚಿತ್ತೂರಿನ ಪ್ರಸಿದ್ಧ ಸಾಧ್ವಿಯಾದ ಪದ್ಮಿನಿಯು ಸಿಂಹಳದೇಶದ ರಾಜನ ಮಗಳಾಗಿದ್ದಳು. ರಾಮಾಯಣ ಕಾಲದಿಂದ ಇದು ಹೆಸ [illegible] ಬಿದ್ದಿರುವ ಹೆಸರುಗಳೇ ಸಾಕ್ಷಿಗಳಾಗಿವೆ.

Pg 18
Missing

Pg No. 5 to 18

Missing

ಕಾಲಹರಣವಾಗುವದೆಂದೂ, ವ್ಯವಹಾರದಲ್ಲಿ ಅಷ್ಟೊಂದು ದೊಡ್ಡ ಸಂಖ್ಯೆಯ ಉಪಯೋಗವು ಮೇಲೆ ಮೇಲೆ ಆಗಲಾರದೆಂದೂ ೨ ನೆಯ ಇಯತ್ತೆಗೆ ೧ ಲಕ್ಷದವರೆಗೆ ಸಂಖ್ಯಾ ವಾಚನವೂ ಲೇಖನವೂ ಹೇಳಲ್ಪಟ್ಟಿದೆ.

೭. ಸಂಖ್ಯಾ ವಾಚನದ ಉದಾ:— ಸಂಖ್ಯೆಗಳನ್ನು ಓದಲಿಕ್ಕಾಗಲಿ ಬರೆಯಲಿಕ್ಕಾಗಲಿ ಹೇಳುವಾಗ ವಸ್ತುವಾಚಕ ಸಂಖ್ಯೆಗಳನ್ನೇ ಹೇಳಬೇಕು. ಮತ್ತು ಅದನ್ನು ವಾಕ್ಯರೂಪದಿಂದ ಹೇಳಬೇಕು. ಉದಾ: ೩೪೫೮ ಇದನ್ನು ಓದು ಎಂದು ಹೇಳಿದರೆ ವಿದ್ಯಾರ್ಥಿಗಳು ಬೇಸರಗೊಳ್ಳುವರು. ಇದನ್ನೇ " ಮೊನ್ನೆ ಧಾರವಾಡಕ್ಕೆ ಬಂದ ವಿಮಾನವು ಒಂದೇ ದಿನದಲ್ಲಿ ೩೪೫೮ ಮೈಲು ಹೋಗುವದಂತೆ" ಹೀಗೆ ಬರೆದ ವಾಕ್ಯವನ್ನು ಅವರು ಓದಲು ಹುರುಪುಗೊಳ್ಳುವರು.

ಪ್ರಾರಂಭದಲ್ಲಿ ಚಿಕ್ಕಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸುವ ಪದ್ಧತಿ

ಲೇಖಕ:— ಬಿ. ಬಾಬಾಸಾಹೇಬ ಹೆಡ್ಮಾಸ್ತರು ಕಾಮಲಾಪುರ ಜಿಲ್ಹಾ ಬಳ್ಳಾರಿ.

ಉಪಾಧ್ಯಾಯನು ಒಂದು ಸಣ್ಣ ಶಬ್ದವನ್ನು ದೊಡ್ಡ ಅಕ್ಷರಗಳಿಂದ ಕಪ್ಪು ಹಲಗೆಯ ಮೇಲೆ ಬರೆಯಬೇಕು. ಅದನ್ನು ಬಾಲಕರು ಸ್ಲೇಟಿನ ಮೇಲೆ ಬರೆದುಕೊಂಡು ಅದರ ಆಕಾರ ತಿಳಿದನಂತರ ಅವರಿಗೆ ಉಚ್ಚಾರ ಮತ್ತು ಅದರ ಅರ್ಥ ಹೇಳಿ ಕೊಡಬೇಕು

ಹಳ್ಳಿಗಳ ಶಾಲೆಗಳಲ್ಲಿ ಅಕ್ಷರ ತರಗತಿಯು ವಿದ್ಯಾರ್ಥಿಗಳಿಗೆ ವಾಚನವನ್ನು ಕಲಿಸುವದು ಸುಲಭವೆಂದೂ, ಆ ತರಗತಿಯ ಉಪಾಧ್ಯಾಯನು ಹೆಚ್ಚು ಓದಿಕೊಂಡು ಅನೇಕ ಸಂಗತಿಗಳನ್ನು ಅರಿತ (ಟ್ರೇಂಡನು) ವನು ಏಕೆ ಬೇಕು? ಅಗತ್ಯವಿಲ್ಲವೆಂದು ಕೆಲವರು ಸಹಜವಾಗಿ ಹೇಳುವುದುಂಟು ಚಿಕ್ಕ ಮಕ್ಕಳಿಗೆ ಹಲಿಗೆಯ ಮೇಲೊ ಉಸುಕಿನಮೇಲೋ ಕೆಲವಕ್ಷರಗಳನ್ನು ಬರೆದುಕೊಟ್ಟು ತಿದ್ದಿಸುವ ವಾಡಿಕೆ ಇನ್ನೂ ದೂರವಾದಂತೆ ಕಾಣಲಿಲ್ಲ. ಆದ್ದರಿಂದ ವಿದ್ಯಾರ್ಥಿಗಳಿಗೆ ಅಕ್ಷರ ಜ್ಞಾನವಾಗಬೇಕಾದರೆ ಬಹಳ ಕಾಲವು ಬೇಕಾಗುತ್ತದೆ. ಹೀಗಾಗುವುದರಿಂದ ಕೆಲವು ವರ್ಷಗಳವರೆಗೆ ಮಕ್ಕಳಿಗೆ ಅಕ್ಷರಗಳು ಬರುವುದೇ ಇಲ್ಲ. ಆದ್ದರಿಂದ ಇಂಥಾ ಶಾಲೆಗಳ ಅಭಿವೃದ್ಧಿಯಲ್ಲಿ ಕುಂದು ಬರುವುದು

ಪ್ರತಿಯೊಂದು ಹಳ್ಳಿಗಳ ಶಾಲಾ ಉಪಾಧ್ಯಾಯರು ವರ್ಣಮಾಲೆಯ ಅಕ್ಷರಗಳನ್ನು ಒಂದರಹಿಂದೊಂದು ಕಲಿಸುತ್ತಾ ವ್ಯರ್ಥ ಕಾಲಹರಣ ಮಾಡದೆ ಒಂದೊಂದು ಶಬ್ದವನ್ನು ಮಕ್ಕಳಿಗೆ ಕಲಿಸುತ್ತಾ ಶಬ್ದಗಳ ಮೂಲಕ ಬಾಲಶಿಕ್ಷೆಯನ್ನೋದಿಸಲು ಪ್ರಯತ್ನ ಮಾಡಬೇಕು. ಹೊಸ ಶಿಕ್ಷಣಪದ್ಧತಿ ಪ್ರಕಾರ ಶಬ್ದಗಳನ್ನೇ ಪ್ರಯೋಗಿಸಿ ಮಕ್ಕಳಿಗೆ ಕೆಲವು

ಸಿಂಹಳದ್ವೀಪ

ಲೇಖಕ—ಕಾಶೀನಹಳ್ಳಿ

ನಮ್ಮ ಭರತಖಂಡದ ದಕ್ಷಿಣದ ಬದಿಗೆ ಪುರಾತನಕಾಲದಿಂದ ಪ್ರಸಿದ್ಧವಾದ ಸಿಂಹಲದ್ವೀಪವದೆ. ರಾಜಶೇಖರನಿಂದ ಪರಾಜಿತನಾದ ಸಿಂಹಳರಾಜನಿಂದ ಇದಕ್ಕೆ ಸಿಂಹಳದ್ವೀಪವೆಂಬ ಹೆಸರು ವಾಡಿಕೆಯಾಗಿದೆ. ಚಿತ್ತೂರಿನ ಪ್ರಸಿದ್ಧ ಸಾಧ್ವಿಯಾದ ಪದ್ಮಿನಿಯು ಸಿಂಹಳದೇಶದ ರಾಜನ ಮಗಳಾಗಿದ್ದಳು. ರಾಮಾಯಣ ಕಾಲದಿಂದ ಇದು ಹೆಸರಾಗಿದ್ದಿತೆಂಬದಕ್ಕೆ ಅಲ್ಲಿಯ ಭೂಭಾಗಗಳಿಗೆ ಬಿದ್ದಿರುವ ಹೆಸರುಗಳೇ ಸಾಕ್ಷಿಗಳಾಗಿವೆ. ಹಿಂದುಸ್ಥಾನದ ದಕ್ಷಿಣದ ತುದಿಗೂ ಇದಕ್ಕೂ ನಡುವೆ ಎಷ್ಟೋ ಮೈಲು ಉದ್ದವಾದ ಉಸುಕಿನ ಒಂಡಿಯದೆ. ಅದಕ್ಕೆ 'ರಾಮನಸೇತುವೆ' ಎನ್ನುತ್ತಾರೆ, ಈ ಸೇತುವೆಯು ಸಮುದ್ರದ ಓಹಟೆಯ ಕಾಲದಲ್ಲಿ ಚೆನ್ನಾಗಿ ಕಾಣುತ್ತದೆ. ಈ ಸೇತುವೆಯ ಆಚೆಯ ಕೊನೆಗೆ ಮಾನಾರದ ನಡುಗಡ್ಡೆಯದೆ. ಅಲ್ಲಿ ಸಮುದ್ರವು ಆಳವಿಲ್ಲ.

ಹಿಂದುಸ್ಥಾನ ಸಿಂಹಳದ್ವೀಪಗಳ ನಡುವೆ ಪಾಲ್ಕ ಸಾಮುದ್ರಧುನಿಯದೆ. ಅದರ ದಕ್ಷಿಣಕ್ಕೆ ಮಾನಾರದ ಆಖಾತವೆನ್ನುವರು. ಸಿಂಹಳ ದ್ವೀಪವು ಹಿಂದುಸ್ಥಾನವೆಂಬ ಕರ್ಣಕ್ಕೆ ಜೋತುಬಿದ್ದ ಮುತ್ತಿನಂತೆಯೂ ನಡುವಿನ ಸಣ್ಣ ದ್ವೀಪಗಳು ಅದಕ್ಕೆ ಸಂಬಂಧಿಸಿದ ಸರಪಳಿಯಂತೆಯೂ ಕಂಗೊಳಿಸುವವು.

ಪ್ರಾಕೃತಿಕ ಸ್ವರೂಪವು—ಈ ದ್ವೀಪದ ನಡುವೆ ಬೆಟ್ಟಗಳಿದ್ದು ಅವು ದಕ್ಷಿಣಕ್ಕೆ ಹೋದಂತೆ ಹೆಚ್ಚು ಅಗಲವೂ ಹೆಚ್ಚು ಎತ್ತರವೂ ಆಗುತ್ತ ಹೋಗಿವೆ. ದಕ್ಷಿಣಕ್ಕೆ 'ಆಡಾಮ್ಸ್‌ಪೀಕ'ವೆಂಬ ಶಿಖರವುಂಟು. ದಂಡೆಗುಂಟ ಅದು ಸ. ಸಪಾಟಿಯಿಂದ ೧೩೦೦೦ ಫೂ. ಎತ್ತರವದೆ. ಕೊಂಕಣದ ಪಟ್ಟಿಯಂತೆ ಸಮುದ್ರದಕಡೆಗೆ ಇಳಿಜಾರಾದ ಬೈಲು ಇರುತ್ತದೆ. ಈ ಬೈಲು ಉತ್ತರದಲ್ಲಿ ಹೆಚ್ಚು ಇರುತ್ತದೆ. ಈ ನಡುಗಡ್ಡೆಯ ಉತ್ತರ ಭಾಗವು ತಗ್ಗಾಗಿಯೂ ಸಪಾಟವಾಗಿಯೂ ಇರುವದು. ಮಿಕ್ಕ ಭಾಗವೆಲ್ಲ ಎತ್ತರವಾಗಿದ್ದು ಅದರತುಂಬ ಬೆಟ್ಟಗಳಿದ್ದು ಅಡವಿಗಳೂ ಗಿಡಗಳೂ ಹಬ್ಬಿವೆ.

ಹವೆ—ಈ ಭಾಗವು ವಿಷುವವೃತ್ತದಿಂದ ೮ ಅಂಶದ ಮೇಲೆ ಇರುವದರಿಂದ ಸಾಮಾನ್ಯವಾಗಿ ಇಲ್ಲಿಯ ಹವೆಯು ಉಷ್ಣವಿರುವದು. ತಗ್ಗು ಪ್ರದೇಶದ ಹವೆಯು ಹೆಚ್ಚು ಉಷ್ಣವೂ, ಎತ್ತರವಾದ ಭಾಗದ ಹವೆಯು ತಂಪಾಗಿಯೂ ಇರುವದು; ಆದದರಿಂದ ಉತ್ತರಭಾಗದ ಹವೆಯು ಶಕೆಯುಳ್ಳದ್ದೂ ದ. ಭಾ. ದ ಹವೆಯು ತಂಪಾಗಿಯೂ ಅದೆ. ಈ ದೇಶದ ಎಲ್ಲಭಾಗವು ಸಮುದ್ರಕ್ಕೆ ಸಮೀಪವಾಗಿರುವದರಿಂದ ಸಮಹವೆಯುಳ್ಳದ್ದು ಅದೆ. ತೀರ ಸಮುದ್ರದಂಡೆಗೆ ಆರ್ದ್ರತೆಗೂಡಿದ ಸಮಹವೆ ಇರುವದು. ಸಮುದ್ರದ ದಡೆಯಿಂದ ಗಾಳಿಯು ಬೀಸುವ ಸ್ಥಳದ ಹವೆಯು ಸೊಗಸಾಗಿರುವದು. ಹಗಲು ರಾತ್ರಿ

ಗಳ ಹವೆಯಲ್ಲಿ ಹೆಚ್ಚು ಅಂತರವಿರುವದಿಲ್ಲ. ಬಹಳವಾದರೆ ೧೨ ಅಂಶಗಳವರೆಗೆ ಹೆಚ್ಚು ಕಡಿಮೆಯಾಗುವದು. ಚಳಿಗಾಲ ಬೇಸಿಗೆಕಾಲಗಳ ಹವೆಯ ಉಷ್ಣತಾಮಾನದ ಅಂತರವು ೫° ಇರುವದು.

ಮಳೆ— ಈ ದೇಶವು ನೈಋುತ್ಯ ಹಾಗು ಈಶಾನ್ಯ ಮನ್ಸೂನುಗಳ ದಾರಿಯಲ್ಲಿ ಇದೆ. ನೈಋುತ್ಯ ಮನ್ಸೂನದಿಂದ ಹೆಚ್ಚುಮಳೆ ಸುರಿಯುವದು. ಆದದರಿಂದ ಪಶ್ಚಿಮಾರ್ಧಕ್ಕೆ ೮೦" ಮಳೆಯೂ ಪೂರ್ವಾರ್ಧಕ್ಕೆ ೬೦" ಮಳೆಯೂ ಆಗುವದು. ಸಿಂಹಲದ್ವೀಪದ ಉತ್ತರದ ಹಾಗು ಆಗ್ನೇಯ ದಿಕ್ಕುಗಳಕಡೆಗೆ ಬೈಲು ಇರುವದರಿಂದ ಮಳೆಯ ಆಕರ್ಷಣವು ಕಡಿಮೆಯಾಗಿ ಆ ಭಾಗಗಳಲ್ಲಿ ೨೦ರಿಂದ ೨೫ ಇಂಚು ಮಳೆಯು ಬೀಳುವದು.

ಬೆಳೆ—ಈ ದೇಶದ ಬೆಳೆಬರುವ ಭೂಮಿಯಲ್ಲಿ ೩ ವರ್ಗಗಳನ್ನು ಮಾಡಬಹುದು. (೧) ಗುಡ್ಡದ ಶಿರೋಭಾಗ (೨) ಗುಡ್ಡಗಳ ಕೆಳಗಡೆಯ ಓರೆಯ ಪ್ರದೇಶ (೩) ಮಳೆಯಾಗುವ ಬೈಲು.

ಮೊದಲನೆ ಭಾಗದಲ್ಲಿ ಚಹ, ರಬ್ಬರಗಳ ತೋಟಗಳಿವೆ; ಎರಡನೆ ಭಾಗದಲ್ಲಿ ಹತ್ತಿಯ ಹೊಲಗಳೂ ದಾಲಚಿನ್ನಿಯ ಬನಗಳೂ ತುಂಬಿರುವವು; ಮೂರನೆಯ ಭಾಗದಲ್ಲಿ ಬತ್ತ ತೆಂಗುಗಳ ಬನಗಳೂ ಯಾಲಕ್ಕಿ ಮೆಣಸುಗಳ ಪೈರುಗಳೂ ದೃಷ್ಟಿಗೆ ಬೀಳುವವು. ಕೆಲವೆಡೆಯಲ್ಲಿ ಸಿಂಕೋನಾದ ಗಿಡಗಳು ಬೆಳೆಯುವವು. ಈ ದೇಶದ ಹವೆಯು ಧಾನ್ಯ ಹಣ್ಣುಹಂಪಲಗಳಿಗೆ ಅನುಕೂಲವಾಗಿರುವದರಿಂದ ಇದೊಂದು ವಿಶಾಲವಾದ ಉದ್ಯಾನವೇ ಆಗಿರುವದು. ತೆಂಗಿನ ಗಿಡವನ್ನು ಹೋಲುವ ಪಾಮ ಗಿಡಗಳೂ ತಾಡ ವೃಕ್ಷಗಳೂ ಇರುವವು. ಇಲ್ಲಿ ೧೬ನೇ ಶತಕದಲ್ಲಿ ನೆಲಸಿದ ಡಚ್ಚ ಜನರು ಪಾಮ ಗಿಡಗಳನ್ನು ಯುರೋಪದಿಂದ ತಂದು ಹಚ್ಚಿದರು. ಕೆಲವು ಕಡೆ ಅಡವಿಯಲ್ಲಿ ನೀರು ಬೀಳುವ ದಬದಬೆಗಳಿರುತ್ತವೆ. ಅಲ್ಲಿ ಹಣ್ಣಿನ ಗಿಡಗಳನ್ನು ಹಚ್ಚಿ ಬೆಳೆಯಿಸುತ್ತಾರೆ. ಕೆಲವು ಗುಡ್ಡಗಳಲ್ಲಿ ಹುಲ್ಲು ಬೆಳೆಯುವ ಭೂಮಿಗಳಿವೆ. ಅಲ್ಲಿ ದನಗಳನ್ನು ಮೇಯಿಸುತ್ತಾರೆ. ಅಲ್ಲಲ್ಲಿಯ ಪ್ರಾಕೃತಿಕ ಸಂಗತಿಗಳ ಹೆಚ್ಚು ಕಡಿಮೆಯಿಂದ ಒಂದೇ ಗುಡ್ಡದ ಆಚೆ ಈಚೆಗಳಲ್ಲಿ ಹೂ ಬಿಡುವ ಕಾಲದ ಅಂತರವು ೬ ತಿಂಗಳು ಆಗಿರುವದು.

ಉದ್ಯೋಗ— ಇಲ್ಲಿ ಒಕ್ಕಲತನದ ಉದ್ಯೋಗವು ನಡೆಯುತ್ತದೆ. ರಂಟೆ ಕುಂಟೆಗಳಿಗೆ ಕೋಣಗಳನ್ನು ಹೂಡಿ ಭೂಮಿಯ ಸಾಗುವಳಿ ಮಾಡುತ್ತಾರೆ. ಇಲ್ಲಿಯ ಮೂಲನಿವಾಸಿಗಳಾದ 'ವೆದ್ದಾ' ಎಂಬ ಜನಾಂಗದವರು ಗುಡ್ಡಗಾಡುಗಳಲ್ಲಿ ವಾಸಿಸಿ ಬೇಟೆಯಾಡಿ ಜೀವಿಸುತ್ತಾರೆ. ಅವರು ಸಿನ್ಹೇಲ ಎಂಬ, ಅಲ್ಲಿಯ ಜನಾಂಗದವರಿಗಿಂತಲೂ ಮೊದಲೇ ವಾಸವಾಗಿದ್ದರೆಂದು ಗೊತ್ತಾಗಿದೆ. ವೆದ್ದಾಗಳು ಅಡವಿಯಲ್ಲಿ ಗುಡಿಸಲು ಕಟ್ಟಿ ವಾಸಿಸಿದರೂ ಅಲ್ಲಿಯೇ ಒಕ್ಕಲತನವನ್ನು ಸಹ ಮಾಡಿಕೊಳ್ಳುತ್ತಾರೆ. ಇವರ ಗುಡಿಸಲುಗಳಲ್ಲಿ ದನಕರುಗಳೂ ರಕ್ಷಣೆಗಾಗಿ ನಾಯಿಗಳೂ ಇರುತ್ತವೆ. ಬಾಣ

ಗಳಿಂದ ಬೇಟೆಗಳನ್ನು ಹೊಡೆಯುತ್ತಾರೆ. ಅಡವಿಗಳನ್ನು ಸುಟ್ಟು ಹೊಸ ಭೂಮಿಗಳನ್ನು ಮಾಡಿಕೊಂಡು ಒಕ್ಕಲತನ ಮಾಡುತ್ತಾರೆ. ಈ ರೀತಿಗೆ ಅಲ್ಲಿಯ ಜನರು ಚನ್ನಾ' ಎನ್ನುತ್ತಾರೆ. ಈ ಕ್ರಮಕ್ಕೆ ಸರಕಾರದವರು ಪ್ರತಿಬಂಧ ಮಾಡಹೊಡಗಿದ್ದಾರೆ. ೫ ವೆದ್ದಾಗಳು ಪೂರ್ವದಿಕ್ಕಿನಲ್ಲಿ ವಾಸಿಸುವರು. ಅವರ ಒಟ್ಟು ಸಂಖ್ಯೆಯು ೪೦೦೦ ಇದ್ದು ಬರಬರುತ್ತ ಕಡಿಮೆಯಾಗತೊಡಗಿದೆ. ಗುಡ್ಡದ ಓರೆಯಲ್ಲಿ ಚಹಾದ ತೋಟಗಳಿರುತ್ತವೆ. ಹೊಲದ ಯಜಮಾನನು ಆ ತೋಟದಲ್ಲಿಯೇ ಮನೆ ಮಾಡಿರುತ್ತಾನೆ. ಚಹಾದ ಪೈರು ಬಂದ ಕೂಡಲೆ ಎಲೆಗಳನ್ನು ಹರಿದು ಕ್ರಮದಿಂದ ಒಣಗಿಸಿ ಪರಸ್ಥಳಕ್ಕೆ ಕಳಿಸುವರು. ಯುರೋಪದ ತೋಟಿಗರೇ ಬಹುತರವಾಗಿ ಚಹಾ ರಬ್ಬರಿನ ತೋಟದ ಉದ್ಯೋಗವನ್ನು ಸಾಗಿಸುವರು. ಪಶ್ಚಿಮದ ದಂಡೆಯಲ್ಲಿ ಉಪ್ಪಿನ ಕಾರಖಾನೆಗಳಿವೆ. ಕೆಲವೆಡೆಗಳಲ್ಲಿ ತೊಲೆಗಳನ್ನು ಕೊರೆದು ಪರದೇಶಗಳಿಗೆ ಕಳಿಸುವರು. ಮೂಲ ನಿವಾಸಿಗಳಾದ ಕಾಡು ಜನರು ಟೆಂಗು, ತಾಮುಗಳ ಕಾತಿಗಳಿಂದ ಹಗ್ಗ ಹೊಸೆಯುವರು; ತಾಡ ಎಲೆಯಿಂದ ಬೀಸಣಿಕೆ ಮಾಡುವರು; ಅಡವಿಯ ಹುಲ್ಲುಗಳಿಂದ ಬುಟ್ಟಿ ಹೆಣೆಯುವರು. ಸಮುದ್ರ ದಂಡೆಗೆ ಮೀನ ಹಿಡಿಯುವ ಉದ್ಯೋಗವೂ ನಡೆಯುತ್ತದೆ. ಮಾನಾರದ ಆಖಾತದ ದಂಡೆಯಲ್ಲಿ ಮುತ್ತು ತೆಗೆಯುವ ಉದ್ಯೋಗವು ಸಾಗುತ್ತದೆ. ಗುಡ್ಡಗಳಲ್ಲಿ ಲೋಹ ತೆಗೆಯುವ ಕೆಲಸವೂ ನಡೆಯುತ್ತದೆ. ಗುಡ್ಡಗಳ ಖನಿಗಳಲ್ಲಿ ಪ್ಲಂಬೇಗೋ ಎಂಬ ಖನಿಜವು ಸೀಸಪೆನ್ಸಿಲಿಗೆ ಉಪಯೋಗಬೀಳುತ್ತದೆ. ಕಬ್ಬಿಣದ ಅದುರಗಳೂ ದೊರೆಯುತ್ತವೆ. ಅವುಗಳನ್ನು ಅಗಿದು ತೆಗೆದು ಪರದೇಶಗಳಿಗೆ ಕಳಿಸುವರು. ಇದು ಏಶಿಯಾಖಂಡದ ಹಾಗು ಬೇರೆ ಖಂಡಗಳ ನಡುಮೂಲಿಯ ಸ್ಥಳವಾದ್ದರಿಂದ ವ್ಯಾಪಾರವು ಭರದಿಂದ ನಡೆಯುತ್ತದೆ. ಇಂಗ್ಲಿಷ ವ್ಯಾಪಾರಸ್ಥರೂ ಇರುವರು. ಪೂರ್ವಕಾಲದ ಪೋರ್ತುಗೀಜ ಡಚ್ಚ ಸಂತತಿಯವರೂ ವ್ಯಾಪಾರ ಮಾಡುತ್ತಿರುವರು. ಇಲ್ಲಿ ನೇಯುವ ಉದ್ಯೋಗವೂ ನಡೆಯುತ್ತದೆ. ಕ್ಯಾಂಡಿಯಲ್ಲಿ ನೇಯುವ ಡುಂಬಾರಾಕ್ಲಾಥವೆಂಬ ಅರಿವೆಯು ಬಹಳ ಪ್ರಸಿದ್ಧವಾಗಿದೆ.

ಅಲ್ಲಿಯ ಜನಾಂಗಗಳೂ ಅವರವರ ಧರ್ಮವೂ— ಸಿಂಘಲೀ ಜನರು ಬೌದ್ಧರು, ಅವರ ಉಡುತೊಡಿಗೆಗಳು ನಮ್ಮಲ್ಲಿಗಿಂತ ಭಿನ್ನವಾಗಿವೆ. ಸಿಂಘಲೀ ಸಭ್ಯ ಗೃಹಸ್ಥನು ತಲೆಯ ಹಿಂದೆ ಕೂದಲಿನಲ್ಲಿ ಹಣಿಗೆಯನ್ನು ಸಿಗಿಸುತ್ತಾನೆ. ಹಣಿಗೆಯಲ್ಲಿ ಕಲಾಕೌಶಲ್ಯವು ಚೆನ್ನಾಗಿ ನೋಡುವಂತೆ ಇರುತ್ತದೆ. ಈ ರೀತಿಯಾಗಿ ಧರಿಸುವದು ಮೇಲ್ತರದ ಕುಲದ ಲಕ್ಷಣವೆಂದು ಅವರು ಬಗೆಯುವರು. ಅದನ್ನೊಂದು ಬಿಟ್ಟರೆ ಮಿಕ್ಕ ಉಡಿಗೆಯು ಯುರೋಪಿಯರ ಅನುಕರಣವೇ ಇರುತ್ತದೆ. ಸಿಂಘಲೀ ಹೆಣ್ಣುಮಕ್ಕಳ ತಲೆಯ ಮೇಲೆ ಶಾಲನ್ನೂ ಟೊಂಕಕ್ಕೆ 'ಕ್ಯಾಂಬೆ' ಎಂಬ ವಸ್ತ್ರವನ್ನೂ ಧರಿಸುತ್ತಾರೆ. ಇವರು ಜಾಕೀಟನ್ನು ಧರಿಸುವರು. ಕ್ರಿ. ಶ. ಪೂ. ೫೪೩ ರ ಸುಮಾರಕ್ಕೆ

ಬೌದ್ಧರಾಜರು ಉತ್ತರ ಹಿಂದುಸ್ಥಾನದಿಂದ ಧರ್ಮಪ್ರವರ್ತಕರನ್ನು ಕಳಿಸಿದಾಗ ಅವ ಕೂಡ ಬಂದ ಜನರ ಸಂತತಿಯುವರೇ ಸಿಂಘಲೀ ಜನರೆಂದು ತಿಳಿದಿರುವರು. ಬೌದ್ಧ ದೇವಾಲಯುಗಳು ಪಟ್ಟಣಗಳಲ್ಲಿ ಇರುವವಲ್ಲದೆ ಬುದ್ಧನ ಮೂರ್ತಿಗಳು ಅಡವಿಯ ಗುಡ್ಡದಲ್ಲಿ ಸಹ ಇರುವವು. ಬೌದ್ಧ ಗುಡಿಗಳೇ ಪುರಾತನದ ಬೌದ್ಧ ಧರ್ಮದ ಘನ ತೆಯು ಕುರುಹುಗಳಾಗಿ ಉಳಿದಿವೆ. ಅದರಲ್ಲಿಯು ಶಿಲ್ಪಕಲೆಯು ವರ್ಣನೆಯು ಅಷ್ಟಿಷ್ಟೆಂದ ಹೇಳುವಂತೆ ಇಲ್ಲ. ಇಟ್ಟಂಗಿಯಿಂದ ಕಟ್ಟಿದ ಗಂಟಿಯು ಆಕೃತಿಯು ಡಗೋಬಾ ಎಂಬ ಗಚ್ಚಿನ ಕಟ್ಟಡಗಳು ಬಹಳ ಪ್ರಸಿದ್ಧವಿರುವವು. ಇವುಗಳ ಸುತ್ತಲು ಬೌದ್ಧ ವಿಹಾ ಗಳಿರುವವು. ಈ ಡಗೋಬಾಗಳು ಅನುರಾಧಾಪುರದಲ್ಲಿ ವಿಶೇಷ ಬೌದ್ಧ ಕಟ್ಟಡಗಳೂ ಮೂರ್ತಿಗಳೂ ಸಿನ್ಹೀಲ ರಾಜರ ಕಾಲದ ಗುರುತುಗಳಾಗಿವೆ. ಇವರು ಬೆಳ್ಳಿ ಬಂಗಾರಗಳ ಆಭರಣಗಳನ್ನು ಮಾಡುತ್ತಾರೆ. ಹಳೆಯ ರೀತಿಗೆ ಮೆಚ್ಚಿದವರು ಇವುಗಳನ್ನು ಕೊಳ್ಳು ವರು. ಸಿಂಘಲೀ ಜನರು ಪಶ್ಚಿಮದ ದಂಡೆಗಳಲ್ಲಿರುತ್ತಾರೆ. ಇವರು ಚುರುಕು ಬುದ್ಧಿ ಯುವರೂ ಶಾಂತರೂ ಇರುವರು.

ತಮಿಳರು ಮದ್ರಾಸ ಇಲಾಖೆಯಿಂದ ಬಂದವರು. ಇವರು ತಮಿಳ ಭಾಷೆಯನ್ನು ಆಡುತ್ತಾರೆ. ಇವರು ಉತ್ತರ ಭಾಗದಲ್ಲಿ ವಾಸಿಸುವರು. ಕಾಡು ಜನರಂತೂ ಗುಡ್ಡ ಗಾಡುಗಳಲ್ಲಿರುವರು. ಪೋರ್ತುಗೀಜ, ಡಚ್ಚ ಸಂತತಿಯುವರೂ ದೇಶೀ ಕ್ರಿಸ್ತಿಯನ್ನರೂ ಇರುವರು. ಇವರು ಕಂದೀ ಮೈಬಣ್ಣದವರು. ಟೊಂಕಕ್ಕೆ ಕ್ಯಾಂಬೆ ಸುತ್ತುತ್ತಾರೆ. ತಲೆಗೆ ರುಮಾಲ ಸುತ್ತುತ್ತಾರೆ. ಬರಿಯ ಮೈಯಿಂದ ಓಡಾಡುವರು. ತಮಿಳರು ಬಹುತ ವಾಗಿ ರೇಲ್ವೆಯ ಕೂಲೀ ಕೆಲಸ ಮಾಡುತ್ತಾರೆ.

ಪೋರ್ತುಗೀಜ ಸಂತತಿಯುವರು ವಿಕಾರ ಹೊಂದಿದ ಪೋರ್ತುಗೀಜ ಭಾಷೆಯನ್ನಾ ಡುತ್ತಾರೆ. ಅವರ ಹೆಸರಿಗೆ ಡಾಕ ಎಂಬ ಪದವಿಯು ಇರುವದು.

ಮುಸಲ್ಮಾನರು ಮೂರ ಸಂತತಿಯುವರು; ಅವರು ವ್ಯಾಪಾರ ಮಾಡುತ್ತಾರೆ. ಮಸೀದೆಗಳು ಪಟ್ಟಣಗಳಲ್ಲಿ ಕಂಗೊಳಿಸುವವು.

ಬಡ ಜನರ ಮನೆಗಳು ಕೆಸರು ಕಲ್ಲುಗಳಿಂದ ಕಟ್ಟಿದಂಥವು. ಮೇಲೆ ಟೆಂಗಿನ ಗರಿ ಗಳನ್ನು ಹೊಚ್ಚಿರುತ್ತಾರೆ. ದೇವಾಲಯುಗಳೂ ಶ್ರೀಮಂತರ ಮನೆಗಳೂ ಥಿಯೇಟರಗಳೂ ಕಲ್ಲುಗಚ್ಚುಗಳಿಂದ ಚನ್ನಾಗಿ ಕಟ್ಟಲ್ಪಟ್ಟಿರುತ್ತವೆ. ಅಷ್ಟರ ಪೂರ್ತಿ ಕೆಲಸಕ್ಕೆ ರಿಕ್ಷಾ ಎಂಬ ಬಂಡಿಗಳನ್ನು ಉಪಯೋಗಿಸುವರು. ಈ ಬಂಡಿಗಳನ್ನು ಮನುಷ್ಯರೇ ಎಳೆಯು ವರು.

ರೇಲ್ವೆ—ಕೋಲಂಬೋದಿಂದ ಎಲ್ಲ ಕಡೆಗೆ ರೇಲ್ವೆಯು ಹೋಗಿರುತ್ತದೆ. ಒಂದು ದಕ್ಷಿಣಕ್ಕೆ ಗ್ಯಾಲೀ ಬಂದರದ ಕಡೆಗೆ ಹೋಗಿದೆ. ಈ ಬಂದರವು ಮನ್ಸೂನ ಗಾಳಿಗೆ ಎದುರಾಗಿರುವದರಿಂದ ಅಲ್ಲಿ ಹಡಗಗಳು ನಿಲ್ಲುವಂತಿಲ್ಲ. ರೇಲ್ವೆ ಶಾಖೆಯು ಒಂದು

ನುವೇರಾಕ್ಕೆ ಹೋಗಿದೆ. ಮತ್ತೊಂದು ಅನುರಾಧಾಪುರವನ್ನು ದಾಟಿ ಜಾಫ್ನಾದ ವರೆಗೆ ಹೋಗಿದೆ. ಮತ್ತೊಂದು ಮಾನಾರಾದ ವರೆಗೆ ಹೋಗಿದೆ. ಇವೆಲ್ಲಾ ರೇಲ್ವೆ ದಾರಿಗಳಿಗೆ ಲೈನ ದಾರಿಗಳು ಬಂದು ಕೂಡಿವೆ. ಪಟ್ಟಣಗಳಲ್ಲಿ ಟ್ರಾಮ ಗಾಡಿಗಳು ಅವೆ. ಈ ಪಟ್ಟಣಗಳಲ್ಲಿಯ ದಾರಿಗಳು ಒಳ್ಳೆಯ ಅಗಲವಾಗಿರುವವು. ಎತ್ತಿನ ಬಂಡಿಗಳೂ ಓಡಾಡುತ್ತಿರುವವು. ನದಿಯಲ್ಲಿ ನಾವುಗಳು ನಡೆಯುತ್ತವೆ. ನಾವು ನಡೆಯಿಸುವ ಕೆಲಸವನ್ನು ತಮಿಳರು ಮಾಡುತ್ತಾರೆ.

ಶಿಕ್ಷಣ—ಈ ದೇಶದಲ್ಲಿ ಒಟ್ಟಿಗೆ ೨॥ ಲಕ್ಷ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಾರೆ. ಔದ್ಯೋಗಿಕ ಶಾಲೆಗಳೂ ಅವೆ. ಪ್ರಾಥಮಿಕ ಶಾಲೆಗಳು ಸಣ್ಣವಿದ್ದರೂ ಅವುಗಳ ಎದುರಿಗೆ ಬೈಲಿನಲ್ಲಿ ಗಿಡಗಳ ಕೆಳಗೆ ಒಮ್ಮೊಮ್ಮೆ ವಿದ್ಯಾರ್ಥಿಗಳು ಓದುತ್ತಿರುತ್ತಾರೆ. ಸಿಂಘಲೀ ಜನರೇ ಶಿಕ್ಷಕರು ಬಹಳ. ಒಟ್ಟು ಜನಸಂಖ್ಯೆಗೆ ಕಲಿತವರ ಸಂಖ್ಯೆಯು ಕಡಿಮೆ ಇರುವದು. ಪೋಸ್ಟ ಆಫೀಸನ ಹತ್ತರ ಪತ್ರಬರೆಯುವವರು ಕೂತಿರುತ್ತಾರೆ. ಅವರಿಗೆ ಪತ್ರಕ್ಕೆ ಇಂತಿಷ್ಟೆಂದು ಕೊಟ್ಟು ಜನರು ಪತ್ರಬರೆಯಿಸುವರು.

ಪಟ್ಟಣಗಳು—ಕೋಲಂಬೋ ಇದು ಸಿಂಹಳದ್ವೀಪದ ಪಶ್ಚಿಮ ದಂಡೆಯ ಬಂದರವು. ಇದು ಸ್ವಾಭಾವಿಕ ಬಂದರವಲ್ಲ. ಬಂದರದ ರಕ್ಷಣೆಗಾಗಿ ಬಲವಾದ ಒಡ್ಡುಗಳನ್ನು ಮದ್ರಾಸದಂತೆ ಕಟ್ಟಿಸಿರುವರು. ಇದು ಪೂರ್ವಭಾಗ ಪಶ್ಚಿಮಭಾಗಗಳ ಪಡಮೂಲಿಯಂತೆ ಅದೆ. ಇಲ್ಲಿ ಆಸ್ಟ್ರೇಲಿಯಾ, ಜಪಾನ ಚೀನಗಳಿಂದಲೂ ಇತ್ತ ಯುರೋಪ ಆಫ್ರಿಕಾದೊಳಗಿನ ದೇಶಗಳಿಂದಲೂ ಬಂದ ಹಡಗುಗಳನ್ನು ಕಾಣಬಹುದು. ಇವೆಲ್ಲ ಹಡಗುಗಳು ಇಲ್ಲಿ ಕಲ್ಲಿದ್ದಲಿಯನ್ನು ತೆಗೆದುಕೊಳ್ಳುವವು.

ಕೋಲಂಬೋದ ಹಿನ್ನಾಡು ಬೆಳೆಯುಳ್ಳದ್ದು. ಈ ಬಂದರಕ್ಕೆ ಒಳದೇಶದಿಂದ ರೇಲ್ವೆ, ಹಾಗು ಲೈನ ಮಾರ್ಗಗಳು ಬಂದು ಕೂಡಿವೆ. ಸಮುದ್ರದಲ್ಲಿ ಬಿರುಗಾಳಿಯಿಂದ ದೊಡ್ಡ ದೊಡ್ಡ ತೆರೆಗಳು ಏಳುವವು. ಆದರೆ ಬಂದರ ಕಟ್ಟಿದ ಸ್ಥಳದಲ್ಲಿ ತೆರೆಗಳು ಏಳದ್ದರಿಂದ ಸುತ್ತಲು ತೆರೆಗಳು ಎದ್ದಾಗ ಬಂದರದೊಳಗಿನ ಹಡಗದಲ್ಲಿದ್ದವರಿಗೆ ಎಲ್ಲೆಡೆಯಲ್ಲಿಯೂ ನೀರಿನ ಪರ್ವತವಿದ್ದಂತೆ ಕಾಣುತ್ತದೆ. ನಾವಿಕರು ನದಿಯಮಾರ್ಗವಾಗಿ ಕೋಲಂಬೋಕ್ಕೆ ಬರುವರು. ಕೋಲಂಬೋದಲ್ಲಿ ಬೈಲು ಮಾರ್ಕೆಟು ಇರುವದು. ಅಲ್ಲಿ ಎಲ್ಲ ಜಾತಿಯ ನಾನಾ ಪ್ರಕಾರದ ಪ್ರಾವರಣದ ಜನರು ಕಣ್ಣಿಗೆ ಬೀಳುವರು. ಹಳೆಯ ಪದ್ಧತಿಯ ಜನರು ತಲೆಗೆ ಜೇನು ಹುಟ್ಟಿನಂಥ ಟೊಪ್ಪಿಗೆ ಧರಿಸುವರು. ಈ ಪಟ್ಟಣದಲ್ಲಿ ಹಳೆಯ ಹಿಂದೂ ದೇವಾಲಯುಗಳೂ ಅವೆ. ಕೋಲಂಬೋದಲ್ಲಿ ಕೆರೆಯು ನೋಡತಕ್ಕಂಥಾದ್ದಿರುತ್ತದೆ. ಕೋಲಂಬೋದಿಂದ ನೇಗಂಬೋದವರೆಗೆ ಕಾಲುವೆಯದೆ.

ಕ್ಯಾಂಡೀ ಪಟ್ಟಣ—ಇದು ಒಳದೇಶದಲ್ಲಿ ಅದೆ. ಉಳಿದ ಬೈಲು ಭೂಮಿಗಿಂತ ಹೆಚ್ಚು ಎತ್ತರದಲ್ಲಿ ಅದೆ, ಈ ಪಟ್ಟಣದ ಹತ್ತರ ಸರೋವರವಿದೆ. ಆ ಸರೋವರದ

ಹತ್ತಿರ ಹಳೆಯ ಪಟ್ಟಣದ ಸ್ಮಾರಕಗಳು ಅವೆ. ಕ್ಯಾಂಡೀ ಪಟ್ಟಣದ ಹವೆಯು ತಂಪಾಗಿರುತ್ತದೆ; ಇದು ಸಮುದ್ರದ ಪಾತಳಿಯಿಂದ ೨೦೦೦ ಫೂಟಿಗಿಂತ ಹೆಚ್ಚು ಎತ್ತರದ ಮೇಲೆ ಅದೆ. ಈ ಪಟ್ಟಣದಲ್ಲಿ ಇದ್ದ ಆಡೆನ್ಸಹಾಲ್ ಎಂಬ ಹಳೆಯ ಕಟ್ಟಡವನ್ನು ಈಗ ನ್ಯಾಯಸ್ಥಾನವನ್ನಾಗಿ ಉಪಯೋಗಿಸುತ್ತಾರೆ, ಅದರೊಳಗೆ ಪ್ರಾಚೀನ ಕಾಲದ ಸಭಾಮಂಟಪವಿದೆ. ಇದು ಪುರಾತನದಲ್ಲಿ ಸಿಂಹಳದ್ವೀಪದ ರಾಜಧಾನಿಯಾಗಿತ್ತು. ಬಳಿಕ ಕೋಟಾ, ಆ ಮೇಲೆ ಈಗ ಕೋಲಂಬೋ ಪಟ್ಟಣಗಳು ಕ್ರಮದಿಂದ ರಾಜಧಾನಿಗಳಾದವು ಈ ಪಟ್ಟಣದಲ್ಲಿ ಟೂಥ ದೇವಾಲಯವೆಂಬ ಭವ್ಯವಾದ ಪ್ರಾಚೀನ ಕಾಲದ ಕಟ್ಟಡವದೆ. ಈ ದೇವಾಲಯದಲ್ಲಿ ಬುದ್ಧನಹಲ್ಲು ಅದೆಂದು ಹೇಳುತ್ತಾರೆ. ಈ ಪಟ್ಟಣದ ಅಗಸೆಯ ಬಾಗಿಲುಗಳು ಅಶೋಕನ ಕಾಲದವೆಂದು ಹೇಳುತ್ತಾರೆ. ದೇವಾಲಯದಲ್ಲಿ ಬುದ್ಧನ ಮೂರ್ತಿಯು ಒಂದೇ ಕಲ್ಲಿನಲ್ಲಿ ಕೆತ್ತಲ್ಪಟ್ಟಿದೆ. ಆ ಮೂರುತಿಗೆ ತಲೆಗೆ ಟೊಪ್ಪಿಗೆಯದೆ. ಮೂರ್ತಿಗೆ ಒಂದೇ ವಸ್ತ್ರವು ಸುತ್ತಿದ್ದು ಕಾಣುವಂತೆ ಅಂದವಾಗಿ ಕೆತ್ತಿದ್ದಾರೆ. ಇದು ಈಗ ಸಿಲೋನಿನ ಸರಕಾರದ ಗಿರಿ ನಿವಾಸಸ್ಥಳವು—ಇದರ ಸಮೀಪದಲ್ಲಿ ವನಸ್ಪತಿ ಶಾಸ್ತ್ರಾಭ್ಯಾಸದ ತೋಟವಿದೆ.

ಅನುರಾಧಾಪೂರ— ಈ ಪಟ್ಟಣದಲ್ಲಿ ಬೌದ್ಧ ದೇವಾಲಯಗಳು ಅನೇಕವಿರುವವು. ರಾವಣವೆಲಿ, ಥೂಪರಾಮಾ ಎಂಬ ಹೆಸರಿನ ಬೌದ್ಧರ ಕ್ಷೇತ್ರಸ್ಥಳಗಳು ಇದರ ನೆರೆಯಲ್ಲಿರುವವು. ಥೂಪರಾಮದಲ್ಲಿ ಬುದ್ಧನ ಕುತ್ತಿಗೆಯ ಎಲುವು ಇರುವದೆಂದು ಹೇಳುತ್ತಾರೆ. ಈ ಪಟ್ಟಣದ ಹತ್ತರ ಬೌದ್ಧರ ಪವಿತ್ರ ವೃಕ್ಷವದೆ. ಇದನ್ನು ಬುದ್ಧಗಯಾದ ಹತ್ತರ ಇರುವ ವೃಕ್ಷದ ಟೊಂಗೆಯಿಂದ ಕ್ರಿ. ಶ. ಪೂರ್ವದ ೨೮೮ ನೇ ವರ್ಷದಲ್ಲಿ ಹಚ್ಚಿದರೆಂದು ಹೇಳುತ್ತಾರೆ.

ತ್ರಿಂಕೋಮಾಲಿ— ಈ ಬಂದರವು ಈ ದೇಶದ ಈಶಾನ್ಯದಲ್ಲಿ ಮಹಾವಲಿಗಂಗಾ ನದಿಯ ಮುಖದ ಹತ್ತರ ಅದೆ. ಇದು ಸ್ವಾಭಾವಿಕ ಬಂದರವಾಗಿದ್ದರೂ ಹಿನ್ನಾಡು ಬಂಜೆಭೂಮಿಯಾದುದರಿಂದಲೂ, ದಾರಿಯಲ್ಲಿ ಇಲ್ಲದುದರಿಂದಲೂ ಹಿಂದೆ ಬಿದ್ದದೆ. ಹಿಂದಕ್ಕೆ ಒಮ್ಮೆ ಹಿಂದೀಮಹಾಸಾಗರದ ಹಡಗುಪಡೆಯ ಸ್ಥಳವಾಗಿದ್ದಿತು. ನುವೆರಾ ಎಲಿಯಾವು ತಂಪುಸ್ಥಳ.

ರಾಜ್ಯಭಾರ— ಇದು ಬ್ರಿಟಿಶರ ಸಾಮ್ರಾಜ್ಯದಲ್ಲಿ ಕ್ರೌನ ಕಾಲನಿಗೆ ಸೇರಿದೆ. ಗವ್ಹರ್ನರನು ಬಾದಶಹರವರ ತರ್ಫಿಯಿಂದ ಆಳುವನು. ಅಲ್ಲಿಯ ಗವ್ಹರ್ನರರಿಗೂ ೨ ಸಭೆಗಳಿವೆ.

ನಾಯಕ ನರೇಶರ ಅಮಾತ್ಯರಾದ ಗೋವಿಂದ ದೀಕ್ಷಿತರು

ಲೇಖಕ:—ಕಾಶೀನಾಥ ಯಜ್ಞೇಶ್ವರ ಜೋಶಿ, ಹೆಡ್‌ಮಾಸ್ತರ ಬನ್ನಿಕೊಪ್ಪ.

पुरा यत्रस्रोतः पुलिन मधुनायत्र सरिताम् ।
विपर्यासं यातो घनविरळ भावः क्षितिरुहाम् ॥
वहोर्दृष्टं कालादपरमिवमन्ये वनमिदं ।
निवेशश्शैलानां तदिदमिति बुद्धिं द्रढयति ॥ १ ॥

—उत्तररामचरितम्.

ಪ್ರಾಚೀನ ಕಾಲದಲ್ಲಿ ಹಿಂದೂ ರಾಷ್ಟ್ರವು ಸುಧಾರಣೆಯ ಶಿಖರವನ್ನೇರಿದ ಸಂಗತಿಯು ಸೂಚಕಗಳಾದ ಚಿಹ್ನಗಳು ದಕ್ಷಿಣ ಭಾರತದಲ್ಲಿ ದೊರೆತಷ್ಟು ಇನ್ನೆಲ್ಲಿಯೂ ದೊರೆತಿಲ್ಲ. ಇಲ್ಲಿ ಸಾವಿರಾರು ವರ್ಷಗಳವರೆಗೆ ಹಿಂದೂ ರಾಜಸತ್ತೆಯು ಅಖಂಡವಾಗಿತ್ತು. ಪ್ರಾಚ್ಯ ತತ್ವಜ್ಞರು ಪ್ರಾಕ್ತನ ಸಂಶೋಧಕರು ಈಗ ಎಷ್ಟೋ ವರ್ಷಗಳಿಂದ ಇಲ್ಲಿ ಪುರಾತನ ಚಿಹ್ನಗಳನ್ನು ಶೋಧಿಸತೊಡಗಿದ್ದಾರೆ. ಅವರಿಗೆ ಪ್ರತಿ ಸಂವತ್ಸರದಲ್ಲಿಯೂ ನೂರಾರು ನೂತನ ಶಿಲಾಲೇಖಗಳೂ, ತಾಮ್ರಪಟಗಳೂ ಮಠ, ಮಂದಿರ, ಪ್ರತಿಮೆಗಳೂ ದೊರೆಯುತ್ತಿರುವವು. ಚೋಳ, ಪಾಂಡ್ಯ, ಕಾಕತೀಯ, ಹೈಹಯ, ಕದಂಬ, ಗಂಗ, ಚಾಲುಕ್ಯ ಮತ್ತು ನಾಯಕ ಮೊದಲಾದ ವಂಶಗಳೊಳಗಿನ ನರೇಶರ ಅನಂತ ದಾನ ಪತ್ರಗಳೂ ಶಿಲಾಲೇಖಗಳೂ ದಕ್ಷಿಣದಲ್ಲಿ ಅಲ್ಲಲ್ಲಿಗೆ ತುಂಬಿಕೊಂಡಿವೆ. ಅವುಗಳ ಸಹಾಯದಿಂದ ಮೇಲಿನ ರಾಜವಂಶಗಳ ಕಾಲದ ಸಂಗತಿಗಳನ್ನು ಅರಿತುಕೊಂಡು ಪ್ರಸಿದ್ಧಿಸುವದು ಒಳ್ಳೆ ಮಹತ್ವದ ಸಂಗತಿಯಾಗಿದೆ. ಯಾವನೊಬ್ಬ ಇತಿಹಾಸಜ್ಞನು ಈ ಎಲ್ಲ ಲೇಖನಗಳ ಸಹಾಯದಿಂದ ದಕ್ಷಿಣ ಹಿಂದುಸ್ತಾನದ ಪ್ರಾಚೀನ ಇತಿಹಾಸವನ್ನು ಬರೆದರೆ ಅರ್ವಾಚೀನ ಕಾಲದಲ್ಲುಂಟಾದ ಪರಿವರ್ತನೆಯನ್ನು ಕಂಡು ಖೇದವೂ ಅಭಿಮಾನವೂ ಜನಿಸದೆ ಇರಲಾರವು. ಒಂದಾನೊಂದು ಕಾಲಕ್ಕೆ ಯಾವ ರಾಜಧಾನಿಗಳು ಪ್ರತ್ಯಕ್ಷ ಲಕ್ಷ್ಮಿಯ ನಿವಾಸಸ್ಥಳಗಳಾಗಿದ್ದವೊ, ಎಲ್ಲ ದಾನ ಧರ್ಮಗಳ ಪ್ರಚಂಡ ಪ್ರವಾಹಗಳು ಎಡೆಬಿಡದೆ ಪ್ರವಹಿಸುತ್ತಿದ್ದವೊ, ಮತ್ತು ಯಾವ ನಗರಗಳಲ್ಲಿ ಶಾಸ್ತ್ರಜ್ಞ, ಪಂಡಿತ, ಕವಿ, ಕೋವಿದರ ಸಂವಣಿಯುಂಟಾಗಿತ್ತೊ, ಅಂಥ ಸ್ಥಳಗಳು ಕಾಲನ ದುರ್ದಮನೀಯವಾದ ಕೋಪಕ್ಕೆ ಬಲಿಯಾಗಿ ಹೇಳಹೆಸರಿಲ್ಲದೆ ಹೋದವು. ಮೇಲಿನ ಸಂಗತಿಗಳೆಲ್ಲವೂ ಸದ್ಯಕ್ಕೆ ಸ್ಮೃತಿ ನಷ್ಟವಾಗಿವೆ. ಹರ ಹರ! सर्वं यस्यवशादगात् स्मृतिपथं कालाय तस्मैनमः ಅಚಿಂತ್ಯವಾದ ದುಃಖೋದಧಿಯಲ್ಲಿಯೂ ಕೂಡ ಚಿಂತನೀಯವಾದ ಆನಂದದ ಮಳಲ ದಿಣ್ಣೆನೆಂದರೆ, ನಷ್ಟ ಭ್ರಷ್ಟ ಮಂದಿರಗಳ ಭಗ್ನಾವಶೇಷಗಳೂ ದಾನಪತ್ರಗಳೂ ಪ್ರಾಚೀನ

ಹತ್ತಿರ ಹಳೆಯ ಪಟ್ಟಣದ ಸ್ಮಾರಕಗಳು ಅವೆ. ಕ್ಯಾಂಡೀ ಪಟ್ಟಣದ ಹವೆಯು ತಂಪಾಗಿರುತ್ತದೆ; ಇದು ಸಮುದ್ರದ ಪಾತಳಿಯಿಂದ ೨೦೦೦ ಫೂಟಿಗಿಂತ ಹೆಚ್ಚು ಎತ್ತರದ ಮೇಲೆ ಅದೆ. ಈ ಪಟ್ಟಣದಲ್ಲಿ ಇದ್ದ ಆಡೆನ್ಸಹಾಲ್ ಎಂಬ ಹಳೆಯ ಕಟ್ಟಡವನ್ನು ಈಗ ನ್ಯಾಯಾಸ್ಥಾನವನ್ನಾಗಿ ಉಪಯೋಗಿಸುತ್ತಾರೆ, ಅದರೊಳಗೆ ಪ್ರಾಚೀನ ಕಾಲದ ಸಭಾಮಂಟಪವಿದೆ. ಇದು ಪುರಾತನದಲ್ಲಿ ಸಿಂಹಳದ್ವೀಪದ ರಾಜಧಾನಿಯಾಗಿತ್ತು. ಬಳಿಕ ಕೋಟಾ, ಆ ಮೇಲೆ ಈಗ ಕೋಲಂಬೋ ಪಟ್ಟಣಗಳು ಕ್ರಮದಿಂದ ರಾಜಧಾನಿಗಳಾದವು. ಈ ಪಟ್ಟಣದಲ್ಲಿ ಟೂಥ ದೇವಾಲಯವೆಂಬ ಭವ್ಯವಾದ ಪ್ರಾಚೀನ ಕಾಲದ ಕಟ್ಟಡವದೆ. ಈ ದೇವಾಲಯದಲ್ಲಿ ಬುದ್ಧನಹಲ್ಲು ಅದೆಂದು ಹೇಳುತ್ತಾರೆ. ಈ ಪಟ್ಟಣದ ಅಗಸೆಯ ಬಾಗಿಲುಗಳು ಅಶೋಕನ ಕಾಲದವೆಂದು ಹೇಳುತ್ತಾರೆ. ದೇವಾಲಯದಲ್ಲಿ ಬುದ್ಧನ ಮೂರ್ತಿಯು ಒಂದೇ ಕಲ್ಲಿನಲ್ಲಿ ಕೆತ್ತಲ್ಪಟ್ಟಿದೆ. ಆ ಮೂರುತಿಗೆ ತಲೆಗೆ ಟೊಪ್ಪಿಗೆಯುದೆ. ಮೂರ್ತಿಗೆ ಒಂದೇ ವಸ್ತ್ರವು ಸುತ್ತಿದ್ದು ಕಾಣುವಂತೆ ಅಂದವಾಗಿ ಕೆತ್ತಿದ್ದಾರೆ. ಇದು ಈಗ ಸಿಲೋನಿನ ಸರಕಾರದ ಗಿರಿನಿವಾಸಸ್ಥಳವು—ಇದರ ಸಮೀಪದಲ್ಲಿ ವನಸ್ಪತಿ ಶಾಸ್ತ್ರಾಭ್ಯಾಸದ ತೋಟವಿದೆ.

ಅನುರಾಧಾಪೂರ—ಈ ಪಟ್ಟಣದಲ್ಲಿ ಬೌದ್ಧ ದೇವಾಲಯಗಳು ಅನೇಕವಿರುವವು. ರಾವಣವೆಲಿ, ಥೂಪರಾಮಾ ಎಂಬ ಹೆಸರಿನ ಬೌದ್ಧರ ಕ್ಷೇತ್ರಸ್ಥಳಗಳು ಇದರ ನೆರೆಯಲ್ಲಿರುವವು. ಥೂಪರಾಮದಲ್ಲಿ ಬುದ್ಧನ ಕುತ್ತಿಗೆಯ ಎಲುವು ಇರುವದೆಂದು ಹೇಳುತ್ತಾರೆ. ಈ ಪಟ್ಟಣದ ಹತ್ತರ ಬೌದ್ಧರ ಪವಿತ್ರ ವೃಕ್ಷವದೆ. ಇದನ್ನು ಬುದ್ಧಗಯಾದ ಹತ್ತರ ಇರುವ ವೃಕ್ಷದ ಟೊಂಗೆಯಿಂದ ಕ್ರಿ. ಶ. ಪೂರ್ವದ ೨೮೮ ನೇ ವರ್ಷದಲ್ಲಿ ಹಚ್ಚಿದರೆಂದು ಹೇಳುತ್ತಾರೆ.

ತ್ರಿಂಕೋಮಾಲಿ—ಈ ಬಂದರವು ಈ ದೇಶದ ಈಶಾನ್ಯದಲ್ಲಿ ಮಹಾವಲಿಗಂಗಾ ನದಿಯ ಮುಖದ ಹತ್ತರ ಅದೆ. ಇದು ಸ್ವಾಭಾವಿಕ ಬಂದರವಾಗಿದ್ದರೂ ಹಿನ್ನಾಡು ಬಂಜೆಭೂಮಿಯಾದುದರಿಂದಲೂ, ದಾರಿಯಲ್ಲಿ ಇಲ್ಲದುದರಿಂದಲೂ ಹಿಂದೆ ಬಿದ್ದದೆ. ಹಿಂದಕ್ಕೆ ಒಮ್ಮೆ ಹಿಂದೀಮಹಾಸಾಗರದ ಹಡಗುಪಡೆಯ ಸ್ಥಳವಾಗಿದ್ದಿತು. ನುವೆರಾ ಎಲಿಯಾವು ತಂಪುಸ್ಥಳ.

ರಾಜ್ಯಭಾರ—ಇದು ಬ್ರಿಟಿಶರ ಸಾಮ್ರಾಜ್ಯದಲ್ಲಿ ಕ್ರೌನ ಕಾಲನಿಗೆ ಸೇರಿದೆ. ಗವ್ಹರ್ನರನು ಬಾದಶಹರವರ ತರ್ಫೆಯಿಂದ ಆಳುವನು. ಅಲ್ಲಿಯ ಗವ್ಹರ್ನರರಿಗೂ ೨ ಸಭೆಗಳಿವೆ.

ನಾಯಕ ನರೇಶರ ಅಮಾತ್ಯರಾದ ಗೋವಿಂದ ದೀಕ್ಷಿತರು

ಲೇಖಕ:—ಕಾಶೀನಾಥ ಯಜ್ಞೇಶ್ವರ ಜೋಶಿ, ಹೆಡ್‌ಮಾಸ್ತರ ಬನ್ನಿಕೊಪ್ಪ.

पुरा यत्रस्रोतः पुलिन मधुनायत्र सरिताम् ।
विपर्यासं यातो घनविरळ भावः क्षितिरुहाम् ॥
वहोर्दृष्टं कालादपरमिवमन्ये वनमिः ।
निवेशश्शैलानां तदिदमिति बुद्धिं द्रढयति ॥ १ ॥

—उत्तररामचरितम्.

ಪ್ರಾಚೀನ ಕಾಲದಲ್ಲಿ ಹಿಂದೂ ರಾಷ್ಟ್ರವು ಸುಧಾರಣೆಯ ಶಿಖರವನ್ನೇರಿದ ಸಂಗತಿಯ ಸೂಚಕಗಳಾದ ಚಿಹ್ನಗಳು ದಕ್ಷಿಣ ಭಾರತದಲ್ಲಿ ದೊರೆತಷ್ಟು ಇನ್ನೆಲ್ಲಿಯೂ ದೊರೆತಿಲ್ಲ. ಇಲ್ಲಿ ಸಾವಿರಾರು ವರ್ಷಗಳವರೆಗೆ ಹಿಂದೂ ರಾಜಸತ್ತೆಯು ಅಖಂಡವಾಗಿತ್ತು. ಪ್ರಾಚ್ಯ ತತ್ವಜ್ಞರು ಪ್ರಾಕ್ತನ ಸಂಶೋಧಕರು ಈಗ ಎಷ್ಟೋ ವರ್ಷಗಳಿಂದ ಇಲ್ಲಿ ಪುರಾತನ ಚಿಹ್ನಗಳನ್ನು ಶೋಧಿಸತೊಡಗಿದ್ದಾರೆ. ಅವರಿಗೆ ಪ್ರತಿ ಸಂವತ್ಸರದಲ್ಲಿಯೂ ನೂರಾರು ನೂತನ ಶಿಲಾಲೇಖಗಳೂ, ತಾಮ್ರಪಟಗಳೂ ಮಠ, ಮಂದಿರ, ಪ್ರತಿಮೆಗಳೂ ದೊರೆಯುತ್ತಿರುವವು. ಚೋಳ, ಪಾಂಡ್ಯ, ಕಾಕತೀಯ, ಹೈಹಯ, ಕದಂಬ, ಗಂಗ, ಚಾಲುಕ್ಯ ಮತ್ತು ನಾಯಕ ಮೊದಲಾದ ವಂಶಗಳೊಳಗಿನ ನರೇಶರ ಅನಂತ ದಾನ ಪತ್ರಗಳೂ ಶಿಲಾಲೇಖಗಳೂ ದಕ್ಷಿಣದಲ್ಲಿ ಅಲ್ಲಲ್ಲಿಗೆ ತುಂಬಿಕೊಂಡಿವೆ. ಅವುಗಳ ಸಹಾಯದಿಂದ ಮೇಲಿನ ರಾಜವಂಶಗಳ ಕಾಲದ ಸಂಗತಿಗಳನ್ನು ಅರಿತುಕೊಂಡು ಪ್ರಸಿದ್ಧಿಸುವದು ಒಳ್ಳೆ ಮಹತ್ವದ ಸಂಗತಿಯಾಗಿದೆ. ಯಾವನೊಬ್ಬ ಇತಿಹಾಸಜ್ಞನು ಈ ಎಲ್ಲ ಲೇಖನಗಳ ಸಹಾಯದಿಂದ ದಕ್ಷಿಣ ಹಿಂದುಸ್ಥಾನದ ಪ್ರಾಚೀನ ಇತಿಹಾಸವನ್ನು ಬರೆದರೆ ಅರ್ವಾಚೀನ ಕಾಲದಲ್ಲುಂಟಾದ ಪರಿವರ್ತನೆಯನ್ನು ಕಂಡು ಖೇದವೂ ಅಭಿಮಾನವೂ ಜನಿಸದೆ ಇರಲಾರವು. ಒಂದಾನೊಂದು ಕಾಲಕ್ಕೆ ಯಾವ ರಾಜಧಾನಿಗಳು ಪ್ರತ್ಯಕ್ಷ ಲಕ್ಷ್ಮಿಯ ನಿವಾಸಸ್ಥಳಗಳಾಗಿದ್ದವೊ, ಎಲ್ಲ ದಾನ ಧರ್ಮಗಳ ಪ್ರಚಂಡ ಪ್ರವಾಹಗಳು ಎಡೆಬಿಡದೆ ಪ್ರವಹಿಸುತ್ತಿದ್ದವೊ, ಮತ್ತು ಯಾವ ನಗರಗಳಲ್ಲಿ ಶಾಸ್ತ್ರಜ್ಞ, ಪಂಡಿತ, ಕವಿ, ಕೋವಿದರ ಸಂವಣಿಯುಂಟಾಗಿತ್ತೊ ಅಂಥ ಸ್ಥಳಗಳು ಕಾಲನ ದುರ್ದಮನೀಯವಾದ ಕೋಪಕ್ಕೆ ಬಲಿಯಾಗಿ ಹೇಳಹೆಸರಿಲ್ಲದೆ ಹೋದವು. ಮೇಲಿನ ಸಂಗತಿಗಳೆಲ್ಲವೂ ಸದ್ಯಕ್ಕೆ ಸ್ಮೃತಿ ನಷ್ಟವಾಗಿವೆ. ಹರ ಹರ! सर्वं यस्यवशादगात् स्मृतिपथं कालाय तस्मैनमः ಅಚಿಂತ್ಯವಾದ ದುಃಖೋದಧಿಯಲ್ಲಿಯೂ ಕೂಡ ಚಿಂತನೀಯವಾದ ಆನಂದದ ಮಳಲ ಕಣವೆಂದರೆ, ನಷ್ಟ ಭ್ರಷ್ಟ ಮಂದಿರಗಳ ಭಗ್ನಾವಶೇಷಗಳೂ ದಾನಪತ್ರಗಳೂ ಪ್ರಾಚೀನ

ವೈಭವದ ಸಾಕ್ಷಿಗಳಾಗಿ ಅಲ್ಲಲ್ಲಿಗೆ ಈಗಲೂ ಕಣ್ಣಿಗೆ ಬೀಳುವವು. ಸರ್ವಸಂಹಾರಕನಾ ಕಾಲನೊಂದಿಗೆ ಒಂದೇಸವನೆ ಹೋರಾಡಿ, ಪ್ರಾಚೀನ ಇತಿಹಾಸದ ಉಜ್ವಲತೆಯ ಸಂದೇಶವನ್ನು ಪ್ರಾಣದ ಪರಿವೆಯಿಲ್ಲದೆ ಕಾಯ್ದುಕೊಂಡ ಕಲ್ಲು ಹೆಂಟೆಗಳು ಈಗಲೂ ಅಲ್ಲಲ್ಲಿಗೆ ಬಿದ್ದುಕೊಂಡಿವೆ. ಅವುಗಳ ಉಪಕಾರವನ್ನು ಸ್ಮರಿಸಿ ಆದರಿಸದಿದ್ದರೆ, ಅವುಗಳ ವ್ಯಕಾವಸ್ಥೆಯಲ್ಲಿ ಪರಾಮರಿಸಿ ದಿವ್ಯಸಂದೇಶವನ್ನು ಕೇಳಿಕೊಳ್ಳದಿದ್ದರೆ, ಕೇಳಿಯೂ ತಿಳಿದುಕೊಳ್ಳದಿದ್ದರೆ, ತಿಳಿದೂ ಜಡಭರತರಾದರೆ ನಮ್ಮಂಥ ಕೃತಘ್ನರೂ ಹೇಡಿಗಳೂ ನಾವೇ ! ಅನ್ಯ ಉಪಮೆಯು ದೊರೆಯದು. ಇಂಥ ಪ್ರಾಚೀನ ಸಂಗತಿಗಳ ಸಂಶೋಧನ ಕಾರ್ಯವನ್ನು ಮಾಡುವ ಸಂಸ್ಥೆಗಳು ಈಗ ಅಲ್ಲಲ್ಲಿ ಸ್ಥಾಪಿಸಲ್ಪಟ್ಟದ್ದು ದೇಶದ ಏಳ್ಗೆಯ ದ್ಯೋತಕವಾಗಿದೆ. ಅವುಗಳಲ್ಲಿ ನಮ್ಮ ಕರ್ನಾಟಕ ಕುಲಪುರೋಹಿತರಾದ ರಾ. ಆಲೂರ ವೆಂಕಟರಾಯರ ನೇತೃತ್ವದ ಕೆಳಗೆ ನಿರ್ಮಿತವಾದ ಕರ್ನಾಟಕ ಇತಿಹಾಸ ಸಂಶೋಧಕ ಮಂಡಲವು ಒಂದಾಗಿದೆ. ಅದು ಇತಿಹಾಸದ ಎಷ್ಟೋ ಅಜ್ಞಾತವಾದ ಸಂಗತಿಗಳನ್ನು ಬೆಳಕಿಗೆ ತಂದು, ರಾಷ್ಟ್ರ ಸುಧಾರಣೆಯ ಕೆಲಸವನ್ನು ಮಾಡುತ್ತಲಿರುವದು ಅಭಿನಂದನೀಯವಾಗಿದೆ. ಅಸ್ತು.

ಇತ್ತಲಾಗಿ ಮದರಾಸು ಗವ್ಹರ್ನಮೆಂಟಿನವರು ಮಾರ್ಚ ೧೯೨೭ನೇ ಇಸವಿಗೆ ಮುಗಿಯುವಂಥ ಹನ್ನೆರಡು ತಿಂಗಳುಗಳ ಒಂದು ರಿಪೋರ್ಟನ್ನು ಪ್ರಸಿದ್ಧ ಪಡಿಸಿರುವರು. ಅದು ದಕ್ಷಿಣದೊಳಗಿನ ಶಿಲಾಲೇಖಗಳಿಗೆ ಸಂಬಂಧವುಳ್ಳದ್ದಾಗಿದೆ. ಅದನ್ನು ಪುರಾತತ್ವ ವಿಚಾರಣಾ ಖಾತೆಯ ಅಸಿಸ್ಟಂಟ ಸುಪರಿಂಟೆಂಡೆಂಟ ಮಹಾಶಯರು ಬರೆದಿದ್ದಾರೆ. ರಿಪೋರ್ಟಿನ ವರ್ಷದಲ್ಲಿ ದೊರೆತ ೧೧೫೩ ಹೊಸ ಶಿಲಾಲೇಖಗಳ ಸೂಚಿಯು ಅದರಲ್ಲುಂಟು. ಅವೆಲ್ಲವು ಬಹುತರ ತೆಲಗು, ತಮಿಳ, ಕನ್ನಡ ಮತ್ತು ಸಂಸ್ಕೃತ ಭಾಷೆಗಳೊಳಗಿನವು. ಕೆಲವು ಪೊರ್ತುಗೀಜ ಮತ್ತು ಪಾರಸೀ ಭಾಷೆಗಳಲ್ಲಿಯೂ ಅವೆ. ಅವುಗಳಲ್ಲೊಂದರ ಬಗ್ಗೆ ಮಾತ್ರ ಕೆಳಗೆ ಬರೆಯುವೆವು.

ದಕ್ಷಿಣದಲ್ಲಿ ಒಳ್ಳೆ ಘನತೆಗೇರಿದ ರಾಜ್ಯವೆಂದರೆ ವಿಜಯನಗರವು ಒಂದೇ. ಆ ರಾಜ್ಯವು ಬಹುಕಾಲದ ವರೆಗೆ ಹಿಂದುಗಳ ಆಧಿಪತ್ಯಕ್ಕೊಳಪಟ್ಟಿತ್ತು. ಆ ರಾಜವಂಶ ದೊಳಗಿನ ಎಷ್ಟೋ ಅರಸರು ಪ್ರಬಲತರವಾದ ಪ್ರತಾಪಿಗಳಾಗಿದ್ದರು. ಅವರೊಳಗಿನ ಕೆಲವರು ಮಧುರಾ, ತಂಜಾವರಗಳಲ್ಲಿಯೂ ತಮ್ಮ ರಾಜ್ಯಗಳನ್ನು ಸ್ಥಾಪಿಸಿದರು. ಆ ಅವರ ರಾಜ್ಯಗಳು ಬಹುಕಾಲ ಬಾಳಿದವು. ಹದಿನಾಲ್ಕನೆಯ ಶತಕದಲ್ಲಿ ವಿದ್ಯಾನಗರ ವನ್ನು ಪ್ರತಿಷ್ಠೆ ಮಾಡಿದ ವಿದ್ಯಾರಣ್ಯರು ಹರಿಹರ, ಬುಕ್ಕ ರಾಜರುಗಳಿಗೆ ಸ್ವಯಂ ಮಂತ್ರಿಗಳಾಗಿ ನಿಂತು, ರಾಜ್ಯಪಾಲನೆ ಮಾಡುತ್ತ ಕರ್ನಾಟಕದ ಉದ್ಧಾರ ಮಾಡಿದಂತೆ ಹದಿನಾರನೆಯ ಶತಮಾನದಲ್ಲಿ ವಿಜಯನಗರದ ಸಿಂಹಾಸನಕ್ಕೆ ರಾಮರಾಯನನ್ನು ಪ್ರತಿಷ್ಠೆ ಮಾಡಿದ ಗೋವಿಂದ ದೀಕ್ಷಿತರೆಂಬವರು ತಂಜಾವರದ ನಾಯಕನರೇಶರ ಬಳಿಗೆ ಮಂತ್ರಿ

ಗಳಾಗಿ ನಿಂತು ಕರ್ನಾಟಕದ ರಾಜ್ಯವನ್ನು ಘನತೆಗೇರಿಸಿದರು. ಇವರು ಚವ್ವ, ಅಚ್ಯುತ, ರಘುನಾಥರೆಂಬ ಮೂವರು ಅರಸರುಗಳ ಮಂತ್ರಿಗಳಾಗಿದ್ದರು. ಇವರು ಘನಪಂಡಿತರೂ ಶ್ರೇಷ್ಠ ಕವಿಗಳೂ ಆದ ಅಮಾತ್ಯರು.

ಗೋವಿಂದ ದೀಕ್ಷಿತರ ತಾಯಿತಂದೆಗಳ ಸಲುವಾಗಿಯೂ ಅವರ ಪೂರ್ವಜರ ಸಲುವಾಗಿಯೂ ಯಾವ ವೃತ್ತಾಂತವೂ ದೊರೆತಿಲ್ಲ. ಇವರು ಮೈಸೂರು ಸೀಮೆಯೊಳಗಿನ ಒಂದು ಹಳ್ಳಿಯಲ್ಲಿ ಜನಿಸಿದರು. ಹೊಯ್ಸಳ ಕರ್ನಾಟಕ ಪಂಗಡಕ್ಕೆ ಸೇರಿದ ಸ್ಮಾರ್ತ ಬ್ರಾಹ್ಮಣರು. ಉಪಮನ್ಯು ವಸಿಷ್ಠಗೋತ್ರೋದ್ಭವರಾಗಿ, ಆಶ್ವಲಾಯನ ಶಾಖಾಧ್ಯಾಯಿಗಳಾಗಿದ್ದರು. ಗಾಯಿತ್ರೀ ಮಂತ್ರವನ್ನು ಉಪಾಸಿಸಿ, ಸಾವಿತ್ರಿದೇವಿಯನ್ನು ಪ್ರಸನ್ನಗೊಳಿಸಿದ್ದರು. ಇವರು ಸಂಸ್ಕೃತ ಭಾಷೆ, ಸಂಸ್ಕೃತ ಶಾಸ್ತ್ರಗಳ ಅಧ್ಯಯನ ಮಾಡಿದ್ದರು. ಅಂದರೆ ವೇದ, ಶ್ರೌತ, ಸ್ಮಾರ್ತ ಪ್ರಯೋಗಗಳಲ್ಲಿ ನಿಷ್ಣಾತರು; ಜ್ಯೋತಿಷದಲ್ಲಿ ವಿಶೇಷ ಪಂಡಿತರು; ಸಾಮುದ್ರಿಕ, ಸಂಗೀತ ಶಾಸ್ತ್ರಗಳಲ್ಲಿ ಪ್ರವೀಣರು. ಇವರು ಮೊದಲು ವಿಧಿವಶದಿಂದ ಅರ್ಣ ಎಂಬ ಮಂಡಲೇಶನಲ್ಲಿ ಸೇವೆಗಾಗಿ ನಿಂತುಕೊಂಡರು. ಅನಂತರ ೧೫೩೫ರಲ್ಲಿ ಇವರ ತಾಯಿತಂದೆಗಳು ಇವರನ್ನು ವಿಜಯನಗರಕ್ಕೆ ಕರೆತಂದರು. ಬ್ರಾಹ್ಮಣಾಗ್ರಹಾರದಲ್ಲಿ ಇವರ ಮನೆಯಿತ್ತು. ಅಲ್ಲಿ ಇವರ ಖ್ಯಾತಿಯು ತಿಳಿಯಿತು. ಅಲ್ಲಿಂದ ಇವರು ಚವ್ವಪ್ಪನಾಯಕನೊಂದಿಗೆ ತಂಜಾವರವನ್ನು ಸೇರಿದರು. ಅಲ್ಲಿಯೂ ಘನತೆಗೇರುತ್ತ ಅಮಾತ್ಯ ಪದವಿಯನ್ನು ಪಡೆದರು. (विद्वान् सर्वत्र पूज्यते) ಇದೂ ಅಲ್ಲದೆ ಇವರ ಸಹೋದರಿಯನ್ನು ತಂಜಾವರ ರಾಜಮನೆತನದ ಕುಮಾರನಿಗೆ ಕೊಟ್ಟ ಸಂಗತಿಯೂ ಅವರ ಘನತೆಗೆ ಮತ್ತಿಷ್ಟು ಬಲವಾದ ಕಾರಣವಾಗಿದೆ. ಮುಂದೆ ಇವರು ಅಚ್ಯುತರಾಯನ ಕಾಲಕ್ಕೆ ಅಮಾತ್ಯರಾಗಿದ್ದರಲ್ಲದೆ ಆತನ ಮಗನಾದ ರಘುನಾಥರಾಯನ ಕಾಲದಲ್ಲಿಯೂ ಅಮಾತ್ಯರಾಗಿದ್ದರು.

ಇವರ ಮಗನಾದ ಯಜ್ಞನಾರಾಯಣದೀಕ್ಷಿತನಾದರೂ ದೊಡ್ಡ ವಿದ್ವಾಂಸನು. ಅವನು ತನ್ನ ಸಾಹಿತ್ಯರತ್ನಾಕರ ಗ್ರಂಥದಲ್ಲಿ ತನ್ನ ತಂದೆಯ ಮತ್ತು ಅವನ ಆಶ್ರಯದಾತೃಗಳ ಬಗ್ಗೆ ಎಷ್ಟೋ ಸಂಗತಿಗಳನ್ನು ಬರೆದಿರುವನು. ಇವನಲ್ಲದೆ ವೆಂಕಟೇಶಮಖಿನೆಂಬ ಇನ್ನೊಬ್ಬನು ದೀಕ್ಷಿತರ ಮಗನಿದ್ದನು. ಅವನೂ ಪಂಡಿತನಾಗಿದ್ದನು. ನೀಲಕಂಠವಿಜಯವನ್ನು ಬರೆದ ನೀಲಕಂಠದೀಕ್ಷಿತರು ತನ್ನ ಗುರುಗಳಾಗಿದ್ದರೆಂದು ಅವನು ಹೇಳಿರುವನು. ಸಾರಾಂಶ ದೀಕ್ಷಿತರಂತೆ ಅವರ ಮಕ್ಕಳಾದರೂ ವಿದ್ವನ್ಮಣಿಗಳಾಗಿದ್ದರು.

ಕುಂಭಕೋಣವೆಂಬದು ತಂಜಾವರ ಜಿಲ್ಲೆಯೊಳಗಿನ ಒಂದು ತಾಲೂಕು. ಹೆಸರು ಪಡೆದ ಸ್ಥಳ. ಅಲ್ಲಿ ಸಂಸ್ಕೃತದ ಪಠಣ ಪಾಠಣವು ಹೆಚ್ಚಾಗಿದೆ. ಅದಕ್ಕೆ ದಕ್ಷಿಣ ಭಾರತದ ಕಾಶಿಯೆಂತಲೂ ಹೆಸರುಂಟು. ಆ ತಾಲೂಕಿನಲ್ಲಿ ದೀಕ್ಷಿತರಿಗೆ ಸಮ್ಬಂಧಪಟ್ಟ ಎರಡು ಶಿಲಾಲೇಖಗಳುಂಟು. ಅದರಲ್ಲಿ ಒಂದು ವೀರಶೈವ ಮಠದೊಂದಿಗೆ ಒಂದು

ಮಂಟಪವನ್ನು ಸಾರಂಗಸ್ವಾಮಿಯ ಹೆಸರಿನಿಂದ ಕಟ್ಟಿಸಿದರೆಂಬ ಸಂಗತಿಯುಳ್ಳದ್ದಾಗಿದೆ. ಅದು ಒಂದು ಹಳ್ಳಿಯಲ್ಲಿದೆ. ಇನ್ನೊಂದು ಪಟ್ಟೀಶ್ವರಮ್ ಎಂಬಲ್ಲಿ ಒಂದು ಮಂದಿರದ ಎರಡನೆಯ ಉಪ್ಪರಿಗೆಯ ಮೇಲಿನ ಗೋಡೆಯಲ್ಲುಂಟು. ಅದು ೧೬೩೪ರಲ್ಲಿ ಬರೆಯಲ್ಪಟ್ಟಿದೆ. ಮತ್ತೊಂದು ಶಿಲಾಮಂದಿರದಲ್ಲಿ ದೀಕ್ಷಿತರ ಶಿಲಾಮೂರ್ತಿಯೊಂದು ಈಗಲೂ ವಿದ್ಯಮಾನವಾಗಿದೆ. ಆ ಮೂರ್ತಿಯ ಚಿತ್ರವು ಮೇಲೆ ಹೇಳಿದ ಪುರಾತತ್ವ ವಿಷಯಕವಾದ ರಿಪೋರ್ಟಿನಲ್ಲಿ ಪ್ರಕಾಶಿಸಲ್ಪಟ್ಟಿದೆ ದೀಕ್ಷಿತರು. ಪರಮ ಶೈವರು ಪಟ್ಟೀಶ್ವರಂ ದ ಶಿವಮಂದಿರಕ್ಕಾಗಿ ಬಹಳೇ ಸಹಾಯ ಮಾಡಿರುವರು.

ಗೋವಿಂದ ದೀಕ್ಷಿತರು ಬ್ರಾಹ್ಮಣರಿಗೆ ಆವಶ್ಯ ಕರ್ತವ್ಯಗಳಾದ ಯಜ್ಞಯಾಗಾದಿಗಳಲ್ಲಿ ಆಸಕ್ತರಾಗಿ, ಅಗ್ನಿಷ್ಟೋಮ, ವಾಜಪೇಯ, ಅತಿರಾತ್ರ ಮುಂತಾದ ಮಹಾಕ್ರತುಗಳನ್ನು ಹಲವುಸಾರೆ ಮಾಡಿ ಶುದ್ಧಾತ್ಮಕರಾಗಿದ್ದರು. ಇದೇ ಮಾತು ಇವರ ಮಗನಾದ ಯಜ್ಞನಾರಾಯಣ ದೀಕ್ಷಿತನು ಬರೆದ ರಘುನಾಥವಿಲಾಸ ನಾಟಕದ ಪ್ರತಿ ಅಂಕದ ಕಡೆಯಲ್ಲಿ इति श्री-पदवाक्य प्रमाण-पारावार-पारीण-श्रीमदद्वैतविद्याचार्य-सामिचित्य-सर्वतोमुख-अतिरात्र-सामिचित्याप्त-वाजपेययाजि-गोविंद-दीक्षितवर नंदनस्य श्रीयज्ञनारायणनाम कृतिषु रघुनाथ विलासे प्रथमोऽङ्कः ಎಂದು ಹೇಳಿರುವದರಿಂದ ಸಿದ್ಧವಾಗುವದು. ಮತ್ತು ಇವರು ವಿದ್ವಾಂಸರಾಗಿದ್ದಲ್ಲದೆ ಕವಿಗಳೂ ಮಹಾಕವಿಗಳೂ ಆಗಿದ್ದರು. ಇವರಿಂದ ರಚಿಸಲ್ಪಟ್ಟ 'ಹರಿವಂಶ ಸಾರ ಚರಿತಮ್' ಎಂಬ ನಾಟಕವು ಒಂದು ಮಹಾ ಕಾವ್ಯವೆಂದು ಗಣಿಸಲ್ಪಡುವದು. ಅದರಲ್ಲಿ ೨೩ ಸರ್ಗಗಳುಂಟು. ಕುವಲಯಾನಂದವೆಂಬ ಗ್ರಂಥವನ್ನು ಬರೆದ ಅಪ್ಪಯ್ಯ ದೀಕ್ಷಿತರು ಇದಕ್ಕೆ ಟೀಕೆಯನ್ನು ಬರೆದಿರುವರು. ದೀಕ್ಷಿತರು ಸಂಗೀತ ಶಾಸ್ತ್ರದಲ್ಲಿಯೂ ಬಲ್ಲಿದರಾಗಿದ್ದರು. ಸಂಗೀತ ಸುಧಾನಿಧಿ ಎಂಬ ಗ್ರಂಥವು ಅವರಿಂದಲೇ ರಚಿಸಲ್ಪಟ್ಟದ್ದಾಗಿದೆ. ಇವರ ಮತ್ತೊಬ್ಬ ಮಗನಾದ ವೆಂಕಟ ಮುಖಿಯು ತನ್ನ "ಚತುರ್ದಂಡಿ ಪ್ರಕಾಶಿಕೆ" ಎಂಬ ಸಂಗೀತ ಗ್ರಂಥದಲ್ಲಿ "तल्लक्षणं तु संगीत सुधानिध्यां प्रदृश्यते । चव्वयाच्युत-भूपाल-रघुनाथ-नृपांकिते । अस्मत्तातकृते ग्रंथ प्रोक्तान् श्लोकान् लिखाम्यहम् ।" ಎಂದು ಹೇಳಿ ತಂದೆಯ ಗ್ರಂಥವನ್ನು ವರ್ಣಿಸಿರುವನು.

ಇವರು ಕೇವಲ ವಿದ್ವಾಂಸರೂ ವೈದಿಕ ಕರ್ಮನಿರತರೂ ಆಗಿರದೆ ಒಳ್ಳೆ ರಾಜಕಾರ್ಯ ಕುಶಲರೂ ಆಗಿದ್ದರು. ಚನ್ನಾಗಿ ರಾಜಸೇವೆ ಮಾಡಿದ್ದಲ್ಲದೆ ಎಲ್ಲ ಬಗೆಯಿಂದ ಪ್ರಜರನ್ನು ಸಂತುಷ್ಟಗೊಳಿಸಿದರು. "नृपति जनपदानां दुर्लभः कार्यकर्ता" ಎಂಬಂತೆ ದೀಕ್ಷಿತರು ಮೂವರು ರಾಜರ ಕಾಲದಲ್ಲಿ ಅಮಾತ್ಯ ಪದವಿಯ ಅಸಾಮಾನ್ಯವಾದ ಕಾರ್ಯವನ್ನು ಅವಿರತವಾಗಿ ನಿರ್ವಹಿಸಿ, ಅಜರಾಮರ ಕೀರ್ತಿಯನ್ನೂ ಸಂಪಾದಿಸಿದರು. ಕುಂಭಕೋಣದಲ್ಲಿಯ ಮಹಾ ಮಖರ್ವಾ ಎಂಬ ವಿಶಾಲವಾದ ಸರೋವರವನ್ನು ಇವರು ಜೀರ್ಣೋದ್ಧಾರಗೊಳಿಸಿದರು. ಪ್ರಾಯಶಃ ಹೊಸದನ್ನೇ ಕಟ್ಟಿದರೆಂದು ಹೇಳಿದರೂ

ಅಷ್ಟಿಯಿಲ್ಲ. ಅಲ್ಲಿ ಪ್ರತಿ ಹನ್ನೆರಡು ವರ್ಷಕ್ಕೊಮ್ಮೆ ಅಸಂಖ್ಯ ಜನರು ಸ್ನಾನಾರ್ಥವಾಗಿ ಕೂಡುವರು. ಈ ಕೆರೆಯ ಸುತ್ತಲೂ ಚೌಕಸಾಕಾರವಾಗಿ ೧೬ ಮಂಟಪಗಳುಂಟು. ತಂಜಾವರದ ವಿದ್ಯಮಾನದೊರೆಗಳು ಅವುಗಳಲ್ಲಿ ಕುಳಿತು, ಷೋಡಶ ಮಹಾದಾನಗಳನ್ನು ಮಾಡುತ್ತಿದ್ದರು. ಅದರಂತೆ ಈ ಕೆರೆಯ ಹೊಂದಿಗೆ "ತುಲಾಪುರುಷದಾನಮಂಡಪ" ವೆಂಬ ಒಂದು ಕಟ್ಟಡವನ್ನು ಕಟ್ಟಿಸಿದರು. ಅದು ಈಗ ಸದ್ಯಕ್ಕೆ ಕಟ್ಟಲ್ಪಟ್ಟದೆಯೋ ಏನೋ ಎಂಬಂತೆ ತೋರುವದು. ಆದರೆ ಅದು ಯಾವ ಕೆಲಸದ ಬಗ್ಗೆ ಕಟ್ಟಲ್ಪಟ್ಟಿತೋ ಆ ಕೆಲಸವು ಮಾತ್ರ ನಾಮಶೇಷವಾಗಿದೆ. ತಂಜಾವರದ ನರಪತಿಯು ಅಲ್ಲಿ ಕುಳಿತು ಬೆಳ್ಳಿ, ಬಂಗಾರ, ರತ್ನಾದಿಗಳಿಂದ ತುಲಾಭಾರಮಾಡಿಸಿಕೊಂಡು, ಅವುಗಳನ್ನು ಬ್ರಾಹ್ಮಣರಿಗೂ ಬಡಬಗ್ಗರಿಗೂ ದಾನಮಾಡುತ್ತಿದ್ದನು ಅಂಥ ಚಿತ್ರಗಳು ಆ ಮಂಟಪದ ಗೋಡೆಯ ಮೇಲೆ ಇನ್ನೂ ಅವೆ. ಕುಂಭಕೋಣ, ವಿಜಯರಾಘವಪುರ, ಶ್ರೀರಂಗಪಟ್ಟಣಗಳಲ್ಲಿದ್ದ ರಾಮಮಂದಿರಗಳು ದೀಕ್ಷಿತರ ಕಾಲದಲ್ಲಿಯೇ ನಿರ್ಮಿತವಾದವುಗಳು.

ಗೋವಿಂದದೀಕ್ಷಿತರು ಮಾಡಿದ ಕಾರ್ಯಗಳು ಇನ್ನೂ ಹಲವುಂಟು. ಅದರಂತೆ ಅವರ ಸ್ಮಾರಕಗಳಾದರೂ ಕುಂಭಕೋಣ, ಪಟ್ಟೀಶ್ವರಂ ಎಂಬಲ್ಲಿ ಬಹಳವಾಗಿವೆ. ಅವರ ಸಾಗ್ರಚರಿತ್ರೆಯು "ಕಾದಂಬರಿ ಸಂಗ್ರಹ"ವೆಂಬ ಮಾಸಪತ್ರಿಕೆಯಲ್ಲಿ ಪ್ರಸಿದ್ಧವಾಗಿದೆ. ವಾಚಕರು ಅಗತ್ಯವಾಗಿ ನೋಡಿಕೊಳ್ಳಬೇಕೆಂದು ನಮ್ಮ ಆಗ್ರಹದ ಸೂಚನೆ. ಇಂಥ ಸಂಗತಿಗಳಿಂದ—ಪುರಾತನ ಕಾಲದ ದಿವ್ಯಸಂದೇಶಗಳಿಂದ **ಉಜ್ವಲವಾದ ಭೂತಕಾಲವುಳ್ಳ ರಾಷ್ಟ್ರದ ಭವಿಷ್ಯತ್ಕಾಲವಾದರೂ ಉಜ್ವಲವಾದದ್ದೇ ಆಗುವದು** " ಎಂಬ ಮಾತು ಪ್ರತಿಯೊಬ್ಬ ದೇಶಾಭಿಮಾನಿಯ ಮನದಲ್ಲಿ ಬಾರದೆ ಇರದು.

ಸನ್ಮಾರ್ಗಬೋಧೆ

ಮೊದಲನೆಯ ಪ್ರಕರಣ

ಜೀವಿತಕಾರ್ಯ

ಲೇ:—ಪಂಡಿತ ಹೂಲೀಕವಿ.

ಹಿಂದೂ ಧರ್ಮಶಾಸ್ತ್ರದ ಕಲ್ಪನೆಯಂತೆ ನೋಡಲು, ಎಂಬತ್ತುನಾಲ್ಕು ಲಕ್ಷ ಯೋನಿಗಳಲ್ಲಿ ಸಂಚರಿಸಿದ ನಂತರ ಜೀವನಿಗೆ ಮನುಷ್ಯಜನ್ಮವು ಪ್ರಾಪ್ತವಾಗುತ್ತದೆಂದು ಕಂಡುಬರುತ್ತದೆ. ಡಾರ್ವಿನ ಮೊದಲಾದ ಪಾಶ್ಚಿಮಾತ್ಯರ ಉತ್ಕ್ರಾಂತಿತತ್ವವಾದರೂ ಅದೇ ಸಂಗತಿಯನ್ನೇ ಪ್ರತಿಪಾದಿಸುತ್ತದೆ. ಜೀವನು ಕ್ರಮಕ್ರಮದಿಂದ ಉನ್ನತಿಯನ್ನು ಹೊಂದುತ್ತ ಪಡೆಯುತ್ತ ಈ ಮಾನವದೇಹವನ್ನು ಧಾರಣಮಾಡಿದನು; ಅರ್ಥಾತ್ ಜೀವನ ಉನ್ನತಿಯ ಪರಿಣತಾವಸ್ಥೆಯೇ ಮಾನವೀ ಜನ್ಮವೆಂಬದರಲ್ಲಿ ಸಂದೇಹವಿಲ್ಲ.

ಆದ್ದರಿಂದ ಆತ್ಮನಿಗೆ ಜೀವದಶೆಯು ಹೇಗೆ ಪ್ರಾಪ್ತವಾಯಿತೆಂಬ ವಾದಗ್ರಸ್ತ ವಿಷ
ವನ್ನು ಬಿಟ್ಟುಬಿಟ್ಟರೆ, ಸೃಷ್ಟಿಕರ್ತನಿಂದ ನಿರ್ಮಿತವಾದ ಅತ್ಯಂತ ಚಮತ್ಕಾರಪರಿಪ್ಲು
ವಾದ ಈ ಸೃಷ್ಟಿಯಲ್ಲಿ ಮನುಷ್ಯ ಪ್ರಾಣಿಯೇ ಸರ್ವಶ್ರೇಷ್ಠನೆಂಬದರಲ್ಲಿ ಆವ ಸಂ
ಯವೂ ಇಲ್ಲ.

ಮೇಲೆ ಹೇಳಿದಂತೆ ಮನುಷ್ಯನು ಯಾವತ್ತು ಪ್ರಾಣಿಕೋಟಿಯಲ್ಲಿ ಶ್ರೇಷ್ಠನಾ
ರುವನಲ್ಲದೆ, ಇತರ ಪ್ರಾಣಿಗಳನ್ನೂ ಮನುಷ್ಯನನ್ನೂ ಹೋಲಿಸಿ ನೋಡಿದರೆ ಅವನ
ಎಷ್ಟು ಚಮತ್ಕಾರಪೂರ್ಣನಾಗಿದ್ದಾನೆಂಬದು ಮನವರಿಕೆಯಾಗುವದು. ಪರಮೇಶ್ವರನ
ಬೇರೆ ಬೇರೆ ಪ್ರಾಣಿಗಳ ಉಪಜೀವಿಕೆಯ ಸ್ವರೂಪವನ್ನು ನಿಶ್ಚಿತವಾಗಿ ಗೊತ್ತುಪಡಿ
ದ್ದಾನೆ; ಮತ್ತು ಅವುಗಳ ಜೀವನಸಾಧನಗಳನ್ನೂ, ಅನುಕೂಲತೆಗಳನ್ನೂ ಸೃಷ್ಟಿಯ
ನಿರ್ಮಾಣ ಮಾಡಿದ್ದಾನೆ. ಆಕಳು, ಎಮ್ಮೆ ಮೊದಲಾದ ಪಶುಗಳ ಪ್ರಾಮುಖ್ಯ ಆಹಾ
ವಾದ ಹುಲ್ಲು ಸೃಷ್ಟಿಯಲ್ಲಿ ಸ್ವಾಭಾವಿಕವಾಗಿಯೇ ದೊರೆಯುತ್ತದೆ; ಹುಲಿ, ಸಿಂ
ಮೊದಲಾದ ಕ್ರೂರ ಶ್ವಾಪದಗಳು ವನ್ಯ ಪಶುಗಳ ಮಾಂಸ ಭಕ್ಷಣದಿಂದ ಜೀವಿಸಬೆ
ಕಾದ ಕಾರಣ ಆ ತರದ ಏರ್ಪಾಡು ನಿಸರ್ಗಸಿದ್ಧವಾಗಿಯೇ ಇದೆ. ಇವೆಲ್ಲವುಗಳ
ತಕ್ಕಂತೆಯೇ ನಖ ಪಂಜರದಂತ ಮೊದಲಾದ ಅವಯವಗಳನ್ನು ಆಯಾ ಪ್ರಾಣಿಗಳ
ದೇವರು ದಯಪಾಲಿಸಿದ್ದಾನೆ. ಇನ್ನು ಮನುಷ್ಯ ಪ್ರಾಣಿಯನ್ನು ನಿರೀಕ್ಷಿಸಿರಿ, ಮೇ
ಹೇಳಿದಂತೆ ಆವ ಅನುಕೂಲತೆಯು ಮನುಷ್ಯನಿಗಿರುವದು ? ಮನುಷ್ಯನ ಸ್ವಾಭಾವಿಕಾಹಾ
ರವು ಅನ್ನವಲ್ಲವೇ ? ಪಶುಗಳಿಗೆ ಭೋಜನಾರ್ಹವಾದ ಹುಲ್ಲು ಸ್ವಾಭಾವಿಕವಾಗಿ ಸಿಕು
ವಂತೆ ಮನುಷ್ಯನಿಗೆ ಅನ್ನವು ದೊರೆಯಬಹುದೇನು ? ವ್ಯಾಘ್ರಾದಿಗಳು ತಮ್ಮ ನಖ ಪಂ
ರಗಳಿಂದ ಮಾಂಸವನ್ನು ಭಕ್ಷಿಸುವಂತೆ, ಮನುಷ್ಯನಿಗೆ ಆವವಾದರೂ ಸ್ವಭಾವಿಕವಾ
ಅವಯವಗಳಿರುವವೇ ? ಇದೆಂಥ ಚಮತ್ಕಾರವು ! ಈ ಪ್ರಕಾರ ನಿರಾಧಾರಿಯಾ
ಹಾಗು ಸಾಧನ ಶೂನ್ಯನಾದ ಮನುಷ್ಯನು ತನ್ನ ಶ್ರೇಷ್ಠತೆಯನ್ನು ಎಂದೆಂದೂ ಸ್ಥಿರವಾ
ಕಾಯ್ದುಕೊಳ್ಳುವದೆಂತು ! ಇದರ ಗೂಢವಾದರೂ ಏನಿರಬಹುದು ? ವಿಚಾರಿ
ನೋಡಿದರೆ ಇದರಲ್ಲೇನೂ ವಿಶೇಷವಿಲ್ಲೆಂದು ಕಂಡುಬರುವದು. ಪರಮೇಶ್ವರನು ಬುದ್ಧಿ
ಯೆಂಬ ಒಂದು ಅಮೌಲ್ಯವಾದ ವಸ್ತುವಿಶೇಷವನ್ನು ಮನುಷ್ಯನಿಗೆ ದಯಪಾಲಿಸಿದ್ದಾ
ಅದರ ಬಲದಿಂದಲೇ ಆತನು ತನ್ನ ಆಹಾರವನ್ನೂ, ಸಾಧನಗಳನ್ನೂ, ಇತರ ಅನುಕೂ
ಗಳನ್ನೂ ಉಂಟು ಮಾಡಿಕೊಳ್ಳುವನು. ಮನುಷ್ಯನು ಇತರ ಪ್ರಾಣಿಗಳಂತೆ ಬಾಹ್ಯ
ಹಾಗು ಸ್ವಾಭಾವಿಕವಾದ ಸಾಧನವಿರಹಿತನಾಗಿ ಕಂಡಾಗಲೂ ತನ್ನ ಶ್ರೇಷ್ಠತೆಯನ್ನು ಸ್ಥಿ
ವಾಗಿ ಕಾಯ್ದುಕೊಳ್ಳುವದರ ರಹಸ್ಯವು ಅವನಲ್ಲಿರುವ ಬುದ್ಧಿಶಕ್ತಿಯೇ ಆಗಿರುವದು.

ಶ್ರೀಮಂತನಾದ ಒಬ್ಬ ಮನುಷ್ಯನು ತನ್ನ ಮಗನ ಕೈಯಲ್ಲಿ ಕೆಲವು ದ್ರವ್ಯವನ್ನ
ಕೊಟ್ಟು, ಅವನನ್ನು ವ್ಯಾಪಾರ ಮಾಡಲಿಕ್ಕೆ ಹಚ್ಚಿ, ತಾನು ಕೇವಲ ಆತನ ಕೃತಿಯನ್ನ

ನಿರೀಕ್ಷಿಸುತ್ತ ಕೂತುಕೊಳ್ಳುವಂತೆ ಪರಮೇಶ್ವರನಾದರೂ ಬುದ್ಧಿಯೆಂಬ ದ್ರವ್ಯವನ್ನು ತನ್ನ ಮಗನಾದ ಮನುಷ್ಯ ಪ್ರಾಣಿಗೆ ಕೊಟ್ಟು ಆತನ ಕೃತಿಯನ್ನು ಅವಲೋಕಿಸುತ್ತಾ ಕುಳಿತುಕೊಳ್ಳುವನು; ಆ ಶ್ರೀಮಂತನ ಮಗನು ತನ್ನ ಚಾತುರ್ಯದಿಂದ ಹೆಚ್ಚು ಧನವನ್ನು ಸಂಪಾದಿಸಿ ಕೀರ್ತಿಯನ್ನು ಪಡೆಯಬಹುದು; ಇಲ್ಲವೆ ಅಜ್ಞಾನದ ಮೂಲಕ ಇದ್ದ ಹಣವನ್ನು ಕಳೆದುಕೊಂಡು ದರಿದ್ರನಾಗಬಹುದು ಅದರಂತೆ ನಾವಾದರೂ ನಮ್ಮ ತಂದೆಯಿಂದ ಕೊಡಲ್ಪಟ್ಟ ಬುದ್ಧಿಯ ಸದ್ವ್ಯಯ ಹಾಗು ಅಪವ್ಯಯದಿಂದ ಸದ್ಗತಿಯನ್ನಾಗಲಿ ಅಧೋಗತಿಯನ್ನಾಗಲಿ ಪಡೆಯಬಹುದು.

ಬುದ್ಧಿಯನ್ನು ಸರಿಯಾದ ಹಾಗು ಯೋಗ್ಯವಾದ ಮಾರ್ಗದಿಂದ ಉಪಯೋಗಿಸಿ ತದನುರೂಪವಾದ ಫಲವನ್ನು ಹೊಂದುವದು ಸಂಪೂರ್ಣವಾಗಿ ನಮ್ಮ ಕೈಯಲ್ಲಿಯೇ ಇರುತ್ತದೆ. ಬಾಲ್ಯದಲ್ಲಿ ಮಾತ್ರ ಅನ್ಯ ಸಂಸ್ಕರಣಗಳು ಬೇಕಾಗುತ್ತವೆಂಬದು ನಿಜ; ಆದರೂ 'ನಮ್ಮ ಸುಖದುಃಖಗಳು ನಮ್ಮ ಕೈಯಲ್ಲಿಯೇ ಇರುವವು' ಎಂಬ ತತ್ವದಂತೆ ನಮ್ಮ ಬುದ್ಧಿಯ ಸದುಪಯೋಗ, ದುರುಪಯೋಗಗಳು ನಮ್ಮನ್ನೇ ಅವಲಂಬಿಸಿರುವದರಲ್ಲಿ ಸಂದೇಹವಿಲ್ಲ. ಇನ್ನು ಬುದ್ಧಿಯ ಸದುಪಯೋಗದಿಂದ ಸತ್ಕಾರ್ಯಗಳನ್ನು ಮಾಡಿ, ಸದಾಚರಣದಿಂದ ನಡೆದು ಸದ್ಗತಿಯನ್ನು ಹೊಂದುವವನೂ ಮನುಷ್ಯನೇ; ಹಾಗು ಅದರ ದುರುಪಯೋಗದಿಂದ ದುಷ್ಕಾರ್ಯಗಳನ್ನು ಮಾಡಿ, ದುರ್ಮಾರ್ಗದಿಂದ ನಡೆದು ಅಧೋಗತಿಯನ್ನು ಹೊಂದುವವನೂ ಮನುಷ್ಯನೇ. ಇವರಲ್ಲಿ ಯಾವನ ಜೀವಿತವು ಸ್ವಂತದ ದೃಷ್ಟಿಯಿಂದಲೂ ಪರರ ದೃಷ್ಟಿಯಿಂದಲೂ, ಐಹಿಕ ದೃಷ್ಟಿಯಿಂದಲೂ ಪಾರಲೌಕಿಕ ದೃಷ್ಟಿಯಿಂದಲೂ ಯೋಗ್ಯವೆಂದು ತೋರುವದು ? ಹೀಗೆ ಮಾಡದೆ "**जन्मा आलाहेला पाणी वाहतां मेला**" ಎಂಬ ಗಾದೆಯಂತೆ ನಿರರ್ಥಕವಾಗಿ ಜೀವಿಸಿ ಮಾನವೀ ಜನ್ಮದ ಮಹತಿಯನ್ನು ಮಣ್ಣುಗೂಡಿಸಬೇಕೆಂಬದು ಸೃಷ್ಟಿಕರ್ತನ ಉದ್ದೇಶವಾಗಿರವದಿಲ್ಲ. ಅನೇಕ ಜನ್ಮಗಳನ್ನು ತಿರುಗಿ ತಿರುಗಿ ಈ ಜನ್ಮಕ್ಕೆ ಬಂದಿರುವದರಿಂದ ಇದರಿಂದೊದಗತಕ್ಕ ಲಾಭವನ್ನು ಮಾಡಿಕೊಂಡು ಜನ್ಮವನ್ನು ಸಾರ್ಥಕ್ಯಗೊಳಿಸುವದೇ ಪ್ರತಿಯೊಬ್ಬ ಮನುಷ್ಯನ ಕರ್ತವ್ಯವು.

ಮನುಷ್ಯನ ಆಯುಷ್ಯವು ಅವನು ಕೇವಲ ಈ ಜಗತ್ತಿನಲ್ಲಿ ವಾಸಿಸಿದ ದಿವಸಗಳ ಸಂಖ್ಯೆಯನ್ನು ಅವಲಂಬಿಸಿರುವದಿಲ್ಲ. ಯಾವನೊಬ್ಬ ಮನುಷ್ಯನು ಇಂತಿಷ್ಟು ದಿವಸಗಳವರೆಗೆ ಬದುಕಿದ್ದನೆಂಬದಕ್ಕೇನೂ ಮಹತ್ವವಿಲ್ಲ; ಆದರೆ ಅವನು ತನ್ನ ಆಯುಷ್ಯದ ಉಪಯೋಗವನ್ನು ಆವ ಪ್ರಕಾರದಿಂದ ಮಾಡಿಕೊಂಡನೆಂಬದು ಮಹತ್ವದ ಸಂಗತಿಯಾಗಿದೆ. ಈ ಸಂಬಂಧವಾಗಿ ಸ್ಮಾಯಿಲ್ಸ ಎಂಬ ಆಂಗ್ಲ ಗ್ರಂಥಕಾರನು ಅನ್ನುವದೇನಂದರೆ:—

"Length of years is no proper test of length of time. A man's life is to be measured by what he does in it and what he feels,

in it. The more useful the work a man does and the more he thinks and feels, the more he really lives. The idle useless man, no matter to what extent his life may be prolonged merely vegetates. " ದೀರ್ಘಾಯುಷ್ಯದ ನಿಜವಾದ ಇಂಗಿತವು ಜೀವಿಸಿದ ವರ್ಷಗಳ ಸಂಖ್ಯೆಯಲ್ಲ; ಯಾವನೊಬ್ಬನ ಆಯುಷ್ಯದ ಎಣಿಕೆಯನ್ನು ಮಾಡುವದಾದರೆ ಅವನು ಏನು ಮಾಡುತ್ತಾನೆ? ಹಾಗು ಯಾವತರದ ವಿಚಾರಮಾಡುತ್ತಾನೆ? ಎಂಬದನ್ನು ಅವಲೋಕಿಸಬೇಕು. ಯಾವನು ತನಗೂ ಸಮಾಜಕ್ಕೂ ರಾಷ್ಟ್ರಕ್ಕೂ ಹಿತಕರವಾದ ಕೆಲಸಗಳನ್ನು ಹೆಚ್ಚು ಹೆಚ್ಚಾಗಿ ಮಾಡುತ್ತಾನೋ ಯಾವನು ಹೆಚ್ಚುಹೆಚ್ಚಾಗಿ ವಿಚಾರ ಮಾಡುತ್ತಾನೋ ಅವನೇ ನಿಜವಾಗಿ ಹೆಚ್ಚು ಕಾಲ ಜೀವಿಸಿದವನೆಂದು ತಿಳಿಯತಕ್ಕದ್ದು. ಅಲ್ಲದೆ, ನಿರುಪಯೋಗಿಯಾದ ಮನುಷ್ಯನು ಆಲಸ್ಯದಿಂದಲೂ ನಿರುದ್ಯೋಗದಿಂದಲೂ ಎಷ್ಟೋ ವರ್ಷಗಳ ವರೆಗೆ ಬದುಕಿದ್ದರೂ, ಅವನು ಶ್ವಾನಶೂಕರಗಳಂತೆ ಕೇವಲ ಉಪಜೀವಿಕೆಯನ್ನು ಮಾತ್ರ ಮಾಡಿಕೊಂಡಿರುವನೆಂದೇ ಹೇಳಬೇಕಾಗುವದು. ಸ್ಮಾಯಿಲ್ಸ ಸಾಹೇಬರ ಈ ಅಭಿಪ್ರಾಯವು ಸರಿಯಾದದ್ದಲ್ಲವೆಂದು ಯಾವ ವಿಚಾರವಂತನು ನುಡಿಯಬಹುದು ?

ಮೇಲೆ ಹೇಳಿದಂತೆ ಆಯುಷ್ಯವನ್ನು ಸರಿಯಾಗಿ ಉಪಯೋಗಮಾಡಿಕೊಳ್ಳಬೇಕಾದರೆ, ನಾವು ಯಾವಾಗಲೂ ಸದಾಚಾರನಿರತರಾಗಬೇಕು. ಸದಾಚಾರವೆಂದರೇನು? ಅದರಲ್ಲಿ ಯಾವ ಯಾವ ಸಂಗತಿಗಳ ಸಮಾವೇಶವಾಗುತ್ತದೆಯೆಂಬದನ್ನು ವಿಸ್ತರಿಸಿ ಹೇಳುವ ಅವಶ್ಯವಿಲ್ಲ. ಆದರೆ ಸದಾಚರಣವು ಕೇವಲ ಕೃತಿಗಳಲ್ಲಿಯೇ ಇರುವದೆಂದು ಮಾತ್ರ ತಿಳಿಯಕೂಡದು. ಮನಸ್ಸು ಶುದ್ಧವಿದ್ದಹೊರತು ಸತ್ಕೃತಿಗಳು ಎಂದೂ ಸಂಘಟಿಸಲಾರವು. ಯಾವನಲ್ಲಿ ಕುವಿಚಾರಗಳು ನೆಲೆಗೊಂಡಿರುವವೋ ಅವನು ಸದಾಚಾರಿಯಾಗಲಿಕ್ಕೆ ಯೋಗ್ಯನೇ ಅಲ್ಲ. ಸ್ವೋನ್ನತಿಗೂ, ಪರಹಿತಸಾಧನಕ್ಕೂ ಸದಾಚರಣೆಗಳಂತೆಯೇ ಸದ್ವಿಚಾರವೂ ಸಾಧನೀಭೂತವಾಗುತ್ತದೆಂಬ ಸಂಗತಿಯು ಸ್ಪಷ್ಟವೇ ಇದೆ. ನಮ್ಮ ವಿಚಾರ ಹಾಗು ಕೃತಿಗಳ ಪರಿಣಾಮವು ನಮ್ಮ ಸಹವಾಸದಲ್ಲಿರುವ ಅನ್ಯ ಜನಗಳ ಮೇಲೆ ಉಂಟಾಗುವಕಾರಣ, ನಾವು ಯಾವಾಗಲೂ ಸದ್ವಿಚಾರ ಮನಸ್ಕರಾಗಿ ಸತ್ಕೃತಿಗಳನ್ನೇ ಗೈಯುತ್ತಿರಬೇಕು. ಕೆಟ್ಟ ಜನಗಳ ಸಹವಾಸ ಮಾಡುವದರಿಂದ ಎಷ್ಟೋ ಕೆಟ್ಟ ಆಚರಣೆಗಳೂ ಚಟಗಳೂ ನಮಗೆ ತಿಳಿಯದೆಯೇ ನಮ್ಮನ್ನು ಅಂಟಿಕೊಳ್ಳುತ್ತವೆ. ಅದರಂತೆ ಸಾಧು ಜನರ ಸಮಾಗಮದಲ್ಲಿದ್ದರೆ ಕಾಲಾಂತರದಿಂದ ನಮ್ಮಲ್ಲಿಯಾದರೂ ಉದಾತ್ತ ವಿಚಾರಗಳು ನೆಲೆಗೊಳ್ಳುವವು. ಇದೇ ಪ್ರಕಾರ ನಮ್ಮ ವಿಚಾರಗಳ ಪರಿಣಾಮವು ಅನ್ಯರ ಮೇಲೆ ಉಂಟಾಗುತ್ತದೆ. ಆದದರಿಂದ ನಾವು ಒಳ್ಳೇ ವಿಚಾರವಂತರಾಗಿ ಸತ್ಕೃತಿಗಳನ್ನು ಮಾಡುತ್ತ ಈ ಲೋಕದಲ್ಲಿ ಜೀವದಿಂದಿರುವ ವರೆಗೆ ಕೈಲಾದಷ್ಟು ಪರರಿಗೆ ಹಿತವನ್ನು ಮಾಡುತ್ತಿದ್ದರೆ, ಈ ಲೋಕ

ದಲ್ಲಿ ಸುಖವನ್ನು ಹೊಂದುವೆವಲ್ಲದೆ ಪರಲೋಕವಲ್ಲಿಯಾದರೂ ನಿಶ್ಚಯವಾಗಿ ಸದ್ಗತಿಯನ್ನೇ ಹೊಂದುವೆವು. ಒಟ್ಟಿನಮೇಲೆ ಹೇಳತಕ್ಕದ್ದೇನಂದರೆ— "भलारे भला बोलती ते करावे । बहुता जनांचे मुखी यश घ्यावे !" ಎಂಬಂತೆ ನಾವು ನಮ್ಮ ವರ್ತನಕ್ರಮವನ್ನಿಡಬೇಕು. ಅಂದರೆ ಮಾತ್ರ "मरावे परी कीर्ति रूपे उरावे" ಎಂಬ ರಾಮದಾಸಾಜ್ಞೆಯನ್ನು ಪಾಲಿಸಿದಂತಾಗುವದು. ಈ ಪ್ರಕಾರ ನಡೆದುಕೊಳ್ಳುವದರಿಂದ ನಾವು ಸ್ವತಃ ಸೌಖ್ಯವನ್ನು ಹೊಂದುವೆವಲ್ಲದೆ ಇತರರಿಗೂ ಸೌಖ್ಯವನ್ನುಂಟು ಮಾಡುವೆವು.

ನಾವು ಯಾವಾಗಲೂ 'ಸುಖ' 'ಸುಖ' ಎಂದು ಅನ್ನುತ್ತೇವಷ್ಟೇ; ಸುಖವೆಂದರೇನು ? ಇಷ್ಟವಸ್ತುಪ್ರಾಪ್ತಿಯೇ ಸುಖವಲ್ಲವೇ ? ಹಾಗಾದರೆ ಆ ಇಷ್ಟವಸ್ತು ಯಾವುದು ? ಬೇರೆ ಬೇರೆ ಜನರ ಇಚ್ಛಿತವಸ್ತುವು ಬೇರೆ ಬೇರೆಯಾಗಿರುತ್ತದೆ. ಮತ್ತು ಆಯಾ ವಸ್ತುಗಳ ಲಾಭದಿಂದ ಆಯಾ ಜನರಿಗೆ ಸುಖವಾಗುತ್ತದೆ. ಇದರ ಮೇಲಿಂದ ನಮ್ಮ ಸುಖವು ನಮ್ಮ ಇಷ್ಟವಸ್ತುವನ್ನೇ ಅವಲಂಬಿಸಿರುತ್ತದೆಯೆಂಬದು ಸ್ಪಷ್ಟವದೆ. ಆ ನಮ್ಮ ವಸ್ತುವು ಚಂಚಲವಾದದ್ದಾದರೆ, ಅದರಿಂದ ಲಭಿಸಬಹುದಾದ ಸುಖವೂ ಕ್ಷಣಭಂಗುರವೆಂಬದರಲ್ಲಿ ಸಂದೇಹವಿಲ್ಲ; ಅದರಂತೆ ಇಷ್ಟವಸ್ತುವು ಸ್ಥಿರವಾದದ್ದಾದರೆ ಅದರಿಂದೊದಗುವ ಸುಖವಾದರೂ ಶಾಶ್ವತವಾದದ್ದೆಂದು ಒಡೆದು ಹೇಳಬೇಕಾಗಿಲ್ಲ. ಆದ್ದರಿಂದ ನಾವು ಸಂಪೂರ್ಣ ವಿಚಾರಮಾಡಿ ನಮ್ಮ ಇಷ್ಟವಸ್ತುವನ್ನು ನಿರ್ಣಯಿಸಿಕೊಳ್ಳತಕ್ಕದ್ದು.

ಇನ್ನು ಸುಖವೆಂಬದೊಂದು ವಸ್ತು ವಿಶೇಷವಲ್ಲ. ಅದೊಂದು ಮಾನಸಿಕ ಅವಸ್ಥೆ. ಅದು ಅಪರಿಮಿತಸಿರಿಯಿಂದ ಅರಮನೆಯಲ್ಲಿ ಮೆರೆಯುವ ಅರಸನಿಗೆ ಲಭಿಸುವಂತೆಯೇ, ಹಗಲೆಲ್ಲ ದುಡಿದು ತನ್ನ ಗುಡಿಸಲಕ್ಕೆ ಬಂದು ಒಣ ರೊಟ್ಟಿಕಾರವನ್ನು ತಿಂದು ಹರಕ ದೋತರಮೇಲೆಯೇ ಮಲಗುವ ಬಡ ಕೂಲಿಕಾರನಿಗೂ ಪ್ರಾಪ್ತವಾಗುತ್ತದೆ. ಕ್ಷುದ್ರವಾದ ಮನಸ್ಸಿದ್ದರೆ ಅಸಂಖ್ಯ ಭೋಗ್ಯವಸ್ತುಗಳುಳ್ಳ ರಾಜನಿಗಾದರೂ ಸುಖವು ಲಭಿಸಲಾರದು. ಅದೇ ಸುಶಿಕ್ಷಣದಿಂದ ಸುಸಂಸ್ಕೃತವಾದ ಮನಃಸ್ಥಿತಿಯುಳ್ಳ ಒಬ್ಬ ಅಷ್ಟದರಿದ್ರನಾದ ಭಿಕ್ಷುಕನೂ ಅದನ್ನು ಹೊಂದಬಹುದು. ಭೋಗ್ಯವಸ್ತುಗಳ ಉಪಭೋಗದಿಂದುಂಟಾಗುವ ಸುಖವು ಚಂಚಲವಾದದ್ದಿರುತ್ತದೆ. ಆದರೆ ಮಾನಸಿಕ ಸುಖವು ಮಾತ್ರ ನಿರಂತರವಾದದ್ದು. ಸಮರಾಂಗಣದಲ್ಲಿ ಬಿದ್ದು ಅನೇಕ ಗಾಯಗಳಿಂದ ವಿಹ್ವಲನಾಗಿ ನೀರಡಿಸಿ ನರಳುತ್ತ ಬಿದ್ದುಕೊಂಡಿದ್ದ ಸಿಡನೆಸ್ಮಿಥನು, ನೀರು ದೊರೆತಕೂಡಲೆ ತಾನು ಕುಡಿಯುವ ಬದಲು ತನ್ನಂತೆಯೇ ಮರಣೋನ್ಮುಖನಾಗಿ ಪಾರ್ಶ್ವದಲ್ಲಿ ಬಿದ್ದುಕೊಂಡಿದ್ದ ಒಬ್ಬ ಸಿಪಾಯಿಗೆ ಕೊಡುವದರಲ್ಲಿಯೇ ಹೆಚ್ಚು ಆನಂದಪಟ್ಟನು. ಇದರ ಕಾರಣವೇನು ? ಶಾರೀರಿಕ ಸುಖಕ್ಕಿಂತಲೂ ಮಾನಸಿಕ ಸುಖವೇ ಮೇಲಾದದ್ದು. ನೀರುಕುಡಿದು ತನ್ನ ತೃಷೆಯನ್ನು ಶಮನ ಮಾಡಿಕೊಂಡು, ತನ್ಮೂಲಕ

ವಾಗಿ ಉಂಟಾಗುವ ಶಾರೀರಿಕ-ಬಾಧಾ-ನಿವಾರಣೆಯಿಂದಾಗುವ ಆನಂದಕ್ಕಿಂತ ನೀರುನೀರಿಂದು ಬಾಯಿಬಿಡುತ್ತಿರುವ ಆ ಸಿಪಾಯಿಗೆ ನೀರನ್ನು ಕೊಟ್ಟು, ಅವನ ಪ್ರಾಣವನ್ನುಳಿಸಿದ್ದರಿಂದ ಇಂತಹ ಸಮಯದಲ್ಲಿಯೂ ಪರೋಪಕಾರವನ್ನು ಮಾಡಿ ಕೃತಾರ್ಥನೆಂಬ ಮನೋಭಾವನೆಯಿಂದುಂಟಾದ ಆನಂದವೇ ಹೆಚ್ಚು ಮಿಗಿಲಾದದ್ದೆಂದು ಅವನು ತಿಳಿದನು.

ಈ ಪ್ರಕಾರದ ಸತ್ಸುಖವನ್ನು ಅನುಭವಿಸುವದಕ್ಕಾಗಿ ನಾವು ನಮ್ಮ ಇಷ್ಟವಸ್ತುವನ್ನು ಒಳ್ಳೇ ಜಾಗರೂಕತೆಯಿಂದ ಗೊತ್ತುಪಡಿಸಬೇಕು. ಅದಕ್ಕಾಗಿ ನಮ್ಮ ಬುದ್ಧಿಯು ವಿಕಾಸವನ್ನೈದಬೇಕು; ಮನಸ್ಸು ಉನ್ನತಿಯನ್ನು ಪಡೆಯಬೇಕು. ವಿಕಸಿತವಾದ ಬುದ್ಧಿಯಿಂದಲೇ ಉಚ್ಚತರಗತಿಯ ಇಷ್ಟವಸ್ತುವನ್ನು ಗೊತ್ತುಮಾಡಿಕೊಳ್ಳುವದು ಸಾಧ್ಯವು. ಅಂತಹ ಬುದ್ಧಿಯ ಬಲದಿಂದ ಇಷ್ಟವಸ್ತುವನ್ನು ನಿರ್ಣಯಿಸಿದನಂತರ ಎಷ್ಟೋ ಪ್ರಯತ್ನಪಟ್ಟರೂ ಕಾರ್ಯವು ಸಿದ್ಧಿಸದಿದ್ದರೆ ಅದಕ್ಕಾಗಿ ವ್ಯಸನಪಡದಿರುವದಕ್ಕೂ ಕಾರ್ಯವು ಸಾಧ್ಯವಾದರೂ ಮದೋನ್ಮತ್ತರಾಗದೆ ಇರುವದಕ್ಕೂ ಉನ್ನತವಾದ ಮನಸ್ಸಿನ ಅವಶ್ಯಕತೆಯುಂಟು. "ಸುಖದುಃಖೇಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ" ಸುಖದುಃಖಗಳನ್ನೂ, ಲಾಭನಷ್ಟಗಳನ್ನೂ, ಜಯಾಪಜಯಗಳನ್ನೂ ಸಮವೆಂದು ಭಾವಿಸಿ, "ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ"ಎಂಬಂತೆ ಫಲೇಚ್ಛೆಯಿಲ್ಲದೆ ಕಾರ್ಯನಿರತರಾಗಬೇಕಾದರೆ ಎಷ್ಟೊಂದು ಮಾನಸಿಕ ಸಿದ್ಧತೆಯು ಬೇಕಾಗುವದು! ಆದ್ದರಿಂದ ವಿಸ್ತೃತ ಬುದ್ಧಿಯವರೂ, ಉನ್ನತ ಮನಸ್ಕರೂ ಆದವರೇ ಇದ್ದ ಸ್ಥಿತಿಯಲ್ಲಿ ಸಮಾಧಾನ ಹೊಂದಿ ಸುಖದಿಂದ ಜೀವಿಸುವರಲ್ಲದೆ, ಚಂಚಲಚಿತ್ತರಾಗಿ ಹೆಣ್ಣು ಹೊನ್ನುಗಳ ಅತ್ಯಾಶೆಯಿಂದ ಆಚೆ ಈಚೆ ಓಡಾಡುವವರಿಗೆ ಈ ತರದ ಶಾಂತಿಸುಖವು ಎಂದೂ ಲಭಿಸದು.

ಇನ್ನು ಈ ತರದ ಸಮಾಧಾನವೃತ್ತಿಯಿಂದ ಮನಸ್ಸಿನ ಸ್ವಸ್ಥತೆಯು ನೆಲೆಯೂರುತ್ತದೆಂಬನು ನಿಜ. ಆದರೆ ಈ ಪ್ರಕಾರ ಎಲ್ಲರೂ ಅಲ್ಪ ಸಂತೋಷಿಗಳಾದರೆ ಜಗತ್ತು ಸುಧಾರಿಸುವದು ಹೇಗೆ? ಪ್ರತಿಯೊಬ್ಬನು ಇದ್ದ ಸ್ಥಿತಿಯಲ್ಲಿಯೇ ಸಮಾಧಾನಬಟ್ಟರೆ ಹೆಚ್ಚಿನ ಸ್ಥಿತಿಯನ್ನು ಹೊಂದುವ ಬಗೆಯಾವದು? ಮಹತ್ವಾಕಾಂಕ್ಷೆಯು ಹೊರತು ಪ್ರಗತಿಯುಂಟಾಗಬಹುದೋ? ಮನುಷ್ಯನು ಈ ಹೊತ್ತಿಗಿಂತ ನಾಳೆ ಪ್ರತಿಯೊಂದು ಉತ್ತಮ ತರದ ಸುಧಾರಣೆಯಲ್ಲಿ ಮುಂದಡಿಯನ್ನಿಕ್ಕುವದು ಅವಶ್ಯವದೆ. ಹಾಗಿಲ್ಲದಿದ್ದರೆ ಜಗತ್ತಿನಲ್ಲಿ ಔದಾಸೀನ್ಯವೇ ತುಂಬಿ ಹೋಗುತ್ತಿತ್ತು. ಹಾಗಾದರೆ ಈ ತರದ ಪ್ರಗತಿಗೆ ಮೇಲಿನ ಸಮಾಧಾನವೃತ್ತಿಯಿಂದ ಬಾಧಕವಾಗುವದಲ್ಲವೇ? ಒಂದು ವೇಳೆ ಆ ಸಮಾಧಾನವೃತ್ತಿಯನ್ನು ಪರಿತ್ಯಜಿಸಿದರೆ ಮೇಲೆ ಹೇಳಿದಂತೆ ನಮಗೆ ಚಿರಸುಖವು ಪ್ರಾಪ್ತವಾಗುವ ಸಂಭವವೇ ಇಲ್ಲವಲ್ಲಾ! ಅಂದ ಮೇಲೆ ಈ ಎರಡೂ ಗುಣಗಳು ಹೇಗೆ ಮೇಳ ಹೊಂದಬೇಕು! ಇದು ಶಕ್ಯವಾದರೂ ಇರುವದೋ? ಎಂಬ ಆಕ್ಷೇಪಗಳು ಸಹಜವಾಗಿ ಉದ್ಭವಿಸುವವು.

ಸಕೃದ್ದರ್ಶನಕ್ಕೆ ಇವೆರಡೂ ಮನೋವೃತ್ತಿಗಳ ಸಾಹಚರ್ಯವಿರುವದು ಕಠಿಣವೆಂದು ತೋರ ಬಹುದು. ಆದರೆ ಅದು ಒಂದು ವೇಳೆ ಕಠಿಣವಿದ್ದರೂ ಅಸಂಭವನೀಯ

ವಾದದ್ದು ಮಾತ್ರ ಅಲ್ಲ. ಮಹತ್ವಾಕಾಂಕ್ಷೆಯು ಪ್ರಕೃತಸ್ಥಿತಿಯನ್ನು ಪಡೆಯುವದಕ್ಕೆ ಆಧಾರಭೂತವಾದದ್ದೂ ಆವಶ್ಯಕವಾದದ್ದೂ ಎಂಬದರಲ್ಲಿ ಸಂದೇಹವಿಲ್ಲ. ಆದರೆ ಇದರಿಂದ ಮನಸ್ಸಿನ ಸಮಾಧಾನವೃತ್ತಿಯು ನಿಲ್ಲಬಾರದೆಂದು ಯಾರು ಹೇಳುವರು ? ನಾವು ಸರ್ವಕಾಲವೂ ಮಹತ್ವಾಕಾಂಕ್ಷೆಯುಳ್ಳವರಾಗಿ ತ್ರಿಕರಣಪೂರ್ವಕವಾಗಿ ಉನ್ನತಿಯನ್ನು ಅಪೇಕ್ಷಿಸಿ ತತ್ಸಾಧನಕ್ಕೆ ಶಕ್ಯವಾದ ಪ್ರಯತ್ನಗಳನ್ನೂ ಅವಶ್ಯವಾದ ಶ್ರಮವನ್ನೂ ಮಾಡಲೇಬೇಕು. ಆದರೆ ಇಷ್ಟೆಲ್ಲ ಮಾಡಿದರೂ ಒಂದುವೇಳೆ ಕಾರ್ಯವು ಸಿದ್ಧಿಸದಿದ್ದರೆ ಅದಕ್ಕೋಸುಗ ಖೇದಬಡುತ್ತ ಕೂಡ್ರುವದು ಯೋಗ್ಯವಲ್ಲ. ಯಶಾಪಯಶದ ಕಡೆಗೆ ಲಕ್ಷ್ಯವನ್ನು ಕೊಡದೆ ಕಾರ್ಯದ ಕಡೆಗೂ ತತ್ಸಂಬಂಧವಾದ ನಮ್ಮ ಕರ್ತವ್ಯದ ಕಡೆಗೂ ಲಕ್ಷ್ಯವನ್ನಿಟ್ಟು ಅಸಮಾಧಾನಕ್ಕೆ ಆಸ್ಪದವನ್ನು ಕೊಡದಿರುವಂತೆ ನಮ್ಮ ಮನಸ್ಸು ಸುಸಂಸ್ಕೃತವಾಗಿರಲಿಕ್ಕೆ ಬೇಕು. ಈ ಪ್ರಕಾರದ ಮನೋಭೂಮಿಯು ಸಿದ್ಧವಾದಬಳಿಕ ನಮ್ಮ ಪ್ರಗತಿವೃಕ್ಷದ ಬೆಳಿಗೆಯು ಕುಂಠಿತವಾಗಲಾರದು; ಹಾಗು ನಮ್ಮ ಸಮಾಧಾನವೃತ್ತಿಯೂ ಭಂಗವಾಗಲಾರದು.

ಈ ಪ್ರಕಾರ ಮನುಷ್ಯರ ಮನಸ್ಸು ಸುಸಂಸ್ಕೃತವಾಗಬೇಕಾದರೆ ಅವನಿಗೆ ಉತ್ತಮಪ್ರಕಾರದ ಶಿಕ್ಷಣವು ದೊರೆಯಲಿಕ್ಕೆ ಬೇಕು. ಶಿಕ್ಷಣವೆಂದರೆ ಕೇವಲ ಶಾಲೆಯೊಳಗಿನ ಶಿಕ್ಷಣವೇ ಅಲ್ಲ. ಶಾಲೆಯ ಹೊರ್ತಾಗಿ ಮನೆಯಲ್ಲಿಯೂ, ಇತರರಸಂಗದ ವ್ಯವಹಾರದಲ್ಲಿಯೂ ಅನೇಕ ತರದ ಶಿಕ್ಷಣವು ನಮಗೆ ದೊರೆಯುತ್ತಿರುತ್ತದೆ. ಶಾಲೆಯೊಳಗಿನ ಅಭ್ಯಾಸದ ಕಡೆಗೆ ಲಕ್ಷ್ಯಕೊಡುವಂತೆಯೇ ಇತರ ಶಿಕ್ಷಣದಲ್ಲಿಯೂ ಮನಸ್ಸು ಹಾಕಬೇಕು. ವ್ಯವಹಾರ ಜ್ಞಾನವಿಲ್ಲದಿದ್ದರೆ ಕೇವಲ ಶಾಲೆಯೊಳಗಿನ ಶಿಕ್ಷಣದಿಂದ ಯಾವತರದ ಉಪಯೋಗವೂ ಆಗಲಾರದು. ಆದ್ದರಿಂದ ವ್ಯವಹಾರಿಕ ಶಿಕ್ಷಣದ ಕಡೆಗೆ ಸಂಪೂರ್ಣ ಲಕ್ಷ್ಯಕೊಟ್ಟು, ಆತ್ಮೋನ್ನತಿಗಾಗಿ ಸ್ವತಃ ಪ್ರಯತ್ನ ಮಾಡಬೇಕು. ಆಶ್ರಮಧರ್ಮಗಳ ಉಪಯುಕ್ತತೆಯನ್ನು ಲಕ್ಷಕ್ಕೆ ತಂದು ಅವನ್ನು ಯಥಾಕ್ರಮವಾಗಿ ಪರಿಪಾಲಿಸಬೇಕು. ವಿಚಕ್ಷಣಬುದ್ಧಿಯಿಂದ ನಿರೀಕ್ಷಿಸುವದನ್ನು ಕಲಿಯಬೇಕು. ನಿರೀಕ್ಷಣವು ಅತ್ಯಂತ ಮಹತ್ವದ ಸಂಗತಿಯಾಗಿದೆ. ನಿರೀಕ್ಷಣವೇ ಯಾವತ್ತು ಶಿಕ್ಷಣದ ಅಸ್ತಿವಾರವೆಂದು ಹೇಳಬಹುದಾಗಿದೆ. ನಾವು ಹಿರಿಯರಿಂದ ಕೇಳಿದ ಸಂಗತಿಗಳನ್ನೂ, ಗ್ರಂಥಗಳಲ್ಲಿ ಓದಿದ ಸಂಗತಿಗಳನ್ನೂ ಅನುಭವಕ್ಕೆ ಹಚ್ಚಿ ಹೋಲಿಸಿ ನೋಡಲು ನಿರೀಕ್ಷಣವೇ ಸಾಧನವು. ನಿರೀಕ್ಷಣದಿಂದ ಸೃಷ್ಟಿಯ ವಿಶಾಲತ್ವ ಹಾಗು ನಮ್ಮ ಲಘುತ್ವಗಳ ಜ್ಞಾನವಾಗಿ ನಾವು ಈಶ್ವರನಲ್ಲಿ ಲೀನರಾಗುತ್ತೇವೆ; ಹಾಗು ನಮ್ಮ ಕರ್ತವ್ಯಜ್ಞಾನವು ನಮಗಾಗಿ, ನಾವು ಎಷ್ಟು ಕ್ಷುದ್ರರಿರುವೆವೆಂಬದು ಮನವರಿಕೆಯಾದ ಕೂಡಲೇ ಮದೋನ್ಮತ್ತರಾಗಲಿಕ್ಕೆ ತಿಲಮಾತ್ರವೂ ಅವಕಾಶವಿಲ್ಲೆಂಬದು ನಮ್ಮ ಪ್ರತೀತಿಗೆ ಬರುತ್ತದೆ. ಮತ್ತು ಇದೇ ಕಾರಣದಿಂದಲೇ ನಮ್ಮ ಉನ್ನತಿಗೆ ಅವಕಾಶವಾಗುತ್ತವೆ. ಆದ್ದರಿಂದ ಸೋಮೇಶ್ವರ ಕವಿಯು "ಕೆಲಸಂಬಲ್ಲವರಿಂದ ಕಲ್ತು ಕೆಲಸಂ ಸುಜ್ಞಾನದಿಂನೋಡುತುಂ । ಕೆಲಸಂ

ಮೂಳ್ಪವರಿಂದ ಕಂಡು ಕೆಲವಂ ಶಾಸ್ತ್ರಂಗಳಿಂ ಕೇಳುತಾ। ಕೆಲವಂ ಸಜ್ಜನ ಸಂಗದಿಂದ ಲರಿಯಲ್ ಸರ್ವಜ್ಞನಪ್ಪಂತೆಕೇಳ್ ಪಲವುಂಪಳ್ಳ ಸಮುದ್ರಮೈಹರಹರಾ ॥೧॥" ಎಂದು ಹೇಳಿದಂತೆ ಅನೇಕ ತರದ ಶಿಕ್ಷಣದ ಯೋಗದಿಂದ ನಾವು ಜ್ಞಾನವನ್ನು ಸಂಪಾದಿಸಲಿಕ್ಕೆ ಬೇಕು. ಮತ್ತು ನಮಗಿಂತ ಶ್ರೇಷ್ಠ ಪುರುಷರ ಅನುಕರಣವನ್ನು ಕೆಲವಂಶದಿಂದಾದರೂ ಮಾಡಲಿಕ್ಕೆ ಸದ್ಭಾವದಿಂದ ಪ್ರಯತ್ನಿಸಿ ಅವರನ್ನು ಸರಿಗಟ್ಟಲೆತ್ನಯಿಸಬೇಕಲ್ಲದೆ ಅಂಥ ಪುರುಷರ ಅವಹೇಲನೆಯನ್ನು ಮಾಡಿದ್ದರಿಂದ ನಮ್ಮ ಕಲ್ಯಾಣವು ಎಂದೂ ಆಗದು. ಅದೊಂದು ಮೂರ್ಖತನದ ಲಕ್ಷಣವೆಂದು ರಾಮದಾಸಸ್ವಾಮಿಗಳು ಹೀಗೆ ಹೇಳುತ್ತಾರೆ:—

> " आपणाहुनि जो श्रेष्ठ । तयांसि अत्यंतनिकट
> शिकवणीचामानी वीट । तो एक मूर्ख ॥ "

ಆದ್ದರಿಂದ ' सिंहादेकं बकादेकं ' ಎಂಬಂತೆ ಪ್ರತಿಯೊಂದು ವಸ್ತುವಿನಿಂದಲೂ ದೊರೆತಷ್ಟು ಜ್ಞಾನವನ್ನು ನಾವು ಯಾವಾಗಲೂ ಸಂಗ್ರಹಿಸುತ್ತಲೇ ಇರಬೇಕು. ದತ್ತಾತ್ರೇಯ ಮಹಾರಾಜರು ಇಪ್ಪತ್ತುನಾಲ್ಕು ಗುರುಗಳನ್ನು ಮಾಡಿ ಕೊಂಡದ್ದರ ರಹಸ್ಯವಾದರೂ ಇದೇ.

ಇನ್ನು ಮನೋಬುದ್ಧಿಗಳು ಉತ್ತಮರೀತಿಯಲ್ಲಿರಬೇಕಾದರೆ ಶರೀರವು ಉತ್ತಮ ಸ್ಥಿತಿಯಲ್ಲಿರಬೇಕಾಗುತ್ತದೆ. ಕುಶಲನಾದ ನಾವಿಕನಿದ್ದರೂ ಗಟ್ಟಿಮುಟ್ಟಾದ ನೌಕೆಯಿದ್ದಹೊರತು ಸಮುದ್ರ ಪ್ರಯಾಣವು ಸುಖಕರವಾಗಲಾರದು. ಅಥವಾ ಜಂಗುಹತ್ತಿ ಮೊಂಡವಾದ ಖಡ್ಗದಿಂದ ಶೂರನಾದ ಯೋದ್ಧನಾದರೂ ಪ್ರತಿಪಕ್ಷಿಯನ್ನು ಗೆಲ್ಲಲಾರನು. ಅದರಂತೆಯೇ ಸುದೃಢವಾದ ಶರೀರವಿದ್ದಹೊರತು ಬುದ್ಧಿ ಮನಸ್ಸುಗಳು ತಮ್ಮ ಕಾರ್ಯವನ್ನು ಯೋಗ್ಯ ರೀತಿಯಿಂದ ಮಾಡಲು ಸಮರ್ಥವಾಗಲಾರವು ನಿರೋಗಿಯಾದ ಶರೀರದಲ್ಲಿಯೇ ಆರೋಗ್ಯಕರವಾದ ಮನಸ್ಸಿರುತ್ತದೇಹೊರತು ಅಶಕ್ತ ಶರೀರದಲ್ಲಿ ಉತ್ತಮ ಮಾನಸಿಕಸ್ಥಿತಿಯು ಇರುವದು ಅಸಂಭವವು. ಈ ಸಂಬಂಧದಿಂದ ಇಂಗ್ಲಿಷದಲ್ಲಿ " Sound mind in a sound body " ಎಂಬದೊಂದು ಗಾದೆಯುಂಟು. ಮನಸ್ಸು ಶುದ್ಧವಾಗಿದ್ದರೆ ಶರೀರವು ಚಲೋ ಸ್ಥಿತಿಯಲ್ಲಿರುತ್ತದೆ; ಮತ್ತು ಶರೀರವು ಸುಸ್ಥಿತಿಯಲ್ಲಿದ್ದರೆ ಮನಸ್ಸು ಒಳ್ಳೇ ಸ್ಥಿತಿಯಲ್ಲಿರುತ್ತದೆ. ಈ ಪ್ರಕಾರ ಮನಸ್ಸು ಶರೀರಗಳಲ್ಲಿ ಅನ್ಯೋನ್ಯ ಸಂಬಂಧವದೆ. ಸಾತ್ವಿಕಾಹಾರಸೇವನ, ವ್ಯಾಯಾಮ, ಆಹಾರವಿಹಾರಗಳಲ್ಲಿ ಮಿತವಾಗಿರೋಣ, ದುಷ್ಟ ಚಟಗಳನ್ನು ದೂರೀಕರಿಸೋಣ ಮೊದಲಾದವುಗಳಿಂದ ನಮ್ಮ ಶರೀರವು ಚನ್ನಾಗಿರುವದಲ್ಲದೆ, ಮನಸ್ಸು ಬುದ್ಧಿಗಳೂ ಉತ್ತಮ ಸ್ಥಿತಿಯಲ್ಲಿ ಉಳಿದು ನಮ್ಮ ಪ್ರಗತಿಗೆ ಸಾಧನವಾಗುವವು. ಸಶಕ್ತಮನುಷ್ಯನಿಗೂ ಅಶಕ್ತಮನುಷ್ಯನಿಗೂ ಹೋಲಿಸಿ ನೋಡಿರಿ. ಸಶಕ್ತನು ಎಷ್ಟು ಶಾಂತನಿರುವನೋ, ಅಶಕ್ತನು ಅಷ್ಟು ಸಿಟ್ಟಿನ ಸ್ವಭಾವದವನಿರುವನು! ಇದರಂತೆಯೇ ಅವರಲ್ಲಿರುವ ಅನೇಕ ಗುಣಗಳಲ್ಲಿ ಮಹದಂತರವು ಕಂಡುಬರುವದು. ವ್ಯವಹಾರದೊಳಗಿನ ಈ

ದೃಷ್ಟಾಂತದಿಂದ ಶರೀರದ ಪರಿಣಾಮವು ಮನಸ್ಸಿನ ಮೇಲೆ ಯಾವತರದ್ದಾಗುವದೆಂಬದು ಸ್ಪಷ್ಟವಾಗುತ್ತದೆ.

ಒಟ್ಟಿನಲ್ಲಿ ಹೇಳತಕ್ಕದ್ದೇನಂದರೆ— ಇಹಪರಗಳಲ್ಲಿಯೂ ಸುಖವನ್ನೂ, ಸತ್ಕೀರ್ತಿಯನ್ನೂ ಪಡೆಯುವದೇ ಜೀವಿತಕಾರ್ಯವು. ಆದರೆ ಈ ಮಾತು ಬಾಯಿಂದ ಹೇಳಲಿಕ್ಕೆ ಸುಲಭವಿದ್ದಷ್ಟು ಕಾರ್ಯತಃ ಸುಲಭವಿಲ್ಲ. ಅದಕ್ಕಾಗಿ ಮೇಲೆ ಹೇಳಿದಂತೆ ಸೃಷ್ಟಿಯೊಳಗಿನ ಪ್ರತಿ ವಸ್ತುವಿನಿಂದಲೂ ದೊರೆಯುತಕ್ಕ ಜ್ಞಾನವನ್ನು ಪ್ರಯತ್ನದಿಂದ ಸಂಪಾದಿಸಿ, ಸಚ್ಛೀಲವುಳ್ಳವನಾಗಿ ಸದಾಚಾರದಿಂದ ವರ್ತಿಸುವದೇ ಪ್ರತಿಯೊಬ್ಬನ ಕರ್ತವ್ಯವು.

೧೯೩೧ನೆಯ ಇಸವಿಯ ಎಪ್ರಿಲ ತಿಂಗಳಿನಲ್ಲಿ ಆದ ಧಾರವಾಡ ಜಿಲ್ಲೆಯ ಗಂಡುಮಕ್ಕಳ ವ್ಹ. ಫಾ. ಪರೀಕ್ಷೆಯ ಪರಿಣಾಮವು

ನಂ.	ಹೆಸರು.	ವಯಸ್ಸು.	ಗುಣ.
೧	ಕೃಷ್ಣಭಟ್ಟ ನೀಲಕಂಠಭಟ್ಟ ಕೊಣ್ಣೂರ	೧೩	೩೮೩
೨	ನಾರಾಯಣರಾವ ಹಣಮಂತರಾವ ಕುಲಕರ್ಣಿ	೨೦	೩೭೫
೩	ಬಸವಲಿಂಗಪ್ಪಾ ಬಸೆಟ್ಟೆಪ್ಪ ಅಂಗಡಿ	೧೭	೩೫೬
೪	ಕೃಷ್ಣಾಜಿ ಬಲವಂತ ಕುಲಕರ್ಣಿ	೧೬	೩೪೭
೫	ಮಲ್ಲಪ್ಪ ನಾಗಪ್ಪ ಹಬಲಿ	೧೪	೩೪೪
,,	ರುದ್ರಪ್ಪ ತಮ್ಮಪ್ಪ ಗಿರಡ್ಡಿ	೧೬	೩೪೪
೭	ಅರ್ಕಾಚಾರಿ ನಾಗಲಿಂಗಪ್ಪ ಕಮ್ಮಾರ	೧೭	೩೪೦
೮	ವಾಸಪ್ಪ ಭೀಮರಾವ ಕಲಾಲ	೧೪	೩೩೮
೯	ವೆಂಕಟೇಶ ಭೀಮರಾವ ಗಂಭೀರ	೧೫	೩೩೪
೧೦	ಸಂಜೀವಪ್ಪ ಹನಮಪ್ಪ ಭೋವೇರ	೧೭	೩೩೩
೧೧	ಹುಶೇನಸಾಬ ಪೀರಸಾಬ ಮಿರಜ	೧೮	೩೩೨
೧೨	ಕಲ್ಲನಗೌಡ ಚನಬಸನಗೌಡಾ ಹಾದೀಮನಿ	೧೬	೩೩೧
೧೩	ಸಂಗನಗೌಡಾ ಅಯ್ಯನಗೌಡ ರಾಜೂರ	೧೬	೩೨೮
೧೪	ದತ್ತಾತ್ರಯ ಬಾಳಕೃಷ್ಣ ಕುಲಕರ್ಣಿ	೧೬	೩೨೪

೧೫	ರುದ್ರಪ್ಪ ರಾಮಪ್ಪ ಪತ್ತಾರ	೧೬	೩೨೧
೧೬	ಪುಂಡಪ್ಪ ಲಿಂಗಪ್ಪ ಬಿಟಗೇರಿ	೧೭	೩೧೯
೧೭	ಶಿವಲಿಂಗಪ್ಪಾ ಮರಲಿಂಗಪ್ಪಾ ಬಚಲೇಶ್ವರ	೧೬	೩೧೮
೧೮	ಕೃಷ್ಣಾಜಿ ಶ್ರೀನಿವಾಸ ದೇಶಪಾಂಡೆ	೧೭	೩೧
೧೯	ಗುರುಶಾಂತಯ್ಯ ಸೀಮಯ್ಯ ಸಾಲೀಮಠ	೧೭	೩೧
೨೦	ಅಡಿವೆಪ್ಪ ವೆಂಕಪ್ಪಾ ಪಾಮಲಿ	೧೬	೩೧
,,	ಮಲ್ಲನಗೌಡಾ ಚನ್ನಪ್ಪಗೌಡ ಚಿಕ್ಕನಗೌಡರ	೧೪	೩೧
,,	ಸಂಗಪ್ಪ ಬಸಪ್ಪ ಜೇಲೇರಿ	೧೪	೩೧
೨೩	ಇಮಾಮಸಾಹೇಬ ಹುಶೇನಸಾಹೇಬ ಕಾಲಿಮಾವರ	೧೩	೩೧
,,	ರಂಗಭಟ್ಟ ನರಸಿಂಹಭಟ್ಟ ಮಾಗನಗೇರಿ	೧೬	೩೧
,,	ಶಂಕರಪ್ಪಾ ದೊಡ್ಡಬಸಪ್ಪ ಗೊಜನೂರ	೧೬	೩೧
೨೬	ಬಸವಪ್ಪ ಹನುಮಪ್ಪ ಕರಕರರಡ್ಡಿ	೧೪	೩೧
,,	ಹಣಮಂತಗೌಡಾ ಬಸನಗೌಡಾ ಸೋಮನಗೌಡರ	೧೩	೩೧
,,	ಕೃಷ್ಣಾಜಿ ಶಂಕರರಾವ ಕುಲಕರ್ಣಿ	೧೪	೩೧
,,	ಶ್ರೀನಿವಾಸ ಕೃಷ್ಣ ಕಾಲವಾಡ	೧೭	೩೧
೩೦	ಭೀಮಪ್ಪ ಮಲ್ಲಪ್ಪ ಬೆಳ್ಳೋಡಿ	೧೫	೩೦
೩೧	ಕೃಷ್ಣಾಜಿ ಮಾರ್ತಂಡ ಪತಕಿ	೧೫	೩೦
೩೨	ಜೀನಂಧರ ಚಿಂತಾಮಣಿ ಬಸ್ತಿ	೧೫	೩೦
,,	ರಾಮಕೃಷ್ಣ ಚತ್ತುಶಾಸ್ತ್ರಿ ಹಂದಿಗೋಳಕರ	೧೫	೩೦
೩೪	ಬಸಪ್ಪಾ ರಾಮಪ್ಪಾ ತಳವಾರ	೧೭	೩೦
,,	ಧರ್ಮಪ್ಪ ಸೋಮಪ್ಪ ಕೆರೂರ	೧೮	೩೦
೩೬	ರಾಚಯ್ಯ ಸಣ್ಣವೀರಯ್ಯ ಕಲಿವಾಳ	೨೦	೩೦೨
೩೭	ಅಂದಾನೆಪ್ಪ ಮರಲಿಂಗಪ್ಪಾ ಮೇಗೇರಿ	೧೭	೩೦೧
,,	ಸುಬ್ಬಾಜಿ ಭವಾನಿರಾವ ಕೋಟಿ	೧೭	೩೦೧
೩೯	ಬಲವಂತ ಭೀಮಣ್ಣಾಯಿಕ ನೇಯ್ಕಾರ	೧೬	೩೦೦
,,	ಶಿವಮೂರ್ತಿ ಮಲ್ಲಪ್ಪ ವಾರದ	೧೪	೩೦೦

(ಅಪೂರ್ಣ.)

ಮುದ್ರಕರು—ಶಂ. ರಾ. ಭಿಸೆ, ಕ. ಟ್ರೆಂ. ವರ್ಕ್ಸ, ಧಾರವಾಡ, ೪೧೪,೩೧,೩೦೦

ಜಾಹೀರಾತು

ಎಲ್ಲ ಶಿಕ್ಷಕರಿಗೂ ತಿಳಿಸುವದೇನಂದರೆ:— ಕೆಳಗೆ ಬರೆದ ಪತ್ತೆಯ ಮೇಲೆ ಕೆಳಗೆ ವಿವರಿಸಿದ ಉಪಯೋಗಕಾರಕವಾದ ಶಿಕ್ಷಣದ ಉಪಕರಣಗಳು ದೊರೆಯುತ್ತವೆ.

ಶಾಸ್ತ್ರೀಯ ವಿಷಯದ ಸಾಮಾನುಗಳು, ನೀರು ಜಗ್ಗುವ ನಳಿಕೆಗಳು, ಬ್ರಹ್ಮಾ ಪ್ರೆಸ್ಸು, ತೂಕದ ಆರ್ಕಿಮಿಡಿಸನ್ ಮಾದರಿಯ ತಕ್ಕಡಿಗಳು, ಕಾರಂಜಿಗಳು, ಸೂರ್ಯ ಮಾಲೆ, ಋತುಗಳು, ಚಂದ್ರ ನಕಲೆಗಳು ಇವುಗಳನ್ನು ತೋರಿಸುವ ಉಪಕರಣಗಳು ರಿಲೀಫ ನಕಾಶಗಳು, ಗೋಡೆಗೆ ಹಾಕುವ ನಕಾಶಗಳು, ತೊಗಲಿನ ಬೋರ್ಡುಗಳು, ರೇಶಿಮೆ ಉಣ್ಣೆಯ ಬೋರ್ಡುಗಳು ಸಹ ಮಾಂಟಿಸೋರಿ ಹಾಗು ಕಿಂಡರಗಾರ್ಟನ್ ಪದ್ಧತಿಯ ಉಪಕರಣಗಳು ದೊರೆಯುವವು. ಬೇಕಾದವರು ಕೆಳಗಿನ ಪತ್ತೆಗೆ ಬಾಲ ಬೋಧ ಇಲ್ಲವೆ ಇಂಗ್ಲಿಷ ಲಿಪಿಯಿಂದ ಬರೆದು ಕ್ಯಾಟಲಾಗ ತರಿಸಿಕೊಳ್ಳಬೇಕು.

ಸಾಮಾನು ದೊರೆಯುವ ವಿಳಾಸ:—

Kashibhai C. Patel

ಕಾಶೀಭಾಯಿ ಸಿ. ಪಟೇಲ

ಶಿಕ್ಷಣ ಸಾಹಿತ್ಯ ಕಾರ್ಯಾಲಯ ದೇಹಗಾಂವ (ಅಹಮ್ಮದಾಬಾದ)

Sikshan Sahitya Karyalaya Dehgam (Ahamedabad)

ಹೊಸ ಪುಸ್ತಕಗಳು

೨ನೆಯ ಭಾಗ — ನುಡಿಗನ್ನಡಿ

ಲೇಖಕರು:—ಎಂ. ಪಿ. ಪೂಜಾರ, ಕನ್ನಡ ಪಂಡಿತ ಟ್ರೇ. ಸ್ಕೂ. ಧಾರವಾಡ

ಪ್ರಾಥಮಿಕ ಶಾಲೆಗಳ ೬।೫ ತರಗತಿಗಳಿಗಾಗಿಯೂ ಇಂಗ್ಲಿಶ್ ಶಾಲೆಗಳ ಕೆಳಗಿನ ತರಗತಿಗಳಿಗಾಗಿಯೂ ರಚಿತವಾದದ್ದು. ಈ ವರೆಗೆ ಕನ್ನಡ ೫ನೆಯ ಇಯತ್ತೆಗೆ ತಕ್ಕ ವ್ಯಾಕರಣ ಪುಸ್ತಕವು ಇಲ್ಲದ್ದರಿಂದ ೬, ೭ ಇಯತ್ತೆಗಳಿಗೆ ಕಲಿಸುವ ವ್ಯಾಕರಣ ಪುಸ್ತಕದಲ್ಲಿ ಆರಂಭದ ಕೆಲವು ಪುಟಗಳನ್ನು ಮಾತ್ರ ಆ ಇಯತ್ತೆಗೆ ಕಲಿಸುವ ವಾಡಿಕೆಯಿತ್ತು. ಆದರೆ ಹಾಗೆ ಕಲಿಸುವದು ಅಭ್ಯಾಸಪತ್ರಿಕೆಯನ್ನನುಸರಿಸುವದಿಲ್ಲ. ಈ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಏಕಕೇಂದ್ರಕ್ರಮದಿಂದ ವ್ಯಾಕರಣದ ಎಲ್ಲ ವಿಷಯಗಳನ್ನು ಸ್ಥೂಲಮಾನದಿಂದ ಕಲಿಸುವದಕ್ಕೆ ಅನುಕೂಲವಾಗಬೇಕೆಂದು ಈ ಪುಸ್ತಕವು ಬರೆಯಲ್ಪಟ್ಟಿದೆ. ೫ನೆಯ ಇಯತ್ತೆಗೆ ಕಲಿಸುವ ವಿಷಯಗಳಲ್ಲಿಯೇ ಮುಖ್ಯವಾದವುಗಳನ್ನು ೪ನೆಯ ಇಯತ್ತೆಗೆ ಕಲಿಸುವದಿರುವದರಿಂದ ಈ ಪುಸ್ತಕವು ೪ನೆಯ ಇಯತ್ತೆಗೂ ಉಪಯುಕ್ತವಾಗಿರುವದು. ಆದದರಿಂದ ೪।೫ ಇಯತ್ತೆಗಳ ವಿದ್ಯಾರ್ಥಿಗಳೂ, ಶಿಕ್ಷಕರೂ ಇದರ ಉಪಯೋಗವನ್ನು ಅವಶ್ಯವಾಗಿ ಮಾಡಿಕೊಳ್ಳಬೇಕೆಂದು ಕೋರುವೆವು. ಬೆಲೆ ಬಹಳ ಕಡಿಮೆ (೪ ಆಣೆ ಮಾತ್ರ) ಪುಸ್ತಕಗಳು ಎಲ್ಲ ಬುಕ್‌ಡಿಪೋಗಳಲ್ಲಿಯೂ, ಗ್ರಂಥಕರ್ತರಲ್ಲಿಯೂ, ನಮ್ಮಲ್ಲಿಯೂ ದೊರೆಯುವವು.

ಗಣಿತಾದರ್ಶ—(೩ನೆಯ ಇಯತ್ತೆಗೆ) ಲೇ—ಎಸ್. ಆರ್. ತಟ್ಟಿ ಬಿ. ಎ., ಮತ್ತು ಜೋಶಿ

—ಜೋಶಿ ಬ್ರದರ್ಸ ಬುಕ್‌ಡಿಪೋ ಲೈನಬಜಾರ, ಧಾರವಾಡ.

REGISTERED NO B 2567

From

The Manager,

Kannada Prathamik Sikshana

Dharwar

LIST NO. ೨೦

ಜಾಹೀರಾತು

ಸ್ಯಾಂಪಲ್] [ಪ್ರುಕ್ಯಟಿ

ಉತ್ತಮ ಮಸೀ ಚೀಟುಗಳು

ನೀಲೀಕಪ್ಪು, ಕೆಂಪು, ಜಾಂಬಳಿ ಮಸಿಯ
ಚೀಟುಗಳು. ಈ ಕಂಪನಿಯು ಬಹಳ ಜನರಿಂ
ಶಿಫಾರಸ ಪಡೆದು ಮೆಡಲ್ಲುಗಳನ್ನು
ಸಂಪಾದಿಸಿರುತ್ತದೆ.

ದರಗಳು

೧೦೦ ಚೀಟುಗಳಿಗೆ ೦—೭—
೫೦೦ ,, ೨—೦—
೧೦೦೦ ,, ೩—೪—
೧೦೦೦೦ ,, ೩೦—೦—೦ (ರೇಲ್ವೆ ಪ್ರಿ

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿ

ಕರ್ನಾಟಕ ಇಂಕ ಕಂಪನಿ,

ಬಾಗಲಕೋಟೆ

Reg. No. B 2567

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Sikshana

SEPTEMBER 1931

ಸಂಪಾದಕ—ಹನುಮಂತ ಗೋವಿಂದರಾವ ದೇಶಪಾಂಡೆ, ಬಿ.ಎ

ಸಂಪುಟ ೬೮ ವರ್ಷ ೩ } ಸಪ್ಟಂಬರ ೧೯೩೧ { ೩ನೆವ. ಸಂ. ೬

ವಿಷಯಾನುಕ್ರಮಣಿಕೆ

ಅ. ನಂ.	ವಿಷಯು.	ಪುಟ.
೧.	ಇಂಡಿಯನ್ ರೆಡ್‌ಕ್ರಾಸ ಸೊಸಾಯಿಟಿ ...	೧
೨.	ಪ್ರಾಥಮಿಕ ಶಿಕ್ಷಕರ ಕರ್ತವ್ಯ	೧೦
೩.	ನಲ್ನುಡಿಗಳು	೧೩
೪.	ಕನ್ನಡ ಭಾಷಾಶೈಲಿ	೧೪
೫.	ದಾನಶೂರ ಆಲ್ಫ್ರೇಡ ನೋಬೆಲ ...	೧೭
೬.	ಆಹಾರ ವಿಚಾರ	೧೯
೭.	ಕೆಲವು ಪ್ರಸಿದ್ಧ ಭೂಕಂಪಗಳು	೨೨
೮.	ದಶಾಂಶ ಭಾಗಾಕಾರ ಕಲಿಸುವ ಪದ್ಧತಿ ...	೨೩
೯.	ವ್ಹ. ಫಾ. ಪರೀಕ್ಷೆಯ ಪರಿಣಾಮವು ...	೨೬
೧೦.	ಶ್ರೀಗುರುಚರಣ ಶರಣಾಷ್ಟಕ (ಕವಿತೆ) ...	೩೨

Printed by K. R. Bhise at the Karnatak Printing Works, Dharwar
Published by H. G. Deshpande, B.A.,
Head-Master, Training College for Men, Dharwar, at his Offic

ಜಾಹೀರಾತು

ಎಲ್ಲ ಶಿಕ್ಷಕರಿಗೂ ತಿಳಿಸುವದೇನಂದರೆ:—ಕೆಳಗೆ ಬರೆದ ಪತ್ತೆಯು ...
ಕೆಳಗೆ ವಿವರಿಸಿದ ಉಪಯೋಗಕಾರಕವಾದ ಶಿಕ್ಷಣದ ಉಪಕರಣಗಳು ದೊರೆಯು...

ಶಾಸ್ತ್ರೀಯ ವಿಷಯದ ಸಾಮಾನುಗಳು, ನೀರು ಜಗ್ಗುವ ನಳಿಕೆಗಳು, ಬ್ರ... ಪ್ರೆಸ್ಸ, ತೂಕದ ಆರ್ಕಿಮಿಡಿಸನ್ ಮಾದರಿಯ ತಕ್ಕಡಿಗಳು, ಕಾರಂಜಿಗಳು, ಸೂ... ಮಾಲೆ, ಋತುಗಳು, ಚಂದ್ರ ನಕಲೆಗಳು ಇವುಗಳನ್ನು ತೋರಿಸುವ ಉಪಕರಣಗಳ... ರಿಲೀಫ ನಕಾಶಗಳು, ಗೋಡೆಗೆ ಹಾಕುವ ನಕಾಶಗಳು, ತೊಗಲಿನ ಬೋರ್ಡುಗಳು... ರೇಶಿಮೆ ಉಣ್ಣೆಯ ಬೋರ್ಡುಗಳು ಸಹ ಮಾಂಟಿಸೋರಿ ಹಾಗು ಕಿಂಡರಗಾರ್ಟನ... ಪದ್ಧತಿಯ ಉಪಕರಣಗಳು ದೊರೆಯುವವು. ಬೇಕಾದವರು ಕೆಳಗಿನ ಪತ್ತೆಗೆ ಬಾ... ಬೋಧ ಇಲ್ಲವೆ ಇಂಗ್ಲಿಷ ಲಿಪಿಯಿಂದ ಬರೆದು ಕ್ಯಾಟಲಾಗ ತರಿಸಿಕೊಳ್ಳಬೇಕು.

ಸಾಮಾನು ದೊರೆಯುವ ವಿಳಾಸ:—

Kashibhai C. Patel

ಕಾಶೀಭಾಯಿ ಸಿ. ಪಟೇಲ

ಶಿಕ್ಷಣ ಸಾಹಿತ್ಯ ಕಾರ್ಯಾಲಯ ದೇಹಗಾಂವ (ಅಹಮ್ಮದಾಬಾದ)

Sikshan Sahitya Karyalaya Dehgam (Ahamedabad)

ಹೊಸ ಪುಸ್ತಕಗಳು

೩ನೆಯ ಭಾಗ — ನುಡಿಗನ್ನಡಿ

ಲೇಖಕರು:—ಎಂ. ಪಿ. ಪೂಜಾರ, ಕನ್ನಡ ಪಂಡಿತ ಟ್ರೇ. ಸ್ಕೂ. ಧಾರವಾಡ

ಪ್ರಾಥಮಿಕ ಶಾಲೆಗಳ ೪।೫ ತರಗತಿಗಳಿಗಾಗಿಯೂ ಇಂಗ್ಲಿಶ್ ಶಾಲೆಗಳ ಕೆಳಗಿ... ತರಗತಿಗಳಿಗಾಗಿಯೂ ರಚಿತವಾದದ್ದು. ಈ ವರೆಗೆ ಕನ್ನಡ ೫ನೆಯ ಇಯತ್ತೆಗೆ ... ವ್ಯಾಕರಣ ಪುಸ್ತಕವು ಇಲ್ಲದ್ದರಿಂದ ೬, ೭ ಇಯತ್ತೆಗಳಿಗೆ ಕಲಿಸುವ ವ್ಯಾಕರಣ ಪುಸ್ತ... ನಲ್ಲಿ ಆರಂಭದ ಕೆಲವು ಪುಟಗಳನ್ನು ಮಾತ್ರ ಆ ಇಯತ್ತೆಗೆ ಕಲಿಸುವ ವಾಡಿಕೆಯಿತ್ತು... ಆದರೆ ಹಾಗೆ ಕಲಿಸುವದು ಅಭ್ಯಾಸಪತ್ರಿಕೆಯನ್ನನುಸರಿಸುವದಿಲ್ಲ. ಈ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಏಕಕೇಂದ್ರಕ್ರಮದಿಂದ ವ್ಯಾಕರಣದ ಎಲ್ಲ ವಿಷಯಗಳನ್ನು ಸ್ಥೂಲಮಾನದಿಂದ ಕಲಿಸುವದಕ್ಕೆ ಅನುಕೂಲವಾಗಬೇಕೆಂದು ಈ ಪುಸ್ತಕವು ಬರೆ... ಲ್ಪಟ್ಟಿದೆ. ೫ನೆಯ ಇಯತ್ತೆಗೆ ಕಲಿಸುವ ವಿಷಯಗಳಲ್ಲಿಯೇ ಮುಖ್ಯವಾದವುಗಳನ್ನು ೪ನೆಯ ಇಯತ್ತೆಗೆ ಕಲಿಸುವದಿರುವದರಿಂದ ಈ ಪುಸ್ತಕವು ೪ನೆಯ ಇಯತ್ತೆಗೂ ಉಪ... ಯುಕ್ತವಾಗಿರುವದು. ಆದದರಿಂದ ೪।೫ ಇಯತ್ತೆಗಳ ವಿದ್ಯಾರ್ಥಿಗಳೂ, ಶಿಕ್ಷಕರೂ ಇದರ ಉಪಯೋಗವನ್ನು ಅವಶ್ಯವಾಗಿ ಮಾಡಿಕೊಳ್ಳಬೇಕೆಂದು ಕೋರುವೆವು. ಬೆಲೆ ಬಹಳ ಕಡಿಮೆ (೪ ಆಣೆ ಮಾತ್ರ) ಪುಸ್ತಕಗಳು ಎಲ್ಲ ಬುಕ್‌ಡಿಪೋಗಳಲಿಯೂ, ಗ್ರಂಥ... ಕರ್ತರಲ್ಲಿಯೂ, ನಮ್ಮಲ್ಲಿಯೂ ದೊರೆಯುವವು.

ಗಣಿತಾದರ್ಶ—(೩ನೆಯ ಇಯತ್ತೆಗೆ) ಲೇ—ಎಸ್. ಆರ್. ತಟ್ಟಿ ಬಿ. ಎ., ಮುಖ್ಯ ...

—ಜೋಶಿ ಬ್ರದರ್ಸ ಬುಕ್‌ಡಿಪೋ ಲೈನಬಜಾರ, ಧಾರವಾಡ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:—**ಹನುಮಂತ ಗೋವಿಂದರಾವ ದೇಶಪಾಂಡೆ,** ಬಿ. ಎ.,

ಸಂಪುಟ ೬೮ ವರ್ಷ ೩ ||| ಸಪ್ಟಂಬರ ೧೯೩೧ ||| ಸಂಚಿಕೆ ೬

ಇಂಡಿಯನ್ ರೆಡ್‌ಕ್ರಾಸ ಸೊಸಾಯಿಟಿ

ಜ್ಯೂನಿಯರ ರೆಡ್‌ಕ್ರಾಸ್

ಶಿಕ್ಷಕರಿಗೆ ಸೂಚನೆಗಳು

೧. ಉದ್ದೇಶಗಳು

ಜ್ಯೂನಿಯರ ರೆಡ್‌ಕ್ರಾಸ್ ಎಂಬದು, ಬೇನೆಯುವರ ಶುಶ್ರೂಷೆಯು ರೆಡ್‌ಕ್ರಾಸ ಎಂಬ ಸಂಘದ ಚಿಕ್ಕ ಮಕ್ಕಳಿಗೆ ಸಂಬಂಧಿಸಿದ ಶಾಖೆಯು. ಜಗತ್ತಿನಲ್ಲಿ ಇಂಥ ಚಿಕ್ಕ ಮಕ್ಕಳ ಸಂಘಗಳ ಸಭಾಸದರ ಸಂಖ್ಯೆಯು ೧,೧೦ ಲಕ್ಷ ಇರುವದು. ಈ ಸಂಘದ ಉದ್ದೇಶಗಳು ಕೆಳಗೆ ಬರೆದಂತೆ ಇರುವವು :—

" ಈ ಜ್ಯೂನಿಯರ ರೆಡ್‌ಕ್ರಾಸಿನ ಮುಖ್ಯ ಉದ್ದೇಶವು ಬಾಲಕರಿಗೆ ಶಾಂತತೆಯ ಧ್ಯೇಯವನ್ನು ಬೋಧಿಸುವದೂ, ತಮ್ಮ ಮತ್ತು ಇತರರ ಆರೋಗ್ಯರಕ್ಷಣೆಯ ಉಪಾಯುಗಳನ್ನು ಕೈಕೊಳ್ಳುವದೂ, ನಾಗರಿಕನ ಮತ್ತು ಮಾನವೀ ಕರ್ತವ್ಯಗಳನ್ನು ತಿಳಿದುಕೊ

ಳ್ಳುವದೂ, ಬೇರೆ ಬೇರೆ ದೇಶಗಳ ಬಾಲಕರ ಕೂಡ ಮಿತ್ರತ್ವದಿಂದ ನಡೆಯಬೇಕೆಂಬದೂ ಆಗಿದೆ. ತಾತ್ಪರ್ಯವೇನೆಂದರೆ, ಜ್ಯೂನಿಯರ ರೆಡ್‌ಕ್ರಾಸಿನ ಉದ್ದೇಶಗಳು ಕೆಳಗೆ ಬರೆದಂತೆ ಇರುವವು.

(ಅ) ಆರೋಗ್ಯ ವರ್ಧನ.
(ಬ) ಬೇನೆಯವರ ಮತ್ತು ಬಳಲುವವರ ಆರೈಕೆ.
(ಕ) ರಾಷ್ಟ್ರರಾಷ್ಟ್ರಗಳಲ್ಲಿ ಮಿತ್ರತ್ವ.

೨. ಪದ್ಧತಿಗಳು

ಜ್ಯೂನಿಯರ ರೆಡ್‌ಕ್ರಾಸ ಎಂಬದು ಸಾಲೆಯಲ್ಲಿದ್ದ ಬಾಲಕ–ಬಾಲಿಕೆಯರು ಒಟ್ಟಾಗಿ ನಡೆಸತಕ್ಕ ಕಾರ್ಯವು. ಈ ಕಾರ್ಯದ ಮುಖ್ಯ ಚಾಲಕರು ಅಥವಾ ಉಪದೇಶಕರು, ಶಿಕ್ಷಕರು. ಶಿಕ್ಷಕರ ಮೇಲ್ವಿಚಾರದ ಕೆಳಗೆ ಬಾಲಕ-ಬಾಲಿಕೆಯರು ಅವಶ್ಯವಿದ್ದ ಅಧಿಕಾರಿಗಳನ್ನೂ ಕಾರ್ಯಗಳನ್ನೂ ಆರಿಸಿ ಗೊತ್ತು ಮಾಡಿಕೊಂಡು ಈ ವಿಷಯಕವಾದ ಕಾರ್ಯಗಳನ್ನು ತಾವೇ ನಡಿಸಲಿಕ್ಕೆ ಸಮರ್ಥರಾಗತಕ್ಕದ್ದು. ಒಂದೊಂದು ಗುಂಪಿನವರು ವರ್ಷಕ್ಕೆ ಒಂದು ರೂಪಾಯಿ ವರ್ಗಣಿ ಹಣವನ್ನು ಕೊಡಬೇಕಾಗುವದು. ಈ ಹಣವನ್ನು ರೆಡ್‌ಕ್ರಾಸಿನ ವೆಚ್ಚಕ್ಕಾಗಿ ಉಪಯೋಗಿಸುವರು. ಆದರೆ ಗುಂಪಿನೊಳಗಿದ್ದ ಬಾಲಕರು ಬೇರೆ ಯಾವ ಪ್ರಕಾರದ ವರ್ಗಣಿಯನ್ನು ಕೊಡಬೇಕಾಗುವದಿಲ್ಲ. ಈ ರೆಡ್‌ಕ್ರಾಸಿಗೆ ಸೇರಲಿಕ್ಕೆ ಯಾರಿಗೂ ಒತ್ತಾಯ ಮಾಡಕೂಡದು. ಈ ಜ್ಯೂನಿಯರ ರೆಡ್‌ಕ್ರಾಸ ಎಂಬ ಸಂಘವು ಸರಕಾರ, ರಾಜನೀತಿ, ವಿಶಿಷ್ಟ ಜಾತಿ ಇವುಗಳಿಗೆ ಸಂಬಂಧವಿಲ್ಲದ ಮತ್ತು ಸ್ವಯಂಸ್ಫೂರ್ತಿಯಿಂದ ನಡೆಯುತಕ್ಕ ವ್ಯವಸ್ಥೆಯಾಗಿರುವದು.

೩. ಚಟವಟಿಕೆಗಳು

ಈ ರೆಡ್‌ಕ್ರಾಸ ಸಂಬಂಧದ ಕಾರ್ಯಗಳನ್ನು ಜರಗಿಸಲಿಕ್ಕೆ ಹೆಚ್ಚಿನ ನಿಯಮಗಳಿಲ್ಲ. ಪ್ರತಿಯೊಂದು ಗುಂಪಿಗೆ ತಕ್ಕಂತೆ ಕಾರ್ಯಕ್ರಮವನ್ನು ಇಟ್ಟುಕೊಳ್ಳತಕ್ಕದ್ದು. ಸಾಮಾನ್ಯವಾಗಿ ಕೆಳಗೆ ಹೇಳುವ ಚಟವಟಿಕೆಗಳನ್ನು ಮಾಡಬಹುದೆಂದು ಹೇಳಿದೆ. ಆದರೆ ಎಲ್ಲವುಗಳನ್ನೂ ಮಾಡಬೇಕೆಂಬದು ಅವಶ್ಯವಿಲ್ಲ.

ಅ. ಆರೋಗ್ಯ ವರ್ಧನ

(೧) **ವ್ಯಕ್ತಿಯ ಆರೋಗ್ಯ:** — (ಅ) ಆರೋಗ್ಯವರ್ಧನಕ್ಕೆ ಅವಶ್ಯವಾದ ಚಲೋ ಚಟಗಳು:– ಆರೇಳು ಆರೋಗ್ಯವರ್ಧನದ ನಿಯಮಗಳನ್ನು ಮಾಡಿಟ್ಟುಕೊಂಡು ಸಭಾಸದರು ಅವುಗಳನ್ನು ಪಾಲಿಸುವಂತೆ ಮಾಡಬೇಕು. ಪ್ರತಿಯೊಬ್ಬ ಬಾಲಕನ ತನ್ನ ಪ್ರಗತಿಯನ್ನು ಒಂದು ಕಾರ್ಡಿನ ಮೇಲೆ ಬರೆದಿಡುವಂತೆ ವ್ಯವಸ್ಥೆಯಿರಬೇಕು. ಈ ರೀತಿಯಿಂದ ವಾರವಾರದ ಪ್ರಗತಿಯನ್ನು ಬರೆದಿಡುವ ಗುಂಪಿಗೆ ಏನಾದರೂ ಮೆಚ್ಚನ್ನು ಅಥವಾ ನಿಶಾನೆಯನ್ನು ಕೊಡಬೇಕು. ಶಕ್ಯವಿದ್ದಲ್ಲಿ ಪ್ರತಿಯೊಬ್ಬ ಬಾಲಕನ

ತೂಕವನ್ನೂ ಎತ್ತರವನ್ನೂ ಪ್ರತಿ ತಿಂಗಳು ಬರೆದಿಟ್ಟು ಒಂದೇ ವಯಸ್ಸಿನ ಬಾಲಕರಲ್ಲಿ ತೂಕ ಎತ್ತರಗಳಲ್ಲಿ ಯಾವ ಪ್ರಕಾರದ ಹೆಚ್ಚುಕಡಿಮೆಯಾಗಿರುವದೆಂಬದನ್ನು ನಿರೀಕ್ಷಿಸಲಿಕ್ಕೆ ಹಚ್ಚಬೇಕು. ಈ ತರದ ಆರೋಗ್ಯ ವ್ಯವಸ್ಥೆಯನ್ನು ಎಷ್ಟೋ ದೇಶಗಳಲ್ಲಿ ಯಶಸ್ವಿಯಾಗಿ ಮಾಡಿರುವರು.

(ಬ) ಆರೋಗ್ಯ ಶಿಕ್ಷಣ ಮತ್ತು ಆರೋಗ್ಯ ವಿಷಯದ ನಿಬಂಧ ಬರಹ :— ಆರೋಗ್ಯ ಶಿಕ್ಷಣದ ವ್ಯವಸ್ಥೆ ಮಾಡಿ ವಿಷಯವು ತಿಳಿದಿದೆಯೆಂಬದನ್ನು ತೋರಿಸುವದಕ್ಕಾಗಿ ನಿಬಂಧಗಳನ್ನು ಬರೆಯುವದು. ಉತ್ತಮ ನಿಬಂಧಗಳಿಗೆ ಮನ್ನಣೆ ಕೊಡಬೇಕು.

(ಕ) ಆರೋಗ್ಯದ ನಿಯಮಗಳ ಜಾಹೀರ ಪತ್ರಿಕೆಗಳನ್ನು ಸಿದ್ಧ ಮಾಡುವದು :— ಬಾಲಕರು ಶಾಲೆಯ ಕೋಣೆಯನ್ನು ಅಲಂಕರಿಸುವದಕ್ಕೆ ಚಿತ್ರವುಳ್ಳ ಇಂತಹ ಜಾಹೀರ ಪತ್ರಿಕೆಗಳನ್ನು ಸಿದ್ಧಪಡಿಸುವದು.

(ಡ) ಆರೋಗ್ಯವರ್ಧಕ ಆಟಗಳು :— ಆರೋಗ್ಯವರ್ಧನೆಗೆ ತಕ್ಕಂತೆ ಆಟಗಳನ್ನು ಆಡಿಸಬೇಕು. ಒಂದೊಂದು ಆಟದಲ್ಲಿ ಒಂದೊಂದು ಆರೋಗ್ಯದ ನಿಯಮವನ್ನು ಅನುಸರಿಸಿದರೆ ಸಾಕು.

(ಇ) ಪ್ರಥಮ ಚಿಕಿತ್ಸೆ, ಬೇನೆಯವರ ಆರೈಕೆ, ಆರೋಗ್ಯಶಿಕ್ಷಣ:— ಬಾಲಕರು ಸೆಂಟಜಾನ ಆಂಬುಲನ್ಸ ಅಸೋಸಿಯೇಶನದ ಬಾಲಚಮುವಿಗೆ ತಕ್ಕ ಪ್ರಥಮ ಚಿಕಿತ್ಸೆಯ ಮತ್ತು ಬೇನೆಯವರ ಆರೈಕೆಯ ಪಾಠಗಳನ್ನು ಕಲಿಯತಕ್ಕದ್ದು. ಅಥವಾ ಈ ವಿಷಯದಲ್ಲಿ ಮೆಕೆಂಝಿ ಸ್ಕೂಲ ಕೋರ್ಸನ್ನು ಕಲಿಯಬಹುದು. ಅವರ ಜ್ಞಾನವು ಈ ವಿಷಯದಲ್ಲಿ ಸದ್ಯದ ಪರಿಸ್ಥಿತಿಗನುಸರಿಸಿ ಇರತಕ್ಕದ್ದು. ಆಂಬುಲನ್ಸದ ವ್ಯವಸ್ಥೆಯ ಬಗ್ಗೆ ಶಾಲೆಶಾಲೆಗಳಲ್ಲಿ ಮೇಲಾಟವಾಗುತ್ತಿರಬೇಕು.

(ಫ) ಜೀವ ಉಳಿಸುವದು :— ಮೇಲಿನ ತರಗತಿಗಳಲ್ಲಿದ್ದ ಬಾಲಕರು ಈಸು ಕಲಿತು ನೀರಿನಲ್ಲಿ ಮುಳುಗಿದವರನ್ನು ಉಳಿಸಿಕೊಳ್ಳುವ ಉಪಾಯವನ್ನೂ ಅದಕ್ಕೆ ಬೇಕಾಗುವ ಪ್ರಥಮಚಿಕಿತ್ಸೆಯನ್ನೂ ಕಲಿಯತಕ್ಕದ್ದು. ಈ ವಿಷಯದಲ್ಲಿ ಬಾಲಕರನ್ನು ಪರೀಕ್ಷಿಸಿ ತಜ್ಞರಾದವರಿಗೆ ಪದಕಗಳನ್ನು ಕೊಡಬೇಕು.

೨. ಶಾಲೆಯ ಆರೋಗ್ಯ :— (ಅ) ವರ್ಗದ ಕೋಣೆಗಳ **ಸ್ವಚ್ಛತೆ:—** ವರ್ಗದ ಕೋಣೆಗಳನ್ನು ಸ್ವಚ್ಛವಾಗಿಡುವ ಕಾರ್ಯವು ಬಾಲಕರದೆಂದು ತಿಳಿಯಬೇಕು. ವಾರಕ್ಕೊಂದರಂತೆ ಈ ಕಾರ್ಯಕ್ಕೆ ಬಾಲಕರ ಒಂದು ಗುಂಪನ್ನು ನೇಮಿಸಬೇಕು.

(ಬ) ಬಚ್ಚಲ ಮೋರಿಗಳು :— ಬಾಲಕರು ಶಾಲೆಯಲ್ಲಿದ್ದ ಬಚ್ಚಲ ಮೋರಿಗಳನ್ನೂ ಸಾಯಖಾನೆಗಳನ್ನೂ ಸ್ವಚ್ಛವಾಗಿಟ್ಟು ನೆಣಗಳಾಗದಂತೆ ನೋಡಿಕೊಳ್ಳತಕ್ಕದ್ದು.

(ಕ) ಆಟದ ಬೈಲುಗಳು :—ಶಾಲೆಯ ನೋಟವು ಸುಂದರವಾಗಿ ಕಾಣು ವಂತೆ ಸುತ್ತಲಿನ ಪ್ರದೇಶವನ್ನು ಸುಧಾರಿಸಿ ಆಟದ ಬೈಲುಗಳನ್ನು ಮಾಡಿಕೊಳ್ಳುವದು. ಯುರೋಪಖಂಡದಲ್ಲಿ ಬಾಲಕರು ವರ್ಗಣಿ ಹಣ ಕೂಡಿಸಿ ಬಡ ಹುಡುಗರಿಗಾಗಿ ಆಟದ ಬೈಲುಗಳನ್ನು ಮಾಡಿಟ್ಟು ಹುಡುಗರು ಓಣಿಗಳಲ್ಲಿ ಆಡದಂತೆ ವ್ಯವಸ್ಥೆ ಮಾಡಿರುವರು.

(ಡ) ಸ್ವಚ್ಛವಾದ ಕುಡಿಯುವ ನೀರಿನ ವ್ಯವಸ್ಥೆ :—ಇಂತಹ ನೀರು ಇಲ್ಲದ ಗ್ರಾಮಗಳಲ್ಲಿ ಬಾಲಕರು ವರ್ಗಣಿ ಹಣ ಕೂಡಿಸಿ ಸ್ವಚ್ಛವಾದ ಕುಡಿಯುವ ನೀರಿನ ವ್ಯವಸ್ಥೆ ಮಾಡತಕ್ಕದ್ದು.

೩ ಜನತೆಯ ಆರೋಗ್ಯ—(ಅ) ಶಿಶುಸಪ್ತಾಹ, ಆರೋಗ್ಯಸಪ್ತಾಹ—ಬಾಲಕರು ಶಿಶುಸಪ್ತಾಹಗಳಲ್ಲಿಯೂ ಆರೋಗ್ಯ ಸಪ್ತಾಹಗಳಲ್ಲಿಯೂ ಜಾಹೀರಪತ್ರಿಕೆಗಳನ್ನು ಹಚ್ಚುವದೂ, ತಮ್ಮ ಕೈಕೆಲಸಗಳನ್ನು ತೋರಿಸುವದೂ, ಆರೋಗ್ಯ ವಿಷಯಕ್ಕೆ ಸಂಬಂಧಿಸಿದ ಆಟಗಳನ್ನು ಆಡುವದೂ, ಕಮಿಟಿಯುವರು ಯುಕ್ತವೆಂದು ತಿಳಿದ ಬೇರೆ ಯಾವದೊಂದು ಕೆಲಸವನ್ನು ಮಾಡುವದೂ ಆವಶ್ಯಕವು.

(ಬ) ಪಿಡುಗುಗಳ ನಿವಾರಣೆಯ ಉಪಾಯುಗಳು—ಪಿಡುಗುಗಳು ಉದ್ಭವವಾಗದಂತೆ ನೊಣ, ಇಲಿ, ಸೊಳ್ಳೆಗಳು ಮೊದಲಾದವುಗಳ ನಾಶಕಾರಕ ಉಪಾಯುಗಳನ್ನು ಕೈಕೊಳ್ಳಬೇಕು. ಮತ್ತು ಅಲ್ಲಲ್ಲಿಯ ಹೆಲ್ಥಆಫೀಸರರಿಗೆ ಈ ವಿಷಯುವಾದ ಆವಶ್ಯಕ ಸಹಾಯುವನ್ನು ಮಾಡಬೇಕು.

(ಕ) ಹಳ್ಳಿಗಳ ಅಥವಾ ಪಟ್ಟಣಗಳ ಆರೋಗ್ಯ ಸಂಬಂಧದ ಸರ್ವ್ಹೆ—ಮೇಲಿನ ತರಗತಿಯ ಬಾಲಕರು ಸ್ಥಾನಿಕ ಆರೋಗ್ಯ ಪರಿಸ್ಥಿತಿಯುನ್ನು ನಿರೀಕ್ಷಿಸಿ ಕೊಳಚಿ ನೀರು ಹರಿದು ಹೋಗುವ ವ್ಯವಸ್ಥೆ, ಸ್ವಚ್ಛತೆ, ನೀರಿನ ಪೂರೈಕೆ, ಓಣಿಗಳನ್ನು ಸ್ವಚ್ಛವಿಡುವ ವ್ಯವಸ್ಥೆ ಮೊದಲಾದವುಗಳ ಬಗ್ಗೆ ರಿಪೋರ್ಟ ಬರೆಯುವದು. ಈ ಪ್ರಕಾರದ ಸರ್ವ್ಹೆಮಾಡುವದರಿಂದ ಹಳ್ಳಿಯ ಅಥವಾ ಪಟ್ಟಣದ ಆರೋಗ್ಯ ಸ್ಥಿತಿಯುನ್ನು ಸುಧಾರಿಸುವಲ್ಲಿ ಬಾಲಕರು ಏನುಮಾಡಬೇಕೆಂಬದು ತಿಳಿಯುವದು—

(ಡ) ಮೈಲೀ ತೆಗೆಯಿಸುವದು—ಎಲ್ಲ ಬಾಲಕರೂ ಮೈಲೀ ತೆಗೆಯಿಸಿಕೊಳ್ಳುವದಲ್ಲದೆ ಮೈಲೀ ತೆಗೆಯಿಸಿಕೊಳ್ಳುವದರಿಂದಾಗುವ ಲಾಭಗಳನ್ನು ಅಜ್ಞ ಜನರಿಗೆ ತಿಳಿಸಿ ಅವರು ತಮ್ಮ ಪಾಲಕರಿಗೆ ಮೈಲೀ ತೆಗೆಯಿಸುವಂತೆ ಉತ್ತೇಜನ ಕೊಡತಕ್ಕದ್ದು.

(ಈ) ಪ್ಲೇಗಿನ ಇನಾಕ್ಯುಲೇಶನ್ ಮಾಡಿಸುವದು—ಪಂಜಾಬ ಪ್ರಾಂತದಲ್ಲಿ ಪ್ಲೇಗ, ವಿಷಮಜ್ವರ ಮೊದಲಾದ ರೋಗಗಳ ಪರಿಹಾರಕ್ಕೆ ಇನಾಕ್ಯುಲೇಶನ್‌ಮಾಡುವ ವ್ಯವಸ್ಥೆಗೆ ಬಾಲಕರು ಬಹಳ ಸಾಹಾಯ್ಯಮಾಡಿದ್ದಾರೆ. ಇಂತಹ ರೋಗಗಳು ಉದ್ಭವವಾದಲ್ಲಿ ಬಾಲಕರು ತಾವು ಮೈಲೀ ತೆಗೆಯಿಸಿಕೊಳ್ಳುವದಲ್ಲದೆ ಎರಡನೆಯುವರಿಗೂ ಉಪದೇಶಮಾಡತಕ್ಕದ್ದು.

(ಬ) ಬೇನೆಯುವರಿಗೂ ಬಳಲುವವರಿಗೂ ಮಾಡತಕ್ಕ ಆರೈಕೆ—

(೧) ಆಸ್ಪತ್ರಿಗಳಲ್ಲಿದ್ದ ಕೂಸುಗಳಿಗೆ ಆಟಿಕೆಗಳನ್ನು ಕೊಡುವದು—ಆಸ್ಪತ್ರಿಗಳಲ್ಲಿ ಬೇನೆಯಿಂದ ಬಳಲುತ್ತಿದ್ದ ಮಕ್ಕಳಿಗೆ ಆಟಿಕೆಗಳನ್ನೂ, ಚಿತ್ರದ ಪುಸ್ತಕಗಳನ್ನೂ, ಹಣ್ಣು ಹೂಗಳನ್ನೂ ಕೊಡುವ ವ್ಯವಸ್ಥೆಮಾಡಬೇಕು.

(೨) **ಮಕ್ಕಳಿಗೆ ಅರಿವೆಗಳನ್ನು ಕೊಡುವದು**— ಬಾಲಿಕೆಯರು ಬಡ ಹೆಣ್ಣುಮಕ್ಕಳಿಗೂ ಕೂಸುಗಳಿಗೂ ಅರಿವೆಗಳನ್ನು ಹೊಲಿದು ಕೊಡತಕ್ಕದ್ದು. ಬಾಲಕರು ಅವಶ್ಯವಾದ ಸಾಮಾನುಗಳನ್ನು ಮಾಡಿಕೊಡತಕ್ಕದ್ದು. ಕೂಸುಗಳಿಗೆ ಅನುಕೂಲತೆಗಳನ್ನು ಜರಗಿಸಿ ಕೊಡುವ ಇಂಥ ಸಂಘಗಳಿಗೆ ಅರಿವೆ ಅಂಚಡಿ ಮೊದಲಾದ ವುಗಳನ್ನು ಪೂರೈಸಲಿಕ್ಕೆ ಅವಶ್ಯವಾದ ದ್ರವ್ಯಸಂಗ್ರಹವನ್ನು ಮಾಡಬೇಕು.

(೩) **ಊನರಿಗೆ ಅವಶ್ಯವಾದ ಸಾಧನಗಳನ್ನು ಪೂರೈಸುವದು** — ಊನರಿಗೆ ಅಂದರೆ ಕುಂಟರಿಗೆ ಕೋಲುಗಳನ್ನೂ, ಕೈಯಿಲ್ಲದವರಿಗೆ ಕೃತ್ರಿಮ ಕೈಗಳನ್ನೂ, ಕಡಿಮೆ ದೃಷ್ಟಿಯುಳ್ಳವರಿಗೆ ಕನ್ನಡಕಗಳನ್ನೂ ಪೂರೈಸುವದಕ್ಕೆ ದ್ರವ್ಯಸಂಗ್ರಹವನ್ನು ಬಾಲಕರು ಮಾಡಬೇಕು. ಅವಶ್ಯವಿದ್ದರೆ ಅವರಿಗೆ ಔಷಧೋಪಾಯಗಳನ್ನು ಮಾಡಿಸ ತಕ್ಕದ್ದು.

(೪) **ಬಡ ಹುಡುಗರಿಗೆ ಆಹಾರ ಅರಿವೆ ಪುಸ್ತಕಗಳನ್ನು ಕೊಡುವದು**— ಸ್ವಾರ್ಥತ್ಯಾಗಮಾಡಿ ಅಥವಾ ದ್ರವ್ಯದ ಸಂಗ್ರಹಮಾಡಿ ತಮ್ಮ ನೆರೆಯಲ್ಲಿದ್ದ ಬಡ ಹುಡುಗರಿಗೆ ಆಹಾರ, ಅರಿವೆ, ಪುಸ್ತಕಗಳನ್ನು ಕೊಡುವದಕ್ಕೆ ಬಾಲಕರಿಗೆ ಉತ್ತೇಜನ ಕೊಡಬೇಕು.

(೫) **ಸಂಕಟನಿವಾರಣೆ** – ಬರಗಾಲ, ಬೆಂಕಿ, ಭೂಕಂಪ, ನೆರೆಹಾವಳಿ, ನೀರಿನ ಕೊರತೆ ಮುಂತಾದ ಸಂಕಟಗಳಿಂದ ಪೀಡಿತರಾದ ಜನರಿಗೆ ಪ್ರಥಮ ಚಿಕಿತ್ಸೆಯನ್ನೂ, ಆಹಾರ ಅರಿವೆಗಳನ್ನೂ, ನಿರಾಶ್ರಿತರಿಗೆ ಉಳಿದ ಅನುಕೂಲತೆಗಳನ್ನೂ ಒದಗಿಸಿ ಕೊಡ ಲಿಕ್ಕೆ ಬಾಲಕರಿಗೆ ಉತ್ತೇಜನ ಕೊಡಬೇಕು.

(೬) ಬೈಲು ಪ್ರದೇಶದಲ್ಲಿ ಕೆಲವು ದಿವಸ ವಾಸಮಾಡುವದು— ಬಾಲಕರು ತಮ್ಮ ಸಲುವಾಗಿ ಆಗಲಿ, ಪಟ್ಟಣಗಳಲ್ಲಿಯ ಬಡವರ ಮಕ್ಕಳಿಗಾಗಲಿ ಶುದ್ಧ ಹವೆಯಲ್ಲಿ ಕೆಲವು ದಿವಸ ವಾಸಿಸಲಿಕ್ಕೆ ಅನುಕೂಲತೆಯನ್ನು ಒದಗಿಸಿಕೊಳ್ಳಬೇಕು. ಹೀಗೆ ವಾಸವನ್ನು ಮಾಡಿದಾಗ ಶಿಕ್ಷಕರು ಅವರ ಸಂಗಡ ಇದ್ದು ತಕ್ಕ ಆರೋಗ್ಯದ ವ್ಯವಸ್ಥೆಯನ್ನು ಮಾಡಬೇಕು.

(ಕ) ರಾಷ್ಟ್ರ ರಾಷ್ಟ್ರಗಳಲ್ಲಿ ಪ್ರೇಮ

(೧) **ಜಗತ್ತಿನಲ್ಲಿ ಶಾಂತಿಯುಂಟಾಗಬೇಕೆಂಬದರ ಬಗ್ಗೆ ಶಿಕ್ಷಣ—** ಬೇರೆ ಬೇರೆ ದೇಶಗಳ ಜನರಿಗೆ ಅಥವಾ ಬೇರೆ ಬೇರೆ ಜಾತಿಗಳ ಜನರಿಗೆ ನಿಃಸ್ವಾರ್ಥ ರೀತಿ

ಯಿಂದ ಸೇವೆ ಮಾಡಬೇಕೆಂಬದರ ಅಗತ್ಯವನ್ನು ಬಾಲಕರಿಗೆ ಕಲಿಸತಕ್ಕದ್ದು. ಪ್ರೌಢ ವಯಸ್ಸಿನ ಬಾಲಕರು ರಾಷ್ಟ್ರ ಸಂಘದ ನಿಯಮಗಳನ್ನು ಓದಿಕೊಂಡು ಹಿಂದುಸ್ಥಾನವು ಅದರಲ್ಲಿ ಹೇಗೆ ಪ್ರಯತ್ನಮಾಡುವದೆಂಬದನ್ನು ತಿಳಿದುಕೊಳ್ಳಬೇಕು.

(೨) **ಬೇರೆ ಬೇರೆ ಪ್ರಾಂತಗಳ ಶಾಲೆ ಶಾಲೆಗಳ ನಡುವೆ ಪತ್ರ ವ್ಯವಹಾರ**–ಪ್ರೌಢ ವಯಸ್ಸಿನ ಬಾಲಕರು ಹಿಂದುಸ್ಥಾನದ ಬೇರೆ ಬೇರೆ ಪ್ರಾಂತಗಳ, ಅಥವಾ ಬೇರೆ ದೇಶಗಳ ಶಾಲೆಗಳ ಬಾಲಕರ ಕೂಡ ಪತ್ರ ವ್ಯವಹಾರವುಳ್ಳ ಕೈಬರಹದ ಪುಸ್ತಕಗಳನ್ನು ಕಳಿಸಿಕೊಡತಕ್ಕದ್ದು. ಇಂತಹ ಪುಸ್ತಕಗಳಲ್ಲಿ ಪತ್ರಗಳೂ ಶಾಲೆಯಲ್ಲಿ ಮಾಡತಕ್ಕ ಉಳಿದ ಕೆಲಸಗಳೂ, ಚಿತ್ರಗಳೂ, ಭಾವಚಿತ್ರಗಳೂ, ಟಿಕೀಟುಗಳೂ, ಕಲೆ ಮತ್ತು ಕೈಕೆಲಸಗಳ ಮಾದರಿಗಳೂ ಇರತಕ್ಕದ್ದು. ಅವುಗಳನ್ನು ಶಾಲೆಯ ಬಾಲಕರೆಲ್ಲರೂ ಕೂಡಿ ಮಾಡಬಹುದು. ಯಾವ ಶಾಲೆಗೆ ಇಂತಹ ಪುಸ್ತಕಗಳು ಕಳಿಸಲ್ಪಡುವವೋ ಆ ಶಾಲೆಗಳ ಬಾಲಕರು ಅಂತಹ ಹೊಸ ಪುಸ್ತಕಗಳನ್ನು ಸಿದ್ಧಮಾಡಿ ತಿರುಗಿ ಕಳಿಸತಕ್ಕದ್ದು. ಇದರಿಂದ ಪರಸ್ಪರರಲ್ಲಿ ಪ್ರೇಮದ ಪತ್ರವ್ಯವಹಾರವು ನಡೆಯುವದು. ಹೀಗೆ ಸಮವಯಸ್ಕರಾದ ಬಾಲಕರಲ್ಲಿ ಪರಸ್ಪರ ಪ್ರೇಮವು ಹೆಚ್ಚಾಗುವದು. ಬೇರೆ ಪ್ರಾಂತಗಳಿಗೆ ಕಳಿಸುವಾಗ ಅವಶ್ಯವಾದ ಭಾಷಾಂತರವನ್ನು ಮುಖ್ಯ ಪಟ್ಟಣದಲ್ಲಿ ಮಾಡಿ ಕಳಿಸಬೇಕು.

(೩) **ಪರಸ್ಪರರಿಗೆ ಕಾಣಿಕೆಗಳನ್ನು ಕೊಡುವದು**–ಮಹಾಯುದ್ಧವು ಮುಗಿದನಂತರ ಯುರೋಪಖಂಡದ ದೇಶಗಳಲ್ಲಿ ಸಂಕಟವು ಒದಗಿದಾಗ ಕೆಲವು ದೇಶಗಳ ಬಾಲಕರು ಪೀಡಿತರಾದ ದೇಶಗಳ ಮಕ್ಕಳಿಗೆ ಕಾಣಿಕೆಗಳನ್ನು ಕಳಿಸಿಕೊಟ್ಟರು. ಹೀಗೆ ಮಾಡುವದರಿಂದ ಪರಸ್ಪರರಲ್ಲಿ ಮಿತ್ರತ್ವವು ಹೆಚ್ಚಾಗುವದು; ಮಕ್ಕಳಲ್ಲಿ ಪರೋಪಕಾರ ಮಾಡಬೇಕೆಂಬ ಬುದ್ಧಿಯು ಉಂಟಾಗುವದು. ಮತ್ತು ರೆಡ್‌ಕ್ರಾಸ ವ್ಯವಸ್ಥೆಯಿಂದ ರಾಷ್ಟ್ರ ರಾಷ್ಟ್ರಗಳಲ್ಲಿ ಪ್ರೇಮವುಂಟಾಗುವದು. ಹೀಗೆ ಬರ, ನೆರೆಹಾವಳಿ ಮುಂತಾದ ಸಂಕಟ ಸಮಯಗಳಲ್ಲಿ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಇಂಥ ಕಾಣಿಕೆಗಳನ್ನು ಕಳಿಸಬೇಕು.

(೪) **ಮಾಸಪತ್ರಿಕೆಗಳನ್ನು ಕಳಿಸಿಕೊಡುವದು**–ರೆಡ್‌ಕ್ರಾಸ ಸಂಘದ ಬಾಲಕರ ಶಾಲೆಗಳಿಂದ ಎಷ್ಟೋ ದೇಶಗಳಲ್ಲಿ ಬಾಲಕರ ರೆಡ್‌ಕ್ರಾಸ ಸಂಬಂಧದ ಮಾಸ ಪತ್ರಿಕೆಗಳು ಹೊರಡುವವು. ಅಂತಹ ಮಾಸಿಕಪತ್ರಿಕೆಗಳನ್ನು ಭಾಷಾಂತರದೊಂದಿಗೆ ಉಳಿದ ದೇಶಗಳಿಗೆ ಕಳಿಸಬೇಕು. ಈ ಭಾಷಾಂತರದ ಕಾರ್ಯವನ್ನು ರೆಡ್‌ಕ್ರಾಸ ಸೊಸೈಟಿಯ ಮುಖ್ಯ ಸಂಘಗಳು ಮಾಡುವವು.

(೪) ವ್ಯವಸ್ಥೆ

ಕೆಳಗೆ ಹೇಳಿದಂತೆ ರೆಡ್‌ಕ್ರಾಸದ ಕಾರ್ಯವ್ಯವಸ್ಥೆಯನ್ನು ಸ್ಥಾನಿಕಪರಿಸ್ಥಿತಿಗನುಸರಿಸಿ ಹೆಚ್ಚುಕಡಿಮೆಮಾಡಿಕೊಂಡು ಪ್ರಚಾರದಲ್ಲಿ ತರಬಹುದು.

(ಅ) **ಚಿಕ್ಕಮಕ್ಕಳ ಸಂಘ**—ಜ್ಯೂನಿಯರ ರೆಡ್‌ಕ್ರಾಸ ಸಂಘವನ್ನು ನಿಮ್ಮ ಶಾಲೆಯಲ್ಲಿ ಮಾಡಬೇಕೆಂದು ಇಚ್ಛಿಸಿದರೆ ನಿಮ್ಮ ಪ್ರಾಂತದ ರೆಡ್‌ಕ್ರಾಸ ಮುಖ್ಯ ಕಚೇರಿ ಇದ್ದಲ್ಲಿಗೆ ಪೋಷ್ಟಕಾರ್ಡಿನಿಂದ ಬರೆದು ಸಭಾಸದರಾಗಲಿಕ್ಕೆ ಅವಶ್ಯವಾದ ಅರ್ಜಿಯ ನಮೂನೆಗಳನ್ನು ಕಳಿಸಬೇಕೆಂದು ಬಿನ್ನಯಿಸಿಕೊಳ್ಳಬೇಕು. ಈ ನಮೂನೆಯು ಬಂದಮೇಲೆ ಇಡೀ ಶಾಲೆಯ ಸಭೆಯನ್ನು ಕೂಡಿಸಿ ಶಾಲಾ ಶಿಕ್ಷಕರ ಹಾಗು ಅಧಿಕಾರಿಗಳ ಸಮಕ್ಷಮ ರೆಡ್‌ಕ್ರಾಸ ಸಂಘದ ಉಪಯುಕ್ತತೆಯನ್ನು ವಿವರಿಸಿ ಹೇಳತಕ್ಕದ್ದು. ಅವಶ್ಯವಿದ್ದರೆ ರೆಡ್‌ಕ್ರಾಸದಲ್ಲಿ ನುರಿತ ಭಾಷಣಕಾರನನ್ನು ಕರೆಯಿಸತಕ್ಕದ್ದು. ಸಭೆಯು ಮುಗಿವಕಾಲಕ್ಕೆ ಈ ಸಂಘದ ಸಭಾಸದರಾಗಲಿಕ್ಕೆ ಇಚ್ಛಿಸುವ ಬಾಲಕರ ಹೆಸರುಗಳನ್ನು ಬರೆದುಕೊಳ್ಳಬೇಕು. ಆ ಮೇಲೆ ಆ ನಮೂನೆಯನ್ನು ತುಂಬಿ ಮುಖ್ಯ ಕಚೇರಿಗೆ ೧ ರೂ ಫೀ ಸಹಿತ ಕಳಿಸಿಕೊಡತಕ್ಕದ್ದು. ನಿಮಗೆ ಸಭಾಸದರೆಂಬದನ್ನು ಸೂಚಿಸುವ ಗುಂಡಿಗಳು ಬೇಕಾಗಿದ್ದರೆ ೧ ಗುಂಡಿಗೆ ೧ ಆಣೆಯಂತೆ ಹಣ ಕಳಿಸಿಕೊಡಿರಿ. ಆ ನಂತರ ಮುಖ್ಯ ಕಚೇರಿಯಿಂದ ನಿಮ್ಮ ಸಂಘವು ರಜಿಸ್ಟರ ಆದಬಗ್ಗೆ ಸರ್ಟಿಫಿಕೇಟವೂ, ಸಭಾಸದರ ಹಾಜರಿ ಪತ್ರಕವೂ, ಗುಂಡಿಗಳೂ ಬರುವವು. ನಿಮ್ಮ ಸಂಘದ ಮುಖ್ಯಸ್ಥರ ಹಾಗು ಸಭಾಸದರ ಹೆಸರುಗಳನ್ನು ಈ ಪತ್ರದಮೇಲೆ ಬರೆದು ಒಡೆದು ಕಾಣಿಸುವಂತೆ ಹೊರಗೆ ಹಚ್ಚತಕ್ಕದ್ದು. ಆನಂತರ ನಿಮ್ಮ ಸಭಾಸದರ ಸಭೆಮಾಡಿ ನಿಮ್ಮ ಮುಖ್ಯಸ್ಥರನ್ನು (ಚೇರಮನ್, ವ್ಹಾ.ಚೇರಮನ್, ಟ್ರೇಝರರ, ಸೆಕ್ರೆಟರಿಗಳನ್ನು) ಆರಿಸಿಕೊಳ್ಳಿರಿ. ಮತ್ತು ಮುಂದಿನ ಷಾಣ್ಮಾಸಿಕದಲ್ಲಿ ಯಾವ ಕಾರ್ಯಕ್ರಮ ಕೈಕೊಳ್ಳಬೇಕೆಂಬದನ್ನು ಗೊತ್ತು ಮಾಡಿರಿ.

(ಬ) **ಸ್ಥಾನಿಕ ರೆಡ್‌ಕ್ರಾಸ ಸಂಘದಕೂಡ ವ್ಯವಹಾರ**— ಊರಲ್ಲಿ ರೆಡ್‌ಕ್ರಾಸ ಸಂಘದ ಕೇಂದ್ರವಿದ್ದರೆ ಕೆಳಗೆ ಹೇಳಿದ ಸಭಾಸದರುಳ್ಳ ಒಂದು ಜ್ಯೂನಿಯರ ರೆಡ್‌ಕ್ರಾಸ ಕಮಿಟಿಯನ್ನು ಏರ್ಪಡಿಸತಕ್ಕದ್ದು. ಅದರಲ್ಲಿ ಜ್ಯೂನಿಯರ ಸಂಘಗಳಲ್ಲಿದ್ದ ಶಾಲೆಯ ಶಿಕ್ಷಕರೂ ಸ್ಥಾನಿಕ ಶಿಕ್ಷಣ ಸಂಘದ ಪ್ರತಿನಿಧಿಯೂ ಮತ್ತು ರೆಡ್‌ಕ್ರಾಸ ಸಂಘದ ಒಬ್ಬ ಪ್ರತಿನಿಧಿಯೂ ಇರಬೇಕು. ಈ ಕಮಿಟಿಯು ಜ್ಯೂನಿಯರ ರೆಡ್‌ಕ್ರಾಸ ಸಂಘದ ಉದ್ದೇಶಗಳನ್ನು ತಿಳಿಸಲಿಕ್ಕೂ ಉಳಿದ ಶಿಕ್ಷಕರಿಗೆ ಈ ಕಾರ್ಯದಲ್ಲಿ ಪ್ರವರ್ತರಾಗಲಿಕ್ಕೂ ಅವಶ್ಯವುಳ್ಳ ದ್ರವ್ಯಸಂಗ್ರಹವನ್ನು ಮಾಡಲಿಕ್ಕೂ ಪ್ರಯತ್ನಿಸಬೇಕು. ಸ್ಥಾನಿಕ ರೆಡ್‌ಕ್ರಾಸ ಸಂಘವು ಇಂಥ ಜ್ಯೂನಿಯರ ರೆಡ್‌ಕ್ರಾಸ ಸಂಘಗಳಿಗೆ ಸಹಾಯ ಮಾಡಲಿಕ್ಕೆ ಪ್ರಯತ್ನಿಸತಕ್ಕದ್ದು. ಶಿಕ್ಷಣ ದೃಷ್ಟಿಯಿಂದ ಉಂಟಾಗುವ ಲಾಭಗಳ ಹೊರತಾಗಿ ಇಂಥ ಸಂಘಗಳು ಪ್ರೌಢಜನರನ್ನು ರೆಡ್‌ಕ್ರಾಸದ ಕೆಲಸಕ್ಕೆ ಸಿದ್ಧಮಾಡುವದಕ್ಕೆ ಬಹಳ ಉಪಯುಕ್ತವಾಗುವವು. ಮತ್ತು ಹುಡುಗರಿಗೆ ರೆಡ್‌ಕ್ರಾಸ ಸಂಘದ ಎಲ್ಲ ಕೆಲಸಗಳಲ್ಲಿ ಶಿಕ್ಷಣವು ದೊರೆಯುವದು.

(ಕ) **ಪ್ರಾಂತಿಕ ಮಧ್ಯವರ್ತಿ ಕಚೇರಿಯ ಕೂಡ ವ್ಯವಹಾರ** — ಪ್ರತಿಯೊಂದು ಪ್ರಾಂತದ ರೆಡ್‌ಕ್ರಾಸ ಸಂಘದ ಮುಖ್ಯ ಕಚೇರಿಯಲ್ಲಿ ಒಂದು ಜ್ಯೂನಿ

ಯಿಂದ ಸೇವೆ ಮಾಡಬೇಕೆಂಬದರ ಅಗತ್ಯವನ್ನು ಬಾಲಕರಿಗೆ ಕಲಿಸತಕ್ಕದ್ದು. ಪ್ರೌಢ ವಯಸ್ಸಿನ ಬಾಲಕರು ರಾಷ್ಟ್ರ ಸಂಘದ ನಿಯಮಗಳನ್ನು ಓದಿಕೊಂಡು ಹಿಂದುಸ್ಥಾನವು ಅದರಲ್ಲಿ ಹೇಗೆ ಪ್ರಯತ್ನಮಾಡುವದೆಂಬದನ್ನು ತಿಳಿದುಕೊಳ್ಳಬೇಕು.

(೨) **ಬೇರೆ ಬೇರೆ ಪ್ರಾಂತಗಳ ಶಾಲೆ ಶಾಲೆಗಳ ನಡುವೆ ಪತ್ರ ವ್ಯವಹಾರ** -ಪ್ರೌಢ ವಯಸ್ಸಿನ ಬಾಲಕರು ಹಿಂದುಸ್ಥಾನದ ಬೇರೆ ಬೇರೆ ಪ್ರಾಂತಗಳ, ಅಥವಾ ಬೇರೆ ದೇಶಗಳ ಶಾಲೆಗಳ ಬಾಲಕರ ಕೂಡ ಪತ್ರ ವ್ಯವಹಾರವುಳ್ಳ ಕೈಬರಹದ ಪುಸ್ತಕಗಳನ್ನು ಕಳಿಸಿಕೊಡತಕ್ಕದ್ದು. ಇಂತಹ ಪುಸ್ತಕಗಳಲ್ಲಿ ಪತ್ರಗಳೂ ಶಾಲೆಯಲ್ಲಿ ಮಾಡತಕ್ಕ ಉಳಿದ ಕೆಲಸಗಳೂ, ಚಿತ್ರಗಳೂ, ಭಾವಚಿತ್ರಗಳೂ, ಟಿಕೀಟುಗಳೂ, ಕಲೆ ಮತ್ತು ಕೈಕೆಲಸಗಳ ಮಾದರಿಗಳೂ ಇರತಕ್ಕದ್ದು. ಅವುಗಳನ್ನು ಶಾಲೆಯ ಬಾಲಕರೆಲ್ಲರೂ ಕೂಡಿ ಮಾಡಬಹುದು. ಯಾವ ಶಾಲೆಗೆ ಇಂತಹ ಪುಸ್ತಕಗಳು ಕಳಿಸಲ್ಪಡುವವೋ ಆ ಶಾಲೆಗಳ ಬಾಲಕರು ಅಂತಹ ಹೊಸ ಪುಸ್ತಕಗಳನ್ನು ಸಿದ್ಧಮಾಡಿ ತಿರುಗಿ ಕಳಿಸತಕ್ಕದ್ದು. ಇದರಿಂದ ಪರಸ್ಪರರಲ್ಲಿ ಪ್ರೇಮದ ಪತ್ರವ್ಯವಹಾರವು ನಡೆಯುವದು. ಹೀಗೆ ಸಮವಯಸ್ಕರಾದ ಬಾಲಕರಲ್ಲಿ ಪರಸ್ಪರ ಪ್ರೇಮವು ಹೆಚ್ಚಾಗುವದು. ಬೇರೆ ಪ್ರಾಂತಗಳಿಗೆ ಕಳಿಸುವಾಗ ಅವಶ್ಯವಾದ ಭಾಷಾಂತರವನ್ನು ಮುಖ್ಯ ಪಟ್ಟಣದಲ್ಲಿ ಮಾಡಿ ಕಳಿಸಬೇಕು.

(೩) **ಪರಸ್ಪರರಿಗೆ ಕಾಣಿಕೆಗಳನ್ನು ಕೊಡುವದು**-ಮಹಾಯುದ್ಧವು ಮುಗಿದನಂತರ ಯುರೋಪಖಂಡದ ದೇಶಗಳಲ್ಲಿ ಸಂಕಟವು ಒದಗಿದಾಗ ಕೆಲವು ದೇಶಗಳ ಬಾಲಕರು ಪೀಡಿತರಾದ ದೇಶಗಳ ಮಕ್ಕಳಿಗೆ ಕಾಣಿಕೆಗಳನ್ನು ಕಳಿಸಿಕೊಟ್ಟರು. ಹೀಗೆ ಮಾಡುವದರಿಂದ ಪರಸ್ಪರರಲ್ಲಿ ಮಿತ್ರತ್ವವು ಹೆಚ್ಚಾಗುವದು; ಮಕ್ಕಳಲ್ಲಿ ಪರೋಪಕಾರ ಮಾಡಬೇಕೆಂಬ ಬುದ್ಧಿಯು ಉಂಟಾಗುವದು. ಮತ್ತು ರೆಡ್‌ಕ್ರಾಸ ವ್ಯವಸ್ಥೆಯಿಂದ ರಾಷ್ಟ್ರ ರಾಷ್ಟ್ರಗಳಲ್ಲಿ ಪ್ರೇಮವುಂಟಾಗುವದು. ಹೀಗೆ ಬರ, ನೆರೆಹಾವಳಿ ಮುಂತಾದ ಸಂಕಟ ಸಮಯಗಳಲ್ಲಿ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಇಂಥ ಕಾಣಿಕೆಗಳನ್ನು ಕಳಿಸಬೇಕು.

(೪) **ಮಾಸಪತ್ರಿಕೆಗಳನ್ನು ಕಳಿಸಿಕೊಡುವದು**- ರೆಡ್‌ಕ್ರಾಸ ಸಂಘದ ಬಾಲಕರ ಶಾಲೆಗಳಿಂದ ಎಷ್ಟೋ ದೇಶಗಳಲ್ಲಿ ಬಾಲಕರ ರೆಡ್‌ಕ್ರಾಸ ಸಂಬಂಧದ ಮಾಸ ಪತ್ರಿಕೆಗಳು ಹೊರಡುವವು. ಅಂತಹ ಮಾಸಿಕಪತ್ರಿಕೆಗಳನ್ನು ಭಾಷಾಂತರದೊಂದಿಗೆ ಉಳಿದ ದೇಶಗಳಿಗೆ ಕಳಿಸಬೇಕು. ಈ ಭಾಷಾಂತರದ ಕಾರ್ಯವನ್ನು ರೆಡ್‌ಕ್ರಾಸ ಸೊಸೈಟಿಯ ಮುಖ್ಯ ಸಂಘಗಳು ಮಾಡುವವು.

(೪) ವ್ಯವಸ್ಥೆ

ಕೆಳಗೆ ಹೇಳಿದಂತೆ ರೆಡ್‌ಕ್ರಾಸದ ಕಾರ್ಯವ್ಯವಸ್ಥೆಯನ್ನು ಸ್ಥಾನಿಕಪರಿಸ್ಥಿತಿಗನುಸರಿಸಿ ಹೆಚ್ಚುಕಡಿಮೆಮಾಡಿಕೊಂಡು ಪ್ರಚಾರದಲ್ಲಿ ತರಬಹುದು.

(ಅ) **ಚಿಕ್ಕಮಕ್ಕಳ ಸಂಘ**—ಜ್ಯೂನಿಯರ ರೆಡ್‌ಕ್ರಾಸ ಸಂಘವನ್ನು ನಿಮ್ಮ ಶಾಲೆಯಲ್ಲಿ ಮಾಡಬೇಕೆಂದು ಇಚ್ಛಿಸಿದರೆ ನಿಮ್ಮ ಪ್ರಾಂತದ ರೆಡ್‌ಕ್ರಾಸ ಮುಖ್ಯ ಕಚೇರಿ ಇದ್ದಲ್ಲಿಗೆ ಪೋಷ್ಟಕಾರ್ಡಿನಿಂದ ಬರೆದು ಸಭಾಸದರಾಗಲಿಕ್ಕೆ ಅವಶ್ಯವಾದ ಅರ್ಜಿಯ ನಮೂನೆಗಳನ್ನು ಕಳಿಸಬೇಕೆಂದು ಬಿನ್ನಯಿಸಿಕೊಳ್ಳಬೇಕು. ಈ ನಮೂನೆಯು ಬಂದಮೇಲೆ ಇಡೀ ಶಾಲೆಯ ಸಭೆಯನ್ನು ಕೂಡಿಸಿ ಶಾಲಾ ಶಿಕ್ಷಕರ ಹಾಗು ಅಧಿಕಾರಿಗಳ ಸಮಕ್ಷಮ ರೆಡ್‌ಕ್ರಾಸ ಸಂಘದ ಉಪಯುಕ್ತತೆಯನ್ನು ವಿವರಿಸಿ ಹೇಳತಕ್ಕದ್ದು. ಅವಶ್ಯವಿದ್ದರೆ ರೆಡ್‌ಕ್ರಾಸದಲ್ಲಿ ನುರಿತ ಭಾಷಣಕಾರನನ್ನು ಕರೆಯಿಸತಕ್ಕದ್ದು. ಸಭೆಯು ಮುಗಿವಕಾಲಕ್ಕೆ ಈ ಸಂಘದ ಸಭಾಸದರಾಗಲಿಕ್ಕೆ ಇಚ್ಛಿಸುವ ಬಾಲಕರ ಹೆಸರುಗಳನ್ನು ಬರೆದುಕೊಳ್ಳಬೇಕು. ಆ ಮೇಲೆ ಆ ನಮೂನೆಯನ್ನು ತುಂಬಿ ಮುಖ್ಯ ಕಚೇರಿಗೆ ೧ ರೂ ಫೀ ಸಹಿತ ಕಳಿಸಿಕೊಡತಕ್ಕದ್ದು. ನಿಮಗೆ ಸಭಾಸದರೆಂಬದನ್ನು ಸೂಚಿಸುವ ಗುಂಡಿಗಳು ಬೇಕಾಗಿದ್ದರೆ ೧ ಗುಂಡಿಗೆ ೧ ಆಣೆಯಂತೆ ಹಣ ಕಳಿಸಿಕೊಡಿರಿ. ಆ ನಂತರ ಮುಖ್ಯ ಕಚೇರಿಯಿಂದ ನಿಮ್ಮ ಸಂಘವು ರಜಿಸ್ತರ ಆದಬಗ್ಗೆ ಸರ್ಟಿಫಿಕೇಟವೂ, ಸಭಾಸದರ ಹಾಜರಿ ಪತ್ರಕವೂ, ಗುಂಡಿಗಳೂ ಬರುವವು. ನಿಮ್ಮ ಸಂಘದ ಮುಖ್ಯಸ್ಥರ ಹಾಗು ಸಭಾಸದರ ಹೆಸರುಗಳನ್ನು ಈ ಪತ್ರದಮೇಲೆ ಬರೆದು ಒಡೆದು ಕಾಣಿಸುವಂತೆ ಗೋಡೆಗೆ ಹಚ್ಚತಕ್ಕದ್ದು. ಆನಂತರ ನಿಮ್ಮ ಸಭಾಸದರ ಸಭೆಮಾಡಿ ನಿಮ್ಮ ಮುಖ್ಯಸ್ಥರನ್ನು (ಚೇರಮನ್, ವ್ಹಾ.ಚೇರಮನ್, ಟ್ರೇಝರರ, ಸೆಕ್ರೆಟರಿಗಳನ್ನು) ಆರಿಸಿಕೊಳ್ಳಿರಿ. ಮತ್ತು ಮುಂದಿನ ಷಾಣ್ಮಾಸಿಕದಲ್ಲಿ ಯಾವ ಕಾರ್ಯಕ್ರಮ ಕೈಕೊಳ್ಳಬೇಕೆಂಬದನ್ನು ಗೊತ್ತು ಮಾಡಿರಿ.

(ಬ) **ಸ್ಥಾನಿಕ ರೆಡ್‌ಕ್ರಾಸ ಸಂಘದಕೂಡ ವ್ಯವಹಾರ**— ಊರಲ್ಲಿ ರೆಡ್‌ಕ್ರಾಸ ಸಂಘದ ಕೇಂದ್ರವಿದ್ದರೆ ಕೆಳಗೆ ಹೇಳಿದ ಸಭಾಸದರುಳ್ಳ ಒಂದು ಜ್ಯೂನಿಯರ ರೆಡ್‌ಕ್ರಾಸ ಕಮೀಟಿಯನ್ನು ನಿರ್ಮಿಸತಕ್ಕದ್ದು. ಅದರಲ್ಲಿ ಜ್ಯೂನಿಯರ ಸಂಘಗಳಲ್ಲಿದ್ದ ಶಾಲೆಯ ಶಿಕ್ಷಕರೂ ಸ್ಥಾನಿಕ ಶಿಕ್ಷಣ ಸಂಘದ ಪ್ರತಿನಿಧಿಯೂ ಮತ್ತು ರೆಡ್‌ಕ್ರಾಸ ಸಂಘದ ಒಬ್ಬ ಪ್ರತಿನಿಧಿಯೂ ಇರಬೇಕು. ಈ ಕಮೀಟಿಯು ಜ್ಯೂನಿಯರ ರೆಡ್‌ಕ್ರಾಸ ಸಂಘದ ಉದ್ದೇಶಗಳನ್ನು ತಿಳಿಸಲಿಕ್ಕೂ ಉಳಿದ ಶಿಕ್ಷಕರಿಗೆ ಈ ಕಾರ್ಯದಲ್ಲಿ ಪ್ರವರ್ತರಾಗಲಿಕ್ಕೂ ಅವಶ್ಯವುಳ್ಳ ದ್ರವ್ಯಸಂಗ್ರಹವನ್ನು ಮಾಡಲಿಕ್ಕೂ ಪ್ರಯತ್ನಿಸಬೇಕು. ಸ್ಥಾನಿಕ ರೆಡ್‌ಕ್ರಾಸ ಸಂಘವು ಇಂಥ ಜ್ಯೂನಿಯರ ರೆಡ್‌ಕ್ರಾಸ ಸಂಘಗಳಿಗೆ ಸಹಾಯ ಮಾಡಲಿಕ್ಕೆ ಪ್ರಯತ್ನಿಸತಕ್ಕದ್ದು. ಶಿಕ್ಷಣ ದೃಷ್ಟಿಯಿಂದ ಉಂಟಾಗುವ ಲಾಭಗಳ ಜೊತೆಗಾಗಿ ಇಂಥ ಸಂಘಗಳು ಪ್ರೌಢಜನರನ್ನು ರೆಡ್‌ಕ್ರಾಸದ ಕೆಲಸಕ್ಕೆ ಸಿದ್ಧಮಾಡುವದಕ್ಕೆ ಬಹಳ ಉಪಯುಕ್ತವಾಗುವವು. ಮತ್ತು ಹುಡುಗರಿಗೆ ರೆಡ್‌ಕ್ರಾಸ ಸಂಘದ ಎಲ್ಲ ಕೆಲಸಗಳಲ್ಲಿ ಶಿಕ್ಷಣವು ದೊರೆಯುವದು.

(ಕ) **ಪ್ರಾಂತಿಕ ಮಧ್ಯವರ್ತಿ ಕಚೇರಿಯ ಕೂಡ ವ್ಯವಹಾರ** — ಪ್ರತಿಯೊಂದು ಪ್ರಾಂತದ ರೆಡ್‌ಕ್ರಾಸ ಸಂಘದ ಮುಖ್ಯ ಕಚೇರಿಯಲ್ಲಿ ಒಂದು ಜ್ಯೂನಿ

ಯರ ರೆಡ್‌ಕ್ರಾಸ ಕಮೀಟಿಯು ನ್ಯಾ ್ಯೂಯು ಇರತಕ್ಕದ್ದು. ಈ ಕಮೀಟಿಯು ಚೇರ್ಮನ್ನರು ಶಕ್ಯವಿದ್ದಲ್ಲಿ ಡಾಯರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ ಇವರು ಇರತಕ್ಕದ್ದು. ಶಾಲೆಗಳಿಗೆ ಹೊಂದಿ ಇದ್ದ ಜ್ಯೂನಿಯರ್ ರೆಡ್‌ಕ್ರಾಸ ಸಂಘಗಳು, ಈ ಕಮೀಟಿಯ ಸೆಕ್ರೆಟರಿಯು ಕೂಡ ಪತ್ರವ್ಯವಹಾರವನ್ನು ಮಾಡಬೇಕು. ಆ ಸೆಕ್ರೆಟರಿಯು ಅವಶ್ಯವಿದ್ದ ಕಾಗದ ಪತ್ರಗಳನ್ನು ಹಿಂದುಸ್ಥಾನದ ರೆಡ್‌ಕ್ರಾಸ ಸಂಘದ ಮುಖ್ಯ ಕಚೇರಿಗೆ ಕಳಿಸುವನು.

(ಡ) **ದ್ರವ್ಯಸಂಗ್ರಹ**— ಶಕ್ಯವಿದ್ದಲ್ಲಿ ಜ್ಯೂನಿಯರ್ ಸಂಘದ ಸಭಾಸದರು ಮೆಂಬರಸಿಪ್‌ದ ಬಗ್ಗೆ ಒಂದುರೂಪಾಯಿ ಫೀಯನ್ನೂ ತನಗೆ ಬೇಕಾದ ಗುಂಡಿಗಳ ಬಗ್ಗೆ ಗುಂಡಿಗೆ ಒಂದು ಆಣೆಯಂತೆ ಹಣವನ್ನೂ ಕೊಡತಕ್ಕದ್ದು. ಬಡಹುಡುಗರ ಸಲುವಾಗಿ ಶಾಲಾಧಿಕಾರಿಗಳಿಂದಾಗಲಿ, ಸ್ಥಾನಿಕ ರೆಡ್‌ಕ್ರಾಸ ಸಂಘದಿಂದಾಗಲಿ, ಉದಾರ ಗೃಹಸ್ಥರಿಂದಾಗಲಿ ಈ ಹಣವನ್ನು ಕೂಡಿಸತಕ್ಕದ್ದು. ಆದರೆ **ಬಾಲಕರು ಈ ಹಣವನ್ನು ತಾವಾಗಿಯೇ ಬೇಡಲಿಕ್ಕೆ ಹೋಗತಕ್ಕದ್ದಲ್ಲ.**

ಜ್ಯೂನಿಯರ್ ರೆಡ್‌ಕ್ರಾಸದ ಸಂಘಗಳ ಕಾರ್ಯಗಳಿಗೆ ಬೇಕಾಗುವ ಹಣವನ್ನು ಪಾಲಕರು ತಮಗೆ ಕೊಟ್ಟ ಹಣದೊಳಗಿಂದ ಉಳಿಸಿಯಾಗಲಿ, ತಾವು ಬೆಳಿಸಿದ ತೋಟದ ಪೈರಿನ ಮಾರಾಟದಿಂದಾಗಲಿ, ಮಾಡಿದ ವಸ್ತುಗಳ ಮಾರಾಟದಿಂದಾಗಲಿ, ಆಟ, ನಾಟಕ, ಮೊದಲಾದವುಗಳನ್ನು ಮಾಡಿಯಾಗಲಿ ಬಾಲಕರು ಹಣವನ್ನು ಕೂಡಿಸಬೇಕು. ಈ ವಿಷಯದಲ್ಲಿ ದ್ರವ್ಯಸಂಗ್ರಹಕ್ಕಿಂತಲೂ ಸಮಾಜ ಸೇವೆಯ ಧ್ಯೇಯವೇ ಹೆಚ್ಚಿನದೆಂದು ತಿಳಿಸಬೇಕು. ಆದದರಿಂದ ಈ ಕಾರ್ಯಗಳನ್ನು ಬಾಲಕರಿಗೆ ಬಿಟ್ಟುಕೊಟ್ಟರೆ ತಕ್ಕ ಉಪಾಯಗಳನ್ನು ಅವರೇ ಕೈಕೊಳ್ಳುವರೆಂಬದು ಕಂಡುಬಂದದೆ.

(ಇ) **ಶಿಕ್ಷಕರಿಗೆ ಮನ್ನಣೆ** — ಜ್ಯೂನಿಯರ್ ರೆಡ್‌ಕ್ರಾಸ ಸಂಘಗಳನ್ನು ಉಂಟುಮಾಡುವದಕ್ಕೂ ಅವುಗಳಿಗೆ ತಕ್ಕ ಉಪದೇಶವನ್ನು ಕೊಡುವದಕ್ಕೂ ಪ್ರಯತ್ನ ಮಾಡುವ ಶಿಕ್ಷಕರಿಗೆ ಆ ಸಂಘವು ಅಸ್ತಿತ್ವದಲ್ಲಿ ಬಂದನಂತರ ಮಧ್ಯವರ್ತಿ ಕಚೇರಿಯಿಂದ ಒಂದು ಸರ್ಟಿಫಿಕೇಟನ್ನು ಕೊಟ್ಟು ಕಳುಹಿಸುವರು. ಮತ್ತು ಬಿಟ್ಟುಬಿಡದೆ ತಕ್ಕ ಸಹಾಯವನ್ನು ಮಾಡುವವರಿಗೆ ತಕ್ಕ "ಬ್ಯಾಜ್" ಕೊಡುವರು.

(ಈ) **ಶಿಕ್ಷಣದ ದೃಷ್ಟಿಯಿಂದ ಮಹತ್ವ** — ಶಿಕ್ಷಣ ವಿಷಯದಲ್ಲಿ ಜ್ಯೂನಿಯರ್ ರೆಡ್‌ಕ್ರಾಸ ಸಂಘದಿಂದ ಆಗತಕ್ಕ ಮಹತ್ವದ ಕಾರ್ಯವನ್ನು ಅತ್ಯುಚ್ಚ ಶಿಕ್ಷಣಾಧಿಕಾರಿ ಸಂಘಗಳು ಮನ್ನಿಸುವವು. ೧೯೩೪ ರಲ್ಲಿ ಬೆಲ್‌ಗ್ರೇಡ್ ಪಟ್ಟಣದಲ್ಲಿ ನೆರೆದ "ಮಾಧ್ಯಮಿಕ ಶಿಕ್ಷಕರ ಅಂತರ ರಾಷ್ಟ್ರೀಯ ಸಂಘವು" ಆರೋಗ್ಯವರ್ಧನದ ವಿಚಾರಗಳನ್ನು ಹರಡಲಿಕ್ಕೂ, ಬಾಲಕರ ಪರೋಪಕಾರ ಬುದ್ಧಿಯನ್ನು ಬೆಳಿಸಲಿಕ್ಕೂ, ಅಂತರ ರಾಷ್ಟ್ರೀಯ ಪ್ರೇಮವನ್ನು ವೃದ್ಧಿಗೊಳಿಸಲಿಕ್ಕೂ ಉತ್ತಮ ಸಾಧನವೆಂದು ಅಭಿಪ್ರಾಯಪಟ್ಟಿರುವರು. ಸನ್ ೧೯೩೩ ರಲ್ಲಿ ಸಾನ್‌ಫ್ರಾನ್ಸಿಸ್ಕೋ ಪಟ್ಟಣದಲ್ಲಿ ನೆರೆದ ಶಿಕ್ಷಣ ಸಂಸ್ಥೆಗಳ ಮೊದಲನೆಯ ಸಂಯುಕ್ತ ಮಂಡಲಗಳು ಇತಿಹಾಸ, ಭೂಗೋಲ, ನಾಗರಿ

ಕತೆ ಈ ವಿಷಯುಗಳನ್ನು ಕಲಿಸಲಿಕ್ಕೆ ಜ್ಯೂನಿಯರ್ ರೆಡ್‌ಕ್ರಾಸ ಸಂಘವು ರಾಷ್ಟ್ರ-ರಾಷ್ಟ್ರಗಳಲ್ಲಿ ಪತ್ರವ್ಯವಹಾರ ಬೆಳಿಸತಕ್ಕದ್ದೆಂದು ಅಭಿಪ್ರಾಯಪಟ್ಟಿತು. ಜುಲೈ ೧೯೩೭ ರಲ್ಲಿ ಪ್ಯಾರೀಸ ಪಟ್ಟಣದಲ್ಲಿ, ರೆಡ್‌ಕ್ರಾಸ ಸಂಘಗಳ ಮುಖ್ಯ ಸಂಘದವರು ಕೂಡಿಸಿದ ಶಿಕ್ಷಣಜ್ಞರ ಅಂತರರಾಷ್ಟ್ರೀಯ ಸಮ್ಮೇಲನದಲ್ಲಿ ಕೆಳಗೆ ಬರೆದ ನಿರ್ಣಯ ವನ್ನು ಗೊತ್ತುಪಡಿಸಿದರು.

"ಜ್ಯೂನಿಯರ್ ರೆಡ್‌ಕ್ರಾಸ ಸಂಘಗಳು ನಡಿಸತಕ್ಕ ಪತ್ರವ್ಯವಹಾರಗಳು ಶಿಕ್ಷಕರ ಒತ್ತಾಯದಿಂದ ನಡೆಯತಕ್ಕದ್ದಲ್ಲ. ಬಾಲಕರು ಸ್ವಯಂಸ್ಫೂರ್ತಿಯಿಂದ ಬೇರೆ ಬೇರೆ ದೇಶಗಳ ಬಾಲಕರ ವಿಷಯುವಾಗಿ ಜ್ಞಾನವನ್ನು ಮಾಡಿಕೊಳ್ಳಬೇಕೆಂಬ ಲವಲವಿಕೆಯ ಪೂರೈಕೆಯು ಇದರಿಂದ ಆಗುತ್ತದೆ. ಬಾಲಕರು ತಮಗೆ ಪ್ರೀತಿಯುಳ್ಳ ವಿಷಯುಗಳ ವಿಚಾರವನ್ನು ಮಾಡುವದಕ್ಕೂ, ಅವರು ಮಾಡಬೇಕೆಂದೆನಿಸುವ ಕಾರ್ಯಗಳನ್ನು ಕೈಕೊಳ್ಳುವದಕ್ಕೂ ಪ್ರಸಂಗವನ್ನು ಕೊಟ್ಟಂತೆ ಅದರಿಂದಾಗುವ ಪರಿಣಾಮುಗಳು ಮಹತ್ವದವಾಗುವವು."

ಜ್ಯೂನಿಯರ್ ರೆಡ್‌ಕ್ರಾಸ ಸಂಘಗಳ ಕಾರ್ಯಕಲಾಪಗಳಿಂದ ಬಾಲಕರಿಗೆ ವ್ಯಕ್ತಿಯ ಮತ್ತು ಸಮಾಜದ ಆರೋಗ್ಯವನ್ನು ಹೇಗೆ ಕಾದುಕೊಳ್ಳಬೇಕೆಂಬದು, ಯೋಗ್ಯ ಚಟಗಳನ್ನು ಉಂಟುಮಾಡಿಕೊಳ್ಳುವದರಿಂದ ಆಗುವದೆಂದು ಹೇಳಿದರೆ ಸಾಧಿಸುವದು. ಅವನು ಶಾಲೆಯ ಆರೋಗ್ಯದ ಸ್ಥಿತಿಯನ್ನು ನಿರೀಕ್ಷಿಸಿ ಅದನ್ನು ಹೇಗೆ ಸುಧಾರಿಸಬೇಂಬ ದನ್ನು ಕಲಿಯುವನು. ಹೀಗೆ ಸಾಮಾಜಿಕ ಜವಾಬದಾರಿಯ ಕಲ್ಪನೆಯು ಹೆಚ್ಚಾಗುವದು. ಬೇನೆಬಿಂದ ಮತ್ತು ಬಳಲುವ ಬಾಲಕರಿಗೆ (ಚಿಕ್ಕಮಕ್ಕಳಿಗೆ) ನಿಸ್ವಾರ್ಥಬುದ್ಧಿಯಿಂದ ಸೇವೆಮಾಡುವದರಿಂವ ನಾಗರಿಕತ್ವದ ಶಿಕ್ಷಣವು ದೊರೆತಂತಾಗುವದು. ಜ್ಯೂನಿಯರ್ ರೆಡ್‌ಕ್ರಾಸ ಸಂಘದ ಸಭಾಸದನಾಗುವದರಿಂದ ಅವನು ರಾಷ್ಟ್ರದ ಮತ್ತು ಜಗತ್ತಿನ ಸಂಘದ ಸಭಾಸದನಾದಂತಾಗುವದು. ಹೀಗೆ ಅಪ್ರತ್ಯಕ್ಷವಾಗಿ ಅವನ ವಿಚಾರಕ್ಷೇತ್ರವು ಹೆಚ್ಚಾಗುವದು. ಮತ್ತು ಕುಟುಂಬದ ರಕ್ಷಣೆಯ ಶಿಕ್ಷಣವೂ, ಸಮಾಜ ರಕ್ಷಣದ ಶಿಕ್ಷಣವೂ, ರಾಷ್ಟ್ರದ ಮತ್ತು ಜಗತ್ತಿನ ನಿವಾಸಿಯೆಂಬ ಶಿಕ್ಷಣವೂ ದೊರೆಯುವವು.

ಎಷ್ಟೋ ಶಿಕ್ಷಕರು ಜ್ಯೂನಿಯರ್ ರೆಡ್‌ಕ್ರಾಸನ್ನು ತಮ್ಮ ಶಾಲೆಯಲ್ಲಿ ಪ್ರಾರಂಭ ಮಾಡುವದರಿಂದ ಅಭ್ಯಾಸಕ್ಕೆ ತೊಂದರೆಯುಂಟಾಗುವದೆಂದು ಹೆದರುವರು. ತದ್ವಿರುದ್ಧ ವಾಗಿ ನಿರಸವೆಂದು ಕಂಡುಬರುವ ಅಭ್ಯಾಸದ ವಿಷಯುಗಳಿಗೆ ರೆಡ್‌ಕ್ರಾಸದ ಕಾರ್ಯ ಕಲಾಪಗಳಿಂದ ಹೊಸ ಉತ್ಸಾಹವೂ, ಉದ್ದೇಶವೂ ಉಂಟಾಗುವವು. ಅದರ ವಿವರ ವನ್ನು ಕೆಳಗೆ ಕೊಟ್ಟಿದೆ—

(೧) **ಆರೋಗ್ಯ ಶಾಸ್ತ್ರವನ್ನು ಕಲಿಸುವದರಲ್ಲಿ** — ಆರೋಗ್ಯ ಶಾಸ್ತ್ರ ದಲ್ಲಿ ಹೇಳಿದ ನಿಯಮುಗಳನ್ನು ವ್ಯವಹಾರದಲ್ಲಿ ತರಲಿಕ್ಕೆ ಅನುಕೂಲವಾಗುವದು. ನಿರೋಗಿ ಯಾಗಿರಬೇಕೆಂಬ ವಿಷಯುದಲ್ಲಿ ಅಗತ್ಯ ಉಂಟಾಗುವದು ಮತ್ತು ಬಾಲಕರಿಗೆ ಕೊಟ್ಟ ಪಾಠಗಳಲ್ಲಿ ಪ್ರತಿದಿನ ಹೆಚ್ಚು ಉತ್ಸಾಹವು ಉಂಟಾಗುವದು. (ಸಶೇಷ)

ಪ್ರಾಥಮಿಕ ಶಿಕ್ಷಕರ ಕರ್ತವ್ಯ

ಲೇಖಕ:— ಬಿ. ಬಾಬಾಸಾಹೇಬ ಹೆ। ಮಾ। ಬಾಲಕರಶಾಲೆ, ಕಾಮುಲಾಪುರ.

ಶಿಕ್ಷಕನನ್ನು ಸ್ಕೂಲಮಾಸ್ತರ್, ಅಧ್ಯಾಪಕ, ಉಪಾಧ್ಯಾಯ, ಬೋಧಕ ಇ. ಇನ್ನೂ ಕೆಲವು ಹೆಸರುಗಳಿಂದ ಕರೆಯುವರು. ಆದರೆ ಬೋಧಕನೆಂಬ ಹೆಸರು ಚನ್ನಾಗಿ ಒಪ್ಪುತ್ತದೆಂದು ಹೇಳಬಹುದು. ಏಕಂದರೆ ಶಿಕ್ಷಕನು ಚಿಕ್ಕಮಕ್ಕಳನ್ನು ಬುದ್ಧಿವಂತರನ್ನಾಗಿ ಮಾಡುವದರಿಂದ ಬೋಧಕನೆಂಬ ನಾಮವು ಅವನಿಗೆ ಯಥಾರ್ಥವಾಗಿರುವದು. ಬೋಧೆ, ಬೋಧಕ, ಬೋಧನೆ, ಎಂಬ ಶಬ್ದಗಳು ಒಂದೇ ಧಾತುವಿನಿಂದ ಉಂಟಾದುವು. ಒಟ್ಟಾಗಿಉಪಾಧ್ಯಾಯನಿಗೆ ಬೋಧಕನೆನ್ನಲಿಕ್ಕೆ ಯಾವ ಸಂದೇಹವಿಲ್ಲ. ಚಿಕ್ಕಮಕ್ಕಳಿಗೆ ಬುದ್ಧಿಯನ್ನು ಹುಟ್ಟಿಸುವ ಶಕ್ತಿಯು ಶಿಕ್ಷಕನಲ್ಲಿರುವದರಿಂದ ಶಿಕ್ಷಣಕ್ಕೆ 'ಬೋಧನೆ' ಎಂದು ಕರೆಯುವರು. ಶಿಕ್ಷಕನು ಮಕ್ಕಳಿಗೆ ಬುದ್ಧಿಯನ್ನು ಕೊಡುವವನೆಂದರೆ ಬಾಲಕರು ಶಿಕ್ಷಕನ ಬಳಿಗೆ ಬರುವದಕ್ಕಿಂತ ಮುಂಚೆ ಬುದ್ಧಿಯುಳ್ಳವರಾಗಿರಲಿಲ್ಲವೇನು? ಬುದ್ಧಿ ಇತ್ತು, ಆದರೆ ಅದು ಬೂದಿಮುಚ್ಚಿದ ಕಿಡಿಯಂತೆ. ಹಾಗೆ ಮುಚ್ಚಿಕೊಂಡು ಇದ್ದದ್ದನ್ನು ಹೊರಗೆಡವಿ ವಿಕಾಸಮಾಡುವ ಶಕ್ತಿಯು ಶಿಕ್ಷಕನಲ್ಲಿರುವದು. ಇಂಥ ಶಕ್ತಿಗೆ ಬೋಧನೆ ಎಂದು ಮೇಲೆಯೇ ತಿಳಿಸಿರುವೆನು.

ಶಿಕ್ಷಕನು ಮಕ್ಕಳಿಗೆ ಬುದ್ಧಿಯನ್ನು ಹುಟ್ಟಿಸುವದು ಹೇಗೆ? ಬುದ್ಧಿಯು ದೇಹದ ಯಾವ ಭಾಗದಲ್ಲಿರುವದೆಂಬದು ಶಿಕ್ಷಕರಿಗೆ ತಿಳಿದ ಸಂಗತಿಯಾಗಿದೆ. ಜನರು ವಾಡಿಕೆಯಾಗಿ ಮಾತುಮಾತಿಗೆ 'ಇವನಿಗೆ ತಲೆಯಿಲ್ಲ' 'ಅವನಿಗೆ ತಲೆ ಅದೆ' ಎಂಬ ಮಾತುಗಳನ್ನು ಆಡುವದನ್ನು ನಾವು ಕೇಳಿರುವೆನಲ್ಲವೇ? ಅಂದಮೇಲೆ ಬುದ್ಧಿಯು ತಲೆಯಲ್ಲಿರುವದೆಂದು ಗೊತ್ತಾಗುವದು. ಈ ವಿಷಯವು ಎಂಥಾ ಕಾಡು ಜನರಿಗಾದರೂ ತಿಳಿದ ಸಂಗತಿಯಾಗಿದೆ. ಬುದ್ಧಿಯು ತಲೆಯಲ್ಲಿರುವದೆಂಬದು ಸ್ಪಷ್ಟವಾಗಿರುವದು. ಶಿಕ್ಷಕರು ವಾಡಿಕೆಯಾಗಿ "ಈ ಮಗುವಿಗೆ ಎಷ್ಟು ಹೇಳಿದರೂ ತಲೆಯಲ್ಲಿ ಹೋಗುವದಿಲ್ಲವಲ್ಲ" ಎಂದು ಹೇಳುವರು. ತಲೆ ಎಂದರೆ ಬುದ್ಧಿ ಎಂದರ್ಥವಾಗುವದು.

ಬುದ್ಧಿಯು ತಲೆಯಲ್ಲಿರುವದಾದಕಾರಣ ಶಿಕ್ಷಕರಾದವರು, ಮಕ್ಕಳ ತಲೆಗೆ ಪೆಟ್ಟುಗಳನ್ನು ಕೊಡದೆ ಎಚ್ಚರದಿಂದ ಇರಬೇಕು. ಏಕಂದರೆ ಮಿದುಳು ತುಂಬಿದ ಎಳೆ ಮಕ್ಕಳ ತಲೆಗೆ ಪೆಟ್ಟುಕೊಡುವದರಿಂದ, ಪೆಟ್ಟಿನ ನೋವು ಒಳಗೆ ತಗಲಿದರೆ, ಬುದ್ಧಿಯು ಬಲಹೀನವಾಗುವದೆಂದು ಹೇಳಬಹುದು. ತಲೆಗೆ ಮಾತ್ರ ಪೆಟ್ಟುಗಳನ್ನು ಹಾಕುವದು ಸರಿಯಾದಶಿಕ್ಷೆ ಎನಿಸಲಾರದು. ತಲೆಯನ್ನು ಕುಟ್ಟುವ ಶಿಕ್ಷಕನು ಬೋಧಕನೆನಿಸಿಕೊಳ್ಳಲಾರನು; ಶಿಕ್ಷಕನಲ್ಲವೆಂದೂ ಹೇಳಿದರೂ ಹೇಳಬಹುದು. ಈ ಸಂಗತಿ ತಿಳಿದ ಉಪಾಧ್ಯಾಯನ ಕೈಗಳು ಮುಂದರಿಯಲಾರವು. ಮಕ್ಕಳ ಸ್ವಭಾವವನ್ನರಿಯದ ಈ

ಶಿಕ್ಷಕರು ಮಾತ್ರ (ಕೆಲವು ಅನ್ ಟ್ರೇಂಡ್ರರು) ತಲೆಗೆ ಪೆಟ್ಟುಗಳನ್ನು ಕೊಡಲು ಹಿಂಜರಿಯದೆ ಕುಟ್ಟುವರು. ಸುಶಿಕ್ಷಕರು ಎಂದಿಗೂ ಕುಟ್ಟಲಾರರೆಂದು ಹೇಳಬಹುದು.

ತಲೆಯಲ್ಲಿ ಬುದ್ಧಿಯು ಇರುವದೆಂದ ಮೇಲೆ, ಅದು ಯಾವ ಆಕಾರದಲ್ಲಿರುವದು? ತಲೆಯು ಒಂದು ಎಲುಬಿನ ಪೆಟ್ಟಿಗೆಹಾಗೆ ಇದ್ದು ಅದರೊಳಗೆ ಮೆದುಳು ಜೆಳ್ಳಿಗೆ ಇರುತ್ತದೆ. ಬುದ್ಧಿಯು ಅದರಲ್ಲಿ ಅದೆ. ಅದು ನಮ್ಮ ಕಣ್ಣಿಗೆ ಕಾಣಿಸುವದಿಲ್ಲ. ಕೈಗೆ ಹಿಡಿಯಲೂ ಬಾರದು. ಕಬ್ಬಿಣವನ್ನು ಆಕರ್ಷಿಸುವ ಶಕ್ತಿಯು ಸೂಜಿಗಲ್ಲಿನಲ್ಲಿ ಹೇಗೆ ಇರುವದೋ ಹಾಗೆಯೇ ಮೆದುಳಿನಲ್ಲಿ ಆಕರ್ಷಿಸುವ ಶಕ್ತಿಯೊಂದು ಇರುವದು. ಮೆದುಳಿನಲ್ಲಿರುವ ಈ ಶಕ್ತಿಗೆ ಬುದ್ಧಿ ಎಂದು ಕರೆಯುವರು.

ಬಾಲ್ಯದಲ್ಲಿ ಕೂಸುಗಳು ತಾವು ತಿಂದ ಪದಾರ್ಥದ ಆಕಾರದಂಥ ಯಾವದಾದರೊಂದು ಪದಾರ್ಥವು ಇದ್ದರೆ ಅದನ್ನು ಬಾಯಲ್ಲಿ ಇಟ್ಟುಕೊಳ್ಳುವವು. ಅದು ರುಚಿಸದೆ ಇದ್ದರೆ ಕೂಡಲೆ ಅಳತೊಡಗುವವು. ಅದು ಬೇಕೆಂದು ಹಟಹಿಡಿಯುವವು. ಏಕೆಂದರೆ ತಾನು ಮೊದಲು ತಿಂದ ಪದಾರ್ಥದ ನೆನಪುಬಂದದ್ದರಿಂದ ಹಟಮಾಡುವದು. ಇದನ್ನು ನೆನಪಿಗೆ ತಂದವರಾರು ? ಮೆದುಳಿನಲ್ಲಿರುವ ಬುದ್ಧಿಯು. ಪ್ರಪಂಚದಲ್ಲಿರುವ ಕೆಲಸಗಳು ನಡೆಯಬೇಕಾದರೆ ಮೆದುಳಿನಲ್ಲಿರುವ ಬುದ್ಧಿಯಿಂದಲೇ ಜರುಗುವವು.

ಕೈಗಳಲ್ಲಿ ಬರೆಯುವುದು, ಬಾರಿಸುವುದು, ಚಿತ್ರಿಸುವುದು, ಹೇಗೆ ಅಡಕವಾಗಿರುವವೋ ಹಾಗೆಯೇ ಬುದ್ಧಿ ಎಂಬ ಶಕ್ತಿಯು ಮೆದುಳಿನಲ್ಲಿ ಅಡಗಿರುವದು. ಒಬ್ಬನಿಗಿಂತ ಮತ್ತೊಬ್ಬನ ಬುದ್ಧಿಯು ಹೆಚ್ಚು ಇರುವದು. ಇಬ್ಬರ ಮೆದುಳಿನ ಆಕಾರವು, ಬಣ್ಣವು, ತೂಕವು ಒಂದೇ ಇದ್ದರೂ, ಬುದ್ಧಿ ಶಕ್ತಿಯಲ್ಲಿ ತಾರತಮ್ಯ ಇರುವದು. ಕೋಣನ ತಲೆ ದೊಡ್ಡದಿದ್ದರೂ ಅದರ ಬುದ್ಧಿ ಮಂದವಾಗಿರುವದು. ಮಂಗನ ತಲೆ ಚಿಕ್ಕದಿದ್ದರೂ ಅದರ ಬುದ್ಧಿ ಚುರುಕು ಇರುವದು. ಹಾಗೆಯೇ ಶಾಲೆಯ ಮಕ್ಕಳಲ್ಲಿ ಕೆಲವರ ಬುದ್ಧಿ ಮಂದವಾಗಿಯೂ, ಇನ್ನೂ ಕೆಲವರ ಬುದ್ಧಿಯು ಚುರುಕಾಗಿಯೂ ಇರುವವು. ಇದಕ್ಕೆ ಘೃತಬುದ್ಧಿ, ಕುಶಾಗ್ರಬುದ್ಧಿ ಎಂದು ಅನ್ನುವರು. ಬುದ್ಧಿಯಲ್ಲಿ ಹೆಚ್ಚುಕಡಿಮೆಯಾಗಲು, ಕಾರಣವೇನು ? ಇದು ನೈಜಗುಣವೋ ? ಅಥವಾ ಮಧ್ಯದಲ್ಲಿ ಬಂದುದೋ ? ಎಂಬದು, ತಿಳಿದುಕೊಳ್ಳಬೇಕಾದ ಸಂಗತಿಯಾಗಿರುವದು.

ಇದುವರೆಗೆ ಬುದ್ಧಿಯನ್ನು ಸೂಜಿಗಲ್ಲಿಗೆ ಸರಿಹೋಲಿಸಿದೆವಲ್ಲವೇ ? ಅದರಂತೆ ಕೆಲವು ಮಕ್ಕಳು ಹುಟ್ಟುವಾಗಲೇ ಬುದ್ಧಿ ಶಕ್ತಿಯನ್ನು ತೆಗೆದುಕೊಂಡು ಬರುವವು. ಹೇಗೆಂದರೆ ತಾಯಿ ತಂದೆಗಳ ಆಕಾರವಾಗಲಿ, ಅವರ ಸ್ವಭಾವವಾಗಲಿ ಮಕ್ಕಳಲ್ಲಿ ಕಂಡುಬರುವದುಂಟು. ಸ್ವಭಾವ ಮತ್ತು ನಡತೆ ಇತ್ಯಾದಿ ಗುಣಗಳ ರಕ್ತಸಂಬಂಧದ ಹಿರಿಯರ ಚರ್ಯೆಗಳು, ಮಕ್ಕಳಲ್ಲಿ ಕಂಡುಬರುವವು. ತಾಯಿತಂದೆಗಳು ದೃಢಕಾಯರಾಗಿದ್ದರೆ, ಮಕ್ಕಳು ಕೂಡ ಆರೋಗ್ಯವಂತರಾಗಿ ಹುಟ್ಟುವರು. ತಾಯಿತಂದೆಗಳ ಸ್ವಭಾವವು ಮಕ್ಕಳಿಗೆ ಅನುಸರಿಸಿ ಬರುವವು.

ಹಿರಿಯರು ಬುದ್ಧಿವಂತರಾಗಿದ್ದು ಕೀರ್ತಿಸಂಪಾದನೆ ಮಾಡಿದಲ್ಲಿ, ಅಂಥವರ ಮಕ್ಕಳು ಬುದ್ಧಿವಂತರೆನಿಸಿಕೊಳ್ಳುವರು. ತಾಯಿತಂದೆಗಳು ಬುದ್ಧಿವಂತರಾಗಿದ್ದಲ್ಲಿ ಅವರ ಮಕ್ಕಳು ಜನನಕಾಲದಲ್ಲಿಯೇ ಬುದ್ಧಿ ಎಂಬ ಶಕ್ತಿಯನ್ನು ತೆಗೆದುಕೊಂಡೇ ಬರುವವು. ಈ ರೀತಿಯಾಗಿ ಕೆಲವು ಮಕ್ಕಳಿಗೆ ನೈಜವಾಗಿಯೇ ಇಂಥಾ ಗುಣಗಳು ಉಂಟಾಗುವವು. ಇನ್ನೂ ಕೆಲವು ಮಕ್ಕಳಿಗೆ ಬುದ್ಧಿಯು ಇರುವದೇ ಇಲ್ಲ; ಇಂಥವರು ಬೋಧನೆಯಿಂದ ಸರಿಯಾಗುವರೆಂದು ಹೇಳುವರು. ಇನ್ನೂ ಕೆಲವರಿಗೆ ಬುದ್ಧಿಶಕ್ತಿಯು ಇದ್ದು ಅದನ್ನು ವ್ಯವಸಾಯಗೊಳಿಸದಿದ್ದರೆ ಅದೂ ಕೂಡ ಫಲಿಸಲಾರದೆನ್ನಬಹುದು. ಇದನ್ನು ವೃದ್ಧಿಗೊಳಿಸುವ ಕರ್ತವ್ಯವು ಬೋಧಕನಿಗೆ ಸಮರ್ಪಿಸಿರುವದೆಂದು ಹೇಳುವರು.

ಪಂಚೇಂದ್ರಿಯಗಳದ್ವಾರವಾಗಿ ಬುದ್ಧಿಯು ಬೆಳೆಯುತ್ತದೆ. ಕಣ್ಣು ನೋಡು

ನಾಲಿಗೆ ರುಚಿ ನೋಡುವದು;

Pg No 13 Missing

ಮಕ್ಕಳಸ್ವಭಾವಕ್ಕನುಸರಿಸಿ, ಕೆಲವು ಆಟಗಳನ್ನು ಆಡಿಸಿ, ಅವಂ ವಿಕಾಸಗೊಳಿಸಿ, ಜೀವಮಾನದಲ್ಲಿ ನಡೆಯುವ ಕಾರ್ಯಗಳಲ್ಲಿ ಶಕ್ತಿವಂತರನ್ನಾಗಿ ಮಾಡುವದು, ಪ್ರಾ. ಶಿಕ್ಷಕರ ಗುರಿಯಾಗಿರುವದೆಂದು ಹೇಳಬಹುದು. ಮುಂದೆ ಸನ್ಮಾರ್ಗದಲ್ಲಿ ನಡೆಯುವಂತೆ ಇಂದ್ರಿಯಗಳನ್ನು ತಿದ್ದುವದು ಮುಖ್ಯ ಕರ್ತವ್ಯ. ಏಕಂದರೆ ಇಂದ್ರಿಯಗಳು ಮಾಡುವ ಕರ್ಮಗಳಿಗೆ ಬುದ್ಧಿಯು ಅನುಸರಿಸಿ ನಡೆಯುವದೆಂದು ಪಂಡಿತರು ಹೇಳುವರು.

ಆ ಸ್ಥಿತಿ, ಈಗ ಕನ್ನಡ ನುಡಿಗೆ ಪ್ರಾಪ್ತವಾಗಿದೆ. ಶಿರಿಗನ್ನಡಂಗೆಲ್ಗೆ, ಜಯಸು ನ್ನಡ ಸರಸತಿ, ಎನಿತು ಇನಿದು ಈ ಕನ್ನಡ ನುಡಿಯು, ಎಂದು ಮೊದಲಾಗಿ ಕನ್ನಡ ುಡಿಯ ಜಯ-ಜಯಕಾರವು ಕೇಳಬರುತ್ತಲಿದೆ.

ನಮ್ಮ ಮುಂಬೈ ಕರ್ನಾಟಕದ ಭಾಷೆಯು ಮರಾಠಿ ಭಾಷಾ ಶೈಲಿಯನ್ನು ಹೋಲು ತ್ತದೆಂದು ಭಾಷಾ ಪಂಡಿತರ ಮತವಿದೆ. ಗಳಗನಾಥರ ಬರಹವನ್ನು ಉದಾಹರಣೆಗೆ ತೆಗೆದುಕೊಂಡು ಮತವನ್ನು ಸಮರ್ಥಿಸುವದೂ ಕಂಡುಬರುತ್ತದೆ. ಈಗಿನ ಕ್ರಮಿಕ ಪುಸ್ತಕಗಳ ಭಾಷಾಶೈಲಿಯ ವಿಷಯಕ್ಕಾದರೂ ಎಷ್ಟೋ ಜನರು ಇದೇ ಅಭಿಪ್ರಾಯ ಪಡುತ್ತಾರೆ. ಮುಂಬೈ ಕರ್ನಾಟಕದ ಕನ್ನಡವೆಲ್ಲವೂ ಮರಾಠಿ ಭಾಷಾ ಶೈಲಿಯನ್ನು ಹೋಲುತ್ತಿರುವಾಗ ಅಲ್ಲಿಯ ಕ್ರಮಿಕ ಪುಸ್ತಕಗಳ ಭಾಷಾ ಶೈಲಿಯು ಮರಾಠಿ ಭಾಷಾ ಶೈಲಿಯನ್ನನುಸರಿಸಿದ್ದೇನೂ ಮಹತ್ವವಲ್ಲ. ಆದರೆ ಇನ್ನು ಮುಂದಾಗುವ ಕ್ರಮಿಕ ಪುಸ್ತಕಗಳ ಭಾಷೆಯ ವಿಷಯಕ್ಕಾದರೂ ಎಚ್ಚರಪಡಬೇಕು.

10/14

ದ್ಧತಿಯು ಈಗೀಗ ಇಲ್ಲಿ ಪ್ರಾರಂಭವಾದದ್ದು ಕಂಡುಬರುತ್ತದೆ.
ಗದಲ್ಲೆಲ್ಲ ಹಂಸಕ್ಷೀರನ್ಯಾಯವನ್ನು ನೆನಪಿಗೆ ತಂದುಕೊಳ್ಳುವದೊಳ್ಳೇದು.

ಈ ವಿಷಯದಲ್ಲಿ ಕೆರೂರ ವಾಸುದೇವಾಚಾರ್ಯರ 'ವಸಂತಯಾಮಿನಿ ಸ್ವಪ್ನಚಮ ತ್ಕಾರ' ನಾಟಕದ ಭಾಷಾಶೈಲಿಯು ತುಂಬಾ ಅನುಕರಣೀಯವಾಗಿದೆಯೆನ್ನಬಹುದು. ಲಿತವಹ ಕನ್ನಡವೆಂಬುದು ಇಲ್ಲಿ ಸಾರ್ಥಕವಾಗಿದೆ.

Pg No 13 to 14
Missing

ಹಿರಿಯರು ಬುದ್ಧಿವಂತರಾಗಿದ್ದು ಕೀರ್ತಿಸಂಪಾದನೆ ಮಾಡಿದಲ್ಲಿ, ಅಂಥವರ ಮಕ್ಕಳು ಬುದ್ಧಿವಂತರೆನಿಸಿಕೊಳ್ಳುವರು. ತಾಯಿತಂದೆಗಳು ಬುದ್ಧಿವಂತರಾಗಿದ್ದಲ್ಲಿ ಅವರ ಮಕ್ಕಳು ಜನನಕಾಲದಲ್ಲಿಯೇ ಬುದ್ಧಿ ಎಂಬ ಶಕ್ತಿಯನ್ನು ತೆಗೆದುಕೊಂಡೇ ಬರುವವು. ಈ ರೀತಿಯಾಗಿ ಕೆಲವು ಮಕ್ಕಳಿಗೆ ನೈಜವಾಗಿಯೇ ಇಂಥಾ ಗುಣಗಳು ಉಂಟಾಗುವವು. ಇನ್ನೂ ಕೆಲವು ಮಕ್ಕಳಿಗೆ ಬುದ್ಧಿಯು ಇರುವದೇ ಇಲ್ಲ; ಇಂಥವರು ಬೋಧನೆಯಿಂದ ಸರಿಯಾಗುವರೆಂದು ಹೇಳುವರು. ಇನ್ನೂ ಕೆಲವರಿಗೆ ಬುದ್ಧಿಶಕ್ತಿಯು ಇದ್ದು ಅದನ್ನು ವ್ಯವಸಾಯಗೊಳಿಸದಿದ್ದರೆ ಅದೂ ಕೂಡ ಫಲಿಸಲಾರದೆನ್ನಬಹುದು. ಇದನ್ನು ವೃದ್ಧಿಗೊಳಿಸುವ ಕರ್ತವ್ಯವು ಬೋಧಕನಿಗೆ ಸಮರ್ಪಿಸಿರುವದೆಂದು ಹೇಳುವರು.

ಪಂಚೇಂದ್ರಿಯಗಳದ್ವಾರವಾಗಿ ಬುದ್ಧಿಯು ಬೆಳೆಯುತ್ತದೆ. ಕಣ್ಣು ನೋಡುವದು; ಮೂಗು ಮೂಸುವದು; ಕಿವಿ ಕೇಳುವದು; ನಾಲಿಗೆ ರುಚಿ ನೋಡುವದು; ತ್ವಚೆಯಿಂದ ಸ್ಪರ್ಶವು ಗೊತ್ತಾಗುವದು. ಈ ಪಂಚೇಂದ್ರಿಗಳ ಮೂಲಕ ಸೃಷ್ಟಿಯಲ್ಲಿ ನಡೆಯುವ ಕಾರ್ಯಗಳು ಒಳಸೇರಿ, ಬುದ್ಧಿ ವ್ಯಾಪಾರಕ್ಕೆ ಅನುಕೂಲವಾಗುತ್ತದೆ. ಪಂಚೇಂದ್ರಿಯಗಳ ಮೂಲಕ ಮೆದುಳಿನಲ್ಲಿ ಸೇರುವದಕ್ಕಿಂತ ಮುಂಚೆ ಬುದ್ಧಿಯು ಬೂದಿ ಮುಚ್ಚಿದ ಕೆಂಡದಂತೆ ಇರುತ್ತದೆ. ಇಂದ್ರಿಗಳ ಮೂಲಕ ಸೃಷ್ಟಿಯಲ್ಲಿ ಜರುಗುವ ಕಾರ್ಯಗಳು ಒಳಸೇರಿ ಬೂದಿಯನ್ನು ಹೋಗಲಾಡಿಸಿ ಒಳಗಿಂದ ಬುದ್ಧಿ ಎಂಬ ಕಿಡಿಯನ್ನು ಪ್ರಕಾಶಗೊಳಿಸುತ್ತವೆ.

ಮನೆಯಲ್ಲಿ ಹಿರಿಯರು ಯಾವದಾದರೊಂದು ಕೆಲಸದಲ್ಲಿ ತೊಡಗಿರುವದನ್ನು ಮಕ್ಕಳು ನೋಡಿದರೆ ಆ ಕೆಲಸ ತನ್ನಿಂದ ಸಾಧ್ಯವಿಲ್ಲದಿದ್ದರೂ, ಮಾಡಲು ಕೈಹಾಕುವರು, ಬೇಡವೆಂದರೆ ಅಳಹತ್ತುವರು. ಮಕ್ಕಳು ಇಂದ್ರಿಯಗಳ ವ್ಯಾಪಾರದಿಂದ ಕೈಲಾಗದ ಕೆಲಸವಾದಾಗಲೂ ಮಾಡಬೇಕೆಂಬ ಬುದ್ಧಿಯು ಅವರಲ್ಲಿ ಹುಟ್ಟುವದು, ಇದಕ್ಕೆ ಕನ್ನಡದಲ್ಲಿ 'ಬಾಲಲೀಲೆ' ಎಂದು ಅನ್ನುವರು. ಮಕ್ಕಳಿಗೆ ಅನೇಕತರದ ಆಟಗಳ ಮುಖ್ಯವಾಗಿರಬೇಕು. ಆಟಗಳಿಂದ ಬುದ್ಧಿ ಚುರುಕು ಹೊಂದುವದು. ಆಟಗಳಿಲ್ಲದ ಮಕ್ಕಳ ಬುದ್ಧಿಯು ತುಕ್ಕುಹಿಡಿದ ಕಬ್ಬಿಣದಂತೆ ಇರುತ್ತದೆ, ಜಾಣರಾದ ಶಿಕ್ಷಕರು ಮಕ್ಕಳಸ್ವಭಾವಕ್ಕನುಸರಿಸಿ, ಕೆಲವು ಆಟಗಳನ್ನು ಆಡಿಸಿ, ಅವರ ಬುದ್ಧಿಯನ್ನು ವಿಕಾಸಗೊಳಿಸಿ, ಜೀವಮಾನದಲ್ಲಿ ನಡೆಯುವ ಕಾರ್ಯಗಳಲ್ಲಿ ಶಕ್ತಿವಂತರನ್ನಾಗಿ ಮಾಡುವದು, ಪ್ರಾ. ಶಿಕ್ಷಕರ ಗುರಿಯಾಗಿರುವದೆಂದು ಹೇಳಬಹುದು. ಮುಂದೆ ಸನ್ಮಾರ್ಗದಲ್ಲಿ ನಡೆಯುವಂತೆ ಇಂದ್ರಿಯಗಳನ್ನು ತಿದ್ದುವದು ಮುಖ್ಯ ಕರ್ತವ್ಯ. ಏಕಂದರೆ ಇಂದ್ರಿಯಗಳು ಮಾಡುವ ಕರ್ಮಗಳಿಗೆ ಬುದ್ಧಿಯು ಅನುಸರಿಸಿ ನಡೆಯುವದೆಂದು ಪಂಡಿತರು ಹೇಳುವರು.

ಆ ಸ್ಥಿತಿ, ಈಗ ಕನ್ನಡ ನುಡಿಗೆ ಪ್ರಾಪ್ತವಾಗಿದೆ. ಸಿರಿಗನ್ನಡಂಗೆಲ್ಗೆ, ಜಯಸು ಕನ್ನಡ ಸರಸತಿ, ಎನಿತು ಇನಿದು ಈ ಕನ್ನಡ ನುಡಿಯು, ಎಂದು ಮೊದಲಾಗಿ ಕನ್ನಡ ನುಡಿಯ ಜಯ-ಜಯಕಾರವು ಕೇಳಬರುತ್ತಲಿದೆ.

ನಮ್ಮ ಮುಂಬೈ ಕರ್ನಾಟಕದ ಭಾಷೆಯು ಮರಾಠಿ ಭಾಷಾ ಶೈಲಿಯನ್ನು ಹೋಲುತ್ತದೆಂದು ಭಾಷಾ ಪಂಡಿತರ ಮತವಿದೆ. ಗಳಗನಾಥರ ಬರಹವನ್ನು ಉದಾಹರಣೆಗೆ ತೆಗೆದುಕೊಂಡು ಮತವನ್ನು ಸಮರ್ಥಿಸುವದೂ ಕಂಡುಬರುತ್ತದೆ. ಈಗಿನ ಕ್ರಮಿಕ ಪುಸ್ತಕಗಳ ಭಾಷಾಶೈಲಿಯ ವಿಷಯಕ್ಕಾದರೂ ಎಷ್ಟೋ ಜನರು ಇದೇ ಅಭಿಪ್ರಾಯ ಪಡುತ್ತಾರೆ. ಮುಂಬೈ ಕರ್ನಾಟಕದ ಕನ್ನಡವೆಲ್ಲವೂ ಮರಾಠಿ ಭಾಷಾ ಶೈಲಿಯನ್ನು ಹೋಲುತ್ತಿರುವಾಗ ಅಲ್ಲಿಯ ಕ್ರಮಿಕ ಪುಸ್ತಕಗಳ ಭಾಷಾ ಶೈಲಿಯು ಮರಾಠಿ ಭಾಷಾ ಶೈಲಿಯನ್ನನುಸರಿಸಿದ್ದೇನೂ ಮಹತ್ವವಲ್ಲ. ಆದರೆ ಇನ್ನು ಮುಂದಾಗುವ ಕ್ರಮಿಕ ಪುಸ್ತಕಗಳ ಭಾಷೆಯ ವಿಷಯಕ್ಕಾದರೂ ಎಚ್ಚರಪಡಬೇಕು.

ಮರಾಠಿ ಶೈಲಿಯ ಕನ್ನಡವೆಂದರೇನೆಂಬದನ್ನು ಈ ವಾಕ್ಯವನ್ನೋದಿ ಕಂಡುಕೊಳ್ಳಬಹುದು " ಈ ಶಬ್ದವನ್ನು ವನಮಾಲೆಯು ಇಷ್ಟು ಸಮಾಧಾನದಿಂದ ಉಚ್ಚಾರ ಮಾಡಿದಳಲ್ಲ, ಅದನ್ನು ಕೇಳಿ ಕಲಹಂಸನು ಆಶ್ಚರ್ಯ ಪೂರ್ಣ ದೃಷ್ಟಿಯಿಂದ ಆಕೆಯ ಮುಖದ ಕಡೆಗೆ ಸುಮ್ಮನೆ ನೋಡುತ್ತ ನಿಂತುಕೊಂಡನು " ಮುಂದಿರುವ ಮೂಲ ಮರಾಠಿ ವಾಕ್ಯವನ್ನೋದಿದರೆ ಹಿಂದಿರುವ ವಾಕ್ಯವು ಮರಾಠಿ ಶೈಲಿಯದೆಂಬುದು ಚನ್ನಾಗಿ ವ್ಯಕ್ತವಾಗುತ್ತದೆ. हे शब्द वनमालेने इतक्या शांतपणाने उच्चारिले कीं सरदार कलहंस आश्चर्य पूर्ण दृष्टीनें तिचा तोंडाकडे नुसता पहात राहिला. ಈ ವಾಕ್ಯದ ಭಾಷಾಂತರವನ್ನು ಈ ರೀತಿಯಾಗಿ ಮಾಡಿದರೆ ನೆಟ್ಟಗೆಂದು ತೋರುತ್ತದೆ. " ವನಮಾಲೆಯ ಶಾಂತವಾದ ಆ ನುಡಿಯಿಂದ, ಕಲಹಂಸನು ಸೋಜಿಗಪಟ್ಟು ಎವೆಯಿಕ್ಕದೆ ಅವಳ ಮುಖವನ್ನು ನೋಡುತ್ತ ನಿಂತನು. "

ಕನ್ನಡ ನುಡಿಗೀಗ ಮೈಸೂರು ತಾಯ್ಮನೆಯಾಗಿರುವದರಿಂದ ಅಲ್ಲಿಯವರ ಭಾಷಾ ಶೈಲಿಯು ಸರಿಯಾದದ್ದೆಂಬ ಕಲ್ಪನೆಯು ಇತ್ತ ಕಡೆಗೆ ರೂಢವಾಗಿದೆ. ಇದರಿಂದ, ಕುದುರೆಯ ಬಾಲವನ್ನು ಕತ್ತರಿಸಿ ಮೊಂಡ ಮಾಡಿದಂತೆ ಕ್ರಿಯಾಪದಗಳ ಕಡೆಯ ಕ್ಷರ ಬಿಟ್ಟು, ಬರತ್ತೆ, ಹೋಗುತ್ತೆ ಎಂಬ ಮೊಂಡ ಕ್ರಿಯಾಪದಗಳನ್ನು ಬರೆಯುವ ಅಪದ್ಧ ಪದ್ಧತಿಯು ಈಗೀಗ ಇಲ್ಲಿ ಪ್ರಾರಂಭವಾದದ್ದು ಕಂಡುಬರುತ್ತದೆ. ಅನುಕರಣ ಪ್ರಸಂಗವಲ್ಲೆಲ್ಲ ಹಂಸಕ್ಷೀರನ್ಯಾಯವನ್ನು ನೆನಪಿಗೆ ತಂದುಕೊಳ್ಳುವದೊಳ್ಳೇದು.

ಈ ವಿಷಯದಲ್ಲಿ ಕೆರೂರ ವಾಸುದೇವಾಚಾರ್ಯರ 'ವಸಂತಯಾಮಿನಿ ಸ್ವಪ್ನಚಮತ್ಕಾರ' ನಾಟಕದ ಭಾಷಾಶೈಲಿಯು ತುಂಬಾ ಅನುಕರಣೀಯವಾಗಿದೆಯೆನ್ನಬಹುದು. ಲಲಿತವಹ ಕನ್ನಡವೆಂಬದು ಇಲ್ಲಿ ಸಾರ್ಥಕವಾಗಿದೆ.

ಒತ್ತಕ್ಷರವಿದ್ದಲ್ಲಿ ಗುಣಿತಾಕ್ಷರಗಳನ್ನೂ ಮಹಾಪ್ರಾಣಗಳಸ್ಥಲದಲ್ಲಿ ಅಲ್ಪ ಪ್ರಾಣಗಳನ್ನೂ ಹಾಕಿ 'ಮಾಡಿದುದು ಅಂತಹ, ಎಂದು ಬರೆದರೆ ಕನ್ನಡದ ಲಾಲಿತ್ಯ ಸಾಧನೆಯಾಯಿತೆಂದು ಕೆಲವರು ತಿಳಿದುಕೊಂಡಿರುವಂತೆ ತೋರುತ್ತದೆ. ಈ ತರದ ಪ್ರಯೋಗಗಳನ್ನು ಮಾಡುವ ಶೋಚನೀಯವಾದ ಅವಸ್ಥೆಯನ್ನು ಕಂಡು ಕನಿಕರ ಹುಟ್ಟದೆ ಇರದೆಂದು ವಾಸುದೇವಾಚಾರ್ಯರು ಭಾಷೆಯ ಏಕರೂಪತೆ ಎಂಬ ನಿಬಂಧದಲ್ಲಿ ಈ ವಿಷಯಕ್ಕೆ ಈ ಮೊದಲೇ ನಿಷೇಧವನ್ನು ವ್ಯಕ್ತಪಡಿಸಿದ್ದಾರೆ.

ಕನ್ನಡವನ್ನು ಜರೆದಾಡುವವರು "ಅದೇನು ಅಂಥ ಪ್ರೌಢ ಭಾಷೆ" ಎಂದೆನ್ನುವದು ಕೇಳಬಂದಿದೆ. ಹೀಗನ್ನುವವರು ಬಿ. ವೆಂಕಟಾಚಾರ್ಯರ ಬರಹವನ್ನೋದಿ ಪ್ರೌಢ ಎಂದರೇನೆಂಬದನ್ನು ಕಲಿತುಕೊಳ್ಳಬೇಕು. ಮುಂದಿನ ವಾಕ್ಯದಿಂದ ಈ ಮಾತಿನ ಸತ್ಯತೆಯು ಸ್ಪಷ್ಟವಾಗುವಂತಿದೆ. "ಆ ಸುಂದರವಾದ ಕೋಠಡಿಯಲ್ಲಿ, ಅಂಥಾ ಮಹಾರ್ಹ ಆಲವರ್ಣಸಯಲ್ಲಿ ಕುಳಿತು, ಮಹಾಬಲ ಪರಾಕ್ರಮಶಾಲಿಯಾಗಿ, ಮಹಾಧನ ಸಂಪನ್ನನಾಗಿ, ಮಹಾರಾಜಾಧಿರಾಜನ ದಿವಾನನಾಗಿದ್ದ ಆ ಸತೀಶಚಂದ್ರನು ಮುಖ ಕಂದಿದವನಾಗಿರುವದೇಕೆ?"

ಪರಭಾಷೆಯ ಶಬ್ದಗಳನ್ನು ಕನ್ನಡದಲ್ಲಿ ಸೇರಿಸುವ ದುರ್ವ್ಯಸನವು ಇತ್ತೀಚೆ ಬಹಳ ಬೆಳೆದಿದೆ. ಮೋಟಾರಕ್ಕೆ ರಬ್ಬರ ಗಾಲಿಯ ವೃಷಭರಹಿತಶಕಟವೆಂದೆನ್ನಬೇಕೆಂದು ಇದರ ಮಥಿತಾರ್ಥವಲ್ಲ. ಅನವಶ್ಯಕವಾಗಿ ಪರಭಾಷಾಶಬ್ದಗಳನ್ನುಪಯೋಗಿಸುವದು ಸರಿಯಲ್ಲವೆಂದು ಹೇಳುವದು ಉದ್ದೇಶವಾಗಿದೆ. ಹಾಗೆ ಬರೆಯುವವರನ್ನು ಈ ಸಂಬಂಧವಾಗಿ ವಿಚಾರಿಸಿದರೆ, ಕುಣಿಯುವದಕ್ಕೆ ಬಾರದಿದ್ದರೆ ನೆಲ ನೆಟ್ಟಗಿಲ್ಲವೆಂದು ಹೇಳಿದ ಹಾಗೆ "ಕನ್ನಡದಲ್ಲಿ ನಾವೆಲ್ಲು ಬರೆಯುವದು ತುಂಬಾ ಡಿಫಿಕಲ್ಟ ನೋಡಿ. ಸರಿಯಾದ ಶಬ್ದಗಳೇ ಸಿಕ್ಕುವದಿಲ್ಲ"ಎಂದು ಹೇಳುತ್ತಾರೆ. ಕೆಲವರ ಕನ್ನಡ ಭಾಷೆಯಂತೂ ಪರಭಾಷಾ ಶಬ್ದಗಳ ಕೂಡುವಿಕೆಯಿಂದ ಸಹಜವಾಗಿ ಗುರುತಿಸದಷ್ಟು ವಿರೂಪವಾಗಿರುತ್ತದೆ. ಇಂಥದೊಂದು ವಾಕ್ಯವನ್ನು ಇಲ್ಲಿ ಬರೆಯುತ್ತೇವೆ, " ಆಗ ಉಭಯದಳದವರಿಗೂ ಲಡಾಯಿಹತ್ತಿ ಘೋರ ಯುದ್ಧವಾಗಿ ಈ ವಸ್ತ್ರಾರೆ ಗ್ರಾಮಕ್ಕೆ ದಕ್ಷಿಣಭಾಗ ಪಾವು ಕೋಸು ಬಯಲಾಗಿದ್ದಕಾರಣ ಲಡಾಯಿಇಂದ ಮೈಸೂರ ಫೌಜು ಫರಾರಿಯಾಯಿತು."

ಇನ್ನು ಮುಂದಾದರೂ ಈ ರೀತಿಯಾಗಿ ಕನ್ನಡವು ಪರಭಾಷೆಗಳ ದಾಳಿಗೀಡಾಗದಂತೆ ಕಳೆದುಂಬಿದ ಕನ್ನಡಿಗರು ನೋಡಿಕೊಳ್ಳಬೇಕು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳು ತಾವೆಂದು ಬರಹಗಾರರೆಲ್ಲರು ವೃಥಾಭಿಮಾನವಹಿಸುವದರಲ್ಲಿ ಅರ್ಥವಿಲ್ಲ. ಹಾಗೆಯೇ ಪಂಡಿತರೆಲ್ಲರು ಲಲಿತವಹ ಕನ್ನಡವೆಂದು ತಮ್ಮ ಬರಹವನ್ನು ಮುದ್ದಿಡುವದೂ ಸರಿಯಾದದ್ದಲ್ಲ.

'ದಾನಶೂರ ಆಲ್ಫ್ರೆಡ ನೋಬೆಲ'

"ಜ್ಞಾನಾಯ ದಾನಾಯ ಚ ರಕ್ಷಣಾಯ"

ಲೇಖಕ— ಸಾತೇನಹಳ್ಳಿ

ಲಕ್ಷ್ಮೀ-ಸರಸ್ವತಿಯರು ಪರಸ್ಪರ ನಿರಪೇಕ್ಷರಲ್ಲವೆಂದು ತಿಳಿಯತಕ್ಕದ್ದು. ಯಾವ ರಾಷ್ಟ್ರದಲ್ಲಿ ಇವರಿಬ್ಬರ ಸಹೋಪಾಸನೆಯು ನಡೆಯುವದೋ ಆ ರಾಷ್ಟ್ರಕ್ಕೆ ಪರಮ ವೈಭವವು ಪ್ರಾಪ್ತವಾಗುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ, ಲಕ್ಷಾಧೀಶ, ಕೋಟ್ಯಧೀಶರು ತಮ್ಮ ಭಾಗ್ಯವನ್ನೆಲ್ಲ ಒಂದು ಮನೆತನದ ಐಹಿಕ ಸುಖಭೋಗಕ್ಕಾಗಿ ಇಡದೆ ಸಮಾಜದ ವಿದ್ಯಾವೃದ್ಧಿಗಾಗಿಯೂ ಉದ್ಯೋಗವೃದ್ಧಿಗಾಗಿಯೂ ಸೂರೆಮಾಡುತ್ತಲಿರುವರು. ಇಂಥ ಶ್ರೇಷ್ಠ ಧನಿಕರಲ್ಲಿ ಮೇಲೆ ಬರೆದ ಚರಿತ್ರನಾಯಕರು ಒಬ್ಬರಾಗಿರುವರು.

ಮುಖ್ಯ ವಿಷಯ— ಆಲ್ಫ್ರೇಡರು ತಮ್ಮ ಮೃತ್ಯುಪತ್ರವನ್ನು ತಾರೀಖು ೨೭-೧೧-೧೮೯೫ನೆಯ ಇಸವಿಯಲ್ಲಿ ಬರೆದಿಟ್ಟರು. ಅದೇನಂದರೆ—" ನನ್ನ ಸ್ಥಾವರ ಜಂಗಮ ಆಸ್ತಿಯನ್ನೆಲ್ಲ ಮಾರಿ ಬಂದ ಹಣವನ್ನು ಬಡ್ಡಿಗೆಹಚ್ಚಿ ಬಂದ ಬಡ್ಡಿಯನ್ನು ಪಾರಿತೋಷಕರೂಪದಿಂದ ಕೆಳಗೆ ಬರೆದಂತೆ ೫ ಭಾಗ ಮಾಡಿ ಹಂಚಬೇಕು.

(೧) ಪದಾರ್ಥವಿಜ್ಞಾನಶಾಸ್ತ್ರದಲ್ಲಿ ಧುರೀಣನಾದವನಿಗೆ (೨) ರಾಸಾಯನಿಕರಲ್ಲಿ ಶ್ರೇಷ್ಠನಾದವನಿಗೆ (೩) ಚಿಕಿತ್ಸಕವರ್ಯನಿಗೆ (೪) ಸಾರಸ್ವತಶ್ರೇಷ್ಠನಿಗೆ (೫) ಜಗತ್ತಿನ ಶಾಂತಿಪ್ರವರ್ತಕನಿಗೆ.

ಈ ರೀತಿಯಾಗಿ ಪ್ರತಿ ವರ್ಷ ಕೊಡಬೇಕು. (ಪ್ರತ್ಯೇಕ ಪಾರಿತೋಷಕವು ೮ ಸಾವಿರ ಪೌಂಡು. ಅಂದರೆ ಸುಮಾರು ನಮ್ಮಲ್ಲಿಯ ಲಕ್ಷಕ್ಕಿಂತ ಹೆಚ್ಚು ರೂಪಾಯಿಗಳದು ಆಗುತ್ತದೆ.) ಹೀಗೆ ಪಾರಿತೋಷಕವನ್ನು ಕೊಡುವಾಗ ಮೇಲೆ ಬರೆದ ವಿಷಯಗಳಲ್ಲಿ ನಿಜವಾಗಿ ಅದ್ವಿತೀಯನೇ ಇರತಕ್ಕದ್ದು. ಇಂಥವನು ಯಾವ ದೇಶದವನಾಗಲಿ, ಯಾವ ಜಾತಿಯವನಾಗಲಿ ಇದ್ದರೂ ಅಡ್ಡಿಯಿಲ್ಲ." ಇಂಥವರೇ ನಿಶ್ಚಯವಾಗಿ ವಿಶ್ವಕುಟುಂಬಗಳೆಂದೂ ನಿಜವಾದ ಶಿಕ್ಷಿತರೆಂದೂ ತಿಳಿಯಬೇಕು

ಇಂಥ ಮಹನೀಯನು ಯಾರು? ಅವನ ಶಿಕ್ಷಣದ ಬಗೆ, ಅವನ ಉದ್ಯೋಗ, ಧನಸಂಪಾದನೆಯ ರೀತಿ ಮೊದಲಾದವುಗಳನ್ನು ಸಾಗ್ರವಾಗಿ ತಿಳಿದುಕೊಳ್ಳುವ ಕುತೂಹಲವು ವಾಚಕರಲ್ಲಿ ಉದ್ಭವಿಸುವದು ಸಹಜವಾಗಿದೆ. ಸ್ವೀಡನ್ ದೇಶದ ಪ್ರಸಿದ್ಧ ಸ್ಟಾಕಹೋಂ ಪಟ್ಟಣವು ಈತನ ಜನ್ಮಭೂಮಿಯು. ಕೆರೋಲಿನ್ ಹೆನರೀಟಾ, ಇಮ್ಯಾನುಅಲ್, ಎಂಬವರು ಈತನ ಜನನೀಜನಕರು ಇವರಿಂದ ನಮ್ಮ ಚರಿತ್ರನಾಯಕನು ೨೧-೧೦-೧೮೩೩ನೆಯ ಇಸವಿಯಲ್ಲಿ ಹುಟ್ಟಿದನು, ಈತನು ಹುಟ್ಟಿದ ಸ್ವಲ್ಪ ದಿನಗಳ

ಮೇಲೆ ಈ ಕುಟುಂಬವು ಸೆಂಟಪೀಟರ್ಸಬರ್ಗ ಪಟ್ಟಣಕ್ಕೆ ಬಂದಿತು. ಇವನ್ಯಾನುಅಲನು ಅಲ್ಲಿ ನೀರು ಮುಳುಗಿ ನಡೆಯುವ ಬೋಟುಗಳ ವ್ಯಾಪಾರ ಮಾಡಲಾರಂಭಿಸಿದನು. ಅದರಿಂದ ಚಿಕ್ಕಂದಿನಿಂದಲೂ ಆಲ್ಫ್ರೇಡನಿಗೆ ಮದ್ದು ಗುಂಡುಗಳ ವ್ಯವಸಾಯದ ಕಡೆಗೇ ಮನಸ್ಸು ಒಲಿಯಿತು. ತುಸು ಮಟ್ಟಿಗೆ ಓದು ಬರಹ ಕಲಿತ ಬಳಿಕ ಇವನ ತಂದೆಯು ಇವನನ್ನು ಹಡಗುಕಟ್ಟುವ ಕೆಲಸ ಕಲಿಯುವದಕ್ಕಾಗಿ ಅಮೇರಿಕೆಗೆ ಕಳುಹಿದನು. ಅಲ್ಲಿ ಅವನು ಅದನ್ನು ಕಲಿತದ್ದಲ್ಲದೆ ಮಾನವಸಂಹಾರಕಾರಿಯಾದ ರಾಸಾಯನಿಕ ವಿಭಾಗಗಳ ಜ್ಞಾನವನ್ನು ಚೆನ್ನಾಗಿ ಮಾಡಿಕೊಂಡನು. ಅವನು ಇಡಿಯ ಆಯುಷ್ಯವನ್ನೆಲ್ಲ ಇದೇ ವಿಷಯದ ಶೋಧದಲ್ಲಿಯೇ ಸವಿಸಿದನು. ಮೊದಲಿಗೆ 'ಡಾಯಿನಾಮಾಯಿಟ'ದ ಶೋಧ ಮಾಡಿದನು. ಇದರಂತೆಯೇ ಪ್ರಸ್ಫೋಟಕ ಜೇಲಾಟೀನದ ಶೋಧಮಾಡಿದನು. ಹೊಗೆಯಿಲ್ಲದ ಮದ್ದನ್ನು ಸಿದ್ಧಪಡಿಸಿದನು. ಹಾಗು ಬಂದೂಕಿನಲ್ಲಿ ಅನೇಕ ಹೊಸ ಸುಧಾರಣೆಗಳನ್ನು ಮಾಡಿದನು. ಈ ಸಂಶೋಧನ ಕಾರ್ಯದಿಂದ ೩೦ ಲಕ್ಷ ಪೌಂಡುಗಳಿಗಿಂತ ಹೆಚ್ಚು ಧನ ಸಂಪಾದಿಸಿದನು.

೧೮೪೪ರಲ್ಲಿ ಸ್ವೀಡಿಶ್ ಭೌತಿಕ ಶಾಸ್ತ್ರೀಯ ಮಂಡಳದ ಸದಸ್ಯನಾದನು. ಮುಂದೆ ಇಂಗ್ಲಂಡದ ರಾಜಸಮಾಜ (ರಾಯಲ್ ಸೊಸಾಯಿಟಿ)ದ ಮೆಂಬರನಾದನು. ಅದರಂತೆಯೇ ಪಾರೀಸ ಶಾಸ್ತ್ರೀಯ ಸಂಸ್ಥೆಯಲ್ಲಿ ಗಣಿಸಲ್ಪಟ್ಟನು. ೧೮೮೦ರಲ್ಲಿ 'ನಾಯಿಟ್ ಆಫ್ ದಿ ಆರ್ಡರ ಆಫ್ ಪೋಲಾರಸ್ಟಾರ, ಎಂಬ ಶ್ರೇಷ್ಠ ಪದವಿಯು ಇವನಿಗೆ ದೊರೆಯಿತು. ೧೮೯೩ರಲ್ಲಿ 'ಅಪಸಾಲಾ' ವಿಶ್ವವಿದ್ಯಾನಿಲಯದವರು ಈತನಿಗೆ ಡಾಕ್ಟರ ಆಫ್ ಫಿಲಾಸಫಿ ಅಥವಾ ಶಾಸ್ತ್ರಸಂಪನ್ನ ಎಂಬ ಬಿರುದನ್ನು ಕೊಟ್ಟರು.

ಈ ಪ್ರಕಾರವಾಗಿ ವಿದ್ಯಾಧನಸಂಪನ್ನನಾಗಿ ಶ್ರೇಷ್ಠ ತ್ಯಾಗಿಯೆಂದೆನಿಸಿಕೊಂಡು ತನ್ನ ವಯಸ್ಸಿನ ೬೩ನೆಯ ವರ್ಷ ಅಂದರೆ ೧೦-೧೨-೧೮೯೬ನೆಯ ಇಸ್ವಿ ದಿವಸ ತೀರಿಕೊಂಡನು.

ಮಕ್ಕಳ ಮನಸ್ಸಿನ ಒಲವನ್ನು ಅರಿಯದೆ ವಿದ್ಯಾಭ್ಯಾಸ ಮಾಡಿಸುವ ನಮ್ಮ ಜನರು ಮೇಲಿನ ಚರಿತ್ರನಾಯಕನ ಚರಿತ್ರೆಯಿಂದ ಬೋಧತೆಗೆದುಕೊಳ್ಳಬೇಕು. ಅದರಂತೆಯೇ ತಮ್ಮ ಮಕ್ಕಳು ತಮ್ಮ ಕಣ್ಣ ಮುಂದೆಯೇ ಇರಬೇಕೆನ್ನುವವರಿಗೆ ಈ ಚರಿತ್ರೆಯು ಕೈಗನ್ನಡಿಯಾಗಿದೆ. ಯಾವದೊಂದು ರೀತಿಯಲ್ಲಿ ತಾನೇ ಆಯುಷ್ಯವು ಹೋದಂತೆ ಹೋಗಲಿ ಎಂದೆನ್ನುತ್ತ ಉಂಡುಟ್ಟು ಹರಟೆಹೊಡೆಯುವವರು ನಿರುದ್ಯೋಗಿ ಪ್ರಜೆಗಳ ಜನಕರಾಗುವರೆಂಬ ಮಾತನ್ನು ಮರೆಯಕೂಡದು. ಪೃಥ್ವಿಯ ಒಂದೊಂದು ಮೂಲೆಯಲ್ಲಿ ಜನಿಸಿ ಇಡೀ ಪೃಥ್ವಿಯಲ್ಲಿ ನಾಮಾಂಕಿತರಾಗಿ ಮುಂದ ಬರುವ ಸಮಯದಲ್ಲಿ ಕ್ಷುಲ್ಲಕ ಪ್ರಪಂಚದ ಆಶೆಯಲ್ಲಿಯೇ ಮುಳುಗಿ ಕಣ್ಣೊರಿಸಿಕೊಳ್ಳುವ ನಮ್ಮವರಿಗೆ ಈ ಚರಿತ್ರೆಯು ಅಂಜನದಂತೆ ಇರುವದು.

ನಮ್ಮಲ್ಲಿಯ ಲಕ್ಷಾಧೀಶರು ಈ ಉಚ್ಚ ಧ್ಯೇಯದ ಕಡೆಗೆ ಲಕ್ಷ್ಯವಿಟ್ಟು ದಾನವೀರ ನೋಬೆಲ್ಲನ ಅನುಕರಣವನ್ನು ಮಾಡುವರೇನು ?

ರಾಸಾಯನಶಾಸ್ತ್ರದ ಪಾರಿತೋಷಿಕ ಕೊಡುವ ಕೆಲಸವನ್ನು ಸ್ವೀಡನದ ನೋಬೆಲ್ ಮಂಡಳದವರು ಮಾಡುವರು. ಪಾರಿತೋಷಿಕಾರ್ಹ ಶಾಸ್ತ್ರಜ್ಞರ ಹೆಸರನ್ನು ಸೂಚಿಸುವ ಅಧಿಕಾರವು ಸ್ವಾತಕಹೋಮದಲ್ಲಿಯ ತಜ್ಞರ ಗುಂಪಿನ ಕಡೆಗೆ ಇರುವದು. ಒಟ್ಟಿನ ಮೇಲೆ ಒಳ್ಳೆಯ ಪರಿಣತನೇ ಈ ಗುಂಪಿನೊಳಗಿಂದ ಸೋಸಿ ಇಳಿಯುವಂತೆ ಪಾರಿತೋಷಿಕ ಮಂಡಲದ ರಚನೆಯು ಇರುವದು. ಈ ಇನಾಮನ್ನು ನಮ್ಮಲ್ಲಿಯ 'ಸರ ಚಂದ್ರಶೇಖರ ವೆಂಕಟರಾಮನ್' ಎಂಬವರು ಹೊಂದಿರುವರು. ವಿಜಯಶಾಲಿಯಾದವನಿಗೆ ಪಾರಿತೋಷಿಕ, ಮಾನಪತ್ರ, ಸುವರ್ಣಪದಕಗಳು ಮಂಡಲದಿಂದ ಸಮಾರಂಭಪೂರ್ವಕವಾಗಿ ದೊರೆಯುವವು. ಆ ಪ್ರಸಂಗದಲ್ಲಿ ಅವನ ಉಪನ್ಯಾಸವೂ ಇರುವದು.

೧೯೦೧ ರಿಂದ ಪಾರಿತೋಷಿಕ ಕಾರ್ಯಕ್ಕೆ ಆರಂಭವಾಯಿತು. ಈ ವರೆಗೆ ವಾಸ್ತವ ಶಾಸ್ತ್ರದಲ್ಲಿ ೩೬ ಜನರು ಪಾರಿತೋಷಿಕ ಪಡೆದರು. ಕೆಲ ಕೆಲವು ವರ್ಷ ಇಬ್ಬರಲ್ಲಿ ಮೂವರಲ್ಲಿ ಪಾರಿತೋಷಿಕ ಹಂಚುವ ಪ್ರಸಂಗವು ಬಂದದರಿಂದ ವರ್ಷಕ್ಕೊಂದಕ್ಕಿಂತ ಹೆಚ್ಚು ಸಂಖ್ಯೆ ಬರುವದು ಸಹಜವದೆ. ಕೆಲ ಕೆಲವು ವರ್ಷ ಈ ಇನಾಮನ್ನು ಹಂಚಲೇ ಇಲ್ಲ. ಈ ೩೬ ಜನರಲ್ಲಿ ೧೦ ರಾಷ್ಟ್ರದ ವಿದ್ಯಾರ್ಥಿಗಳು ಬೆರೆತಿರುವರು. ಇದರಲ್ಲಿ ೧೧ ಜನರು ಬರಿಯ ಜರ್ಮನಿಯವರೇ ಇರುವರು. ಇಂಗ್ಲಂಡದವರು ೭ ಜನರಿರುವರು. ಹೋದ ಸಾರೆ ಈ ಬಹುಮಾನವನ್ನು ನಮ್ಮಲ್ಲಿಯ ಸರ ಚಂದ್ರಶೇಖರರು ದೊರಕಿಸಿದರೆಂಬದು ಶ್ಲಾಘನೀಯವಾಗಿದೆ.

ಜರ್ಮನಿ ಇಂಗ್ಲಂಡ ದೇಶಗಳ ಶಿಕ್ಷಣವು ಶ್ರೇಷ್ಠತರವಾಗಿರುವದೆಂಬ ದೃಷ್ಟಾಂತ ಎಂದಲೇ ನಿರ್ಣಯಿಸಲ್ಪಟ್ಟಂತೆ ಆಗಿದೆ. ನಮ್ಮಲ್ಲೇ ಕಲಿತು ಶ್ರೇಷ್ಠ ದೇಶಗಳ ವಿದ್ಯಾರ್ಥಿಗಳೊಡನೆ ಹೆಣಗಾಡಿ ಜಯ ಪಡೆದ ಚಂದ್ರಶೇಖರರ ಅನುಕರಣವನ್ನು ಭಾವೀ ವಿದ್ಯಾರ್ಥಿಗಳು ಮಾಡಬಲ್ಲರೇನು ?

ಆಹಾರ ವಿಚಾರ

ಲೇಖಕ— ಕಟ್ಟಿ: ಶಾಂಕೇತ.

ಶಾಸ್ತ್ರಜ್ಞರು, ನಾವು ಉಣ್ಣತಕ್ಕ ಅನ್ನದಲ್ಲಿ ಮುಖ್ಯವಾಗಿ ಪೋಷಕವಾದದ್ದನ್ನು ಒಂದು ಘಟಕವೆಂದು ಮೊದಲಿಗೆ ತಿಳಿದರು. ಅಷ್ಟರಮೇಲಿಂದಲೇ ಆರೋಗ್ಯವನ್ನು ಪೂರೈಸುವದಾಗಲಿಲ್ಲ. ಮೊದಲು ನಿರುಪಯುಕ್ತವೆಂದು ತಿಳಿದ ಅನ್ಯಭಾಗದಲ್ಲಿಯೂ ಕೂಡ ಅನೇಕ ಮಹತ್ವದ ಘಟಕಗಳಿರುವವೆಂದು ತಿಳಿದರು. ಇಂಥ ಅನೇಕ ಘಟಕಗಳಲ್ಲಿ ಒಟ್ಟಾಗಿ ಒಂದು ಮುಖ್ಯ ಘಟಕವನ್ನು ಶೋಧಿಸಿ ಅದಕ್ಕೆ 'ವಿಟಾಮಿನ್', ಎಂಬದಾಗಿ ಹೆಸರಿಟ್ಟರು. ಶೋಧಮಾಡುತ್ತ ನಡೆದಂತೆ ವಿಟಾಮಿನದಲ್ಲಿಯೂ ಭಾಗಗಳು ತೋರಲಾರಂಭಿಸಿದವು. ಇದು ಸಹ ಹಳೆಯ ಮಾತಾಗಿ ಹೋಯಿತು.

ಹೋದ ಶತಕದಲ್ಲಿ ರಸಾಯನಶಾಸ್ತ್ರದ ಅಭ್ಯಾಸವು ಭರದಿಂದ ನಡೆದದರಿಂದ ಶಾಸ್ತ್ರಜ್ಞರು ಕೆಲವು ದ್ರವ್ಯಗಳನ್ನು ಕಂಡುಹಿಡಿದರು. ಅಂಥ ಕೆಲವು ದ್ರವ್ಯಗಳಿಂದ ಜಂತುಗಳನ್ನು ದೂರಮಾಡಲಿಕ್ಕೆ ಬರುತ್ತದೆಂದು ಬಗೆದರು. ಅನೇಕ ಭಯಂಕರ ರೋಗವು ಹಬ್ಬಿದಾಗ ಈ ದ್ರವ್ಯಗಳ ಉಪಯೋಗವಾಗುವದೆಂದು ಈ ವರೆಗೂ ಸಹ ತಿಳಿದಿರುವರು. ನಿತ್ಯದ ವ್ಯವಹಾರದ ಆರೋಗ್ಯರಕ್ಷಣೆಯ ಪ್ರಸಂಗಗಳಲ್ಲಿ ಔಷಧವೆಂದು ಮೇಲೆ ಕಂಡು ಹಿಡಿದ ದ್ರವ್ಯಾಂಶವನ್ನು ಈಗಲೂ ಉಪಯೋಗಿಸಿ ಲಾಭಮಾಡಿಕೊಳ್ಳುತ್ತಲಿರುವರು. ಕಳೆದ ಶತಕದ ಕೊನೆಯಲ್ಲಿ ಆರೋಗ್ಯರಕ್ಷಣೆಗೆ 'ಜಂತು ನಿವಾರಣವು', ಮಹಾಮಂತ್ರ ವೆಂದು ತಿಳಿದರು.

ಬರಬರುತ್ತ ಇದಾದರೂ ಸುಖಸ್ವಪ್ನವೆಂದು ಗೊತ್ತಾಯಿತು. ಅನೇಕ ಪ್ರಸಂಗ ಗಳಲ್ಲಿ ಜಂತುಗಳನ್ನು ಕೊಂದರೂ ಅವುಗಳಿಂದ ಅಲಿಪ್ತವಾಗಿರುವದು ಅಸಂಭವವೆಂದು ತಿಳಿಯಿತು. ಈಗ ಇಂಥ ಸ್ಥಿತಿಯಲ್ಲಿಯೂ ಆರೋಗ್ಯವನ್ನು ಕಾಯುವ ಉಪಾ ಯವು ಶಾರೀರಬಲ ಕಾಯುವದೆಂದೂ, ಆ ಶಾರೀರಬಲವು ಆಹಾರಾದಿಗಳ ಮೇಲೆ ಅವಲಂಬಿಸಿರುವದೆಂದೂ ಗೊತ್ತಾಗಿದೆ. ಇತ್ತಿತ್ತಲಾಗಿ ಕೃತ್ರಿಮ ಆಹಾರಗಳು ಬಳಿಕೆ ಯಲ್ಲಿ ಬಂದವು. ಹೊಸ ಸಂತತಿಯಲ್ಲಿ ಕೃತ್ರಿಮ ಆಹಾರಗಳ ಕೆಟ್ಟ ಪರಿಣಾಮವು ತೋರಲಾರಂಭಿಸಿತು. ಬಳಿಕ ಬಾಲಸಪ್ತಾಹವನ್ನು ಪ್ರಾರಂಭಿಸಿ "ಅಟ್ಟಿಸಿದ ಹಾಲುಗಳ ಡಬ್ಬಿಗಳ ಉಪಯೋಗಮಾಡಬೇಡಿರೆಂದೂ ಆಗಲೇ ಹಿಂಡಿದ ಹಾಲನ್ನು ಉಪಯೋಗಿಸಿ ರೆಂದೂ ಭಾಷಣ ಮಾಡತೊಡಗಿದರು. "ಬಿಸ್ಕೀಟಗಳ ಬದಲಾಗಿ ಧಾನ್ಯದಲ್ಲಿ ಬಹಳ ಹೆಚ್ಚಿನ ಭಾಗವನ್ನು ತೆಗೆಯದೆ ರೊಟ್ಟಿಗಳನ್ನುಮಾಡಿ ಮಕ್ಕಳಿಗೆ ಕೊಡಿರಿ; ಡಬ್ಬಿಗಳಲ್ಲಿ ತುಂಬಿಬಂದ ಹಣ್ಣನ್ನಾಗಲಿ ಮಾಂಸವನ್ನಾಗಲಿ ಮಕ್ಕಳಿಗೆ ಕೊಡಬೇಡಿರಿ. ಆಗಲೇ ತಂದ ಕಾಯಿಪಲ್ಲೆಗಳನ್ನೂ ಹಣ್ಣನ್ನೂ ತಿನ್ನಿರಿ" ಇತ್ಯಾದಿ ಉಪದೇಶಗಳನ್ನು ಯುರೋಪ ದೇಶದಲ್ಲಿ ಕೂಡ ಮಾಡಲಾರಂಭಿಸಿರುವರು. ಬಳಿಕ ಆರೋಗ್ಯದ ರಕ್ಷಣವು ಜಂತು ನಿವಾರಣವನ್ನು ಬಿಟ್ಟು ಆಹಾರದಮೇಲೆ ಈಗ ಅವಲಂಬಿಸಿದೆ.

ನಮ್ಮ ಆಹಾರ:—ಹಿಂದುಸ್ಥಾನದ ಆಹಾರ ಕ್ರಮದಲ್ಲಿ ಬದಲಾಗದೆ ಎಂದಿನಿಂದಲೂ ಬಹುತರವಾಗಿ ಇದ್ದಂತೆ ಅದೆ. ಇದೊಂದು ಸಮಾಧಾನದ ಸಂಗತಿಯು. ಯಂತ್ರಗ ಳನ್ನು ಉಪಯೋಗಿಸದೆ ಕುಟ್ಟುವದು, ಕೇರುವದು, ಬೀಸುವದು ಬಹುತರವಾಗಿ ಬಳಿಕೆಯಲ್ಲಿ ಅವೆ. ಶಹರಗಳಲ್ಲಿ ಮಾತ್ರ ಯಂತ್ರಗಳಿಂದ ಕುಟ್ಟುವ, ಕೇರುವ ಕೆಲಸ ಮಾಡುವದರಿಂದ ಧಾನ್ಯಗಳ ಮೇಲಿನ ತೌಡು ಪೂರಾ ಹೊರಟು ಹೋಗುವದು. ಮಿಕ್ಕ ಕಡೆಯಲ್ಲೆಲ್ಲ ಹೇಗಿದ್ದರೂ ತೌಡು ಕೂಡಿದ ಹಿಟ್ಟೇ ಬಳಿಕೆಯಲ್ಲಿರುವದು. ಬೀಸಿದ ಹಿಟ್ಟು ಕೂಡ ಅವೊತ್ತಿನದೇ ಅವೊತ್ತು ಬಳಿಸಲ್ಪಡುತ್ತವೆ. ಎಲೆಗಳನ್ನು ಬೇಯಿಸದೆ ಹೆಚ್ಚಿ ನಿಂಬೀ ಹಣ್ಣು ಮೊದಲಾದವನ್ನು ಹಿಂಡಿ, ಕೋಸಂಬರಿ—ಪಚಡಿ ಮೊದಲಾದವು ಗಳನ್ನು ಉಪಯೋಗಿಸುವ ವಾಡಿಕೆಯು ಮೊದಲಿನಿಂದಲೂ ಈ ವರೆಗೂ ಅದೆ. ಹಾಲು ಮೊಸರು ಮಜ್ಜಿಗೆಗಳು ನಮ್ಮ ಪ್ರತಿನಿತ್ಯದ ಆಹಾರದಲ್ಲಿಯೂ ಇದ್ದೇ ಇರುತ್ತವೆ.

ಅವನ್ನು ಬಿಟ್ಟು ಬಿಡುವದು ಕೇವಲ ದಾರಿದ್ರ್ಯಮೂಲಕವಾಗಿ ಅಲ್ಲದೆ ಬೇರೆ ಏನೂ ಅಲ್ಲ. ಮೇಲೆ ವಿವರಿಸಿದ ಆಹಾರ ಪದ್ಧತಿಯಲ್ಲಿ ನೂತನ ರೀತಿಗನುಸರಿಸಿ ತಕ್ಕ ಆಹಾರ ದ್ರವ್ಯಗಳು ಕೂಡಿಯೇ ಇರುತ್ತವೆ.

ಹೊಸದಾಗಿ ಚಹಾ, ಕಾಫಿಗಳು ಬಳಿಕೆಯಲ್ಲಿ ಬಂದಂದಿನಿಂದ ಆಹಾರ ಸಾಮಗ್ರಿಯಲ್ಲಿ ಸಕ್ಕರೆಯ ಉಪಯೋಗವು ಹೆಚ್ಚಾಗಲಾರಂಭಿಸಿರುವದು. ಸುಮ್ಮ ಸುಮ್ಮನೆ ಸಕ್ಕರೆಯ ಉಪಯೋಗವನ್ನು ಹೆಚ್ಚಾಗಿ ರೂಢಿಸುವದು ಸರಿಯಲ್ಲ. ನಾವು ಉಪಯೋಗಿಸುವ ಧಾನ್ಯದ ಹಿಟ್ಟು ದೇಹದಲ್ಲಿ ಪಚನವಾಗುವಾಗುವಾಗ ಹುಟ್ಟುವ ಸಕ್ಕರೆಯೇ ಸಾಕಾಗಿದೆ. ಹೊರಗಿನ ಸಕ್ಕರೆಯನ್ನು ಉಪಯೋಗಿಸುವ ಕಾರಣವಿಲ್ಲ. ಧಾನ್ಯಗಳ ಮೇಲಿನ ತೌಡು ತೆಗೆದು ಉಪಯೋಗಿಸುವ ಕಾಡುಬಳಿಕೆಯು ಈಗೀಗ ತೋರಲಾರಂಭಿಸಿದೆ. ಅದರಂತೆಯೇ ಬೀಸಿಕೊಳ್ಳಲಿಕ್ಕಾಗದೆ ಅಂಗಡಿಯಲ್ಲಿಯ ಹಳೆಯ ಹಿಟ್ಟನ್ನು ಉಪಯೋಗಿಸತೊಡಗಿರುವರು. ದೊಡ್ಡ ದೊಡ್ಡ ಊರುಗಳಲ್ಲಿ ತಾಯಿಗಳಿಂದ ತಕ್ಕಷ್ಟು ಹಾಲು ದೊರೆಯದ್ದರಿಂದ ಗ್ಲ್ಯಾಕ್ಸೋಗಳ ಉಪಯೋಗವು ರೂಢಿಯಲ್ಲಿ ಬರತೊಡಗಿದೆ. ಶ್ರೀಮಂತರು ಸುಮ್ಮಸುಮ್ಮನೆ ನಿರರ್ಥಕ ಪದಾರ್ಥಗಳನ್ನು ಸೇವಿಸಿ ಅಜೀರ್ಣರೋಗದಿಂದ ನರಳುತ್ತಿದ್ದರೆ ಬಡವರು ಹೊಟ್ಟೆಗಿಲ್ಲದೆ, ಆಹಾರದ ಘಟಕ ದ್ರವ್ಯಗಳಿಗೇ ಏಕೆ ? ಆಹಾರದ ಕೊರತೆಗೇ ಪಾತ್ರವಾಗಿರುವರು. 'ಅಂತು ಇಂತೂ ಕುಂತೀ ಮಕ್ಕಳು' ಎಂಬಂತೆ ಆಹಾರದ ಸ್ಥಿತಿಯು ಕೆಡಲಾರಂಭಿಸಿರುವದು.

ಎಷ್ಟೋ ವರ್ಷಗಳಿಂದ ಹಿಂದುಸ್ಥಾನದವರು ಶಾಸ್ತ್ರೀಯ ಶೋಧ ವಿಷಯದಲ್ಲಿ ಸ್ತಬ್ಧರಾಗಿರುವರು. ಆದರೂ ಯೋಗ್ಯ ಆಹಾರವೇ ಬಳಿಕೆಯಲ್ಲಿರುವದಕ್ಕೆ ಎಷ್ಟೋ ಸಾವಿರ ವರುಷಗಳ ಪೂರ್ವದಲ್ಲಿ ಶಾಸ್ತ್ರಕಾರರು ಮಾಡಿದ ಪರಿಶ್ರಮವೇ ಕಾರಣವಾಗಿದೆ. ಹೀಗಿದ್ದರೂ ಕೂಡ ಸುಮ್ಮ ಸುಮ್ಮನೆ ಕಾಡು ಆಹಾರ ಪೇಯಗಳ ಅನುಕರಣ ಮಾಡುವದು ಆರ್ಥಿಕ ದೃಷ್ಟಿಯಿಂದಲೂ ಆರೋಗ್ಯ ದೃಷ್ಟಿಯಿಂದಲೂ ಅಹಿತಕರವದೆ. ಇದೆಲ್ಲ ಗೊತ್ತಿದ್ದರೂ ಕಾಡು ಅನುಕರಣವನ್ನು ಜನರು ಬಿಡುವದಿಲ್ಲ, ಆದರ ಕೂಡ ಔಷದ ತಕ್ಕೊಳ್ಳುವದೂ ತಪ್ಪುವದಿಲ್ಲ. ಈ ರೀತಿಯಾಗಿ ಆರ್ಥಿಕ ಹಾನಿಯು ಅಪರಿಮಿತವಾಗಿರುವದು.

ಚಹಾ, ಕಾಫಿ ಚುಟ್ಟ ಮೊದಲಾದವುಗಳ ವ್ಯಸನದಿಂದ ನಮ್ಮಲ್ಲಿಯ ತರುಣರು ಹಾಳಾಗುತ್ತಲಿರುವರು. ಅವುಗಳ ಘಟಕದಲ್ಲಿ ಅಹಿತಕಾರಕ ಪದಾರ್ಥಗಳಿದ್ದರೂ ಇರಲಿ, ಬಿಸಿ ಪ್ರವಾಹಿಯ ಸೇವನೆಯಿಂದ ದೇಹದ ಒಳಭಾಗಕ್ಕೆ ಅಪಾಯ ಸಂಭವಿಸುವದು

ಮೊದಲಿನಿಂದ ಬಳಿಕೆಯಲ್ಲಿದ್ದ, ನಿಯಮಿತ ವೇಳೆಗೆ ಊಟ, ಪೇಯ, ಮಜ್ಜಿಗೆ ಸಿಂಬೀ ಹಣ್ಣುಗಳ ಉಪಯೋಗ ಇವು ಸರ್ವೋತ್ಕೃಷ್ಟವಾಗಿವೆ. ಬೆಣ್ಣೆ ಕೂಡಿದ ಮಜ್ಜಿಗೆಯಂತೂ ಅಮೃತ ಸಮಾನವು.

ಕೆಲವು ಪ್ರಸಿದ್ಧ ಭೂಕಂಪಗಳು

ಲೇಖಕ:—ಶೆಟ್ಟಿ, ಶಾಂತೇಶ

(೧) ನ್ಯೂಝಿಲಂಡದಲ್ಲಿ ಮೊನ್ನೆ ಮೊನ್ನೆ ದೊಡ್ಡ ಭೂಕಂಪವಾಗಿದೆ. ಅದೇ ಸ್ಥಳದಲ್ಲಿ ಹಿಂದಕ್ಕೆ ಕ್ರಿ. ಶ. ಪೂ. ೪೨೫ನೆ ವ. ದಲ್ಲಿ ಭೂಕಂಪವಾಗಿದ್ದಿತು. ಆ ಭೂಕಂಪ ದಿಂದಲೆ ಸದ್ಯಕ್ಕೆ ಅಲ್ಲಿರುವ ಯುಬೋಕಾ ದ್ವೀಪವು ಉತ್ಪನ್ನವಾಗಿರುವದಂತೆ

(೨) ಲಿಸ್ಬನ್ ಪಟ್ಟಣದಲ್ಲಿ ೧-೧೧-೧೭೫೫ನೆಯ ದಿವಸ ಒಂದು ಭೂಕಂಪ ವಾಯಿತು. ಅದು ೮ ಮಿನಿಟುಗಳವರೆಗೆ ತನ್ನ ಕೆಲಸ ನಡಿಸಿತು. ೫೬ ಸಾವಿರ ನಾಗರಿಕರು ಉಧ್ವಸ್ತರಾದರು. ಅದರ ಗಡಬಿಡಿಯಿಂದ ಕೋಯಿಂಬ್ರಾ, ಒಪೋರ್ತೊ, ಬ್ರಾಗಾ ಪಟ್ಟ ಣಗಳು ನೆಲಸಮ ಆದವು. ಸ್ಪೇನದಲ್ಲಿಯ 'ಮಲಗಾ' ಎಂಬ ಭಾಗವು ವಿಧ್ವಂಸವಾ ಯಿತು. ಮೊರೊಕ್ಕೋದಲ್ಲಿಯು ೧೨೦೦೦ ಜನರು ಸತ್ತರು. ಮದಿರಾದ್ವೀಪಕ್ಕೆ ಸಹ ಇದರಿಂದ ಧಕ್ಕೆಯಾಯಿತು. ಆರ್ಕಿಪೆಲಾಗೋದಲ್ಲಿಯ 'ಮಿಟಿಲಿನ' ದ್ವೀಪದಲ್ಲಿ ೨೦೦೦ ಮನೆಗಳು ಬಿದ್ದವು. ಈ ಭೂಕಂಪವು ೫ ಸಾವಿರ ಮೈಲುಗಳ ವರೆಗೆ ತನ್ನ ಆಡಳಿತ ವನ್ನು ನಡೆಯಿಸಿತು.

(೩) ಚಿಲೀ, ಹಾಗು ಸಾನ್‌ಫ್ರಾನ್ಸಿಸ್ಕೋಗಳಲ್ಲಿ ೧೯೦೬ನೆಯ ಇ ಯಲ್ಲಿ ಆಯಿತು, ಜಮೇಕಾದಲ್ಲಿ ೧೯೦೭ನೆ ಇಸವಿಯಲ್ಲಿ ಆಯಿತು. ಸಾನ್‌ಫ್ರಾನ್ಸಿಸ್ಕೋ ಶಹರದ ಬಹು ಭಾಗವು ಈ ಭೂಕಂಪದಿಂದ ನಷ್ಟವಾಯಿತು. ಸಮಾರು ೭ ಕೋಟಿ ಪೌಂಡುಗಳು ಹಾನಿಯಾದವು.

(೪) ಹಿಂದುಸ್ತಾನದಲ್ಲಿ ಒಂದು ಭೂಕಂಪವು ಎಪ್ರಿಲ ೧೯೦೫ನೆಯ ಇ. ಯಲ್ಲಿ ಆಯಿತು. ಈ ಭೂಕಂಪದಿಂದ ಧರ್ಮಶಾಲೆಗಳೂ, ಹವೆಗಾಗಿ ಹೋದ ಗುರಖಾ ಸೈನ್ಯ ದಲ್ಲಿ ೪೭೦ ಸೈನಿಕರೂ ನಾಶವಾದರು. ಇದರ ಹೊರತಾಗಿ ಲಾಹೋರ, ಅಮೃತಸರ, ಪಾಲನಪೂರ, ಇತ್ಯಾದಿ ಸ್ಥಳಗಳಲ್ಲಿಯೂ ಕೆಲಕೆಲವು ಜನರು ಸತ್ತರು.

(೫) ಜಪಾನದಲ್ಲಿ ೩-೭-೧೫೫೫ನೆಯ ಇ. ಯಲ್ಲಿ ಒಂದು ಭೂಕಂಪವಾಯಿತು. ಇದರಿಂದಲೂ ಎಷ್ಟೋ ಅನರ್ಥವಾಯಿತು. ಅಲ್ಲಿಯೇ ಮೇಲಿಂದಮೇಲೆ ೧೨ ರಿಂದ ೧೫ರ ವರೆಗೆ ಭೂಕಂಪಗಳಾದವು. ತಾ॥ ೨೮-೧೧-೧೮೯೧ನೆಯ ಇಸವಿಯಲ್ಲೊಂದು ಭೂಕಂಪವು ನಿಫೋನದ್ವೀಪ (ಜಪಾನ) ದಲ್ಲಿ ಆಯಿತು. ೮೦೦೦೦ ಮನೆಗಳು ನಷ್ಟವಾ ದವು. ಹಾಗು ರೇಲ್ವೆ ಪೂಲು ಹಾಳಾಯಿತು. ೧೦ ಸಾ. ಜನರು ನಾಶವಾದರು. ೨ ಲಕ್ಷ ಜನರು ನಿರಾಶ್ರಿತವಾದರು. ಅಲ್ಲಿಯೇ ಭಾಗೀ ಎಂಬಲ್ಲಿ ೧೭-೩-೧೯೦೨ ರಲ್ಲಿ ಭೂಕಂಪವಾಗಿ ೯೦ ಲಕ್ಷ ಪೌಂಡುಗಳ ಹಾನಿಯಾಯಿತು. ಇದರ ಹೊರತು ಯೊಕೋ ಹಾಮಾದಲ್ಲಿ ೧೮೯೪ರಲ್ಲಿ ಭೂಕಂಪವಾಯಿತು. ೧೮೯೬ರಲ್ಲಿ ಜಪಾನದಲ್ಲಿ ಆದ ಭೂಕಂಪ

ದಿಂದ ಪ್ರತ್ಯಕ್ಷ ಪ್ರಳಯ ಕಾಲವೇ ಒದಗಿತು. ಅದರಂತೆಯೇ ಮೊನ್ನೆ ಮೊನ್ನೆ ೧೯೨೩ ರಲ್ಲಿ ಜಪಾನದಲ್ಲಿ ಆದ ಭೂಕಂಪವು ಸ್ಮರಣದಲ್ಲಿಡತಕ್ಕದ್ದಾಗಿದೆ.

ಒಟ್ಟಿನಮೇಲೆ ಅಸಾಧ್ಯ ಭೂಕಂಪಗಳು ಜ್ವಾಲಾಮುಖಿಗಳ ನೆರೆಯಲ್ಲಿಯೇ ಆಗುವವೆಂದು ತಿಳಿಯುತ್ತದೆ.

ದಶಾಂಶ ಭಾಗಾಕಾರ ಕಲಿಸುವ ಒಂದು ಹೊಸ ಪದ್ಧತಿ

ಲೇಖಕ :— ಮಿ. ರೀ. ಲಿಂ. ಜವಳಿ, ಬಿ. ಎಸ್. ಸಿ. ಬಿ. ಟಿ. ಹೆಡ್‌ಮಾಸ್ತರ.

ಶ್ರೀ. ಸಿದ್ಧೇಶ್ವರ ಹಾಯಸ್ಕೂಲ ವಿಜಾಪುರ.

ದಶಾಂಶ ಭಾಗಾಕಾರ ಕಲಿಸುವ ಈಗಿನ ಪದ್ಧತಿಯನ್ನು ವಿಮರ್ಶಿಸಲವಶ್ಯವಿಲ್ಲ. ಈಗಿನ ಪದ್ಧತಿಯಲ್ಲಿ ಹುಡುಗರು ತಿಳಿಯದೇ ಲೆಕ್ಕ ಮಾಡುವದು ಮಾತ್ರ ನಿಜವು; ಮತ್ತು ಶಿಕ್ಷಕರು ಹೇಳಿದಂತೆ ಭಾಗಾಕಾರದಲ್ಲಿ ದಶಾಂಶಚಿಹ್ನವನ್ನು ಇಡುತ್ತಾರೆ. ಅದರ ಗೂಢವು ಹುಡುಗರಿಗೆ ತಿಳಿಯುವಂತಿಲ್ಲ. ಅದೇ ಈಗ ಕೆಳಗೆ ಕಾಣಿಸಿದ ಪದ್ಧತಿಯಿಂದ ಕಲಿಸಿದರೆ ಹುಡುಗರು ತೀವ್ರವೂ ತಿಳಿವಳಿಕೆಯಿಂದಲೂ ಮಾಡುತ್ತಾರೆ. ಇದರಿಂದ ದಶಾಂಶಚಿಹ್ನವನ್ನು ಬರೆಯುವವರಲ್ಲಿಯ ಅಡಚಣಿಯೂ ದೂರಾಗುತ್ತದೆ. ಭಾಜ್ಯದಲ್ಲಿಯ ಏಕ್ಕಂ ಸ್ಥಾನದ ಅಂಕಿಯನ್ನು ತಕ್ಕೊಂಡು ಭಾಗಿಸಿದ ಮೇಲೆ ಭಾಗಾಕಾರದಲ್ಲಿ ದಶಾಂಶಚಿಹ್ನವನ್ನು ಬರೆದು ಮುಂದೆ ಭಾಗಿಸುತ್ತ ಹೋಗಬೇಕೆಂಬುದು ಸಹಜ ತಿಳಿಯುವದು.

ಪದ್ಧತಿ

ಈ ಪದ್ಧತಿಯ ಮುಖ್ಯ ತತ್ವ ವೇನೆಂದರೆ ಭಾಜಕವನ್ನು ಪೂರ್ಣ ಅಂಕಿಯನ್ನಾಗಿ ಮಾಡಿದ ನಂತರ ಭಾಗಿಸುವದಿರುತ್ತದೆ.

ಮೊದಲು ಭಾಜಕವನ್ನು ಪೂರ್ಣಾಂಕವನ್ನು ಮಾಡುವದಕ್ಕೆ ೧೦ ರಿಂದ ಅಥವಾ ಹತ್ತರ ಯಾವ ಘಾತದಿಂದ ಗುಣಿಸಬೇಕೆಂಬದನ್ನು ಗೊತ್ತುಮಾಡಿಕೊಳ್ಳಬೇಕು. ಗೊತ್ತು ಮಾಡಿದ ಅಂಕಿಯಿಂದ ಭಾಜ್ಯ ಮತ್ತು ಭಾಜಕಗಳನ್ನು ಗುಣಿಸಬೇಕು. ಬಳಿಕ ಪೂರ್ಣಾಂಕವನ್ನು ಪೂರ್ಣಾಂಕದಿಂದ ಭಾಗಿಸುವಂತೆ ಸಾದಾ ಭಾಗಾಕಾರ ಮಾಡುತ್ತ ಹೋಗಬೇಕು. ಭಾಜ್ಯದಲ್ಲಿ ಏಕ್ಕಂ ಸ್ಥಾನದ ಅಂಕಿಯನ್ನು ಭಾಗಿಸಿದ ಮೇಲೆ ಭಾಗಾಕಾರದಲ್ಲಿ ದಶಾಂಶಚಿಹ್ನ ಬರೆದು ಮುಂದೆ ಸಾಗಬೇಕು.

ಕೆಳಗಿನಂತೆ ಮೊದಲು ಒಂದು ಪಾಠ ಕಲಿಸಿ ಮೇಲಿನ ಪದ್ಧತಿಯನ್ನು ಸ್ಪಷ್ಟೀಕರಿಸುತ್ತೇನೆ.

೧೦ ಅಥವಾ ೧೦ರ ಘಾತದಿಂದ ಗುಣಿಸುವದೆಂದರೆ ಈ ಗುಣಕದಲ್ಲಿದ್ದ ಪೂಜಿಗಳಷ್ಟು ಸ್ಥಾನಗಳ ಮಟ್ಟಿಗೆ ಗುಣ್ಯದಲ್ಲಿಯ ದಶಾಂಶಚಿಹ್ನವನ್ನು ಬಲಕ್ಕೆ ಮುಂದೆ ಸರಿಸುವದು. ಇದನ್ನು ಉದಾಹರಣೆಯಿಂದ ಕಲಿಸಿ ಹುಡುಗರಿಗೆ ಮನದಟ್ಟಾಗುವಂತೆ ಮಾಡಬೇಕು.

ಆಗ ಕೆಳಗಿನಂತೆ ಉದಾಹರಣೆಗಳನ್ನು ಹೇಳಬೇಕು.

(೧)	೫·೮೫೭೨	×	೧೦ ರಿಂದ	೧೦೦ ರಿಂದ	೧೦೦೦ ದಿಂದ	ಇತ್ಯಾದಿ
(೨)	೬೮·೭೩೨	×	,,	,,	,,	,,
(೩)	೪೩೨.೫೮	×	,,	,,	,,	,,
(೪)	·೦೦೫೮	×	,,	,,	,,	,,

ಬಳಿಕ ಭಾಜಕವು ಪೂರ್ಣಾಂಕವಿದ್ದ ದಶಾಂಶ ಭಾಗಾಕಾರವನ್ನು ಕೆಳಗಿನಂತೆ ಮಾಡಿಸಬೇಕು.

```
೬೨ ) ೨೭೮.೩೮ ( ೪.೪೯
     ೨೪೮
     ----
     ೦೩೦೩
      ೨೪೮
      ----
      ೦೫೫೮
       ೫೫೮
       ----
       ೦೦೦
```

ಇಲ್ಲಿ ಭಾಜ್ಯದಲ್ಲಿಯ ಏಕ್ಕಮದ ೮ನ್ನು ಭಾಗಿಸಿದ ನಂತರ ಭಾಗಾಕಾರದಲ್ಲಿ ನಾಲ್ಕರ ಮುಂದೆ ದಶಾಂಶಚಿಹ್ನವನ್ನು ಬರೆದಿರುತ್ತದೆ.

ಇನ್ನು ಭಾಜ್ಯಭಾಜಕಗಳೆರಡೂ ದಶಾಂಶ ಅಪೂರ್ಣಾಂಕಗಳೇ ಇರಲಿ.

ಉದಾ: ೭೨.೫೬೪೯೨ ÷ ೫.೭೨

ಇಲ್ಲಿ ಭಾಜಕವನ್ನು ಪೂರ್ಣಾಂಕ ಮಾಡುವ ಸಲುವಾಗಿ ಅದಕ್ಕೆ ೧೦೦ ರಿಂದ ಗುಣಿಸಬೇಕಾಯಿತು. ಅದನ್ನೂ ಭಾಜ್ಯವನ್ನೂ ೧೦೦ ರಿಂದ ಗುಣಿಸುವದಕ್ಕಾಗಿ ಪ್ರತಿಯೊಂದರಲ್ಲಿಯ ದಶಾಂಶಚಿಹ್ನವನ್ನು ಎರಡು ಸ್ಥಾನಗಳ ಮಟ್ಟಿಗೆ ಮುಂದೆ ಒಯ್ಯಬೇಕು. ಅದರಿಂದ ಈಗ ಈ ಉದಾಹರಣೆಯು. ೭೨೫೬'೪೯೨ ÷ ೫೭೨ ಹೀಗಾಯಿತು.

ಇದು ಮೇಲೆ ಮಾಡಿ ತೋರಿಸಿದ ಲೆಕ್ಕದ ಸ್ವರೂಪವನ್ನೇ ಹೊಂದಿದ್ದರಿಂದ ಅದರಂತೆ ಮಾಡಿದರಾಯಿತು.

```
೫೭೨ ) ೭೨೫೬·೩೯೨ ( ೧೨·೬೮೬
       ೫೭೨
       ────
       ೧೫೩೬
       ೧೧೪೪
       ────
        ೩೯೨೩
        ೩೪೩೨
        ────
        ೦೪೯೧೯
          ೪೫೭೬
          ────
         ೦೩೪೩೨
           ೩೪೩೨
           ────
           ೦೦೦೦
```

ಸ್ಪಷ್ಟೀಕರಣ :—

$$\text{ಭಾಗಾಕಾರ} = \frac{೭೨·೫೬೩೯೨}{೫·೭೨} = \frac{೭೨·೫೬೩೯೨\times೧೦೦}{೫·೭೨\times೧೦೦} = \frac{೭೨೫೬.೩೯೨}{೫೭೨} = ೧೨,೬೮೬$$

ಮಾಡುವಾಗ ಭಾಜ್ಯದಲ್ಲಿಯ ೬ನ್ನು ಭಾಗಿಸಿದ ನಂತರ ಭಾಗಾಕಾರದಲ್ಲಿ ೨ ರ ಮುಂದೆ ದಶಾಂಶಚಿಹ್ನವನ್ನು ಇಟ್ಟಿರುತ್ತದೆ. ಈ ರೀತಿಯಿಂದ ದಶಾಂಶಚಿಹ್ನವನ್ನು ಇಡುವದರಲ್ಲಿಯ ಅಡಚಣಿಯು ಹೇಗೆ ದೂರ ಮಾಡಲ್ಪಟ್ಟಿತೆಂಬುವದು ಸ್ಪಷ್ಟವಿದೆ. ಮತ್ತು ಸಾದಾ ಭಾಗಾಕಾರವನ್ನು ಮಾಡಿದಂತೆ ಈ ದಶಾಂಶ ಭಾಗಾಕಾರ ಮಾಡಿದ ಹಾಗೆ ಅನಿಸುತ್ತದೆ.

ಕೆಳಗಿನ ಲೆಕ್ಕಗಳನ್ನು ಹುಡುಗರು ತಿಳಕೊಂಡು ಮಾಡುತ್ತಾರೆ.

(೧)	೩೨೧ ರಿಂದ	.೦೦೩೪೪೬ ನ್ನು ಭಾಗಿಸಿರಿ.	
(೨)	೩೨·೧	,,	,,
(೩)	೩·೨೧	,,	,,
(೪)	·೩೨೧	,,	,,
(೫)	·೦೩೨೧	,,	,,

ವ್ಹ. ಫಾ. ಪರೀಕ್ಷೆಯ ಪರಿಣಾಮವು

(ಕಳೆದ ತಿಂಗಳಿನಿಂದ ಮುಂದುವರಿದುದು)

೪೧	ಫಕ್ಕೀರಯ್ಯ ಬಸವಣ್ಣೆಯ್ಯ ಮಠದ	೩೦೦
೪೨	ಬಸೆಟ್ಟೆಪ್ಪ ಚನ್ನಬಸಪ್ಪ ಪಟ್ಟೇದ	೨೯೯
,,	ಸಿದ್ದನಗೌಡ ಉಜ್ಜನಗೌಡ ಪಾಟೀಲ	೨೯೯
,,	ವೀರಪ್ಪ ಫಕೀರಪ್ಪ ಭೂತಾಲಿ	೨೯೯
೪೫	ಪಾಂಡುರಂಗ ಮಲ್ಹಾರೆಪ್ಪ ಕುಮಟೀಕರ	೨೯೮
,,	ವೀರಪ್ಪ ರಾಚಪ್ಪ ಗದಗ	೨೯೮
,,	ಕಲ್ಲಪ್ಪ ಮಲ್ಲಪ್ಪ ಕಿರೇಸೂರ	೨೯೮
೪೮	ವೀರಭದ್ರಪ್ಪ ಮಹಾದೇವಪ್ಪ ಹೆಗಡಿ	೨೯೭
೪೯	ಬಸವಂತ ಶಿವಪ್ಪ ಸವದತ್ತಿ	೨೯೩
,,	ಇಸ್ಮಾಯಿಲ್ ಚಮನಸಾಬ ಪೆಂಡಾರಿ	೨೯೩
೫೧	ಬಸಪ್ಪ ಪ್ರಭಪ್ಪ ಶಿರೋಳ	೨೯೦
,,	ಬಸವಣ್ಣೆಪ್ಪ ಬಸಪ್ಪ ಕಾಯಕದ	೨೯೦
,,	ಬಸ್ಯಾ ಶೆಟ್ಟೆಪ್ಪ ಕೊತಬಾಳ	೨೯೦
,,	ಲಿಂಗಪ್ಪ ಹೊನಕೇರಪ್ಪ ಬೂದಿಹಾಳ	೨೯೦
,,	ರಾಮಪ್ಪ ಕರೂರಪ್ಪ ಎಲಿಗಾರ	೨೯೦
೫೬	ಹೇಮಪ್ಪ ಭರಮಗೌಡ ಸಣ್ಣಗೌಡರ	೨೮೯
೫೭	ಬಸಪ್ಪ ಪರಪ್ಪ ಅಂಕದ	೨೮೮
,,	ಬಸವಂತಯ್ಯ ಲಿಂಗಯ್ಯ ಹೊಂಬಳ	೨೮೮
,,	ಶಿದ್ದಪ್ಪ ಚನ್ನಬಸಪ್ಪ ಹೊಂಬಳ	೨೮೮
೬೦	ಭೀಮನಗೌಡ ಲಿಂಗನಗೌಡ ಹಿರೇಗೌಡರ	೨೮೭
೬೧	ಶಿದ್ದಪ್ಪ ಶಿವಪ್ಪ ಕರೇಗಲ್ಲ	೨೮೬
೬೨	ಬಸಪ್ಪ ಯಶವಂತಪ್ಪ ಅಳಗವಾಡಿ	೨೮೫
,,	ಫಕೀರಸಾಬ ಗೂಡುಸಾಬ ನದಾಫ	೨೮೫
೬೪	ಸಣ್ಣಪ್ಪ ಹುಲಗಪ್ಪ ಬಲಗೋಡ	೨೮೩
,,	ಶ್ರೀನಿವಾಸ ರಾಮಚಂದ್ರ ಗಾರ್ಶೀಪೂ।	೨೮೩
೬೬	ತಿಪ್ಪಣ್ಣ ಅಡಿವೆಪ್ಪ ಮುರಗೋಡ	೨೮೩
೬೭	ದೇವೇಂದ್ರ ಅಪ್ಪಾಜಿ ಮೋಟಿ	೨೮೩

೬೮	ಫಕೀರಗೌಡ ವೀರನಗೌಡ ಪಾಟೀಲ	೨೮೦
೬೯	ಬಸವಂತಯ್ಯ ವೀರಯ್ಯ ಪೂಜಾರ	೨೭೯
,,	ರಂಗೋ ಹಣಮಂತ ನಾಡಕರ್ಣಿ	೨೭೯
,,	ವೀರಯ್ಯ ಗುರುಬಸಯ್ಯ ದಂಡಿನ	೨೭೯
,	ವೀರಯ್ಯ ಶಿದ್ಧಲಿಂಗಯ್ಯ ರಿತ್ತೀಮಠ	೨೭೯
೭೩	ಮಹದೇವ ಹಣಮಂತ ಹಾದೀಮನಿ	೨೭೮
೭೪	ಸಾನಂಭಟ್ಟ ಗೋವಿಂದಭಟ್ಟ ತೆಂಬದಮನಿ	೨೭೬
೭೫	ಅಲ್ಲಾಉದ್ದೀನ ಹುಸೇನಸಾಹೇಬ ಶಿರಹಟ್ಟಿ	೨೭೫
,,	ಮಲ್ಲಯ್ಯ ತೀರ್ಥಯ್ಯ ಜಾವೂರ	೨೭೫
,,	ವೆಂಕಟೇಶ ನಾರಾಯಣ ಜೋಶಿ	೨೭೫
೭೮	ನಬೀಸಾಬ ಬಾಲೇಸಾಬ ಪಿಂಜಾರ	೨೭೪
,,	ರಾಚಯ್ಯ ಬಸಯ್ಯ ಗಣಾಚಾರಿ	೨೭೪
,,	ರಾಚಪ್ಪ ನಾಗಪ್ಪ ದಶವಂತರ	೨೭೪
,,	ಶಿವಯ್ಯ ರಾಚಯ್ಯ ಹಿರೇಮಠ	೨೭೪
೮೨	ಮಹಾದೇವಪ್ಪ ಬಸಪ್ಪ ತೋಟಾರ	೨೭೩
೮೩	ಭೀಮಪ್ಪ ಹಣಮಂತಪ್ಪ ಸುರೇಬಾನ	೨೭೩
೮೩	ಮಲ್ಲನಗೌಡ ಫಕೀರಗೌಡ ಪಾಟೀಲ	೨೭೩
,,	ರಾಮಚಂದ್ರ ವಿಶ್ವನಾಥ ಫೈಸಾಸ	೨೭೩
೮೬	ಚನಬಸಪ್ಪ ಸರಪ್ಪ ಹಡಪದ	೨೭೧
,,	ಲಿಂಗಪ್ಪ ಭೀಮಪ್ಪ ಸುಂಕದ	೨೭೧
೮೮	ಕೃಷ್ಣಾಜಿ ಲಕ್ಷ್ಮಣರಾವ ಮುಜುಮದಾರ	೨೭೦
೮೯	ಲಕ್ಷ್ಮಣ ಕರಿಹನಮಪ್ಪ ಯಲಿಗಾರ	೨೬೯
೯೦	ದೇವನಗೌಡ ತಮ್ಮನಗೌಡ ಪಾಟೀಲ	೨೬೮
,,	ಕಲ್ಲನಗೌಡ ಚಂದ್ರಗೌಡ ಪೋಲೀಸ	೨೬೮
೯೨	ಬಸಲಿಂಗಪ್ಪ ಮಲ್ಲಪ್ಪ ಕೊಪ್ಪದ	೨೬೭
೯೩	ನಾರಾಯಣ ಗುರುನಾಥ ಕುಲಕರ್ಣಿ	೨೬೬
೯೪	ವಿರುಪಾಕ್ಷ ಅನಂತರಾವ ದೇಸಾಯಿ	೨೬೫
೯೫	ಸೋಮನಗೌಡ ಸಂಕನಗೌಡ ಪಾಟೀಲ	೨೬೪
೯೬	ದತ್ತಾತ್ರೇಯ ಕೃಷ್ಣಾಜಿ ಕುಲಕರ್ಣಿ	೨೬೩
೯೭	ಮಹದೇವಪ್ಪ ಅಂದಾನೆಪ್ಪ ಶಿಂಪಿ	೨೬೩
,,	ಶಿವಪ್ಪ ಭೀಮಪ್ಪ ಸೋಮಪ್ಪನವರ	೨೬೩
೯೯	ಭಾಸ್ಕರಪ್ಪ ಅಬ್ರಹಾಮಪ್ಪ ಜೋಗುಳ	೨೬೨

,,	ಲಕ್ಷ್ಮಣಗೌಡ ಫಕೀರಗೌಡ ಪಾಟೀಲ	೨೬೨
,,	ಪುಂಡಲೀಕ ವೆಂಕೋಸಾ ಭಂಡಿಗೆ	೨೬೨
,,	ಪುರದಪ್ಪ ತಿಪ್ಪಣ್ಣ ದುರ್ಗದ	೨೬೨
೧೦೩	ಹಣಮಂತಪ್ಪ ಹಣಮಪ್ಪ ಸುಣಗಾರ	೨೬೧
,,	ನಿಂಗಪ್ಪ ಮಲ್ಲಪ್ಪ ಎಲಿಗಾರ	೨೬೧
,,	ಶಂಕರಗೌಡ ಶಿವನಗೌಡ ಪಾಟೀಲ	೨೬೧
,,	ಶಂಕರಯ್ಯ ಗುರಬಸಯ್ಯ ನಂದೀಕೋಲಮಠ	೨೬೧
೧೦೭	ಬಸವಣ್ಣೆಪ್ಪಾ ನಾಗಪ್ಪ ಜವಳಿ	೨೬೦
,,	ಸಂಗರಡ್ಡಿ ಶಿವಪ್ಪ ಚಿತ್ತಾಪೂರ	೨೫೯
೧೦೯	ಬಸನಗೌಡ ಬಸಪ್ಪಗೌಡ ತೆಗ್ಗಿನಕೇರಿ	೨೫೯
,,	ಬಸನಗೌಡ ನಿಂಗನಗೌಡ ಪಾಟೀಲ	೨೫೯
,,	ಕೃಷ್ಣಗೌಡ ರಾಮನಗೌಡ ಮುದಿಗೌಡರ	೨೫೯
,,	ಕೃಷ್ಣಾಜಿ ವೆಂಕಟೇಶ ದೇಶಪಾಂಡೆ	೨೫೯
೧೧೩	ರಾಮಚಂದ್ರ ಗುಡ್ಡಪ್ಪ ದಡ್ಡೀಕೊಪ್ಪ	೨೫೮
೧೧೪	ಚನ್ನಯ್ಯಾ ರಾಚಯ್ಯ ಅಂತಿ	೨೫೭
,,	ಗುಂಡು ರಾಮಚಂದ್ರ ಬೀಡಿ	೨೫೭
,,	ಕೃಷ್ಣಾಜಿ ವೆಂಕಟರಾವ ಕುಲಕರ್ಣಿ	೨೫೭
೧೧೭	ಗೂಳಯ್ಯ ಬಸಯ್ಯ ಪೂಜಾರ	೨೫೬
,,	ರಾಜಾರಾಮ ಚನ್ನಪ್ಪ ಜಾಧವ	೨೫೬
,,	ಶ್ರೀನಿವಾಸ ಗೋಪಾಲಾಚಾರ್ಯ ಪ್ಯಾಟಿ	೨೫೬
,,	ವೀರಪ್ಪ ಚನ್ನಪ್ಪ ಕರ್ಲಹಾಡ	೨೫೬
,,	ಚನಬಸಪ್ಪ ಮಲಕಾಜೆಪ್ಪ ಹೂಗಾರ	೨೫೬
೧೨೩	ಗುರಲಿಂಗಯ್ಯ ನಂಜಗುಣೆಪ್ಪ ಹಕ್ಕ್ಯಾಪಕ್ಕಿಯವರ	೨೫೫
೧೨೩	ವೀರಪ್ಪ ಗುರುಬಸಪ್ಪ ಪರ್ವತಿ	೨೫೫
೧೨೪	ದತ್ತಾತ್ರಯ ರಾಮಚಂದ್ರ ದೇಶಪಾಂಡೆ	೨೫೪
,,	ಮಾರ್ತಂಡ ಭೀಮಪ್ಪ ಹಾನಗಲ್	೨೫೪
,,	ಗಣೇಶ ರಾಮಚಂದ್ರ ಪೂಜಾರ	೨೫೪
೧೨೭	ಗೋವಿಂದ ಕೃಷ್ಣ ಕುಲಕರ್ಣಿ	೨೫೩
,,	ಪರ್ವತಗೌಡ ಅಂದಾನಿಗೌಡ ಭರಮಗೌಡರ	೨೫೩
,,	ಶಿದ್ದನಗೌಡಾ ಹನಮಂತಗೌಡಾ ಮುಂದಿನಮನಿ	೨೫೩
,,	ಶಿವಪ್ಪ ಬಸಲಿಂಗಪ್ಪ ಕರಡ್ಡಿ	೨೫೩
೧೩೨	ದತ್ತಾತ್ರಯ ದೇವಜಿ ಮುಳಗುಂದ	೨೫೨

,, ಶಾಮಾಜಿ ಕೃಷ್ಣ ಕುಲಕರ್ಣಿ ೨೫೨
,, ಯಮುನೂರಸಾಬ ನಬಿಸಾಬ ಚವಡಿ ೨೫೨
೧೩೫ ಬಸಪ್ಪ ಪುರದಪ್ಪ ಸೊಟಕನಹಾಳ ೨೫೧
,, ಭೀಮರಡ್ಡಿ ಶಿವರಡ್ಡಿ ದೇವರಡ್ಡಿಯವರ ೨೫೧
,, ಸದಾಶಿವ ಶಿವಪ್ಪ ಮೋಟಿ ೨೫೧
,, ವೀರಭದ್ರ ಗುಡದೀರಪ್ಪ ಧರಣೆಪ್ಪನವರ ೨೫೧
೧೩೯ ಅಮೃತಪ್ಪ ಭೀಮಪ್ಪ ಜೋವೇರ ೨೫೦
,, ದತ್ತಾತ್ರೆಯ ಭೀಮರಾವ ಕುಲಕರ್ಣಿ ೨೫೦
,, ವೀರಯ್ಯ ಚಿನ್ನಯ್ಯ ಗಂಟೀಮಠ ೨೫೦
೧೪೨ ಕೇಶವ ಅನಂತ ನಾಯಿಕ ೨೪೯
,, ನಿಂಗಬಸ್ಯಾ ಶಿವಪ್ಪ ಹೊಲೇರ ೨೪೯
೧೪೪ ಬಸಲಿಂಗಗೌಡ ಬಸನಗೌಡ ಆಳಗವಾಡಿ ೨೪೭
,, ಫಕ್ಕೀರಪ್ಪ ಮಹದೇವಪ್ಪ ಕುರುವಿನಶೆಟ್ಟಿ ೨೪೭
೧೪೬ ಪರಸಣ್ಣ ಆನಂದಪ್ಪ ಬಸಾಪುರ ೨೪೫
೧೪೭ ಚನ್ನಬಸಪ್ಪ ರುದ್ರಪ್ಪ ಮಾರ್ಗಲ್ ೨೪೫
,, ಮಹಲಿಂಗಯ್ಯಾ ಹಾಲಪ್ಪಯ್ಯಾ ಮಠದ ೨೪೫
,, ರೇವಣಯ್ಯಾ ಶಿದ್ದಯ್ಯಾ ಮಠದ ೨೪೫
,, ಮಲ್ಲಯ್ಯಾ ಶಿವಯ್ಯಾ ಮರಿಬಸಯ್ಯನವರ ೨೪೫
೫೧ ಬಸಪ್ಪ ಹನಮಪ್ಪ ಕೊಂತಿಕಲ್ಲ ೨೪೪
,, ಕೃಷ್ಣಾಜಿ ನಾರಾಯಣ ಕುಲಕರ್ಣಿ ೨೪೪
,, ಲಾಲಸಾಬ ಯಮುನೂರಸಾಬ ಪಿಂಜಾರ ೨೪೪
೫೪ ಬಾಳಾಜಿ ರಾಮಚಂದ್ರ ಕುಲಕರ್ಣಿ ೨೪೩
,, ಬಾಳಪ್ಪ ಅರ್ಜುನಪ್ಪ ಖಾಯದದ ೨೪೩
,, ಮಲ್ಲಪ್ಪ ಮುದಕಪ್ಪ ಓಲಿ ೨೪೩
,, ನಾರಾಯಣ ಶಿವಾಜಿ ಹೊಸೂರ ೨೪೩
,, ಪ್ರಲ್ಹಾದ ಕಳಸೋ ಕುಲಕರ್ಣಿ ೨೪೩
೧೫೯ ಕರಿಗೌಡಾ ಕರಸಿದ್ದನಗೌಡ ಮಾಳಿಗಿ ೨೪೨
,, ರಾಚಯ್ಯಾ ಬೂದಯ್ಯಾ ಬಳಗಾನೂರಮ ೨೪೨
೧೬೧ ಗೋವಿಂದ ರಾಮಚಂದ್ರ ಕುಲಕರ್ಣಿ ೨೪೦
೧೬೨ ಬಸಪ್ಪ ಗುದ್ನೆಪ್ಪ ಹೈದರಿ ೨೩೯
,, ಭರಮಪ್ಪ ಚನ್ನಬಸಪ್ಪ ಗಾಣಿಗೇರ ೨೩೯
,, ರಾಮಪ್ಪ, ಫಕ್ಕೀರಪ್ಪ, ಸಂಗಳದ ೨೩೯

೧೬೫	ಚನ್ನಪ್ಪ ಲಿಂಗಪ್ಪ ಬಳಗಾನೂರ	೨೩೮
,,	ಹುಶೇನ ಫಕೀರಸಾಬ ಕುರಹಟ್ಟಿ	೨೩೮
,,	ಕಲ್ಲಪ್ಪ ಬಸಪ್ಪ ಜಾಪಣ್ಣನವರ	೨೩೮
೧೬೫	ಕೃಷ್ಣಾಜಿ ಕಾಂತೋ ಕುಲಕರ್ಣಿ	೨೩೮
,,	ನೀಲಕಂಠ ವೀರಭದ್ರಪ್ಪ ತೋಟಿಗಂಟಿ	೨೩೮
,,	ರಂಗಭಟ್ಟ ತಿಮ್ಮಣಭಟ್ಟ ಜೋಸಿ	೨೩೮
೧೭೧	ಅಂದಾನಿಗೌಡ ವೀರನಗೌಡಾ ಪಾಟೀಲ	೨೩೭
,,	ವೀರಭದ್ರಪ್ಪ ಅಂದಾನೆಪ್ಪ ಕೋಳಿವಾಡದ	೨೩೭
೧೭೩	ಕಲ್ಲಪ್ಪ ಫಕ್ಕೀರಪ್ಪ ಗಾಣಿಗೇರ	೨೩೬
,,	ಲಿಂಗಯ್ಯಾ ದೊಡ್ಡಯ್ಯಾ ಪೂಜಾರ	೨೩೬
,,	ವೀರಾ ಮರಿತಮ್ಮಪ್ಪ ಕೋಟಿ	೨೩೬
೧೭೬	ಶೇಖರಗೌಡಾ ಸಂಕನಗೌಡಾ ಸೋಮನಗೌಡರ	೨೩೬
೧೭೭	ಚನ್ನಪ್ಪಗೌಡ ಮಲ್ಲನಗೌಡಾ ಜೀವನಗೌಡರ	೨೩೪
,,	ಚಂದುಸಿಂಗ ಭೀಮಸಿಂಗ ರಜಪೂತ	೨೩೪
,,	ಎಲ್ಲಪ್ಪ ಬಸಪ್ಪ ಸುಂಕದ	೨೩೪
,,	ಎಮನಪ್ಪ ಅಲ್ಲೀಸಾಬ ಪಿಂಜಾರ	೨೩೪
೧೮೧	ಗೂಳಪ್ಪ ವೀರಪ್ಪ ಬಾಗೋಡಿ	೨೩೩
,,	ಓಬನಗೌಡಾ ವೀರನಗೌಡ ಜಿಗಳೂರ ಪಾಟೀಲ	೨೩೩
೧೮೩	ಬಸಪ್ಪ ಕುಬೇರಪ್ಪ ಸಾವಂತ	೨೩೧
,,	ಶಂಕರ ಬಾಳಕೃಷ್ಣ ಗೋಠೆ	೨೩೧
,,	ಚನ್ನಪ್ಪ ಫಕ್ಕೀರಪ್ಪ ಶೀರನಹಳ್ಳಿ	೨೩೧
೧೮೬	ಭೀಮಪ್ಪ ಶಿವಲಿಂಗಪ್ಪ ಅಜ್ಜಪ್ಪನವರ	೨೩೦
,,	ಜುಂಜು ನಿಂಗಪ್ಪ ಮೋಚಿ	೨೩೦
೧೮೮	ಮಹದೇವ ಹಣಮಂತ ಪಾಟೀಲ	೨೨೯
,,	ಗದಗಯ್ಯಾ ಗಂಗಯ್ಯಾ ಶೀಲೀಮಠ	೨೨೯
,,	ಮಲಿಕಸಾಬ ಹುಶೇನಸಾಬ ನದಾಫ	೨೨೯
೧೮೮	ನಿಂಗಪ್ಪ ನೀಲಪ್ಪ ಬರಸಣ್ಣನವರ	೨೨೯
೧೯೨	ಕಲ್ಲಪ್ಪ ಮುನಿಯಪ್ಪ ಸುಳ್ಳದ	೨೨೮
,,	ಪೂರ್ವಾಚಾರಿ ಬಸಪ್ಪ ಬಡಿಗೇರ	೨೨೮
೧೯೪	ರಘುನಾಥ ಭೀಮರಾವ ಜೋಸಿ	೨೨೭
೧೯೫	ಶ್ರೀನಿವಾಸ ವಿಜಯೇಂದ್ರರಾವ ದೌಲತಬಾದ	೨೨೬
೧೯೬	ಮಲ್ಲನಗೌಡಾ ಮುದಿಗೌಡಾ ಪಾಟೀಲ	೨೨೫

,,	ಮಲ್ಲಪ್ಪ ತಿಮ್ಮಪ್ಪ ತಿಪ್ಪೇಗುಂಡಿ	೨೨೫
೧೯೮	ಶಿವರಾಮ ಗೋವಿಂದ ಸಾಡಿಗೇರ	೨೨೫
೧೯೯	ಅಂದಾನಿಗೌಡಾ ಮಹದೇವಗೌಡಾ ಪಾಟೀಲ	೨೨೪
,,	ಪ್ರಲ್ಹಾದ ನರಸಿಂಹಾಚಾರ್ಯ ಮಾನವಿ	೨೨೪
೨೦೧	ದೇವಲ್ಯಾ ಗಿಡ್ಡಪ್ಪ ಲಮಾಣಿ	೨೨೨
೨೦೨	ಅಣ್ಣಾಜಿ ಗುರುರಾವ ಪಾಟೀಲ	೨೨೧
,,	ಮಲ್ಹಾರ ಗಣೇಶ ಪೂಜಾರ	೨೨೧
೨೦೪	ಹುಶೇನಸಾಬ ರಾಜೇಸಾಬ ಕುರ್ತಕೋಟಿ	೨೨೦
೨೦೫	ಸಂತಪ್ಪ ಶಿದ್ದಪ್ಪ ಕಸ್ಸಿರದ	೨೧೯
೨೦೬	ಬಸನಗೌಡ ಚನಬಸನಗೌಡಾ ಕಾಡಗಿ	೨೧೭
೨೦೭	ಹಣಮಂತ ಶ್ರೀನಿವಾಸರಾವ ಕುಲಕರ್ಣಿ	೨೧೬
೨೦೮	ಹಣಮಂತ ಶ್ರೀನಿವಾಸರಾವ ಕುಲಕರ್ಣಿ	೨೧೫
,,	ಶೇಷೋ ಶಾಮರಾವ ಕುಲಕರ್ಣಿ	೨೧೫
೨೧೦	ಅಬ್ದುಲ್ಲಾ ಹಮೀದಖಾನ ಉಸ್ಮಾನಖಾನ ಕಿತ್ತೂರ	೨೧೨
,,	ಅಡಿವೆಪ್ಪ ಬಸಪ್ಪ ವಿಠೋಜಿ	೨೧೨
೨೧೨	ಜಗನ್ನಾಥ ಧರ್ಮರಾವ ಕುಲಕರ್ಣಿ	೨೧೧
೨೧೩	ಸಂಗಯ್ಯಾ ಮಲ್ಲಯ್ಯಾ ಚಿಕ್ಕಮಠ	೨೧೧

ಜಿ. ಕೆ. ಪುರಾಣಿಕ,

ಪ್ರೆ. ವ್ಹಂ. ಫಾ. ಪ. ಕಮೀಟಿ, ಧಾರವಾಡ

ಶ್ರೀಗುರುಚರಣ ಶರಣಾಷ್ಟಕ

ಕವಿ — ಗಣೇಶ ಸೂರ್ಯನಾರಾಯಣಭಟ್ಟ ಕೆಕ್ಕಾರ ವಿದ್ಯಾರ್ಥಿ

ವಾ|| ಷ||

ಶ್ರೀಯತೀಶ್ವರ ವೃಂದ ಚಂದ್ರವೇದಜ್ಞಾನ ।
ಪೀಯೂಷಪೂರಿತ ಸದಾನಂದ ರೂಪ ದು– ।
ರ್ಮಾಯೇಂದ್ರಜಾಲ ಲೀಲಾವಿಮೋಹಿತಚಿತ್ತ ಕಾಸಾರಕಂಜರೂಪ ॥
ನ್ಯಾಯಾದಿಶಾಸ್ತ್ರಪ್ರವೀಣನೆನ್ನಿಸಿ ಮೆರೆವ ।
ಶ್ರೀಯತಿಪವರ " **ರಾಮಚಂದ್ರ ಭಾರತಿ** "ಯೆ ನೀ ।
ಕಾಯೊ ! ಸತತಂ ಸದಯದಿಂ ಸಹಸ್ರಾಪರಾಧಗಳನ್ನು ಮನ್ನಿಸೆನ್ನ ॥೧॥

ರಾತ್ರಿದಿವವೆಂದೆನದೆ, ದೀಪವಂ ಪಣ್ಣೆಂದು ।
ತಾತಿಳಿದು ಬೆಂಕೆಯೊಳ್ ಬೀಳ್ವ ಶಲಭದ ತೆರದೊ– ।
ಳೀ ತೀಕ್ಷ್ಣ ವಿಷಯೋಪಭೋಗ ವಿಷಸಾರದಿಂ ತುಂಬಿತುಳುಕುತ್ತಲಿರುವ ॥
ಪಾತ್ರೆಯೊಳ್ ಸುಧೆಯಿರ್ಪುದೆನುತ ನಾ ಭ್ರಮೆಗೊಂಡು ।
ಪ್ರೀತಿಯಿಂದಿದಕುಡಿದು ಕೆಟ್ಟೆನಕಟಕಟ ! ನೀ– ।
ನಾತ್ಮಬೋಧಾಮೃತವ ಕುಡಿಸೆನ್ನನುದ್ಧರಿಸು ಶ್ರದ್ಧೆಯಿಂ ಬಿದ್ದುಬೇಳ್ಪೆ ॥೨॥

ಮಮಕಾರ ಮಂತ್ರವಂ ನಿತ್ಯಪಠಿಸುತೆ ಮೋಹ ।
ತಿಮಿರದಾವರಣದೊಳ್ ಸಿಲುಕಿರ್ದು ನಾ ಕೆಟ್ಟೆ– ।
ನಮಿತಕಷ್ಟಂಗಳಂ ಸೋಸುತಿಹೆ ಕೂಪದೊಳ್ ಬಿದ್ದಿರ್ಪ [illegible] ॥
ವಿಮಲ ಕರುಣಕುಚೇಲ! ತವಪಾದಪದ್ಮಕ್ಕೆ ।
ನಮಿಸಿ ಸದ್ಭಕ್ತಿಯಿಂ ಸೇವಿಸುವೆನೆನಗಾತ್ಮ– ।
ಕಮಲಮಿತ್ರನ ಕಿರಣಗಳ ಕಾಣಿಸೆನ್ನನೀ ಕಾಪಾಡು ಕಾರುಣ್ಯದೆ ॥೩॥

ಚಂದದಿಂದೊಂದೆಡೆಯೊಳಿಲ್ಲ ಪಕ್ಕಿಗಳು ತಾ– ।
ವೊಂದುಗಳಿಗೆಯುತನಕ ಕೂಡಿ ಕುಣಿದಾಡಿ ಮು– ।
ತ್ತೊಂದು ನಿಮಿಷದೊಳೆತ್ತಲಾದರುಂ ಪೋಪವೊಲ್ ಕೆಲವುದಿನದನಕ ಮುದದೆ ॥
ಬಂಧುಬಾಂಧವರೆಲ್ಲರಿರ್ದಲ್ಲಿ ವಿಧಿಯಾಜ್ಞೆ ।
ಬಂದೊಡನೆ ತೊಲಗಿಪೋಪರ್ ವ್ಯರ್ಥಮೋಹವಿದ ।
ತಂದೆ! ನೀನಳಿಸಯ್ಯ ದಮ್ಮಯ್ಯ ಕರುಣವಂ ತಾಳಯ್ಯ ಬೇಳ್ಪೆನಯ್ಯ ॥೪॥

(ಅಪೂರ್ಣ)

ಶ್ರೀಗುರುಚರಣ ಶರಣಾಷ್ಟಕ

ಕವಿ — ಗಣೇಶ ಸೂರ್ಯನಾರಾಯಣಭಟ್ಟ ಕೆಕ್ಕಾರ ವಿದ್ಯಾರ್ಥಿ

ವಾ॥ ಷ॥

ಶ್ರೀಯುತೀಶ್ವರ ವೃಂದ ಚಂದ್ರವೇದಜ್ಞಾನ ।
ಪೀಯೂಷಪೂರಿತ ಸದಾನಂದ ರೂಪ ದು– ।
ರ್ಮಾಯೇಂದ್ರಜಾಲ ಲೀಲಾವಿಮೋಹಿತಚಿತ್ತ ಕಾಸಾರಕಂಜರೂಪ ॥
ನ್ಯಾಯಾದಿಶಾಸ್ತ್ರಪ್ರವೀಣನೆನ್ನಿಸಿ ಮೆರೆವ ।
ಶ್ರೀಯತಿಪವರ "**ರಾಮಚಂದ್ರ** ಭಾರತಿ"ಯೆ ನೀ ।
ಕಾಯೊ ! ಸತತಂ ಸದಯದಿಂ ಸಹಸ್ರಾಪರಾಧಗಳನ್ನು ಮನ್ನಿಸೆನ್ನ ॥೧॥

ರಾತ್ರಿದಿವವೆಂದೆನದೆ, ದೀಪವಂ ಪಣ್ಣೆಂದು ।
ಶಾತಿಳಿದು ಬೆಂಕೆಯೊಳ್ ಬೀಳ್ವ ಶಲಭದ ತೆರದೊ– ।
ಳೀ ತೀಕ್ಷ್ಣ ವಿಷಯೋಪಭೋಗ ವಿಷಸಾರದಿಂ ತುಂಬಿತುಳುಕುತ್ತಲಿರುವ ॥
ಪಾತ್ರೆಯೊಳ್ ಸುಧೆಯಿರ್ಪುದೆನುತ ನಾ ಭ್ರಮೆಗೊಂಡು ।
ಪ್ರೀತಿಯಿಂದಿದಕುಡಿದು ಕೆಟ್ಟೆನಕಟಕಟ ! ನೀ– ।
ನಾತ್ಮಬೋಧಾಮೃತವ ಕುಡಿಸೆನ್ನನುದ್ಧರಿಸು ಶ್ರದ್ಧೆಯಿಂ ಬಿದ್ದುಬೇಳ್ಪೆ ॥೨॥

ಮಮಕಾರ ಮಂತ್ರವಂ ನಿತ್ಯಪಠಿಸುತೆ ಮೋಹ ।
ತಿಮಿರದಾವರಣದೊಳ್ ಸಿಲುಕಿರ್ದು ನಾ ಕೆಟ್ಟೆ– ।
ನಮಿತಕಷ್ಟಂಗಳಂ ನೋಸುತಿಹೆ ಕೂಪದೊಳ್ ಬಿದ್ದಿರ್ಪ ಕುರುಡನಂತೆ ॥
ವಿಮಲ ಕರುಣಕುಚೇಲ ! ತವಪಾದಪದ್ಮಕ್ಕೆ ।
ನಮಿಸಿ ಸದ್ಭಕ್ತಿಯಿಂ ಸೇವಿಸುವೆನೆನಗಾತ್ಮ– ।
ಕಮಲಮಿತ್ರನ ಕಿರಣಗಳ ಕಾಣಿಸೆನ್ನನೀ ಕಾಪಾಡು ಕಾರುಣ್ಯದೆ ॥೩॥

ಚಂದದಿಂದೊಂದೆಡೆಯೊಳೆಲ್ಲ ಪಕ್ಕಿಗಳು ತಾ– ।
ವೊಂದುಗಳಿಗೆಯತನಕ ಕೂಡಿ ಕುಣಿದಾಡಿ ಮ– ।
ತ್ತೊಂದು ನಿಮಿಷದೊಳೆತ್ತಲಾದರುಂ ಪೋಪವೊಲ್ ಕೆಲವುದಿನದನಕ ಮುದದೆ ॥
ಬಂಧುಬಾಂಧವರೆಲ್ಲರಿರ್ದಲ್ಲಿ ವಿಧಿಯಾಜ್ಞೆ ।
ಬಂದೊಡನೆ ತೊಲಗಿಪೋಪರ್ ವ್ಯರ್ಥಮೋಹವಿದ ।
ತಂದೆ ! ನೀನಳಿಸಯ್ಯ ದಮ್ಮಯ್ಯ ಕರುಣವಂ ತಾಳಯ್ಯ ಬೇಳ್ಪೆನಯ್ಯ ॥೪॥

(ಅಪೂರ್ಣ)

ಜಾಹೀರಾತು

ಸ್ಯಾಂಪಲ್] [ಫುಕ್ಕಟಿ

ಉತ್ತಮ ಮಸೀ ಚೀಟುಗಳು

ನೀಲೀಕಪ್ಪು, ಕೆಂಪು, ಜಾಂಬಳಿ ಮಸಿಯ ಚೀಟುಗಳು. ಈ ಕಂಪನಿಯು ಬಹಳ ಜನರಿಂದ ಶಿಫಾರಸ ಪಡೆದು ಮೆಡಲ್ಲುಗಳನ್ನು ಸಂಪಾದಿಸಿರುತ್ತದೆ.

ದರಗಳು

೧೦೦ ಚೀಟುಗಳಿಗೆ		೦—೭—೦
೫೦೦	,,	೧—೧೪—೦
೧೦೦೦	,,	೩—೦—೦
೧೦೦೦೦	,, ೩೦—೦—೦	(ರೇಲ್ವೆ ಫ್ರಿ)

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ.

ಕರ್ನಾಟಕ ಇಂಕ ಕಂಪನಿ,

ಬಾಗಲಕೋಟೆ.

REGISTERED NO B 2567

From

The Manager

Kannada Prathamik Sikshana

Dharwar

LIST NO

೮೦

Reg. No. B 2567

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Sikshana

OCTOBER 1931

ಸಂಪಾದಕ— ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ

ಸಂಪುಟ ೬೮ ವರ್ಷ ೩ } ಅಕ್ಟೋಬರ ೧೯೩೧ { ೩ನೆ ವ. ಸಂ. ೭

ವಿಷಯಾನುಕ್ರಮಣಿಕೆ

ಅ. ಸಂ.	ವಿಷಯ.	ಪುಟ.
೧.	ಸ್ಫುಟವಿಚಾರಗಳು	೧
೨.	ಜ್ಯೂನಿಯರ ರೆಡ್‌ಕ್ರಾಸ	೪
೩.	ಮೈಸೂರು ಸೀಮೆಯ ಕನ್ನಡ ಪ್ರಾ. ಶಾಲೆಗಳು ಮತ್ತು ಆಂಗ್ಲೇಯ ಅಂಕೆಗಳು ...	೮
೪.	ಶಿಕ್ಷಣದ ಸಾಮಾನ್ಯ ಉದ್ದೇಶಗಳೂ ... ಕೊನೆಯ ದಿಶೆಯೂ ...	೧೨
೫.	ಗೀತಾಂಜಲಿಯ ಸೌಂದರ್ಯ	೧೭

Printed by K. R. Bhise at the Karnatak Printing Works, Dharwar
Published by H. G. Deshpande, B. A.,
Head-Master, Training College for Men, Dharwar, at his Offic

ಮೆ॥ ಹಣಮಂತರಾವ ದೇಶಪಾಂಡೆ ಬಿ. ಎ.,

ಹೆ. ಮಾ. ಇವರ

ತಾಂಬೂಲ ಸಮಾರಂಭದ ಪದ್ಯ

ದೇವನ ಪಾಲಿಪುದೀ ಗುರುಗಳನು ।
ಆವಕಾಲದೊಳಗಿತ್ತು ಮುದವನು ॥ ಪಲ್ಲ ॥

ಶಿಕ್ಷಣಾಲಯದೇ ದಕ್ಷರೆಂದೆನಿಸಿ ।
ಶಿಕ್ಷಕ ವರ್ಗದೆ ಶ್ರೇಷ್ಠತೆ ಪಡೆದು ॥
ಶಿಕ್ಷಣ ಕಾರ್ಯದೆ ಮೇಲ್ಮೆಯು ತಾಳ್ದು ।
ಅಕ್ಷಯ ಕೀರ್ತಿಯು ಮೆರಿಸುತಲಿರುವ ॥ ೧ ॥

ಆದ ಕಾರ್ಯವನು ಶೋಧಿಸುತಿವರಿಗೆ ।
ಮೋದದಲೀಶಿತ್ತಿಹ ಶ್ರೇಷ್ಠಪದವಿಯು ॥
ಸಾಧಿಸಲಿವರಿಗೆ ಸಕಲಾರ್ಥಗಳನು ।
ಸಾದರದಿಂದಲೇ ಬೇಡುವೆವಿದನು ॥ ೨ ॥

ಪಾರಲೌಕಿಕ ಮೋದವ ಕೊಡುವ ।
ವಿಶದ ಶಿಕ್ಷಣದಿಂದಲಿ ಮೆರೆವ ॥
ಸಾರಸ್ವತಂತ್ರತೆ ಪ್ರೀತಿಯು ತೋರ್ವ ।
ಲಕ್ಷ್ಮೀಕಾಂತನ ಭಕುತರಾಗಿರುವ ॥ ೩ ॥

ಗಣೆಯು ಕರ್ನಾಟಕ ಸ್ಕೌಟ್ ಕ್ಯಾಂಪ,

ಧಾರವಾಡ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:—ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.,

ಸಂಪುಟ ೬೮ ವರ್ಷ ೩ ||| ಅಕ್ಟೋಬರ ೧೯೩೧ ||| ಸಂಚಿಕೆ ೭

ಸ್ಫುಟ ವಿಚಾರಗಳು

೧. **ಹಿಂದುಳಿದ ಜಾತಿಗಳು**— ಹೊಲೆಯರು ಮಾದಿಗರು, ಢೋರರು, ಮಚಿಗಾರರು, ಚಲ್ವಾದಿಗಳು ಮೊದಲಾದ ಅಸ್ಪೃಶ್ಯ ಜನರೂ ಬೇಡರು, ಲಮಾಣಿಗಳು, ಸಿಕ್ಕಲಿಗರು ಮೊದಲಾದ ಸ್ಪೃಶ್ಯ ಜನರೂ ಹಿಂದುಳಿದ ವರ್ಗಕ್ಕೆ ಸೇರುತ್ತಾರೆ. ಇವರ ಅಭ್ಯುದಯದ ಸಲುವಾಗಿ ಪ್ರಯತ್ನ ಮಾಡುವದಕ್ಕೆ ಮುಂಬೈ ಸರಕಾರದವರು ಬ್ಯಾಕ ವರ್ಡ ಕ್ಲಾಸ ಆಫೀಸರ ಎಂಬ ಅಧಿಕಾರಸ್ಥರನ್ನು, (ಮೊ। ಸ್ಟಾರ್ಟ ಸಾ॥ ರನ್ನು) ನೇಮಿಸಿ ಹೊಸದೊಂದು ಖಾತೆಯನ್ನೇ ವ್ಯವಸ್ಥೆಗೊಳಿಸಿದ್ದಾರೆ. ಈ ಅಧಿಕಾರಸ್ಥರು ಇದೇ ಅಕ್ಟೋಬರ ತಿಂಗಳ ೧೯ನೇ ತಾ. ನ ದಿವಸ ಹಿಂದುಳಿದ ಜಾತಿಗಳ ಮುಖಂಡರ ಮತ್ತು ಆ ಜಾತಿಗಳ ವಿಷಯದಲ್ಲಿ ಸಹಾನುಭೂತಿಯುಳ್ಳ ಜನರ ಸಭೆಯೊಂದನ್ನು ಕೂಡಿಸಿದ್ದರು. ಈ ಸಭೆಯಲ್ಲಿ ೭ ವಿಷಯಗಳನ್ನು ವಿಚಾರಕ್ಕೆಂದು ಇಟ್ಟುಕೊಂಡಿದ್ದರು. ಅವು ಯಾವವೆಂದರೆ:—

೧. ಶಿಕ್ಷಣ (ಪ್ರಾಥಮಿಕ, ಮಾಧ್ಯಮಿಕ ಉಚ್ಚ.)

೨. ಬಾವಿ, ಕೆರೆ, ಮನೆಗಳನ್ನು ಕಟ್ಟುವದಕ್ಕೆ ಸ್ಥಳ; ಇವುಗಳ ವಿಷಯದಲ್ಲಿ ಆಗುವ ತೊಂದರೆಗಳು.

೩. ಈ ಜನರಿಗೆ ಉದ್ಯೋಗ ದೊರೆಯುವದಕ್ಕೆ ಉಂಟಾಗಿರುವ ತೊಂದರೆಗಳು; ಅವುಗಳನ್ನು ಹೇಗೆ ನೀಗಿಸಬೇಕೆಂಬದಕ್ಕೆ ಸೂಚನೆಗಳು.

೪. ಹಿಂದುಳಿದ ಜಾತಿಗಳ ವಿಷಯಕ್ಕೆ ಕಂಡು ಬರುವ ಇತರ ತೊಂದರೆಗಳು.

೫. ಫಾರೆಸ್ಟದಲ್ಲಿ ಈ ಜನರಿಗೆ ಒಕ್ಕಲತನ ಸಾಗಿಸುವದಕ್ಕೆ ಭೂಮಿಯನ್ನು ಕೊಟ್ಟು ಅವರ ವಸಾಹತುಗಳನ್ನು ಮಾಡುವದು.

ಮೆ|| ಹಣಮಂತರಾವ ದೇಶಪಾಂಡೆ ಬಿ. ಎ.,

ಹೆ. ಮಾ. ಇವರ

ತಾಂಬೂಲ ಸಮಾರಂಭದ ಪ

ದೇವನೆ ಪಾಲಿಪುದೀ ಗುರುಗಳನು ।
ಆವಕಾಲದೊಳಗಿತ್ತು ಮುದವನು ॥ ಪಲ್ಲ ॥

ಶಿಕ್ಷಣಾಲಯದೇ ದಕ್ಷರೆಂದೆನಿಸಿ ।
ಶಿಕ್ಷಕ ವರ್ಗದೆ ಶ್ರೇಷ್ಠತೆ ಪಡೆದು ॥
ಶಿಕ್ಷಣ ಕಾರ್ಯದೆ ಮೇಲ್ಮೆಯು ತಾಳ್ದು ।
ಅಕ್ಷಯ ಕೀರ್ತಿಯು ಮೆರಿಸುತಲಿರುವ ॥ ೧ ॥

ಆದ ಕಾರ್ಯವನು ಶೋಧಿಸುತಿವರಿಗೆ ।
ಮೋದದದ್ಯೋಳಿತ್ತಿಹ ಶ್ರೇಷ್ಠಪದವಿಯು ॥
ಸಾಧಿಸಲಿವರಿಗೆ ಸಕಲಾರ್ಥಗಳನು ।
ಸಾದರದಿಂದಲೇ ಬೇಡುವೆವಿದನು ॥ ೨ ॥

ಪಾರಲೌಕಿಕ ಮೋದವ ಕೊಡುವ ।
ಮಿಾರಿದ ಶಿಕ್ಷಣದಿಂದಲಿ ಮೆರೆವ ॥
ಸಾರಸ್ವತಂತ್ರತೆ ಪ್ರೀತಿಯು ತೋರ್ವ ।
ಲಕ್ಷ್ಮೀಕಾಂತನ ಭಕುತರಾಗಿರುವ ॥ ೩ ॥

೧೯ನೆಯ ಕರ್ನಾಟಕ ಸ್ಕೌಟ್ ಕ್ಯಾಂಪ,

ಧಾರವಾಡ.

ಕನ್ನಡ
ಪ್ರಾಥಮಿಕ ಶಿಕ್ಷಣ

ಸಂಪಾದಕರು:— ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.,

ಸಂಪುಟ ೬೮ ವರ್ಷ ೩ ||| ಅಕ್ಟೋಬರ ೧೯೩೧ ||| ಸಂಚಿಕೆ ೭

ಸ್ಫುಟ ವಿಚಾರಗಳು

೧. **ಹಿಂದುಳಿದ ಜಾತಿಗಳು**— ಹೊಲೆಯರು ಮಾದಿಗರು, ಢೋರರು, ಮಚಿಗಾರರು, ಚಲ್ವಾದಿಗಳು ಮೊದಲಾದ ಅಸ್ಪೃಶ್ಯ ಜನರೂ ಬೇಡರು, ಲಮಾಣಿಗಳು, ಸಿಕ್ಕಲಿಗರು ಮೊದಲಾದ ಸ್ಪೃಶ್ಯ ಜನರೂ ಹಿಂದುಳಿದ ವರ್ಗಕ್ಕೆ ಸೇರುತ್ತಾರೆ. ಇವರ ಅಭ್ಯುದಯದ ಸಲುವಾಗಿ ಪ್ರಯತ್ನ ಮಾಡುವದಕ್ಕೆ ಮುಂಬೈ ಸರಕಾರದವರು ಬ್ಯಾಕ ವರ್ಡ ಕ್ಲಾಸ ಆಫೀಸರ ಎಂಬ ಅಧಿಕಾರಸ್ಥರನ್ನು, (ಮೆ॥ ಸ್ಟಾರ್ಟ ಸಾ॥ ರನ್ನು) ನೇಮಿಸಿ ಹೊಸದೊಂದು ಖಾತೆಯನ್ನೇ ವ್ಯವಸ್ಥೆಗೊಳಿಸಿದ್ದಾರೆ. ಈ ಅಧಿಕಾರಸ್ಥರು ಇದೇ ಅಕ್ಟೋಬರ ತಿಂಗಳ ೧೯ನೇ ತಾ. ನ ದಿವಸ ಹಿಂದುಳಿದ ಜಾತಿಗಳ ಮುಖಂಡರ ಮತ್ತು ಆ ಜಾತಿಗಳ ವಿಷಯದಲ್ಲಿ ಸಹಾನುಭೂತಿಯುಳ್ಳ ಜನರ ಸಭೆಯೊಂದನ್ನು ಕೂಡಿಸಿದ್ದರು. ಈ ಸಭೆಯಲ್ಲಿ ೬ ವಿಷಯಗಳನ್ನು ವಿಚಾರಕ್ಕೆಂದು ಇಟ್ಟುಕೊಂಡಿದ್ದರು. ಅವು ಯಾವವೆಂದರೆ:—

೧. ಶಿಕ್ಷಣ (ಪ್ರಾಥಮಿಕ, ಮಾಧ್ಯಮಿಕ ಉಚ್ಚ.)

೨. ಬಾವಿ, ಕೆರೆ, ಮನೆಗಳನ್ನು ಕಟ್ಟುವದಕ್ಕೆ ಸ್ಥಳ; ಇವುಗಳ ವಿಷಯದಲ್ಲಿ ಆಗುವ ತೊಂದರೆಗಳು.

೩. ಈ ಜನರಿಗೆ ಉದ್ಯೋಗ ದೊರೆಯುವದಕ್ಕೆ ಉಂಟಾಗಿರುವ ತೊಂದರೆಗಳು; ಅವುಗಳನ್ನು ಹೇಗೆ ನೀಗಿಸಬೇಕೆಂಬವಕ್ಕೆ ಸೂಚನೆಗಳು.

೪. ಹಿಂದುಳಿದ ಜಾತಿಗಳ ವಿಷಯಕ್ಕೆ ಕಂಡು ಬರುವ ಇತರ ತೊಂದರೆಗಳು.

೫. ಫಾರೆಸ್ಟದಲ್ಲಿ ಈ ಜನರಿಗೆ ಒಕ್ಕಲತನ ಸಾಗಿಸುವದಕ್ಕೆ ಭೂಮಿಯನ್ನು ಕೊಟ್ಟು ಅವರ ವಸಾಹತುಗಳನ್ನು ಮಾಡುವದು.

೬. ಹಿಂದುಳಿದ ಜಾತಿಗಳಲ್ಲಿ ಒಕ್ಕಟ್ಟು ಉಂಟಾಗುವಂತೆ ಮಾಡುವದು.

ಈ ಆರು ವಿಷಯುಗಳಲ್ಲಿ ಶಿಕ್ಷಣದ ಬಗ್ಗೆ ನಮ್ಮ ಎಜ್ಯು. ಇನಸ್ಪೆಕ್ಟರರಾದ ಮೆ|| ವಕೀಲ ಸಾ|| ರು ಹೇಳಿದ ವಿಚಾರಗಳನ್ನು ಕೆಳಗೆ ಕೊಟ್ಟಿದ್ದೇವೆ.

೧. ಹಿಂದುಳಿದ ಜಾತಿಯ ಬಾಲಕರು ಸ್ಕಾಲರಶಿಪ್ಪ ಪರೀಕ್ಷೆಗಾಗಿ ಕಳಿಸುವ ಅರ್ಜಿಗಳ ತಾರೀಖುಗಳನ್ನು ನಿರ್ಬಂಧಪಡಿಸದೆ ಪರೀಕ್ಷೆಯಾಗುವ ಕಾಲದವರೆಗೆ ಆ ಅರ್ಜಿಗಳನ್ನು ಕಳಿಸಲಿಕ್ಕೆ ಸವಲತ್ತು ಕೊಡಬೇಕೆಂದು ಮಿ. ಡಿ. ಎಲ್. ಪಾಟೀಲ ಇವರು ಸೂಚಿಸಿದರು. ಹೀಗೆ ಸವಲತ್ತು ಕೊಡುವದು ಅಶಕ್ಯವದೆ. ಯಾಕಂದರೆ ಪ್ರತಿಯೊಂದು ಪರೀಕ್ಷೆಗಾಗಿ ಪ್ರಶ್ನೆಯ ಕಾಗದಗಳನ್ನೂ ಸ್ಥಳವನ್ನೂ ಪರೀಕ್ಷಕರನ್ನೂ ಮುಂಚಿತವಾಗಿಯೇ ವ್ಯವಸ್ಥೆಗೊಳಿಸದಿದ್ದರೆ ದೊಡ್ಡ ಗೊಂದಲವುಂಟಾಗಬಹುದು. ಇದಲ್ಲದೆ ನಿಯಮಕ್ಕನುಸರಿಸಿ ನಡೆಯಬೇಕೆಂಬ ನಿರ್ಬಂಧವು ಎಲ್ಲ ಜನರಿಗೂ ಸರಿಯಾಗಿಯೇ ಅಮಲಿನಲ್ಲಿರತಕ್ಕದ್ದು.

೨. ಹಿಂದುಳಿದ ಜಾತಿಗಳಿಗೆ ಕೊಡತಕ್ಕ ಸ್ಕಾಲರಶಿಪ್ಪುಗಳು ತೆರವಾಗಿ ಉಳಿದ ಪಕ್ಷದಲ್ಲಿ ಯೋಗ್ಯರಾದ ವಿದ್ಯಾರ್ಥಿಗಳ ಹೆಸರುಗಳನ್ನು ಆಯಾ ಜಾತಿಗಳ ಮುಂದಾಳುಗಳು ತಿಳಿಸಿದಲ್ಲಿ ಆ ಸ್ಕಾಲರ ಶಿಪ್ಪುಗಳನ್ನು ಆ ವಿದ್ಯಾರ್ಥಿಗಳಿಗೆ ಕೊಡುವದರಲ್ಲಿ ಬರುವದು.

೩. ಯಾವ ಪ್ರಾ. ಶಾಲೆಯಲ್ಲಿಯೂ ಹಿಂದುಳಿದ ಜಾತಿಯ ಬಾಲಕರಿಗೆ ಫೀ ತೆಗೆದುಕೊಳ್ಳುವದಿಲ್ಲ. ಹಾಗೆ ಯಾರಾದರೂ ತೆಗೆದುಕೊಳ್ಳುತ್ತಿದ್ದರೆ ಅವರ ಹೆಸರುಗಳನ್ನು ತಿಳಿಸಿದರೆ ಯೋಗ್ಯ ವ್ಯವಸ್ಥೆ ಮಾಡಲಾಗುವದು.

೪. ಹಿಂದುಳಿದ ಜಾತಿಗಳ ಜನರಿಗೆ ಸ್ವಚ್ಛತೆ, ಶಿಕ್ಷಣದ ಅವಶ್ಯಕತೆ ಮೊದಲಾದ ವಿಷಯುವಾಗಿ ತಿಳಿ ಹೇಳುವದಕ್ಕಾಗಿ ಆಯಾ ಜಾತಿಯ ಕಾಮದಾರರನ್ನು ನೇಮಿಸಿದರೆ ಒಳ್ಳೇದಾಗಬಹುದು.

೫. ಟ್ರೇನಿಂಗಕ್ಕೆ ಈ ಜಾತಿಗಳಿಂದ ಹೆಚ್ಚು ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಬೇಕೆಂಬ ವಿಷಯುದಲ್ಲಿ ನಾವು ಹೆಚ್ಚು ಉತ್ಸುಕರಾಗಿದ್ದೇವೆ. ಆದರೆ ಮೊದಲು ಯಾವ ಸಂಸ್ಥೆಯಲ್ಲಿ ೫೦೦ ವಿದ್ಯಾರ್ಥಿಗಳು ಕಲಿಯುತ್ತಿದ್ದರೋ ಅಲ್ಲಿ ಕೇವಲ ೩೩ ವಿದ್ಯಾರ್ಥಿಗಳಿರುವರು. ಇವರಲ್ಲಿ ಸರಕಾರದವರು ಗೊತ್ತುಪಡಿಸಿದ ಪ್ರಮಾಣಕ್ಕನುಸರಿಸಿ ಈ ಜನರನ್ನು ಆರಿಸುವದರಲ್ಲಿ ಬರುವದು. ಪ್ರಾ. ಶಿಕ್ಷಣವು ಲೋಕಸತ್ತೆಗೆ ಒಳಪಟ್ಟಂದಿನಿಂದ ಟ್ರೇನಿಂಗಕ್ಕೆ ಹೊಸ ಉಮೇದವಾರರನ್ನು ಆರಿಸುತ್ತಿರುವದಿಲ್ಲ. ಇದ್ದ ಕಾಯಂ ಶಿಕ್ಷಕರನ್ನೇ ಸ್ಕೂಲ ಬೋರ್ಡುಗಳು ಶಿಫಾರಸ ಮಾಡುವವು. ಅವರಲ್ಲಿ ಪ್ರಮಾಣಕ್ಕನುಸರಿಸಿ ಹಿಂದುಳಿದ ಜನರನ್ನು ಆರಿಸುವೆವು. ಕಡಿಮೆ ಗುಣಗಳುಳ್ಳ ಹೊಸ ಉಮೇದವಾರರನ್ನು ಟ್ರೇನಿಂಗಕ್ಕೆ ಆರಿಸಬೇಕೆಂಬ ನಿಮ್ಮ ಅಪೇಕ್ಷೆಗೆ ಮೇಲೆ ಹೇಳಿದಂತೆ ಅವಸರವಿಲ್ಲದಾಗಿದೆ.

೬. ಇತ್ತಲಾಗಿ ಸರಕಾರಕ್ಕೆ ದುಡ್ಡಿನ ಕೊರತೆಯಾದದರಿಂದ ಪ್ರಾ. ಶಿ. ದ ಪ್ರಸಾರಕ್ಕೆ ಅಡ್ಡಿಯುಂಟಾಗಿದೆ. ಹೀಗೆ ಹೊಸ ಶಿಕ್ಷಕರನ್ನು ನೇಮಿಸಿಕೊಳ್ಳುವದಕ್ಕೆ ಅನುಕೂಲವಿಲ್ಲದಾಗಿದೆ. ಶಿಕ್ಷಣದ ಸೂತ್ರಗಳು ಸ್ಥಾನಿಕ ಅಧಿಕಾರಿ ಸಂಘಗಳ ಕಡೆಗೆ ಹೋದದ್ದರಿಂದ ಅವರೇ ಹೊಸ ಶಿಕ್ಷಕರನ್ನೂ ಸುಪರವಾಯಿಝುರರನ್ನೂ ನೇಮಿಸಿಕೊಳ್ಳುವರು. ಆದದರಿಂದ ಈ ವಿಷಯದಲ್ಲಿ ಸ್ಥಾ. ಅ. ಗಳ ಕಡೆಗೆ ಅರ್ಜಿ ಮಾಡಿಕೊಳ್ಳಬೇಕು.

೭. ಹಿಂದುಳಿದ ಜಾತಿಗಳ ಬಾಲಕರನ್ನು ಶಾಲೆಯಲ್ಲಿಯೇ ಕೂಡ್ರಿಸಿಕೊಳ್ಳಬೇಕೆಂಬ ನಿರ್ಬಂಧವಿರುವದು. ಹೀಗೆ ಮಾಡದೆ ಆ ಬಾಲಕರನ್ನು ಶಾಲೆಯ ಹೊರಗೆ ಶಿಕ್ಷಕರು ಕೂಡ್ರಿಸುತ್ತಿದ್ದದ್ದು ಗೊತ್ತಾದರೆ ಅಂಥ ಶಿಕ್ಷಕರನ್ನು ಕೆಲಸದಿಂದ ದೂರ ಮಾಡಲಾಗುವದೆಂಬ ಮಾತನ್ನು ಲಕ್ಷದಲ್ಲಿಡತಕ್ಕದ್ದು.

೮. ಹುಬ್ಬಳ್ಳಿಯ ಶಾಲೆಗಳಲ್ಲಿ ಹಿಂದುಳಿದ ಬಾಲಕರಿಗೆ ಸರಿಯಾದ ಅನುಕೂಲತೆಗಳಿಲ್ಲೆಂಬ ತಕರಾರು ಸುಳ್ಳೆಂದು ಅಲ್ಲಿಯ ಸ್ಕೂಲಬೋರ್ಡ ಅಡ್ಮಿನಿಸ್ಟ್ರೇಟಿವ ಆಫೀಸರರು ಹೇಳಿದ್ದಾರೆ.

೯. ಹತ್ತು ವರ್ಷ ನೌಕರಿ ಮಾಡಿದ ಹಿಂದುಳಿದ ಶಿಕ್ಷಕರಿಗೆ ಮೊದಲಿನಂತೆ ಮಾಫಿ ಸರ್ಟಿಫಿಕೀಟು ಕೊಡಬೇಕೆಂಬ ವಿಷಯದಲ್ಲಿ ನಾನು ಹೇಳುವದೇನಂದರೆ:— ಈ ಪ್ರಕಾರದ ವ್ಯವಸ್ಥೆಯನ್ನು ಸರಕಾರದವರು ನಿಲ್ಲಿಸಿ ಎಷ್ಟೋ ವರ್ಷಗಳಾದವು. ಆದದರಿಂದ ಮಾಫಿ ಸರ್ಟಿಫಿಕೀಟುಗಳನ್ನು ಕೊಡುವದು ಶಕ್ಯವಿಲ್ಲ.

೧೦. ಗುಡಿಗಳಲ್ಲಿದ್ದ ಶಾಲೆಗಳಲ್ಲಿ ಹಿಂದುಳಿದ ಬಾಲಕರನ್ನು ಹೊರಗೆ ಕೂಡ್ರಿಸುವದರಿಂದ ಉಂಟಾಗುವ ತೊಂದರೆಯನ್ನು ತಪ್ಪಿಸುವದಕ್ಕೆ ಮಾಡತಕ್ಕ ಉಪಾಯವು ಯಾವದೆಂದರೆ, ಅಂಥ ಶಾಲೆಯಲ್ಲಿ ಹಿಂದುಳಿದ ಬಾಲಕರನ್ನು ಒಳಗೆ ಕೂಡ್ರಿಸಿಕೊಳ್ಳುವವರೆಗೆ ಆ ಶಾಲೆಯನ್ನೇ ಬಂದು ಮಾಡತಕ್ಕದ್ದು.

೧೧. ಹಿಂದುಳಿದ ಬಾಲಕರನ್ನು ಶಾಲೆಗೆ ಕರೆದುಕೊಂಡು ಬರಲಿಕ್ಕೆ ಅಂಥ ಶಾಲೆಯಲ್ಲಿ ಹೆಣ್ಣುಮಕ್ಕಳ ಶಾಲೆಯಲ್ಲಿದ್ದಂತೆ ಚಾಕರಬಾಯಿ ಇರತಕ್ಕದ್ದೆಂಬ ಬಗ್ಗೆ ನಾನು ಹೇಳುವದೇನಂದರೆ— ಈ ಪ್ರಕಾರದ ವೆಚ್ಚನನ್ನು ಸರಕಾರದವರು ಮಾಡಲಿಕ್ಕೆ ಒಪ್ಪಲಾರರು.

೧೨. ಹಿಂದುಳಿದ ಜಾತಿಯ ಬಾಲಕರಿಗಷ್ಟೇ ಒತ್ತಾಯ ಮಾಡಿ ಶಿಕ್ಷಣ ಕೊಡುವದಕ್ಕೆ ಪ್ರತಿಯೊಂದು ಗ್ರಾಮದಲ್ಲಿ ತಂದೆ ತಾಯಿಗಳ ಹಾಗು ಪಾಲಕರ ಸಂಘವನ್ನು ಮಾಡಿ ಅವರ ಮುಖಾಂತರ ಬಾಲಕರನ್ನು ಒತ್ತಾಯದಿಂದ ಶಾಲೆಗೆ ಬರಮಾಡಿಕೊಳ್ಳಬೇಕು. ಮತ್ತು ಈ ಸಂಘದವರು ರಾತ್ರಿ ಶಾಲೆಗಳನ್ನಿಟ್ಟು ಅಶಿಕ್ಷಿತ ಜನರಿಗೆ ಶಿಕ್ಷಣ ಕೊಡಬಹುದು.

೧೩. ಹಿಂದುಳಿದ ಬಾಲಕರು ಶೀಲ, ಅಭ್ಯಾಸ, ಸಂಸ್ಕೃತಿ ಮೊದಲಾದ ವಿಷಯುಗಳಲ್ಲಿ ಮುಂದುವರಿಯಬೇಕಾದರೆ ಅವರನ್ನು ಪಂಚಮ ಶಾಲೆಗಳಿಗೆ ಕಳುಹಿಸದೆ ಮೇಲಿನ ಜಾತಿಯ ಹುಡುಗರಿದ್ದ ಮುಖ್ಯ ಶಾಲೆಗಳಿಗೆ ಕಳುಹಿಸತಕ್ಕದು. ಅಂದರೆ ಅವರು ಮುಂದರಿದ ಬಾಲಕರ ಸಹವಾಸದಿಂದ ಎಲ್ಲ ರೀತಿಯಿಂದಲೂ ಸುಧಾರಿಸುವರು. ಇಂಥ ಶಾಲೆಗಳಲ್ಲಿ ಹಿಂದುಳಿದ ಜಾತಿಯ ಶಿಕ್ಷಕರನ್ನು ನಿಯಮಿಸತಕ್ಕದ್ದು.

೨. ಸಂಪಾದಕರು—ಕನ್ನಡ ಪ್ರಾ. ಶಿ. ದ ಸಂಪಾದಕರಿಗೆ ಬೆಳಗಾಂವಿಯ ಸೀನಿಯರ ಅಸಿಸ್ಟಂಟ ಡಿಪ್ಯೂಟಿ ಸ್ಥಳಕ್ಕೆ ವರ್ಗವಾದದರಿಂದ ಈ ಅಂಕವು ಅವರಿಂದ ಸಂಪಾದಿಸಲ್ಪಡತಕ್ಕ ಕೊನೆಯ ಅಂಕವು. ದಿಶಂಬರ ೧೯೩೩ ರಿಂದ ಎಂಟುವರ್ಷ ಈ ಕಾರ್ಯವನ್ನು ನೆರವೇರಿಸಿ ಪ್ರಾ. ಶಿಕ್ಷಕರಿಗೆ ಉಪಯುಕ್ತವಾದ ಅನೇಕ ಸಂಗತಿಗಳನ್ನು ತಿಳಿಸಲಿಕ್ಕೆ ಅವರು ಪ್ರಯತ್ನ ಪಟ್ಟಿದ್ದಾರೆ. ಈ ಅವಧಿಯಲ್ಲಿ ಅವರಿಗೆ ಸಹಾಯ ಮಾಡಿದ ಅನೇಕ ಲೇಖಕರಿಗೆ ಅವರು ತಮ್ಮ ವಂದನೆಗಳನ್ನು ಅರ್ಪಿಸುವರು. ಮುಂದಿನ ತಿಂಗಳಿಂದ ಮಿ. ಮುಗದಾಲರವರು ಸಂಪಾದಕರಾಗುವರು.

ಜ್ಯೂನಿಯರ ರೆಡ್ ಕ್ರಾಸ್

(ಕಳೆದ ಸಂಚಿಕೆಯಿಂದ ಮುಂದುವರಿದುದು.)

೨. ಭೂಗೋಲ ಕಲಿಸುವದರಲ್ಲಿ—ಜಗತ್ತಿನ ಸಂಘಕ್ಕೆ ಸೇರಿದವರಾಗಿ ಬೇರೆ ಬೇರೆ ದೇಶಗಳಿಂದ ಮಾಸಿಕಗಳನ್ನೂ ಪತ್ರವ್ಯವಹಾರದ ಪುಸ್ತಕಗಳನ್ನೂ ಹೊಂದುವದರಿಂದ ಭೂಗೋಲದ ಪಾಠಗಳಿಗೆ ಹೊಸ ಚೈತನ್ಯವು ಉಂಟಾಗುವದು. ಬೇರೆ ಬೇರೆ ದೇಶಗಳ ಶಾಲೆಗಳಲ್ಲಿ ನಡೆಯುವಂಥ ಪತ್ರವ್ಯವಹಾರದ ಪುಸ್ತಕಗಳಿಂದ ಶಿಕ್ಷಕರಿಗೆ ಭೂಗೋಲದ ಪಾಠಗಳನ್ನು ಮನೋರಂಜಕವಾಗಿ ಮಾಡುವದಕ್ಕೆ ಉತ್ತಮ ಸಾಧನವು ದೊರೆದಂತಾಗುವದು. ಮತ್ತು ದೂರದಲ್ಲಿದ್ದ ದೇಶಗಳ ನಿಜ ಸ್ಥಿತಿಯು ಗೊತ್ತಾಗುವದು.

೩. ಇತಿಹಾಸ ಕಲಿಸುವದರಲ್ಲಿ—ಜ್ಯೂನಿಯರ ರೆಡ್‌ಕ್ರಾಸ ಪೋರ್ಟಫೋಲಿಯೋಗಳಿಂದ ಆಯಾ ದೇಶಗಳ ಇತಿಹಾಸವು ಮನೋರಂಜಕವಾಗಿ ತಿಳಿಯಲಿಕ್ಕೆ ಅನುಕೂಲವಾಗುವದು. ಇಂತಹ ಪೋರ್ಟಫೋಲಿಯೋವನ್ನು ಸಿದ್ಧಪಡಿಸುವಾಗ ಬಾಲಕರಿಗೆ ಸ್ಥಾನಿಕ ಮತ್ತು ರಾಷ್ಟ್ರದ ಇತಿಹಾಸವನ್ನು ಕಲಿಯಲಿಕ್ಕೆ ಅತ್ಯುತ್ತಮ ಪ್ರಸಂಗವು ದೊರಕುವದು.

೪. ನಗರದ ನಿವಾಸಿಗಳ ಕರ್ತವ್ಯವನ್ನು ಕಲಿಸುವದರಲ್ಲಿ—ಇತರರಿಗೆ ಸೇವೆ ಶುಶ್ರೂಷೆಯನ್ನು ಮಾಡುವದು ಜ್ಯೂನಿಯರ ರೆಡ್ ಕ್ರಾಸದ ಮುಖ್ಯ ಲಕ್ಷಣವಾದದರಿಂದ ಬಾಲಕರಿಗೆ ನಾಗರಿಕನ ಕರ್ತವ್ಯಗಳು ಚನ್ನಾಗಿ ತಿಳಿಯುವವು. ಜ್ಯೂನಿ

ಯರರು ತಮ್ಮ ಕಾಮದಾರರನ್ನು ಆರಿಸಿಕೊಂಡು ತಮ್ಮ ಸಭೆಗಳನ್ನು ನಡೆಸುವರು. ಹೀಗೆ ತಮ್ಮ ಶಾಲೆಯ ಸಂಘವನ್ನು ನಡೆಸುವದರಿಂದ ನಗರವಾಸಿಯ ಕರ್ತವ್ಯಗಳ ಪರಿಚಯವು ರೂಢಿಯಿಂದ ಉಂಟಾಗುವದು.

೫. ಕಲೆ ಕಸೂತಿ ಮೊದಲಾದವುಗಳನ್ನು ಕಲಿಸುವದರಲ್ಲಿ — ಕೆಲವು ದೇಶಗಳಲ್ಲಿ ಜ್ಯೂನಿಯರ ರೆಡ್ ಕ್ರಾಸದಿಂದ ಬಾಲಕರಿಗೆ ರಾಷ್ಟ್ರದ ಜನರಲ್ಲಿ ಕಂಡುಬರುವ ಕೈಗಾರಿಕೆ ಕೌಶಲ್ಯಗಳ ವಿಷಯವಾಗಿ ಅಭಿಮಾನ ಪಡುವದರಿಂದಲೂ ದೇಶೀಯ ಉದ್ಯೋಗಗಳಿಗೆ ಉತ್ತೇಜನ ಕೊಡುವದರಿಂದಲೂ ರಾಷ್ಟ್ರದ ಕಲೆಯು ಅಭಿವೃದ್ಧಿಗೊಳ್ಳುವದು. ಪೋರ್ಟಪೋಲಿಯೋ ತಯಾರಿಸುವಾಗ ರಾಷ್ಟ್ರೀಯ ಕಲೆಯುದ್ಯೋತಕವಾದ ಪದಾರ್ಥಗಳನ್ನು ಸೇರಿಸಲಿಕ್ಕೆ ಪ್ರಯತ್ನ ಪಡುವರು. ಮತ್ತು ಇದರಿಂದ ಡ್ರಾಯಿಂಗದ ಪಾಠಗಳಿಗೆ ಉತ್ತೇಜನವುಂಟಾಗುವದು. ಎರಡನೆಯ ದೇಶಗಳಿಂದ ಬಂದ ಪೋರ್ಟಪೋಲಿಯೋಗಳಲ್ಲಿ ರಾಷ್ಟ್ರಕ್ಕೆ ಅನುಗುಣವಾದ ಡಿಝಾಯಿನುಗಳೂ ಕಸೂತಿಯ ಮಾದರಿಗಳೂ ಇರುವವು. ಆರೋಗ್ಯ ವಿಷಯಕವಾದ ಜಾಹೀರ ಪತ್ರಿಕೆಗಳನ್ನು ತಯಾರಿಸುವದರಿಂದ ಕಲಾಕೌಶಲ್ಯದ ಪಾಠಗಳಿಗೆ ಹೊಸ ವಿಷಯಗಳು ದೊರಕುವವು.

೬. ಹೊಲಿಗೆ ಮತ್ತು ಹಸ್ತ ಶಿಕ್ಷಣ ಕೊಡುವದರಲ್ಲಿ — ಹೆಣ್ಣು ಹುಡಿಗೆಯರು ಬಡ ಹುಡುಗರ ಸಲುವಾಗಿ ಅರಿವೆಗಳನ್ನು ಹೊಲಿಯುವದರಿಂದಲೂ, ಗಂಡು ಹುಡುಗರು ದಾವಾಖಾನೆಗಳಲ್ಲಿ ಮತ್ತು ಕೂಸುಗಳಿಗೆ ಆರೈಕೆ ಮಾಡುವ ಸ್ಥಳಗಳಲ್ಲಿ ಇದ್ದಂಥ ಬಾಲಕರ ಸಲುವಾಗಿ ಆಟಿಗೆಗಳನ್ನೂ ಕಟ್ಟಿಗೆಯ ಸಾಮಾನುಗಳನ್ನೂ ಮಾಡುವದರಿಂದಲೂ ಹೊಲಿಗೆಯ ಕೆಲಸಕ್ಕೂ ಹಸ್ತ ಶಿಕ್ಷಣಕ್ಕೂ ಜೂನಿಯರ ರೆಡ್ ಕ್ರಾಸದಿಂದ ಉತ್ತೇಜನವುಂಟಾಗುವದು.

೭. ಬೇರೆ ಬೇರೆ ಭಾಷೆಗಳನ್ನು ಕಲಿಸುವದರಲ್ಲಿ — ಜೂನಿಯರ ರೆಡ್ ಕ್ರಾಸದ ವತಿಯಿಂದ ಬೇರೆ ಬೇರೆ ಪ್ರಾಂತಗಳ ಬಾಲಕರ ಕೂಡ ಪತ್ರವ್ಯವಹಾರ ಮಾಡುವದರಿಂದ ಭಾಷೆಗಳನ್ನು ಅಭ್ಯಾಸಿಸಲಿಕ್ಕೆ ಹೊಸ ಉತ್ಸಾಹವು ಉಂಟಾಗುವದು. ಪರದೇಶಗಳಿಗೆ ಅಥವಾ ಪರ ಪ್ರಾಂತಗಳಿಗೆ ಮೂಲ ಭಾಷೆಯಲ್ಲಿ ಪತ್ರಗಳನ್ನು ಬರೆದು ಅವುಗಳ ಭಾಷಾಂತರವನ್ನು ಇಟ್ಟು ಪೋರ್ಟಪೋಲಿಯೋಗಳನ್ನು ಕಳಿಸುವದರಿಂದ ಅನ್ಯ ಭಾಷೆಗಳನ್ನು ಕಲಿಯಲಿಕ್ಕೆ ಅನುಕೂಲವಾಗುವದು. ಮತ್ತು ವರ್ಣನೆ, ನಿಬಂಧ-ಬರಹ ಇವುಗಳಿಗೆ ಹೊಸ ವಿಷಯಗಳು ದೊರೆಯುವವು; ಮತ್ತು ಸ್ಪರ್ಧೆಯಿಂದ ಈ ಕಾರ್ಯದಲ್ಲಿ ಹೆಚ್ಚಳವು ಉಂಟಾಗುವದು.

೬ ಉಳಿದ ಸಂಘಗಳ ಸಹಕಾರ

ಬಾಲಕರ ಸಲುವಾಗಿ ಇದ್ದಂಥ ಬಾಯ್ಜ್‌ಸ್ಕೌಟ, ಗರ್ಲಗಾಯಿಡ, ಸೆಂಟಜಾನ್ ಅಂಬುಲನ್ಸ ಬ್ರಿಗೇಡ ಕ್ಯಾಡೆಟ್ಸ ಮೊದಲಾದ ಸಂಘಗಳ ಕೂಡ ಸಹಕಾರ ಮಾಡುವದು ಜ್ಯೂನಿಯರ ರೆಡ್‌ಕ್ರಾಸದ ಕರ್ತವ್ಯವಾಗಿದೆ. ಈ ಸಂಘದ ಸಭಾಸದರು ಪ್ರಥಮ ಚಿಕಿತ್ಸೆ, ಗೃಹಶುಶ್ರೂಷೆ ಮೊದಲಾದವುಗಳ ವಿಷಯವಾಗಿ ವ್ಯವಸ್ಥೆ ಮಾಡುವರು.

೧ ಪ್ರಥಮ ಚಿಕಿತ್ಸೆಯಲ್ಲಿ ಮೆಕೆಂಝಿಸ್ಕೂಲಕೋರ್ಸ ಮತ್ತು ಸೆಂಟಜಾನ್ ಅಂಬುಲನ್ಸ ಸಂಘದ ಪರೀಕ್ಷೆಗಳಿಗೆ ಕೂತು ಸರ್ಟಿಫಿಕೇಟ ಪಡೆಯುವದಕ್ಕೆ ಉತ್ತೇಜನ ಕೊಡತಕ್ಕದ್ದು. ಮತ್ತು ಸಭಾಸದರ ಸಂಖ್ಯೆಯು ಹೆಚ್ಚು ಇದ್ದರೆ ಸೆಂಟಜಾನ್ ಅಂಬುಲನ್ಸ ಸಂಘದ ಸ್ವತಂತ್ರ ಶಾಖೆಯನ್ನು ಮಾಡತಕ್ಕದ್ದು.

ಎಷ್ಟೋ ಕಡೆಗೆ ಬಾಯ್ಜ್‌ಸ್ಕೌಟರೂ ಗರ್ಲಗಾಯಿಡರೂ ರೆಡ್‌ಕ್ರಾಸದ ಮುಖಾಂತರವಾಗಿ ಗೃಹಶುಶ್ರೂಷೆ ಪ್ರಥಮ ಚಿಕಿತ್ಸೆಗಳಲ್ಲಿ ಶಿಕ್ಷಣಹೊಂದುವರು.

ಜ್ಯೂನಿಯರ ರೆಡ್‌ಕ್ರಾಸವು ನಿಶ್ಚಿತವಾದ ಶಿಕ್ಷಣದ ಧ್ಯೇಯಗಳುಳ್ಳ, ಶಾಲೆಯಲ್ಲಿ ರತಕ್ಕ ವ್ಯವಸ್ಥೆಯಾಗಿದೆ. ಮತ್ತು ಇಷ್ಟು ಸುವ್ಯವಸ್ಥಿತವಾದ ಮತ್ತು ಸಂಪೂರ್ಣವಾಗಿ ಇಂಥ ಕೆಲಸ ಮಾಡುವ ಬೇರೊಂದು ಸಂಸ್ಥೆಯು ಯಾವದೂ ಇಲ್ಲ. ಜ್ಯೂನಿಯರ ರೆಡ್‌ಕ್ರಾಸದವರು ತಮ್ಮ ಕಾರ್ಯವನ್ನು ಹಾಗೇ ಸಾಗಿಸುತ್ತ ಪ್ರೌಢ ಜನರ ರೆಡ್‌ಕ್ರಾಸದ ಸಭಾಸದರಾಗಬಹುದು.

೭ ಹಿಂದುಸ್ತಾನದ ಜ್ಯೂನಿಯರ ರೆಡ್‌ಕ್ರಾಸದ ಚಟುವಟಿಕೆಗಳ ಉದಾಹರಣಗಳು:—ಪಂಜಾಬದಲ್ಲಿ ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ ಇವರ ಒಪ್ಪಿಗೆಯಿಂದ ೯೫೬ ಸಂಘಗಳು ಉಂಟಾಗಿವೆ. ೧೯೩೪ರಲ್ಲಿ ಒಟ್ಟು ಸಭಾಸದರು ೪೫ಸಾವಿರ ಬಾಲಕರಿದ್ದರು. ಈ ಚಟುವಟಿಕೆಯು ಆ ಪ್ರಾಂತದಲ್ಲಿ ಜನಪ್ರಿಯವಾಗಹತ್ತಿರುವದೆಂದು ವಾರ್ಷಿಕ ರಿಪೋರ್ಟಿನಿಂದ ತಿಳಿಯಹತ್ತಿದೆ. ಅಲ್ಲಿಯ ಒಂದು ಜಿಲ್ಲೆಯ ಶಾಲಾ ಇನಸ್ಪೆಕ್ಟರರು ಅನ್ನುವದೇನಂದರೆ—“ ಶಾಲೆಗಳಲ್ಲಿ ಇಂಥ ಸಂಘಗಳು ಇರುವದರಿಂದ ಬಾಲಕರಿಗೆ ಕಲ್ಪನಾತೀತವಾದ ಉದಾರ ಕೆಲಸಗಳನ್ನು ಮಾಡಲಿಕ್ಕೆ ಉತ್ತೇಜನವುಂಟಾಗಿದೆ ಎಂಬದರಲ್ಲಿ ಸಂಶಯವಿಲ್ಲ. ಆ ಕಾರ್ಯಗಳು ಯಾವವೆಂದರೆ— ಪ್ರಾಣಿಗಳಿಗೆ ದಯ ತೋರಿಸುವದು, ಜಾತಿನಿರ್ಬಂಧವಿಲ್ಲದೆ ಬಡವರಿಗೆ ದಾನಧರ್ಮ ಮಾಡುವದು, ಮುದುಕರಿಗೂ ವಿಧವೆಯರಿಗೂ ಅನಾಥಬಾಲಕರಿಗೂ ಶಾರೀರಿಕ—ಆರ್ಥಿಕ ಸಹಾಯ ಮಾಡುವದು ಇ. ”

ಈ ಸಂಸ್ಥೆಗಳು ಮಾಡುವಂಥ ಕಾರ್ಯಗಳ ಪರಿಚಯವು ಜನರಿಗೆ ಆಗಹತ್ತಿ ಅವರು ಇದನ್ನು ಪ್ರೀತಿಸತೊಡಗಿದ್ದಾರೆ. ಮತ್ತು ಒಂದು ಜಿಲ್ಲೆಯ ವರದಿಯಿಂದ

ತಿಳಿಯುವದೇನೆಂದರೆ— "ಎಷ್ಟೋ ಹಳ್ಳಿಗಳಲ್ಲಿ ದೊಡ್ಡ ಜನರು ಮದುವೆ ಮುಂಜಿ ಮೊದಲಾದ ಶುಭ ಪ್ರಸಂಗಗಳಲ್ಲಿ ಜ್ಯೂನಿಯರ ರೆಡ್‌ಕ್ರಾಸ ಸಂಘಕ್ಕೆ ಅವು ಮಾಡು ತ್ತಿದ್ದ ಕಾರ್ಯಗಳ ಸಲುವಾಗಿ ಸಹಾಯದ್ರವ್ಯವನ್ನು ಕೊಡಹತ್ತಿರುವರು."

ಜ್ಯೂನಿಯರ ರೆಡ್‌ಕ್ರಾಸದಿಂದ ಉಂಟಾದ ಲಾಭಗಳನ್ನು ಕೆಳಗೆ ವಿಚಾರಿಸಿದೆ.

(ಅ) ಜ್ಯೂನಿಯರ ರೆಡ್‌ಕ್ರಾಸ ಸಭೆಗಳನ್ನು ಮಾಡುವದರಿಂದ ಬಾಲಕರಿಗೆ ಸಾರ್ವಜನಿಕ ಸಭೆಗಳನ್ನು ಹೇಗೆ ನಡೆಯಿಸಬೇಕೆಂಬದು ಗೊತ್ತಾಗುವದು.

(ಬ) ಈ ಸಂಘದ ಸಭಾಸದರು ಆರೋಗ್ಯದ ನಿಯಮಗಳನ್ನು ಅಭ್ಯಾಸಿ ಸುವರು. ಮತ್ತು ತಮ್ಮ ಕೈಯಿಂದಾದಷ್ಟು ಆರೋಗ್ಯಸಂಬಂಧದ ಕಾರ್ಯಗಳನ್ನು ಮಾಡುವರು.

(ಕ) ಜನಸಮುದಾಯದಲ್ಲಿ ಆರೋಗ್ಯದ ಜ್ಞಾನವನ್ನು ಉಂಟುಮಾಡುವ ಈ ಸಂಘಗಳು ಸಹಾಯ ಮಾಡುತ್ತವೆ. ಒಂದು ದೊಡ್ಡ ಪಟ್ಟಣದಲ್ಲಿ ಒಂದು ಸಂಘವು ಪ್ಲೇಗ, ಮಲೇರಿಯಾ ರೋಗಗಳ ಬಗ್ಗೆ ಮೂರು ಸಾವಿರ ಹಸ್ತಪತ್ರಿಕೆಗಳನ್ನು ಹಂಚಿ ದ್ದಲ್ಲದೆ ೨ ಸಾವಿರ ಜಾಹೀರ ಪತ್ರಿಕೆಗಳನ್ನು ಹಚ್ಚಿತು.

(ಡ) ಎಷ್ಟೋ ಸಂಘಗಳು ಪ್ರಥಮ ಚಿಕಿತ್ಸೆಯ ಪೆಟ್ಟಿಗೆಗಳನ್ನಿಟ್ಟುಕೊಂಡು ಶಾಲೆಯ ಬಾಲಕರಿಗೂ ಜನರಿಗೂ ಔಷಧಗಳನ್ನು ಪುಕ್ಕಟೆಯಾಗಿ ಕೊಡುವವು.

(ಇ) ಮಲೇರಿಯಾದಿಂದ ಪೀಡಿತವಾದ ಪ್ರದೇಶಗಳಲ್ಲಿ ಎಷ್ಟೋ ಸಂಘಗಳು ಕ್ವಿನೈನ ಹಂಚುವ ವ್ಯವಸ್ಥೆ ಮಾಡುವವು.

(ಫ) ಸಭಾಸದರು ಮೈಲಿಯನ್ನು ತಾವು ಸ್ವತಃ ತೆಗೆಯಿಸಿಕೊಳ್ಳುವದಲ್ಲದೆ ವಿಷಮಜ್ವರ ಪ್ಲೇಗ ಇವುಗಳ ಪ್ರತಿಬಂಧವಾಗುವಂತೆ ಇನಾಕ್ಯೂಲೇಶನ್ ಮಾಡಿಸಿ ಕೊಳ್ಳುವರು. ಅದರಂತೆ ಇತರರಿಗೆ ಉತ್ತೇಜನವನ್ನು ಕೊಡುವರು.

(ಗ) ಆರೋಗ್ಯದ ವಿಷಯಕ್ಕೆ ಉತ್ತಮ ನಿಬಂಧಗಳನ್ನು ಬರೆಯುವದಕ್ಕೆ ಮೇಲಾಟವನ್ನು ಹುಟ್ಟಿಸಿ ಉತ್ತಮವಾದವುಗಳಿಗೆ ಇನಾಮು ಕೊಡುವರು.

ಬಹುಶಃ ಎಲ್ಲ ಶಾಖೆಗಳು ಬಡ ಹುಡುಗರಿಗೆ ಫೀ ಹಣವನ್ನೂ ಪುಸ್ತಕ ಅರಿವೆ ಗಳನ್ನೂ ಉಳಿದ ಅಗತ್ಯವಾದ ಒಡವೆಗಳನ್ನೂ ಪೂರೈಸುವದಕ್ಕೆ ಹಣ ವೆಚ್ಚಮಾಡು ವವು. ಕೆಲವು ಸಂಘಗಳು ಬಡ ಹುಡುಗರಿಗೆ ಸ್ಕಾಲರಶಿಪ್ಪ ಕೊಡುವವು.

(ಐ) ಈ ಸಂಘಗಳು ಆರೋಗ್ಯದ ವಿಷಯವಾಗಿ ವ್ಯಾಖ್ಯಾನಗಳನ್ನು ಕೊಟ್ಟು ಪ್ರಥಮ ಚಿಕಿತ್ಸೆ, ಗೃಹಶುಶ್ರೂಷೆ, ಸಾರ್ವಜನಿಕಆರೋಗ್ಯ ಇವುಗಳನ್ನು ಕಲಿಸಲಿಕ್ಕೆ ವರ್ಗಗಳನ್ನು ಇಡುವವು.

ಮೈಸೂರುಸೀಮೆಯ ಕನ್ನಡ ಪ್ರಾಥಮಿಕ ಶಾಲೆಗಳು ಮತ್ತು ಆಂಗ್ಲೇಯ ಅಂಕೆಗಳು

ಲೇಖಕ — ಆರ್. ಆಳ್ವಾರ್‍ಸ್ವಾಮಿ ಅಯ್ಯಂಗಾರ್, ಬಿ. ಎ., ಮಲ್ಲೇಶ್ವರ. ಬೆಂಗಳೂರು.

ಮನುಷ್ಯ ಸಾಮಾನ್ಯದಲ್ಲಿ ಪ್ರತಿಯೊಬ್ಬ ಮಾನವನಿಗೂ ತನ್ನ ಜೀವಮಾನದಲ್ಲಿ ಸಾಮಾನ್ಯವಾದ ಓದು ಬರೆಹ ಮತ್ತು ಲೆಕ್ಕಾಚಾರವು ತಿಳಿಯದೆ ಪ್ರತಿನಿತ್ಯದ ಲೋಕ ವ್ಯವಹಾರವನ್ನು ಸುಲಭವಾಗಿ ನಡೆಸುವುದು ಕಷ್ಟವೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಇದಕ್ಕಾಗಿಯೇ ಅನೇಕ ದೇಶಗಳ— ಅವುಗಳಲ್ಲಿಯೂ ಮುಖ್ಯ ವಾಗಿ ನಾಗರಿಕ ದೇಶಗಳಲ್ಲಿ— ಪ್ರಜೆಗಳಿಗೆ ಪ್ರಾಥಮಿಕ ವಿದ್ಯಾಭ್ಯಾಸವನ್ನು ಎಂದರೆ ಸಾಮಾನ್ಯವಾದ ಓದು, ಬರೆಹ, ಲೆಕ್ಕಾಚಾರವನ್ನು ನಿರ್ಬಂಧದಿಂದ ಕಲಿಸಿಯೇ ತೀರ ಬೇಕೆಂಬ ಶಾಸನವು ಏರ್ಪಾಡಾಗಿದೆ.

ಉದಾಹರಣೆಗಾಗಿ ಒಂದು ಗ್ರಾಮನಿವಾಸಿಯ ಮಗನು ಬೆಂಗಳೂರಲ್ಲಿ ಓದುತ್ತಿ ದ್ದಾನೆಂದು ಇಟ್ಟುಕೊಳ್ಳೋಣ. ಮಗನು ತನ್ನ ಖರ್ಚಿಗೆ ಹಣವು ಬೇಕೆಂದು ತಂದೆಗೆ ಕಾಗದವನ್ನು ಬರೆಯುತ್ತಾನೆ. ತಂದೆಗೆ ಓದುಬಾರದಕಾರಣ ಗ್ರಾಮದಲ್ಲಿ ಓದು ಬಂದವರಲ್ಲಿ ಹೋಗಿ ಅವರು ದಯಮಾಡಿ ಕಾಗದವನ್ನು ಓದುವವರೆಗೂ ಕಾದಿದ್ದು ಸಮಾಚಾರವನ್ನು ತಿಳಿದುಕೊಳ್ಳಬೇಕು. ಮಗನಿಗೆ ಬದಲುಬರೆಯಬೇಕಾದರೆ ತನಗೆ ಬರೆಹ ಬಾರದಕಾರಣ ಪುನಃ ಗ್ರಾಮದಲ್ಲಿ ಬರೆಹಬಂದವರಲ್ಲಿ ಹೋಗಿ ಅವರು ದಯ ಮಾಡಿ ಕಾಗದ ಬರೆದುಕೊಡುವವರೆಗೂ ಕಾದಿದ್ದು ತರುವಾಯ ಕಾಗದವನ್ನು ಮನೆಗೆ ತರಬೇಕು. ಹೀಗೆ ಅಡಿಗಡಿಗೆ ಸಹಾಯಮಾಡುವುದಕ್ಕಾಗಿ ಅವರಿಗೆ ಏನಾದರೂ ದುಡ್ಡು ಕಾಸೊ ಅಥವಾ ದವಸ ಧಾನ್ಯವೊ ಕೊಡಬೇಕು. ಇದರಿಂದ ಗ್ರಾಮವಾಸಿಗೆ ದಾಕ್ಷಿಣ್ಯವ್ಯಯ, ದುಡ್ಡುವ್ಯಯ ಮತ್ತು ಕಾಲನಷ್ಟ. ಓದು ಬರೆಹಕ್ಕಿಂತಲೂ ಅಲ್ಪ ಸ್ವಲ್ಪ ಲೆಕ್ಕಾಚಾರವಂತೂ ಪ್ರತಿಯೊಬ್ಬ ಮನುಷ್ಯನಿಗೂ ಮುಖ್ಯವಾಗಿ ಬೇಕೇಬೇಕು. ಉದಾಹರಣೆಗಾಗಿ ಕೇವಲ ಕುಗ್ರಾಮವಾಸಿಯಾದ ಓದುಬರೆಹದ ಗಂಧವೇ ಇಲ್ಲದ ಒಬ್ಬ ರೈತನನ್ನು ತೆಗೆದುಕೊಳ್ಳೋಣ. ಇವನ ಮನೆಯಲ್ಲಿ ಮಕ್ಕಳುಮರಿ, ಹಸುಕುರಿ, ಎತ್ತು, ಎಮ್ಮೆ, ಆಡು, ನಾಯಿಗಳು ಇವೆ. ಈಗ ಇವನಿಗೆ ಇಬ್ಬರು ಅಣ್ಣಂದಿರು, ಮೂವರು ತಂಗಿಯರು, ನಾಲ್ವರು ಗಂಡುಮಕ್ಕಳು, ಐವರು ಹೆಣ್ಣುಮಕ್ಕಳು ಇದ್ದಾರೆ. ಮೂರು ಹಸು, ಎರಡು ಕರು, ನಾಲವತ್ತು ಕುರಿ, ಎರಡುಜತೆ ಎತ್ತುಗಳು, ಹನ್ನೆರಡು ಎಮ್ಮೆ, ಇಪ್ಪತ್ತೈದು ಆಡು ಮತ್ತು ಮೂರು ನಾಯಿಗಳೂ ಇವೆ. ಇವನು ಹದಿನೈದು ಖಂಡುಗ ಭತ್ತವನ್ನೂ ಇಪ್ಪತ್ತು ಖಂಡುಗ ರಾಗಿಯನ್ನೂ ಎಂಟುಪಲ್ಲ ಹುರುಳಿ ಯನ್ನೂ ಬೆಳೆಯುತ್ತಾನೆ. ಇಪತ್ನಾರು ರೂಪಾಯಿ ಎಂಟು ಆಣೆ ಒಂಬತ್ತುಕಾಸು

ಕಂದಾಯವನ್ನು ಕೊಡುತ್ತಾನೆ. ಕಂದಾಯವನ್ನು ಕಟ್ಟುವದಕ್ಕೂ ಮತ್ತು ಇತರ ಖರ್ಚುಗಳಿಗೂ ಖುಡುಗಕ್ಕೆ ಹನ್ನೆರಡು ರೂಪಾಯಿ ಮೇರೆ ಏಳುಖಂಡಗ ಬತ್ತವನ್ನೂ, ಎಂಟು ರೂಪಾಯಿ ಮೇರೆ ಆರು ಖಂಡಗ ರಾಗಿಯನ್ನೂ, ಪಲ್ಲಾವಿಗೆ ಆರು ರೂಪಾಯಿ ನಾಲ್ಕು ಆಣೆ ಮೇರೆ ಮೂರು ಪಲ್ಲಾ ಹುರುಳಿಯನ್ನೂ ಮಾರುತ್ತಾನೆ. ಈ ವಿಷಯ ಗಳಿಗೆಲ್ಲಾ ಲೆಕ್ಕಾಚಾರವಿಲ್ಲದೆ ಸಾಧ್ಯವೆ ? ಇವನ ಹೆಂಡತಿಯು ಹಾಲು, ಮೊಸರು, ಬೆಣ್ಣೆಯನ್ನು ಮಾರಬೇಕು. ಹಾಲು, ಮೊಸರು ಸೇರಿಗೆ ಇಷ್ಟು ದುಡ್ಡು ಮತ್ತು ದುಡ್ಡಿಗೆ ಇಷ್ಟುಜತೆ ಬೆರಣಿ ಎಂಬುದು ಅವಳಿಗೆ ತಿಳಿಯಬೇಡವೆ ? ಹೀಗೆ ಕೇವಲ ಕುಗ್ರಾಮವಾಸಿಗಳಾದ ನಿರಕ್ಷರ ಕುಕ್ಷಿಗಳಾದ ರೈತರಿಗೇ ಲೆಕ್ಕಾಚಾರವು ಇಷ್ಟು ಅವಶ್ಯವಾಗಿರುವಾಗ ನಗರವಾಸಿಗಳಾದ ವಿದ್ಯಾವಂತರಿಗೆ ಅದರ ಅವಶ್ಯಕತೆಯು ಇನ್ನೆಷ್ಟಿರಬೇಕೆಂಬುದನ್ನು ಹೇಳಬೇಕಾದುದೇ ಇಲ್ಲ.

ಈ ಲೆಕ್ಕಾಚಾರವನ್ನು ಸಂಖ್ಯೆಯಲ್ಲಿ ಇಡುತ್ತೇವೆ ಮತ್ತು ಸಂಖ್ಯೆಯನ್ನು ಅಂಕೆ ಗಳಿಂದ ಬರೆದು ತೋರಿಸುತ್ತೇವೆ. ಹಿಂದೂ ದೇಶದ ದಶಕಪದ್ಧತಿಯ ಪ್ರಕಾರ ಯಾವ ಸಂಖ್ಯೆಯನ್ನಾದರೂ ಗೊತ್ತಾದ ಹತ್ತು ಮೂಲ ಅಂಕೆಗಳಿಂದಲೇ ಬರೆದು ತೋರಿಸಬಹುದು. ಈ ದಶಕ ಪದ್ಧತಿಯೇ ಭೂಮಂಡಲದ ಎಲ್ಲಾ ಕಡೆಯಲ್ಲಿಯೂ ಪ್ರಚಾರದಲ್ಲಿದೆ. ಪ್ರತಿಯೊಂದು ಭಾಷೆಯಲ್ಲೂ ಈ ಗೊತ್ತಾದ ಹತ್ತು ಅಂಕೆಗಳಲ್ಲಿ ಸೊನ್ನೆವಿನಾ ಉಳಿದ ಒಂಬತ್ತು ಅಂಕೆಗಳಿಗೆ ಬೇರೆ ಬೇರೆ ಗುರುತುಗಳನ್ನು ಏರ್ಪಡಿ ಸಿದ್ದಾರೆ. ಕನ್ನಡ ಭಾಷೆಯಲ್ಲಿ ಈ ಹತ್ತು ಅಂಕೆಗಳಿಗೆ ಗುರುತುಗಳು— ೧, ೨, ೩, ೪, ೫, ೬, ೭, ೮, ೯, ೦.

ಇಂಗ್ಲಿಷ್ ಭಾಷೆಯು ಭೂಮಂಡಲದ ಅನೇಕ ದೇಶಗಳಲ್ಲಿ ಪ್ರಚಾರದಲ್ಲಿದೆ. ಇದಲ್ಲದೆ ನಮ್ಮ ಸೀಮೆಯಲ್ಲಿ ಇಂಗ್ಲಿಷ್‌ನವರು ಹಿಂದೆ ಐವತ್ತು ವರ್ಷ ರಾಜ್ಯಭಾರವನ್ನು ನಡೆಸಿದರು. ಆದಕಾರಣ ನಮ್ಮ ಸೀಮೆ ಸರಕಾರದ ಎಲ್ಲಾ ಇಲಾಖೆಯ ಮೇಲಣ ಅಧಿಕಾರಿಗಳು ಈಗಲೂ ಇಂಗ್ಲಿಷ್ ಭಾಷೆಯಲ್ಲಿಯೇ ಕಾಗದಪತ್ರಗಳನ್ನು ನಡೆಸು ತ್ತಿದ್ದಾರೆ. ಆದಕಾರಣ ಇಂಗ್ಲಿಷ್ ಅಂಕೆಯು ವಿಶೇಷವಾಗಿ ಬಳಿಕೆಯಲ್ಲಿದೆ.

ಮೈಸೂರು ಸೀಮೆಯು ಕನ್ನಡ ಸೀಮೆ. ಇದರ ಮಾತೃಭಾಷೆಯು ಕನ್ನಡ. ಆದಕಾರಣ ನಮ್ಮ ಸೀಮೆಯ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಭಾಷೆಯಲ್ಲಿಯೇ ಓದು ಬರೆಹವನ್ನು ಕಲಿಸುತ್ತಿದ್ದಾರೆ. ಆದರೆ ಅಂಕಗಣಿತವನ್ನು ಮಾತ್ರ ಪ್ರಾರಂಭದಿಂದಲೂ ಕನ್ನಡ ಅಂಕೆಗಳನ್ನು ಉಪಯೋಗಿಸದೆ ಪರಭಾಷೆಯಾದ ಆಂಗ್ಲೇಯ ಭಾಷೆಯ ಅಂಕೆಗಳ ಸಹಾಯದಿಂದಲೇ ಕಲಿಸುತ್ತಿದ್ದಾರೆ. ಇದು ಸ್ವಾಭಾವಕ್ಕೆ ವಿರುದ್ಧವಾಗಿರು ವಂತೆ ತೋರುತ್ತದೆ. ಹೀಗೆ ಪ್ರಾರಂಭದಿಂದಲೂ ಇಂಗ್ಲಿಷ್ ಅಂಕೆಗಳನ್ನೇ ಉಪ ಯೋಗಿಸಿ ಅಂಕಗಣಿತವನ್ನು ಕಲಿಸಲು ಕಾರಣವೇನೆಂದರೆ ಕೆಲವು ವರ್ಷಗಳ ಹಿಂದೆ

ವಿದ್ಯಾಭ್ಯಾಸದ ಇಲಾಖೆಯಿಂದ ಎಲ್ಲಾ ಶಾಲೆಗಳಲ್ಲಿಯೂ ಇಂಗ್ಲಿಷ್ ಅಂಕೆಗಳನ್ನೇ ಉಪಯೋಗಿಸಬೇಕೆಂದು ಒಂದು ವಿಧಿಯು ಏರ್ಪಾಡಾಗಿರುವಂತೆ ತಿಳಿದು ಬರುತ್ತದೆ.

ಬಾಲಕರು ಪ್ರಾಮಿಕ ಶಾಲೆಗಳಿಂದ ಮಾಧ್ಯಮಿಕ, ಪ್ರೌಢ ಮತ್ತು ಸರ್ವವಿದ್ಯಾ ಶಾಲೆಗಳಿಗೆ ಹೋದರೆ ಅಲ್ಲಿ ಇಂಗ್ಲಿಷ್ ಪುಸ್ತಕಗಳನ್ನು ಓದಬೇಕು; ಅವುಗಳಲ್ಲಿ ಇಂಗ್ಲಿಷ ಅಂಕೆಗಳು ಇವೆ. ಆದಕಾರಣ ಪ್ರಾಥಮಿಕ ಶಾಲೆಯಿಂದಲೇ ಇಂಗ್ಲಿಷ್ ಅಂಕೆಗಳನ್ನು ಕಲಿಸುವುದು ಒಳ್ಳೆಯದು ಎಂಬ ಅಭಿಪ್ರಾಯವಿರಬಹುದು.

ಬರೀ ಕನ್ನಡವನ್ನೇ ಕಲಿಸುವ ಪ್ರಾಥಮಿಕ ಶಾಲೆಯಲ್ಲಿಯೂ ಕೂಡಾ ಕನ್ನಡ ಅಂಕೆಗಳನ್ನು ಕಲಿಸದಿದ್ದರೆ ಆ ಅಂಕೆಗಳನ್ನು ಕಲಿಸುವ ಬೇರೆ ಶಾಲೆಗಳು ಆವುವು ಎಂದು ಕೇಳಿದರೆ 'ಎಲ್ಲರೂ ವಿಶೇಷವಾಗಿ ಇಂಗ್ಲಿಷ್ ಅಂಕೆಗಳನ್ನೇ ಉಪಯೋಗಿಸುತ್ತಾರೆ. ಕನ್ನಡ ಅಂಕೆಯನ್ನು ಉಪಯೋಗಿಸುವದರು ವಿರಳ. ಅವುಗಳನ್ನು ಕಲಿಸುವುದರಿಂದ ಉಂಟಾಗುವ ಪ್ರಯೋಜನವು ಕಡಿಮೆ; ಆದಕಾರಣ ಅವುಗಳನ್ನು ಕಲಿಸದಿದ್ದರೆ ಉಂಟಾಗುವ ತೊಂದರೆಯೇನು?' ಎಂದು ಹೇಳಬಹುದು.

ಆದರೆ ಸಾಮಾನ್ಯವಾಗಿ ಯಾವ ಭಾಷೆಯನ್ನು ಕಲಿತರೂ ಆ ಭಾಷೆಯ ಅಕ್ಷರಗಳ ಸಂಗಡ ಎಣಿಕೆಗೆ ಸಂಬಂಧಪಟ್ಟ ಅಂಕೆಗಳನ್ನು ಕೂಡಾ ಕಲಿವುದು ಸಹಜವಾಗಿದೆ. ಅದರಲ್ಲಿಯೂ ಮಾತೃಭಾಷೆಯನ್ನು ಕಲಿವಾಗ ಅದರಲ್ಲಿರುವ ಲೆಕ್ಕಾಚಾರಕ್ಕೆ ಬೇಕಾದ ಅಂಕಿಗಳನ್ನು ತ್ಯಜಿಸಿ ಪ್ರಾರಂಭದಿಂದಲೂ ಪರಭಾಷೆಯ ಅಂಕಿಗಳನ್ನೇ ಕಲಿವುದು ಅನ್ಯಾಯ! ಬಾಲಕರು ಮಾಧ್ಯಮಿಕ ಶಾಲೆಗೆ ಹೋದಕೂಡಲೆ ಒಂಬತ್ತು ಇಂಗ್ಲಿಷ ಅಂಕೆಗಳನ್ನು ಒಂದು, ಎರಡು ದಿನಗಳಲ್ಲಿ ಚೆನ್ನಾಗಿ ಕಲಿಯಬಹುದು. ಆದರೆ ಕನ್ನಡ ಅಂಕೆಗಳನ್ನು ಕಲಿಯಲು ಪ್ರಾಥಮಿಕ ಶಾಲೆಯನ್ನು ಬಿಟ್ಟರೆ ಬೇರೆ ಶಾಲೆಗಳಲ್ಲಿ ಅವಕಾಶವೇ ಇಲ್ಲ. ಪ್ರಾಥಮಿಕ ಶಾಲೆಯಲ್ಲಿಯೇ ವಿದ್ಯಾಭ್ಯಾಸವನ್ನು ಪೂರ್ತಿ ಮಾಡಿ ಶಾಲೆಯನ್ನು ಬಿಟ್ಟು ಬಿಡುವ ಬಾಲಕನು ಕನ್ನಡ ಅಂಕೆಗಳನ್ನು ಕಲಿವುದೆಲ್ಲಿ? ಮೈಸೂರು ಸೀಮೆಯ ಆವ ಪಾಠಶಾಲೆಯಲ್ಲಿಯೂ ಕನ್ನಡ ಅಂಕೆಗಳನ್ನು ಕಲಿಯಲು ಅವಕಾಶವಿರಕೂಡದು ಎಂಬ ಸಂಕಲ್ಪವನ್ನು ಮಾಡಿದರೆ ಯತ್ನವಿಲ್ಲ.

ಮುಂಬೈ ಆಧಿಪತ್ಯದ ಕರ್ಣಾಟಕ ಪ್ರಾಂತಗಳಲ್ಲಿ ಬರೆವ ಕನ್ನಡ ಪುಸ್ತಕಗಳಲ್ಲಿ ಪುಟವನ್ನು ಸೂಚಿಸುವ ಸಂಖ್ಯೆಗಳಿಗೂ ಕೂಡಾ ಕನ್ನಡ ಅಂಕಿಗಳನ್ನೇ ತಪ್ಪದೆ ಉಪಯೋಗಿಸುತ್ತಾರೆ. ಅದೇ ಆಧಿಪತ್ಯದಲ್ಲಿ ಪಠ್ಯ ಪುಸ್ತಕದ ಸಮಿತಿಯವರು ಕನ್ನಡ ಭಾಷೆಯಲ್ಲಿ ಬರೆದಿರುವ ಯಾವ ಪುಸ್ತಕದಲ್ಲಾಗಲಿ ಪರಭಾಷೆಯಾದ ಆಂಗ್ಲೇಯ ಭಾಷೆಯ ಅಂಕಿಗಳನ್ನು ಉಪಯೋಗಿಸಿದ್ದರೆ ಅಂಥ ಪುಸ್ತಕವನ್ನು ಪಠ್ಯ ಪುಸ್ತಕವಾಗಿಡಲು ಅನುಮೋದಿಸುವದಿಲ್ಲ. ಇದರಿಂದ ಒಂದು ಭಾಷೆಗೆ ಪೂರ್ಣವಾಗಿ ಗೌರವವನ್ನು ಕೊಡಬೇಕಾದರೆ ಮಾತುಗಳು ಮತ್ತು ಸಂಖ್ಯೆಗಳು ಆ ಭಾಷೆಯಲ್ಲಿಯೇ ಇರಬೇಕೆಂಬುದು ಅವರ ಅಭಿಮತವಾಗಿದೆ. ದೇಶವಾತ್ಸಲ್ಯಕ್ಕೂ ಭಾಷಾವಾತ್ಸಲ್ಯಕ್ಕೂ ಪ್ರಾಮುಖ್ಯತೆಯುಳ್ಳ ಈ

ಕಾಲದಲ್ಲಿಯೂ ಮಾತೃ ಭಾಷೆಗೆ ಪ್ರಾರಂಭದಿಂದಲೂ ಪೂರ್ಣ ಗೌರವವನ್ನು ಕೊಡ ದಿದ್ದರೆ ನಾವು ನಮ್ಮ ಕರ್ತವ್ಯವನ್ನು ಮಾಡಿದಹಾಗಾಯಿತೆ ? ಮೊದಲಿನಿಂದಲೂ ಮಾತೃ ಭಾಷೆಗೆ ನಿಗೆಕೊಟ್ಟು ಮುಂದಣ ನಗರನಿವಾಸಿಗಳಾಗುವ ನಮ್ಮ ಮಕ್ಕಳಿಗೆ ಆ ಭಾಷೆ ಯನ್ನು ಪೂರ್ತಿಯಾಗಿ ಕಲಿಸಲು ವಿಶೇಷ ಉತ್ಸಾಹದಿಂದ ತಕ್ಕ ಏರ್ಪಾಡುಗಳನ್ನು ಮಾಡುವುದು ನಮ್ಮ ಪ್ರಥಮ ಕರ್ತವ್ಯವು ಎಂದು ಅಲ್ಲಿಯವರು ತಿಳಿದಿದ್ದಾರೆ.

ನಮ್ಮ ಸೀಮೆಯಲ್ಲಾದರೋ ಎಂಥ ಕನ್ನಡ ಪುಸ್ತಕವನ್ನೇ ಬರೆದರೂ ಅದರಲ್ಲಿ ಸಂಖ್ಯೆಯನ್ನು ಸೂಚಿಸಲು ಇಂಗ್ಲಿಷ ಅಂಕಿಯನ್ನೇ ತಪ್ಪದೆ ಉಪಯೋಗಿಸುತ್ತಾರೆ. ಹೀಗೆ ಇಂಗ್ಲಿಷ ಅಂಕೆಗಳನ್ನು ತಾವು ಬರೆದ ಕನ್ನಡ ಪುಸ್ತಕದಲ್ಲಿ ಉಪಯೋಗಿಸಿದರೆ ತಮ್ಮ ಪುಸ್ತಕಕ್ಕೆ ಒಂದುರೀತಿಯಾದ ಗೌರವವು ಉಂಟಾಗುತ್ತದೆ ಎಂಬ ಭಾವನೆಯು ಗ್ರಂಥಕರ್ತರಿಗೆ ಇರುವಂತೆ ತೋರುತ್ತದೆ. ಹಾಗಿಲ್ಲದಿದ್ದರೆ ಕನ್ನಡ ಭಾಷೆಯಲ್ಲಿ ಬರೆದಿ ರುವ ಪುಸ್ತಕದಲ್ಲಿ ಇಂಗ್ಲಿಷ ಅಂಕೆಗಳನ್ನೇ ಉಪಯೋಗಿಸುವುದು ಮತ್ಯಾವ ಕಾರಣದಿಂದ ನಿರ್ಬಂಧವೊ ತಿಳಿಯಲಸದಳವಾಗಿದೆ.

ಈಗ ನಮ್ಮ ಸೀಮೆಯಲ್ಲಿ ಸರಕಾರದ ಇಲಾಖೆಗಳಲ್ಲಿ ಸರ್ವೆ ಇಲಾಖೆಯ ಲೆಕ್ಕಾ ಚಾರಗಳೂ ರೆವಿನ್ಯು ಇಲಾಖೆಯ ಶ್ಯಾನುಭೋಗರ ಲೆಕ್ಕಾಚಾರಗಳೂ ಮತ್ತು ಅನೇಕ ವರ್ತಕವ್ಯಾಪಾರಿಗಳ ಲೆಕ್ಕಾಚಾರಗಳೂ, ಇಂಗ್ಲಿಷ ಭಾಷೆ ತಿಳಿಯದ ಪೂರ್ವಿಕರ ಲೆಕ್ಕಾ ಚಾರಗಳೂ ಕನ್ನಡ ಅಂಕೆಯಲ್ಲಿಯೇ ಇವೆ.

ವಿದ್ಯಾಭ್ಯಾಸದ ಇಲಾಖೆಯಲ್ಲಿ ಅಸಿಸ್ಟೆಂಟ್ ಇನ್‌ಸ್ಪೆಕ್ಟರುಗಳು ಇತರ ಇಲಾಖೆ ಯವರ ಸಂಗಡ ಕಾಗದ ಪತ್ರಗಳನ್ನು ಕನ್ನಡ ಭಾಷೆಯಲ್ಲಿಯೇ ನಡೆಸಬೇಕೆಂದು ವಿಧಾ ನುಕವಾಗಿದೆ.

ಮಿಡಲ್‌ಸ್ಕೂಲ್ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಇಂಗ್ಲಿಷ ವಿನಾ ಉಳಿದ ಎಲ್ಲಾ ವಿಷಯಗಳ ಪ್ರಶ್ನೆ ಪತ್ರಿಕೆಗಳಿಗೆ ಉತ್ತರವನ್ನು ಕನ್ನಡ ಭಾಷೆಯಲ್ಲಿಯೇ ಬರೆಯ ಬೇಕೆಂದು ತೀರ್ಮಾನವಾಗಿದೆ.

ಈಗ ತಾನೆ ಕೆಲವು ಪ್ರೌಢಶಾಲೆಗಳಲ್ಲಿಯೂ ಚರಿತ್ರೆ ಭೂಗೋಳ ಶಾಸ್ತ್ರವನ್ನು ಕನ್ನಡ ಭಾಷೆಯಲ್ಲಿಯೇ ಬೋಧಿಸಬೇಕೆಂದು ಸರಕಾರದವರು ಅನುಮೋದಿಸಿದ್ದಾರೆ.

ಕನ್ನಡ ಪ್ರಾಥಮಿಕ ಶಾಲೆಗಳಲ್ಲಂತೂ ಓದುವ ಪುಸ್ತಕಗಳೂ, ಹೇಳಿಕೊಡುವ ವಿಷಯಗಳೂ ಮತ್ತು ಬೋಧನೆಗೆ ಉಪಯೋಗಿಸುವ ಭಾಷೆಯೂ ಎಲ್ಲವೂ ಕನ್ನಡವೇ ಆಗಿವೆ.

ಆದಕಾರಣ ಇವುಗಳ ಜತೆಗೆ ಇನ್ನುಮುಂದೆಯಾದರೂ ಪ್ರಾಥಮಿಕ ಶಾಲೆಗಳಲ್ಲಿ ಎಣಿಕೆಗೆ ಉಪಯೋಗಿಸುವ ಸಂಖ್ಯೆಗಳನ್ನು ಕನ್ನಡ ಅಂಕೆಗಳಿಂದಲೇ ಬರೆಯಬೇಕೆಂಬ ನಿರ್ಬಂಧವಾದ ನಿಯಮವನ್ನು ಇಲಾಖೆಯವರು ಏರ್ಪಡಿಸುವುದು ಸೂಕ್ತವೆಂದು ತೋರುತ್ತದೆ.

ಶಿಕ್ಷಣದ ಸಾಮಾನ್ಯ ಉದ್ದೇಶಗಳೂ ಕೊನೆಯ ದಿಶೆಯೂ

ಲೇಖಕ:— ಸಾತೇನಹಳ್ಳಿ

ಜಗತ್ತಿನೊಳಗಿನ ಎಲ್ಲ ಪ್ರಾಣಿಗಳಲ್ಲಿ ಮನುಷ್ಯನು ಮಾತ್ರ ಅವಯವಪರಿಪೂರ್ಣನೂ ಜ್ಞಾನನಿಧಿಯುಳ್ಳವನೂ ಆಗಿರುವನು. ಮಿಕ್ಕ ಪ್ರಾಣಿಗಳಿಗೆ ಜಗದಲ್ಲಿ ಬಾಳುವ ಪೂರ್ತೆ ಅವಯವಗಳೂ ತಿಳಿವೂ ಇರುವವು. ಆದ್ದರಿಂದ ಮನುಷ್ಯನ ಪ್ರಾದುರ್ಭಾವದ ಉದ್ದೇಶವು ಬರಿ ಉಂಡುಟ್ಟು ತಿಂದು ಬದುಕುವ ಪೂರ್ತೆ ಇರಲಾರದು. ಜಗದೀಶನ ಈ ಉದ್ದೇಶಕ್ಕೆ ತಕ್ಕಂತೆ ಈ ವರೆಗೆ ಮನುಷ್ಯನು ಅನೇಕ ಅಮಾನುಷ ಕೃತ್ಯಗಳನ್ನೂ ಸಾಹಸಗಳನ್ನೂ ಶೋಧಗಳನ್ನೂ ಮಾಡಿರುವನು. ಇನ್ನೂ ಮಾಡುತ್ತಲೇ ಇರುವನು. ಅವನು ತನ್ನ ಶೋಧಕಬುದ್ಧಿಯಿಂದ ಜಗತ್ತಿಗೆ ನೂತನ ಸ್ವರೂಪವನ್ನುಂಟು ಮಾಡುತ್ತಲಿರುವನು. ಕಡಿಮೆ ತರಗತಿಯ ಪ್ರಾಣಿಗಳಿಗೆ ಶಿಕ್ಷಣ ಕೊಟ್ಟು ಮನುಷ್ಯನು ಅವುಗಳಿಂದ ಆಶ್ಚರ್ಯದ ಕೆಲಸಗಳನ್ನು ಮಾಡಿಸಿ ತೋರಿಸುವನು. ಅಂದಬಳಿಕ ಪ್ರತಿಸೃಷ್ಟಿಯ ಶಕ್ತಿಯುಳ್ಳ ವಿಲಕ್ಷಣ ಮೇಧಾ ಶಕ್ತಿಯು ಮನುಷ್ಯನಿಗೆ ಶಿಕ್ಷಣದ ಆವಶ್ಯಕತೆಯಿರುವದೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಎಲ್ಲರಲ್ಲಿಯೂ ಬುದ್ಧಿಯ ತೀವ್ರತೆಯು ಒಂದೇ ತೆರನಾಗಿರಲಾರದು. ಹಾಗೆಯೇ ಬೇರೆ ಬೇರೆ ವ್ಯಕ್ತಿಗಳ ಸ್ಥಿತಿಗತಿಗಳ ಪರಿಸ್ಥಿತಿಗಳೂ ಬೇರೆ ಬೇರೆಯಾಗಿರುವವು. ಆದದರಿಂದ ಬೇರೆ ಬೇರೆ ವ್ಯಕ್ತಿಗಳ ಶಿಕ್ಷಣದ ಉದ್ದೇಶವು ಕೂಡ ಒಂದೇ ಬಗೆಯಾಗಿರಲಾರದು. ಸುಧಾರಣೆಯ ಉಚ್ಚ ಶಿಖರದ ಈ ಕಾಲದಲ್ಲಿ ಏನೂ ಉದ್ದೇಶವಿಲ್ಲದೆ (ಬರಿ ಓದುಬರಹದ ಪೂರ್ತೆ) ಶಿಕ್ಷಣ ಕೊಡುವದು ತೀರ ಅಧೋಗತಿಯ ಸ್ಥಿತಿಯದಾಗಿರುವದು. ತೀರ ಶಿಕ್ಷಣವಿಲ್ಲದೆ ವನಚರರಂತೆ ತಿರುಗುವದಂತೂ ಯಾವ ಸ್ಥಿತಿಯದಾಗುವದೆಂಬದನ್ನು ಹೇಳಲಿಕ್ಕೇ ಬೇಡ. ಸಂಘವೇ ಶಕ್ತಿಯಾಗಿ ಉಳ ಈ ಶತಮಾನದಲ್ಲಿ ಕಲಿಸತಕ್ಕದ್ದನ್ನು ಕಲಿಸಿದರೆ ತೀರಿತೆಂದು ಪಾಲಕರೂ, ಪರೀಕ್ಷೆಯ ಕಾಟ ಕಳೆಯಿತೆಂದು ಶಿಕ್ಷಕರೂ, ಮೈ ಮಣ್ಣಾಗಬಾರದೆಂದು ಮಣಿಸದೆ ವಿದ್ಯಾರ್ಥಿಗಳೂ ಕುಳಿತರೆ ಕಾಲ, ಧನಗಳ ಅಪವ್ಯಯವಾಗುವದೆಂಬು ಬೇರೆ ಹೇಳಬೇಕಾಗಿಲ್ಲ.

ತೀವ್ರ ವೇಗದ ವಾಹನಗಳು ಬಳಿಕೆಯಲ್ಲಿ ಬಂದಂದಿನಿಂದ ಸಮುದ್ರವು ಮೊಳಕಾಲಮಟವಾದಂತಾಗಿದೆ. ವರ್ಷಗಟ್ಟಲೆ ತಿರುಗುವ ಸ್ಥಳವು ಮಿನಿಟು ಸೆಕಂದುಗಳ ವರೆಗೆ ಸಮೀಪಿಸುತ್ತಿರುವದು. ಪರಿಸ್ಥಿತಿಯೂ ದಿನದಿನಕ್ಕೆ ಬದಲಾಗುತ್ತಿರುವದು. ಆದದರಿಂದ ಶಿಕ್ಷಣವೂ ಉದ್ದೇಶಗಳೂ ಇದ್ದಂತೆ ಇರಲಾರವು. ಇಂಥ ವೇಳೆಯಲ್ಲಿ ಒಳ್ಳೆಯ ಕರ್ತೃತ್ವಶಾಲಿಗಳಿಗೆ ಕೂಡ ಶಿಕ್ಷಣದ ಉದ್ದೇಶದ ವಿಸ್ಮೃತಿಯಾಗುವದು. ಸರ. ವಿಲ್ಯಮ್ ರ್‍ಯಾಮುಸೆಯವರು ತಮ್ಮ (Making of a University) ಎಂಬ ಪುಸ್ತಕದಲ್ಲಿ ೧೯೧೬ನೆಯ ಇಸವಿಯ ವರೆಗೂ ಇಂಗ್ಲಂಡದಲ್ಲಿ ಉಚ್ಚ ಶಿಕ್ಷಣವೆಂದರೆ, ಶಿರಿವಂತಿಗೆಯ ಪ್ರಕಾರವೂ ಸುಖವಿಲಾಸವೂ ಇರುವದೆಂದು ತಿಳಿವಳಿಕೆಯಾಗಿದೆ"—ಹೀಗೆ ಊಹೆ ಮಾಡಿದ್ದಾರೆ. ಈಗ ನಮ್ಮಲ್ಲಿ ಶಿಕ್ಷಿತರ ಸಂಖ್ಯೆಯು ತೀರ ಅಲ್ಪವಾಗಿದ್ದರೂ ಒಳ್ಳೆಯ ಜ್ಞಾನಿ

ಗಳು ಸುಮ್ಮನೆ ಕೂಡುವ, ಏನೂ ಅರಿಯದವರು ದುಡಿಯುವ ವಿಚಿತ್ರ ಸ್ಥಿತಿಯು ದೈವ
ಯೋಗದಿಂದ ಒದಗಿರುವದು. ಇದಾದರೂ ಸುಧಾರಣೆಗಾಗಿಯೇ ಇರುವದೆಂದು ಸ್ಪಷ್ಟ
ವಾಗಿ ತಿಳಿಯಬೇಕು. ಈ ಸ್ಥಿತಿಯಾದರೂ ಜನಸಾಮಾನ್ಯದ ದಾರಿದ್ರ್ಯಅಜ್ಞಾನತೆಗಳ
ಪರಿಣಾಮವೇ ಆಗಿರುವದು. ಇಂಥ ಸ್ಥಿತಿಯಲ್ಲಿ ಜನಸಾಮಾನ್ಯಕ್ಕೆ ಶಿಕ್ಷಣದ ಉದ್ದೇಶವು
ಹೊಳೆಯುವದು ಒತ್ತಟ್ಟಿಗಿರಲಿ, ಶಿಕ್ಷಣದ ಅಭಿರುಚಿಯಿಲ್ಲದವರೂ ವಾಚನದ ಪ್ರೀತಿಯಿಲ್ಲ
ದವರೂ ಶಿಕ್ಷಿತರಲ್ಲಿಯೇ ಹೊರಡುವರು. ಹಳ್ಳಿವಾಡದವರಂತೂ ಶಿಕ್ಷಣದ ಬೆಲೆ ತಿಳಿಯದಿರು
ವದು ಸಹಜವದೆ. ಶಹರವಾಸಿಗಳು ಕೂಡ ತಮ್ಮ ಮಕ್ಕಳ ಶಿಕ್ಷಣದ ಕಡೆಗೆ ದುರ್ಲಕ್ಷ
ವುಳ್ಳವರಾಗಿ "ಏನು ಕಲಿತು ಏನು ಮಾಡುವುದದೆ" ಎಂದು ಉಸುರುಗರೆಯುವರು.
ಇದರಿಂದ ಶಿಕ್ಷಣದ ಉದ್ದೇಶವು ತಿಳಿಯದಲೆ ಈ ಅಂತರ್ಭಾವವು ಪ್ರಕಟವಾಗುತ್ತದೆಂ
ಬದು ಸಹಜ ಸಿದ್ಧವಾಗಿದೆ; ಆದದರಿಂದ ಆ ಉದ್ದೇಶವನ್ನೇ ಸಾಧಾರಣವಾಗಿ ಕಂಡು
ಹಿಡಿಯುವದು ಈ ಲೇಖನದ ಉದ್ದೇಶವಾಗಿರುವದು.

ಬಾಲಕ, ಪಾಲಕ, ಶಿಕ್ಷಕತ್ರಯರು ಶಿಕ್ಷಣ ರಂಗಸ್ಥಳದ ಪಾತ್ರವಾಗಿದ್ದಾರೆ.
೧೦೦ಕ್ಕೆ ೬ ರಂತೆ ಶಿಕ್ಷಿತರುಳ್ಳ ನಮ್ಮಲ್ಲಿ ಈ ಮೂವರೂ ಅಶಕ್ತರಾಗಿದ್ದಾರೆ.
ಬಡಿಗತನದ ಹೆಸರೇ ಗೊತ್ತಿಲ್ಲದವನ ಕೈಯಲ್ಲಿ ಉತ್ತಮ ಆಯುಧಗಳನ್ನೂ
ಗಂಧದ ಕಟ್ಟಿಗೆಯನ್ನೂ ಕೊಟ್ಟು ಮೂರ್ತಿ ಕೆತ್ತಲಿಕ್ಕೆ ಬಲಾತ್ಕಾರ ಮಾಡಿದಂತೆ ಶಿಕ್ಷ
ಣದ ಸ್ಥಿತಿಯಾಗಿದೆ. ಮೊದಲು ಶಿಕ್ಷಕರನ್ನು ಶಿಕ್ಷಣ ಪರಿಣತರನ್ನು ಅಂದರೆ ಮಾನಸ
ಶಾಸ್ತ್ರಜ್ಞರನ್ನೂ, ಶಿಕ್ಷಣಶಾಸ್ತ್ರಜ್ಞರನ್ನೂ ಮಾಡಲಿಕ್ಕೆ ಬೇಕು. ಒಮ್ಮೆ ಕಲಿತವನಿಗೆ ಕೂಡ
ವಿಷಯವು ಹಳಿಸದಂತೆ ಮೇಲೆ ಮೇಲೆ ನೆನಪಿಗೆ ತಂದುಕೊಡುವ, ಪರಿಸ್ಥಿತಿ ಬದಲಾ
ನಂತೆ ಶಿಕ್ಷಣದ ಪದ್ಧತಿಯ ಬದಲಾವಣೆಯ ಸ್ಥಿತಿಯನ್ನು ಹೇಳಿ ಕೊಡುವ ಸಂಸ್ಥೆಗಳೂ
ಮೇಲ್ವಿಚಾರಕರೂ ಬೇಕು. ಇಂಥ ಕಾಲದಲ್ಲಿ ಕಡಿಮೆ ತರಗತಿಯ ಹುಡುಗರು ಶಿಕ್ಷಕ
ರಾಗುವದಕ್ಕೆ ಅರ್ಥದ ಅಭಾವವೇ ಕಾರಣವಾಗಿದೆ. ಹೀಗಾದದರಿಂದ ಶಿಕ್ಷಣದ ಮುಖ್ಯ
ಉದ್ದೇಶವು ತಿಳಿಯುವದಂತೂ ದೂರತೋಪಾಸ್ತವೇ ಸರಿ. ಶಿಕ್ಷಣದಿಂದ ಮನುಷ್ಯನ
ಮುಖ್ಯ ಗುಣಗಳ ರಕ್ಷಣೆಯಾಗಿ, ಅವನು ಉಪಜೀವನಕ್ಕೆ ಸಮರ್ಥನಾಗಬೇಕು. ಇದು
ಶಿಕ್ಷಣದ ಸಾಮಾನ್ಯ ಉದ್ದೇಶವೆಂದು ಎಲ್ಲರೂ ಸಹಜವಾಗಿ ಒಪ್ಪುವರು. ಸರ್ವಸಾಧಾ
ರಣವಾಗಿ ಮಾನಸೋನ್ನತಿ, ತತ್ವಜಿಜ್ಞಾಸೆ, ಸ್ಫೂರ್ತಿ, ಆತ್ಮವಿಶ್ವಾಸ, ಕಾರ್ಯತತ್ಪರತೆ,
ಇವೆಲ್ಲ ಗುಣಗಳೂ ಎಲ್ಲ ಪ್ರಾಪಂಚಿಕರಲ್ಲಿಯೂ ಅವಶ್ಯವಾಗಿರಲಿಕ್ಕೆ ಬೇಕು. ಹಾಗು
ಉಪಜೀವನಕ್ಕೆ ಆವಶ್ಯಕವಾದ ಒಂದೆರಡು ಉದ್ಯೋಗಗಳಲ್ಲಿ ಸುಧಾರಣಾ ಶತಮಾನಕ್ಕೆ
ತಕ್ಕಂತೆ ತಕ್ಕ ಕುಶಲತೆ, ಹಾಗು ಸಾಮರ್ಥ್ಯಗಳೂ ನಾಗರಿಕರಿಗೆ ಬೇಕು. ತಮ್ಮ
ಉದ್ಯೋಗ, ಆಯವ್ಯಯ, ಧೋರಣ, ಪ್ರಕೃತಿ, ಸಂತತಿ, ಇತ್ಯಾದಿ ವಿಚಾರಗಳುಳ್ಳವ
ರಾಗಿ ಪ್ರಪಂಚರಥವನ್ನು ಸುಖವಾಗಿ ನಡೆಯಿಸಲು ಸಮರ್ಥರಾಗಬೇಕು. ಇಂಥವರೇ
ಮುಂದೆ ಶ್ರೇಷ್ಠ ನಾಗರಿಕರಾಗುವರು.

ಶಿಕ್ಷಕನ ಯೋಗ್ಯತೆ– ಶಿಕ್ಷಕನು ಅನುಭವಿಕನೂ, ವ್ಯವಹಾರಜ್ಞನೂ, ಅನೇಕ ಭಾಷಾಭಿಜ್ಞನೂ, ಸಂಶೋಧಕನೂ ಆಗಿರಬೇಕು. ಅಂದರೆ ಅವನು ಶಿಕ್ಷಕನೇ ಆಗಿರಬೇಕು. ಶಿಕ್ಷಕನು ಶಿಕ್ಷಣವು ಉಪಜೀವನದ ಹೊರೆಯೆಂದು ಮಾತ್ರ ತಿಳಿಯಬಾರದು. ಅವನಿಗೆ ತನ್ನ ಪ್ರಾಂತದ ಉಜ್ವಲವಾದ ಇತಿಹಾಸವು ಸಾದ್ಯಂತವಾಗಿ ಗೊತ್ತಿರಬೇಕು. ಕಲಿಸುವ ಮುಖ್ಯ ವಿಷಯಗಳಲ್ಲಿ ನಿಷ್ಣಾತನಾಗಿರಬೇಕು. ಅವನ ವಿದ್ಯೆಯೂ ಬುದ್ಧಿಯೂ ಜನತೆಯ ಪ್ರವಾಹಕ್ಕೆ ತೀರ ಅನುಕೂಲವಾದದ್ದಿರಬೇಕು. ಲೋಕದಲ್ಲಿ ಇಂಥ ವ್ಯಕ್ತಿಗಳು ಸಿದ್ಧವಾಗಲಿಕ್ಕೆ ಪರಿಸ್ಥಿತಿಯು ಅನುಕೂಲತೆಯಿರಬೇಕು. ಜನಸಾಮಾನ್ಯದ ಒಲವು ಇತ್ತ ಎಳೆದರೆ ಪರಿಸ್ಥಿತಿಯು ತಾನೇ ಅನುಕೂಲವಾಗುವದು. ಮುಖ್ಯವಾಗಿ ಜನತೆಯು ಸಾಕ್ಷರಿಯಾದರೆ ಚಲೋ ವಿಚಾರಗಳು ತಿಳಿಯುವವು. ನಮ್ಮಲ್ಲಿ ನಿರಕ್ಷರಿಗಳ ಸಂಖ್ಯೆಯು ೧೦೦ಕ್ಕೆ ೯೦ ಕ್ಕಿಂತ ಹೆಚ್ಚಾಗಿರುವದರಿಂದ ಬಹು ಜನರು ಅಜ್ಞಾನಾವಸ್ಥೆಯಲ್ಲಿಯೇ ಇರುವರು. ಅವರಿಗೆ ದೇಶ, ಕಾಲ, ಪರಿಸ್ಥಿತಿ, ಶಿಕ್ಷಣ ಮೊದಲಾದ ವಿಷಯಗಳ ಬಗ್ಗೆ ಏನೂ ಗೊತ್ತಿರುವದಿಲ್ಲ. ಎಣ್ಣೆಯಿಂದ ಮಾಸಿದ ಅರಿವೆಗೆ ಬಣ್ಣ ಹಚ್ಚಿದಂತೆ ಹೊಸ ಹೊಸ ಸುಧಾರಣೆ ಮಾಡಹೋದರೆ ವಿಲಕ್ಷಣ ಪರಿಣಾಮವಾಗುತ್ತಲಿರುವದು. ಆದದರಿಂದ ಶಿಕ್ಷಣದ ಸ್ಥಿತಿಯು ಸುಧಾರಿಸಬೇಕಾದರೆ ಸಾಕ್ಷರಿಗಳ ಸಂಖ್ಯೆಯು ಹೆಚ್ಚಾಗಲಿಕ್ಕೆ ಬೇಕು. ಬಳಿಕ ಜನರು ತಮ್ಮ ಮಕ್ಕಳಿಗೆ ಅನುಕೂಲವಾದ ಶಿಕ್ಷಣವು ಯಾವದೆಂಬು ತಿಳಿದುಕೊಳ್ಳುವರು. ತಮ್ಮ ಮನೆತನಕ್ಕೂ ಪರಿಸ್ಥಿತಿಗೂ, ಹುಡುಗನ ಒಲವಿಗೂ ಅನುಸರಿಸಿ ವಿದ್ಯಾರ್ಥಿಯ ಶಿಕ್ಷಣದ ಉದ್ದೇಶವು ಬದಲಾಗುತ್ತದೆ. ಈ ಮೊದಲು ಹೇಳಿದಂತೆ ಕಲಿಯುವ ವಿಷಯವು ಯಾವದೇ ಇರಲಿ, ಮಕ್ಕಳು ಮೊದಲು ಸಾಕ್ಷರಿಗಳಾಗಲಿಕ್ಕೆ ಬೇಕು. ಅವರ ಮನಸ್ಸು ಪ್ರಸನ್ನತೆ ಹೊಂದುವಂತೆ ಅವರಿಗೆ ಪ್ರಾಂತದ ಉಜ್ವಲ ಇತಿಹಾಸದ ಭೂಗೋಲಗಳ ಜ್ಞಾನವಿರಬೇಕು. ಪರರಿಗೆ ತೊಂದರೆ ಕೊಡದಂತೆ ಅವರು ತಮ್ಮ ಉಪಜೀವನ ಮಾಡಿಕೊಳ್ಳಲಿಕ್ಕೆ ಸಮರ್ಥರಾಗಬೇಕು. ಕೇವಲ ಧನಾರ್ಜನೆಯೇ ಇಹಲೋಕದ ಇತಿ ಕರ್ತವ್ಯತೆಯೆಂದು ತಿಳಿದರೆ ಸ್ವಾರ್ಥಬುದ್ಧಿಯು ಹೆಚ್ಚಾಗುವದು. ಅದರಿಂದ ಮನುಷ್ಯನ ಮನಸ್ಸು ಸಂಕುಚಿತವಾದದ್ದಾಗುತ್ತದೆ. ಈ ಉದ್ದೇಶಕ್ಕಾಗಿ ಧಾರ್ಮಿಕ ಶಿಕ್ಷಣದ ಬೆಂಬಲವು ಅವಶ್ಯಕವಾಗಿರುವದು. ಈ ವಿಷಯವಾಗಿ ಪ್ರತ್ಯೇಕವಾಗಿ ಬರೆಯುವ ವಿಚಾರವದೆ. ಮೂರ್ತಿಗೆ ಒಪ್ಪದ ಆವಶ್ಯಕತೆಯಿರುವಂತೆ ಎಲ್ಲ ವಿಧದ ಶಿಕ್ಷಣಗಳಿಗೂ ಕೊನೆಗೆ ಧಾರ್ಮಿಕ ಶಿಕ್ಷಣದ ಅಗತ್ಯವಿರುತ್ತದೆ. ಕೆಳಗಿನ ಶಿಕ್ಷಣಾಲಯಗಳಲ್ಲಿ ವಿದ್ಯಾರ್ಥಿಗಳ ಮನಸ್ಸಿನ ಒಲವುಗಳು ತಿಳಿಯುವವು. ಬುದ್ಧಿಯ ತೀವ್ರತೆಯುಳ್ಳವರು ತಮ್ಮ ಒಲವಿದ್ದ ವಿಷಯಗಳಲ್ಲಿ ಸಂಶೋಧನ ಪ್ರವೃತ್ತಿಯುಳ್ಳವರಾಗಲಿಕ್ಕೂ ಅದರಲ್ಲಿ ಪ್ರಾವೀಣ್ಯ ಪಡೆಯಲಿಕ್ಕೂ ವಿಶ್ವವಿದ್ಯಾಲಯಗಳು ಇದ್ದೇ ಇರುತ್ತವೆ.

ಕೆಳಗಿನ ಪ್ರಾಥಮಿಕ ಮಾಧ್ಯಮಿಕ ಶಾಲೆಗಳಲ್ಲಿ ಸಹ ಮಕ್ಕಳಲ್ಲಿ ಸಂಶೋಧಕ ಬುದ್ಧಿಯು ಜಾಗೃತವಾಗುವಂತೆ ಶಿಕ್ಷಣವು ಪದ್ಧತಿಪೂರ್ವಕವಾಗಿ ನಡೆಯಬೇಕು. ಇದು

ಜಾಹೀರಾತು

ಎಲ್ಲ ಶಿಕ್ಷಕರಿಗೂ ತಿಳಿಸುವದೇನಂದರೆ:—ಕೆಳಗೆ ಬರೆದ ಪತ್ತೆಯ ಮೇಲೆ ಕೆಳಗೆ ವಿವರಿಸಿದ ಉಪಯೋಗಕಾರಕವಾದ ಶಿಕ್ಷಣದ ಉಪಕರಣಗಳು ದೊರೆಯುತ್ತವೆ.

ಶಾಸ್ತ್ರೀಯ ವಿಷಯದ ಸಾಮಾನುಗಳು, ನೀರು ಜಗ್ಗುವ ನಳಿಕೆಗಳು, ಬ್ರಹ್ಮಾ ಪ್ರೆಸ್ಸ, ತೂಕದ ಆರ್ಕಿಮಿಡಿಸನ್ ಮಾದರಿಯ ತಕ್ಕಡಿಗಳು, ಕಾರಂಜಿಗಳು, ಸೂರ್ಯಮಾಲೆ, ಋತುಗಳು, ಚಂದ್ರ ನಕಲೆಗಳು ಇವುಗಳನ್ನು ತೋರಿಸುವ ಉಪಕರಣಗಳು ರಿಲೀಫ ನಕಾಶಗಳು, ಗೋಡೆಗೆ ಹಾಕುವ ನಕಾಶಗಳು, ತೊಗಲಿನ ಬೋರ್ಡುಗಳು, ರೇಶಿಮೆ ಉಣ್ಣೆಯ ಬೋರ್ಡುಗಳು ಸಹ ಮಾಂಟೆಸೋರಿ ಹಾಗು ಕಿಂಡರಗಾರ್ಟನ್ ಪದ್ಧತಿಯ ಉಪಕರಣಗಳು ದೊರೆಯುವವು. ಬೇಕಾದವರು ಕೆಳಗಿನ ಪತ್ತೆಗೆ ಬಾಲಬೋಧ ಇಲ್ಲವೆ ಇಂಗ್ಲಿಷ ಲಿಪಿಯಿಂದ ಬರೆದು ಕ್ಯಾಟಲಾಗ ತರಿಸಿಕೊಳ್ಳಬೇಕು.

ಸಾಮಾನು ದೊರೆಯುವ ವಿಳಾಸ:—

Kashibhai C. Patel

ಕಾಶೀಭಾಯಿ ಸಿ. ಪಟೇಲ

ಶಿಕ್ಷಣ ಸಾಹಿತ್ಯ ಕಾರ್ಯಾಲಯ ದೇಹಗಾಂವ (ಅಹಮ್ಮದಾಬಾದ)

Sikshan Sahitya Karyalaya Dehgam (Ahamedabad)

ಹೊಸ ಪುಸ್ತಕಗಳು

೨ನೆಯ ಭಾಗ - ನುಡಿಗನ್ನಡಿ

ಲೇಖಕರು:—ಎಂ. ಪಿ. ಪೂಜಾರ, ಕನ್ನಡ ಪಂಡಿತ ಟ್ರೇ. ಸ್ಕೂ. ಧಾರವಾಡ

ಪ್ರಾಥಮಿಕ ಶಾಲೆಗಳ ೪।೫ ತರಗತಿಗಳಿಗಾಗಿಯೂ ಇಂಗ್ಲಿಶ್ ಶಾಲೆಗಳ ಕೆಳಗಿನ ತರಗತಿಗಳಿಗಾಗಿಯೂ ರಚಿತವಾದದ್ದು. ಈ ವರೆಗೆ ಕನ್ನಡ ೫ನೆಯ ಇಯತ್ತೆಗೆ ತಕ್ಕ ವ್ಯಾಕರಣ ಪುಸ್ತಕವು ಇಲ್ಲದ್ದರಿಂದ ೬, ೭ ಇಯತ್ತೆಗಳಿಗೆ ಕಲಿಸುವ ವ್ಯಾಕರಣ ಪುಸ್ತಕದಲ್ಲಿ ಆರಂಭದ ಕೆಲವು ಪುಟಗಳನ್ನು ಮಾತ್ರ ಆ ಇಯತ್ತೆಗೆ ಕಲಿಸುವ ವಾಡಿಕೆಯಿತ್ತು. ಆದರೆ ಹಾಗೆ ಕಲಿಸುವದು ಅಭ್ಯಾಸಪತ್ರಿಕೆಯನ್ನನುಸರಿಸುವದಿಲ್ಲ. ಈ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಏಕಕೇಂದ್ರಕ್ರಮದಿಂದ ವ್ಯಾಕರಣದ ಎಲ್ಲ ವಿಷಯಗಳನ್ನು ಸ್ಥೂಲಮಾನದಿಂದ ಕಲಿಸುವದಕ್ಕೆ ಅನುಕೂಲವಾಗಬೇಕೆಂದು ಈ ಪುಸ್ತಕವು ಬರೆಯಲ್ಪಟ್ಟಿದೆ. ೫ನೆಯ ಇಯತ್ತೆಗೆ ಕಲಿಸುವ ವಿಷಯಗಳಲ್ಲಿಯೇ ಮುಖ್ಯವಾದವುಗಳನ್ನು ೪ನೆಯ ಇಯತ್ತೆಗೆ ಕಲಿಸುವದಿರುವದರಿಂದ ಈ ಪುಸ್ತಕವು ೪ನೆಯ ಇಯತ್ತೆಗೂ ಉಪಯುಕ್ತವಾಗಿರುವದು. ಆದದರಿಂದ ೪।೫ ಇಯತ್ತೆಗಳ ವಿದ್ಯಾರ್ಥಿಗಳೂ, ಶಿಕ್ಷಕರೂ ಇದರ ಉಪಯೋಗವನ್ನು ಅವಶ್ಯವಾಗಿ ಮಾಡಿಕೊಳ್ಳಬೇಕೆಂದು ಕೋರುವೆವು. ಬೆಲೆ ಬಹಳ ಕಡಿಮೆ (೪ ಆಣೆ ಮಾತ್ರ) ಪುಸ್ತಕಗಳು ಎಲ್ಲ ಬುಕ್‌ಡಿಪೋಗಳಲ್ಲಿಯೂ, ಗ್ರಂಥಕರ್ತರಲ್ಲಿಯೂ, ನಮ್ಮಲ್ಲಿಯೂ ದೊರೆಯುವವು.

ಗಣಿತಾದರ್ಶ—(೫ನೆಯ ಇಯತ್ತೆಗೆ) ಲೇ—ಎಸ್. ಆರ್. ತಟ್ಟಿ ಬಿ. ಎ., ಮತ್ತು ಜೋಶಿ

—ಜೋಶಿಬ್ರದರ್ಶ ಬುಕ್‌ಡಿಪೋ ಲೈನಬಜಾರ, ಧಾರವಾಡ.

ಜಾಹೀರಾತು

ಸ್ಯಾಂಪಲ್] [ಪುಕ್ಕಟೆ

ಉತ್ತಮ ಮಸೀ ಚೀಟುಗಳು

ನೀಲೀಕಪ್ಪು, ಕೆಂಪು, ಜಾಂಬಳಿ ಮಸಿಯ ಚೀಟುಗಳು. ಈ ಕಂಪನಿಯು ಬಹಳ ಜನರಿಂದ ಶಿಫಾರಸ ಪಡೆದು ಮೆಡಲ್ಲುಗಳನ್ನು ಸಂಪಾದಿಸಿರುತ್ತದೆ.

ದರಗಳು

೧೦೦	ಚೀಟುಗಳಿಗೆ	೦—೨—೦
೫೦೦	,,	೧—೧೪—೦
೧೦೦೦	,,	೩—೧—೦
೧೦೦೦೦	,,	೩೦—೦—೦ (ರೇಲ್ವೆ ಫ್ರೀ)

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ.

ಕರ್ನಾಟಕ ಇಂಕ ಕಂಪನಿ,
ಬಾಗಲಕೋಟೆ.

REGISTERED NO B 2567

From
The Manager
Kannada Prathamik Sikshana
Dharwar

LIST NO. ೨೦

Reg. No. B 2567

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Sikshana

NOVEMBER & DECEMBER 1931

ಸಂಪಾದಕ — ವೆಂಕಟೇಶ ನರಸಿಂಗರಾವ ಮುಗದಾಳ ಬಿ. ಎ.,

ಸಂಪುಟ ೬೮ ವರ್ಷ ೩ | ನವಂಬರ-ದಿಶಂಬರ ೧೯೩೧ | ಸಂ. ೮-೯

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ
೧.	ಸ್ಫುಟವಿಚಾರಗಳು ...	೧
೨.	ನಿರೀಕ್ಷಣ ಪಾಠಗಳು ...	೬
೩.	ಕರ್ನಾಟಕ ಶಿಕ್ಷಣ ಸಮ್ಮೇಲನ ...	೯
೪.	ಪಾಠ ಹಾಗು ಶಿಕ್ಷಣಮಾಲೆ; ಟ್ರೇ. ಸ್ಕೂ. ಧಾರವಾಡ	೧೧
೫.	ಶಿಕ್ಷಣದ ಸಾಮಾನ್ಯ ಉದ್ದೇಶಗಳೂ ಕೊನೆಯ ದಿಶೆಯೂ	೧೬
೬	ಗಣಿತ ...	೨೧
೭.	ಪ್ರಸಿದ್ಧ ಮೊಗಲ ಬಾದಶಾಹಿಗಳು ...	೨೨
೮.	'ಚೌಥ, ಸರದೇಶಮುಖಿ' ...	೨೫
೯.	ಅಭಿಸಾರ ...	೩೧
೧೦.	ಪ್ರಾಥಮಿಕ ಶಿಕ್ಷಕರ ಕರ್ತವ್ಯ ...	೩೨
೧೧.	ಪ್ರಕಟನೆಗಳು ...	೩೬
೧೨.	ಬರೆದು ಬಂದ ಪತ್ರಗಳ ಸಾರಾಂಶ ...	೪೮

Printed by K. R. Bhise at the Karnatak Printing Works, Dharwar

Published by V. N. Magdal, B. A.,

Head-Master, Training School Dharwar, at his Office

ಜಾಹೀರಾತು

ಎಲ್ಲ ಶಿಕ್ಷಕರಿಗೂ ತಿಳಿಸುವದೇನಂದರೆ:—ಕೆಳಗೆ ಬರೆದ ಪತ್ತೆಯ ಮೇಲೆ ಕೆಳಗೆ ವಿವರಿಸಿದ ಉಪಯೋಗಕಾರಕವಾದ ಶಿಕ್ಷಣದ ಉಪಕರಣಗಳು ದೊರೆಯುತ್ತವೆ.

ಶಾಸ್ತ್ರೀಯ ವಿಷಯದ ಸಾಮಾನುಗಳು, ನೀರು ಜಗ್ಗುವ ನಳಿಕೆಗಳು, ಬ್ರಹ್ಮಾ ಪ್ರೆಸ್ಸ, ತೂಕದ ಆರ್ಕಿಮಿಡಿಸನ್ ಮಾದರಿಯ ತಕ್ಕಡಿಗಳು, ಕಾರಂಜಿಗಳು, ಸೂರ್ಯ ಮಾಲೆ, ಋತುಗಳು, ಚಂದ್ರ ಕಲೆಗಳು ಇವುಗಳನ್ನು ತೋರಿಸುವ ಉಪಕರಣಗಳು ರಿಲೀಫ ನಕಾಶಗಳು, ಗೋಡೆಗೆ ಹಾಕುವ ನಕಾಶಗಳು, ತೊಗಲಿನ ಬೋರ್ಡುಗಳು ರೇಶಿಮೆ ಉಣ್ಣೆಯ ಬೋರ್ಡುಗಳು ಸಹ ಮಾಂಟೆಸೋರಿ ಹಾಗು ಕಿಂಡರಗಾರ್ಟನ ಪದ್ಧತಿಯ ಉಪಕರಣಗಳು ದೊರೆಯುವವು. ಬೇಕಾದವರು ಕೆಳಗಿನ ಪತ್ತೆಗೆ ಬಾಳ ಬೋಧ ಇಲ್ಲವೆ ಇಂಗ್ಲಿಷ ಲಿಪಿಯಿಂದ ಬರೆದು ಕ್ಯಾಟಲಾಗ ತರಿಸಿಕೊಳ್ಳಬೇಕು.

ಸಾಮಾನು ದೊರೆಯುವ ವಿಳಾಸ:—

Kashibhai C. Patel

ಕಾಶೀಭಾಯಿ ಸಿ. ಪಟೇಲ

ಶಿಕ್ಷಣ ಸಾಹಿತ್ಯ ಕಾರ್ಯಾಲಯ ದೇಹಗಾಂವ (ಅಹಮ್ಮದಾಬಾದ)

Sikshan Sahitya Karyalaya Dehgam (Ahamedabad)

ಹೊಸ ಪುಸ್ತಕಗಳು

೨ನೆಯ ಭಾಗ — ನುಡಿಗನ್ನಡಿ

ಲೇಖಕರು:—ಎಂ. ಪಿ. ಪೂಜಾರ, ಕನ್ನಡ ಪಂಡಿತ ಟ್ರೇ. ಸ್ಕೂ. ಧಾರವಾಡ

ಪ್ರಾಥಮಿಕ ಶಾಲೆಗಳ ೪।೫ ತರಗತಿಗಳಿಗಾಗಿಯೂ ಇಂಗ್ಲಿಶ್ ಶಾಲೆಗಳ ಕೆಳಗಿನ ತರಗತಿಗಳಿಗಾಗಿಯೂ ರಚಿತವಾದದ್ದು ಈ ವರೆಗೆ ಕನ್ನಡ ೫ನೆಯ ಇಯತ್ತೆಗೆ ತಕ್ಕ ವ್ಯಾಕರಣ ಪುಸ್ತಕವು ಇಲ್ಲದ್ದರಿಂದ ೬, ೭ ಇಯತ್ತೆಗಳಿಗೆ ಕಲಿಸುವ ವ್ಯಾಕರಣ ಪುಸ್ತಕ ದಲ್ಲಿ ಆರಂಭದ ಕೆಲವು ಪುಟಗಳನ್ನು ಮಾತ್ರ ಆ ಇಯತ್ತೆಗೆ ಕಲಿಸುವ ವಾಡಿಕೆಯಿತ್ತು. ಆದರೆ ಹಾಗೆ ಕಲಿಸುವದು ಅಭ್ಯಾಸಪತ್ರಿಕೆಯನ್ನನುಸರಿಸುವದಿಲ್ಲ. ಈ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಏಕಕೇಂದ್ರಕ್ರಮದಿಂದ ವ್ಯಾಕರಣದ ಎಲ್ಲ ವಿಷಯಗಳನ್ನು ಸೂಲಮಾನದಿಂದ ಕಲಿಸುವದಕ್ಕೆ ಅನುಕೂಲವಾಗಬೇಕೆಂದು ಈ ಪುಸ್ತಕವು ಬರೆಯ ಲ್ಪಟ್ಟಿದೆ ೫ನೆಯ ಇಯತ್ತೆಗೆ ಕಲಿಸುವ ವಿಷಯಗಳಲ್ಲಿಯೇ ಮುಖ್ಯವಾದವುಗಳನ್ನು ೪ನೆಯ ಇಯತ್ತೆಗೆ ಕಲಿಸುವದಿರುವದರಿಂದ ಈ ಪುಸ್ತಕವು ೪ನೆಯ ಇಯತ್ತೆಗೂ ಉಪ ಯುಕ್ತವಾಗಿರುವದು ಆದದರಿಂದ ೪।೫ ಇಯತ್ತೆಗಳ ವಿದ್ಯಾರ್ಥಿಗಳೂ, ಶಿಕ್ಷಕರೂ ಇದರ ಉಪಯೋಗವನ್ನು ಅವಶ್ಯವಾಗಿ ಮಾಡಿಕೊಳ್ಳಬೇಕೆಂದು ಕೋರುವೆವು. ಬೆಲೆ ಬಹಳ ಕಡಿಮೆ (೪ ಆಣೆ ಮಾತ್ರ) ಪುಸ್ತಕಗಳು ಎಲ್ಲ ಬುಕ್‌ಡಿಪೋಗಳಲ್ಲಿಯೂ, ಗ್ರಂಥ ಕರ್ತರಲ್ಲಿಯೂ, ನಮ್ಮಲ್ಲಿಯೂ ದೊರೆಯುವವು.

ಗಣಿತಾದರ್ಶ—(೩ನೆಯ ಇಯತ್ತೆಗೆ) ಲೇ—ಎಸ್. ಆರ್. ತಟ್ಟಿ ಬಿ. ಎ., ಮತ್ತು ಜೋಶಿ

—ಜೆ ೦: ಶಿ ಬ್ರದರ್ಸ ಬುಕ್‌ಡಿಪೋ ಲೈನಬಜಾರ, ಧಾರವಾಡ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:— ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.,

ಸಂಪುಟ ೭೮ ವರ್ಷ ೩ ||| ನವೆಂಬರ–ಡಿಶಂಬರ ೧೯೩೧ ||| ಸಂಚಿಕೆ ೮–೯

ಸ್ಫುಟ ವಿಚಾರಗಳು

ಸದ್ಯಕ್ಕೆ ನಮ್ಮಲ್ಲಿಯೂ ನಮ್ಮ ನೆರೆಯಲ್ಲಿಯೂ ನಡೆದಿರುವ ಶಿಕ್ಷಣವಿಷಯಕ ಚಲನವಲನಗಳನ್ನು ಕುರಿತು ಪ್ರಾಥಮಿಕ ಶಿಕ್ಷಕರು ವಿಚಾರಿಸತಕ್ಕದ್ದಾಗಿದೆ. ಉತ್ತರ ಕರ್ನಾಟಕಕ್ಕೆ ಶಿಕ್ಷಣಕೇಂದ್ರವಾಗಿರುವ ಧಾರವಾಡದಲ್ಲಿ ಶಿಕ್ಷಕ ಶಿಕ್ಷಿಕೆಯರಿಗಾಗಿ ಈ ಊರ ಸ್ಕೂಲಬೋರ್ಡದ ಚೇರಮನ್ನರು ವ್ಯಾಖ್ಯಾನ ಮಾಲೆಯನ್ನು ಏರ್ಪಡಿಸಿ ಹೆಸರಾದ ಕನ್ನಡ ವಿದ್ವಾಂಸರಿಂದ ಜಿಜ್ಞಾಸುಗಳಾದ ಶಿಕ್ಷಕರಿಗೆ ಉಪಯುಕ್ತವೆನಿಸುವ ವಿಷಯುಗಳ ಬಗ್ಗೆ ಉಪನ್ಯಾಸಗಳನ್ನು ಹೇಳಿಸುತ್ತಿರುವರು. ಧಾರವಾಡ ಟ್ರೇನಿಂಗ ಸ್ಕೂಲವಲ್ಲಿ ದ. ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರವರ ಸೂಚನೆಯು ಮೇರೆಗೆ ಈ ಊರಲ್ಲಿರುವ ಎರಡೂ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳಿಗೂ ಮ್ಯುನಸಿಪಲ್ ಶಿಕ್ಷಕರಿಗೂ ತಮ್ಮ ಶಾಲೆಯ ದಿನದ ಕೆಲಸದಲ್ಲಿ ಉಪಯೋಗ ಬೀಳಲೆಂದು ಹೆಸರಾದ ಶಿಕ್ಷಕರಿಂದಲೂ ಶಿಕ್ಷಣ ಶಾಸ್ತ್ರಜ್ಞರಿಂದಲೂ ಮಾದರಿಯ ಪಾಠಗಳನ್ನೂ ಶಿಕ್ಷಣ ವಿಷಯಕ ವ್ಯಾಖ್ಯಾನಗಳನ್ನೂ ಕೊಡಿಸಲು ಏರ್ಪಾಡಾಗಿದೆ. ಕಳೆದ ನಾಲ್ಕು ವಾರಗಳಲ್ಲಿ ಈ ಬಗ್ಗೆ ಇಲ್ಲಿ ನಡೆದ ಪಾಠ ಮೊದಲಾದವುಗಳ ಬಗ್ಗೆ ಇದೇ ಸಂಚಿಕೆಯಲ್ಲಿ ವಿಸ್ತರಿಸಿ ಹೇಳಿದೆ.

೨. ಕೆಲವು ದಿನಗಳ ಹಿಂದೆ, ಅಂದರೆ ದೀಪಾವಳಿಯ ಸೂಟಿಯಲ್ಲಿ ಬಿಜಾಪುರದಲ್ಲಿ ಕರ್ನಾಟಕದ ಶಿಕ್ಷಕರ ಸಂಘದ ಪರವಾಗಿ ಶಿಕ್ಷಣ ಸಪ್ತಾಹವು ಮೂರು ದಿನಗಳವರೆಗೆ ನಡೆಯಿತು. ಅಲ್ಲಿ ನಡೆದ ಕಾರ್ಯಕ್ರಮವನ್ನು ಕುರಿತು ಸಂಕ್ಷೇಪವಾದ ವೃತ್ತಾಂತವನ್ನು ಈ ಸಂಚಿಕೆಯಲ್ಲಿ ಪ್ರಾಥಮಿಕ ಶಿಕ್ಷಕರಿಗಾಗಿ ಕೊಟ್ಟಿರುವೆವು. ಈ ಸಂಸ್ಥೆಯು ಇನ್ನೂ ಶೈಶವಾವಸ್ಥೆಯಲ್ಲಿರುವದು. ಆದರೂ ಕಳೆದ ವರ್ಷದಲ್ಲಿ ಇದರ ಮುಖಾಂತರ

ವಾಗಿ ನಡೆದ ಶಿಕ್ಷಣದ ಚಲನವಲನಗಳನ್ನು ವಿಚಾರಿಸಿದರೆ, ಇದು ಕರ್ನಾಟಕದ ಶಿಕ್ಷಕರಿ ಗಾಗಿ ಮಹತ್ವದ ಕೆಲಸಗಳನ್ನು ಮಾಡಬಹುದೆಂಬದು ಸ್ಪಷ್ಟವಾಗುವದು. ಈ ಸಂಸ್ಥೆಯು ವರುಷದ ವರದಿಯ ಮುಖ್ಯಾಂಶಗಳನ್ನು ಮುಂದಿನ ಸಂಚಿಕೆಯಲ್ಲಿ ಮುದ್ರಿಸುವೆವು. ಈ ಸಂಸ್ಥೆಯ ಮೆಂಬರರು ಸದ್ಯಕ್ಕೆ ಮಾಧ್ಯಮಿಕ ಶಿಕ್ಷಕರೇ ಬಹುತರವಾಗಿರುವರು. ಆದರೂ ಅವರು ಏರ್ಪಡಿಸುತ್ತಿರುವ ಶಿಕ್ಷಣ ಸಪ್ತಾಹಗಳಲ್ಲಿ ಮೊದಲನೆಯ ದಿನವನ್ನು ಪ್ರಾಥಮಿಕ ಶಿಕ್ಷಣದ ಚರ್ಚೆಗೂ ಮಾದರಿಯ ಪಾಠಗಳಿಗೂ ಕಾಯ್ದಿಡುತ್ತಿರುವದು ಅಭಿನಂದನೀಯ ವಾದ ಸಂಗತಿಯು.

೩. ಈ ತಿಂಗಳ ಕೊನೆಗೆ ನಾತಾಳಿಯ ಸೂಟಿಯಲ್ಲಿ ಬೆಂಗಳೂರಲ್ಲಿ ಅಖಿಲ ಹಿಂದುಸ್ಥಾನದ ಶಿಕ್ಷಕರ ಸಂಘದ ಸಮ್ಮೇಲನವು ಮೂರು ದಿನಗಳ ವರೆಗೆ ನೆರೆಯು ವದು ಗೊತ್ತಾಗಿರುವದು. ಈ ಸಂಸ್ಥೆಯ ಉದ್ದೇಶಗಳನ್ನೂ ಇದು ಜರುಗಿಸುತ್ತಿರುವ ಮಹತ್ವದ ಕೆಲಸವನ್ನೂ ಕುರಿತು ಯಥಾವಕಾಶವಾಗಿ ಪ್ರಾಥಮಿಕ ಶಿಕ್ಷಕರಿಗೆ ಪರಿಚಯ ಮಾಡಿ ಕೊಡುವೆವು. ಈ ಸಂಸ್ಥೆಯ ವಾರ್ಷಿಕ ಸಮ್ಮೇಲನಗಳಲ್ಲಿ ನಮ್ಮ ಭರತಖಂಡದ ಬೇರೆ ಬೇರೆ ಭಾಗಗಳಲ್ಲಿ ಹೆಸರಾದ ಶಿಕ್ಷಕರೂ ವಿದ್ವಾಂಸರೂ ಕಲೆತು ಹಿಂದುಸ್ಥಾನದ ಶಿಕ್ಷಣದ ಬಗ್ಗೆ ಚರ್ಚಿಸಿ ಕೆಲವು ಗೊತ್ತುವಳಿಗಳನ್ನು ಮಾಡುವದುಂಟು.

೪. ಇದಲ್ಲದೆ ಮಹಾರಾಷ್ಟ್ರದಲ್ಲಿಯೂ ಶಿಕ್ಷಣ ವಿಷಯಕ ಸಂಸ್ಥೆಗಳ ಚಲನ ವಲನವು ವಿಶೇಷವಾಗಿ ನಡೆಯುತ್ತಿರುವದು. ಬಡೋದೆಯ ಸಂಸ್ಥಾನದಲ್ಲಿ ಇದೇ ತಿಂಗಳ ಕೊನೆಯಲ್ಲಿ ಎರಡನೆಯ ಭೂಗೋಲ ವಿಷಯಕ ಸಮ್ಮೇಲನವು ನಡೆಯುವದಿರುವದು. ಈ ಕಾರ್ಯವು ಎರಡು ದಿನಗಳವರೆಗೆ ಜರುಗುವದು. ಕೇವಲ ಭೂಗೋಲ ವಿಷಯಕ್ಕೆ ಸಂಬಂಧಿಸಿದ ನಿಬಂಧಗಳು, ವ್ಯಾಖ್ಯಾನಗಳು, ಮಾದರಿಯ ಪಾಠಗಳು ಹಾಗು ಅವುಗಳ ಬಗ್ಗೆ ಚರ್ಚೆಗಳು ನಡೆಯುವವು. ಇದರಲ್ಲಿ ನಡೆಯತಕ್ಕ ವಿಷಯುಗಳಿಂದ ಈ ಸಮ್ಮೇ ಲನದ ವಿಶಿಷ್ಟತೆಯು ವಾಚಕರಿಗೆ ಗೊತ್ತಾಗುವದರಿಂದ ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಡುವೆವು.

ನಿಬಂಧಗಳು—

ಅ. ಭೂಗೋಲ ವಿಷಯದ ಬಗ್ಗೆ ಹೊಸ ಇಯತ್ತಾಪತ್ರಿಕೆಯನ್ನು ರಚಿಸುವ ದನ್ನು ಕುರಿತು ಕೆಲವು ಸೂಚನೆಗಳು.

ಬ. ಭೂಗೋಲ ಶಿಕ್ಷಣ—ಹ್ಯಾಗಿರುವದು, ಹ್ಯಾಗಾಗಬಹುದು.

ಕ. ಭೂಗೋಲದ ಧ್ಯೇಯ.

ಡ. ಭೂಗೋಲ ಶಿಕ್ಷಣದಲ್ಲಿ ಪ್ರವಾಸದ ಸ್ಥಾನವು.

ಸ್ಫುಟವಿಚಾರಗಳು

ಮಾಜಿಕ್‌ಲ್ಯಾಂಟರ್ನದ ವ್ಯಾಖ್ಯಾನ—ಕಾಶ್ಮೀರವೂ ಸ್ವಿಝರಲಂಡವೂ

ಸಿನಿಮಾದ ಸಹಾಯದಿಂದ ವ್ಯಾಖ್ಯಾನ—

ಮಾದರಿಯ ಪಾಠಗಳು — ಭೂಗೋಲಕ್ಕೆ ಸಂಬಂಧಿಸಿದವು.

೫. ಶಿಕ್ಷಣ ಪ್ರಪಂಚದಲ್ಲಿ ಈ ಮೇರೆಗೆ ಶುಭಸೂಚಕವಾದ ಚಟುವಟಿಕೆಯು ನಡೆದಿರುವದು. ಆದರೆ ಇದರಲ್ಲಿ ಪ್ರಾಥಮಿಕ ಶಿಕ್ಷಣದ ಹಾಗು ಶಿಕ್ಷಕರ ಕಾರ್ಯ ಭಾಗವು ಸಾಕಷ್ಟು ಇಲ್ಲವೆಂಬದನ್ನು ಹೇಳಲು ಖೇದವೆನಿಸುತ್ತದೆ. ಪ್ರಾಥಮಿಕ ಶಿಕ್ಷಣವು ಮಿಕ್ಕ ಎಲ್ಲ ಬಗೆಯ ಶಿಕ್ಷಣದ ತಳಹದಿಯಾಗುವದರಿಂದಲೂ ತತ್ಕಾರಣ ಈ ಭಾರವನ್ನುವಹಿಸಿದ ಶಿಕ್ಷಕರಮೇಲೆ ಜನಾಂಗದ ಏಳಿಗೆಯ ದೃಷ್ಟಿಯಿಂದ ಮಹತ್ವದ ಜವಾಬುದಾರಿಯು ಇರುವದರಿಂದಲೂ ಪ್ರಾ: ಶಿಕ್ಷಕರಾದರೂ ಇತರ ಶಿಕ್ಷಕರಂತೆ ಮುಂದಡಿಯಿಡುವ ಆಲೋಚನೆಯನ್ನು ಮಾಡತಕ್ಕದ್ದೆಂದೂ ಈ ತಮ್ಮ ಕೆಲಸದಲ್ಲಿ ಮಾಧ್ಯಮಿಕ ಶಿಕ್ಷಕರು ತಮಗೆ ದಾರಿ ತೋರಿಸುವ ವರೆಗೆ ಸುಮ್ಮನೆ ಕೂಡುವದು ಅಯುಕ್ತವೆಂದೂ ನಮ್ಮ ಅಭಿಪ್ರಾಯವು.

೬. ಬಿಜಾಪುರದಲ್ಲಿ ನಡೆದ ಕರ್ನಾಟಕ ಶಿಕ್ಷಕರ ಸಂಘದ ಶಿಕ್ಷಣ ಸಪ್ತಾಹದಲ್ಲಿ ಮೊದಲನೆಯ ದಿನವನ್ನು ಕೇವಲವಾಗಿ ಪ್ರಾಥಮಿಕ ಶಿಕ್ಷಣದ ಬಗ್ಗೆ ಕಾಯ್ದಿಟ್ಟದ್ದು ಹಲವು ದೃಷ್ಟಿಗಳಿಂದ ಹಿತಕರವು. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಾಥಮಿಕ, ಮಾಧ್ಯಮಿಕ, ಉಚ್ಚ ಎಂಬ ಮೂರುತರಗತಿಗಳನ್ನು ಮಾಡುವದುಂಟು. ಆದರೆ ಇವು ಒಂದರಿಂದೊಂದು ಭಿನ್ನವಾದವೆಂಬ ಕಲ್ಪನೆಯು ತಪ್ಪಾದದ್ದು. ಇದರಿಂದ ಕಾಲೇಜದ ಪ್ರೊಫೆಸರರು ತಾವು ಶಿಕ್ಷಣದ ಕೆಲಸದಲ್ಲಿ ತೊಡಗಿದ ಇತರ ಶಿಕ್ಷಕರಿಗಿಂತ ಬಹಳ ಹೆಚ್ಚಿನವರೆಂದೂ, ಮಾಧ್ಯಮಿಕ ಶಿಕ್ಷಕರು ತಾವು ಪ್ರಾಥಮಿಕ ಶಿಕ್ಷಕರಿಗಿಂತ ಹೆಚ್ಚಿನವರೆಂದೂ ಕಲ್ಪನೆಯಾಗಿದೆ. ಇದು ತೀರ ತಪ್ಪು ತಿಳುವಳಿಕೆಯು. ಹೆಚ್ಚಿನ ತರಗತಿಗಳ ವಿದ್ಯಾರ್ಥಿಗಳಿಗೆ ಪಾಠ ಹೇಳಲಿಕ್ಕೆ ಹೆಚ್ಚೆಚ್ಚು ವಿದ್ವತ್ತೆಯು ಬೇಕೆಂಬದು ನಿಜವು. ಆದರೆ ಪ್ರತಿಯೊಂದು ತರಗತಿಯಲ್ಲಿ ಕಲಿಯುವ ವಿದ್ಯಾರ್ಥಿಯು, ವಯೋಮಾನಕ್ಕನುಸರಿಸಿ ದೊಡ್ಡವನಾಗುತ್ತ ಬುದ್ಧಿ ವಿಕಾಸವನ್ನು ಹೊಂದುತ್ತ ಹೋದರೂ ಮೊದಲಿನಿಂದ ಕೊನೆಯವರೆಗೆ ಒಬ್ಬನೇ ವ್ಯಕ್ತಿಯು ಇರುವನೆಂಬದನ್ನು ಲಕ್ಷ್ಯದಲ್ಲಿಟ್ಟರೆ ಆಯಾ ಸ್ಥಿತಿಗಳಲ್ಲಿ ಅವನಿಗೆ ತಕ್ಕ ಪರಿಸ್ಥಿತಿಯನ್ನುಂಟು ಮಾಡಿಕೊಟ್ಟು ಅವನ ವಿಕಾಸಕ್ಕೆ ತಕ್ಕಂತೆ ನೆರವಾಗುವ ಪ್ರತಿಯೊಬ್ಬ ಶಿಕ್ಷಕನೂ ಸಮಾನವಾದ ಮರ್ಯಾದೆಗೆ ಅರ್ಹನೆಂಬದು ಸ್ಪಷ್ಟವಾಗುವದು. ಇದು ಹಾಗಿರಲಿ, ಹೀಗೆ ಶಿಕ್ಷಕರಲ್ಲಿ ಭೇದಭಾವವು ಹುಟ್ಟಿದ್ದರಿಂದ ಶಿಕ್ಷಣಕ್ಕೆ ಮಾತ್ರ ಒಟ್ಟಿನಮೇಲೆ ಹಾನಿಯಾಗಿರುವದೆಂಬದು ನಿರ್ವಿವಾದವಾದದ್ದು. ನಿಜವಾಗಿ ಕಾಲೇಜದ ಪ್ರೊಫೆಸರರೂ

ಮಾಧ್ಯಮಿಕ ಸಾಲೆಗಳಲ್ಲಿ ಕೆಲಸಮಾಡುವ ಪದವೀಧರರೂ ಪ್ರಾಥಮಿಕ ಶಿಕ್ಷಕನ ಕೆಲಸದಲ್ಲಿ ಮನಸು ಹಾಕಿ ತಮ್ಮ ಕೈಲಾದಮಟ್ಟಿಗೆ ಆತನಿಗೆ ನೆರವಾಗಲಿಕ್ಕೆ ಯತ್ನಮಾಡಬೇಕು. ಈ ಬಗೆಯ ಪ್ರಯತ್ನಗಳು ಈ ವರೆಗೆ ಆಗಿಲ್ಲ; ಆದ್ದರಿಂದಲೇ ನಮ್ಮಲ್ಲಿ ಪ್ರತಿಯೊಂದು ದರ್ಜೆಯ ಶಿಕ್ಷಣವು ಸಮಾಧಾನಕರವಾದ ಸ್ಥಿತಿಯಲ್ಲಿಲ್ಲ. ಇದಕ್ಕಾಗಿಯೇ ನಾವು ಕರ್ನಾಟಕ ಶಿಕ್ಷಕರ ಸಂಘದವರು ಏರ್ಪಡಿಸುವ ಸಪ್ತಾಹಗಳಲ್ಲಿ ಮೊದಲನೆಯ ದಿವಸವನ್ನು ಪ್ರಾಥಮಿಕ ಶಿಕ್ಷಣದ ವಿಷಯಕ್ಕಾಗಿ ಕಾಯ್ದಿಡುವ ಬಗ್ಗೆ ಅವರನ್ನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

೭. ನಮ್ಮ ಸಮ್ಮೇಲನಗಳಲ್ಲಿ ಪಾಠಗಳಿಗಿಂತ ನಿಬಂಧಗಳೂ ವ್ಯಾಖ್ಯಾನಗಳೂ ಹೆಚ್ಚಿಗೆ ನಡೆಯುವ ಸಾಂಪ್ರದಾಯವಿರುವದು. ಮಾದರಿಯ ಪಾಠಗಳ ಸಂಖ್ಯೆಯು ಬಹಳ ಕಡಿಮೆ ಇರುವದುಂಟು. ಸಮ್ಮೇಲನಗಳಿಗೆ ಹೋಗುವ ಶಿಕ್ಷಕನಿಗೆ ತನ್ನ ದಿನದ ಕೆಲಸದ ಬಗ್ಗೆ ಹೆಚ್ಚು ಮಾಹಿತಿಯಾಗುವದು ಅತ್ಯವಶ್ಯವಾದದ್ದು; ಪ್ರಾಥಮಿಕ ಶಿಕ್ಷಕರ ಸಾಮಾನ್ಯ ಶಿಕ್ಷಣವು ಸಾಕಷ್ಟು ಮುಂದುವರಿದಿರುವದಿಲ್ಲ. ಆದ್ದರಿಂದ ತನ್ನ ಕೆಲಸಕ್ಕೆ ಅವಶ್ಯವಾದ ಸಾಮಾನ್ಯಜ್ಞಾನವೂ ಆತನಿಗೆ ಬೇಕು. ಆದರೆ ಇದನ್ನು ದೊರಕಿಸುವದು ಸಮ್ಮೇಲನಗಳಲ್ಲಿ ಅಲ್ಲ. ಸದ್ಯಕ್ಕೆ ಮೇಲ್ತರದ ಮಾಸಪತ್ರಿಕೆಗಳೂ ವರ್ತಮಾನಪತ್ರಗಳೂ ಸಾಮಾನ್ಯ ಜ್ಞಾನವಾಗುವಂಥ ಒಂದೆರಡು ವಿಷಯಗಳನ್ನು ಪ್ರತಿ ಸಂಚಿಕೆಯಲ್ಲಿ ಕೊಡುವವು. ಸಮ್ಮೇಲನಗಳು ಯಶಸ್ವಿಯಾಗಿ ದೂರದಿಂದ ಬಂದ ಶಿಕ್ಷಕರಿಗೆ ಅವುಗಳಿಂದ ಲಾಭವಾಗಬೇಕಾದರೆ ಶಿಕ್ಷಕರಿಗೆ ತಮ್ಮ ದಿನದ ಕೆಲಸದಲ್ಲಿ ಬರುವ ತೊಂದರೆಗಳ ಪರಿಹಾರವು ಅಲ್ಲಿ ಆಗಬೇಕು; ಮೇಲಾದ ಪದ್ಧತಿಗಳ ತಾತ್ವಿಕ ಜ್ಞಾನವಷ್ಟೇ ಅಲ್ಲ; ಅವನ್ನು ಪ್ರತ್ಯಕ್ಷವಾಗಿ ಪಾಠ ಕಲಿಸುವದರಲ್ಲಿ ನುರಿತ ಶಿಕ್ಷಕರು ಹ್ಯಾಗೆ ಉಪಯೋಗಿಸುವರೆಂಬ ಬಗ್ಗೆ ಮನಮುಟ್ಟಿ ನೋಡಲಿಕ್ಕೆ ಅನುವು ದೊರೆಯಬೇಕು. ಆಗ ಅನ್ಯರಿಗೆ ಬರುವ ಸಂಶಯಗಳನ್ನು ಚರ್ಚಿಸಿ ದೂರಮಾಡಿಕೊಳ್ಳಲಿಕ್ಕೆ ಸ್ವಾತಂತ್ರ್ಯವಿರಬೇಕು. ಇಂಥ ಸಮ್ಮೇಲನಗಳು ದೊಡ್ಡ ಪ್ರಮಾಣದಿಂದ ನೆರೆದು ಯಶಸ್ವಿಯಾಗಬೇಕಾದರೆ ತಮ್ಮ ಅನುಭವಗಳನ್ನು ನುರಿತಶಿಕ್ಷಕರ ಟೀಕೆಯ ಒರೆಗಲ್ಲಿಗೆ ಹಚ್ಚಿನೋಡಿ ಬೆಲೆ ಕಟ್ಟಿರೆಂದು ಧೈರ್ಯದಿಂದ ಅವರ ಮುಂದಿಡುವ ಶಿಕ್ಷಕರು ಬೇಕು.

೮. ಮನಗೊಟ್ಟು ದುಡಿದು ಮುಂದೆ ಬಂದು ಈ ಕೆಲಸಕ್ಕೆ ಕೈಹಾಕಿದರೆ ಪ್ರಾಥಮಿಕ ಶಿಕ್ಷಕರು ಮಾಧ್ಯಮಿಕ ಶಿಕ್ಷಕರ ಮನ್ನಣೆಗೆ ಪಾತ್ರರಾಗುವರೆಂದೂ ಇವರಿಂದ ಕಲಿಯತಕ್ಕ ಸಂಗತಿಗಳು ಎಷ್ಟೋ ಇರುವವೆಂದು ಅವರಿಗೆ ಮನವರಿಕೆಯಾಗುವದೆಂದೂ ನಮ್ಮ ಅಭಿಪ್ರಾಯವು. ಇಲ್ಲಿಯವರೆಗೆ ಪ್ರಾ. ಶಿಕ್ಷಕರು ವಿಶೇಷವಾಗಿ ಪರಿಸ್ಥಿತಿಯ ಮೂಲಕ ಹಿಂದುಳಿದಿದ್ದರು. ಆದರೆ ಈಗ ನಾಲ್ಕಾರು ವರುಷಗಳಲ್ಲಿ ಬಹಳ ಅಂತರ

ವುಂಟಾಗಿದೆ. ಜನಾಂಗದಲ್ಲಿ ದೇಶಾಭಿಮಾನವೂ ಅದರೊಡನೆ ಆತ್ಮವಿಶ್ವಾಸವೂ ಹೆಚ್ಚುತ್ತಲಿವೆ. ಮನಮುಟ್ಟಿ ದುಡಿದುದಲ್ಲದೆ ಫಲವು ದೊರೆಯದೆಂಬುದು ಅನುಭವಕ್ಕೆ ಬಂದಿದೆ. ಪ್ರತಿಯೊಂದು ಉದ್ಯೋಗದವರಿಗೆ ಮುಂದುವರಿಯುವ ಉತ್ಸಾಹವು ತುಂಬಹತ್ತಿದೆ. ಈ ಶುಭ ಸಮಯದಲ್ಲಿ ಪ್ರಾಥಮಿಕ ಶಿಕ್ಷಕರು ಸುಮ್ಮನೆ ಕೂಡದೆ ವಿಚಾರ ವಿನಿಮಯದಿಂದ ತಮ್ಮ ಕಾರ್ಯಕ್ಷೇತ್ರವನ್ನು ನಿಷ್ಕರ್ಷಿಸಿ ಕೆಲಸಕ್ಕೆ ಮೊದಲಿಡುವರೆಂದು ನಂಬಿದ್ದೇವೆ.

೯. ಬಡೋದೆಯ ಭೂಗೋಲ ವಿಷಯಕ ಸಮ್ಮೇಲನದ ಮಹತ್ವದ ಬಗ್ಗೆ ಒಂದೆರಡು ಮಾತು ಹೇಳಬೇಕಾಗಿದೆ. ಸಮ್ಮೇಲನಗಳಲ್ಲಿ ಇಲ್ಲವೆ ಶಿಕ್ಷಣ ಸಪ್ತಾಹಗಳಲ್ಲಿ ಅನೇಕ ವಿಷಯಗಳನ್ನು ಇಟ್ಟುಕೊಂಡು ಚರ್ಚೆ ಮಾಡುವದಕ್ಕಿಂತ ಒಂದೊಂದು ವಿಷಯದ ಬಗ್ಗೆ ನಮ್ಮ ವಿಚಾರಗಳನ್ನು ಸಭೆಯ ಮುಂದಿಟ್ಟು ಅದೇ ವಿಷಯದ ಬಗ್ಗೆ ವಿಶೇಷ ಚರ್ಚೆಯಾದರೆ ನಿಜವಾಗಿ ಉಪಯುಕ್ತವಾದ ಮಾಹಿತಿಯಾಗುವದೆಂದು ನಮ್ಮ ಅಭಿಪ್ರಾಯವು. ಪ್ರಾಥಮಿಕ ಶಿಕ್ಷಣದಲ್ಲಂತೂ ಇಂಥ ವಿಶಿಷ್ಟ ವಿಷಯಕ ಚರ್ಚೆಯಾಗುವದು ಬಹಳ ಮಹತ್ವವಾದದ್ದು. ಅಂದರೆ ಆ ವಿಷಯದಲ್ಲಿ ನುರಿತವರೂ ಅನುಭವವುಳ್ಳವರೂ ಒಟ್ಟಾಗಿ ಕಲೆತು ಹೆಚ್ಚು ಆಸ್ಥೆಯಿಂದಲೂ ಅನೇಕ ದೃಷ್ಟಿಕೋನಗಳಿಂದಲೂ ಅದರ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡು ಲಾಭಮಾಡಿಕೊಳ್ಳಬಹುದು. ಸಮ್ಮೇಲನಗಳಲ್ಲಿ ಸ್ತ್ರೀ ಶಿಕ್ಷಣದ ಅವಶ್ಯಕತೆ, ಗಣಿತ ವಿಷಯದ ಮಹತ್ವ, ಶಿಕ್ಷಕನ ಕರ್ತವ್ಯಗಳು ಎಂಬ ಸಾಮಾನ್ಯ ವಿಷಯಗಳಮೇಲೆ ವಿಧವಿಧವಾದ ಪ್ರಬಂಧಗಳನ್ನು ಬರೆದು ಓದುವದಕ್ಕಿಂತ ಶಾಲೆಯಲ್ಲಿ ಕಲಿಸುವ ಒಂದು ವಿಷಯವನ್ನು ಉದ್ದಿಶ್ಯವಾಗಿಟ್ಟುಕೊಂಡು ಆರಂಭದಿಂದ ಮೇಲಿನ ಇಯತ್ತೆಗಳವರೆಗೆ ಅದನ್ನು ಹ್ಯಾಗೆ ವಿಭಾಗಮಾಡಿಕೊಂಡು ಕಲಿಸತಕ್ಕದ್ದು; ಬೇರೆ ಬೇರೆ ತರಗತಿಗಳಲ್ಲಿ ಆ ವಿಷಯದಲ್ಲಿ ಯಾವ ತೊಂದರೆಗಳುಂಟಾಗುತ್ತವೆ, ಅವನ್ನು ಹ್ಯಾಗೆ ದೂರಮಾಡಿಕೊಳ್ಳಬೇಕು ಮೊದಲಾದ ಬಗ್ಗೆ ಪ್ರಯೋಗ ಸಹಿತವಾದ ಚರ್ಚೆ ಮಾಡುವದರಿಂದ ಬಹಳ ಉಪಯೋಗವಾಗುವದೆಂಬದರಲ್ಲಿ ಸಂದೇಹವಿಲ್ಲ.

೧೦. ಈ ಸಂಚಿಕೆಯಿಂದ ಪ್ರಾಥಮಿಕ ಶಿಕ್ಷಣವನ್ನು ನಡೆಸುವ ಭಾರವು ನಮ್ಮ ಮೇಲೆ ಬಿದ್ದಿದೆ. ಇದನ್ನು ವಹಿಸಲಿಕ್ಕೆ ಪ್ರಾ. ಶಿಕ್ಷಕರ ಸಹಾಯವೂ ಸಹಾನುಭೂತಿಯೂ ಅತ್ಯವಶ್ಯವಾದವು. ಮಾಧ್ಯಮಿಕ ಶಿಕ್ಷಕರ ನೆರವೂ ಬೇಕೇ ಬೇಕು. ನಮ್ಮ ಉತ್ತರ ಕರ್ನಾಟಕದ ಪ್ರಾಥಮಿಕಶಿಕ್ಷಣಪ್ರಪಂಚವನ್ನು ವ್ಯವಸ್ಥೆಗೊಳಿಸುತ್ತಿರುವ ಸ್ಕೂಲ ಬೋರ್ಡುಗಳ ಚಾಲಕರ ಸಹಾನುಭೂತಿಯೂ ಸಹಕಾರಿತ್ವವೂ ಮುಖ್ಯವಾದವು. ಇವರೆಲ್ಲರು ನಮ್ಮ ಕೆಲಸದಲ್ಲಿ ನಮಗೆ ಮಮತೆಯಿಂದ ನೆರವಾಗಬೇಕೆಂದು ನಮ್ಮ ಆಗ್ರಹದ ವಿನಂತಿಯು.

ನಿರೀಕ್ಷಣ ಪಾಠಗಳು

ಲೇ:-ರಾವಸಾಹೇಬ ಎಸ್. ಎಲ್. ಉಗ್ರಾಣಕರ ಬಿ. ಎ. ರಿಟಾಯರ್ಡ್ ಎಜ್ಯುಕೇಶನಲ್ ಇನ್ಸಪೆಕ್ಟರ ದ. ಭಾ.

ಪ್ರಾಥಮಿಕ ಶಿಕ್ಷಕರಿಗಾಗಿ ಬರೆದ ಸೂಚನೆಗಳು

ಚಿಕ್ಕ ಮಕ್ಕಳ ಶಿಕ್ಷಣಕ್ರಮದಲ್ಲಿ ನಿರೀಕ್ಷಣ ವಿಷಯಕ್ಕೇ ಹೆಚ್ಚು ಮಹತ್ವವು ಇರುವದು; ಯಾಕೆಂದರೆ ಅವರಿಗೆ ಯಾವ ಅನುಭವವೂ ಇರುವದಿಲ್ಲ. ಯಾವದೊಂದು ಸೃಷ್ಟಪದಾರ್ಥವೇ ಇರಲಿ, ಐತಿಹಾಸಿಕ ಸ್ಮಾರಕ ಸಂಗತಿಯೇ ಇರಲಿ, ಅದರ ವಿಷಯವಾಗಿ ಪರಿಚಯ ಮಾಡಿಕೊಳ್ಳಲಿಕ್ಕೆ ನಿರೀಕ್ಷಣವೇ ಮುಖ್ಯ ಸಾಧನವಾಗಿರುವದು. ಯಾವದೊಂದು ವಿಷಯದ ಜ್ಞಾನವನ್ನು ಯಾವ ಕ್ರಮದಿಂದ ಹ್ಯಾಗೆ ಪೂರ್ಣವಾಗಿ ಮಾಡಿಕೊಳ್ಳಬೇಕು ? ಶಿಕ್ಷಣಕ್ರಮದ ಮುಖಾಂತರವಾಗಿ ಇಂದ್ರಿಯಗಳ ಶಕ್ತಿಯನ್ನು ಹ್ಯಾಗೆ ಹೆಚ್ಚಿಸಬೇಕು ? ಎಂಬ ವಿಷಯಕ್ಕಾಗಿಯೇ ಬಾಲಕರ ನಿರೀಕ್ಷಣಪಾಠಗಳನ್ನು ಶಿಕ್ಷಣಕ್ರಮದಲ್ಲಿ ಸೇರಿಸಿದ್ದಾರೆ. ಹೀಗಿದ್ದರೂ ಪ್ರಾಥಮಿಕ ಶಿಕ್ಷಕರು ಈ ವಿಷಯದ ಬಗ್ಗೆ ಸಾಕಷ್ಟು ಲಕ್ಷ ಪೂರೈಸಿದಂತೆ ಕಂಡುಬರುವದಿಲ್ಲ, ಇಷ್ಟೇ ಅಲ್ಲ; ಈ ಪಾಠಗಳು ನಡೆದಾಗ ಹಾಗೂ ಹೀಗೂ ಶಿಕ್ಷಣವನ್ನು ಸಾಗಿಸಿ ಕಾಲಕಳೆದು ಬಿಡುವರು. ಹೀಗಾಗಲಿಕ್ಕೆ ಶಿಕ್ಷಕರಿಗೆ ತದ್ವಿಷಯಕ ಶಿಕ್ಷಣದ ಸಾಂಗೋಪಾಂಗ ಜ್ಞಾನವಿರದಿರುವದೂ ಬಾಲಕರ ಪರೀಕ್ಷೆಯ ವಿಷಯಗಳಲ್ಲಿ ಈ ವಿಷಯಕ್ಕೆ ಮಹತ್ವವಿಲ್ಲದಿರುವದೂ ಕಾರಣಗಳಾಗಿರಬಹುದು. ಈ ಲೇಖಕರು ಒಮ್ಮೆ ವಿಜಾಪುರದ ಒಂದು ಪ್ರಾಥಮಿಕ ಶಾಲೆಗೆ ಹೋದಾಗ ವಿದ್ಯಾರ್ಥಿಗಳನ್ನು 'ಬೋಳ ಗುಮುಟದ' ವಿಷಯವಾಗಿ ಪ್ರಶ್ನೆ ಮಾಡಿದರು. ಆದರೆ ಒಬ್ಬರಿಂದಲೂ ಸಮರ್ಪಕವಾದ ಉತ್ತರವೇ ಹೊರಡಲಿಲ್ಲ. ಅವರಲ್ಲಿ ಎಷ್ಟೋ ಬಾಲಕರು ಬೋಳ ಗುಮುಟವನ್ನೇ ನೋಡಿದಂತೆ ಕಾಣಲಿಲ್ಲ. ಇದು ಒಳ್ಳೇ ಆಶ್ಚರ್ಯದ ಸಂಗತಿಯು !

ಒಮ್ಮೆ ಬೆಳಗಾವಿಯಲ್ಲಿಯೂ ಹೀಗೆಯೇ ಆಯಿತು. ಅಲ್ಲಿಯ ವಿದ್ಯಾರ್ಥಿಗಳಿಗೆ ಕಿಲ್ಲೆಯ ಇತಿಹಾಸದ ಜ್ಞಾನವಿರುವದು ಒತ್ತಟ್ಟಿಗಿರಲಿ; ಕಿಲ್ಲೆಯ ವಿಷಯವಾಗಿ ಸಹ ಏನೂ ಗೊತ್ತಿರಲಿಲ್ಲ. ಸ್ವಲ್ಪದರಲ್ಲಿ ಹೇಳುವದೆಂದರೆ, ಅವರು ಕಿಲ್ಲೆಯನ್ನು ನೋಡಿರಲಿಲ್ಲ. ಮತ್ತೊಮ್ಮೆ ಹಾಯಸ್ಕೂಲಿ(ಮಾಧ್ಯಮಿಕ ಶಾಲೆಯಲ್ಲಿ ಸಹ) ನಲ್ಲಿ ಒಂದು ವಿಚಿತ್ರ ಸಂಗತಿಯು ಒದಗಿತು. ಅದೇನಂದರೆ—ಅಲ್ಲಿ ಶಾಲೆಗೆ ಸಂಬಂಧಿಸಿದ ಚಿಕ್ಕ ತೋಟವನ್ನು ವಿದ್ಯಾರ್ಥಿಗಳೇ ನೀರೆರದು ಬೆಳೆಯಿಸಿದ್ದರೂ ಅಲ್ಲಿಯ ಸಸ್ಯಗಳ ಹೆಸರುಗಳು, ಆ ಸಸ್ಯಗಳ ಗುಣವಿಶೇಷ, ಉಪಯೋಗ ಇತ್ಯಾದಿ ಸಾಮಾನ್ಯ ಸಂಗತಿಗಳ ಜ್ಞಾನವು ಆ ವಿದ್ಯಾರ್ಥಿಗಳಿಗೆ ಆಗಿರಲಿಲ್ಲ. ವನಸ್ಪತಿಗಳ ನಿರೀಕ್ಷಣದಬಗ್ಗೆ ಎಷ್ಟು ಅಲಕ್ಷ್ಯವಾಗಿರುವದೆಂಬ

ದಕ್ಕೆ ಇದೊಂದೇ ಉದಾಹರಣೆ ಸಾಕು. ಇನ್ನು ಸಾಮಾನ್ಯವಾಗಿ ಸಾಲೆಗಳಲ್ಲಿ ಕಲಿಸುವ ಡ್ರಾಯಿಂಗ ಪಾಠದಲ್ಲಿ ನಿರೀಕ್ಷಣೆಯು ಎಷ್ಟರ ಮಟ್ಟಿಗೆ ನಡೆಯುವದೆಂಬದನ್ನು ನೋಡೋಣ! ಒಂದು ವರ್ಗಕ್ಕೆ ಬಕೆಟ್ಟಿನ ಚಿತ್ರವನ್ನು ತೆಗೆಯಲಿಕ್ಕೆ ಹೇಳಲು ಆ ವಿದ್ಯಾರ್ಥಿಗಳು ಬಕೆಟ್ಟಿನ ಹಿಡಿಕೆಯು ಎದ್ದು ನಿಂತಿರುವಂತೆ (ಏನೂ ಆಶ್ರಯವಿಲ್ಲದೆ) ಚಿತ್ರ ತೆಗೆದು ತೋರಿಸಿದರು. ಈ ಸಂಗತಿಯೂ ಹಾಯಸ್ಕೂಲದಲ್ಲಿಯೇ ಜರುಗಿತು! ಇದರಿಂದ ಶಿಕ್ಷಕರು ಶಿಕ್ಷಣದಲ್ಲಿ ನಿಜವಾದ ವಸ್ತುಗಳನ್ನು ಪ್ರತ್ಯಕ್ಷವಾಗಿ ಕಲಿಸುವದರಲ್ಲಿ ಎಷ್ಟು ಅಜಾಗರೂಕರಾಗಿರುವರೆಂದು ಒಡೆದು ಕಾಣುವಂತೆ ಇದೆ. ವಿದ್ಯಾರ್ಥಿಗಳನ್ನು ಹೊರಗೆ ಕರೆದುಕೊಂಡು ಹೋಗಿ ತೋರಿಸಿ, ಹೊರಗೆ ಕಾಣುವ ಸೃಷ್ಟಪದಾರ್ಥಗಳ ಪರಿಚಯದ ಚಟವನ್ನು ಹಚ್ಚದಿರುವದೇ ಇದಕ್ಕೆ ಕಾರಣವಾಗಿದೆ. ಮೇಲ್ವಿಚಾರಕರೂ ಸಹ ಈ ವಿಷಯದ ಶಿಕ್ಷಣದ ಅಜ್ಞಾನದ ನಿಂದೆಗೆ ಪಾತ್ರವಾಗಿದ್ದಾರೆ. ಅವರು ಇನಸ್ಪೆಕ್ಷನಿಗಾಗಲಿ ಪರೀಕ್ಷೆಗಾಗಲಿ ಹೋದಾಗ ಬರಿ ಗಣಿತ, ಭೂಗೋಲ ಇತ್ಯಾದಿ ವಿಷಯಗಳ ಒಂದೆರಡು ಪ್ರಶ್ನೆಗಳನ್ನು ಮಾಡಿ ಪರೀಕ್ಷೆ ಮುಗಿಸಿಬಿಡುವರು. ನಿರೀಕ್ಷಣಪಾಠ ಡ್ರಾಯಿಂಗ ಪಾಠಗಳನ್ನು ಮರೆತೇ ಬಿಡುವರು. ಶಿಕ್ಷಣಾಧಿಕಾರಿಗಳು ಮೇಲಿನ ವಿಷಯಗಳ ಬಗ್ಗೆ ಲಕ್ಷ್ಯ ತೆಗೆದುಕೊಳ್ಳುವದಲ್ಲದೆ ಯಾವಯಾವ ಪಾಠಗಳ ವಿಷಯವಾಗಿ ಎಂದೆಂದು ಕಲಿಸುವಿರಿ, ಎಂಬಬಗ್ಗೆ ಟಿಪ್ಪಣಿ ಕೊಡಿರೆಂದು ಶಿಕ್ಷಕರನ್ನು ಕೇಳಬೇಕು. ಮತ್ತು ಹಾಗೆ ಬರೆದಿಡಲಿಕ್ಕೆ ತಿಳಿಸಬೇಕು. ತಮ್ಮೆದುರಿಗೆ ಆ ವಿಷಯದ ಮಾದರಿಯ ಪಾಠವನ್ನು ಕೊಡಲಿಕ್ಕೆ ಹೇಳಬೇಕು. ಅಂದರೆ ಶಿಕ್ಷಕರ ಲಕ್ಷ್ಯವೂ ಬಾಲಕರ ಮನಸ್ಸೂ ಈ ವಿಷಯಗಳ ಕಡೆಗೆ ಎಳೆಯಲ್ಪಡುವವು. ಅಧಿಕಾರಿಗಳು ಸಹ ವರ್ಗಕ್ಕೆ ಈ ವಿಷಯದ ಮಾದರಿಯ ಪಾಠವನ್ನು ಕೊಟ್ಟು ತೋರಿಸಬೇಕು.

ನಾನು ಹೀಗೆ ಬರೆದದ್ದು ಶಿಕ್ಷಕರ ಇಲ್ಲವೆ ಅಧಿಕಾರಿಗಳ ಟೀಕೆ ಎಂದು ಯಾರೂ ತಿಳಿಯಬಾರದು. ಶಿಕ್ಷಣದ ಕುಂದುಕೊರತೆಗಳನ್ನು ತೋರಿಸಿ ಅವುಗಳ ನಿವಾರಣೆಯ ಬಗ್ಗೆ ಸೂಚನೆಮಾಡಿರುವೆನೆಂದು ತಿಳಿಯಬೇಕು. ಯಾಕೆಂದರೆ ಇದೇ ನನ್ನ ಉದ್ದೇಶವಿರುವದು. ವಿದ್ಯಾರ್ಥಿಗಳಿಗೆ ಸೃಷ್ಟಪದಾರ್ಥಗಳ ಮುಖಾಂತರವಾಗಿ ಜ್ಞಾನಮಾಡಿಕೊಟ್ಟು ಅವರ ಇಂದ್ರಿಯಗಳ ಶಕ್ತಿಯನ್ನು ಬೆಳೆಯಿಸಿ ನಿರೀಕ್ಷಣದ ಚಟವನ್ನು ಹಚ್ಚಿ ಇಂದ್ರಿಯಗಳಿಗೆ ತಕ್ಕ ಶಿಕ್ಷಣ ಕೊಡಬೇಕೆಂದು ನಮ್ಮ ಇಚ್ಛೆಯದೆ. ಆದದರಿಂದ ಶಿಕ್ಷಕರು ಬೇರೆ ವಿಧವಾಗಿ ತಿಳಿದುಕೊಳ್ಳದೆ ಈ ಸೂಚನೆಗಳ ಉಪಯೋಗಮಾಡಿಕೊಳ್ಳಬೇಕೆಂದು ಆಶಿಸುವೆನು.

ಬಾಲಕರು ತಮ್ಮ ಚಂಚಲಸ್ವಭಾವವನ್ನು ಬಿಟ್ಟುಬಿಡಬೇಕು. ಪದಾರ್ಥಗಳ ಕಡೆಗೆ ಸಂಪೂರ್ಣ ಲಕ್ಷಗೊಟ್ಟು ನೋಡುವ ಚಟವುಳ್ಳವರಾಗಬೇಕು. ತಕ್ಕ ಜ್ಞಾನ

ವನ್ನು ಗ್ರಹಿಸುವ ರೂಢಿಯು ಅವರಲ್ಲಿ ನೆಲೆಗೊಳ್ಳಬೇಕು. ಇವೇ ನಿರೀಕ್ಷಣಪಾಠಗಳ ಧ್ಯೇಯಗಳು. ಅಂದರೆ ಒಂದು ಪದಾರ್ಥದ ಪೂರ್ಣ ನಿರೀಕ್ಷಣೆಯೇ ನಿರೀಕ್ಷಣಪಾಠದ ಉದ್ದೇಶವು. ಇದು ವಿಜ್ಞಾನಶಾಸ್ತ್ರದ ಒಂದು ಪಾಠವಲ್ಲ. ಬಾಲಕರು ವಸ್ತುಗಳನ್ನು ನೋಡಿ, ಸಾಧ್ಯವಿದ್ದರೆ ಸ್ಪರ್ಶಿಸಿ, ಕೇಳಿ, ರುಚಿನೋಡಿ, ಈ ರೀತಿಗಳಿಂದ ಆದಷ್ಟು ಹೆಚ್ಚು ಇಂದ್ರಿಯಗಳ ಉಪಯೋಗಮಾಡಿಕೊಂಡು ಜ್ಞಾನಮಾಡಿಕೊಳ್ಳಬೇಕು; ಅಂದರೆ ಆ ಪದಾರ್ಥದ ಪ್ರತ್ಯಕ್ಷ ಅನುಭವವನ್ನು ತೆಗೆದುಕೊಳ್ಳಬೇಕು. ಈ ಪ್ರಕಾರದ ಅನುಭವವು ಪದಾರ್ಥಗಳನ್ನು ಲಕ್ಷಗೊಟ್ಟು ನೋಡಿದರೆ ಮಾತ್ರ ಉಂಟಾಗುವದು. ಪಾಠಕ್ಕೆ ಬೇಕಾಗುವ ಉಪಕರಣಗಳನ್ನು ಶಿಕ್ಷಕನು ತಾನಾಗಿ ದೊರಕಿಸಿಕೊಳ್ಳಬೇಕು, ಇಲ್ಲವೆ ಹುಡುಗರಿಂದ ದೊರಕಿಸಬೇಕು. ಶಿಕ್ಷಕನಾಗಲಿ ವಿದ್ಯಾರ್ಥಿಗಳಾಗಲಿ ತಮ್ಮ ಕಣ್ಣೆದುರಿಗಿರುವ ವಸ್ತುವಿನ ವಿಷಯವಾಗಿಯೇ ಮಾತಾಡಬೇಕು. ಪ್ರತಿ ವಿದ್ಯಾರ್ಥಿಗೂ ನಿರೀಕ್ಷಣೆಗಾಗಿ ಪ್ರತ್ಯೇಕವಾಗಿ ಒಂದೇ ಬಗೆಯ ಬೇರೆ ಬೇರೆ ವಸ್ತುಗಳಿದ್ದರೆ ಅತ್ಯಂತ ಶ್ರೇಷ್ಠವು. ಪ್ರತಿಯೊಬ್ಬ ಹುಡುಗನಿಗೆ ತನ್ನ ಪುಸ್ತಕ ಇಲ್ಲವೆ ಪೆನ್ಸಿಲವು ಅತ್ಯವಶ್ಯ ವಷ್ಟೇ. ಅದರಂತೆ ನಿರೀಕ್ಷಣಮಾಡಬೇಕಾದ ಪದಾರ್ಥವೂ ಅತ್ಯವಶ್ಯವು. ಆದರೆ ಹೀಗೆ ಪ್ರತಿಯೊಬ್ಬನಲ್ಲಿ ಆ ವಸ್ತುವು ಇರಬೇಕೆಂದು ನಿರ್ಬಂಧಿಸಿದರೆ ಬಹಳ ವಸ್ತುಗಳನ್ನು ನಿರೀಕ್ಷಿಸಲಿಕ್ಕೆ ಆಗಲಾರದೆಂಬದು ಸ್ಪಷ್ಟವು. ಪದಾರ್ಥಗಳನ್ನು ಶಾಲೆಯ ಒಳಗೆ ತರಲು ಸಾಧ್ಯವಿಲ್ಲದಿದ್ದರೆ ಶಿಕ್ಷಕನೂ ಬಾಲಕರೂ ಆ ಪದಾರ್ಥಗಳಿದ್ದ ಎಡೆಗೇ ಹೋಗಬೇಕು. ಉದಾ:— ಅಂಗಡಿ, ಕೆರೆಕಾಲುವೆ, ಗುಡ್ಡ, ತೋಟ, ವೃಕ್ಷ ಇತ್ಯಾದಿ.

ವಸ್ತುಗಳ ಮುಂದೆ ಬಾಲಕರನ್ನು ನಿಲ್ಲಿಸಿದರೆ ಅವರು ಸ್ವಾಭಾವಿಕವಾಗಿ ಅದರ ವಿಷಯವಾಗಿ ವಿಚಾರಮಾಡುವರು. ಹಾಗು ವಿಚಾರಮಾಡುವ ಕುತೂಹಲವುಳ್ಳವ ರಾಗುವರು. ಹಾಗು ಆ ವಸ್ತುವಿನ ವಿಷಯವಾಗಿ ಅವರ ಮನಸ್ಸಿನಲ್ಲಿ ಹೊಸ ಹೊಸ ವಿಚಾರತರಂಗಗಳು ಏಳಲಾರಂಭಿಸುವವು. ವಸ್ತುಗಳು ತಮ್ಮ ಸ್ವಾಭಾವಿಕ ಸ್ಥಳಗಳಲ್ಲಿ ಇದ್ದಷ್ಟು ಪಾಠಕ್ಕೆ ಉತ್ತಮವೆಂದು ತಿಳಿಯಬೇಕು. ಆದದರಿಂದಲೇ ವೃಕ್ಷದ ಪಾಠವು ಅದರ ಕೆಳಗೇ, ಪ್ರಾಣಿಗಳ ಪಾಠವು ಪ್ರಾಣಿಗಳ ಗುಂಪಿನಲ್ಲಿಯೇ, ಔದ್ಯೋಗಿಕ ಪಾಠವು ಉದ್ಯೋಗ ನಡೆದ ಸ್ಥಳದಲ್ಲಿಯೇ ನಡೆದರೆ ಸರ್ವೋತ್ತಮ. ಅನೇಕ ವೇಳೆಯಲ್ಲಿ, ಇದು ಸಾಧ್ಯವಾಗಲಿಕ್ಕಿಲ್ಲ. ಪಾಠಗಳು ಸ್ವಾಭಾವಿಕವಾಗಿಯೂ ನಿಜಾಂಶವನ್ನು ಗ್ರಹಿ ಸಲು ಅನುಕೂಲವಾಗಿಯೂ ಇರುವಂತೆ ಸಾಕಷ್ಟು ಪ್ರಯತ್ನವನ್ನು ಮಾಡಬೇಕು. ಶಾಲೆಯ ತೋಟದಲ್ಲಿ ಸಸ್ಯ ಪುಷ್ಪಾದಿಗಳನ್ನು ನೋಡಬಹುದು. ಅಥವಾ ಆ ಗಿಡಗಳು ಇರುವ ಕುಂಡಗಳನ್ನು ಸುಲಭವಾಗಿ ತರಿಸಿಕೊಳ್ಳಬಹುದು.

(ಅಪೂರ್ಣ)

ಕರ್ನಾಟಕ ಶಿಕ್ಷಣ ಸಮ್ಮೇಲನ

ಅಥವಾ

ಶಿಕ್ಷಣಸಪ್ತಾಹವು

ಲೇಖಕರು:—ಮಿ. ಗ. ಬಿ. ಜೋಶಿ—ಹಾಗು ಸಾತೇನಹಳ್ಳಿ.

ಪ್ರತಿ ವರುಷ ನಡೆದಂತೆ, ಈ ವರುಷವಾದರೂ ಶಿಕ್ಷಣ ಸಮ್ಮೇಲನ ಕಾರ್ಯವು ೨೬–೧೦–೧೯೩೭ರಿಂದ ಮೂರು ದಿವಸಗಳವರೆಗೆ ವಿಜಾಪೂರ ಗವ್ಹರ್ನಮೆಂಟ ಹಾಯಸ್ಕೂಲಿನಲ್ಲಿ ಒಳ್ಳೆಯ ಉತ್ಸಾಹದಿಂದಲೂ ಪರಿಪೂರ್ಣವಾಗಿಯೂ ನೆರವೇರಿತು. ಕಳೆದ ವರ್ಷಗಳಿಗಿಂತ ಈ ವರ್ಷ ಪ್ರಾಥಮಿಕ ಮಾಧ್ಯಮಿಕ ಶಿಕ್ಷಕರಿಬ್ಬರೂ ಒಂದೆಡೆಯಲ್ಲಿಯೇ ಸೇರಿ ಕಾರ್ಯಭಾಗ ತೆಗೆದುಕೊಂಡ ವಿಷಯವು ಹೆಚ್ಚಿಗೆ ವೈಶಿಷ್ಟ್ಯವನ್ನೂ ಅಭಿಮಾನವನ್ನೂ ವ್ಯಕ್ತಪಡಿಸುವಂಥದಾಗಿರುತ್ತದೆ. ಮೆ. ಎ. ಇ. ಸಾ॥ ರವರೂ ಬೇರೆ ಶಿಕ್ಷಣಶಾಸ್ತ್ರಜ್ಞರೂ ಇನ್ನುಳಿದ ಮಾಧ್ಯಮಿಕ ಶಿಕ್ಷಕರೂ ಪ್ರಾಥಮಿಕ ಶಿಕ್ಷಣದ ವಿಷಯವಾಗಿ ಹೆಚ್ಚು ಕಳಕಳಿ ತೋರಿಸಿದ್ದನ್ನೂ ಪ್ರಾಥಮಿಕ ಶಿಕ್ಷಣದ ಏಳಿಗೆಯ ವಿಷಯವಾಗಿ ಪ್ರಾ. ಶಿಕ್ಷಕರಿಗೆ ಕೊಟ್ಟ ಹುರುಪನ್ನೂ ವ್ಯಕ್ತಗೊಳಿಸಲಿಕ್ಕೆ ಪರಮಾನಂದವೆನಿಸುತ್ತದೆ

ಈ ಸಮ್ಮೇಲನಕ್ಕೆ ಬರುವದಕ್ಕಾಗಿ ಧಾರವಾಡ, ಬೆಳಗಾಂವ, ವಿಜಾಪೂರ, ಕಾರವಾರ ಮೊದಲಾದ ಪ್ರಾ. ಶಿ. ದ ಸ್ಕೂಲಬೋರ್ಡಗಳಿಗೆ ಚಾಲಕರು ಸೂಚಿಸಿದ್ದರು. ಅದಕ್ಕನುಸರಿಸಿ ವಿಜಾಪೂರ ಬೋರ್ಡಿನಿಂದ ಬಹಳ ಜನ ಶಿಕ್ಷಕರೂ ಮಿಕ್ಕ ಸ್ಥಳಗಳು ದೂರವಾದದರಿಂದ ಕೆಲ ಕೆಲವು ಜನ ಶಿಕ್ಷಕರೂ ಬಂದಿದ್ದರು. ಬಂದವರು, ಇಲ್ಲಿ ನಡೆದ ದೂರ ದೂರದ ಶ್ರೇಷ್ಠ ಶಿಕ್ಷಣಜ್ಞರ ಪಾಠಗಳನ್ನು ಪ್ರತ್ಯಕ್ಷ ನೋಡಿ ಲಾಭಹೊಂದಿದರು. ಇನ್ನು ಮುಂದೆ ದೂರದಿಂದ ಸಹ ಪ್ರಾ. ಶಿ. ರು ಬಂದು ಶಿಕ್ಷಣಕ್ಷೇತ್ರದಲ್ಲಿ ಸುಧಾರಣೆಯನ್ನು ಮಾಡಿ ಕೆಲಸದಲ್ಲಿದ್ದ ತಮ್ಮ ಆಸ್ಥೆಯನ್ನು ಪ್ರಕಟಿಸಬೇಕೆಂದು ಕೋರುತ್ತೇವೆ.

ಅಕ್ಟೋಬರ ತಿಂಗಳ ೨೬ನೆಯ ತಾರೀಖಿನ ಮುಂಜಾವಿನಲ್ಲಿ ಮೊದಲು ಶಿಕ್ಷಣ ಸಮ್ಮೇಲನದ ಕಾರ್ಯವು ಮೆ॥ ಕೆ. ಎಸ್. ವಕೀಲ. ಎಮ್. ಇ, ಡಿ, ಎಫ, ಆರ್, ಜಿ. ಎಸ್, ಐ. ಇ. ಎಸ್, ದಕ್ಷಿಣಭಾಗದ ಎಜ್ಯುಕೇಶನಲ್ ಇನ್ಸಪೇಕ್ಟರ ಈ ಮಹನೀಯರ ಅಧ್ಯಕ್ಷತೆಯ ಕೆಳಗೆ ಆರಂಭವಾಯಿತು. ಆರಂಭದಲ್ಲಿ ಮ್ಯುನಸಿಪಾಲ್ಟಿ ಗರ್ಲಸ್ಕೂಲಿನ ವಿದ್ಯಾರ್ಥಿನಿಯರು ಈಶ್ವರಸ್ತವನವನ್ನು ಸುಶ್ರಾವ್ಯವಾಗಿ ಹಾಡಿದರು. ಬಳಿಕ ಸಮ್ಮೇಲನಕ್ಕೆ ಜೋಡಿಸಿ ಸಿದ್ಧಗೊಳಿಸಿದ ಶಿಕ್ಷಣೋಪಯೋಗಕರ ಉಪಕರಣಗಳ ಪ್ರದರ್ಶನವು ಮೆ॥ ವಕೀಲ ಸಾ॥ ಎ. ಇ. ದಕ್ಷಿಣಭಾಗ ಇವರ ಹಸ್ತದಿಂದ ತೆರೆಯಲ್ಪಟ್ಟಿತು. ಪ್ರದರ್ಶನದ ವಿಷಯದಲ್ಲಿ ಮುಖ್ಯವಾದ ಸಂಗತಿಗಳು ಯಾವವೆಂದರೆ—

೧. ಇಡಿ ಜಗತ್ತಿಗೆ ಸಂಬಂಧಿಸಿದ ಚಿತ್ರಗಳ ನೋಟವು ಮನೋಹರವೂ ಭೌಗೋಲಿಕ ಬೋಧಪ್ರದ ವಿಷಯವೂ ಆಗಿದ್ದಿತು. ಪ್ರತ್ಯಕ್ಷ ನೋಡಲಿಕ್ಕೆ ಅಸಂಭವವಾದ ಸಂಗತಿಗಳನ್ನು ಚಿತ್ರಮುಖದಿಂದಾದರೂ ಕಾಣುವದು ಶಿಕ್ಷಣಶಾಸ್ತ್ರದೃಷ್ಟಿಯಿಂದ ಇಷ್ಟವಾದದ್ದು. ಈ ಚಿತ್ರಗಳು ಗ. ಹಾ। ಸ್ಕೂ। ನ ಮಧ್ಯ ಸ್ಥಳದಲ್ಲಿ ವಿರಾಜಮಾನವಾಗಿದ್ದವು. ಇನ್ನುಳಿದ ಮಾದರಿ ತೆಗೆದುಕೊಳ್ಳಲಿಕ್ಕೆ ತಕ್ಕ ವಿಷಯಗಳು ಅಂದರೆ ಲೇಖನ ವಿಷಯಗಳೂ, ಕೈಕೆಲಸಗಳೂ, ಗರ್ಲ್ ಸ್ಕೂಲಿನ ವಿದ್ಯಾರ್ಥಿನಿಯರ ಕಸೂತಿ ಮೊದಲಾದ ಮಾದರಿಗಳೂ, ಸೆಟಲಮೆಂಟ ಸ್ಕೂಲಿನ ಬಡಿಗತನ ನೇಕಾರಿಕೆ ಮೊದಲಾದ ಕೆಲಸಗಳೂ ಪ್ರೇಕ್ಷಣೀಯವಾಗಿದ್ದವು. ಶಿದ್ಧೇಶ್ವರ ಹಾಯಸ್ಕೂಲಿನ ವಿದ್ಯಾರ್ಥಿಗಳು ಸಿದ್ಧಪಡಿಸಿದ ಲಾಕಸಿಸ್ಟಮದ ಪನಾಮಾ ಕಾಲುವೆಯ ಚಿತ್ರವು ಕಾಲುವೆಯ ರಚನೆಯ ನಿಜವಾದ ಕಲ್ಪನೆಕೊಡುವಂಥದೂ ಮನೋಹರವೂ ಆಗಿದ್ದಿತು. ಈ ಶಿಕ್ಷಣ ಸಪ್ತಾಹದಲ್ಲಿ ಶಿಕ್ಷಣಜ್ಞರು ಕಲಿಸಿದ ಪಾಠಗಳ ಸಾರಾಂಶವು ಸಹ ಬೋಧಪ್ರದವಾಗಿದೆ.

೨. ಮಿಸ್ ಪಾಲ ಇವರು ಇಂಗ್ರೇಜಿ ೨ನೆಯ ಇಯತ್ತೆಗೆ ವಾಚನಪಾಠವನ್ನು ಕಲಿಸಿ ತೋರಿಸಿದರು. ಅವರು ಒಂದು ಚಿತ್ರವನ್ನು ಕರಿಹಲಿಗೆಯ ಮೇಲೆ ತೆಗೆದು ಪ್ರಶ್ನೋತ್ತರಗಳಿಂದ ಚಿತ್ರದ ಜ್ಞಾನವನ್ನೂ ಮುಂದೆ ಹೇಳುವ ಕಥೆಯ ಸಂಬಂಧವಾದ ಜ್ಞಾನವನ್ನೂ ಮಾಡಿಕೊಟ್ಟರು. ಬರಬರುತ್ತ ಕಥೆಯಲ್ಲಿ ಬರುವ ಹೊಸ ಶಬ್ದಗಳನ್ನು ಕಲಿಸಿದರು. ಬಳಿಕ ಆ ಕಥೆಯು ಮನದಟ್ಟಾಗುವಂತೆ ಪ್ರಶ್ನಪದ್ಧತಿಯಿಂದ ಸಾಗಿದರು. ಬಳಿಕ ತಾವು ಆ ಕಥೆಯನ್ನು ಓದಿ ಬಳಿಕ ಬಾಲಕರಿಂದ ಓದಿಸಿದರು. ಈ ಪ್ರಕಾರ ಅವರು ತಮ್ಮ ವಾಚನಪಾಠ ಶಿಕ್ಷಣದಲ್ಲಿ ಡಿರೆಕ್ಟ ಪದ್ಧತಿಯನ್ನು ಉಪಯೋಗಿಸಿ ತೋರಿಸಿದರು. ಇವರೇ ಇಂಗ್ರೇಜಿ ೬ನೆಯ ಇಯತ್ತೆಗೆ ಕವಿತೆಯನ್ನು ಕಲಿಸಿ ತೋರಿಸಿದರು. ಹಳೆ ಪದ್ಧತಿಯಲ್ಲಿ ಬಾಲಕರು ಕವಿತೆಯ ಶಬ್ದಾರ್ಥಗಳನ್ನು ತಿಳಿದು ಭಾವಾರ್ಥವನ್ನು ಚೆನ್ನಾಗಿ ಬರೆದರೆ ತೀರಿತೆಂಬ ಅಭಿಪ್ರಾಯವಿದ್ದಿತು. ಆದರೆ ಈಗ ಕವಿತೆಯನ್ನು ವಿದ್ಯಾರ್ಥಿಗಳು ಸಾಂಗೋಪಾಂಗ ದೃಷ್ಟಿಯಿಂದ ಹ್ಯಾಗೆ ಜ್ಞಾನಮಾಡಿಕೊಳ್ಳಬೇಕೆಂಬ ಸಂಗತಿಯು ತೋರಿಸಲ್ಪಟ್ಟಿತು. ಇಷ್ಟಲ್ಲದೆ ಕವಿತೆಯ ಇಂಗಿತವನ್ನು ತಿಳಿದು ಅದರ ಯೋಗ್ಯತೆಯನ್ನು ಸಹ ತಿಳಿದುಕೊಳ್ಳುವದು ನೂತನ ಪದ್ಧತಿಯ ಧ್ಯೇಯವಾಗಿರುವದು.

೩. ಮಿ. ಕೇತಕರರು ಕಠಿನವಾದ ಸಂಸ್ಕೃತ ಭಾಷೆಯನ್ನು ಸಂಭಾಷಣೆಯ ರೂಪದಿಂದ ಕಲಿಸಲಿಕ್ಕೆ ಬರುತ್ತದೆಂಬ ಸಂಗತಿಯನ್ನು ಪಾಠಕಲಿಸಿ ತೋರಿಸಿದರು.

೪. ಮಿ. ಪಂಜೇ ಮಂಗೇಶರಾಯರು ಇಂಗ್ಲಿಷ ಅಕ್ಷರಗಳನ್ನು ತೀರ ಅರಿಯದ ಹುಡುಗರು ಅಂದರೆ ಕನ್ನಡ ೩ನೆಯ ಇಯತ್ತೆಯ ವಿದ್ಯಾರ್ಥಿಗಳು ಸುಲಭವಾಗಿ ಅರಿಯುವಂತೆ ಡಿರೆಕ್ಟ ಪದ್ಧತಿಯಿಂದ ಕಲಿಸಿ ತೋರಿಸಿದರು.

೫. ಮಿ. ಗ. ಬಿ. ಜೋಸಿ ಅಸಿ। ಮಾ। ಪ್ರಾ. ಸ್ಕೂ. ಧಾರವಾಡ ಇವರು ೪ನೆಯ ಇಯತ್ತೆಗೆ ಕ್ಷೇ. ಫಲ (ಕಾ. ಚೌ. ದ ಕ್ಷೇ. ಫ.) ಪಾಠವನ್ನು ಕಲಿಸಿ ತೋರಿಸಿದರು.

ಬಳಿಕ ಸಂಜೆಯಮುಂದೆ ಪ್ರಾ. ಶಿಕ್ಷಣದ ಏಳಿಗೆಯ ವಿಷಯವಾಗಿಯೂ ಅದರಲ್ಲಿ ಬರುವ ತೊಂದರೆಗಳ ನಿವಾರಣೆಯ ಪ್ರಶ್ನಗಳ ವಿಷಯವಾಗಿಯೂ ಚರ್ಚೆಯಾಯಿತು. ಆ ಮೇಲೆ ಮಿ. ಕಾಮತ ಬಿ. ಎ. ಗ. ಹಾಯಸ್ಕೂಲ ಧಾರವಾಡ ಇವರ ವ್ಯಾಖ್ಯಾನ ವಾಯಿತು. ನಂತರ ಬ್ರಾಡಫರ್ಡ ಶಾಲೆಯ ವಿದ್ಯಾರ್ಥಿಗಳ ಶಿಕ್ಷಣದ ವಿಷಯ ವಾಗಿ ಮೆ॥ ವಕೀಲ ಸಾ॥ ರು ಮ್ಯಾಜಿಕ್‌ಲ್ಯಾಂಟರ್ನದ ದ್ವಾರವಾಗಿ ಹೇಳಿದರು. ಮರು ದಿನ ಮುಂಜಾನೆ ಮುನಸಿಪಾಲಟಿ ತಾಲೀಮ ಮಾಸ್ತರರು ಪ್ರಾ. ಶಾಲಾವಿದ್ಯಾರ್ಥಿಗಳಿಗೆ ನೂತನ ಪದ್ಧತಿಯಿಂದ ಡ್ರಿಲ್ ಹ್ಯಾಗೆ ಮಾಡಿಸಬಹುದೆಂಬದನ್ನು ಪ್ರತ್ಯಕ್ಷವಾಗಿ ಮಾಡಿಸಿ ತೋರಿಸಿದರು.

ಸಿನೇಮಾ ಗ್ರಾಮಾಫೋನ ಇವುಗಳ ಉಪಯೋಗವನ್ನಾದರೂ ಶಿಕ್ಷಣ ವಿಷಯ ದಲ್ಲಿ ಮಾಡಿಕೊಳ್ಳಲಿಕ್ಕೆ ಬರುತ್ತದೆಂಬದನ್ನು ಪ್ರತ್ಯಕ್ಷ ಪ್ರಯೋಗದೊಡನೆ ಅಲ್ಲಿ ತೋರಿ ಸಿದರು. ಈ ಸಮ್ಮೇಲನವು ಮುಂದಿನವರ್ಷ ಕಾರವಾರದಲ್ಲಿ ನೆರೆಯುವದು.

ಶಿಕ್ಷಣಮಾಲೆ; ಟ್ರೇನಿಂಗಸ್ಕೂಲು, ಧಾರವಾಡ

ಲೇಖಕರು:— ಶ್ರೀ. ಶಿರಹಟ್ಟಿ ಹಾಗು ಕಮಡೊಳ್ಳಿ ವಿದ್ಯಾರ್ಥಿ ಟ್ರೇ. ಸ್ಕೂಲು ಧಾರವಾಡ.

ಅಕ್ಟೋಬರ ತಿಂಗಳ ೧೭-೧೮ನೆಯ ತಾರೀಖುಗಳ ದಿವಸ ಧಾರವಾಡ ಟ್ರೇನಿಂಗ ಸ್ಕೂಲಿನ ಭವ್ಯವಾದ ಜನರಲ್ ಹಾಲಿನಲ್ಲಿ ಮೆ॥ ವಕೀಲ ಸಾ॥ ಎ. ಇ. ದ. ಭಾಗ ರವರ ಅಧ್ಯಕ್ಷತೆಯ ಕೆಳಗೆ 'ಶಿಕ್ಷಣಮಾಲೆ' ಎಂಬ ಶಿಕ್ಷಣವಿಷಯವಾದ ಸಭೆಯ ಆರಂಭವು ಶ್ರೀಯುತ ವೆಂಕಟರಾವ ಮುಗದಾಳ ಹೆ. ಮಾ. ಟ್ರೇ. ಸ್ಕೂಲ ಧಾರವಾಡ ಇವರಿಂದ ನೆರವೇರಿಸಲ್ಪಟ್ಟಿತು. ಆ ಕಾಲಕ್ಕೆ ಶಿಕ್ಷಣದ ಅಭಿಮಾನಿಗಳೂ ಅನುಭವಿಕರೂ ಆದ ಶ್ರೀ. ವಿನಾಯಕರಾವ ಜೋಸಿ ರಿ। ಪ್ರಿನ್ಸಿಪಾಲ ಟ್ರೇ. ಕಾ. ಧಾರವಾಡ ಇವರೂ ರಾ. ಬಾ. ಕೊಪ್ಪೀಕರರೂ ಶ್ರೀ. ರಾಮಚಂದ್ರರಾವ ನಾಯಿಕ ಆ್ಯ. ಆ. ಡಿ. ಎಲ್. ಬಿ. ಎಸ್. ಬಿ. ಧಾರವಾಡರವರೂ ಶ್ರೀ ಗುಂಡೇರಾವ ಪುರಾಣಿಕ ಹೆ. ಮಾ. ಗ। ಹಾ. ಧಾರವಾಡರವರೂ ಶ್ರೀ. ಚೆನ್ನಕೇಶವ ಅಯ್ಯಂಗಾರ ಪ್ರೋ. ಕ. ಕಾ. ಧಾರವಾಡರವರೂ ಧಾರವಾಡ ಜಿಲ್ಲೆಯ ಸ್ಕೂಲಬೋರ್ಡ ಸುಪರ್‌ವಾಯಿಝರರೂ ವಿಜಾಪೂರದ ಮಿ. ಶೆಟ್ಟಿ ಸುಪರ್ವಾಯಿಝರರೂ ಧಾರವಾಡದ ಎಲ್ಲ ಮಾಧ್ಯಮಿಕ ಶಾಲೆಗಳ ಬಹುತರ ಮಾಸ್ತರ

ರವರೂ ಮ್ಯು. ಪಾಲ್ಟಿ ಶಾಲೆಯ ಪ್ರಾಥಮಿಕ ಶಿಕ್ಷಕರೂ ಆಗಮಿಸಿದ್ದರು. ಆದದರಿಂದ ಸಭೆಗೆ ಶಿಕ್ಷಣವಿಷಯಕವಾದ ನಿಜವಾದ ತೇಜಸ್ಸು ಉಂಟಾದುದರಲ್ಲಿ ಸಂದೇಹವಿಲ್ಲ. ಈ ಸಮಯದಲ್ಲಿ ವಿದ್ಯಾವಂತರಾಗಿ ಶಿಕ್ಷಣದಲ್ಲಿ ಅನೇಕಕಾಲ ಅನುಭವ ಪಡೆದು ಪ್ರಸಿದ್ಧಿ ಹೊಂದಿದವರಾದ ಶ್ರೀ. ಮಂಗೇಶರಾವ ಪಂಜೆಯವರು ಪ್ರ್ಯಾಕ್ಟಿಸಿಂಗಸ್ಕೂಲಿನ ವಿದ್ಯಾರ್ಥಿಗಳನ್ನು ಬರಮಾಡಿಕೊಂಡು ಮೂರು ಮಾದರಿ ಪಾಠಗಳನ್ನು ಕಲಿಸಿ ತೋರಿಸಿದರು. (೧) ಸಂಖ್ಯೆಯ ಪಾಠ (೨) ಭೂಮಿತಿಯ ಪಾಠ (೩) ಕವಿತಾಪಾಠ. ಈ ಬಗೆಯ ಮೂರೂ ಪಾಠಗಳಲ್ಲಿಯೂ ಬೋಧಪ್ರದವಾದ ಸಂಗತಿಗಳೂ ಶಿಕ್ಷಣದ ತತ್ವಗಳೂ ಅಡಕವಾಗಿರುವದರಿಂದ ಪ್ರಾ. ಶಿಕ್ಷಕರಿಗೋಸ್ಕರವಾಗಿ ಪ್ರಾಥಮಿಕ ಶಿಕ್ಷಣ ಮಾಸ ಪತ್ರಿಕೆಯ ಮುಖಾಂತರವಾಗಿ ಪ್ರಕಟಿಸಿದೆ.

೧. **ಸಂಖ್ಯಾಪಾಠ:**— ಸಂಖ್ಯೆಗಳು ವಸ್ತುವಾಚಕಗಳಾಗಿವೆ; ಆದಕಾರಣ ಸಂಖ್ಯೆಗಳ ಅರ್ಥಜ್ಞಾನವನ್ನು ಮೊದಲು ಮಾಡಿಕೊಡುವದು ಆವಶ್ಯಕವು. ಇದು ಚಿಕ್ಕ ಮಕ್ಕಳ ಪಾಠವಾಗಿರುವದರಿಂದ ಅವರ ಮನಸಿನಲ್ಲಿ ಸಂಖ್ಯೆಗಳ ಜ್ಞಾನವು ಬೇರೆ ಬೇರೆ ವಸ್ತುಗಳ ಸಹಾಯದಿಂದ ಆಟವಾಡುತ್ತಲೆ ಬುದ್ಧಿಗತವಾಗುವದು ಹೆಚ್ಚು ಮಹತ್ವದ್ದಾಗಿರುವದು. ಶಿಕ್ಷಕನು ಚಿಕ್ಕ ಮಕ್ಕಳಲ್ಲಿಯೇ ಸೇರಿಕೊಂಡು ಅವರ ಒಲವಿಗನುಸರಿಸಿ ಆಟವಾಡುತ್ತ ವಿಷಯ ಜ್ಞಾನಮಾಡಿಕೊಡುವ ಕ್ರಮವು ಶ್ರೀ. ಪಂಜೆ ಮಂಗೇಶರಾಯರಿಂದ ತೀರ ಅನುಕರಿಸುವಂಥದಿರುತ್ತದೆ. ಅವರು ಚಿಕ್ಕಮಕ್ಕಳ ಆದಷ್ಟು ಹೆಚ್ಚು ಇಂದ್ರಿಯಗಳ ಉಪಯೋಗವಾಗುವಂತೆ ಬಾರಿಸಿ, ಬೆನ್ನುಚಪ್ಪರಿಸಿ, ಸ್ಪರ್ಶಿಸಿ, ವಸ್ತುಗಳನ್ನು ತೋರಿಸಿ ೧೦ರ ವರೆಗಿನ ಅಂಕೆಗಳ ಜ್ಞಾನಮಾಡಿಕೊಟ್ಟರು. ಜಿಗಿಯುವದು, ಹೇಕರಿಸುವದು, ಸನ್ನೆಮಾಡುವದು ಇತ್ಯಾದಿಗಳ ಮುಖಾಂತರವಾಗಿಯೇ ಪಾಠವು ಮನೋಹರವಾಗಿ ದೃಢೀಕರಿಸಲ್ಪಟ್ಟಿತು. ಮೊದಲು ಕಲಿತ ಅಂಕೆಗಳ ಪುನರಾವರ್ತನೆಯಾಗುವಂತೆ ಹತ್ತು ಹತ್ತು ಚಿಕ್ಕೆಗಳುಳ್ಳ ವರ್ತುಳಗಳ ಗುಂಪನ್ನು ಹುಡುಗರಿಂದಲೆ ಮಾಡಿಸಿದರು. ಗುಂಪುಗಳಲ್ಲಿ ಸಹ ೧೦ ಬೇರೀಜು ಆಗುವ ಬೇರೆ ಬೇರೆ ಸಂಖ್ಯಾಬೋಧಕ ಸಾಲುಗಳುಳ್ಳ ಬೇರೆ ಬೇರೆ ವರ್ತುಳಗಳನ್ನು ಮಾಡಿಸಿದ್ದರು. ಉದಾ— ೩+೪+೩;೫+೪+೧ ಇ. ಅದರಲ್ಲಿಯೂ ಬೇರೀಜು ವಜಾಬಾಕಿಗಳ ಜ್ಞಾನವಾಗುವಂತೆ ೩ ಹತ್ತರ ಗುಂಪು ಮೇಲೆ ನಾಲ್ಕು ಚುಕ್ಕೆ, ಅದರಲ್ಲಿ ಒಂದನ್ನು ಕಡಿಮೆಮಾಡಿ ೨ ಹತ್ತರ ಗುಂಪು ೪ ಚುಕ್ಕೆ ಅದರಲ್ಲಿ ೨ ಹ. ಗುಂಪು ಹೆಚ್ಚುಮಾಡಿ ೫ ಹತ್ತರ ಗುಂಪು ೪ ಚುಕ್ಕೆ ಇ. ಗಳನ್ನೂ ಅದರಲ್ಲಿ ೫ ಚುಕ್ಕೆಗಳನ್ನು ಕಡಿಮೆಮಾಡಿದರೆ ಎಷ್ಟಾಗುವದೆಂಬ ಕಠಿಣ ಪ್ರಶ್ನೆಯ ಉತ್ತರವನ್ನೂ ಸಹ ಪ್ರತ್ಯಕ್ಷ ಚುಕ್ಕೆಗಳ ಮುಖಾಂತರವಾಗಿ ವಿದ್ಯಾರ್ಥಿಗಳಿಂದಲೇ ಹೊರಡಿಸಿದರು. ದಶಕಬರುವ ಸಂಖ್ಯೆಗಳ ಬೇರೀಜು ವಜಾಬಾಕಿಗಳು ಕಠಿಣವೆಂದು ತಿಳಿದು

ಬಾಲಕ ವರ್ಗದ ಅಭ್ಯಾಸ ಪತ್ರಿಕೆಯಲ್ಲಿ ಇಟ್ಟಿಲ್ಲವಾದರೂ ಅದನ್ನು ಸಹ ಸ್ವಲ್ಪ ವೇಳೆಯಲ್ಲಿ ಮಾಡಿಸಿ ತೋರಿಸಿದ್ದು ಅವರ ಶಿಕ್ಷಣಕಲೆಯ ಚಾತುರ್ಯದ ದ್ಯೋತಕವಾಗಿದೆ.

ಪಾಠಗಳಲ್ಲಿ ಮೌನಪದ್ಧತಿಯನ್ನು ಉಪಯೋಗಿಸಿಕೊಳ್ಳಲಿಕ್ಕೆ ಚುಕ್ಕೆಗಳುಳ್ಳ ಇಸ್ಪೇಟುಗಳೂ ಪಟಗಳೂ ಸಹಾಯಕಾರಿಗಳಾಗಿರುತ್ತವೆಂದು ಹೇಳಿದರು. ಯಾವನೊಂದು ಸಂಖ್ಯೆಯನ್ನು ಉಚ್ಚರಿಸಿದ ಕೂಡಲೆ ಮೊದಲು ಅದರ ಅರ್ಥ ಜ್ಞಾನವು ಕಣ್ಣ ಮುಂದೆ ಕಟ್ಟಬೇಕೇ ಹೊರತು ಬರಿ ಬರಹವೇ ಬಂದು ನಿಲ್ಲಬಾರದೆಂಬ ಉದ್ದೇಶವು ಒಡೆದು ತೋರುವಂತೆ ಅವರ ಶಿಕ್ಷಣ ಪದತಿಯು ಮಾರ್ಮವಾಗಿದ್ದಿತು. ೩ ಹತ್ತರ ಗುಂಪು ೩ ಸಾರೆ ಅಥವಾ ೨ ಸಾರೆ ಬರೆದರೆ ಎಷ್ಟು ಗುಂಪುಗಳಾಗುವವು ? ಇತ್ಯಾದಿ ಪ್ರಶ್ನೆಗಳ ದ್ವಾರದಿಂದ ಮೊಗ್ಗೆಗಳ ಉಪಪತ್ತಿಯು ಕೂಡ ಪ್ರತ್ಯಕ್ಷವಾಗಿ ತೋರಿತು. ಅಲ್ಪ ವೇಳೆಯಲ್ಲಿ ತಮಗೂ ವಿದ್ಯಾರ್ಥಿಗಳಿಗೂ ಶಿಕ್ಷಕರಿಗೂ ಬೇಸರವೆನಿಸದಂತೆ ನಿರಸವಾದ ಗಣಿತದ ಆರಂಭದ ಪಾಠವನ್ನು ಮನೋರಂಜನೆಯಾಗುವಂತೆ ಕಲಿಸಿ ತೋರಿಸಿದ್ದು ನಿಜವಾಗಿ ಅನುಕರಣೀಯವೇ ಆಯಿತು. ಪಾಠ ಕಲಿಯುವಾಗ ಬರುವ, ನಿಲ್ಲುವ, ಹೋಗುವ, ಇವೇ ಮೊದಲಾದ ವರ್ಗದ ಪದ್ಧತಿಯನ್ನು ಕಾಯ್ದುಕೊಳ್ಳುವ ಕ್ರಮವನ್ನು ಸಹ ತೋರಿಸಿದರು. ಮಕ್ಕಳು ಒಂದುವೇಳೆ ಉತ್ತರ ತಪ್ಪಿದರೂ ಅಡ್ಡಿಯಿಲ್ಲ. ಅವರು ಉತ್ತರ ಕಂಡು ಹಿಡಿಯುವ ದಾರಿಯು ಸರಿಯಾದದ್ದಿರಬೇಕೆಂಬ ಸಂಗತಿಯು ಅವರ ಪ್ರಶ್ನಪದ್ಧತಿ ಉತ್ತರ ತೆಗೆದುಕೊಳ್ಳುವ ಪದ್ಧತಿಗಳಿಂದ ತೋರುತ್ತಿದ್ದಿತು. ಆದರೆ ಎಷ್ಟೋ ಕಡೆಯಲ್ಲಿ ಶಿಕ್ಷಕರು ತಟ್ಟನೆ ಉತ್ತರ ಹೇಳುವ ಸಂಗತಿಗೆ ಪ್ರಾಶಸ್ತ್ಯ ಕೊಡುತ್ತಿರುತ್ತಾರೆ; ಅದು ಶಿಕ್ಷಣ ಪದ್ಧತಿಗೆ ತೀರ ವಿಪರೀತವಾಗಿರುತ್ತದೆ. ಬೇಗನೆ ಉತ್ತರ ಹೇಳಲಿಕ್ಕೆ ಮಕ್ಕಳು ಹಾತೊರೆಯದೆ ನಿಜವಾದ ಸಂಗತಿಯ ಶೋಧದಲ್ಲಿಯೇ ಮುಳುಗಿ ಎಳಿಕ ವಿಚಾರಪೂರ್ವಕವಾಗಿ ಉತ್ತರ ಕೊಡುವದನ್ನು ಚಿಕ್ಕಂದಿನಲ್ಲಿಯೇ ಅರಿತರೆ ಮುಂದೆ ಅವರು ಕಡೆತನಕ ವ್ಯವಹಾರಕ್ಕೆ ತಕ್ಕವರಾಗುತ್ತಾರೆ. ಈ ಬಗೆಯ ಉತ್ತಮ ಮನುಷ್ಯತ್ವವನ್ನು ಉಂಟುಮಾಡುವದೇ ನಿಜವಾದ ಶಿಕ್ಷಣ ಪದ್ಧತಿಯ ನೂತನ ತತ್ವವಾಗಿರುತ್ತದೆ.

೨. **ಭೂಮಿತಿಯ ಪಾಠ**—ಘನ, ಇಟ್ಟಿಗೆಗಳನ್ನು ತೆಗೆದುಕೊಂಡು ಘನ, ಕ್ಷೇತ್ರ, ಆಕೃತಿ, ರೇಖೆ, ಬಿಂದು ಇತ್ಯಾದಿಗಳ ಅರ್ಥಜ್ಞಾನವನ್ನು ಅಲ್ಪವೇಳೆಯಲ್ಲಿ ಮನೋರಂಜನವಾಗುವಂತೆ ಆಟಗಳೊಂದಿಗ್ಗೆ ಮಾಡಿಕೊಟ್ಟರು. ಈ ಪಾಠದಲ್ಲಿ ಮುಖ್ಯವಾಗಿ, ಶಿಕ್ಷಕರು ಅನುಸರಿಸತಕ್ಕ ಸಂಗತಿಯೆಂದರೆ, ಹುಡುಗರು ವ್ಯವಹಾರದಲ್ಲಿ ಕಾಣುವ ಸಂಗತಿಗಳನ್ನು ಉದಾಹರಣೆಗಳ ರಾಶಿಗಳನ್ನಾಗಿ ಮಾಡಿಕೊಳ್ಳುವದು. ಆಗ ನೋಡುವವರಿಗೆ ಸಹ ನಿಜವಾಗಿ ಆನಂದವೆನಿಸಿತು.

ಉದಾ— ಶೀರೆ ಧೋತರಗಳನ್ನು ಕೊಂಡುಕೊಳ್ಳುವಾಗ ಯಾವ ಸಂಗತಿಗಳನ್ನು ನೋಡುವಿರಿ ? ಉದ್ದ, ಅಗಲ, ದಪ್ಪ.
ಗೋಡೆಗಳನ್ನು ಕಟ್ಟುವಾಗ ಯಾವ ವಿಷಯಗಳ ಕಡೆಗೆ ಲಕ್ಷ್ಯಗೊಡುವಿರಿ ? ,, ,, ,,
ಪಾಟಕೊಳ್ಳುವಾಗ ಯಾವ ಸಂಗತಿಗಳನ್ನು ಮನಗಾಣುವಿರಿ ? ,, ,, ,,

ಆದರೆ ಗೋಡೆಗೆ ಬಣ್ಣ ಕೊಡುವಾಗ ? ಬರಿ ಉದ್ದ, ಅಗಲಗಳ ಕಡೆಗೆ.
ಕಸ ಗುಡಿಸುವಾಗ ? ,, ,,
ಇನ್ನು ಗೋಲೀ ಆಡುವಾಗ ? ಬರಿ ಉದ್ದದ ಕಡೆಗೆ.
ಉಗಿಬಂಡೆ ಓಡುವಾಗ ? ,,
ನಕ್ಷತ್ರ ಬೀಳುವಾಗ ? ,,

ಈ ರೀತಿಯಾಗಿ ಘನ, ಕ್ಷೇತ್ರ, ರೇಖೆ, ಬಿಂದುಗಳ ವ್ಯಾಖ್ಯೆಯನ್ನು ಕಲಿಸಿದರು. ಒಂದು ಪಾಠವು ಮತ್ತೊಂದು ಪಾಠದ ಪೂರಕವಾಗಿರಬೇಕೆಂಬ ತತ್ವಕ್ಕನುಸರಿಸಿ ಸಂಖ್ಯೆಗಳ ಪಾಠದ ಆವರ್ತನೆಯು ಸಹ ಈ ಪಾಠದಲ್ಲಿ ಅಡಕವಾಗಿದ್ದಿತು.

೩. ಕವಿತೆಯ ಪಾಠ— ಓದಿದ ಭಾಗದ ಅರ್ಥಜ್ಞಾನದ ಪೂರ್ತಿ ವಾಚನ ಹಾಗು ಕವಿತೆ ಇವೆರಡೂ ವಿಷಯಗಳಲ್ಲಿ ಸಾಮ್ಯವಿರುತ್ತದೆ. ಸಣ್ಣ ಸಣ್ಣ ಮಾತುಗಳನ್ನೇ ಇಂಪಾಗಿ ಸ್ವರ ಮೇಳನದಿಂದ ಅಂದರೆ ಕವಿತೆಯಾಗುತ್ತದೆಂಬ ಭಾವನೆಯು ಮಕ್ಕಳಲ್ಲಿ ನೆಲೆಗೊಳ್ಳಬೇಕು. ಕವಿತೆಯು ಅದೊಂದು ಪ್ರತ್ಯೇಕವಾದ ಕಠಿಣ ವಿಷಯವೆಂಬ ಭಾವನೆಯು ಅವರಿಗಾಗಬಾರದು. ಹೀಗೆಯೇ ಆರಂಭಕ್ಕೆ ಕಲಿತು ಮುಂದೆ ಪದ್ಯ ಅಲಂಕಾರ, ಛಂದಸ್ಸುಗಳ ಜ್ಞಾನವಮಾಡಿಕೊಳ್ಳಲು ಸಮರ್ಥರಾಗುವಂತೆ ಕವಿತಾ ಪದ್ಧತಿಯ ರಚನೆ ಇರಬೇಕೆಂದು ಅವರ ಉದ್ದೇಶವಾಗಿದ್ದಿತು. ಮೊದಲು ಕವಿತೆಯ ವಿಷಯದ ಕಡೆಗೆ ವಿದ್ಯಾರ್ಥಿಗಳ ಲಕ್ಷ್ಯವು ಎಳೆಯುವಂತೆ ಭಾವಬೋಧಕವಾಗಿ ಬಣ್ಣಿಸಬೇಕು. ಆ ಮೇಲೆ ಅದೇ ವಿಷಯವನ್ನೇ ಬಣ್ಣಿಸುವ ಸುಲಭ ಶಬ್ದಗಳಿಂದ ಕೂಡಿದ ಹಾಡನ್ನು ಮನೋಹರವಾಗಿ ಅನ್ನಬೇಕು. ನಡುನಡುವೆ ಪ್ರಶ್ನಮಾಡುತ್ತ ವಿದ್ಯಾರ್ಥಿಗಳ ವರ್ಣನೆಗೂ ಕವಿಯ ವರ್ಣನೆಗೂ ಹೋಲಿಸುತ್ತ ಸಾಗಬೇಕು. ಹೊಸದಾಗಿ ಕಲಿಸುವ ಬುಕ್‌ಲೆಸ್ ಪದ್ಧತಿಯನ್ನು ಅವರು ಕವಿತಾ ಪಾಠದಲ್ಲಿ ಉಪಯೋಗಿಸಿ ತೋರಿಸಿದರು. ಯಾವದೊಂದು ವಿಷಯದ ವರ್ಣನೆಯುಳ್ಳ ಸುಲಭ ಮನೋಹರವಾದ ಪದ್ಯಗಳು ಇಂಗ್ಲಿಷದಲ್ಲಿ ಅನೇಕವಾಗಿರುವವು. ಕನ್ನಡದಲ್ಲಿ ಇತ್ತಿತ್ತಲಾಗಿ ಪ್ರಚಾರದಲ್ಲಿ ಬಂದಿರುವ

ವೆಂದು ಹೇಳಿ, ಕೆಳಗಿನ ಪದ್ಯದ ಭಾವವನ್ನೂ ಅರ್ಥವನ್ನೂ ಕೇವಲ ಬಾಯಿಯಿಂದಲೇ ಕಲಿಸಿದರು. ಅವರು ಕಲಿಸುವಾಗ ಪದ್ಯದ ಭಾಗವನ್ನು ಅಂದು ನಡುವೆ ಸ್ವಲ್ಪ ನಿಂತರೆ ಮುಂದಿನ ಭಾಗವನ್ನು ವಿದ್ಯಾರ್ಥಿಗಳೇ ಅನ್ನುತ್ತಿದ್ದರು. ಪಾಠ ಮುಗಿಯುವದರೊಳಗಾಗಿ ಕವಿತೆಯ ಭಾವಾರ್ಥವು ತಿಳಿದದ್ದಲ್ಲದೆ ಆ ಕವಿತೆಯು ಬಾಲಕರಿಗೆ ಮುಖಪಾಠವಾಗಿ ಹೋಯಿತು. ಭಾವಾರ್ಥದ ಮೇಲಿಂದ ಅದರೊಳಗಿದ್ದ ಒಂದೆರಡು ಕಠಿಣ ಶಬ್ದಗಳ ಅರ್ಥವು ವಿದ್ಯಾರ್ಥಿಗಳಿಗೆ ತಾನಾಗಿಯೇ ಹೊಳೆಯಿತು. ಆ ಕವಿತೆಯು ಯಾವದೆಂದರೆ:- "ತುಂಗಾತೀರದ ಬಲಗಡೆಯಲ್ಲಿ, ಹಿಂದೊಂದಿದು ದು ಬೊಮ್ಮನಹಳ್ಳಿ। ಅಲ್ಲಿಯೇ ಇಲಿಗಳ ಕಾಟವೇ ಕಾಟ, ಅಲ್ಲೀ ಜನಗಳ ಗತಿ ಗೋಳಾಟ ॥" ಇತ್ಯಾದಿ. ಇನ್ನೂ ಕೆಲವು ಪದ್ಯಗಳು.

ಕವಿತೆಯ ಭಾವಾರ್ಥವು ಕೇವಲ ಭಾಷಾಂತರವೆನಿಸಬಾರದು. ಅದು ಕವಿತೆಯ ಭಾವವನ್ನು ಮನಸ್ಸಿನಲ್ಲಿ ತಂದುಕೊಟ್ಟು ಸಾಮಾನ್ಯಭಾವ ಅಥವಾ ಮರ್ಮವನ್ನು ಲಕ್ಷಕ್ಕೆ ತರುವ ರೀತಿಯಲ್ಲಿರಬೇಕು.

ಈ ಪ್ರಕಾರವಾಗಿ ಅವರು ಒಂದೇ ಸವನೆ ಮೂರು ಪಾಠಗಳನ್ನು ಅವಿಶ್ರಾಂತ ವಾಗಿ ಮಾದರಿಕೊಟ್ಟು ತೋರಿಸಿದ್ದು ಕೇವಲ ಪ್ರಾ. ಶಿ. ರ ಮೇಲಿನ ಅನುಗ್ರಹವೆಂದೇ ತಿಳಿಯಬೇಕು.

ಇಷ್ಟುದಿವಸಗಳವರೆಗೆ ಪ್ರಾ. ಶಿಕ್ಷಕರಿಗೂ ಹೆಚ್ಚಿಗೆ ಶಿಕ್ಷಣದ ಜ್ಞಾನವುಳ್ಳ ಮಾ. ಶಿಕ್ಷಕರಿಗೂ ವಿಚಾರವಿನಿಮಯಕ್ಕೆ ಆಸ್ಪದವೇ ಇದ್ದಿದ್ದಿಲ್ಲ. ಹಾಗೆಯೇ ಮಾ. ಶಿಕ್ಷಕರಿಗೂ ಚಿಕ್ಕಮಕ್ಕಳ ಶಿಕ್ಷಣದ ಅನುಭವವುಂಟಾಗಲಿಕ್ಕೆ ಪ್ರಸಂಗವೇ ಇದ್ದಿದ್ದಿಲ್ಲ. ಈ ಶಿಕ್ಷಣ ಮಾಲೆಯಿಂದ ಈ ಎರಡೂ ಕೊರತೆಗಳು ದೂರವಾಗುವಂತೆ ಅವೆ. ಶಿಕ್ಷಣ ಮಾಲೆಯ ಸಭೆಯು ತಿಂಗಳಿಗೆ ಎರಡು ಸಾರೆ ಜರುಗಬೇಕೆಂದು ಗೊತ್ತಾಗಿದೆ.

ಮೇಲೆ ಮೇಲೆ ಜರುಗುವ ಶಿಕ್ಷಣಮಾಲೆಗೆ ಎಲ್ಲ ಮಾ. ಶಿಕ್ಷಕರೂ ಪ್ರಾ. ಶಿಕ್ಷಕರೂ ಆಗಮಿಸಿ ಅದನ್ನು ವೃದ್ಧಿಗೊಳಿಸಿ ಶಿಕ್ಷಣಕ್ಷೇತ್ರದಲ್ಲಿ ಸುಧಾರಣೆ ಪಡೆದು ಯಶಸ್ಸು ಹೊಂದಬೇಕೆಂದೂ, ಅಧಿಕಾರಿಗಳು ಇದಕ್ಕೆ ತಕ್ಕ ಅನುಕೂಲತೆಗೈಯ್ಯಬೇಕೆಂದೂ ಪ್ರಾರ್ಥಿಸಿ ಈ ಲೇಖವನ್ನು ಮುಗಿಸುವೆವು.

ಶಿಕ್ಷಣದ ಸಾಮಾನ್ಯ ಉದ್ದೇಶಗಳೂ ಕೊನೆಯ ದಿಶೆಯೂ

(ಕಳೆದ ತಿಂಗಳಿನಿಂದ ಮುಂದುವರಿದುದು.)

ಲೇಖಕ :— ಸಾತೇನಹಳ್ಳಿ.

ಶಿಕ್ಷಣದ ಸಾಮಾನ್ಯ ಸಂಸ್ಥೆಗಳು ನಮ್ಮ ದೇಶದಲ್ಲಿ ಮೊದಲು ಇರಲಿಲ್ಲ. ಬ್ರಿಟಿಶ ರಾಜ್ಯವು ಆರಂಭವಾದಂದಿನಿಂದ ಜನಸುಧಾರಣೆಗಾಗಿ ಅಲ್ಲಲ್ಲಿ ಶಿಕ್ಷಣ ಸಂಸ್ಥೆಗಳು ಸ್ಥಾಪಿಸಲ್ಪಟ್ಟವು. ಆಗಿನ ಪರಿಸ್ಥಿತಿಗೆ ಅನುಸರಿಸಿ ಅವು ಚೆನ್ನಾಗಿ ನಡೆಯುತ್ತ ಬಂದವು. ಕಾಲಕ್ಕೆ ತಕ್ಕಂತೆ ಮಾರ್ಪಾಡುಗಳನ್ನಾದರೂ ಹೊಂದುತ್ತಲಿವೆ. ಜಗತ್ತಿನ ಪ್ರಗತಿಯು ದಿವಸದಿವಸಕ್ಕೆ ಮುಂದೋಡುತ್ತಿರುವದರಿಂದ ಅದಕ್ಕೆ ತಕ್ಕಂತೆ ಸಂಸ್ಥೆಗಳಲ್ಲಿ ಆಗಾಗ ಕೂಡಲೆ ಹೆಚ್ಚು ಕಡಿಮೆ ಮಾಡಲಿಕ್ಕೆ ಇಂಬು ಇರಲಿಕ್ಕಿಲ್ಲ.

ಕಲಿಯುವವರ ಉದ್ದೇಶಗಳು ಮೊದಲು ಎರಡು ತೆರನಾಗಿದ್ದವು.

೧ ಶಿಕ್ಷಣ ಹೊಂದಿ ಮರ್ಯಾದೆ ಸಂಪಾದಿಸುವದು. ೨ ಸರಕಾರದಲ್ಲಿ ಕೆಲಸ ಮಾಡಿ ಉಪಜೀವಿಸುವದು.

ನಿಜವಾಗಿ ವಿಚಾರ ಮಾಡಿ ನೋಡಲು ಇವೆರಡೂ ಶಿಕ್ಷಣದ ಉಚ್ಚತರ ಧ್ಯೇಯಗಳಲ್ಲ. ಶಿಕ್ಷಣದ ಧ್ಯೇಯಗಳು ಮುಖ್ಯವಾದವು ಬೇರೆ ಇರುವವು. ಶಿಕ್ಷಣದಿಂದ ಮನುಷ್ಯನ ಮನಸ್ಸು ಪ್ರಸನ್ನವಾದದ್ದೂ ಉನ್ನತವಾದದ್ದೂ ಆಗಬೇಕು. ಅಂದರೆ ಅವನು ಇಂದ್ರಿಯಗಳ ಆಧೀನನಾಗದೆ ಅವನ್ನೇ ತನ್ನ ಅಂಕೆಯಲ್ಲಿಟ್ಟುಕೊಳ್ಳಬೇಕು. ಸುಖದುಃಖಗಳಲ್ಲಿಯೂ ಜಯಾಪಜಯಗಳಲ್ಲಿಯೂ ಉಬ್ಬಬಾರದು, ತಗ್ಗಬಾರದು. ನೈತಿಕ ಧೈರ್ಯವುಳ್ಳವನಾಗಿ ಸ್ವಾರ್ಥವನ್ನು ಬದಿಗೊತ್ತಿ ಎದೆಗೊಡುವಷ್ಟು ಸಮರ್ಥನಾಗಬೇಕು. ಕಷ್ಟಬಡುತ್ತಿದ್ದರೂ ಸಹ ರಾಜರ, ಗುರುಹಿರಿಯರ, ಮಾತಾಪಿತೃಗಳ ಆಜ್ಞೆಯನ್ನು ಪಾಲಿಸಲಿಕ್ಕೆ ಹಿಂಜರಿಯಬಾರದು.

ಶಿಕ್ಷಿತನ ಇಂದ್ರಿಯಗಳೆಲ್ಲ ಬೆಳವಣಿಗೆ ಹೊಂದಿ ಕುಶಾಗ್ರವಾಗಬೇಕು. ಇವನು ಎಂಥ ತೊಂದರೆಯಲ್ಲಿಯೂ ನ್ಯಾಯಾನ್ಯಾಯಗಳನ್ನು ಸಮತೋಲನ ಮಾಡಿ ತಿಳಿದುಕೊಳ್ಳಲು ಸಮರ್ಥನಾಗಬೇಕು. ನಿರೀಕ್ಷಣದಿಂದ ಏನಾದರೂ ಹೊಸ ಶೋಧ ಮಾಡೇನೆಂಬ ಸ್ವಾಭಿಮಾನವು ಅವನಲ್ಲಿರಬೇಕು. ಹಾಗು ಅದಕ್ಕೆ ತಕ್ಕಂತೆ ಅವನ ಪ್ರವೃತ್ತಿಯು ಜಾಗೃತವಾಗಲಿಕ್ಕೆ ಬೇಕು. ಮಿಕ್ಕವರಿಗಿಂತ ಕೈಕೊಂಡ ಕಾರ್ಯವನ್ನು ಅಚ್ಚುಕಟ್ಟಾಗಿ ಅಲ್ಪವೇಳೆಯಲ್ಲಿ ಮಾಡಲಿಕ್ಕೆ ಸಮರ್ಥನಾಗಬೇಕು. ಅವನು ಮಾಡಿದ ಪ್ರತಿಯೊಂದು ಕೆಲಸದಲ್ಲಿ ಉಳಿದವರು ಏನಾದರೂ ಬೋಧ ತಕ್ಕೊಳ್ಳುವಂತೆ ಇರಲಿಕ್ಕೆ ಬೇಕು.

ಶಿಕ್ಷಿತನಲ್ಲಿ ಯಾವ ವಿಧದ ಹೆಚ್ಚಿನ ವ್ಯಸನಗಳಿರಬಾರದು. ಒಂದು ವೇಳೆ ಹೆಚ್ಚು ಕಸುವುಳ್ಳವನು ಇಲ್ಲದಿದ್ದರೂ ಎಲ್ಲ ಅವಯುವಗಳು ತಮ್ಮ ತಮ್ಮ ಕೆಲಸಗಳನ್ನು ಸುಸೂತ್ರವಾಗಿ ಮಾಡಿಕೊಳ್ಳುವಂತೆ ಅವನು ಸಾಧಕ ಮಾಡಿದವನಿರಬೇಕು.

ಈ ಮೇಲೆ ಬರೆದ ಸಂಗತಿಗಳೆಲ್ಲ ಶಿಕ್ಷಣದ ನಿಜವಾದ ಉದ್ದೇಶಗಳಾಗಿರುವವು. ಇವನ್ನೆಲ್ಲ ಬಿಟ್ಟುಬಿಟ್ಟು ಜನರಲ್ಲಿ ಮರ್ಯಾದೆ ಸಂಪಾದನೆ ಮಾಡಿಕೊಳ್ಳಬೇಕೆಂದೂ, ಏನಾದರೊಂದು ಚಾಕರಿ ದೊರಕಿಸಿ ಮೈ ಮಣ್ಣಾಗದಂತೆ ಉಣ್ಣಬೇಕೆಂದೂ ಧ್ಯೇಯವನ್ನಿಟ್ಟುಕೊಂಡರೆ ಏನು ಪರಿಣಾಮವಾಗುತ್ತದೆಂಬ ಸಂಗತಿಯನ್ನು ಕೆಳಗೆ ವಿವರಿಸಿದೆ.

ಮೊದಲನೆಯದರ ವಿಷಯವಾಗಿ—ಶಿಕ್ಷಿತರ ಸಂಖ್ಯೆಯು ನಮ್ಮಲ್ಲಿ ಅಲ್ಪವಾಗಿದ್ದರೂ ಸಾಮಾನ್ಯ ಶಿಕ್ಷಿತರ ಸಂಖ್ಯೆಯು ದೇಶದ ಪ್ರಗತಿಗೆ ತಕ್ಕಂತೆ ತಾನೇ ಬೆಳೆಯುತ್ತ ನಡೆದದೆ. ಅಂದರೆ ಶಿಕ್ಷಣದ ಕ್ಷೇತ್ರವು ವಿಶಾಲವಾಗುತ್ತ ನಡೆದದೆ. ವರ್ತಮಾನಪತ್ರಗಳೂ, ಮಾಸಪತ್ರಿಕೆಗಳೂ, ನಾಟಕ-ಶಿನೇಮಾಗಳೂ, ಪ್ರದರ್ಶನಗಳೂ ಶಿಕ್ಷಣದ ಸಂಸ್ಕಾರವನ್ನು ಜನತೆಗೆ ಕೊಡುತ್ತಲಿರುವವು. ಧರ್ಮೋಪದೇಶಕರ ಹಾಗು ವ್ಯಾಖ್ಯಾತರ ಮತ್ತು ಕೀರ್ತನಕಾರರ ಸಂಖ್ಯೆಯು ಬೆಳೆಯುತ್ತಲಿರುವದು. ಕೋ-ಆಪರೇಟಿವ್ಹ ಬ್ಯಾಂಕುಗಳೂ ಬೇರೆ ವಿಧದ ಸಂಗತಿಗಳೂ ಜನತೆಯನ್ನು ಕೂಡಿಸುತ್ತಲಿರುವವು. ತೀವ್ರ ವೇಗದ ವಾಹನಗಳು ಬಳಿಕೆಯಲ್ಲಿ ಬಂದಂದಿನಿಂದಂತೂ ಎಲ್ಲ ದೇಶಗಳ ಶಿಕ್ಷಣಾಲಯಗಳ ಸಾರವು ಎಲ್ಲ ಕಡೆಗೂ ಜನತೆಯ ಮಾತುಕಥೆ, ನಡೆನಳಿಕೆಗಳ ಕೂಡ ಪ್ರವಹಿಸತೊಡಗಿರುವದು. ಪ್ರವಾಸಿಗಳ ಸಂಖ್ಯೆಯು ಬೆಳೆದದರಿಂದ ಅವರು ಏನೂ ಓದದಿದ್ದರೂ ಕೇಳದಿದ್ದರೂ ಬರಿ ಕಣ್ಣಿನಿಂದಲೇ ಬೇಕಾದಷ್ಟು ಜ್ಞಾನ ಸಂಪಾದಿಸಬಹುದಾಗಿದೆ. ಹೀಗಾಗಿ ಸಾಮಾನ್ಯಜ್ಞಾನ ಹೊಂದಿದವರ ಸಂಖ್ಯೆಯು ಬೆಳೆಯುತ್ತಲಿರುವದು. ದೊಡ್ಡ ದೊಡ್ಡ ವಿದ್ವಾಂಸರೂ ರವೀಂದ್ರರಂಥ ಕವಿಗಳೂ ಬೋಸರಂಥ ಶಾಸ್ತ್ರಜ್ಞರೂ ಎಲ್ಲ ಜನಾಂಗದ ತತ್ವವೇತ್ತಾರರೂ ಉದ್ಯೋಗಿಗಳೂ ಎಲ್ಲೆಡೆಯಲ್ಲಿ ಬಹುತರ ಜನರ ಕಣ್ಣಿಗೆ ಬೀಳಲಾರಂಭಿಸಿದ್ದಾರೆ. ಒಂದು ವೇಳೆ ಅವರನ್ನು ಕೆಲವರು ನೋಡದಿದ್ದರೂ ಜನರ ಮುಖಾಂತರವಾಗಿ, ಪತ್ರಿಕೆಗಳ ಮುಖಾಂತರವಾಗಿ, ವ್ಯಾಖ್ಯಾತರ ದ್ವಾರವಾಗಿ ಅವರ ಪ್ರಭಾವದ ಕಿರಣಗಳು ಜನತೆಯ ಹೃದಯದಲ್ಲಿ ಮೂಡುತ್ತಲಿರುವವು. ಇಂಥ ಸಮಯದಲ್ಲಿ ಸಾಮಾನ್ಯ ಶಿಕ್ಷಿತರಿಗೆ ಯಾರೂ ಗೌರವ ಮಾಡುವದಿಲ್ಲ. ಆದದರಿಂದ ಸಾಮಾನ್ಯ ಶಿಕ್ಷಣ ಹೊಂದಿ ಜನತೆಯಲ್ಲಿ ಮೊದಲಿನಂತೆ ಗೌರವದಿಂದ ಬೆಳಗುವೆನೆಂಬ ನಂಬಿಗೆಯು ಶಿಕ್ಷಿತರಿಗೆ ಇಲ್ಲದಾಗಿದೆ.

ಎರಡನೆಯದು, ಸರಕಾರದ ಚಾಕರಿ—ಮೊದಮೊದಲು ಸ್ವಲ್ಪ ಸ್ವಲ್ಪ ಕಲಿತವರು ಶ್ರೇಷ್ಠ ಕೆಲಸಗಳನ್ನು ಮಾಡಿ ಮಾನವನ್ನೂ ಧನವನ್ನೂ ಸಂಪಾದಿಸಿದರು. ತೀರ ಕಡಿಮೆ

ಕಲಿತವರು ಸಹ ಮೈ ಮಣ್ಣಾಗದೆ ಹಸನಾಗಿ ತಮ್ಮ ಪ್ರಪಂಚರಥವನ್ನು ಸಾಗಿಸುವದು ಶ್ರಮಜೀವಿಗಳ ಕಣ್ಣಿಗೆ ಬಿದ್ದಿತು. ಮುಂದೆ ಅವರೆಲ್ಲರೂ ಯತ್ನಿಸಿ ಅದಕ್ಕೇ ಮುಗಿ ಬೀಳಲು ಅವೆಲ್ಲ ಸ್ಥಳಗಳು ತುಂಬಿ ಹೆಚ್ಚಾದವು. ಶಿಕ್ಷಿತರಿಗೆ ಶ್ರಮಜೀವಿಗಳ ಕೆಲಸವು ಬಾರದ ಹಾಗಿರುವುದರಿಂದ ಕೆಲಕೆಲವರಂತೂ ತೀರ ನಿಕೃಷ್ಟ ಸ್ಥಿತಿಗೆ ಒಳಗಾಗಿರುವರು. ಒಂದೊಂದು ಪ್ರಸಂಗದಲ್ಲಿ ಹೆಚ್ಚು ಜಾಣನು ಸುಮ್ಮನೆ ಕುಳಿತು, ಅವನಿಗಿಂತ ತೀರ ಕಡಿಮೆ ತರಗತಿಯವನು ಹೆಚ್ಚಿನ ಸ್ಥಳದಲ್ಲಿ ವಿರಾಜಮಾನನಾಗಿರಲು, ಮೊದಲಿನವನಿಗೆ ಉಮ್ಮಳ ಮಾತ್ರ ತಪ್ಪದೆ ಇರುವ ಸ್ಥಿತಿಯು ಒದಗಿರುವದು. ಇಂಥವರೆಲ್ಲರು ಕೂಡಿ ಶಿಕ್ಷಣಕ್ಕೆ ಹೆಸರಿಡತೊಡಗಿದ್ದಾರೆ. ಇದನ್ನೂ ಬಿಟ್ಟಿಲ್ಲ. ಇತ್ತ ಕಲಿಸುವದನ್ನೂ ಬಿಟ್ಟಿಲ್ಲ. ಈ ತರಹದ ವಿಚಿತ್ರ ಪರಿಸ್ಥಿತಿಯು ದೈವಯೋಗದಿಂದ ಒದಗಿರುವದು.

ಸಣ್ಣ ಸಣ್ಣ ಉದ್ದೇಶದಿಂದ ಯಾವದೇ ಕೆಲಸ ಮಾಡಿದರೂ ಇದೇ ಸ್ಥಿತಿಯಾಗುತ್ತದೆಂಬ ಪಾಠವನ್ನು ಇವರಿಂದ ಕಲಿಯಬಹುದಾಗಿದೆ.

ಈ ಸ್ಥಿತಿಯ ಪರಿಣಾಮವು ಶಿಕ್ಷಣಸಂಸ್ಥೆಗಳ ಮೇಲೆ ಪರಿಣಮಿಸುತ್ತದೆ. ಕೆಲವು ವರ್ಷಗಳ ಪೂರ್ವದಲ್ಲಿ ಪ್ರೊ. ಕಿಲ್‌ಪಾಟ್ರಿಕ್ ಎಂಬ ಹೆಸರಿನ ಸದ್ಗೃಹಸ್ಥರು ಹಿಂದುಸ್ಥಾನದ ತುಂಬ ಸಂಚರಿಸಿ ಎಲ್ಲ ಶಿಕ್ಷಣ ಸಂಸ್ಥೆಗಳನ್ನು ನೋಡಿಕೊಂಡು ಬಂದರು. ಅವರು ನ್ಯೂಯಾರ್ಕ ಶಹರದ 'ಟೀಚರ್ಸ ಕಾಲೇಜ' ಎಂಬ ಪ್ರಸಿದ್ಧ ಸಂಸ್ಥೆಯಲ್ಲಿ ಕೆಲಸ ಮಾಡಿದ ಅನುಭವವುಳ್ಳವರು. ಇಂಥ ಮಹನೀಯರನ್ನು ಕುರಿತು ನಮ್ಮಲ್ಲಿಯ ಶಿಕ್ಷಣಸಂಸ್ಥೆಗಳು ಹ್ಯಾಗಿರುವವು? ಎಂದು ವಿದ್ಯಾರ್ಥಿಗಳು ಪ್ರಶ್ನಮಾಡಿದರು. ಅದಕ್ಕವರು ಅಂದದ್ದೇನಂದರೆ "ಸಂಸ್ಥೆಗಳು ನೆಟ್ಟಗವೆ, ಜನರಲ್ಲಿ ಉತ್ಸಾಹವಿದೆ, ಶಿಕ್ಷಕರು ಸಮರ್ಥರಿದ್ದಾರೆ, ವಿದ್ಯಾರ್ಥಿಗಳು ಬುದ್ಧಿವಂತರಿದ್ದಾರೆ; ಆದರೆ ವಿದ್ಯಾರ್ಥಿಗಳು ಯದೃಚ್ಛೆಯಿಂದ ಕೆಲಸಮಾಡುವರು" ಇತ್ಯಾದಿ.

ಯದೃಚ್ಛೆಯ ಕೆಲಸವೆಂದರೆ ಮಾಡತಕ್ಕದ್ದೆಂದು ಮಾಡೋಣ, ಎಂಬರ್ಥ; ಏನನ್ನು ಕಲಿಯುವೆವು, ಯಾತಕ್ಕಾಗಿ ಕಲಿಯುವೆವು, ಎಂಬದನ್ನು ತಿಳಿಯದೆ ಇರೋಣ. ಶಿಕ್ಷಕನ ಗುಣಗಳಿಲ್ಲದೆ ಶಿಕ್ಷಕನಾಗೋಣ. ಒಲವಿಲ್ಲದೆ ಏನಾದರೊಂದು ಸಂಗತಿಯನ್ನು ಅಭ್ಯಸಿಸೋಣ ಇತ್ಯಾದಿ.

ಈ ರೀತಿಯಾದದರಿಂದಲೇ ಬಾಲಕ, ಪಾಲಕ, ಶಿಕ್ಷಕತ್ರಯರಲ್ಲಿ ಸಂಬಂಧವು ತಪ್ಪಿಹೋಗಿದೆ. ಇವರೆಲ್ಲರು ಒಬ್ಬರೊಬ್ಬರ ಮೇಲೆ ಹರಿದು ಬೀಳುತ್ತಿರುವರು. ಒಬ್ಬರೊಬ್ಬರ ವಿಷಯವಾಗಿ ಮತ್ತೊಬ್ಬರಿಗೆ ಆದರಬುದ್ಧಿಯೂ ಸಹಾನುಭೂತಿಯೂ ದಿವಸ ದಿವಸಕ್ಕೆ ಕಡಿಮೆಯಾಗುತ್ತ ನಡೆದಿರುವದು.

ಜನತೆಯ ತಲೆತುಂಬ ವಿಚಾರಗಳು ಮಾತ್ರ ತುಂಬಿರುವವು. ಏನುಕಲಿತರೂ ಕಡಿಮೆ, ಎಷ್ಟು ಓದಿದರೂ ಕಡಿಮೆ, ಏನು ಬರೆದರೂ ಕಡಿಮೆ, ಏನುಮಾಡಿದರೂ ಯಾರೂ ಮೆಚ್ಚುವಂತಿಲ್ಲ, ಎಂಬ ಸ್ಥಿತಿಯೂ ಒದಗಿರುವದು.

ಆದದರಿಂದ ನಿಜವಾದ ಉದ್ದೇಶಬಿಟ್ಟು ಪೊಳ್ಳು ಉದ್ದೇಶಗಳಿಂದ ಕಲಿತರೆ ಈ ಸ್ಥಿತಿಯುಂಟಾಗುವದೆಂದು ಗಟ್ಟಿಯಾಗಿ ಮತ್ತೊಮ್ಮೆ ಹೇಳಬಹುದು.

ಹಿಂದೆ ಅಮೇರಿಕನ್ ಸದ್ಗೃಹಸ್ಥರು ಅಭಿಪ್ರಾಯಪಟ್ಟಂತೆ ಶಿಕ್ಷಣಸಂಸ್ಥೆಗಳು ನೆಟ್ಟಗಿರುವವು. ವಿದ್ಯಾರ್ಥಿಗಳಾಗಲಿ, ಪಾಲಕರಾಗಲಿ, ಬೇಗನೆ ಅವುಗಳ ಉಪಯೋಗ ವನ್ನು ಸರಿಯಾಗಿ ಮಾಡಿಕೊಂಡು ಅಲ್ಲಿ ತನ್ನ ಒಲವನ್ನರಿತು ಬೇಗನೆ ಬೇರೆ ಉದ್ಯೋಗ ವನ್ನು ಕೈಕೊಂಡು ಯತ್ನಿಸಬೇಕು.

ಈಗ ಕೇವಲ ಕರ್ತವ್ಯದ ಕಾಲವಿರುವದು. ಬರಿ ಪುಸ್ತಕ, ಓದು, ವ್ಯಾಖ್ಯಾನ ಇವುಗಳ ಕಾಲವು ಹಿಂದೆ ಸರಿಯಹತ್ತಿರುವದು. ಹಸಿಬೆಯಲ್ಲಿ ಹಿಡಿಯತಕ್ಕಷ್ಟು ಹಿಡೀತೇ ಹೊರತು ಹೆಚ್ಚು ಹಿಡಿಯಲಾರದು. ಹಾಗೆ ಮಾಡಹೋದರೆ ಅದು ಹರಿದೀತೇ ಹೊರತು ಹೆಚ್ಚಿಗೆ ಫಲ ದೊರೆಯದು. ಅದರಿಂದ ವಿದ್ಯಾರ್ಥಿಗಳು ಹೆಚ್ಚಿನ ಮಹತ್ವಾಕಾಂಕ್ಷೆಗಳ ಹವ್ಯಾಸಕ್ಕೆ ಬಿದ್ದು ಹರಿದಾಡದೆ ಜಗತ್ತಿನ ಉಪಯೋಗ ಮಾಡಿಕೊಳ್ಳುತ್ತ ತಮ್ಮ ಸುಧಾ ರಣೆಯಲ್ಲಿಯೇ ತಾವು ಮುಳುಗಬೇಕು. ತಂತಿಯ ಮೇಲೆ ನಡೆಯುವವನು ತನ್ನ ತೋಲಿಗೆ ಅನುಸರಿಸಿ ಕೈಗೋಲನ್ನು ಕೆಳಗೂ ಮೇಲೆಯೂ ಮಾಡುವಂತೆ ತನ್ನ ಪರಿ ಸ್ಥಿತಿಗೂ ಒಲವಿಗೂ ಅನುಸರಿಸಿ ಶಿಕ್ಷಣ ಪಡೆದು ಕರ್ತವ್ಯನಿಷ್ಠನಾಗಬೇಕು. ಅಂದರೆ ಅವನಿಗೆ ನಿಜವಾದ ಶಿಕ್ಷಣದ ಧ್ಯೇಯದ ದಾರಿಯು ದೊರೆಯುವದು.

ಪೃಥ್ವಿಯ ಮೇಲಿನ ದೊಡ್ಡ ದೊಡ್ಡ ದೇಶಗಳೂ ಪ್ರತಿ ಚೌ. ಮೈಲಿಗೆ ಇರುವ ಜನವಸತಿಯ ದಟ್ಟಣೆಯೂ.

ದೇಶ.	ಚೌ. ಮೈಲು	ಈಗಿನ ಜನಸಂಖ್ಯೆ	೧ ಚೌ. ಮೈಲಿಗೆ ಇರುವ ಜನರು
ಕಾನಡಾ	೩೬೩೯೧೦	೯೫ ಲಕ್ಷ	೩.೩
ಯುನಾಯಿಟೆಡ್ ಸ್ಟೇಟ್ಸ ಅಮೇರಿಕಾ	೩೭೪೩೫೩೦	೧೦ತ್ರಿ ಕೋ.	೩೧೫
ಜಪಾನ	೨೬೦೭೩೮	೭ಕ್ಕಿ ಕೋ.	೨೯೫
ಚೀನ	೫೪೪೫೯೮೦	೪೩ತ್ರಿ ಕೋ.	೮೦
ಇಂಡಿಯಾ	೧೭ ಲಕ್ಷ	೩೫ತ್ರಿ ಕೋ.	೨೦೯
ಇಂಗ್ಲಂಡವೇಲ್ಸ	೫೮೧೯೫	೩ಕ್ಕಿ ಕೋ.	೬೫೨

ಸಿಂಹಳದ್ವೀಪದ* ವಿಶೇಷ ವರ್ಣನೆ

ಹಿಂದೆ (೧೯೩೧ ನೇ ಅಗಸ್ಟ ತಿಂಗಳ ಸಂಚಿಕೆಯಲ್ಲಿ) ಇದೇ ವಿಷಯವು ಬರೆಯಲ್ಪಟ್ಟಿದ್ದಿತು. ಅದನ್ನು ಇಲ್ಲಿ ಪೂರ್ಣಮಾಡಿದೆ.

ಇತಿಹಾಸ ಭೂಗೋಲ ವಿಷಯಗಳು ಪರಸ್ಪರ ಸಂಬಂಧಿಸಿವೆ. ಸಿಂಹಲದ್ವೀಪದಲ್ಲಿ ಸಿಂಹಳೀ ಭಾಷೆಯಲ್ಲಿರುವ ವಾಙ್ಮಯಗಳೇ ಇತಿಹಾಸಗಳಾಗಿವೆ. ಅಲ್ಲಿಯ ಭೂಭಾಗದಲ್ಲಿಯ ಗುರುತುಗಳೇ ಸ್ಮಾರಕಗಳಾಗಿವೆ. ದಂತಕಥೆಗಳು ಸಹ ಆಧಾರಗಳಾಗಿವೆ. ಅವೆಲ್ಲ ನಮ್ಮಲ್ಲಿಯ ರಾಮಾಯಣ ಗ್ರಂಥಕ್ಕನುಸರಿಸಿಯೇ ಅವೆ; ಆದರೆ ನಮ್ಮ ರಾಮಾಯಣ ಗ್ರಂಥದ ಅಸ್ತಿತ್ವವು ಸಹ ಅವರಿಗೆ ಗೊತ್ತಿರುವದಿಲ್ಲ.

ವೆದ್ದಾ ಜನಾಂಗ— ವೆದ್ದಾ ಜನಾಂಗದವರೇ ರಾವಣ ವಂಶದವರು, ಅಂದರೆ ಪುರಾಣ ಕಾಲದ ರಾಕ್ಷಸ ವಂಶದವರು. ಅವರು ಈಗಲೂ ಉಳಿದ ಜನರೊಳಗೆ ಇನ್ನೂ ಕೂಡಿಲ್ಲ, ಕೆಲವರು ಸ್ವಲ್ಪ ಸುಧಾರಿಸಿದ ಸ್ಥಿತಿಯಲ್ಲಿದ್ದರೂ ಗಡ್ಡೆಗೆಣಸುಗಳೂ ಮೀನುಗಳೂ ಅವರ ಆಹಾರಗಳಾಗಿ ಈವರೆಗೂ ಉಳಿದವೆ. ಅವರು ಕೋಲಂಬೋದಿಂದ ೧೧೦ ಮೈಲುಗಳ ಮೇಲೆ ಮಹ್ಯಂಗಣವೆಂಬ ಪ್ರದೇಶದಲ್ಲಿ ವಿಶೇಷವಾಗಿ ವಾಸಿಸುತ್ತಾರೆ. ಇವರು ಕಪ್ಪು ಬಣ್ಣದವರೂ ಆಜಾನುಬಾಹುಗಳೂ ಬಲಶಾಲಿಗಳೂ ಇರುವರು. ಇವರು ತಮ್ಮ ತಲೆಕೂದಲನ್ನು ಗಂಟಿಕ್ಕುವದಿಲ್ಲ. ಎಂದೂ ಸ್ನಾನ ಮಾಡುವದಿಲ್ಲ. ಇವರ ಧ್ವನಿಯು ಗಂಭೀರವೂ ಭಯಂಕರವೂ ಅದೆ. ಇವರು ಹೆಣವನ್ನು ನದಿಯಲ್ಲಿ ಬಿಸುಡುವರು. ಅವರಲ್ಲಿ ಕೆಲವು ಧಾರ್ಮಿಕ ಭಾವನೆಗಳು ಅವೆ; ಅವಕ್ಕನುಸರಿಸಿಯೇ ಅವರು ನಡೆಯುವರು. ಎಂದೂ ತಪ್ಪುವದಿಲ್ಲ; ಸತ್ಯಾಚರಣೆಗೆ ಮೆಚ್ಚುವರು. ಅವರ ಕುಟುಂಬದಲ್ಲಿ ಯಾರಿಗಾದರೂ ಜಡ್ಡು ಆದರೆ ಹಿರಿಯನು ದೇವತಾ ಪ್ರೀತಿಗೋಸ್ಕರ ಕುಣಿಯುತ್ತಾನೆ. ಇವರಲ್ಲಿಯೇ ತೀರ ಪರ್ವತವಾಸಿಗಳಿಗೆ ಬಟ್ಟೆಗಳ ಅರಿವೇ ಇಲ್ಲ. ಈ ಜಾತಿಯವರು ಓಡುವ ಮೃಗಗಳನ್ನು ಒಂದೇ ಬಾಣದ ಹೊಡೆತಕ್ಕೆ ಕೆಡಹುವರು. ಕಾಡುಪ್ರಾಣಿಗಳ ಬೇಟೆಯೇ ಇವರ ಮುಖ್ಯ ಉದ್ಯೋಗವು. ತೀರ ಗುಡ್ಡಗಾಡಿಗಳು 'ಬಿಂತಲೆ' ಎಂಬ ಹೆಸರಿನ ಪ್ರದೇಶದಲ್ಲಿ ವಾಸಿಸುವರು.

---

* ಜಯಕರ್ನಾಟಕದಿಂದ

ಗಣಿತಭಾಗ

ಲೇಖಕ:— ಶಾ. ರಾ. ಕುಲಕರ್ಣಿ, ಸವದತ್ತಿ

ಆಣೆ ಪೈಗಳಿಗೆ ದಶಾಂಶದಲ್ಲಿ ಸುಲಭರೂಪಕೊಡುವದು.

೧. ಹೇಳಿದ ಆಣೆಗಳ ೬ ಪಟ್ಟುಮಾಡಿ ಒತ್ತಟ್ಟಿಗೆ ಬರೆಯುಬೇಕು. ಬಳಿಕ ಅಣೆಗಳ ೨೫ ಪಟ್ಟುಮಾಡಿ ಮೊದಲಿನ ಸಂಖ್ಯೆಯು ಕೆಳಗೆ ಅದರ ಎಕ್ಕಂ ಸ್ಥಾನದಿಂದ ಆರಂಭಿಸಿ ಬರೆದು ಎರಡೂ ಸಂಖ್ಯೆಗಳನ್ನು ಕೂಡಿಸಬೇಕು. ಬಂದ ಬೇರೀಜಿನ ಬಲಗಡೆಯಿಂದ ಎಡಗಡೆಗೆ ನಾಲ್ಕು ಸ್ಥಾನಗಳನ್ನು ಬಿಟ್ಟು ದಶಾಂಶ ಚಿಹ್ನವನ್ನು ಎಳೆಯುಬೇಕು. ಅಂದರೆ ಹೇಳಿದ ಅಣೆಗಳಿಗೆ ದಶಾಂಶದಲ್ಲಿ ರೂಪಾಯಿಯು ರೂಪಕೊಟ್ಟಂತೆ ಅಗುವದು.

೨. ಮೇಲೆ ತೋರಿಸಿದ ರೀತಿಯು ೨ ರಿಂದ ೧೬ ಅಣೆಗಳವರೆಗೆ ಮಾತ್ರ. ಆದರೆ ಒಂದಾಣೆಗೆ ರೂಪಕೊಡಬೇಕಾದಾಗ ಬೇರೆ ರೀತಿಯುದೆ. ಹ್ಯಾಗಂದರೆ—

ಒಂದರ ೬ ಪಟ್ಟಿನ ಮುಂದೆಯೇ ಅದರ ೨೫ ಪಟ್ಟು ಬರೆದು ನಾಲ್ಕು ಸ್ಥಾನಗಳನ್ನು ಬಿಟ್ಟು ದಶಾಂಶ ಚಿಹ್ನವನ್ನು ಇಡಬೇಕು.

ಉದಾ—೧ನೇದಕ್ಕೆ:–೧೫ ಆಣೆಗಳಿಗೆ ರೂಪಾಯಿಯ ರೂಪವನ್ನು ದಶಾಂಶದಲ್ಲಿ ಕೊಡುವದು.

೧೫×೬=೯೦

೧೫×೨೫=೩೭೫

೯೦

+೩೭೫ ಹಿಂದೆ ಹೇಳಿದಂತೆ ಸಂಖ್ಯೆಯನ್ನು ಬರೆದುಕೊಂಡು ಕೂಡಿಸೋಣ.

೯೩೭೫ ನಾಲ್ಕು ಸ್ಥಾನ ಬಿಟ್ಟು ದಶಾಂಶ ಚಿಹ್ನವನ್ನು ಬರೆಯಲು

·೯೩೭೫ ಆಯಿತು. ಇದೇ ಉತ್ತರವು.

೨ನೇದಕ್ಕೆ:— ಇನ್ನು ಒಂದಾಣೆಗೆ ರೂಪಾಯಿಯ ರೂಪವನ್ನು ದಶಾಂಶದಲ್ಲಿ ಕೊಡುವದು—

ಈ ಮೊದಲು ಹೇಳಿದಂತೆ—

೧×೬=೬

೧×೨೫=೨೫ ರೀತಿಯಲ್ಲಿ ಬರೆದಂತೆ ಒಂದರ ಮುಂದೆ ಒಂದನ್ನು ಬರೆಯಲು ೬೨೫ ಆಯಿತು. ಬಳಿಕ

(·೦೬೨೫) ನಾಲ್ಕು ಸ್ಥಾನಬಿಟ್ಟು ದಶಾಂಶ ಚಿಹ್ನ ಕೊಡಬೇಕು.

(.೦೬೨೫) ಉತ್ತರ.

ಪೈಗಳಿಗೆ ರೂಪಾಯಿಯ ರೂಪವನ್ನು ಕೊಡುವದು.

(ಅ) ಒಂದು ಪೈ ಹೊರತಾಗಿ ಉಳಿದ ಪೈಗಳಿಗೆ ಹೇಳಿದಾಗ್ಗೆ—

ದಶಾಂಶ ಚಿಹ್ನದ ಮುಂದೆ ಒಂದು ಶೂನ್ಯವನ್ನಿಟ್ಟು ಅದರ ಮುಂದೆ ಹೇಳಿದ ಪೈಗಳ ೫೨ ಪಟ್ಟನ್ನು ಬರೆ. ಅದರ ಮುಂದೆ ಹೇಳಿದ ಪೈಗಳ ೮ ಪಟ್ಟನ್ನು ೪ ಪೈಯೊಳಗೆ ೧, ೮ ಪೈಯೊಳಗೆ ೨, ಹೀಗೆ ಅದರಲ್ಲಿ ಕೂಡಿಸಿ ಬರೆ. ಅಂದರೆ ಹೇಳಿದ ಪೈಗಳಿಗೆ ರೂಪಾಯಿಯು ರೂಪವನ್ನು ದಶಾಂಶದಲ್ಲಿ ಕೊಟ್ಟಂತೆ ಆಯಿತು.

(ಬ) ಒಂದು ಪೈಗೆ ರೂಪಾಯಿಯು ರೂಪ ಕೊಡುವಾಗ ದಶಾಂಶ ಚಿಹ್ನದ ಮುಂದೆ ಎರಡು ಪೂಜಿಗಳನ್ನು ಬರೆದು ಅದರ ಮುಂದೆ ೫೨ ನ್ನೂ ಅದರ ಮುಂದೆ ಒಂದು ಶೂನ್ಯ ಮತ್ತು ೮ ನ್ನೂ ಬರೆ. ಅಂದರೆ ಇಚ್ಛಿತ ರೂಪವು ಬರುವದು.

ಉದಾ— (ಅ) ಕ್ಕೆ ೧೧ ಪೈಗೆ ದಶಾಂಶದ ರೂಪಕೊಡುವದು.

ಮೇಲಿನ ರೀತಿಯಂತೆ.

೧೧×೫೨=೫೭೨

೧೧×೮=೮೮+೩ ೧೧ ಇದು ೪ ರ ೩ ಪಟ್ಟಿನ ಬಳಿಗೆ ಇದ್ದದರಿಂದ ಮೇಲೆ ಬರೆದಂತೆ ೩ ಕೂಡಿಸು.

೫೭೯೧ ಇದರ ಹಿಂದೆ ಶೂನ್ಯವಿಟ್ಟು ದಶಾಂಶ ಚಿಹ್ನ ಬರೆ.

.೦೫೭೯೧ ರೂ. ಆಯಿತು, ಇದೇ ಉತ್ತರವು.

ಉದಾ: (ಬ) ಕ್ಕೆ—೧ ಪೈಗೆ ದಶಾಂಶದಲ್ಲಿ ರೂಪಾಯಿಯ ರೂಪಕೊಡುವಾಗ-

೧×೮

೧×೫೨ ಇನ್ನು ರೀತಿಯಲ್ಲಿ ಹೇಳಿದಂತೆ ಇಡಲಾಗಿ

.೦೦೫೨೦೮ ರೂ. ಉತ್ತರ.

ಮೇಲೆ ಹೇಳಿದ ಕೃತಿಗಳು ಸುಲಭವಾಗಿ ಅವೆ; ಆದರೆ ರೀತಿಯ ಉಪಪತ್ತಿಯನ್ನು ಯಾರಾದರೂ ಬರೆಯಬಹುದು.

ಪ್ರಸಿದ್ಧ ಮೊಗಲ ಬಾದಶಾಹಿಗಳು

ಲೇಖಕ :—ವಿ. ಬಸಟ್ಟೆಯ್ಯನವರು ೫. ಮಾ. ಪ್ರಾ. ಸ್ಕೂ. ಧಾರವಾಡ.

ಮೊಗಲಬಾದಶಾಹಿಗಳಲ್ಲಿ ಅಕಬರನು ಶ್ರೇಷ್ಠನು. ಅಕಬರ ಬಾದಶಹನ ಮಗನಾದ ಜಹಾಂಗೀರ ಬಾದಶಹನ ಚಿಕ್ಕಂದಿನ ಕಾಲದಲ್ಲಿ ಸಾಮ್ರಾಜನು ಮಗನ ಶಿಕ್ಷಣದ ವ್ಯವಸ್ಥೆಯನ್ನು ಸರಿಯಾಗಿ ಇಟ್ಟಿದ್ದನು. ಜಹಾಂಗೀರನು ಧರ್ಮಶಾಸ್ತ್ರ-ರಾಜನೀತಿ ಶಾಸ್ತ್ರಗಳಲ್ಲಿ ಪಾರಂಗತನಿದ್ದನೆಂದು ಆತನು ಬರೆದಿಟ್ಟ ಲೇಖಗಳಿಂದ ತಿಳಿಯುವಂತೆ ಅದೆ.

ಜಹಾಂಗೀರ ಬಾದಶಹನು ತನ್ನ ರಾಜ್ಯಾರೋಹಣದ ಸಂಬಂಧವಾಗಿ ಬರೆದಿಟ್ಟ ವಿಷಯದ ಅಭಿಪ್ರಾಯವು:—

"ನಾನು ೧೬೦೫ನೆಯ ಇಸವಿಯ ಅಕ್ಟೋಬರ ತಿಂಗಳಿನ ೧೧ನೇ ತಾರೀಖು ಗುರುವಾರ ದಿವಸ ಪ್ರಾತಃಕಾಲದಲ್ಲಿ ಆಗ್ರಾಪಟ್ಟಣದಲ್ಲಿ ರಾಜ್ಯಾಭಿಷಿಕ್ತನಾದೆನು. ನಶ್ವರ ಹಾಗು ಕ್ಷಣಭಂಗುರ ಮಾನವೀಸಂಪತ್ತಿಯ ಮಾಯೆಯಿಂದಲೂ ಮೋಹಾಂಧತೆಯಿಂದಲೂ ಇದು ಚಿರಕಾಲಿಕ ಸುಖವೆಂದೂ ಐಶ್ವರ್ಯವೆಂದೂ ಬಗೆದು ಪಟ್ಟವನ್ನೇರಿದೆನು. ಈ ವಿಷಯವಾಗಿ ಯಾರೂ ನನ್ನನ್ನು ಅಲ್ಲಗಳೆಯಬಾರದು. ಕೇವಲ ಪರಮೇಶ್ವರನ ಆಜ್ಞೆಯೆಂದು ತಿಳಿದು ಪ್ರಜಾಪಾಲನವ್ರತವನ್ನು ಕೈಕೊಂಡಿದ್ದೇನೆ. ನಾನು ಸಿಂಹಾಸನವೇರುವದಕ್ಕೂ ಸೂರ್ಯೋದಯದ ಆರಕ್ತ ಪ್ರಭೆಯು ಪಸರಿಸುವದಕ್ಕೂ ಮೇಳುಬಿದ್ದದರಿಂದ ರಾಜ್ಯ ಸಮೃದ್ಧಿಯ ಶುಭಸೂಚಕ ಚಿಹ್ನವೆಂದು ಭಾವಿಸಿದೆನು. ಆದದರಿಂದಲೇ ಜಹಾಂಗೀರಬಾದಶಹಾ, ಜಹಾಂಗೀರಶಹಾ ಎಂಬ ಪೃಥ್ವೀವಿಜಯ ಸೂಚಕವಾದ ಉಪನಾಮಗಳನ್ನು ಧರಿಸಿಕೊಂಡೆನು" ಇತ್ಯಾದಿ.

ಮತ್ತೊಮ್ಮೆ ರಾಜನ ಕರ್ತವ್ಯದ ವಿಷಯವಾಗಿ ಹೀಗೆ ಬರೆದಿದ್ದಾನೆ. ಅದೇನಂದರೆ—

"ತೆರಿಗೆಯನ್ನು ಕೊಡುವದು ಪ್ರಜೆಗಳ ಕರ್ತವ್ಯವಾಗಿದ್ದಂತೆ ಪ್ರಜಾ ಸಂರಕ್ಷಣೆಯು ರಾಜನ ಕರ್ತವ್ಯವಾಗಿರುವದು. ಇದಕ್ಕನುಸರಿಸಿ ನಾನು ಪ್ರಜೆಗಳಿಗೋಸ್ಕರ ಮಾಡಿದ ಕೆಲವು ಅನುಕೂಲತೆಗಳಿಂದ ಕೃತಕೃತ್ಯನಾದೆನೆಂದು ತಿಳಿಯೆನು; ಪ್ರಜೆಗಳ ಸುಖದ ಯಾವ ಕೆಲಸಗಳು ನನ್ನಿಂದ ಮಾಡಲಿಕ್ಕಾಗದೆ ಉಳಿದಿರುವವೋ ಅಥವಾ ಯಾವವು ನನ್ನ ಯೋಗ್ಯತೆಗೆ ಮೀರಿರುವವೋ ಅಂಥವುಗಳಿಗಾಗಿ ನಾನು ಜವಾಬುದಾರನಾಗಿದ್ದೇನೆ.

"ಅನುಭವಿಕನೂ, ಸದಾಚಾರಸಂಪನ್ನನೂ, ಪಾಪಭೀರುವೂ ಆದಂಥವನನ್ನೇ ಮಂತ್ರಿಯನ್ನಾಗಿ ನಿಯಮಿಸಿಕೊಳ್ಳಬೇಕೆಂಬದಾಗಿ ರಾಜನೀತಿಯುಂಟು. ಇಂಥ ಯೋಗ್ಯನಾದ ಮಂತ್ರಿಯ ಆಲೋಚನೆಗಳ ಯೋಗ್ಯತೆಯನ್ನು ತಿಳಿಯಲು ಶಕ್ತನಾದವನೇ ಸಿಂಹಾಸನಾಧಿಷ್ಠಿತನಾಗಬೇಕೆಂದು ರಾಜನೀತಿಯಲ್ಲಿ ಹೇಳಿದೆ. ಯಾವ ಪ್ರಜೆಗಳ ಸಂರಕ್ಷಣೆಗಾಗಿ ದೇವರು ನನ್ನನ್ನು ನಿಯೋಜಿಸಿರುವನೋ ಆ ಪ್ರಜೆಗಳ ಕಲ್ಯಾಣ ಯತ್ನಕ್ಕಾಗಿ ದೇವರು ನನಗೆ ಸದ್ಬುದ್ಧಿಯನ್ನೀಯಲೆಂದು ಯಾವಾಗಲೂ ಆತನನ್ನು ಬೇಡಿಕೊಳ್ಳುತ್ತೇನೆ. ರಾಜದಂಡವಾಗಲಿ ರಾಜಮುಕುಟವಾಗಲಿ ವಿಶಾಲ ಸಾಮ್ರಾಜ್ಯವಾಗಲಿ ರಾಜನ ನಿಜವಾದ ಸೊತ್ತಲ್ಲ; ಪ್ರಜೆಗಳ ನಿರಂತರ ಶಾಂತಿ-ಸೌಖ್ಯ-ತುಷ್ಟಿ-ಪುಷ್ಟಿಗಳೇ ರಾಜನ ಇಡುಗಂಟಾಗಿರುವವು. ಯಾವ ರಾಜನ ಪ್ರಜೆಗಳು ಸುಖಿಗಳಾಗಿರುವರೋ ಅವನು ಚಿಕ್ಕವನಿದ್ದರೂ

ಶ್ರೇಷ್ಠನೇ ಸರಿ. ಈ ತತ್ವವನ್ನು ಧ್ಯೇಯವನ್ನಾಗಿಟ್ಟುಕೊಂಡು ಪ್ರಜೆಗಳ ಕಲ್ಯಾಣಕ್ಕಾಗಿ ನನ್ನಿಂದ ಸಾಧ್ಯವಿದ್ದಮಟ್ಟಿಗೆ ಜೀವವಿರುವವರೆಗೂ ಹೆಣಗುವೆನು." ತನ್ನ ತಂದೆಯ ವಿಷಯವಾಗಿ ಹೀಗೆ ಬರೆದಿಟ್ಟಿರುವನು.

"ಅಕಬರನು ಎತ್ತರವಾಗಿ ಕೆಂಪು ವರ್ಣದವನಿದ್ದನು. ಆತನು ಕೂಡಿದ ಹುಬ್ಬುಗಳುಳ್ಳವನಾಗಿದ್ದನು. ಕಣ್ಣುಗಳು ಕಪ್ಪಾಗಿ ತೇಜಃಪುಂಜವಾಗಿದ್ದವು. ಆತನು ನೋಡುವವರಿಗೆ ಪ್ರತಾಪಶಾಲಿಯಾಗಿ ತೋರುತ್ತಿದ್ದನು. ನಿಜವಾಗಿಯೂ ಹಾಗೆಯೇ ಇದ್ದನು. ಆತನ ಮೂಗಿನಮೇಲೆ ಎಳ್ಳಿನಷ್ಟು ಗೆಳತಿಯು (ಕಪ್ಪು ಕಲೆಯು) ಇತ್ತು. ಈ ಚಿಹ್ನವಿದ್ದವರು ವಿಲಕ್ಷಣ ಸೌಖ್ಯ ಐಶ್ವರ್ಯಗಳನ್ನು ಅನುಭೋಗಿಸಿ ಅದ್ವಿತೀಯ ಕೀರ್ತಿಶಾಲಿಗಳಾಗುವರೆಂದು ಸಾಮುದ್ರಿಕ ಲಕ್ಷಣ ಶಾಸ್ತ್ರದಲ್ಲಿ ಹೇಳಿದಂತೆ ನಿಜವಾಗಿ ಸಾರ್ಥಕವೇ ಆಯಿತು. ಒಂದುದಿನ ಆತನು ಬೊಕ್ಕಸದಲ್ಲಿದ್ದ ಬಂಗಾರವನ್ನು ತೂಗಲಿಕ್ಕೆ ಕಿಲೀಜಖಾನನಿಗೆ ಅಪ್ಪಣೆ ಕೊಡಲು ಎಷ್ಟೋ ಜನರು ತೂಗಿದರೂ ತೀವ್ರ ಮುಗಿಯಲಿಲ್ಲವೆಂದು ಅವನು ಅರಸನಿಗೆ ಉತ್ತರ ಕೊಟ್ಟನಂತೆ! ಅವನ ಆನೆಯ ಲಾಯವಾದರೂ ಹಾಗೆಯೇ ಇದ್ದಿತು. ಅವುಗಳ ಪ್ರತಿದಿನದ ವೆಚ್ಚವು ಲಕ್ಷಾವಧಿ ರೂಪಾಯಿಯಾಗಿದ್ದಿತು. ಪರಮೇಶ್ವರನನ್ನು ಅನನ್ಯಭಕ್ತಿಯಿಂದ ಬೇಡಿಕೊಳ್ಳದ ದಿವಸವು ಒಂದಾದರೂ ಆತನ ಆಯುಷ್ಯದಲ್ಲಿ ದೊರೆಯಲಿಕ್ಕಿಲ್ಲ. ದೇವರನ್ನು ಕುರಿತು ಯಾವಾಗಲೂ 'ದೇವರೇ, ಯಾವಾಗಲೂ ದೃಷ್ಟಿಯಲ್ಲಿಯೂ ಹೃದಯದಲ್ಲಿಯೂ ನಿನ್ನ ನಿಕಟಸಂಬಂಧವಿರಲಿ' ಎಂದು ಬೇಡಿಕೊಳ್ಳುತ್ತಿದ್ದನು. ಅವನು ಯಾವ ಧರ್ಮದವರನ್ನೂ ಪರಕೀಯರೆಂದು ಭಾವಿಸಲಿಲ್ಲ. ಎಲ್ಲರಲ್ಲಿಯೂ ಸಹಾನುಭೂತಿಯುಳ್ಳವನಾಗಿದ್ದನು. ಪ್ರತಿಯೊಂದು ಧರ್ಮದಲ್ಲಿ ಗ್ರಾಹ್ಯವಾದ ಚಲೋ ಮಾತುಗಳಿರುವವೆಂದು ಬಗೆದು ಅವುಗಳನ್ನು ತಿಳಿದುಕೊಳ್ಳುವದು ಪ್ರತಿಯೊಬ್ಬನ ಕರ್ತವ್ಯವೆಂದು ಅನ್ನುತ್ತಿದ್ದನು. ತನಗೆ ಅನುವು ದೊರೆತಾಗ ಬೇರೆ ಬೇರೆ ಧರ್ಮಪಂಡಿತರಕೂಡ ಸಾರಗ್ರಹಣಕ್ಕಾಗಿ ವಾದವಿವಾದ ಮಾಡುತ್ತಿದ್ದನು. ಒಂದೊಂದು ದಿನ ರಾತ್ರಿ ಬೆಳಗಾಗುವವರೆಗೂ ಪಂಡಿತರ ಕೂಡ ವಾದವಿವಾದದಲ್ಲಿ ಮಗ್ನನಾಗಿರುತ್ತಿದ್ದನು. ಆತನು ಹಗಲು ಎಂದೂ ಮಲಗಲಿಲ್ಲ.

"ನನ್ನ ತಂದೆಯು ಸಾಹಸಿಯೂ ಆಗಿದ್ದನು. ಒಂದು ಆನೆಯ ಮೇಲೆ ನಿಂತು ಮತ್ತೊಂದು ಆನೆಗೆ ಅನುಮಾನಿಸದೆ ಜಿಗಿಯುತ್ತಿದನು. ಯಾರಿಗೂ ಅಸುಗೊಳ್ಳದ ಒಂದು ಆನೆಯಮೇಲೆ ಗಿಡದಿಂದ ಹಾರಿ ಅಂಕುಶ ಪ್ರಹಾರದಿಂದ ಅದರ ಮದವನ್ನು ಇಳಿಸಿ, ಹೇಳಿದಹಾಗೆ ಕೇಳುವಂತೆ ಮಾಡಿದನು. ಈ ಸಾಹಸ ಗುಣಕ್ಕೆ ತಕ್ಕಂತೆ ಅತೀವ ಶಕ್ತಿ ಶಾಲಿಯೂ ಆಗಿದ್ದನು. ಹತ್ತು ಮಣ ಒಜ್ಜೆಯ ಕಬ್ಬಿಣದ ಸರಪಳಿಯನ್ನು ತನ್ನ ನಿತ್ಯದ ವ್ಯಾಯಾಮಕ್ಕಾಗಿ ಉಪಯೋಗಿಸುತ್ತಿದ್ದನು."

ಬಚ್ಚಿಡದೆ ಆತ್ಮವೃತ್ತಗಳನ್ನು ಬರೆದಿಡುವ ಜಹಾಂಗೀರ ಬಾದಶಹನ ನಿಸ್ಪೃಹತೆಯು ನಿಜವಾಗಿಯೂ ಸ್ತುತ್ಯವಾದದ್ದು.

' ಚೌಥ, ಸರದೇಶಮುಖಿ '

ಲೇಖಕ—ವಿ. ಸಾಕೀನಹಳ್ಳಿ

ಈ ಶಬ್ದಗಳ ಉಚ್ಚಾರದೊಡನೆಯೇ ದೇಶಗಳ ಸುಲಿಗೆಯೂ ಮರಾಟರ ಹಾವಳಿಯೂ ನೆನಪಾಗುವವು. ಚೌಥವೆಂಬ ಹೆಸರಿನಿಂದ ಎತ್ತುವ ಕರದ ವಿಷಯವಾಗಿ ಮತಭೇದವಿರುವದು. ಚೌಥದ ಮೂಲ ಕಲ್ಪನೆಯು ಶಿವಾಜಿಮಹಾರಾಜನಿಂದಲೇ ಉಂಟಾಯಿತೆಂದು ಜನರ ನಂಬಿಗೆಯಿದೆ. ಆದರೆ ಅದು ತಪ್ಪು.

ಮರಾಟರು ಬೈಲಿಗೆ ಬರುವ ಮೊದಲೇ ಧರಮಪುರದ ರಾಜನಾದ ಚೌಥೀಯಾ ಎಂಬವನು ಪೋರ್ತುಗೀಜರಿಂದ ಚೌಥವನ್ನು ಎತ್ತುತ್ತಿದ್ದನು. ಈ ಧರಮಪುರ ಮೊದಲಾದ ಸಂಸ್ಥಾನಗಳನ್ನೇ ಮುಂದೆ ಶಿವಾಜಿಮಹಾರಾಜನು ಗೆದ್ದಬಳಿಕ ಆ ಸಂಸ್ಥಾನಗಳ ರಾಜನೆಂಬ ಬಾಧ್ಯತೆಯಿಂದ ಪರಂಪರಾಗತವಾದ ಚೌಥವನ್ನು ದಮನದ ಪೋರ್ತುಗೀಜ ರೈತರಿಂದಲೂ ವಸಯಿ ಪರಗಣೆಯಿಂದಲೂ ಎತ್ತುವ ವಿಷಯವಾಗಿ 'ಪೀತಾಂಬರ ಶೇಣವಿ' ಎಂಬ ವಕೀಲನನ್ನು ಗೋವೆಗೆ ಕಳಿಸಿದ್ದನು.

ದಮನದ ಪೋರ್ತುಗೀಜ ರೈತರು ಪೋರ್ತುಗೀಜ ಸರಕಾರಕ್ಕೆ ತಿಳಿಸದೆ ಮೇಲಿನ ಕರವನ್ನು ಕೊಡುತ್ತಿರಬಹುದೆಂದು ಮೇಲಿನ ಉಲ್ಲೇಖದಿಂದ ತಿಳಿಯಬಹುದು; ಆದರೆ ಈ ಕರದ ವಿಷಯವಾಗಿ ಆದ ಒಪ್ಪಂದಗಳಿಂದಲೂ ಪ್ರಕಟನೆಗಳಿಂದಲೂ ಪೋರ್ತುಗೀಜ ಸರಕಾರವೇ ಚೌಥೀಯಾ ರಾಜನಿಗೆ ಕೆಲವು ಕರಾರುಗಳೊಡನೆ ಕೊಡುತ್ತಿದ್ದರೆಂದು ಗೊತ್ತಾಗುತ್ತದೆ.

೧೬೩೮ ನೆಯ ಇಸವಿಯಲ್ಲಿ ದಮನದ ಕ್ಯಾಪ್ಟನನಿಗೂ ಹಿಂದೂರಾಜನಿಗೂ ಆದ ಒಪ್ಪಂದದಲ್ಲಿ ಚೌಥಾಯಿಯ ಪ್ರಸ್ತಾಪವಿದೆ. ಮತ್ತೊಮ್ಮೆ, ಹಿಂದಕ್ಕೆ ೧೫೫೪ ನೆಯ ಇಸವಿಯಲ್ಲಿ ಆದ ಒಪ್ಪಂದದ ಮೇರೆಗೆ ಚೌಥಾಯಿ ವಿಷಯವು ಹಾಗೆಯೇ ಸ್ಥಿರವಾಗಿರತಕ್ಕದ್ದೆಂದು ಬರೆದದೆ. ೧೬೧೭ ನೆಯ ಇಸವಿಯಲ್ಲಿ ಅಸರಸೇಟಾದ ರಾಜನು ಪೋರ್ತುಗೀಜರಕೂಡ ವಕೀಲರ ಮುಖಾಂತರವಾಗಿ ಮಾತು ನಡೆಯಿಸಿದಂತೆ ಉಲ್ಲೇಖವಿದೆ.

೧೬೩೪ ನೆಯ ಇಸವಿಯಲ್ಲಿ ಗೋವೆಯ ವ್ಹಾಯಿಸರಾಯನು ಪೋರ್ತುಗಾಲದ ರಾಜನಿಗೆ " ದಮನ ಪರಗಣೆಯಲ್ಲಿಯ ದನಕರುಗಳನ್ನೂ ಮನುಷ್ಯರನ್ನೂ ಒಯ್ಯುಬಾರ

ದೆಂದೂ, ಕಳ್ಳರನ್ನು ಅಲ್ಲಿ ಇರಗೊಡಬಾರದೆಂದೂ ಸಾರಸೇಟಾ (ಅಸರಸೇಟಾ)ದ ಅರಸನಿಗೆ ಅಲ್ಲಿಯ ರೈತರು ತಮ್ಮ ವಿತ್ತಜೀವಿತಗಳ ರಕ್ಷಣೆಗಾಗಿ ಕರವನ್ನು ಕೊಡುತ್ತಾರೆ" ಎಂದು ಪತ್ರ ಬರೆದಿದ್ದಾನೆ.

೧೬೩೭ನೆಯ ಇಸವಿಯಲ್ಲಿ ಪೋರ್ತುಗೀಜರು ತಮ್ಮ ಪರಗಣೆಗಳಲ್ಲಿ ಪ್ರಕಟಿಸಿದ ಪ್ರಸಿದ್ಧ ಪತ್ರಿಕೆಯಲ್ಲಿ "ಇನ್ನುಮುಂದೆ ಚೌಥೀಯಾರಾಜನಿಗೆ ತಮ್ಮ ತಮ್ಮ ಗ್ರಾಮಗಳ ಹುಟ್ಟುವಳಿಯ ೪ ಭಾಗವನ್ನು ಚೌಥಾಯಿ ಕರವೆಂದು ಕೊಡಬಾರದು. ನಾವು ಗೊತ್ತು ಮಾಡಿದ ಕ್ರಮದಲ್ಲಿ ಚೌಥಾಯಿಯನ್ನು ರೈತರಿಂದ ಎತ್ತಿ, ದಮನಶಹರದಲ್ಲಿಯೂ ಪರಗಣೆಯ ತಾಲೂಕಿನ ಸ್ಥಳದಲ್ಲಿಯೂ ಸಂಗ್ರಹಿಸತಕ್ಕದ್ದು. ಬಳಿಕ ಅಕ್ಟೋಬರ ತಿಂಗಳಲ್ಲಿ ಅಲ್ಲಿಯ ಅಧಿಕಾರಿಗಳು ಚೌಥಾಯಿ ರಾಜನಕಡೆಯಿಂದ ಬಂದ ಅಧಿಕಾರಿಗೆ ಒಪ್ಪಿಸತಕ್ಕದ್ದು" ಎಂಬದಾಗಿ ಬರೆದಿದ್ದಾರೆ.

ಹಾಗು ಇನ್ನು ಮುಂದೆ "ಚೌಥವನ್ನು ಎತ್ತುವ ರಾಜನು ದಮನ ಪರಗಣೆಯಲ್ಲಿ ಕಳವು ದರೋಡೆಗಳಾಗದಂತೆ ಲಕ್ಷ್ಯವಿಡತಕ್ಕದ್ದು. ಅಕಸ್ಮಾತ್ತಾಗಿ ಕಳವು ದರೋಡೆಗಳಾದರೆ ಆ ಕಳ್ಳರು ಕಾಕರನ್ನು ಹಿಡಿದು ಗೋವೆ ಸರಕಾರಕ್ಕೆ ಒಪ್ಪಿಸತಕ್ಕದ್ದು. ಈ ವಿಷಯಕ್ಕೆ ತಪ್ಪಿದರೆ ಆದ ಹಾನಿಯನ್ನು ತುಂಬಿ ಕೊಡತಕ್ಕದ್ದು. ದಮನದ ಕಿಲ್ಲೇದಾರನಾಗಲಿ, ಗೋವೆಯ ವ್ಹಾಯಿಸರಾಯನಾಗಲಿ ಕರೆದಾಗ ಸೈನ್ಯಸಮೇತವಾಗಿ ಬಂದು ಸಾಹಾಯ್ಯಮಾಡತಕ್ಕದ್ದು. ಅಲ್ಲದೆ ನಿಮ್ಮ ಪೂರ್ವಜರು ನಡಕೊಂಡಂತೆ ಪೋರ್ತುಗೀಜರ ಕೂಡ ಮಿತ್ರತ್ವದಿಂದ ವರ್ತಿಸತಕ್ಕದ್ದು ಎಂಬದಾಗಿ ಚೌಥೀಯಾರಾಜನಿಗೆ ತಿಳಿಸಿದೆ" ಹೀಗೆಂದು ಪ್ರಸಿದ್ಧಪತ್ರಿಕೆಯಲ್ಲಿ ಪುರವಣಿಯಾಗಿ ಬರೆದಿದ್ದಾನೆ. ಈ ಸಂಗತಿಯಿಂದ ರಾಮನಗರದ ಚೌಥೀಯಾರಾಜನಾಗಲಿ, ಅಸರಶೇಟಾದ ಅರಸನಾಗಲಿ ಗೋವೆ ಸರಕಾರದ ಮಾಂಡಲಿಕರಾಗಿ, ಅವರ ರಾಜ್ಯದಲ್ಲಿ ಚೌಥಾಯಿಯನ್ನು ಎತ್ತುತ್ತಿದ್ದರೆಂದು ಗೊತ್ತಾಗುತ್ತದೆ. ೧೭೮೯ ರಲ್ಲಿ ವ್ಹಾಯಿಸರಾಯನು ಬರೆದ ಪತ್ರದಲ್ಲಿ ಈ ಚೌಥಾಯಿಗೆ ನಿವೃತ್ತಿವೇತನವೆಂಬ ಹೆಸರು ಕೊಟ್ಟಿದ್ದಾನೆ.

ಒಟ್ಟಾಗಿ ಹೇಳುವದೇನೆಂದರೆ, ಪೋರ್ತುಗೀಜ ಸರಕಾರದಿಂದ ಚೌಥೀಯಾರಾಜನಿಗಾಗಲಿ ಸರಸೇಟಾದ ಅರಸನಿಗಾಗಲಿ ಚೌಥವು ಸಿಗುತ್ತಿದ್ದಿತು. ಇದೇ ಪ್ರಕಾರ ಪೇಶವಾಯಿಗಳ ಕಾಲದಲ್ಲಿ ಕೋಳಿ ಅರಸನಿಗೂ ಭಿಲ್ಲರ ಒಡೆಯನಿಗೂ ರಾಜ್ಯದಲ್ಲಿ ಶಾಂತತೆಯನ್ನು ಇಡುವದಕ್ಕಾಗಿಯೂ ಪ್ರತಿಫಲರೂಪದಿಂದ ಚೌಥವು ದೊರೆಯುತ್ತಿದ್ದಿತು. ಮೇಲೆ ವರ್ಣಿಸಿದ ಚೌಥವು ಎರಡನೆಯವರ ರಾಜ್ಯದಲ್ಲಿ ಪೋಲೀಸ ಕೆಲಸಮಾಡಿ ತಲಬುಹೊಂಮವ ರೂಪದಲ್ಲಿದ್ದಿತೆಂದು ಹೇಳಬಹುದು.

ಶಿವಾಜಿ ಮಹಾರಾಜನು ಎತ್ತುವ ಚೌಥದ ಮಾದರಿಯು ಬೇರೆ ತರಹನಾಗಿದ್ದಿತು. ಅವನು ತಾನು ಗೆದ್ದ ರಾಜನಿಂದ ಇಲ್ಲವೆ ಎಡಬಲದ ಕಿಲ್ಲೆಗಳ ಒಡೆಯರಿಂದ ತನ್ನ ಬೊಕ್ಕಸಕ್ಕೆ ಯುದ್ಧದ ವೆಚ್ಚವೆಂದಾಗಲಿ, ಬೇರೆ ರೀತಿಯಿಂದಾಗಲಿ ಹಣವನ್ನು ತುಂಬಿಸಿಕೊಳ್ಳುತ್ತಿದ್ದನು. ಪೋರ್ತುಗೀಜರ ರಾಜ್ಯದಲ್ಲಿದ್ದ ಪದ್ಧತಿಯಿಂದಲೇ ಈ ಚೌಥ ಪದ್ಧತಿಯನ್ನು ಅರಿತಿದ್ದರೂ ಅದರ ತರಹವನ್ನೇ ಬೇರೆಯಾಗಿ ಮಾಡಿದನು.

ಆಗಿನ ಕಾಲದಲ್ಲಿ ಸುರತವು ವ್ಯಾಪಾರದ ದೊಡ್ಡ ಪಟ್ಟಣವಾಗಿದ್ದಿತು. ಸುರತಕ್ಕೆ ಹೋಗುವ ದಾರಿಯಲ್ಲಿ ರಾಮನಗರ, ಅಸರಸೇಟಾ, ಜವ್ಹಾರ ಇವೆಲ್ಲ ಸಂಸ್ಥಾನಗಳು ಇದ್ದವು. ಶಿವಾಜಿಮಹಾರಾಜನ ಗುಪ್ತ ಸಂಚುಗಾರರು ಒಳ್ಳೆಯ ನಿಷ್ಣಾತರಿದ್ದರು. ಅವರು ಪರರಾಜ್ಯದಲ್ಲಿಯ ಎಲ್ಲ ಸಂಗತಿಗಳನ್ನೂ ಮಾರ್ಗಗಳನ್ನೂ ಗೆಲ್ಲುವ ರೀತಿಗಳ ಮರ್ಮವನ್ನೂ ಸಹ ಹೇಳುತ್ತಿದ್ದರು. ಅವರಿಂದ ಚೌಥದರೀತಿ, ಸುರತದ ಮಾರ್ಗ ಇವೆಲ್ಲವುಗಳನ್ನೂ ಕೇಳಿ, ಇದೇರೀತಿಯಿಂದ ತಾನೂ ಪ್ರಯತ್ನಮಾಡಿ ಚೌಥದಿಂದ ತನ್ನ-ದಂಡಯಾತ್ರೆಗಾಗಿ ಧನವನ್ನು ಸಂಪಾದಿಸಬೇಕೆಂದೂ, ರಾಮನಗರ, ಜವ್ಹಾರ, ಅಸರಸೇಟಾ, ಈ ಸಂಸ್ಥಾನಗಳನ್ನು ತನ್ನ ಕೈಕೆಳಗೆ ತೆಗೆದುಕೊಳ್ಳಬೇಕೆಂದೂ ನಿರ್ಧರಿಸಿದನು. ತನ್ನ ರಾಜ್ಯದ ಸಮೀಪ ವರ್ತಿಗಳಾಗಿದ್ದ ಮೊಗಲ, ವಿಜಾಪೂರ ರಾಜ್ಯಗಳಲ್ಲಿ ದಾಳಿಗಳ ಭೀತಿಯಿಂದ ಚೌಥವನ್ನು ಎತ್ತುವ ನಿಶ್ಚಯಮಾಡಿದನು. ಸುರತದ ರೈತರಿಂದ ಚೌಥ ತೆಗೆದುಕೊಳ್ಳುವಾಗ ದಿಲ್ಲಿಯ ಮೊಗಲ ಬಾದಶಹನ ಶ್ರೇಷ್ಠತ್ವವನ್ನು ಒಪ್ಪಲಿಲ್ಲ. ಹಾಗೆಯೇ ಸುಂಡಾ, ಬಿದನೂರು ಪ್ರಾಂತಗಳ ಅರಸರಿಂದ ಚೌಥ ಕರವನ್ನು ಎತ್ತುವಾಗ ಅವರ ರಾಜ್ಯಭಾರಕ್ಕೆ ಸಹಾಯಮಾಡುವ ಅಭಿವಚನವನ್ನು ಈಯಲಿಲ್ಲ. ಆದದರಿಂದ ಶಿವಾಜಿಮಹಾರಾಜನ ಚೌಥವು ಒಂದು ಪ್ರಕಾರದ ಕಪ್ಪದ ಸ್ವರೂಪವನ್ನೇ ಹೊಂದಿತು. ಶಿವಾಜಿಮಹಾರಾಜನು ತನ್ನ ರಾಜ್ಯದಲ್ಲಿ ಸುಧಾರಣೆ ಮಾಡಿ ವ್ಯಾಪಾರೋದ್ಯೋಗಗಳನ್ನು ಸಂರಕ್ಷಿಸಿ ಬಂದ ಹಣವು, ತನ್ನ ಮನಸಿನಲ್ಲಿ ಮುಂದೆ ಮಾಡುವ ದೊಡ್ಡ ರಾಜ್ಯದ ಪ್ರತಿಷ್ಠಾಪನೆಗೆ ಸಾಲುವಂತೆ ಇದ್ದಿದ್ದಿಲ್ಲ. ತಾನು ದಂಡೆತ್ತಿ ಹೋಗುವ ರಾಜ್ಯದ ಮೇಲೆಯೇ ಅದರ ವೆಚ್ಚವನ್ನು ಸಾಗಿಸುತ್ತಿದ್ದನು. ಆದದರಿಂದ ನೆರೆಹೊರೆಯ ಕಿಲ್ಲೇದಾರರು ತಮ್ಮ ಮೇಲೆ ಮರಾಟರು ದಂಡೆತ್ತಿ ಬರಬಾರದೆಂದು ಹಣಕೊಡುವ ಪರಿಪಾಠವನ್ನಿಟ್ಟರು. ಇದರಿಂದಲೇ ಮುಂದೆ ಮರಾಟರ ಚೌಥ ಪದ್ಧತಿಯು ಉಗಮನಾಯಿತು.

ಶಿವಾಜಿಮಹಾರಾಜನು ಪರರಾಜ್ಯದಲ್ಲಿ ಚೌಥವೆಂದರೆ, ವಸೂಲಿನ ನಾಲ್ಕನೆಯ ಭಾಗವನ್ನು ತನ್ನ ದಂಡಯಾತ್ರೆಯ ಭಯದ ದೆಸೆಯಿಂದ ಇಡಬೇಕಾಯಿತು. ಈ ಕರವನ್ನು ಕೊಟ್ಟವರಿಗೆ ಯಾವ ತರಹದ ಉಪದ್ರವವನ್ನೂ ಕೊಡುತ್ತಿದ್ದಿಲ್ಲ. ಯಾವ

ಪ್ರಾಂತದವರು ಈ ಪ್ರಕಾರದ ಕರವನ್ನು ಕೊಡಲಿಕ್ಕೆ ಸಮ್ಮತಿಸುವದಿಲ್ಲವೋ ಆ ಪ್ರಾಂತದವರ ಕೂಡ ಯುದ್ಧವನ್ನು ಮಾಡಿ ಈ ಕರವನ್ನು ತೆಗೆದುಕೊಳ್ಳುತ್ತಿದ್ದನು. ಶಿವಾಜಿ ಮಹಾರಾಜನು ಸ್ವಾಭಿಮಾನಿಯೂ ನೈತಿಕ ಧೈರ್ಯವುಳ್ಳವನೂ ಆಗಿದ್ದನೆಂದು ಆತನು ರಚಿಸಿದ ಚೌಥ ಪದ್ಧತಿಯಿಂದಲೇ ತಿಳಿಯುತ್ತದೆ. ಆತನು ಸೇವೆಮಾಡಿ ಚೌಥವನ್ನು ಎತ್ತಲಿಲ್ಲ. ಖಡ್ಗದ ಬಲದಿಂದ ಉತ್ತರ ಹಿಂದುಸ್ಥಾನದವರಿಗೂ ಆತನ ಚೌಥ ಪದ್ಧತಿಯ ದುಂದುಭಿರವವು ಮೊಳಗಿತು. ಇದೇ ಪದ್ಧತಿಯೇ ಮುಂದೆ ಪಾಣಿಪತ್ತದ ಮಹಾಸಂಗ್ರಾಮಕ್ಕೆ ಕಾರಣವಾಯಿತು. ಶಿವಾಜಿಮಹಾರಾಜನ ಚೌಥ ಪದ್ಧತಿಯನ್ನೇ ಅವನ ವಂಶಜರೂ ಅನುಯಾಯಿಗಳಾದ ಪೇಶವೆಗಳೂ ಹೋಳಕರನೂ ಹಿಂಬಾಲಿಸಿದರು. ಶಾಹೂಮಹಾರಾಜನ ಕಾಲಕ್ಕೆ ಮಾತ್ರ ಒಂದೊಂದು ವೇಳೆ ಪೆನಶನ್ನದ ಸ್ವರೂಪವನ್ನು ಹೊಂದಿತು. ಒಮ್ಮೊಮ್ಮೆ ಹಿಂದೆ ಬರೆದಂತೆ ರೈತರ ಸಂರಕ್ಷಣೆಯು ಹಾಗೂ ಕೋಟೆಗಳ ಸಂರಕ್ಷಣೆಯ ಪ್ರತಿಫಲವಾಗಿದ್ದಿತು. ಔರಂಗಜೇಬ ಸಾಮ್ರಾಜನ ಕಾಲಕ್ಕೆ ಈ ಚೌಥವು ಆತನ ಅಧಿಕಾರದ ವಿರುದ್ಧವಾದ ಭಯಸೂಚಕರವಾಗಿದ್ದಿತು. ಮುಂದೆ ಬಹಾದ್ದೂರಶಹನ ಕಾಲಕ್ಕೆ ಸಾಮ್ರಾಟನಿಂದ ಚೌಥದ ವಿಷಯವಾಗಿ ಅಧಿಕಾರಪತ್ರವನ್ನು ಮಹಾರಾಷ್ಟ್ರರು ಪಡೆದಿದ್ದರು. ಕಾಫೀಖಾನನು ಅನ್ನುವದೇನೆಂದರೆ—"ಮರಾಟರು ದೊಡ್ಡ ದೊಡ್ಡ ದಂಡು ತೆಗೆದುಕೊಂಡು ಬಂದು ದಕ್ಷಿಣ, ಅಹಮ್ಮದಾಬಾದ, ಮಾಳವಾ ಪ್ರಾಂತಗಳಲ್ಲಿ ದೌಡು ಮಾಡುತ್ತಿದ್ದರು. ದೊಡ್ಡ ದೊಡ್ಡ ಸುಭೇದಾರರನ್ನಾಗಲಿ ಜಮೀನದಾರರನ್ನಾಗಲಿ ಚೌಥದ ವಿಷಯವಾಗಿ ಕೇಳುತ್ತಿದ್ದರು. ಆಗ ಅವರ ಪ್ರತಿನಿಧಿಯು ಬಂದು ಚೌಥ ಕೊಟ್ಟು ಹೋಗುತ್ತಿದ್ದನು. ಒಂದ-ವೇಳೆ ಹಣಕೊಡುವದು ಆಗದಿದ್ದರೆ ಕೊಡುವವರೆಗೂ ತಮ್ಮಲ್ಲಿಂದ ಒಬ್ಬನನ್ನು ಓಲು ಇಡುವ ಪರಿಪಾಠವಿದ್ದಿತು. ಶಾಹೂ ಮಹಾರಾಜನು ದಿಲ್ಲಿಯಲ್ಲಿ ಬೆಳೆದುದರಿಂದ ಆತನೂ ಅವನ ಸಹೋದರನಾದ ಕೊಲ್ಲಾಪುರದ ರಾಜನೂ ದಕ್ಷಿಣದ ೬ ಸುಭೆಗಳ ಚೌಥ ಸರದೇಶಮುಖಿಗಳ ಸನದನ್ನು ಅಂದರೆ ಚೌಥದ ಒಪ್ಪಿಗೆಯನ್ನು ಪಡೆಯಲಿಕ್ಕೆ ಯತ್ನಿಸಿದರು. ಅದೇ ತಮ್ಮ ವತನವೆಂದು ಭಾವಿಸುತ್ತಿದ್ದರು. ಈ ವತನಕ್ಕೆ ದಿಲ್ಲಿಯ ವಜೀರನಾದ ದಾವೂದಖಾನನು ನಿರ್ವಾಹವಿಲ್ಲದೆ ಒಪ್ಪಬೇಕಾಯಿತು. ಈ ಚೌಥಕ್ಕೆ ಮುಂದಿನ ವಜೀರನಾದ ಚಿನಖುಲೀಜಖಾನನೂ ತದನಂತರದ ವಜೀರನಾದ ಸೈಯದ ಹುಶೇನ ಅಲ್ಲಿಯೂ ಒಪ್ಪಿಗೆ ಕೊಡದಾದರು. ಆದರೆ ಅಷ್ಟರಲ್ಲಿ ದಿಲ್ಲಿಯಲ್ಲಿ ರಾಜ್ಯಾಧಿಪತ್ಯದ ಆಂದೋಲನಗಳು ನಡೆದದರಿಂದ ಚೌಥಕ್ಕೆ ಒಪ್ಪಿಗೆಕೊಟ್ಟು ಮಹಾರಾಷ್ಟ್ರರನ್ನು ತಮ್ಮ ಪಕ್ಷಕ್ಕೆ ಎಳೆದುಕೊಳ್ಳಲುಪಕ್ರಮಿಸಿದರು. ಈ ವಿಷಯವಾಗಿ ಕಾಫೀಖಾನನ ಅಭಿಪ್ರಾಯವೇನಂದರೆ 'ರಾಜಾರಾಮನು ಛತ್ರಪತಿಯಾಗಿದ್ದಾಗ ಶಂಕರಾಜಿಮಲ್ಹಾರ ಎಂಬ ಮುತ್ಸದ್ದಿಯ ಮುಖಾಂತರವಾಗಿ ಬಾಳಾಜಿವಿಶ್ವನಾಥ ಪೇಶವೆ

ಯೊಡನೆ ಕೆಳಗೆಬರೆದಂತೆ ಚೌಥಾಯಿಯು ಒಪ್ಪಿಗೆಯು ಸಾಮ್ರಾಜ್ಯನಿಂದ ಮರಾಟರಿಗೆ ದೊರೆಯಿತು. ದೊಡ್ಡ ಜಹಾಗಿರದಾರರೂ ಸರಕಾರೀ ಹಾಗೂ ಖಾಸಗೀ ಭೂಮಿಗಳ ಮುಖ್ಯಸ್ಥರೂ ತಮ್ಮ ಉತ್ಪನ್ನದ ¼ ವನ್ನು ಶಾಹೂ ಮಹಾರಾಜನ ಅಧಿಕಾರಸ್ಥರಿಗೆ ಕೊಡಬೇಕು. ಇದಲ್ಲದೆ ರೈತರು ತಮ್ಮ ಉತ್ಪನ್ನದ 1/10 ವನ್ನು ಸರದೇಶಮುಖಿಯೆಂದು ಕೊಡಬೇಕು. ಹಾಗು ಫೌಜದಾರಿ, ಶಿಕದಾರಿ, ಜೆಆಫತ್ ಮೊದಲಾದ ಬಾಬುಗಳೆಂದು ಇದು ಇಂತಿಷ್ಟು ಕೊಡಬೇಕೆಂಬ ಸ್ಥಿರಪಡಿಸಿದರು. ಹೀಗಾಗಿ ಮಹಾರಾಷ್ಟ್ರರಿಗೆ ಮೊಗಲ ರಾಜ್ಯದಲ್ಲಿ ಬಹಳ ಭಾಗವು ಉತ್ಪನ್ನವಾಗುತ್ತಿದ್ದಿತು. ಈ ಎಲ್ಲ ವಿಷಯವನ್ನು ಲೆಕ್ಕಮಾಡಿ ತೆಗೆದುಕೊಂಡು ಹೋಗುವದಕ್ಕಾಗಿ ಮರಾಟರು ಕಮಾವೀಸದಾರ, ಸರದೇಸಾಯಿ ಮುಂತಾದ ಅಧಿಕಾರಸ್ಥರನ್ನು ನೇಮಿಸಿಕೊಂಡರು. ಮೊಗಲ ರಾಜ್ಯದಲ್ಲಿ ಮರಾಟರ ಅಧಿಕಾರಸ್ಥರು ಕಾರಭಾರ ಮಾಡುವದು, ಒಂದು ಬಗೆಯಿಂದ ಸಾಮ್ರಾಜ್ಯನ ಅಧಿಕಾರಕ್ಕೂ ಹೀನತ್ವಕ್ಕೂ ಕಾರಣವಾಯಿತು. ಮುಂದೆ ಬರಬರುತ್ತ ಕೆಲವು ಕೋಟೆಗಳು ಕೂಡ ಮಹಾರಾಷ್ಟ್ರರಿಗೆ ಸೇರಿದವು. ಹೈದರಾಬಾದದ ನಿಜಾಮಉಲ್ಮುಲ್ಕನು ಕೂಡ ತನ್ನ ಸಂರಕ್ಷಣೆಗೋಸ್ಕರ ಮರಾಟರ ಕಡೆಗೆ ಒಲಿಯುತ್ತ ನಡೆದನು. ಬಾಳಾಜಿ ವಿಶ್ವನಾಥನು ದಿಲ್ಲೀ ನಾಮಧಾರಿ ಬಾದಶಹನಿಂದ ದೊರಕಿಸಿದ ಸನದಿನಲ್ಲಿ ಕೆಳಗೆ ಬರೆದಂತೆ ಒಡಂಬಡಿಕೆಗಳು ಇರುವವು. ಅವೇನೆಂದರೆ—"ಶಾಹೂರಾಜನು ರಾಜನಿಷ್ಠ ಮಾಂಡಲೀಕನಾಗಿ ೧೫ ಸಾವಿರ ಸೈನ್ಯದೊಡನೆ ಸಾಮ್ರಾಜ್ಯಸೇವೆಮಾಡತಕ್ಕದ್ದು. ಒಳ್ಳೆಯ ಹಿತಚಿಂತಕ ಸರದಾರನಂತೆ ಇದ್ದು ಮೊಗಲ ಸಾಮ್ರಾಜ್ಯದ ಊರ್ಜಿತಾವಸ್ಥೆಗೆ ಸಹಾಯ್ಯ ಮಾಡಬೇಕು. ತನಗೊಪ್ಪಿಸಿದ ದಕ್ಷಿಣ ಭಾಗದಲ್ಲಿ ಶಾಂತತೆ ಸುವ್ಯವಸ್ಥೆಗಳನ್ನು ನೆಲೆಗೊಳಿಸತಕ್ಕದ್ದು. ಕಳವುಗಳಾದರೆ ಬೇಕಾದ ಶಾಸನವನ್ನು ಕಳ್ಳರಿಗೆ ಮಾಡಬಹುದು. ಕಳವಿನ ಜೀನಸುಗಳು ಗೊತ್ತು ಆಗದೆ ಹೋದರೆ ತನ್ನ ಬೊಕ್ಕಸದಿಂದ ಹಾನಿಯನ್ನು ತುಂಬಿಕೊಡತಕ್ಕದ್ದು." ಈ ಸಂಗತಿಯಿಂದ ಮರಾಟರ ಅಧಿಕಾರ ರಾಜ್ಯಗಳು ಬೆಳೆದರೂ ಛತ್ರಪತಿಯು ಮೊಗಲರ ಮಾಂಡಲಿಕನಾದಂತಾಯಿತು. ಶಿವಾಜಿ ಮಹಾರಾಜನು ಈ ಬಗೆಯ ಉತ್ಕರ್ಷವನ್ನು ಎಂದಿಗೂ ಬಯಸುತ್ತಿದ್ದಿಲ್ಲವೆಂಬ ಸಂಗತಿಯು ಸಹಜವಾಗಿ ತಿಳಿಯುವಂತೆ ಅದೆ.

ಈ ಸಂಗತಿಯಿಂದ ಮೊಗಲ ರಾಜ್ಯದಲ್ಲಿ ಅವ್ಯವಸ್ಥೆಯು ಹಬ್ಬಿ ದೌರ್ಬಲ್ಯವು ಬೆಳೆಯಲಾರಂಭಿಸಿತು. ಇದರಿಂದ ಮಹಾರಾಷ್ಟ್ರ ರಾಜ್ಯದ ಬೆಳವಣಿಗೆಗೆ ಸಹಾಯ್ಯವಾಯಿತು. ಮರಾಟರು ಹೈದರಅಲ್ಲಿಯಿಂದಲೂ ಇದೇ ತರಹದ ಕಪ್ಪವನ್ನೆತ್ತಲಾರಂಭಿಸಿದರು. ಅದರಂತೆಯೇ ಗೋವಳಕೊಂಡ, ವಿಜಾಪೂರ, ಕೊಂಕಣಪ್ರಾಂತ, ಪೋರ್ತುಗೀಜ ಅರಸರಿಂದ ಚೌಥವನ್ನೆತ್ತಲಾರಂಭಿಸಿದರು. ಇದಕ್ಕಾಗಿಯೂ ಆ ಎಲ್ಲ ಭಾಗಗಳ

ಸಂರಕ್ಷಣಾರ್ಥವಾಗಿ ದೊಡ್ಡ ದಂಡನ್ನು ಮರಾಟರು ಇಡಬೇಕಾಯಿತು. ಈ ದಂಡ ವೆಚ್ಚವನ್ನು ಕೂಡ ಕೆಲ ಕೆಲವು ಭಾರವನ್ನು ಅಲ್ಲಿಯ ರೈತರ ಮೇಲೆಯೇ ಮಹಾರಾಷ್ಟ್ರರ ಹೇರುತ್ತಿದ್ದರು. ಹೀಗಾಗಿ ವೆಚ್ಚವಿಲ್ಲದೆ ಮಹಾರಾಷ್ಟ್ರ ಸೈನ್ಯವು ಬೆಳೆಯತೊಡಗಿತು ಇದೇ ಪದ್ಧತಿಯನ್ನೇ ಮುಂದೆ ವೆಲ್ಲೆಸ್ಲಿಯು ಆರಂಭಿಸಿದನು. ಶಿವಾಜಿ ಮಹಾರಾಜನ ಧೂರ್ತತ್ವವು ಎಷ್ಟು ವ್ಯಾಪಕವಾಗಿದ್ದಿತೆಂಬುದೂ, ಆತನು ಆಗಿನ ಕಾಲದ ರಾಜಕಾರಣ ಪಟುಗಳಲ್ಲಿ ಶ್ರೇಷ್ಠನು ಆಗಿದ್ದನೆಂದೂ ಸಹಜವಾಗಿ ಊಹಿಸಬೇಕಾಗಿದೆ. ಶಿವಾಜಿ ಮಹಾರಾಜನಿಂದ ಉಗಮಹೊಂದಿದ ಸಂರಕ್ಷಕ ದಂಡು, ಗನಿಮಿಕಾವ್ಯ ಈ ಬಗೆಯ ಯುದ್ಧ ಶಾಸ್ತ್ರದ ತತ್ವಗಳು ಈಗಿನ ಕಾಲದ ಯುದ್ಧಶಾಸ್ತ್ರವೇತ್ತರರಿಗೆ ಸಹ ಮಾನ್ಯವಾಗಿವೆ ಶಿವಾಜಿ ಮಹಾರಾಜನು ಆರಂಭಿಸಿದ ಈ ಚೌಥವು ಮುಂದೆ ಹಿಂದುಸ್ಥಾನದ ಎಲ್ಲ ಭಾಗಗಳಲ್ಲಿಯೂ

Pg No 31

Miss

ವೆಚ್ಚವೆಂದು ¼ ಭಾಗವನ್ನು ಮರಾಟರು ತೆಗೆದುಕೊಳ್ಳಲಾರಂಭಿಸಿದರು.

ಈ ಪದ್ಧತಿಯಿಂದ ಮೊದಲ ಸಾಮ್ರಾಜ್ಯದಲ್ಲಿ ಕಳವು ದರೋಡೆಗಳು ಕಡಿಮೆಯಾಗಿ ರೈತರು ಕೆಲಕಾಲ ಸುಖಿಗಳಾದರು. ಹಾಗು ದೌಡು ಕಡಿಮೆಯಾದ್ದರಿಂದ ಬರ ಬೀಳುವದು ಕಡಿಮೆಯಾಯಿತು. ಯಾಕಂದರೆ ಪೈರು ಕೊಯ್ಯುವದು, ಸುಡುವದು ಮೊದಲಾದ ಅನಿಷ್ಟಕಾರಕ ಸಂಗತಿಗಳು ಇಲ್ಲದಂತೆ ಆದವು.

ದೇವರು ಸೃಷ್ಟಿಸಿದ ಪ್ರಾಣಿಗಳಲ್ಲೆಲ್ಲ ಮಾನವ ಜನ್ಮವೇ ಶ್ರೇಷ್ಠವಾದುದು; ಯಾಕಂದರೆ ಅವನಲ್ಲಿ ಜ್ಞಾನವೆಂಬ ಅನುಮೂಲ್ಯವಾದ ನಿಧಿ ಇರುವದು. ಅದರ ಬಲದಿಂದ ಆತನು ಅನಂತ ಶಕ್ತಿಗಳುಳ್ಳವನಾಗುತ್ತಾನೆ. ಆ ಶಕ್ತಿಗಳ ಮೂಲ ಮೊಳಕೆಗಳಿಗೆ ಉತ್ತೇಜನ ಕೊಟ್ಟು ಬೆಳೆಯಿಸುವ ಕೆಲಸವು ಶಿಕ್ಷಕನದೇ ಆಗಿರುವದು. ಈ ಶಕ್ತಿಗಳಲ್ಲಿ ಮುಖ್ಯವಾಗಿ ೩ ವರ್ಗಗಳನ್ನು ಮಾಡಬಹುದು. ಅವು ಯಾವವೆಂದರೆ– ಆತ್ಮಶಕ್ತಿ ೨ ಬುದ್ಧಿಶಕ್ತಿ ೩ ಶಾರೀರಿಕ ಶಕ್ತಿ.

ಆತ್ಮಶಕ್ತಿಯೇ ನೈತಿಕಶಕ್ತಿಯಾಗಿರುವದು. ಆ ಶಕ್ತಿಯ ಯೋಗದಿಂದ ಅವನು ಉತ್ತಮ ಶೀಲಗಳುಳ್ಳವನಾಗಬೇಕು. ಈ ಶಕ್ತಿಯು ಜಾಗೃತಿ ಹೊಂದುವಂತೆ ಸರಿಯಾದ ಶಿಕ್ಷಣ ಕೊಟ್ಟರೆ ಸಾರಾಸಾರ ವಿಚಾರ, ನಂತರ ಪಾಪಪುಣ್ಯಗಳ ಬಗ್ಗೆ ಇತ್ಯಾದಿ ಸದ್ಗುಣ

ಶಾಲಾವಿಷಯದ ಬಹುತರ ಎಲ್ಲ ಪಾಠಗಳಲ್ಲಿಯೂ ಮನುಷ್ಯನ ಈ ಶಕ್ತಿಗಳು ವೃದ್ಧಿಂಗತವಾಗುವಂತೆ ಪಾಠಕ್ರಮದ ರಚನೆಯು ಇರುವದು. ನಿರೀಕ್ಷಣ, ಆಟ ಇವುಗಳ ಮುಖಾಂತರವಾಗಿ ಆದಷ್ಟು ಹೆಚ್ಚು ಇಂದ್ರಿಯಗಳ ಉಪಯೋಗವನ್ನು ಉಂಟುಮಾಡಿಕೊಂಡು ತನ್ಮೂಲಕ ಜ್ಞಾನವನ್ನು ಸಂಪಾದಿಸಬೇಕಾಗುತ್ತದೆ. ಆದ್ದರಿಂದಲೇ ಬಾಲಕರ ಪಾಠಕ್ರಮದಲ್ಲಿ ಕಿಂಡರಗಾರ್ಡನ್ ಪಾಠಗಳಿಗೆ ಪ್ರಾಶಸ್ತ್ಯವು ದೊರೆತಿರುವದು. ನಿರೀಕ್ಷಣಶಕ್ತಿಯ ವೃದ್ಧಿಗಾಗಿ ಶಾಲೆಗೆ ತೋಟಗಳನ್ನೂ ಪ್ರಕೃತಿ

Pg No 31 to 32
Missing

Pg No 31 to 32
Missing

ಸಂರಕ್ಷಣಾರ್ಥವಾಗಿ ದೊಡ್ಡ ದಂಡನ್ನು ಮರಾಟರು ಇಡಬೇಕಾಯಿತು. ಈ ದಂ ವೆಚ್ಚವನ್ನು ಕೂಡ ಕೆಲ ಕೆಲವು ಭಾರವನ್ನು ಅಲ್ಲಿಯ ರೈತರ ಮೇಲೆಯೇ ಮಹಾರಾಷ್ಟ್ರ ಹೇರುತ್ತಿದ್ದರು. ಹೀಗಾಗಿ ವೆಚ್ಚವಿಲ್ಲದೆ ಮಹಾರಾಷ್ಟ್ರದ ಸೈನ್ಯವು ಬೆಳೆಯುತೊಡಗಿ ಇದೇ ಪದ್ಧತಿಯನ್ನೇ ಮುಂದೆ ಮಾರ್ಕ್ವಿಸವೆಲ್ಲೆಸ್ಲಿಯು ಆರಂಭಿಸಿದನು. ಶಿವಾಜಿ ಮ ರಾಜನ ಧೂರ್ತತ್ವವು ಎಷ್ಟು ವ್ಯಾಪಕವಾಗಿದ್ದಿತೆಂಬದೂ, ಆತನು ಆಗಿನ ಕಾಲದ ರಾ ಕಾರಣ ಪಟುಗಳಲ್ಲಿ ಶ್ರೇಷ್ಠನು ಆಗಿದ್ದನೆಂದೂ ಸಹಜವಾಗಿ ಊಹಿಸಬೇಕಾಗಿದೆ. ಶಿವಾ ಮಹಾರಾಜನಿಂದ ಉಗಮಹೊಂದಿದ ಸಂರಕ್ಷಕ ದಂಡು, ಗನೀಮಿಕಾವ್ಯ ಈ ಬಗೆ ಯುದ್ಧ ಶಾಸ್ತ್ರದ ತತ್ವಗಳು ಈಗಿನ ಕಾಲದ ಯುದ್ಧಶಾಸ್ತ್ರವೇತ್ತ್ಯರಿಗೆ ಸಹ ಮಾ ವಾಗಿವೆ ಶಿವಾಜಿ ಮಹಾರಾಜನು ಆರಂಭಿಸಿದ ಈ ಚೌಥವು ಮುಂದೆ ಹಿಂದುಸ್ಥಾನ ಎಲ್ಲ ಭಾಗಗಳಲ್ಲಿಯೂ ಆರಂಭವಾಯಿತು. ರಜಪೂತರು ಈ ಕರಾರಿಗೆ ಒಪ್ಪಿದರು ಮೂಂಡವಾರದ ರಾಜನು ಸ್ವಸಂರಕ್ಷಣಾರ್ಥವಾಗಿ ತನ್ನ ಅರ್ಧ ರಾಜ್ಯವನ್ನೇ ಪೇಶವೆ ಕೊಟ್ಟನು. ಇದೇ ಪ್ರಕಾರ ಬುಂದಿಯ ರಾಜನಾದ ರಾವರಾಜಾಬುಮೋದಸಿಂಗನು ಕಪ್ಪಕೊಟ್ಟು ಪೇಶವೆಗಳ ಶತ್ರುಗಳ ಕೂಡ ಏನೂ ಸಂಬಂಧವಿಡುವದಿಲ್ಲವೆಂದು ಒಪ್ಪಿ ದನು. ಮುಂದೆ ಸಿಂದೆನು ಪ್ರಬಲನಾಗಿ ದಿಲ್ಲೀರಾಜ್ಯದಲ್ಲಿ ಚೌಥವನು. [illegible]ತ್ತ

Pg No 3

Mit

ದೇವರು ಸೃಷ್ಟಿಸಿದ ಪ್ರಾಣಿಗಳಲ್ಲೆಲ್ಲ ಮಾನವ ಜನ್ಮವೇ ಶ್ರೇಷ್ಠವಾದುದು; ಯಾಕೆಂದರೆ ಅವನಲ್ಲಿ ಜ್ಞಾನವೆಂಬ ಅಮೂಲ್ಯವಾದ ನಿಧಿ ಇರುವದು. ಅದರ ಬಲದಿಂದ ತನು ಅನಂತ ಶಕ್ತಿಗಳುಳ್ಳವನಾಗುತ್ತಾನೆ. ಆ ಶಕ್ತಿಗಳ ಮೂಲ ಮೊಳಿಕೆಗಳಿಗೆ ಉತ್ತೇ-ನ ಕೊಟ್ಟು ಬೆಳೆಯಿಸುವ ಕೆಲಸವು ಶಿಕ್ಷಕನದೇ ಆಗಿರುವದು. ಈ ಶಕ್ತಿಗಳಲ್ಲಿ ಮುಖ್ಯ ಾಗಿ ೩ ವರ್ಗಗಳನ್ನು ಮಾಡಬಹುದು. ಅವು ಯಾವವೆಂದರೆ- ಆತ್ಮಶಕ್ತಿ ೨ ಬುದ್ಧಿಶಕ್ತಿ ಶಾರೀರಿಕ ಶಕ್ತಿ.

ಆತ್ಮಶಕ್ತಿಯೇ ನೈತಿಕಶಕ್ತಿಯಾಗಿರುವದು. ಆ ಶಕ್ತಿಯ ಯೋಗದಿಂದ ಅವನು ತ್ತಮ ಶೀಲಗಳುಳ್ಳವನಾಗಬೇಕು. ಈ ಶಕ್ತಿಯು ಜಾಗೃತೆ ಹೊಂದುವಂತೆ ಸರಿಯಾದ ಕ್ಷಣ ಕೊಟ್ಟರೆ ಸಾರಾಸಾರ ವಿಚಾರ, ನಂತರ ಪಾಪಪುಣ್ಯಗಳ ಭಯ ಇತ್ಯಾದಿ ಸದ್ಗುಣ ಳು ಅವನಲ್ಲಿ ನೆಲೆಗೊಳ್ಳುವವು. ಈ ಗುಣಗಳ ಯೋಗದಿಂದ ವಿದ್ಯಾರ್ಥಿಯು ಬರಿ ಂಡುಟ್ಟು ತೊಟ್ಟು ಬಾಳಿದರೆ ತೀರದು, ಇನ್ನೂ ಹೆಚ್ಚಿನ ಉದ್ದೇಶವು ಮಾನವ ಜನ್ಮ ಲ್ಲಿ ಉಂಟು, ಎಂಬ ಹೆಚ್ಚಿನ ತಿಳಿವಳಿಕೆಯನ್ನು ಹೊಂದುವನು.

ಎರಡನೆಯ ಬುದ್ಧಿಶಕ್ತಿಯೆಂಬುದೇ ಮಾನಸಿಕ ಶಕ್ತಿಯಾಗಿರುವದು. ತಕ್ಕ ಶಿಕ್ಷಣ ಂದ ಬುದ್ಧಿಗೆ ಪುಷ್ಟಿಯನ್ನು ಕೊಟ್ಟು ಮನಸ್ಸನ್ನು ಬೆಳೆಯುಸುವದೇ ಶಿಕ್ಷಣದ ಒಂದು ದ್ದೇಶವಾಗಿರುವದು. ಇಂಥ ಶಿಕ್ಷಿತನು ಯಾವ ಕೆಲಸದಲ್ಲಿಯಾದರೂ ಆಳವಾದ

to 32

Sing

ಸಂರಕ್ಷಣಾರ್ಥವಾಗಿ ದೊಡ್ಡ ದಂಡನ್ನು ಮರಾಟರು ಇಡಬೇಕಾಯಿತು. ಈ ದಂಡಿನ ವೆಚ್ಚವನ್ನು ಕೂಡ ಕೆಲ ಕೆಲವು ಭಾರವನ್ನು ಅಲ್ಲಿಯ ರೈತರ ಮೇಲೆಯೇ ಮಹಾರಾಷ್ಟ್ರರು ಹೇರುತ್ತಿದ್ದರು. ಹೀಗಾಗಿ ವೆಚ್ಚವಿಲ್ಲದೆ ಮಹಾರಾಷ್ಟ್ರರ ಸೈನ್ಯವು ಬೆಳೆಯುತೊಡಗಿತು. ಇದೇ ಪದ್ಧತಿಯನ್ನೇ ಮುಂದೆ ವೆಲ್ಲೆಸ್ಲಿಯು ಆರಂಭಿಸಿದನು. ಶಿವಾಜಿ ಮಹಾರಾಜನ ಧೂರ್ತತ್ವವು ಎಷ್ಟು ವ್ಯಾಪಕವಾಗಿದ್ದಿತೆಂಬುದೂ, ಆತನು ಆಗಿನ ಕಾಲದ ರಾಜ್ಯಕಾರಣ ಪಟುಗಳಲ್ಲಿ ಶ್ರೇಷ್ಠನು ಆಗಿದ್ದನೆಂದೂ ಸಹಜವಾಗಿ ಊಹಿಸಬೇಕಾಗಿದೆ. ಶಿವಾಜಿ ಮಹಾರಾಜನಿಂದ ಉಗಮಹೊಂದಿದ ಸಂರಕ್ಷಕ ದಂಡು, ಗನೀಮೀಕಾವ್ಯ ಈ ಬಗೆಯ ಯುದ್ಧ ಶಾಸ್ತ್ರದ ತತ್ವಗಳು ಈಗಿನ ಕಾಲದ ಯುದ್ಧಶಾಸ್ತ್ರವೇತ್ತರರಿಗೆ ಸಹ ಮಾನ್ಯವಾಗಿವೆ ಶಿವಾಜಿ ಮಹಾರಾಜನು ಆರಂಭಿಸಿದ ಈ ಚೌಥವು ಮುಂದೆ ಹಿಂದುಸ್ಥಾನದ ಎಲ್ಲ ಭಾಗಗಳಲ್ಲಿಯೂ ಆರಂಭವಾಯಿತು. ರಜಪೂತರು ಈ ಕರಾರಿಗೆ ಒಪ್ಪಿದರೂ ಮೂಂಡವಾರದ ರಾಜನು ಸ್ವಸಂರಕ್ಷಣಾರ್ಥವಾಗಿ ತನ್ನ ಅರ್ಧ ರಾಜ್ಯವನ್ನೇ ಪೇಶವೆಗೆ ಕೊಟ್ಟನು. ಇದೇ ಪ್ರಕಾರ ಬುಂದಿಯ ರಾಜನಾದ ರಾವರಾಜಾಉಮೇದಸಿಂಗನು ಕಪ್ಪಕೊಟ್ಟು ಪೇಶವೆಗಳ ಶತ್ರುಗಳ ಕೂಡ ಏನೂ ಸಂಬಂಧವಿಡುವದಿಲ್ಲವೆಂದು ಒಪ್ಪಿದನು. ಮುಂದೆ ಸಿಂದೆನು ಪ್ರಬಲನಾಗಿ ದಿಲ್ಲೀರಾಜ್ಯದಲ್ಲಿ ಚೌಥವನ್ನು ಬೆಳೆಯಿಸುತ್ತ ಬೆಳೆಯಿಸುತ್ತ ೧೧೦೦ಕ್ಕೆ ೫೦ರ ವರೆಗೆ ಕಪ್ಪವನ್ನು ಎತ್ತಲಾರಂಭಿಸಿದನು. ಆಗ ದಿಲ್ಲಿಯ ಅರಸನು ಸಂಪೂರ್ಣವಾಗಿ ಸಿಂದೆಯ ಅಧೀನದಲ್ಲಿದ್ದನು. ಈ ಪ್ರಕಾರದ ಖರ್ಚಿಲ್ಲದ ಸೈನ್ಯದಿಂದಲೇ ಮಹಾರಾಷ್ಟ್ರರ ಬೆಳವಣಿಗೆಯು ಆಸೇತುಹಿಮಾಚಲ ಒಂದಾನೊಂದು ಕಾಲದಲ್ಲಿ ನಡೆದು ಹೋಯಿತು. ಮಹಾರಾಷ್ಟ್ರರಲ್ಲಿ ಶಿವಾಜಿ ಕಾಲದಂತೆ ಐಕಮತ್ಯವು ಉಳಿಯದ್ದರಿಂದ ಬೆಳವಣಿಗೆಯು ಅಷ್ಟಕ್ಕೇ ನಿಂತಿತು.

ಸರದೇಶಮುಖಿಯು ಚೌಥಕ್ಕಿಂತಲೂ ಬೇರೆಯಾಗಿದೆ. ಚೌಥವನ್ನು ಸೇನಾಬಲದಿಂದ ಸಂಪಾದಿಸುತ್ತಿದ್ದರು. ಶಿವಾಜಿ ಮಹಾರಾಜನು ದಕ್ಷಿಣದಲ್ಲಿ ಸರದೇಶಮುಖಿಯು ತನ್ನ ವತನವೆಂದು ಭಾವಿಸುತ್ತಿದ್ದನು. ಶಿವಾಜಿಯು ೧೬೫೦ರಲ್ಲಿ ಜುನ್ನರ ಹಾಗು ಅಹಮ್ಮದನಗರದ ರಾಜರಿಂದ ಸರದೇಶಮುಖಿಯನ್ನು ಸಂಪಾದಿಸಿದನು.

ಮೊದಲು ಚೌಥಾಯಿ ಸರದೇಶಮುಖಿಗಳನ್ನು ಸಂಪಾದಿಸಿದ್ದಲ್ಲದೆ ಸೈನ್ಯದ ವೆಚ್ಚವೆಂದು ೩/೪ ಭಾಗವನ್ನು ಮರಾಟರು ತೆಗೆದುಕೊಳ್ಳಲಾರಂಭಿಸಿದರು.

ಈ ಪದ್ಧತಿಯಿಂದ ಮೊದಲ ಸಾಮ್ರಾಜ್ಯದಲ್ಲಿ ಕಳವು ದರೋಡೆಗಳು ಕಡಿಮೆಯಾಗಿ ರೈತರು ಕೆಲಕಾಲ ಸುಖಿಗಳಾದರು. ಹಾಗು ದೌಡು ಕಡಿಮೆಯಾದ್ದರಿಂದ ಬರ ಬೀಳುವದು ಕಡಿಮೆಯಾಯಿತು. ಯಾಕಂದರೆ ಪೈರು ಕೊಯ್ಯುವದು, ಸುಡುವದು ಮೊದಲಾದ ಅನಿಷ್ಟಕಾರಕ ಸಂಗತಿಗಳು ಇಲ್ಲದಂತೆ ಆದವು.

ದೇವರು ಸೃಷ್ಟಿಸಿದ ಪ್ರಾಣಿಗಳಲ್ಲೆಲ್ಲ ಮಾನವ ಜನ್ಮವೇ ಶ್ರೇಷ್ಠವಾದುದು; ಯಾಕಂದರೆ ಅವನಲ್ಲಿ ಜ್ಞಾನವೆಂಬ ಅಮೂಲ್ಯವಾದ ನಿಧಿ ಇರುವದು. ಅದರ ಬಲದಿಂದ ಆತನು ಅನಂತ ಶಕ್ತಿಗಳುಳ್ಳವನಾಗುತ್ತಾನೆ. ಆ ಶಕ್ತಿಗಳ ಮೂಲ ಮೊಳಕೆಗಳಿಗೆ ಉತ್ತೇಜನ ಕೊಟ್ಟು ಬೆಳೆಯಿಸುವ ಕೆಲಸವು ಶಿಕ್ಷಕನದೇ ಆಗಿರುವದು. ಈ ಶಕ್ತಿಗಳಲ್ಲಿ ಮುಖ್ಯವಾಗಿ ೩ ವರ್ಗಗಳನ್ನು ಮಾಡಬಹುದು. ಅವು ಯಾವವೆಂದರೆ— ಆತ್ಮಶಕ್ತಿ, ೨ ಬುದ್ಧಿಶಕ್ತಿ ೩ ಶಾರೀರಿಕ ಶಕ್ತಿ.

ಆತ್ಮಶಕ್ತಿಯೇ ನೈತಿಕಶಕ್ತಿಯಾಗಿರುವದು. ಆ ಶಕ್ತಿಯ ಯೋಗದಿಂದ ಅವನು ಉತ್ತಮ ಶೀಲಗಳುಳ್ಳವನಾಗಬೇಕು. ಈ ಶಕ್ತಿಯು ಜಾಗೃತೆ ಹೊಂದುವಂತೆ ಸರಿಯಾದ ಶಿಕ್ಷಣ ಕೊಟ್ಟರೆ ಸಾರಾಸಾರ ವಿಚಾರ, ನಂತರ ಪಾಪಪುಣ್ಯಗಳ ಭಯ ಇತ್ಯಾದಿ ಸದ್ಗುಣಗಳು ಅವನಲ್ಲಿ ನೆಲೆಗೊಳ್ಳುವವು. ಈ ಗುಣಗಳ ಯೋಗದಿಂದ ವಿದ್ಯಾರ್ಥಿಯು ಬರಿ ಉಂಡುಟ್ಟು ತೊಟ್ಟು ಬಾಳಿದರೆ ತೀರದು, ಇನ್ನೂ ಹೆಚ್ಚಿನ ಉದ್ದೇಶವು ಮಾನವ ಜನ್ಮದಲ್ಲಿ ಉಂಟು, ಎಂಬ ಹೆಚ್ಚಿನ ತಿಳಿವಳಿಕೆಯನ್ನು ಹೊಂದುವನು.

ಎರಡನೆಯ ಬುದ್ಧಿಶಕ್ತಿಯೆಂಬುದೇ ಮಾನಸಿಕ ಶಕ್ತಿಯಾಗಿರುವದು. ತಕ್ಕ ಶಿಕ್ಷಣದಿಂದ ಬುದ್ಧಿಗೆ ಪುಷ್ಟಿಯನ್ನು ಕೊಟ್ಟು ಮನಸ್ಸನ್ನು ಬೆಳೆಯಿಸುವದೇ ಶಿಕ್ಷಣದ ಒಂದು ಉದ್ದೇಶವಾಗಿರುವದು. ಇಂಥ ಶಿಕ್ಷಿತನು ಯಾವ ಕೆಲಸದಲ್ಲಿಯಾದರೂ ಆಳವಾದ ವಿಚಾರವುಳ್ಳವನಾಗುತ್ತಾನೆ. ನ್ಯಾಯಾನ್ಯಾಯಗಳ ಶೋಧದಲ್ಲಿಯೂ ಹೊಸ ಹೊಸ ವಿಚಾರಗಳ ಅಲೆಗಳಲ್ಲಿಯೂ ಕೊನೆಗಾಣುವವನಾಗುತ್ತಾನೆ. ಮನುಷ್ಯನ ಈ ಶಕ್ತಿಯ ಯೋಗದಿಂದಲೆ ಜಗತ್ತಿಗೆ ನೂತನ ಸ್ವರೂಪವುಂಟಾಗುತ್ತಲಿರುವದು.

ಮೂರನೆಯದು— ದೇಹದ ಬೆಳವಣಿಗೆಯ ಕಾಲದಲ್ಲಿ ಸ್ನಾಯುಗಳು ವೃದ್ಧಿಯಾಗುವಂತೆ ಅವಕ್ಕೆ ತಕ್ಕಷ್ಟು ಕೆಲಸವನ್ನು ಪದ್ಧತಿಗೆ ಸರಿಯಾಗಿ ಕೊಡಬೇಕಾಗುವದು. ಈ ಉದ್ದೇಶಕ್ಕನುಸರಿಸಿ ಶರೀರವು ಬಲಪಡುವಂತೆ ಮಕ್ಕಳಲ್ಲಿ ಬ್ರಹ್ಮಚರ್ಯ ವ್ರತವೂ ಆತ್ಮಸಂಯಮನವೃತ್ತಿಯೂ ಸಹಾಯಕಾರಿಗಳಾಗುವಂತೆ ಅವರಲ್ಲಿ ತಿಳಿವನ್ನುಂಟು ಮಾಡಬೇಕಾಗುವದು.

ಶಾಲಾವಿಷಯದ ಬಹುತರ ಎಲ್ಲ ಪಾಠಗಳಲ್ಲಿಯೂ ಮನುಷ್ಯನ ಈ ಶಕ್ತಿಗಳು ವೃದ್ಧಿಂಗತವಾಗುವಂತೆ ಪಾಠಕ್ರಮದ ರಚನೆಯು ಇರುವದು. ನಿರೀಕ್ಷಣ, ಆಟ ಇವುಗಳ ಮುಖಾಂತರವಾಗಿ ಆದಷ್ಟು ಹೆಚ್ಚು ಇಂದ್ರಿಯಗಳ ಉಪಯೋಗವನ್ನುಂಟುಮಾಡಿಕೊಂಡು ತನ್ಮೂಲಕ ಜ್ಞಾನವನ್ನು ಸಂಪಾದಿಸಬೇಕಾಗುತ್ತದೆ. ಅದ್ದರಿಂದಲೇ ಬಾಲಕರ ಪಾಠಕ್ರಮದಲ್ಲಿ ಕಿಂಡರಗಾರ್ಡನ್ ಪಾಠಗಳಿಗೆ ಪ್ರಾಶಸ್ತ್ಯವು ದೊರೆತಿರುವದು. ನಿರೀಕ್ಷಣಶಕ್ತಿಯ ವೃದ್ಧಿಗಾಗಿ ಶಾಲೆಗೆ ತೋಟಗಳನ್ನೂ ಪ್ರಕೃತಿ

ವಿಮರ್ಶೆಯ ಪಾಠಗಳನ್ನೂ ಜೋಡಿಸಿರುತ್ತಾರೆ. ಈ ಪಾಠಗಳ ಯೋಜನೆಯಿಂದ ಮಕ್ಕಳಲ್ಲಿ ಉತ್ಸಾಹಶಕ್ತಿಯೂ, ಭೂತದಯೆಯೂ, ಕರ್ತವ್ಯಪ್ರೀತಿಯೂ ನೆಲೆಸುವವಲ್ಲದೆ ಸೃಷ್ಟಿಯ ನಿಯಮಿತತ್ವವು ಗೋಚರವಾಗಿ ತನ್ಮೂಲಕ ಆಸ್ತಿಕ್ಯಬುದ್ಧಿಯು ಉಂಟಾಗುವದು. ಈ ಪಾಠಗಳ ಉದ್ದಿಶ್ಯವಾಗಿಯೇ ಬೈಲು, ಪರ್ವತ, ಹೊಲ, ನದಿ ಮೊದಲಾದ ಸೃಷ್ಟಪದಾರ್ಥಗಳಿದ್ದೆಡೆಗೆ ಸಂಚರಿಸಬೇಕಾಗುವದು. ಇದರಿಂದ ಪರಿಶೀಲನಾಶಕ್ತಿಯು ಬೆಳೆಯುವದಲ್ಲದೆ ಜಿಜ್ಞಾಸಾ ಲಾಲಸೆಯೂ ಬೆಳೆಯುವದು. ಹಾಗು ವ್ಯವಸಾಯೋದ್ಯಮದ ಪ್ರೀತಿಯು ಸಹ ಚಿಕ್ಕಂದಿನಲ್ಲಿಯೇ ನೆಲೆಗೊಳ್ಳುವದು.

ಈ ಮೇಲಿನ ಪ್ರಕೃತಿಶಾಸ್ತ್ರದ ಪಾಠಗಳಗಳಲ್ಲಿ ಬರುವ ಸಂಗತಿಗಳನ್ನೆಲ್ಲ ಪ್ರತ್ಯಕ್ಷ ವಸ್ತುಗಳ ಮುಖಾಂತರವಾಗಿಯೇ ಕಲಿಸಬೇಕೆಂಬದು ಸಹಜ ಸಿದ್ಧವಾಗಿದೆ. ಕೆಲಕೆಲವನ್ನು ಚಿತ್ರಗಳ ಸಾಹಾಯ್ಯದಿಂದಲೂ ಜ್ಞಾನಮಾಡಿಕೊಡಲಿಕ್ಕೆ ಬರುತ್ತಿದೆ. ವನಸ್ಪತಿಗಳನ್ನು ಜ್ಞಾನಮಾಡಿಕೊಟ್ಟಂತೆಯೇ ಪಕ್ಷಿಗಳು, ಪ್ರಾಣಿಗಳು, ಕ್ರಿಮಿಕೀಟಕಗಳು, ಅವುಗಳ ಬೆಳೆವಣಿಗೆಯ ಕ್ರಮಗಳು, ಅವುಗಳ ಉಪಯೋಗ ಇತ್ಯಾದಿ ವಿಷಯಗಳೆಲ್ಲ ಆ ಪಾಠಗಳಲ್ಲಿ ಅಡಕವಾಗಿರುತ್ತವೆ. ಪೈರುಗಳ ಹಾಗು ಪ್ರಾಣಿಗಳ ರಚನೆಯಲ್ಲಿಯೂ ಬೆಳೆವಣಿಗೆಯಲ್ಲಿಯೂ ಅಸ್ತಿತ್ವನಾಶಗಳಲ್ಲಿಯೂ ಸಾಮ್ಯವಿರುತ್ತದೆಂಬ ಸಂಗತಿಯನ್ನು ಅವರು ಪ್ರತ್ಯಕ್ಷವಾಗಿ ಮನಗಾಣುತ್ತಾರೆ. ಹೂಗಳು ಅವುಗಳ ಪುಂಕೇಸರಗಳು, ಸ್ತ್ರೀಕೇಸರಗಳು, ಅವುಗಳ ಬಣ್ಣ, ಮಾಧುರ್ಯ ಇವುಗಳಿಗಾಗಿ ಭ್ರಮರಗಳ ಆಗಮನ, ಬಳಿಕ ಫಲಧಾರಣೆ ಇತ್ಯಾದಿಗಳಿಂದ ಜಗದೊಳಗಿನ ಕಾರ್ಯಕಾರಣಗಳ ಭಾವವೂ ಸೃಷ್ಟಿಯ ವ್ಯವಸ್ಥೆಯೂ, ಅಚ್ಚುಕಟ್ಟುತನವೂ, ಮಕ್ಕಳ ಕಣ್ಣಮುಂದೆ ಕಟ್ಟಿ ಅವರ ಬುದ್ಧಿಯು ವಿಶಾಲವಾಗುತ್ತದೆ. ನೋಡಿದ ಪ್ರಾಣಿವಸ್ತುಗಳ ಸಾಮ್ಯದಿಂದ ನೋಡದೆ ಇದ್ದ ಪ್ರಾಣಿವಸ್ತುಗಳ ರಚನೆಯನ್ನು ಚಿತ್ರಪಟದಿಂದ ಊಹಿಸಲು ಬಾಲಕರು ಸಮರ್ಥರಾಗುತ್ತಾರೆ. ಈ ತರಹದ ಶಿಕ್ಷಣ ಪದ್ಧತಿಯ ಯೋಗದಿಂದ ಅವರ ಕಲ್ಪನೆ, ಅನುಮಾನಶಕ್ತಿಗಳು ಬೆಳೆಯುತ್ತವೆ. ತಿಳಿದ ವಿಷಯವನ್ನು ಪುನಃ ಬರೆಯುವಾಗ ಅವರ ಸ್ಮರಣಶಕ್ತಿಯು ವೃದ್ಧಿಯಾಗುತ್ತದೆ. ಈ ಎಲ್ಲ ಸಂಗತಿಗಳಿಂದ ಅವರು ತಿಳಿದ ಸಂಗತಿಯ ಬಲದಿಂದ ಗೊತ್ತಿಲ್ಲದ ಸಂಗತಿಯನ್ನು ಕಂಡುಹಿಡಿಯುತ್ತಾರೆ. ಸುಶಿಕ್ಷಣದಿಂದ ಬಲವಾದ ಮನುಷ್ಯನ ಶಕ್ತಿಗಳೆಲ್ಲ ಸರ್ವತೋಮುಖವಾಗಿ ಬೆಳೆಯುತ್ತವೆಂದು ಮೇಲಿನ ವಿವರಣೆಯಿಂದ ಗೊತ್ತಾಗುತ್ತದೆ.

ಬರಿ ಉಪದೇಶಿಸಿದ ಮಾತ್ರಕ್ಕೆ ಶಿಕ್ಷಣವು ತೀರಲಿಲ್ಲ; ಅಥವಾ ಕೇವಲ ವಿದ್ಯಾಭ್ಯಾಸಮಾಡಿಸಿದ ಮಾತ್ರಕ್ಕೂ ಮುಗಿಯಲಿಲ್ಲ; ಇಲ್ಲವೆ ನಿರೀಕ್ಷಣೆ ಹಾಗು ನೋಟಗಳಿಂದಲೂ ಕಥೆಗಳ ಮೂಲಕ ಉಂಟಾದ ಮಕ್ಕಳ ಬಹುಶ್ರುತತ್ವದಿಂದಲೂ ವಿದ್ಯಾ

ಭ್ಯಾಸವು ಪೂರ್ಣವಾಗುವದಿಲ್ಲ; ಪುರಾಣ, ಪುಣ್ಯಕಥೆಗಳ ಶ್ರವಣ, ನಾಟಕ, ಸಿನೇಮಾ ಕಸರತ್ತುಗಳ ನೋಟ, ಪ್ರದರ್ಶನ, ಪ್ರವಾಸಗಳ ಉಪಯೋಗ ಇವುಗಳಿಂದಲೂ ಶಿಕ್ಷಣವು ಸಾಂಗೋಪಾಂಗವಾಗುವಂತಿಲ್ಲ; ಆದರೆ ಇವೆಲ್ಲಗಳಿಗಿಂತಲೂ ಮಹತ್ವವಾದ ವಿಷಯವು ಮತ್ತೊಂದಿರುವದು. ಅನುಕರಣಶೀಲತ್ವವು ಮಕ್ಕಳಲ್ಲಿ ಸ್ವಭಾವಸಿದ್ಧವಾಗಿರುವದು. ಸ್ವಭಾವ, ನಡೆವಳಿ, ಮಾತುಕಥೆ, ಉದ್ಯೋಗಪ್ರಿಯತೆ, ಸ್ವಚ್ಛತೆ, ಸರಲತೆ, ಆತ್ಮಸಂಯಮನ, ಚತುರತೆ ಇತ್ಯಾದಿ ಮಹತ್ವದ ಸಂಗತಿಗಳನ್ನು ಶಿಕ್ಷಕನು ತನ್ನ ಮಾದರಿಯಿಂದಲೇ ಮಕ್ಕಳು ಅನುಕರಿಸುವಂತೆ ಅವನ ವರ್ತನದ ಕ್ರಮವಿರಬೇಕು. 'ತಂದೆಯಂತೆ ಮಗು; ಗುರುವಿನಂತೆ ಶಿಷ್ಯ' ಎಂಬ ವಾಡಿಕೆಯ ಮಾತಿನ ಇಂಗಿತವಾದರೂ ಇಷ್ಟೇ ಇರುವದು. ಮನೆಯಲ್ಲಿ ಪಾಲಕರೂ ಶಾಲೆಯಲ್ಲಿ ಗುರುವೂ ವ್ಯವಹಾರದಲ್ಲಿ ದೊಡ್ಡಮನುಷ್ಯರೂ ಬಾಲಕರಿಗೆ ಆದರ್ಶಪ್ರಾಯವಾಗಿರುವರು. ಆದಕಾರಣ ಪಾಲಕರೂ, ಸಮಾಜ ಮುಖಂಡರೂ, ಸರಕಾರಿ ಅಧಿಕಾರಿಗಳೂ ಬಾಲಕರ ಅನುಕರಣದ ಮಟ್ಟಿಗೆ ಪೂರಕ ಶಿಕ್ಷಕರಾಗಿರುವರು. ಅವರು ಸಹ ಮಕ್ಕಳದೆಸೆಯಿಂದ ಜಾಗರೂಕವಾಗಿರುವಂತೆ ಶಿಕ್ಷಕನ ಸಂಜ್ಞೆಯ ಉಪದೇಶವಿರಬೇಕು. ಇಂಥ ಶಿಕ್ಷಕನನ್ನು ನೌಕರನೆಂದು ಯಾರೂ ಹೀಯಾಳಿಸಲಿಕ್ಕಿಲ್ಲ. ಬಾಲಕರ ಕುಂದುಕೊರತೆಗಳನ್ನು ಪೂರಯಿಸುವಂತೆ ಮಾಡುತ್ತ ಸಮಾಜದ ಹಿತಚಿಂತಕನಾಗಿರುವ ಶಿಕ್ಷಕನು ತನ್ನ ಕರ್ತವ್ಯಕರ್ಮವನ್ನು ಮಾಡಿ ನಿಜವಾದ ಗುರುವೆಂದೆನಿಸಿಕೊಳ್ಳುವನು. ಲೋಕದಲ್ಲಿಯ ಎಲ್ಲ ಸದ್ಗುಣಗಳೂ ಶ್ರೇಷ್ಠ ಕರ್ತವ್ಯಶಾಲಿತ್ವವೂ ವಿದ್ಯೆಯೂ ಒಬ್ಬನಲ್ಲಿಯೇ ಇದ್ದು ಅವನು ಎಲ್ಲ ಬಾಲಕರ ಅನುಕರಣಕ್ಕೆ ಪಾತ್ರವಾಗುವದು ಕಠಿಣ ಸಂಗತಿಯಾಗಿರುವದು ಅಂಥಂಥ ಮಾದರಿಪುರುಷರಾಗಲಿ, ಯೋಗ್ಯ ಸಂಗತಿಗಳು ದೊರೆಯುವಾಗಾಗಲಿ, ಪ್ರಸಂಗಗಳನ್ನು ಕಾದು ಬಾಲಕರಿಗೆ ತೋರಿಸಬೇಕು. ಪ್ರವಾಸವೂ ಇಂಥ ಸಂಗತಿಗೆ ಸುಸಮಯವಾಗಿರುವದು. ಪಂಚೇಂದ್ರಿಯಗಳಿಗೆ ಆಯಾ ವಿಷಯಗಳು ಆವಶ್ಯಕವಾಗಿರುವಂತೆ ಜ್ಞಾನಕ್ಕೆ ವಿದ್ಯಾಭ್ಯಾಸವೇ ತಕ್ಕ ವಿಷಯವಾಗಿರುವದು. ತಕ್ಕ ಶಿಕ್ಷಣದ ಯೋಗದಿಂದಲೇ ಮನುಷ್ಯನ ಮನುಷ್ಯತ್ವವನ್ನು ಒಡಮೂಡಿಸುವಂಥ ತಕ್ಕ ಶಕ್ತಿಗಳ ಅಂಕುರಗಳ ಮುಗುಳು ಒಡೆಯುವಂತೆ ಇರುವದರಿಂದ ಶಿಕ್ಷಕನು ತನ್ನ ಕರ್ತವ್ಯಕರ್ಮದ ಪೂರ್ಣತೆಗಾಗಿ ಬಹು ಜಾಗರೂಕವಾಗಿರಬೇಕು. ಇಂಥ ವಿಷಯದಲ್ಲಿ ತಾನು ಸಂಪೂರ್ಣವಾಗಿ ಅನುಕರಣಕ್ಕೆ ತಕ್ಕವನಾಗುವದಕ್ಕೋಸ್ಕರ ತಾನು ಆಮರಣ ವಿದ್ಯಾರ್ಥಿಯೂ ತಕ್ಕ ಸಂಗತಿಗಳ ಅನುಕರಣಶೀಲನೂ ಆಗಬೇಕೆಂಬ ಮಾತನ್ನು ಮರೆಯುವಂತಿಲ್ಲ.

ಶಾಲೆಯ ಎಲ್ಲ ಬಾಲಕರಲ್ಲಿಯೂ ಎಲ್ಲ ವಿಷಯಗಳ ತೀವ್ರತೆಯು ಒಂದೇಸವನಾಗಿರಲಾರದು. ಅಂಥ ಅನೇಕ ಪ್ರಸಂಗಗಳಲ್ಲಿ ಅವರವರಿಗೆ ಬಾರದ ವಿಷಯಗಳನ್ನು ತಿರ

ಸ್ಕಾರ ಮಾಡದೆ ಪ್ರತ್ಯೇಕಪ್ರತ್ಯೇಕವಾಗಿ ತಿಳಿಸಿ ಹೇಳಬೇಕಾಗುವದು. ಹೀಗೆ ಕೆಲವು ಕಾಲ ಶ್ರಮಪಟ್ಟರೆ ಮುಂದೆ ಕಡೆತನಕ ದಣಿಯುವ ಪ್ರಸಂಗವು ಬರಲಾರದು.

ಬಾಲಕರ ಯೋಗ್ಯತೆಗನುಸರಿಸಿ ತಕ್ಕ ವಿಷಯಗಳ ವರ್ಗೀಕರಣವನ್ನು ಶಾಲಾಧಿಕಾರಿಗಳು ಮಾಡಿರುವರು, ಹಾಗು ಮಾಡುತ್ತಲಿರುವರು. ಶಿಕ್ಷಕನು ತನ್ನ ಸದಸದ್ವಿವೇಕ ಬುದ್ಧಿಯನ್ನು ಉಪಯೋಗಿಸಿ ಬಾಲಕರಿಗೆ ಇಲ್ಲದ ಭಾರವು ಬೀಳದಂತೆ ಲಕ್ಷ್ಯತೆಗೆದುಕೊಳ್ಳಬೇಕು. ಹೀಗೆ ಮಾಡದಿದ್ದರೆ ಇದ್ದ ಶಕ್ತಿಗಳು ಸಹ ಕುಗ್ಗಿ ಹೋಗುವವು. ಕಠಿನ ವಿಷಯವನ್ನು ಯೋಗ್ಯತೆ, ವಯಸ್ಸು ಇವುಗಳನ್ನು ಮೀರಿ ಕಲಿಸಲು ಯತ್ನಿಸಿದರೆ ಹಾಲು ಕುಡಿಯುವ ಕೂಸಿಗೆ ಅನ್ನ ಉಣಿಸಿದಂತೆ ಆಗುವದು.

ಕೆಲವರು ಪಾಲಕರು ತಮ್ಮ ಮಕ್ಕಳು ಒಮ್ಮೆಲೆ ಒಳ್ಳೆಯ ವಿದ್ವಾಂಸರಾಗಬೇಕೆಂದು ಶಿಕ್ಷಕರಿಗೆ ಒತ್ತಾಯ ಪಡಿಸುವರು. ಹಾಗು ಮೇಲಿನ ವರ್ಗಕ್ಕೆ ಬಾಲಕರನ್ನು ಹಾಕಿಸುವದಕ್ಕೋಸ್ಕರ ಪರೀಕ್ಷೆಯ ದಿನಗಳಲ್ಲಿ ಶಿಕ್ಷಕರನ್ನೂ ಅಧಿಕಾರಸ್ಥರನ್ನೂ ಕಾಯುವರು. ಅದೊಂದೇ ದಿನ ಶಿಕ್ಷಕರಿಗೂ ಪಾಲಕರಿಗೂ ದರ್ಶನ! ಅಂಥ ಪಾಲಕರಿಗೂ ಸಹ ಶಿಕ್ಷಕನು ಬೋಧಕನೇ ಆಗಬೇಕು.

ತಮ್ಮ ಕರ್ತವ್ಯಕರ್ಮವನ್ನರಿತು ಎಚ್ಚರದಿಂದ ಯತ್ನಿಸುವ ಶಿಕ್ಷಕರು ಎಲ್ಲರಿಗೂ ಗುರುಗಳೇ ಆಗಿ ಕೀರ್ತಿಭಾಜನರಾಗುವರು.

ಪ್ರಕಟನೆ ೧.

ಮಿಡಲ್‌ಸ್ಕೂಲ ಸ್ಕಾಲರಶಿಪ್ ಪರೀಕ್ಷೆಯು.

ದಕ್ಷಿಣಭಾಗ

ನಂ–53/S 5063

ಈ ಪರೀಕ್ಷೆಯು ದಕ್ಷಿಣಭಾಗದ ಪ್ರತಿಯೊಂದು ಜಿಲ್ಲೆಯ ಸೆಂಟರಿನಲ್ಲಿ ೧೯೩೭ನೆಯ ಇಸ್ವಿಯ ಫೆಬ್ರುವರಿ ತಿಂಗಳಿನ ೧೫–೧೬ನೆಯ ತಾರೀಖು (ಸೋಮವಾರ, ಮಂಗಳವಾರ) ಗಳ ಮಧ್ಯಾಹ್ನದ ೧೧॥ ಘಂಟೆಗೆ ನಡೆಯುವದು. ಸೆಂಟರು, ನಡೆಯುವ ಸ್ಥಳ, ಓಪನ್ ಮತ್ತು ಸ್ಪೆಶಲ್ ಮಿಡಲ್‌ಸ್ಕೂಲ ಸ್ಕಾಲರಶಿಪ್ಪುಗಳ ವಿವರವು ಕೆಳಗೆ ಬರೆದಂತೆ ನಡೆಯುವದು.

ಜಿಲ್ಲೆಯ ಸೆಂಟರು	ಪರೀಕ್ಷೆ ನಡೆಯುವ ಸ್ಥಳ	ಮಿಡಲ್ ಸ್ಕೂಲ ಸ್ಕಾ. ಶಿಪ್ಪು ಜಿಲ್ಲೆ ಯೊಳಗಿನ ಎಲ್ಲ ವರ್ಗಗಳಿಗೂ ಇರುವದು	ಸ್ಪೆಶಲ್ ಸ್ಕಾಲರಶಿಪ್ಪದ ವಿವರವು		
			ಮಾಧ್ಯಮಿಕರ ವರ್ಗ	ಹಿಂದುಳಿದ ಜಾತಿ	ಮುಸಲ್ಮಾನ
೧	೨	೩	೪	೫	೬
ಧಾರವಾಡ	ಗ. ಹಾಯಸ್ಕೂಲ	೨	೧೨	೫	೧೦
ಬೆಳಗಾವ	ಸರ್ದಾರ್ಸ ಹಾಯಸ್ಕೂಲ	೨	೧೨	೫	೫
ವಿಜಾಪುರ	ಗ. ಹಾಯಸ್ಕೂಲ	೨	೧೦	೪	೬
ಕಾರವಾರ	,, ,,	೨	೫	೧	೨
		೮	೩೯	೧೫	೨೩

೨ ಪರೀಕ್ಷೆಯು ಬೆಳಗಾವ ಜಿಲ್ಲೆಯಲ್ಲಿ ಕನ್ನಡ ಮತ್ತು ಮರಾಠಿಯಿಂದಲೂ ಧಾರವಾಡ ವಿಜಾಪೂರ ಕಾರವಾರ ಸೆಂಟರುಗಳಲ್ಲಿ ಕನ್ನಡದಿಂದಲೂ ಆಗುವದು. ಮುಸಲ್ಮಾನ ಉಮೇದವಾರರು ಉರ್ದುದಲ್ಲಿ ಪರೀಕ್ಷೆಗೆ ಕೂಡಬಹುದು. ಹಾಗು ತಮ್ಮ ವ್ಹರ್ನಾಕ್ಯುಲರವೆಂದು ಉರ್ದುವನ್ನು ತೆಗೆದುಕೊಳ್ಳಬಹುದು.

೩ ಪರೀಕ್ಷೆಯು ಕಮಿಟಿಯಿಂದ ತೆಗೆದುಕೊಳ್ಳಲ್ಪಡುವದು. ಆಯಾ ಸೆಂಟರಿನ ಗ॥ ಹಾಯಸ್ಕೂಲಿನ ಹೆ. ಮಾ. ರವರು ಆ ಕಮಿಟಿಯ ಪ್ರೆಸಿಡೆಂಟರಿರುವರು. ಅರ್ಜಿ ಗಳನ್ನು ಛಾಪೀ ನಮೂನೆಯಲ್ಲಿಯೇ ಮಾಡಬೇಕು. ಅರ್ಜಿ ಫಾರ್ಮುಗಳು ಪ್ರೆಸಿಡೆಂಟರ ಕಡೆಗೆ ಆಯಾ ಜಿಲ್ಲೆಗಳ ಉಮೇದವಾರರಿಗೆ ಬೆಲೆಯಿಲ್ಲದೆ ಬೇಡಿದರೆ ದೊರೆಯುವವು.

೧೯೩೨ನೆಯ ಇಸ್ವಿಯ ಜನವರಿ ೨ನೇ ತಾರೀಖಿನ ದಿವಸ ಅಥವಾ ಅದರ ಒಳಗಾಗಿ ಮುಟ್ಟುವಂತೆ ಅರ್ಜಿಗಳನ್ನೂ ಅದರ ಕೂಡ ೧ ರೂ. ಫೀಯನ್ನೂ ಉಮೇದವಾರನು ಪ್ರೆಸಿಡೆಂಟರಿಗೆ ಕಳಿಸಬೇಕು. ಅಂದರೆ ಅರ್ಜಿಯೂ ಫೀ ಹಣವೂ ಮೇಲೆ ಬರೆದ ತಾರೀಖಿನ ದಿವಸ ಅಥವಾ ಅದರ ಒಳಗಾಗಿ ಪ್ರೆಸಿಡೆಂಟರಿಗೆ ಮುಟ್ಟುವಂತೆ ಮಾಡಬೇಕು. ಈ ತಾರೀಖಿನ ನಂತರ ಬಂದ ಅರ್ಜಿಯನ್ನೂ ಅಥವಾ ಫೀಯನ್ನೂ ಹಿಡಿಯಲಿಕ್ಕಿಲ್ಲ.

೪ ಸಂಸ್ಥಾನದ ಉಮೇದವಾರನು ಈ ಪರೀಕ್ಷೆಗೆ ಕೂಡಲಿಕ್ಕೆ ಪಾತ್ರನಾಗುವದಿಲ್ಲ.

೫ ಉಮೇದವಾರರು ತಮ್ಮ ಅರ್ಜಿಗಳಲ್ಲಿ ಜಾತಿ, ಪೋಟಜಾತಿ, ಹುಟ್ಟಿದ ತಾ|| ತಿಂಗಳ ಇಸ್ವಿಗಳನ್ನು ಸ್ಪಷ್ಟವಾಗಿ ಬರೆಯಬೇಕು. ಸ್ಪೆಶಲ್ ಸ್ಕಾಲರಶಿಪ್ಪುಗಳ ಉಮೇದವಾರರು ತಮ್ಮ ಅರ್ಜಿಯಲ್ಲಿ ಒಂದು ಹೊಸ ಕೋಷ್ಟಕವನ್ನು ಗುರ್ತಿಸಬೇಕು. ಅದರಲ್ಲಿ ಆ ವಿದ್ಯಾರ್ಥಿಯ ಪಾಲಕನಾಗಲಿ ತಂದೆಯಾಗಲಿ ಇನ್‌ಕಮ್‌ಟ್ಯಾಕ್ಸನ್ನು ಅಥವಾ ಭೂಕಂದಾಯವನ್ನು ಇಲ್ಲವೆ ಎರಡನ್ನೂ ಕೊಡುತ್ತಿದ್ದರೆ ಆ ವರ್ಷದ ಆ ರಕಮನ್ನು ಬರೆಯಬೇಕು. ಪ್ರತಿವರ್ಷ ಕೊಡುವ ಮೇಲಿನ ಒಟ್ಟು ರಕಮು ೨೦೦ ರೂ. ಅದಕ್ಕಿಂತ ಹೆಚ್ಚಿಗೆ ಇದ್ದರೆ ಅಂಥ ಪಾಲಕರು-ತಂದೆತಾಯಿಗಳುಳ್ಳ ಉಮೇದವಾರರು-ಈ ಪರೀಕ್ಷೆಗೆ ಕೂಡಲಿಕ್ಕೆ ಪಾತ್ರರಾಗುವದಿಲ್ಲ.

೬ ಪರೀಕ್ಷೆಯ ನಿಯಮಗಳು, ಉಮೇದವಾರರ ವಯಸ್ಸು, ಪರೀಕ್ಷೆಯ ವಿಷಯ, ಸ್ಕಾಲರಶಿಪ್ಪಿನ ಬೆಲೆ, ಅದರ ಅವಧಿ ಇವೇ ಮೊದಲಾದ ವಿಶೇಷ ಮಾಹಿತಿಗಳ ಬಗ್ಗೆ ಪರೀಕ್ಷಾ ಕಮೀಟಿಯ ಪ್ರೆಸಿಡೆಂಟರ ಕಡೆಗೆ ಅರ್ಜಿ ಮಾಡಿಕೊಂಡರೆ ಅವರು ತಿದ್ದುಪಡಿಸಿದ ಪರೀಕ್ಷೆಯ ನಿಯಮಗಳ ಪ್ರತಿಯನ್ನು ಕಳಿಸಿಕೊಡುವರು.

ಎಜ್ಯುಕೇಶನಲ್ ಇ. ಸಾ. ರವರ ಆಫೀಸ ದ. ಭಾ.
ಧಾರವಾಡ
೧೯ನೆಯ ನವ್ಹಂಬರ ೧೯೩೧

ಕೆ. ಎಸ್. ವಕೀಲ.
ಎ. ಇ. ದ. ಭಾ.

ಪ್ರಕಟನೆ ೨

ಮುಹಮ್ಮಡನ್ ಬರಸರಿಫಂಡ ಸ್ಕಾಲರಶಿಪ್

ನಂ. 29 / S 5063

೧ ಧಾರವಾಡ ಜಿಲ್ಲೆಯ ಮುಹಮ್ಮಡನ್ ಬರಸರೀಫಂಡ ಸ್ಕಾಲರಶಿಪ್ಪನ್ನು (ಒಂದನ್ನು) ಕೊಡುವ ಬಗ್ಗೆ ಮೇಲಾಟದ ಪರೀಕ್ಷೆಯು ೧೯೩೨ ನೆಯ ಇಸವಿಯ

ಫೇಬ್ರುವರಿ ತಿಂಗಳ ೧೫-೧೬ನೇ ತಾರೀಖುಗಳಲ್ಲಿ (ಸೋಮವಾರ, ಮಂಗಳವಾರ) ಧಾರವಾಡ ಹಾಯಸ್ಕೂಲಿನಲ್ಲಿ ಮಧ್ಯಾಹ್ನದ ೧೧½ ಘಂಟೆಗೆ ಸರಿಯಾಗಿ ಆಗುವದು. ಈ ಪರೀಕ್ಷೆಯು ಗವ್ಹರ್ನಮೆಂಟ ರೆಝೋಲ್ಯುಶನ್ ಎ. ಡಿಪಾರ್ಟಮೆಂಟದ ನಂ. $\frac{4818}{13-7-31}$ ನೇದರಲ್ಲಿ ಮಂಜೂರಾದ ನಿಯಮಗಳ ಮೇರೆಗೆ ನಡೆಯುವದು.

೨ ಈ ಪರೀಕ್ಷೆಗೆ ಗವ್ಹರ್ಮೆಂಟ ಎ. ಡಿಪಾರ್ಟಮೆಂಟದಿಂದ ಮಂಜೂರಾದ ಧಾರವಾಡ ಜಿಲ್ಲೆಯೊಳಗಿನ ಬೇಕಾದ ಶಾಲೆಯ ಮುಸಲ್ಮಾನ ವಿದ್ಯಾರ್ಥಿಗಳು ಕೂಡಬಹುದು. ಆದರೆ ಅವರು ಇದೇ ಜಿಲ್ಲೆಯಲ್ಲಿ ವಾಸವಾಗಿದ್ದು ಇಂಗ್ಲಿಷ ಶಾಲೆಯಲ್ಲಿ ಫೀ ಕೊಟ್ಟು ಕಲಿಯಲಾರದಷ್ಟು ಬಡವರಿರುವರೆಂಬ ಬಗ್ಗೆ ಇಬ್ಬರು ಸದ್ಗೃಹಸ್ಥರ ಸರ್ಟಿಫಿಕೇಟ ಹೊಂದಿದವರಿರಬೇಕು.

೩ ಪರೀಕ್ಷೆಯು ಕನ್ನಡದಲ್ಲಿ ಆಗುವದು. ಆದರೆ ಉರ್ದುದಲ್ಲಿ ಸಹ ಉಮೇದವಾರರು ಪರೀಕ್ಷೆಯನ್ನು ಕೊಡಬಹುದು.

೪ ಪರೀಕ್ಷೆಯು ಒಂದು ಕಮೀಟಿಯ ಮುಖಾಂತರ ತೆಗೆದುಕೊಳ್ಳಲ್ಪಡುವದ ಮತ್ತು ಧಾರವಾಡ ಜಿಲ್ಲೆಯೊಳಗಿನ ಹಾಯಸ್ಕೂಲ ಹೆಡ್‌ಮಾಸ್ತರರು ಅದರ ಪ್ರೆಸಿಡೆಂಟರಿರುವರು. ಅರ್ಜಿಗಳನ್ನು ಮಿಡ್ಲಸ್ಕೂಲ ಸ್ಕಾಲರಶಿಪ್ ಪರೀಕ್ಷೆಗೋಸ್ಕರ ಮಾಡುವ ಛಾಪೀ ಫಾರ್ಮಿನ ಮೇಲೆ ಮಾಡಬೇಕು. ಮೇಲೆ ಹೇಳಿದ ಸಂಗತಿಗಳನ್ನು ಅದರೊಡನೆ ಲಗತ ಇಡತಕ್ಕದ್ದು. ಫಾರ್ಮುಗಳು ಪರೀಕ್ಷಾ ಕಮೀಟಿಯ ಪ್ರೆಸಿಡೆಂಟರ ಕಡೆಗೆ ಬೆಲೆಯಿಲ್ಲದೆ ಸಿಗುವವು. ಅರ್ಜಿಗಳನ್ನು ೧೯೩೨ನೆಯ ಇಸ್ವಿಯ ಜನವರಿ ೨ನೆಯ ತಾರೀಖು ಅಥವಾ ಅದರೊಳಗಾಗಿ ಪರೀಕ್ಷಾ ಕಮೀಟಿಯ ಪ್ರೆಸಿಡೆಂಟರಿಗೆ ಮುಟ್ಟುವಂತೆ ಕಳಿಸತಕ್ಕದ್ದು. ಈ ತಾರೀಖಿನ ಅನಂತರ ಬಂದ ಅರ್ಜಿಗಳನ್ನು ಹಿಡಿಯಲಿಕ್ಕಿಲ್ಲ.

೫ ಉಮೇದವಾರರ ವಯಸ್ಸು, ಪರೀಕ್ಷೆಯ ವಿಷಯಗಳು, ಸ್ಕಾಲರಶಿಪ್ಪನ್ನು ಕೊಡುವ ಅಥವಾ ಕಡಿಮೆ ಮಾಡುವ ನಿಯಮಗಳು, ಮಿಡಲ್ ಮತ್ತು ಸ್ಪೆಶಲ್ ಸ್ಕಾಲರಶಿಪ್ ಪರೀಕ್ಷೆಯ ನಿಯಮಗಳಂತೆಯೇ ಇರುವವು. ಆದರೆ ಈ ಪರೀಕ್ಷೆಗೆ ಫೀ ಮಾತ್ರ ಇರುವದಿಲ್ಲ.

೬ ಈ ಸ್ಕಾಲರಶಿಪ್ಪು ಪ್ರತಿ ತಿಂಗಳಿಗೆ ೬ ರೂ. ಇರುವದು. ಇದು ಇ. ಸ್ಟ್ಯಾ. ೧ನೆಯ ಇಯತ್ತೆಯಿಂದ ೫ನೆಯ ಇ. ವರೆಗೆ ೫ ವರ್ಷ ನಡೆಯುವದು.

೧೯ನೇ ನವ್ಹಂಬರ ೧೯೩೧

ಕೆ. ಎಸ್. ವಕೀಲ.
ಎ. ಇ. ದ. ಭಾ.

ಹೆಣ್ಣುಮಕ್ಕಳ ವ್ಹ. ಫಾಯನಲ್ ಪರೀಕ್ಷೆಯು ದ. ಭಾಗ

N. 62/B 5261

ಈ ಪರೀಕ್ಷೆಯು ಕೆಳಗೆ ಬರೆದ ಸೆಂಟರುಗಳಲ್ಲಿ ೧೯೩೨ನೆಯ ಇಸ್ವಿಯ ಮಾರ್ಚ ತಿಂಗಳಿನ ೭ನೆಯ ತಾರೀಖು (ಸೋಮವಾರ) ಹಾಗು ಮುಂದಿನ ದಿವಸಗಳಲ್ಲಿ ನಡೆಯುವದು.

ಜಿಲ್ಲೆಯ ಹೆಸರು	ಸೆಂಟರಿನ ಸ್ಥಳದ ಹೆಸರು
ಧಾರವಾಡ	ಧಾರವಾಡ ಗದಗ ಹುಬ್ಬಳ್ಳಿ
ಬೆಳಗಾವ	ಬೆಳಗಾವ
ವಿಜಾಪೂರ	ವಿಜಾಪೂರ
ಕಾರವಾರ	ಕಾರವಾರ
ಕೊಲ್ಲಾಪೂರ	ಕೊಲ್ಲಾಪೂರ

೨ ಆಯಾ ಜಿಲ್ಹೆಗಳ ಗವ್ಹರ್ನಮೆಂಟ ಹಾಯಸ್ಕೂಲಿನ ಹೆಡ್‌ಮಾಸ್ತರರು ಸ್ಥಾನಿಕ ಕಮೀಟಿಯ ಚೇರಮನ್ನರಿರುವರು. ಕೊಲ್ಲಾಪೂರ ಸೆಂಟರಿನಲ್ಲಿ ಅಲ್ಲಿಯ ಎಜ್ಯುಕೇಶನಲ್ ಚೇರಮನ್ನರಿರುವರು.

೩ ಉಮೇದವಾರರು ಪರೀಕ್ಷಾಪರವಾನಿಗಿ ಅರ್ಜಿಗಳನ್ನು ಗೊತ್ತುಪಡಿಸಿದ ಛಾಪೀ ಫಾರ್ಮುಗಳಲ್ಲಿ ಬರೆದು ಆ ಅರ್ಜಿಯ ಕೂಡ ೩ ರೂ. ಫೀ ಸಹ ತಮ್ಮ ಸೆಂಟರಿನ ಚೆಅರಮನ್ನರ ಕಡೆಗೆ ೧೯೩೨ನೇ ಇಸ್ವಿಯ ಫೇಬ್ರುವರಿ ತಿಂಗಳ ೧೫ನೆ ತಾರೀಖಿನ ದಿವಸ ಅಥವಾ ಅದರ ಒಳಗಾಗಿ ಕಳಿಸಿಕೊಡಬೇಕು. ಈ ತಾರೀಖಿನ ನಂತರ್ಹ ಬಂದ ಅರ್ಜಿಗಳನ್ನಾಗಲಿ ಸ್ವೀಕರಿಸುವದಿಲ್ಲ. ಅರ್ಜಿಯ ಫಾರ್ಮುಗಳು ಬೇಕಾದರೆ ತಮ್ಮ ಸೆಂಟರಿನ ಚೆಅರಮನ್ನರ ಕಡೆಗೆ ಬರೆದರೆ ಬೆಲೆಯಿಲ್ಲದೆ ಸಿಗುವವು.

ಉರ್ದು ಭಾಷೆಯಲ್ಲಿ ವ್ಹ. ಫಾ. ಪರೀಕ್ಷೆಯು ಮೇಲಿನ ಎಲ್ಲ ಸೆಂಟರುಗಳಲ್ಲಿಯೂ ನಡೆಯುವದು.

ಎಜ್ಯುಕೇಶನಲ್ ಇನಸ್ಪೆಕ್ಟರರ ಆಫೀಸ
ತಾರೀಖು ೧-೧೨-೧೯೩೧

ಕೆ. ಎಸ್. ವಕೀಲ
ಎ. ಇ. ದ. ಭಾಗ

ದೇಶಭಾಷೆಯ ಗಂಡುಹುಡುಗರ ವ್ಹ. ಫಾ. ಪರೀಕ್ಷೆಯ ವಿಷಯಗಳು

೧೯೩೩ನೇ ಇಸವಿ

ಕನ್ನಡ

೧ನೆಯ ಸದರು :—

(ಅ) ಗದ್ಯ :—ಕ್ರಮಿಕ ೭ನೆಯ ಬುಕ್ಕು (೧೯೩೦ರ ಆವೃತ್ತಿ) ಇದರಲ್ಲಿಯ ಎಲ್ಲ ಗದ್ಯ ಪಾಠಗಳು.

(ಬ) ಪದ್ಯ :—ಮೇಲಿನ ಪುಸ್ತಕದಲ್ಲಿಯ ೨೪, ೨೮, ೩೨, ೩೬, ೪೦, ೪೪, ೪೮, ೫೧, ೫೩ ಈ ಪ್ರಕಾರ ೯ ಪಾಠಗಳು ಪೂರಾ.

ಮರಾಠಿ

೧ನೆಯ ಸದರು :—

(ಅ) ಗದ್ಯ :—ಕ್ರಮಿಕ ೭ನೆಯ ಬುಕ್ಕು (೧೯೩೦ ರ ೮ನೆಯ ಆವೃತ್ತಿ) ಮೊದಲಿನ ಭಾಗದ ಎಲ್ಲಾ ಗದ್ಯ ಪಾಠಗಳು.

(ಬ) ಪದ್ಯ :—ಮೇಲಿನ ಪುಸ್ತಕದಲ್ಲಿಯ ೩, ೧೫, ೨೮, ೩೬, ೪೭, ೫೧, ೫೩ ಈ ಪಾಠಗಳು.

ಉರ್ದು ವ್ಹರ್ನಾಕ್ಯುಲರ

೧ನೆಯ ಸದರ—ಉರ್ದು

ಗದ್ಯ—ಕ್ರಮಿಕ ಉರ್ದು ೭ನೆಯ ಬುಕ್ಕು (೧೯೨೯ ರ ೩ನೆಯ ಆವೃತ್ತಿ) ಎಲ್ಲ ಗದ್ಯ ಪಾಠಗಳು.

ಪದ್ಯ—ಮೇಲಿನ ಪುಸ್ತಕದಲ್ಲಿಯ ೩, ೬, ೯, ೧೭, ೨೦, ೨೩, ೨೬, ೩೨ ಈ ೮ ಪಾಠಗಳು.

೬ನೆಯ ಸದರು—ಕನ್ನಡ (ಐಚ್ಛಿಕ)

ಗದ್ಯ :— ಕ್ರಮಿಕ ೫ನೇ ಬುಕ್ಕು (೧೯೨೭ರ ಆವೃತ್ತಿ) ಇದರೊಳಗಿನ ೧, ೪, ೬, ೯, ೧೦, ೧೩, ೧೪, ೧೫, ೧೬, ೨೧, ೨೮, ೨೯, ೩೬, ೪೦, ೫೬, ೫೭, ೫೯, ೬೯, ೭೨, ೮೦ ಈ ೨೦ ಪಾಠಗಳು.

ಮರಾಠಿ (ಐಚ್ಛಿಕ)

ಗದ್ಯ:—ಕ್ರಮಿಕ ೫ನೇ ಬುಕ್ಕು (೧೯೨೯ ರಲ್ಲಿ ೧೧ನೇ ಆವೃತ್ತಿ) ೧, ೨, ೩, ೪, ೯, ೧೩, ೧೪, ೧೫, ೧೬, ೨೫, ೩೫, ೪೦, ೪೩, ೪೭, ೫೧, ೫೬, ೫೭, ೫೮, ೯೫, ೯೬ ಈ ೨೦ ಪಾಠಗಳು.

ವ್ಹರ್ನಾಕ್ಯುಲರ ಉರ್ದು

೧ನೆಯ ಸವರು—ಕನ್ನಡ

ಗದ್ಯ—ಕ್ರಮಿಕ ೭ನೆಯ ಬುಕ್ಕು (೧೯೩೦ರ ಆವೃತ್ತಿ) ಇದರಲ್ಲಿಯ ೧, ೨, ೫, ೮, ೧೦, ೧೮, ೨೦, ೨೧, ೨೩, ೨೫, ೩೦, ೩೧, ೩೮, ೩೯, ೪೨, ೪೬, ೪೭, ೫೬, ೫೮, ೫೯, ೬೧, ೬೩, ೬೬, ೬೯, ೭೦, ೭೨, ೭೩, ೭೬, ೭೮, ೮೦, ೮೩, ೮೫, ೯೨, ೯೫, ೯೬, ಈ ೩೫ ಪಾಠಗಳು.

ಪದ್ಯ— ಕ್ರಮಿಕ ೭ನೆಯ ಬುಕ್ಕು (೧೯೩೦ ರ ಆವೃತ್ತಿ). ಇದರಲ್ಲಿಯ ೧೫, ೨೮, ೩೬, ೪೦, ೪೪, (೫ ಪಾಠಗಳು ಪೂರ್ಣ)

೧ನೆಯ ಸದರು—ಮರಾಠಿ

ಗದ್ಯ— ೭ನೆಯ ಬುಕ್ಕು (೧೯೨೯ ರ ಆವೃತ್ತಿ) ಇದರಲ್ಲಿಯ ೧, ೪, ೫, ೮, ೯, ೧೦, ೧೨, ೧೬, ೧೭, ೧೮, ೨೦, ೨೧, ೨೨, ೨೩ ೨೪, ೨೭, ೨೮, ೩೧, ೩೨, ೩೫, ೩೬, ೩೯, ೪೦, ೪೨, ೪೩, ೪೭, ೪೮, ೫೦ ೫೨, ೫೩, ೫೪, ೫೬, ೫೭, ೫೮, ೯೮ (ಈ ಪ್ರಕಾರ ೩೫ ಪಾಠಗಳು ಪೂರ್ಣ)

ಪದ್ಯ— ಮೇಲಿನ ಪುಸ್ತಕದಲ್ಲಿಯ ೭, ೧೫, ೧೯, ೫೫ ಈ ಪ್ರಕಾರ ೪ ಪಾಠಗಳು.

೬ನೆಯ ಸದರ—ಉರ್ದು

ಗದ್ಯ— (ಉರ್ದು ೭ನೇ ಬುಕ್ಕು, ೧೯೨೯ರ ೩ನೆಯ ಆವೃತ್ತಿ) ಇದರಲ್ಲಿಯ ೨, ೭, ೮, ೧೨, ೧೯, ೨೧, ೨೨, ೨೪, ೨೫, ೩೩, ೩೪, ೩೬, ೩೭, ೪೦, ೪೧, ೪೨, (ಈ ಪ್ರಕಾರ ೧೬ ಪಾಠಗಳು ಪೂರ್ಣ)

ಪದ್ಯ— ಉರ್ದು ೭ನೆಯ ಬುಕ್ಕು (೧೯೨೯ರಲ್ಲಿ ೩ನೆಯ ಆವೃತ್ತಿ) ಇದರಲ್ಲಿಯ ೩, ೬, ೧೩, ೧೬, ೧೭, ೨೩, ೩೨ (೭ ಪಾಠಗಳು)

ಧಾರವಾಡ
೧೩—೧೧—೧೯೩೧

ಕೆ. ಎಸ್. ವಕೀಲ,
ಎ. ಇ. ಡ. ಭಾಗ.

12/11/31

ನಂ	ಪುಸ್ತಕದ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು, ಪೂರ್ಣ ಪತ್ತೆ	ಬೆಲೆ.	ಯಾತಕ್ಕೋಸ್ಕರ ಮಂಜೂರಾಗಿದೆ.
೧	ಶ್ರೀ ವಿದ್ಯಾರಣ್ಯ ವಿಜಯ ನಾಟಕ (೨ನೆಯ ಆವೃತ್ತಿ ೧೯೩೧)	ಮಿ. ಡಿ. ವ್ಹಿ. ಗುಂಡಪ್ಪ	ದಿ. ಕರ್ನಾಟಕ ಪ್ರಿಂಟಿಂಗ ಪ್ರೆಸ್, ಬೆಂಗಳೂರ	೧-೪-೦	ಮಾ. ಶಾ. ಯ ವಿದ್ಯಾರ್ಥಿಗಳ ಟೆಕ್ಸ್ಟ (ಪಠ್ಯ) ಬುಕ್ಕಾಗಿ
೨	ಪ್ರೌಢ ಪಾಠಮಾಲಿಕೆ ಭಾಗ ೨ (ಮೊದಲನೆಯ ಆವೃತ್ತಿ ೧೯೩೧)	ಮಿ. ಎವಸ್ ರಾಮರಾವ ಮತ್ತು ಯು. ಮಂಗೇಶರಾವ	ದಿ. ಬಾಸೆಲ್ಲ ಮಿಶನ್ ಬುಕ್ ಡಿಪೋ ಮತ್ತು ಟ್ರ್ಯಾಕ್ಟ ಡಿಪೋಜಟರಿ ಮಂಗಳೂರ	೦-೧೧-೦	ಮಾ. ಶಾ. ಗಳ ಹಾಗು ಟ್ರೇ. ಸಂಸ್ಥೆಗಳ ಟೆಕ್ಸ್ಟ (ಪಠ್ಯ) ಬುಕ್ಕಾಗಿ
೩	ಸೃಷ್ಟವಸ್ತುಪರಿಚಯ ಭಾಗ ೧ (ಡಿ. ವ್ಹಿ. ಸೆಂದೆ ಮತ್ತು ಜೆ. ಎಸ್. ಮೆಢೇಕರ ಇವರಿಂದ ರಚಿತವಾಗಿ ಕನ್ನಡಕ್ಕೆ ಪರಿವರ್ತಿಸಲ್ಪಟ್ಟದ್ದು (ಮೊದಲನೆಯ ಆವೃತ್ತಿ ೧೯೩೧)	ಮಿ. ಟಿ. ಎಮ್. ಪಾಟೀಲ	ಮಿ. ಆರ್. ಜಿ. ಹುಕ್ಕೇರಿ ಬುಕ್‌ಸೇಲರ ಧಾರವಾಡ.	೦-೮-೦	,, ,,
೪	ಜಮಾಖರ್ಚು ಮೊದಲನೇ ಆವೃತ್ತಿ ೧೯೩೧	ಮಿ. ಜಿ. ಜೆ. ಸುರಪೂರ ಮತ್ತು ಮಿ. ಎನ್. ಎಚ್. ಶೇಡಬಾಳಕರ	ಮಿ. ಜಿ. ಜೆ. ಸುರಪೂರ ಮು। ಎನ್. ಎಚ್. ಶೇಡಬಾಳಕರ ಸ್ಕೂ. ಮಾ. ಕಾಗವಾಡ ಜಿ. ಬೆಳಗಾಂವ	೦-೩-೦	ಪ್ರಾ. ಶಾ. ಗಳ ಟೆಕ್ಸ್ಟ (ಪಠ್ಯ) ಬುಕ್ಕಾಗಿ

೫	ನೂತನ ಭೂವರ್ಣನೆ ಬುಕ್ಕು ಭಾ. ೧. (ಮೊದಲನೆಯ ಆವೃತ್ತಿ ೧೯೩೦)	ಮಿ. ಕೆ. ಪಿ. ಪದ್ಮನಾಭಪ್ಪ ಮತ್ತು ಮಿ. ಕೆ. ಶ್ರೀನಿವಾಸ ಕಿಣಿ	ಮ್ಯಾಕ್ಮಿಲನ್ ಆ್ಯಂಡ ಕಂಪನಿ ಲಿ. ಹಾರ್ನಬಿರೋಡ ಬಾಂಬೆ	೦–೮–೦	ಪ್ರಾ. ಶಾಲೆಗಳ ಹಾಗು ಮಾ. ಶಾ. ಗಳ ಹಾಗು ಟ್ರೇ. ಸಂಸ್ಥೆಗಳ ಟೆಕ್ಸ್ಟ (ಪಠ್ಯ) ಬುಕ್ಕಾಗಿ
೬	,, ಭಾಗ ೨.	,,	,, ,,	೦-೧೨-೦	,, ,,
೭	ನೂತನ ಭೂವರ್ಣನೆ ಬುಕ್ಕು ಭಾಗ ೩ ಮೊದಲನೇಆವೃತ್ತಿ೧೯೩೦	ಮಿ. ಕೆ. ಪಿ. ಪದ್ಮನಾಭಪ್ಪ ಮತ್ತು ಶ್ರೀನಿವಾಸ ಕಿಣಿ	ಮ್ಯಾಕ್ಮಿಲನ್ ಆ್ಯಂಡಕೋ ಲಿ. ಹಾರ್ನಬಿರೋಡ ಬಾಂಬೆ	೦-೧೨–೦	ಪ್ರಾ. ಮಾ. ಶಾಲೆಗಳ ಹಾಗು ಟ್ರೇ. ಸಂಸ್ಥೆಗಳ ಟೆಕ್ಸ್ಟ (ಪಠ್ಯ) ಬುಕ್ಕಾಗಿ
೮	ಮ್ಯಾಕ್ಮಿಲನರ ನೂತನ ಹಿಂದೂ ದೇಶದ ಚರಿತ್ರೆ ಬುಕ್ ಭಾ. ೧.	,,	,,	೦-೧೨-೦	ಪ್ರಾಥಮಿಕ ಮಾಧ್ಯಮಿಕ ಶಾಲೆಗಳ ಹಾಗು ಟ್ರೇ. ಸಂಸ್ಥೆಗಳ ಸಪ್ಲಿಮೆಂಟರಿ ರೀಡರಾಗಿ
೯	,, ಭಾಗ ೨.	,,	,,	೧–೦–೦	,, ,,

ಮೆ. ಎ. ಇ. ಸಾ. ರ. ವರ ಮಂಜೂರೀ ನಂ. $\frac{5011}{16-11-31}$ ಪ್ರಕಾರ

೧	ಕನ್ನಡ ಶಿಶು ಶಿಕ್ಷಣ ಮೊ. ಆವೃತ್ತಿ ೧೯೩೧	ಮಿ. ಬಿ. ವ್ಹಿ. ಮಠ	ಮಿ. ಬಿ. ವ್ಹಿ. ಮಠ ಕಿರೇಸೂರ ತಾ. ಹುಬ್ಬಳ್ಳಿ ಜಿ. ಧಾರವಾಡ	೦–೨–೧	ಪ್ರಾ. ಶಾ. ಗಳ ಸಪ್ಲಿಮೆಂಟರಿ ರೀಡರಾಗಿ

೧	ಇಂಡಿಯಾ ಇತಿಹಾಸ. (ಸುಧಾರಿಸಿದ ಆವೃತ್ತಿ ೧೯೩೧)	ಮಿ. ಇ. ಮಾರ್ಸಡನ್	ಮ್ಯಾಕ್ಮಿಲನ್ ಆ್ಯಂಡಕಂಪನಿ ಲಿ ಹಾರ್ನಬಿರೋಡ್ಡ ಬಾಂಬೆ	೧–೪–೦	ಪ್ರಾಥಮಿಕ ಹಾಗು ಮಾಧ್ಯಮಿಕ ಶಾಲೆಗಳ ಹಾಗು ಟ್ರೇ. ಸಂಸ್ಥೆಗಳ ಟೆಕ್ಸ್ಟ (ಪಠ್ಯ) ಬುಕ್ಕಾಗಿ
೨	ಗೋಪಾಲಕೃಷ್ಣಗೋಖಲೆಯವರ ಜೀವನ ಚರಿತ್ರೆ, ಉಪನ್ಯಾಸಗಳು. (೬ನೇ ಆವೃತ್ತಿ ೧೯೩೦)	ಮಿ. ಡಿ. ವ್ಹಿ. ಗುಂಡಪ್ಪ	ದಿ. ಕರ್ನಾಟಕ ಪ್ರಿಂಟಿಂಗ ಪ್ರೆಸ್ ಬೆಂಗಳೂರ	೧–೬–೦	ಮಾ. ಶಾ. ವಿದ್ಯಾರ್ಥಿಗಳ ಪ್ರಾಯಿಝು ಹಾಗು ಲಾಯಬ್ರರಿ ಬುಕ್ಕಾಗಿ
೩	ಸಾಹಿತ್ಯ ಮತ್ತು ವಿಜ್ಞಾನ	”	”	೦–೬–೦	ಮಾ. ಶಾ. ವಿದ್ಯಾರ್ಥಿಗಳ ಲಾಯಬ್ರರಿ ಬುಕ್ಕಾಗಿ
೪	ಶ್ರೀ ಸ್ವಾಮೀ ರಾಮತೀರ್ಥ (ಮೊದಲನೇ ಆವೃತ್ತಿ, ೧೯೩೧)	ಮಿ. ಜಿ. ಎಚ್. ಹೊನ್ನಾಪೂರಮಠ	ಮಿ. ಜಿ. ಎಚ್. ಹೊನ್ನಾಪುರಮಠ ಪ್ಲೀಡರ ಧಾರವಾಡ	೦–೧೦–೦	ಮಾ. ಶಾ. ಗಳ ಪ್ರಾಯಿಝು ಹಾಗು ಲಾಯಬ್ರರಿ ಬುಕ್ಕಾಗಿ
೫	ಶ್ರೀಹರ್ಷ ಮತ್ತು ಅವನ ನಾಟಕಗಳು	ಮಿ. ಎನ್. ವ್ಹಿ. ಕುರಡಿ	ಮಿ. ಕೆ. ಬಿ. ಅಂಕಲಗಿ, ವ್ಯಾವಾಗ್ಭೂಷಣ ಧಾರವಾಡ	೦–೧೦–೦	”
೬	ಜಗಮಲ್ಲನು ಅಥವಾ ನಿಜವಾದ ವೀರನು (ಮೊ. ಆ. ೧೯೩೦)	ಮಿ. ಜಿ. ಎಫ್. ಹಳಕಟ್ಟಿ	ಕ. ವಿದ್ಯಾವರ್ಧಕ ಸಂಘ ಧಾರವಾಡ	೧–೦–೦	”

೮	ನರಗುಂದದಬಂಡಾಯ ಮೊದಲನೆ ಆವೃತ್ತಿ	ಮಿ. ಬಿ. ಜೆ. ಕುಲಿಕವಿ	ಮಿ. ಕೆ.ಬಿ. ಅಂಕಲಗಿ ಮ್ಯಾನೇಜರ ವಾಗ್ಭೂಷಣ ಧಾರವಾಡ	೧—೦—೦	
೯	ಮೂಲಾಕ್ಷರ ಶಿಕ್ಷಣ	ಮಿ. ಪಿ. ಜಿ. ಕುಲಕರ್ಣಿ	ದಿ. ಕರ್ನಾಟಕ ಫೋಟೋಝಿಂಕೋ ವರ್ಕ್ಸ್, ಬೆಳಗಾವ	೦—೧—೩	ಪ್ರಾ. ಶಾ.ಗಳ ಸಪ್ಲಿಮೆಂಟರಿ ರೀಡರಾಗಿ
೧೦	ಕೀರ್ತನಾಂಜಲಿ ಭಾಗ ೧	ಮಿ. ಜಿ. ಎನ್. ಲಕ್ಷ್ಮಣ ಪೈ.	ಮಿ. ಅನಂತ ಕಾಮತ ಹರಿಹರ ಪ್ರಿಂ ಪ್ರೆ. ಪುತ್ತೂರ ಸೌ. ಕೆನರಾ	೦—೩—೦	ಪ್ರಾ. ಶಾ. ಪ್ರಾಯಿಝು ಬುಕ್ಕಾಗಿ
೧೧	ಗಣಿತ, ೩ನೆಯ ಇಯತ್ತೆಗಾಗಿ	ಮೆಸರ್ಸ ಪುರೋಹಿತ ಮತ್ತು ಮಗದಾಳ	ಮಿ. ರಾಘವೇಂದ್ರರಾವ ಪುರೋಹಿತ ಬಿ. ಎ.; ಎಲ್ಎಲ್ ಬಿ. ಗಿಬ್‌ಟೌನ ಧಾರವಾಡ	೦—೫—೦	ಮಾಸ್ತರ ಜನರ ಲಾಯಬ್ರರಿ ಬುಕ್ಕಾಗಿ
೧೨	ಗಣಿತಾದರ್ಶ ಭಾಗ ೨	ಮೆಸರ್ಸ ಜಿ. ಬಿ. ಜೋಶಿ ಹಾಗು ಎಸ್. ಆರ್. ತಟ್ಟಿ	ಮಿ. ಜಿ. ಬಿ. ಜೋಶಿ ಲೈನಬಝಾರ ಧಾರವಾಡ	೦—೪—೦	,,
೧೩	ಆರ್ಯ ಮಹಿಳಾ ಕೀರ್ತಿ	ಮಿ. ಜಿ. ಆರ್. ಜೋಸ್ಯರ ಎಂ. ಎ. ಎಫ್.ಆರ್. ಇ. ಡಿ.	ಮಿ. ಜಿ ಆರ್. ಜೋಸ್ಯರ ಆ್ಯಂಡ ಕಂಪನಿ ಮೈಸೂರ	೦—೫—೦	ಪ್ರಾ. ಶಾ. ಗಳ ಪ್ರಾಯಿಝು ಹಾಗು ಲಾಯಬ್ರರಿ ಬುಕ್ಕಾಗಿ

೧೪	ಸಚಿತ್ರ, ಕನ್ನಡ ಮಕ್ಕಳ ಗಣಿತ.	ಮಿ. ಜಿ. ಹೊನ್ನ ಗಂಗಪ್ಪ	ಮಿ. ಜಿ. ರೇವಣ್ಣ ಮತ್ತು ಬ್ರದರ್ಸ ಬುಕ್ಕಶೆಲರ್ಸ ಬಿ ಡಾಡಿ ಬೆಂಗಳೂರ ಡಿಸ್ಟ್ರಿಕ್ಟ	೦—೪—೩	ಪ್ರಾ. ಶಿ. ರ ಲಾಯಬ್ರರಿ ಬುಕ್ಕಾಗಿ
೧೫	ಕಿಟ್ಟು ಬಿಟ್ಟು ಎತ್ತಿದ	ಮಿ. ಪಿ. ಜಿ. ಕುಲಕರ್ಣಿ	ಫೋಟೋ ಝಿಂಕೋ ವರ್ಕ್ಸ ಬೆಳಗಾವ	೦—೧—೩	ಪ್ರಾ. ಶಾ. ಗಳ ವಿದ್ಯಾರ್ಥಿಗಳ ಪ್ರಾಯಿಝು ಹಾಗು ಲಾಯಬ್ರರಿ ಬುಕ್ಕಾಗಿ
೧೬	ಕನ್ನಡ ಗಣಿತ	ಮಿ. ಆರ್. ಎಸ್. ಹುಲ್ಯಾಳಕರ	ಮಿ. ಆರ್. ಎಸ್. ಹುಲ್ಯಾಳಕರ, ಮಾರುತಿಗಲ್ಲಿ ಬೆಳಗಾವ	೦—೪—೬	ಮಾಸ್ತರ ಜನರ ಲಾಯಬ್ರರಿ ಬುಕ್ಕಾಗಿ

ಧಾರವಾಡ
ತಾ॥ ೧೬—೧೧—೧೯೩೧

ಕೆ. ಎಸ್. ವಕೀಲ,
ಎ. ಇ. ದ. ಭಾಗ

ಬರೆದು ಬಂದ ಪತ್ರಗಳ ಸಾರಾಂಶ

ಕಾಮಲಾಪೂರ ಸೆಂಟ್ರಲ್ ಶಾಲಾ ಸಭೆಯ ವರದಿಯು:— ಈ ಸಭೆಯು ಕಾಮಲಾಪೂರ ಉರ್ದು ಶಾಲೆಯಲ್ಲಿ ಜರುಗಿತು. ಆರಂಭದಲ್ಲಿ ಬಾಲಕರು ದೇವತಾಸ್ತೋತ್ರ ಮಾಡಿದರು. ಬಳಿಕ ಹಿಂದೂ ಆಟಗಳು ಎಂಬ ವಿಷಯದ ಮೇಲೆ ಮಹಮ್ಮದೀಯ ಶಾಲಾ ಮಾಸ್ತರರು ಬೋಧನೆ ಮಾಡಿದರು. ಆ ಮೇಲೆ ಏಡೆಡ್ ಶಾಲೆಯ ಮ್ಯಾನೇಜರರಾದ ಶ್ರೀ. ಕೆ. ಯು. ಈಶ್ವರೈಯ್ಯನವರು 'ಸಂಭಾಷಣೆಯ ಪಾಠಗಳು' ಎಂಬ ವಿಷಯದ ಮೇಲೆ ಉಪನ್ಯಾಸ ಮಾಡಿದರು. 'ಸತ್ಸಹವಾಸ' ಎಂಬ ವಿಷಯವಾಗಿ ಕೆಲವರು ಉಪಾಧ್ಯಾಯರು ವ್ಯಾಖ್ಯಾನ ಕೊಟ್ಟರು.

ಮಾದರಿ ಪಾಠಗಳನ್ನು ಟಿಪ್ಪಣಿಯೊಂದಿಗೆ ಕೊಡುವ ವಿಷಯವನ್ನು ಗೊತ್ತು ಮಾಡುವದಾಯಿತು. ಈ ಪಾಠಗಳನ್ನು ಸಂದರ್ಭಾನುಸಾರವಾಗಿ ಆಯಾ ಮಾಸ್ತರರು ಪ್ರೆಸಿಡೆಂಟರ ಎದುರಿಗೆ ನಿಯಮಿಸಿದ ದಿನ ಕೊಡುವದಾಗಿ ಗೊತ್ತಾಯಿತು.

ಸಭೆಯ ಖರ್ಚು, ವರ್ತಮಾನಪತ್ರ, ಮಾಸಪತ್ರಿಕೆಗಳ ವೆಚ್ಚ ಇವುಗಳ ವಿಷಯವಾಗಿ ಚಂದಾ ವಸೂಲ ಮಾಡುವ ವಿಷಯವಾಗಿಯೂ ಮುಂದಿನ ಮೀಟಿಂಗಿನಲ್ಲಿ ವಿಚಾರಣೆ ಮಾಡಬೇಕೆಂದು ನಿರ್ಣಯವಾಯಿತು.

ತಾ॥ ೨೩-೧೧-೩೧ನೆಯ ದಿವಸ ಮುಂದಿನ ಮೀಟಿಂಗು ಬಾಲಕರ ಶಾಲೆಯಲ್ಲಿ ಕೂಡುವದಾಗಿ ಗೊತ್ತಾಯಿತು. ರಾಜಗೀತೆಯೊಂದಿಗೆ ಸಭೆಯನ್ನು ವಿಸರ್ಜಿಸಲಾಯಿತು.

ಕಾಮಾಲಾಪೂರದಲ್ಲಿ ಜರುಗಿದ ಆರೋಗ್ಯ ವಿಷಯಕ ಶಿಶುಸಪ್ತಾಹವು

ತಾ॥ ೧೪-೧೧-೧೯೩೧ ನೆಯ ದಿವಸ ಶ್ರೀ. ಸುಬ್ಬಣಾಚಾರ್ಯರ ಅಧ್ಯಕ್ಷತೆಯ ಕೆಳಗೆ ಈ ಸಭೆಯು ನೆರವೇರಿತು. ಆಗ ಕರಣಂ ವಾಸುದೇವರಾಯರು ಈ ಗ್ರಾಮದ ಪೂರ್ವದ ಸ್ಥಿತಿ, ಈಗ ಆರೋಗ್ಯ ಸಂಘದವರು ಮಾಡಿದ ಸದುಪಾಯಗಳು, ಸೇದುವ ಬಾವಿ ಬೋರಿಂಗ ಬಾವಿಗಳ ರಚನೆ, ಮುಂತಾದವುಗಳ ವಿಷಯವಾಗಿ ಸುರಸ ವ್ಯಾಖ್ಯಾನ ಕೊಟ್ಟರು. ಉಪಾಧ್ಯಾಯ ಸಂಘದ ಸೆಕ್ರೆಟರಿಯವರಾದ ಬಿ. ಬಾಬಾಸಾಹೇಬರು 'ಆಹಾರವಿಚಾರ' ಎಂಬೀ ವಿಷಯವಾಗಿ ಪರಿಣಾಮಕಾರಕ ಭಾಷಣ ಮಾಡಿದರು. ಪಂದ್ಯಾಖಿಗಳಲ್ಲಿ ಗೆದ್ದ ಬಾಲಕರಿಗೆ ಪುಸ್ತಕಗಳನ್ನೂ ಎಲ್ಲಾ ಬಾಲಕಬಾಲಿಕೆಯರಿಗೆ ಫಲಾಹಾರ ಪದಾರ್ಥಗಳನ್ನೂ ಹಂಚಿದರು. ಬಳಿಕ ಅಧ್ಯಕ್ಷರವರು ಸಮಯೋಚಿತ ಭಾಷಣ ಮಾಡಿದ ಬಳಿಕ ಸಭೆಯನ್ನು ವಿಸರ್ಜಿಸಿದರು.

ಜಾಹೀರಾತು

ಸ್ಯಾಂಪಲ್] [ಫುಕ್ಕಟೆ

ಉತ್ತಮ ಮಸೀ ಚೀಟುಗಳು

ನೀಲೀಕಪ್ಪು, ಕೆಂಪು, ಜಾಂಬಳಿ ಮಸಿಯ ಚೀಟಿಗಳು. ಈ ಕಂಪನಿಯು ಬಹಳ ಜನರಿಂದ ಶಿಫಾರಸ ಪಡೆದು ಮೆಡಲ್ಲುಗಳನ್ನು ಸಂಪಾದಿಸಿರುತ್ತದೆ.

ದರಗಳು

೧೮೦	ಚೀಟುಗಳಿಗೆ	೦—೭—೦
೫೦೦	,,	೧—೧[illegible]—೦
೧೦೦೦	,,	೩—೦—೦
೧೦೦೦೦	,,	೩೦—೦—೦ (ರೇಲ್ವೆ [illegible])

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿರಿ.

ಕರ್ನಾಟಕ ಇಂಕ ಕಂಪನಿ,

ಬಾಗಲಕೋಟೆ.

REGISTERED NO B 2567

From

The Manager

Kannada Prathamik Sikshana

Dharwar

LIST NO. ೨೦

Reg. No. B 2567

ಕನ್ನಡ

ಪ್ರಾಥಮಿಕ ಶಿಕ್ಷಣ

(ಇವರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Sikshana

JANUARY 1932

ಸಂಪಾದಕ—**ವೆಂಕಟೇಶ ನರಸಿಂಗರಾವ ಮಗದಾಳ** ಬಿ. ಎ.,

ಸಂಪುಟ ೬೮ ವರ್ಷ ೩	ಜನವರಿ ೧೯೩೨	ಸಂ. ೧೦

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.		ಪುಟ
೧.	ಸ್ಫುಟವಿಚಾರಗಳು	...	೧
೨.	ನಿರೀಕ್ಷಣ ಪಾಠಗಳು	...	೫
೩.	ಪಾಠ ಹಾಗು ಶಿಕ್ಷಣಮಾಲೆ	...	೧೧
೪.	ಮಕ್ಕಳ ವಿದ್ಯಾಭ್ಯಾಸಕ್ರಮದಲ್ಲಿ ಸಂಗೀತಕ್ಕಿರುವ ಸ್ಥಾನ		೧೬
೫.	ಕರ್ನಾಟಕ ಶಿಕ್ಷಕರ ಸಂಘ	...	೨೫
೬.	ಭಲ್ಲಟನ ಅನ್ಯೋಕ್ತಿಗಳು (ಕವಿತೆ)	...	೨೬
೭.	ಹೈದರಾಬಾದ ಸಂಸ್ಥಾನದ ಐತಿಹಾಸಿಕ ಭೌಗೋಲಿಕ ವೃತ್ತಾಂತವು		೨೮
೮.	ಪ್ರಕಟನೆಗಳು	...	೩೧

Printed by K. R. Bhise at the Karnatak Printing Works, Dharwa
Published by V. N. Magdal, B. A.,
Head-Master, Training School Dharwar, at his Office

ಮಿ|| ಬಿ. ಎಸ್. ಪುರೋಹಿತ ಬಿ. ಎ.

ಇವರು ಬರೆದ

ಅಂಕಗಣಿತದ ಪುಸ್ತಕಗಳು

ಅಚ್ಚಾಗಿ ತಯಾರಿರುವವು.

೧. ೪ ನೆಯ ಇಯತ್ತೆಗಾಗಿ ... ... ಬೆಲೆ ೬ ಆಣೆ.
(ಭೂಮಿತಿ, ಜಮಾಖರ್ಚು ಸಹಿತ)

೨. ೩ ನೆಯ ಇಯತ್ತೆಗಾಗಿ ... ... ಬೆಲೆ ೫ ಆಣೆ.
(ಭೂಮಿತಿ ಸಹಿತ)

೩. ೨ ನೆಯ ಇಯತ್ತೆಗಾಗಿ ... ... ಬೆಲೆ ೪ ಆಣೆ.

ಟೀಪು:— ಎಲ್ಲ ವಿಷಯವು ಮನದಟ್ಟಾಗುವಂತೆ ಅಲ್ಲಲ್ಲಿ ಆಕೃತಿ ಚಿತ್ರಗಳನ್ನು ಸೇರಿಸಿದೆ.

ಪುಸ್ತಕಗಳು ದೊರೆಯುವ ಸ್ಥಳ—

ಶ್ರೀ. ವಿ. ಆರ್. ಶಿವನಾಗಪ್ಪನವರು ವಾಗ್ವಿಲಾಸ ಬುಕ್ ಡಿಪೋ, ಹುಬ್ಬಳ್ಳಿ.

ಶ್ರೀ. ರಾಘವೇಂದ್ರರಾವ ಪುರೋಹಿತ, ಎಲ್ ಎಲ್. ಬಿ ಮಾಳಮಡ್ಡಿ ಧಾರವಾಡ.

ಹಾಗು

ಧಾರವಾಡ, ಗದಗ, ಬೆಳಗಾವ, ವಿಜಾಪುರ, ಬಾಗಲಕೋಟೆ, ಕಾರವಾರ ಮೊದಲಾದ ಊರುಗಳಲ್ಲಿರುವ ಮುಖ್ಯ ಬುಕ್ ಸೇಲರರಲ್ಲಿ.

ಭೂಗೋಲ

ಎಸ್. ಎನ್. ಮುಗದಾಳಕೃತ.

ಹಿಂದುಸ್ತಾನದ ಭೂಗೋಲ ಬೆಲೆ ೮ ಆಣೆ.

ಏಶಿಯದ ಭೂಗೋಲ ಬೆಲೆ ೮ ಆಣೆ.

ದೊರೆಯುವ ಸ್ಥಳ—ಶ್ರೀ. ವಿ. ಆರ್. ಶಿವನಾಗಪ್ಪನವರು, ವಾಗ್ವಿಲಾಸ ಬುಕ್ ಡಿಪೋ, ಹುಬ್ಬಳ್ಳಿ.